ಕನ್ನಡದಲ್ಲಿ ಆಡಳಿತ: ಪ್ರಭುತ್ವ ಮತ್ತು ಜನತೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್‌ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಕೆ. ವಿದ್ಯಾಕುಮಾರಿ

ಮಾರ್ಗದರ್ಶಕರು

ಡಾ. ಅಶೋಕಕುಮಾರ ರಂಜೇರೆ

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ಸೆಪ್ಟೆಂಬರ್ 2019

995

ಕನ್ನಡದಲ್ಲಿ ಆಡಳಿತ: ಪ್ರಭುತ್ವ ಮತ್ತು ಜನತೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್‌ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಕೆ. ವಿದ್ಯಾಕುಮಾರಿ

ಮಾರ್ಗದರ್ಶಕರು

ಡಾ. ಅಶೋಕಕುಮಾರ ರಂಜೇರೆ

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ಸೆಪ್ಟೆಂಬರ್ 2019

ಮಾರ್ಗದರ್ಶಕರ ದೃಢೀಕರಣ ಪತ್ರ

ಕೆ. ವಿದ್ಯಾಕುಮಾರಿ ಅವರು "ಕನ್ನಡದಲ್ಲಿ ಆಡಳಿತ: ಪ್ರಭುತ್ವ ಮತ್ತು ಜನತೆ" ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಈ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ. ಪಿಎಚ್‌ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಭಾಗಶಃ/ಪೂರ್ಣವಾಗಿ ಈ ಮೊದಲು ಯಾವ ಪದವಿ/ಡಿಪ್ಲೋಮ ಅಥವಾ ಇತರೆ ಉದ್ದೇಶಗಳಿಗೆ ಸಲ್ಲಿಸಲಾಗಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 18.9.2019

ಡಾ. ಅಶೋಕಕುಮಾರ ರಂಜೇರೆ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪ್ರಮಾಣ ಪತ್ರ

"ಕನ್ನಡದಲ್ಲಿ ಆಡಳಿತ: ಪ್ರಭುತ್ವ ಮತ್ತು ಜನತೆ" ಎಂಬ ವಿಷಯವನ್ನು ಕುರಿತು ಈ ಮಹಾಪ್ರಬಂಧವನ್ನು ಪಿಎಚ್‌ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ.ಅಶೋಕಕುಮಾರ ರಂಜೇರೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವ ಪದವಿ/ಡಿಪ್ಲೋಮ ಅಥವಾ ಇತರೆ ಉದ್ದೇಶಗಳಿಗೆ ಸಲ್ಲಿಸಲಾಗಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 18.9.2019

ಕೆ. ವಿದ್ಯಾಕುಮಾರಿ

ಸಂಶೋಧಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ–1

ಅಧ್ಯಯನದ ಗುರಿ, ವ್ಯಾಪ್ತಿ ಮತ್ತು ವಿಧಾನ

1 ಪ್ರಸ್ತಾವನೆ

1.1 ಹಿನ್ನೆಲೆ

2 ಅಧ್ಯಯನದ ಗುರಿ, ಸ್ವರೂಪ ಮತ್ತು ವ್ಯಾಪ್ತಿ

3. ಸಂಶೋದನೆಯ ವೈಧಾನಿಕತೆ ಮತ್ತು ಆಕರಗಳು

4. ಅಧ್ಯಯನದ ವಿಭಾಗೀಕರಣ

1. ಪ್ರಸ್ತಾವನೆ:

"ಕನ್ನಡದಲ್ಲಿ ಆಡಳಿತ: ಪ್ರಭುತ್ವ ಮತ್ತು ಜನತೆ" ಎನ್ನುವ ವಿಷಯದ ಕುರಿತು ಯೋಚಿಸುವಾಗ ಭಾಷೆಯ ಗುರುತಿನಲ್ಲಿ ಕಟ್ಟಿಕೊಂಡಿರುವ ಸಮಾಜ–ರಾಷ್ಟ್ರ/ರಾಜ್ಯವಿದೆ. ಈ ಆವರಭದಲ್ಲಿರುವ ಜನಬದುಕುಗಳ ನುಡಿಯಾಗಿರುವ ಕನ್ನಡವಿದೆ. ಕನ್ನಡ ಜನಬದುಕುಗಳನ್ನು ಕಾಪಾಡಿಕೊಳ್ಳಲೆಂದೇ ರಾಜ್ಯದ ಆಡಳಿತ ನಡೆಸುತ್ತಿರುವ ಪ್ರಭುತ್ವ–ಸರಕಾರ ಇದೆ. ಕನ್ನಡ ಸಮಾಜ(ಕರ್ನಾಟಕ ಸಮಾಜ)ವನ್ನು ನಾವು ಈ ಮೂರು ಕೊಂಡಿಗಳಲ್ಲಿ ಸಮಗ್ರವಾಗಿ ಗ್ರಹಿಸಲು ಸಾಧ್ಯವಾಗುತ್ತದೆ ಎನ್ನುವುದು ಯಾರಿಗೇ ಆದರೂ ಮೇಲು ನೋಟದಲ್ಲೇ ತಿಳಿಯುವ ಸಂಗತಿ. ಒಂದು ಭಾಷಿಕ ಸಮಾಜದ ಏಳಿಗೆಯಲ್ಲಿ ಈ ಮೂರರ ನಡುವಿನ ಕೊಂಡಿ ಗಟ್ಟಿಗೊಂಡಿರಬೇಕು; ಗಟ್ಟಿಗೊಳ್ಳುತ್ತಿರಬೇಕು. ಇದನ್ನು ಒಡೆದು ಬೇರೆ ಮಾಡಿ ನೋಡುವುದು ಎಂದಿಗೂ ಸಾಧುವಲ್ಲ ಅಥವಾ ಹೊರಗಿನ ಭಾಷಿಕರು, ಇಲ್ಲವೇ ಭಾಷೆಗಳ ಒತ್ತಾಯಗಳಿಂದಾಗಿ ಕೂಡ ಬಿರುಕುಗಳು ಉಂಟಾಗಬಾರದು. ಪ್ರಭುತ್ವ ಎಂತಹದೆ ಅಧಿಕಾರದ ಅಮಲಿಗೆ ಒಳಗಾಗುವಾಗಲೂ ನಾಡಿನ ಈ ಬಗೆಯ ಒಗ್ಗಟ್ಟಿನ ಎಚ್ಚರವನ್ನು ಎಂದಿಗೂ ತಪ್ಪಕೂಡದು. ಆಗ ಮಾತ್ರ ಅಂತಹ ಪ್ರಜಾತಂತ್ರವಿರುವ ಸಮಾಜದ ಬೆಳವಣಿಗೆ ಅದರ ಸಾಂಸ್ಕೃತಿಕ ಗುರುತುಗಳಲ್ಲಿ ಇರಲು ಸಾಧ್ಯ. ಇದೇ ಒಂದು ಸಮಾಜದ ಅನನ್ಯತೆ, ಅಲ್ಲಿನ ಜನಬದುಕುಗಳ ಅನನ್ಯತೆಯಾಗಿ **ಸಾಂಸ್ಕೃತಿಕ ಅನನ್ಯತೆ** ಎನಿಸಿಕೊಳ್ಳುತ್ತದೆ.

ಕನ್ನಡ–ಆಡಳಿತ–ಜನತೆಯನ್ನು ಒಗ್ಗೂಡಿಸಿ ನೋಡುವ ಚಿಂತನೆಯ–ಅಧ್ಯಯನದ ಹಿನ್ನೆಲೆಯಲ್ಲಿ ಮುಖ್ಯವಾದ ಪ್ರಶ್ನೆಯೆಂದರೆ ಕರ್ನಾಟಕ ಸಮಾಜದ ಈ ಬಗೆಯ '**ಸಾಮಾಜಿಕ ಅನನ್ಯತೆ**'ಗೆ ದಕ್ಕೆ ಒದಗಿದೆಯೇ? ಎನ್ನುವುದು. ಈ ಸಂಬಂಧಗಳಲ್ಲಿ ಬಿರುಕುಗಳಿವೆಯೇ? ಇವೆ ಎನ್ನುವುದಾದರೆ ಅವು ಯಾಕಿವೆ? ಹೇಗಿವೆ? ಹೀಗಾಗಲು ಕಾರಣಗಳೇನು? ಇದರಿಂದ ಕನ್ನಡ ಸಮಾಜದ ಜನಬದುಕುಗಳಲ್ಲಿ ಎಂತಹ ಪರಿಣಾಮಗಳು ಉಂಟಾಗಿವೆ? ಇವುಗಳ ಹಿಂದಿರುವ ಒತ್ತಾಯಗಳು ಎಂತಹವು? ಅವುಗಳಿಂದ ಬಿಡಿಸಿಕೊಳ್ಳುವ ಬಗೆ ಹೇಗೆ? ಈ ನಿಟ್ಟಿನ ಆಲೋಚನೆಯಲ್ಲಿ ಅಧ್ಯಯನವನ್ನು ನಡೆಸಲಾಗಿದೆ. ಕನ್ನಡ ಸಮಾಜದ ಜನಬದುಕುಗಳ ಸಾಂಸ್ಕೃತಿಕ ಅನನ್ಯತೆಯನ್ನು ಸಾಧಿಸಿಕೊಳ್ಳುವ ದಾರಿಗಳನ್ನು ಹುಡುಕಿಕೊಳ್ಳಬೇಕಾಗುತ್ತದೆ.

ಕನ್ನಡ ನುಡಿಯ ಗುರಿಯಲ್ಲಿ ಕರ್ನಾಟಕ ಏಕೀಕರಣವಾದಾಗಿನಿಂದ ಈವರೆಗಿನ ಬೆಳವಣಿಗೆಯನ್ನು ಅದರ 'ಭಾಷಿಕ ನಡೆ'ಯಲ್ಲಿ ಗಮನಿಸಿದರೆ ಜನತೆ ಮತ್ತು ಪ್ರಭುತ್ವದ ನಡುವಿನ ವ್ಯವಹಾರದಲ್ಲಿ ಇರಬೇಕಾದ ನೇರಾನೇರ ಸಂಬಂಧವೇ ಕುಸಿದು ಹೋಗಿರುವುದು ಕಾಣುತ್ತದೆ. ಶಿಕ್ಷಣ, ಉದ್ಯೋಗ, ವ್ಯವಸಾಯ, ಆಸ್ತಿ, ಹಣಕಾಸುಗಳಾದಿಯಾಗಿ ಆಡಳಿತದ

35ಕ್ಕೂ ಹೆಚ್ಚಾಗಿರುವ ಯಾವುದೇ ಇಲಾಖೆ[1]ಗಳ ಸಂಪರ್ಕವನ್ನು ಮಧ್ಯವರ್ತಿಗಳ ಮೂಲಕವೇ ಆಗುಮಾಡಿಕೊಳ್ಳಬೇಕಾದ ಅನಿವಾರ್ಯತೆ ಬಂದುಬಿಟ್ಟಿದೆ. ಅಂದರೆ ಆಡಳಿತವನ್ನು ಜನರಿಗೆ ತಲುಪಿಸುವ ಅಗತ್ಯಕ್ಕಾಗಿ ಆಡಳಿತ ವ್ಯವಸ್ಥೆ ಹೊರಡಿಸುವ ಸುತ್ತೋಲೆಗಳು, ಒದಗಿಸುವ ಅರ್ಜಿ ನಮೂನೆಗಳು, ಇನ್ನಿತರೆ ದಸ್ತಾವೇಜುಗಳು, ಕಡತಗಳಲ್ಲಿ ಏನಿವೆಯೆಂಬುದನ್ನು ತಿಳಿಯಲು ಮಧ್ಯವರ್ತಿಗಳಿಲ್ಲದೆ ಸಾಧ್ಯವಿಲ್ಲ ಎನ್ನುವ ಸ್ಥಿತಿಯಲ್ಲಿ ಕನ್ನಡ ಸಮಾಜವಿದೆ. ಕಾಲಾನುಸಾರವಾಗಿ ಬದಲಾಗುವ ಸರಕಾರಗಳು ಆಡಳಿತದ ಹೆಸರಿನಲ್ಲಿ ಹೊರಡಿಸುವ ನೀತಿಗಳು, ನಿಯಮಗಳು, ಮಾಡುವ ಕಾನೂನುಗಳು ನೇರವಾಗಿ ಜನತೆಯನ್ನು ತಲುಪಬೇಕಾದುದು ಮುಖ್ಯವಾಗುತ್ತದೆ. ಜನತೆಗೆ ತಲುಪಿಸಬೇಕಾದುದು ಆಡಳಿತ ಯಂತ್ರದ ಮುಖ್ಯ ಕೆಲಸವೂ ಆಗಿರುತ್ತದೆ. ಜನರಾಡುವ ಕನ್ನಡ ನುಡಿಗೆ ಹತ್ತಿರವಿದ್ದಾಗ ಮಾತ್ರ ಇದು ಸರಳವೂ ಸುಲಭವೂ ಆಗಿರುತ್ತದೆ. ಆದರೆ, ಈ ಕಾರಣಕ್ಕಾಗಿ ಬಳಕೆಯಲ್ಲಿರುವ ಕನ್ನಡ ನುಡಿಯ ಸ್ಥಿತಿ ಹಾಗೆ ಇಲ್ಲ ಎನ್ನುವುದು ಎದ್ದು ಕಾಣುತ್ತಿರುವ ಸಂಗತಿಯಾಗಿದೆ. 'ಅರಕ್ಷಕ ಠಾಣೆ, ಅಭಿಯಂತರ ಕಛೇರಿ, ಸ್ನಾತಕೋತ್ತರ ಕೇಂದ್ರ, ವಿದ್ಯುಚ್ಛಕ್ತಿ ಮಂಡಳಿ' ಮೊದಲಾಗಿ ಸರಕಾರದ ಇಲಾಖೆಗಳ ಹೆಸರುಗಳನ್ನು ಗ್ರಹಿಸಿದರೂ ಇದು ತಿಳಿಯುತ್ತದೆ. ದಿನದಿನದ ಜನಬಳಕೆಯ ಈ ಇಲಾಖೆಗಳನ್ನು ಗುರುತಿಸಲು ಜನಬಳಸದ ಗುರುತಿನಲ್ಲಿ 'ಕನ್ನಡ' ಇರುವುದು ಕಾಣುತ್ತದೆ. ಇದರ ಪರಿಣಾಮ ಇಂಗ್ಲಿಶ್ ಭಾಷೆಯನ್ನು ಈ ಇಲಾಖೆಗಳ ಗುರುತಿಗಾಗಿ ಜನರು ಬಳಸುವುದು, ಬಳಸಬೇಕಾಗಿ ಬಂದಿರುವುದು ಅನಿವಾರ್ಯ ಎನ್ನಿಸುವ ಸಂಗತಿಯಾಗಿದೆ. ಇದು ಕೆಲವು ಉದಾಹರಣೆಗಳು ಮಾತ್ರವೇ. ಒಟ್ಟು ಆಡಳಿತವೇ ಕನ್ನಡದ ನೆಪದ್ದು ಎನ್ನುವಂತಾಗಿದೆ. ಯಾಕೆ ಹೀಗೆ?

1.1 ಹಿನ್ನೆಲೆ:

ವಸಾಹತುಶಾಹಿ ಆಳ್ವಿಕೆಯಿಂದ ರಾಜಕೀಯವಾಗಿ ಬಿಡುಗಡೆಯಾದ ನಂತರದಲ್ಲಿ ಭಾರತೀಯ ಪ್ರಜಾಪ್ರಭುತ್ವ ತನ್ನ ಬಹುತ್ವವನ್ನು ನಿಭಾಯಿಸಿಕೊಳ್ಳಲು, ಭಾಷಾವಾರು ಪ್ರಾಂತ್ಯಗಳ ಉದಯವನ್ನು ಅನಿವಾರ್ಯವಾಗಿ ಒಪ್ಪಲೇಬೇಕಾಯಿತು. ಕಳೆದ ಆರು ದಶಕಗಳ ಈ ಬೆಳವಣಿಗೆಯನ್ನು ಕರ್ನಾಟಕದಲ್ಲಿ ಗಮನಿಸಿದಾಗ, ಅಲ್ಲಿ ಭಾಷಾವಾರು ಪ್ರಾಂತ್ಯದ ಆಶೋತ್ತರಗಳು ಹಾಗೆಯೇ ನೆಲಕಚ್ಚಿವೆ ಎಂಬುದು ತಿಳಿಯುತ್ತದೆ. ಅಂದರೆ ಭಾಷಾವಾರು ಪ್ರಾಂತ್ಯವಾಗಿ ಕರ್ನಾಟಕ ತನ್ನ ಆಡಳಿತ ವ್ಯವಸ್ಥೆಯನ್ನು ಪ್ರಜಾಪ್ರಭುತ್ವದ ನೆಲೆಯಲ್ಲಿ ರೂಪಿಸಿಕೊಂಡಾಗ ಅದರದ್ದೇ ಆದ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಈ ಸಂದರ್ಭದಲ್ಲಿ

---

[1]ಕರ್ನಾಟಕ ಸರ್ಕಾರ ತನ್ನ ವೆಬ್‌ಸೈಟ್ ಮೂಲಕ 37 ಆಡಳಿತ ಇಲಾಖೆ(ಸಚಿವಾಲಯ)ಗಳನ್ನು ಅಧಿಕೃತವಾಗಿ ಪ್ರಕಟಿಸಿಕೊಂಡಿದೆ.

ಭವಿಷ್ಯದ ಕರ್ನಾಟಕವನ್ನು ಕುರಿತಂತೆ ಯಾವ ಭಾಷೆಯಲ್ಲಿ ಆಡಳಿತ ನಡೆಸಬೇಕು?, ಯಾರಿಗಾಗಿಈ ಆಡಳಿತ? ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಅನುಸರಿಸಿದಲ್ಲಿಆಗುವ ಅನುಕೂಲ ಅಥವಾ ಅನಾನುಕೂಲಗಳೇನು ಎನ್ನುವ ಸವಾಲುಗಳು ಎದುರಾಗುತ್ತವೆ. ಈ ಪ್ರಶ್ನೆಗಳಿಗೆ ಮುಖಾಮುಖಿಯಾದ ಎಂ.ಎಸ್.ಪುಟ್ಟಣ್ಣನವರು ಬಹು ಹಿಂದೆಯೇ "ನಮ್ಮ ಕನ್ನಡದ ಸ್ಥಿತಿ"[2] ಎನ್ನುವ ಲೇಖನವೊಂದನ್ನು ಇಂಗ್ಲಿಷ್‌ನಲ್ಲಿ ಬರೆದಿದ್ದರು. ಅದರಲ್ಲಿ ಜನತೆಗೆ ಅಗತ್ಯವಾದ ಶಿಕ್ಷಣ ಯಾವ ಮಾಧ್ಯಮದಲ್ಲಿ ಇರಬೇಕುಎನ್ನುವುದರ ಕುರಿತು ಚರ್ಚಿಸುತ್ತಾ, 'ಶಿಕ್ಷಣದ ಅತ್ಯುತ್ತಮ ಮಾಧ್ಯಮವೆಂದರೆ, ಇಂದಿನ ಜನಸಾಮಾನ್ಯರೂ ಕಾರ್ಯಶೀಲರಾದ ಉದ್ಯೋಗಿಗಳಿಗೂ ಮಾತನಾಡುವ ಬರೆಯುವ ತಾಯ್ನುಡಿಯೇ ಹೊರತು, ಸುಶಿಕ್ಷಿತ ಜನರೂ ಭಾಷಾತಜ್ಞರೂ ಉಪಯೋಗಿಸುವ ಭಾಷೆಯಲ್ಲ... ಕನ್ನಡಿಗರಲ್ಲಿ ಕೆಲವರು ಒಂದು ಭಾಷೆಯ ಮುನ್ನಡೆ ಹಾಗೂ ಬೆಳವಣಿಗೆ ಎಂದರೆ ಪ್ರಾಚೀನರೂಪಗಳ ಪುನರುಜ್ಜೀವನವಲ್ಲದೆ ಹೆಚ್ಚೇನೂ ಅಲ್ಲ' ಎಂದಿದ್ದಾರೆ; ಆದರೆ ಇದಕ್ಕೆ ವಿರುದ್ಧವಾದ ಅಭಿಪ್ರಾಯವೂ ಇದೆ. 'ಪ್ರತಿಯೊಂದು ಆಡುನುಡಿಯ ವರ್ತಮಾನದ ಸ್ಥಿತಿಯೇ ಆ ಹೊತ್ತಿನ ಅತ್ಯಂತ ವಿಕಸಿತ ಹಾಗೂ ಪರಿಣಾಮಕಾರಿ ಸ್ಥಿತಿ ಎಂದೂ ಬೇರೆ ಯಾವುದೇ ರೀತಿಯ ಬದಲಾವಣೆ ಎಂದರೂ ಅದು ಅವನತಿಯಲ್ಲದೆ ಬೇರೆ ಅಲ್ಲ."[3] ಈ ಮಾತುಗಳು ಕನ್ನಡವನ್ನು ಬಳಸುವುದು ಯಾರಿಗಾಗಿ ಮತ್ತು ಆಡುಮಾತಿನ ಕನ್ನಡವೇ ಆಡಳಿತದಲ್ಲಿ ಏಕೆ ಬಳಸಬೇಕು ಎನ್ನುವ ಸೂಚನೆಯನ್ನು ವ್ಯಕ್ತಪಡಿಸುತ್ತವೆ.ಆದರೆ ಈ ಸೂಚನೆಯನ್ನು ಯಾರೂ ಸಹ ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ. ಅದೇ ಸವಾಲುಗಳು ನಮ್ಮನ್ನು ವಿಚಿತ್ರವಾಗಿ ಇಂದಿಗೂ ಕಾಡುತ್ತಿವೆ: ಅವುಗಳನ್ನು ನಮ್ಮ ನೆನಪಿಗೆ ತೆಗೆದುಕೊಳ್ಳುವುದಾದರೆ, ಒಂದು–ಕನ್ನಡ ಬದುಕುಗಳು ಆಧುನಿಕತೆಯ ಬಿರುಗಾಳಿಗೆ ಸಿಲುಕಿ 'ಯಜಮಾನಿಕೆ'ಯ ನೆರಳಿನಲ್ಲಿ ನರಳುತ್ತಿರುವುದು, ಎರಡು–ಈ ಕನ್ನಡ ಬದುಕುಗಳನ್ನು ಪ್ರಜಾಸತ್ತಾತ್ಮಕವಾಗಿ ಸಂಘಟಿಸುವಾಗ ಸರ್ಕಾರವು ಯಾವುದೇ ರಾಜಕೀಯ ಇಚ್ಛಾಶಕ್ತಿಯನ್ನು ಹೊಂದಿಲ್ಲದಿರುವುದು ಮತ್ತು ಮೂರನೆಯದಾಗಿ–ಇತ್ತೀಚಿನ ಎಲ್.ಪಿ.ಜಿ ನೆಲೆಯಲ್ಲಿ ಬದುಕನ್ನು ಆವರಿಸಿಕೊಳ್ಳುತ್ತಿರುವ ಮಾರುಕಟ್ಟೆ. ಹೀಗಿರುವಲ್ಲಿ ಪ್ರಸ್ತುತ ಅಧ್ಯಯನವು 'ಕನ್ನಡದಲ್ಲಿ ಆಡಳಿತ' ಎನ್ನುವಾಗ ಕನ್ನಡದ ಒಳಗಿನಿಂದಲೇ ರೂಪುಗೊಂಡಿರುವ ತಿಳಿವನ್ನು ಅನಾವರಣ ಮಾಡುತ್ತಲೇ, ಇಂಥ ತಿಳಿವನ್ನು ತಿರಸ್ಕರಿಸಿ, ಹೊರಗಿನಿಂದ ಹೇರಿಕೊಂಡ ತಿಳಿವಿನ ಮೂಲಕ ಕರ್ನಾಟಕದಲ್ಲಿ ಆಡಳಿತ

---

[2]ಎಂ.ಎಸ್.ಪುಟ್ಟಣ್ಣ, ದಿ ಕಂಡಿಶನ್ ಆಫ್ ಅವರ್ ಕನ್ನಡ, ಐರಿಶ್ ಪ್ರೆಸ್, ಬೆಂಗಳೂರು, ಅನು: ಸುಜಾತ ಎಚ್.ಎಸ್., ನಮ್ಮ ಕನ್ನಡದ ಸ್ಥಿತಿ, ಮೈಸೂರು ವಿಶ್ವವಿದ್ಯಾಲಯ, 1976.

[3]ಎಂ.ಎಸ್.ಪುಟ್ಟಣ್ಣ, ನಮ್ಮ ಕನ್ನಡದ ಸ್ಥಿತಿ, ಅನು: ಸುಜಾತ ಎಚ್.ಎಸ್., ಮೈಸೂರು ವಿಶ್ವವಿದ್ಯಾಲಯ, 1976, ಪು.1

ವ್ಯವಸ್ಥಿತಗೊಳಿಸಿರುವುದನ್ನು ಪ್ರಶ್ನಿಸುವುದು. ಇದನ್ನು ಪ್ರಮುಖ ಪ್ರಮೇಯವನ್ನಾಗಿ ಮಾಡಿಕೊಂಡು ಕನ್ನಡದ್ದೇ ದಾರಿಗಳನ್ನು ಹುಡುಕಲು ಪ್ರಯತ್ನಿಸುವುದು.

ಕನ್ನಡದ್ದೇ ತಿಳಿವನ್ನು ಆಗುಮಾಡಿಕೊಳ್ಳುವಾಗ, ಅಂತಹ ತಿಳಿವನ್ನುಯಾವ ತಾತ್ವಿಕ ನೆಲೆಗಟ್ಟಿನಲ್ಲಿ ವಿವೇಚಿಸಬೇಕು ಎನ್ನುವಾಗ ಕರ್ನಾಟಕದ ಜನಬದುಕಿನ ಗ್ರಹೀತಗಳಲ್ಲಿ ಹುಟ್ಟು ಪಡೆದಿರುವಂತಹ**'ಸಾರ್ವತ್ರಿಕ ಅರಿಮೆ'** ಪದಗಳು (ಉದಾಹರಣೆಗೆ: 'ಪ್ರತಿಯೊಂದು ಭಾಷೆಗೂ ತನ್ನದೇ ಆದ ಇತಿಹಾಸವಿರುತ್ತದೆ, ಪ್ರಭಾವ ವಲಯವಿರುತ್ತದೆ. ಒಂದು ಭಾಷೆಯ ಇತಿಹಾಸವೆಂದರೆ, ಆ ಭಾಷೆಯನ್ನಾಡುವ ಜನ ಸಮುದಾಯದ ಜೀವನದ ಇತಿಹಾಸ. ಅದನ್ನು ಕಟ್ಟಲು ಪ್ರತಿಯೊಬ್ಬ ಮಾನವನು ಒಂದೊಂದು ಕಲ್ಲನ್ನು ತಂದಿರುತ್ತಾನೆ' ಎನ್ನುವ ಎಮರ್ಸನ್‌ನ ಮಾತುಗಳನ್ನು ಹೇಮಲತ ಮಹಿಷಿಯವರು **'ಕರ್ನಾಟಕದಲ್ಲಿ ಭಾಷಾ ನೀತಿ'** ಎನ್ನುವುದನ್ನು ಚರ್ಚಿಸುವಾಗ ಬಳಸಿಕೊಳ್ಳುತ್ತಾರೆ. ಅಂದರೆ ಅವರಿಗೆ ಕನ್ನಡ ಬದುಕಿನಲ್ಲಿ ಹಾಸುಹೊಕ್ಕಿರುವ ಕನ್ನಡದ ತಿಳಿವನ್ನು ಅರಿಯಲಾಗದೆ, ಹೊರಗಿನಿಂದ ಪಡೆಯುವ ಅರಿವನ್ನು ಕನ್ನಡದಲ್ಲಿ ತಂದು ಹೇರಿರುವ ಬಗೆಯನ್ನು ಕಾಣಬಹುದು...) ಸಹಜವಾಗಿ ನಮ್ಮ ಎದುರಿಗಿರಬೇಕಾಗುತ್ತದೆ. ಅದರಿಂದ ರೂಪಿತವಾದ ಚೌಕಟ್ಟಿನಲ್ಲೇ ಆಡಳಿತದ–ಜನಬದುಕಿನ ಚರ್ಚೆಗಳು ನಡೆಯಬೇಕಾಗುತ್ತದೆ. ಕನ್ನಡದಲ್ಲಿ ಆಡಳಿತ ಎನ್ನುವಾಗ ಅದೊಂದು ಕನ್ನಡ ಜನಬದುಕಿನ ತಿಳಿವು ಎನ್ನುವುದನ್ನು ಒತ್ತಾಯಿಸುತ್ತದೆ. ಆದರೆ ಕನ್ನಡ ನಾಡ ಬದುಕಿನ ಈ ಒತ್ತಾಯವೇ ಇವತ್ತು ಬಿಕ್ಕಟ್ಟಿನಲ್ಲಿದೆ. ಕನ್ನಡದ್ದಲ್ಲದ ಸಿದ್ಧಮಾದರಿಗಳನ್ನು ಉಳಿಸಿಕೊಳ್ಳುವ ನೀತಿಗಳೇ ಮತ್ತೆ ಮತ್ತೆ ಸರ್ಕಾರದ ನೀತಿಗಳಾಗಿ ಉಳಿದು ನಮ್ಮನ್ನು ಅಣಕಿಸುವಂತೆ ಕಾಣುತ್ತದೆ. ಅಲ್ಲದೆ, ಕರ್ನಾಟಕದ ಜನ ಬದುಕನ್ನು ಸುಸೂತ್ರಗೊಳಿಸುವಲ್ಲಿ ಸರ್ಕಾರವು ಅನುಸರಿಸಿರುವ **ಭಾಷಾ ನೀತಿ ಮತ್ತು ಭಾಷಾ ಯೋಜನೆಯು** ಇದಕ್ಕೆ ಪೂರಕವಾಗಿ ಇರುವಂತೆ ತೋರುವುದಿಲ್ಲ. ಇದನ್ನು ಡಾ.ಕೆ.ವಿ.ನಾರಾಯಣರವರ ಮಾತುಗಳಲ್ಲಿ ಗಮನಿಸುವುದಾದರೆ:

1962 ರ ಅಕ್ಟೋಬರ್ 10 ರಂದು ಕರ್ನಾಟಕ ರಾಜ್ಯ ಭಾಷಾ ಅಧಿನಿಯಮವನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು. ಈ ಅಧಿನಿಯಮದ ಪ್ರಕಾರ ಸರಕಾರಿ ಉದ್ದೇಶಗಳಿಗಾಗಿ ಬಳಸಬೇಕಾದ ಭಾಷೆ ಕನ್ನಡವೆಂದೂ ರಾಜ್ಯ ವಿಧಾನಮಂಡಲದ ವ್ಯವಹಾರದ ನಿರ್ವಹಣೆಗೆ ಬಳಸಬೇಕಾದ ಭಾಷೆ ಇಂಗ್ಲಿಶ್ ಎಂದೂ ಉಪಬಂಧಿಸಲಾಗಿದೆ. ಮುಂದುವರೆದು ಈ ಅಧಿನಿಯಮವು ರಾಜ್ಯ ಮತ್ತು ಕೇಂದ್ರ ಸರಕಾರಗಳ ಅಧಿನಿಯಮವನ್ನು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಲು ಅವಕಾಶ ಕಲ್ಪಿಸುತ್ತದೆ ಮತ್ತು ಹೀಗೆ ಪ್ರಕಟಗೊಂಡ ಕನ್ನಡ ಅನುವಾದದ ಪಾಠವನ್ನು ಅಧಿಕೃತವೆಂದು ಸೂಚಿಸುತ್ತದೆ.

ಈ ಕನ್ನಡ ಅನುವಾದದ ಪಾಠ ಅಧಿಕೃತಗೊಳಿಸುವ ಮಾಡು ಎರಡು ನೆಲೆಯಲ್ಲಿ ವ್ಯಾಖ್ಯಾನಕ್ಕೆ ಒಳಗಾಗಬಹುದು.

1. ಇಂಗ್ಲಿಶ್ ಮತ್ತು ಕನ್ನಡ ಪಾಠಗಳಲ್ಲಿ ಅರ್ಥ ವಿವರಣೆಗೆ ಸಂಬಂಧಿಸಿದಂತೆ ಯಾವುದಾದರೂ ಗೊಂದಲಗಳು ಉಂಟಾದರೆ ಆಗ ಕನ್ನಡ ಪಾಠವನ್ನು ಅಧಿಕೃತ ಎಂದು ಭಾವಿಸುವುದು.
2. ರಾಜ್ಯಪಾಲರ ಅನುಮತಿಯನ್ನು ಪಡೆದು ರಾಜ್ಯಪತ್ರದಲ್ಲಿ ಪ್ರಕಟಗೊಂಡ ಈ ಕನ್ನಡ ಅನುವಾದವು ಮಾತ್ರ ಅಧಿಕೃತವೇ ಹೊರತು ಹೀಗೆ ಅನುಮತಿ ಪಡೆಯದ ಇನ್ಯಾವುದೇ ಅನುವಾದವು ಬೇರೆ ಯಾವುದೇ ಕಾರಣದಿಂದ ಸಿದ್ದಗೊಂಡಿದ್ದರೂ ಅದು ಅಧಿಕೃತವಲ್ಲ ಎಂದು ತಿಳಿಯುವುದು.

ಈ ಎರಡು ವ್ಯಾಖ್ಯೆಗಳಲ್ಲಿ ಎರಡನೆಯದು ಮಾತ್ರ ಸರಿಯೆಂದು ತೋರುತ್ತದೆ. ಎಂದರೆ ಮೂಲ ಇಂಗ್ಲೀಷಿನ ಪಾಠಕ್ಕೆ ಕನ್ನಡದಲ್ಲೇ ಹಲವು ಉದ್ದೇಶಿತ ಇಲ್ಲವೇ ಪ್ರಾಸಂಗಿಕ ಅನುವಾದಗಳಿದ್ದರೆ ಅವುಗಳಲ್ಲಿ ಯಾವುದನ್ನು ಅಧಿಕೃತ ಎಂದು ಪರಿಗಣಿಸಬೇಕು ಎಂಬ ಬಗೆಗೆ ಈ ಅಧಿನಿಯವು ಸ್ಪಷ್ಟನೆಯನ್ನು ನೀಡುತ್ತದೆ.

ನಾವು ಸಾಧ್ಯವೆಂದು ತಿಳಿದ ಮೊದಲನೇ ವ್ಯಾಖ್ಯೆಯ ಚರ್ಚೆ ಬಹುಮಟ್ಟಿಗೆ ವಿಧಾನಮಂಡಲಗಳಲ್ಲಿ ಮತ್ತು ಉಚ್ಚ ಹಾಗೂ ಉನ್ನತ ನ್ಯಾಯಾಲಯಗಳಲ್ಲಿ ಮಾತ್ರ ಬರುವ ಪ್ರಶ್ನೆ. ಅಲ್ಲೆಲ್ಲಾ ಇಂಗ್ಲಿಶ್ ಮಾತ್ರ ಅಧಿಕೃತ ವ್ಯವಹಾರದ ಭಾಷೆಯೆಂದು ಈಗಾಗಲೇ ಸಿದ್ದವಾಗಿರುವುದರಿಂದ, ಅಲ್ಲಿ ಅಧಿನಿಯಮಗಳ ಕನ್ನಡ ಅನುವಾದ ಪಾಠದ ಬಳಕೆಯಾಗಲೀ ಅದರ ಅಧಿಕೃತತೆಯಾಗಲೀ ಒಂದು ಪ್ರಶ್ನೆಯಾಗಿ ಬರುವುದು ಸಾಧ್ಯವಿಲ್ಲ.

ಎಂದರೆ ಈ ಅಧಿನಿಯಮವು ಕನ್ನಡ ಭಾಷೆಗೆ ಅವಕಾಶ ಕಲ್ಪಿಸುತ್ತಲೂ ತನ್ನ ಅಧಿಕಾರ ವ್ಯಾಪ್ತಿಯ ಕನ್ನಡವನ್ನು ಮಾತ್ರ ಅಧಿಕೃತವೆಂದು ಹೇಳುವ ಪ್ರಯತ್ನ ಮಾಡಿದೆ. ಈ ಅಧಿನಿಯಮಕ್ಕೆ 1982 ರಲ್ಲಿ ಎರಡು ತಿದ್ದುಪಡಿಗಳನ್ನು ಮಾಡಲಾಗಿದೆ.

1962 ರಿಂದ 1982 ರವರೆಗೆ ಸುಮಾರು ಹತ್ತೊಂಭತ್ತು ವರ್ಷಗಳ ಕಾಲ ವಿಧಾನ ಮಂಡಲದಲ್ಲಿ ಕನ್ನಡವನ್ನು ಬಳಸಬೇಕೆ, ಬಳಸಿದರೆ ಅದಕ್ಕೆ ಮನ್ನಣೆ ನೀಡಬೇಕೇ ಎಂಬ ಪ್ರಶ್ನೆ ಮೇಲಿಂದ ಮೇಲೆ ಉದ್ಭವಿಸುತ್ತಲೇ ಬಂದಿದೆ. 1982ರ ತಿದ್ದುಪಡಿಯಲ್ಲೂ ಮುಖ್ಯವಾಗಿ ಮಾಡಿರುವ ಬದಲಾವಣೆ ಹೀಗಿದೆ:

ರಾಜ್ಯ ವಿಧಾನಮಂಡಲದ ವ್ಯವಹಾರದ ನಿರ್ವಹಣೆಗಾಗಿ ಕನ್ನಡ ಮತ್ತು ಹಿಂದಿಯ ಜೊತೆಗೆ ಇಂಗ್ಲಿಶ್ ಭಾಷೆಯ ಉಪಯೋಗವನ್ನು ಮುಂದುವರೆಸಬಹುದು.

ಈ ಹಿಂದಿನ ಅಧಿನಿಯಮದಲ್ಲಿ ಇಂಗ್ಲಿಶ್ ಭಾಷೆಯನ್ನು ಮಾತ್ರ ಬಳಸಲು ಅವಕಾಶ ಕಲ್ಪಿಸಲಾಗಿತ್ತು. ಈ ತಿದ್ದುಪಡಿಯು ಕನ್ನಡ ಮತ್ತು ಹಿಂದಿಗಳ ಜೊತೆಗೆ ಇಂಗ್ಲಿಶ್ ಭಾಷೆಯನ್ನು ಬಳಸಲು ಅವಕಾಶ ಕಲ್ಪಿಸುತ್ತದೆ. ವಿಚಿತ್ರವೆಂದರೆ ಅಲ್ಲಿಯವರೆಗೂ ಇಂಗ್ಲಿಶ್ ಮಾತ್ರ ಅಧಿಕೃತವಾಗಿ ಬಳಕೆಯಾಗುತ್ತಿತ್ತು. ಆದರೆ ಕನ್ನಡ ಮತ್ತು ಹಿಂದಿಗಳು ಈಗಾಗಲೇ ಬಳಕೆಯಾಗುತ್ತಿವೆ ಎಂಬಂತೆಯೂ ಈಗ ಮತ್ತೆಯೂ ಇಂಗ್ಲಿಶ್‌ಅನ್ನು ಬಳಸುತ್ತ ಹೋಗಲು ಅವಕಾಶ ಕಲ್ಪಿಸುವಂತೆ ತಿದ್ದುಪಡಿಯು ಸೂಚಿಸುತ್ತದೆ.[4]

ಈ ಮೇಲಿನ ವಿಶ್ಲೇಷಣೆಯನ್ನು ಗಮನಿಸಿದರೆ, **" ಕನ್ನಡದಲ್ಲಿ ಆಡಳಿತ: ಪ್ರಭುತ್ವ ಮತ್ತು ಜನತೆ "** ಎನ್ನುವ ನಾಡು–ನುಡಿಯ ಸಂಬಂಧವು ಇವತ್ತಿಗೂ ಸಹ ಯಾವುದೇ ಖಚಿತ ತಿಳಿವಿನಲ್ಲಿ ಇಲ್ಲ ಎನ್ನುವುದನ್ನು ಸೂಚಿಸುತ್ತದೆ. ಜೊತೆಗೆ ಕನ್ನಡದ ಜನಬದುಕಿನೊಳಗಿನ ತಿಳಿವನ್ನು ಅಲಕ್ಷಿಸಿ, ಹೊರಗಿನ ತಿಳಿವನ್ನು ಹೇರಿಕೊಂಡು ದ್ವಂದ್ವಾತ್ಮಕ ಸ್ಥಿತಿಯಲ್ಲಿ ಮುಂದುವರೆದಿರುವುದು ಎದ್ದು ಕಾಣುತ್ತದೆ.

ಈ ಚರ್ಚೆಯಿಂದ ಗ್ರಹಿಸಬಹುದಾದ ಇನ್ನೊಂದು ಆಯಾಮವೆಂದರೆ; ಭಾಷಾವಾರು ಪ್ರಾಂತ್ಯಗಳ ಉದಯದೊಡನೆ ಕನ್ನಡದ ಭಾಷಿಕ ಸಮುದಾಯಗಳು ಸಾರ್ವತ್ರಿಕವಾಗಿ ಏಕೀಕರಣಕ್ಕೆ ಒಳಗಾಗಿವೆ. ಹೀಗೇ ಒಳಗಾಗುವಾಗ ಭಾಷೆಯಲ್ಲಿ ಇದ್ದಇಲ್ಲಿನ **ಕುಲ ಸಂಬಂಧಿ, ನೆಲ ಸಂಬಂಧಿ ಆಯಾಮಗಳು, ಲಿಂಗ ಸಂಬಂಧಿ ಆಯಾಮಗಳು, ಮತ್ತು ಇಲ್ಲಿನ ದಿನದಿನದ ನಿರ್ದಿಷ್ಟ ವ್ಯವಹಾರಿಕ ಅಗತ್ಯಗಳ ಆಯಾಮಗಳನ್ನು ಮರೆಮಾಚಿದೆ.** ಹುಸಿ **ಸೆಕ್ಯುಲರ್** ನೆಲೆಯಲ್ಲಿ ಎಲ್ಲವನ್ನು ಒಳಗೊಂಡಂತೆ ಭಾಷಾಬಳಕೆಯ ನೀತಿನಿಯಮಗಳಲ್ಲಿ ನಟಿಸಿದಂತೆ ಕಾಣುತ್ತದೆ. ಈ ನಟನೆಯು ಅಂತಿಮವಾಗಿ **'ಇಂಗ್ಲಿಷ್–ನಿರ್ದೇಶಿತ–ಕನ್ನಡ' ಮತ್ತು 'ಸಂಸ್ಕೃತ–ನಿಯಂತ್ರಣದ ಕನ್ನಡ'ವಾಗಿ** ಎಲ್ಲವೂ ಮೇಲುಜಾತಿಗಳ, ಉಳ್ಳವರ, ಗಂಡಸರ ಕಪಿಮುಷ್ಟಿಯಲ್ಲಿ ಉಳಿಯುವಂತೆ ಪ್ರಭುತ್ವವು ಆಗುಮಾಡಿಕೊಂಡಿದೆ. ಅದೇ ಕನ್ನಡ ಬಳಕೆಯ ಅಗತ್ಯವೆನ್ನುವಂತೆ ಬಿಂಬಿಸಿಕೊಂಡಿದೆ. ಹಾಗಾಗಿ ಇಂದಿಗೂ ಸಹ ಸರ್ಕಾರಿ ಆಡಳಿತದಲ್ಲಿ ಬಳಸುವ ಮಾತು ಮತ್ತು ಬರಹ ಅದು'ಕನ್ನಡ ಜನಬದುಕುಗಳ ಕನ್ನಡ–ಎಲ್ಲರ ಕನ್ನಡ' ಆಗದೆ ಉಳಿದುಬಿಟ್ಟಿದೆ.

ಇದಕ್ಕೆ ಪೂರಕವಾದ ಅನುಭವವೊಂದು ಹೀಗಿದೆ; ನಾನು ಆಡಳಿತ ಸೇವಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕದ ಆಡಳಿತ ಸನ್ನಿವೇಶದಲ್ಲಿ ಎದುರಾದ ಕೆಲವು ಭಾಷಿಕ ತೊಡಕೆಂದರೆ, ಸರ್ಕಾರಿ ಆದೇಶ, ಸುತ್ತೋಲೆ, ಅನಧಿಕೃತ ಟಿಪ್ಪಣಿ, ಅಧಿಕೃತ ಜ್ಞಾಪನ... ಮುಂತಾದವುಗಳ ಮಧ್ಯೆ ಇರುವ ವ್ಯತ್ಯಾಸದ್ದು. ಯಾವ ಸಂದರ್ಭದಲ್ಲಿ ಯಾವುದನ್ನು, ಯಾವಾಗ ಬಳಸಬೇಕೆಂಬ ಗೊಂದಲ ಕಾಡಿದ್ದು.

[4] ಡಾ. ಕೆ.ವಿ.ನಾರಾಯಣ, 2006, ಕನ್ನಡ ಜಗತ್ತು ಅರ್ಧಶತಮಾನ, ಕನ್ನಡ ವಿ.ವಿ. ಹಂಪಿ, ಪು.31–32

ಇದರೊಡನೆ, **'ಅಧ್ಯರ್ಪಣೆ', 'ಹಿಂಬರಹ ನೀಡುವುದು'** ಮುಂತಾದ ಪದಗಳೂ ಕೂಡ ಅರ್ಥ ತಿಳಿಯದೆ ಬಳಕೆಯಾಗುತ್ತಿದ್ದದ್ದು. ಅಲ್ಲದೆ, ನ್ಯಾಯಾಲಯದ ಆದೇಶವನ್ನು ಹೊರಡಿಸುವ ಸಂದರ್ಭದಲ್ಲಿ ಬಳಸುವ ಭಾಷೆಯ ಮತ್ತೊಂದು ಬಗೆಯ ತೊಡಕು; **'ಹೀಗೆ ಆದೇಶಿಸಲು'** ಅಥವಾ **'ಈ ಕೆಳಕಂಡಂತೆ ಆದೇಶಿಸಲು'** 'ನಾನು ನಿರ್ದೇಶಿತನಾಗಿದ್ದೇನೆ'... ಎಂದು ಬರೆಯುತ್ತಿರುವಾಗ ಅಲ್ಲಿ ನಾನು **ಮಹಿಳೆಯಾಗಿದ್ದರೂ ಸಹ, ಪುರುಷ ವಾಚಕ ಪದಗುಚ್ಚಗಳನ್ನೇ ಬಳಸಬೇಕಾಗುತ್ತದಲ್ಲ!** ಇದು ಯಾಕೆ? ಅಂದರೆ ಇಲ್ಲಿ ಎರಡು ರೀತಿಯ ತೊಡಕುಗಳು 'ಆಡಳಿತ ಕನ್ನಡ'ದ ಭಾಷಿಕ ಜಗತ್ತಿನಲ್ಲಿ ಕಾಣುತ್ತವೆ: ನಿಜವಾಗಿಯೂ **ನಮ್ಮ ಬಳಕೆಯ ಭಾಷೆ** ಇದೆನಾ ಎನ್ನುವುದು? ಮೊದಲನೆಯದ್ದು. **ಮಹಿಳೆಯು ಈಗಾಗಲೇ ಆಡಳಿತದಲ್ಲಿ ಬಳಸುತ್ತಿರುವಂತಹ ಕನ್ನಡ ಭಾಷೆಯನ್ನು ಬಳಸಿದಾಗ, ಅಲ್ಲಿ ಆಕೆ ಆಡಳಿತಲ್ಲಿ ಪಾಲ್ಗೊಂಡಿದ್ದಾಳೆ–ಪಾಲ್ಗೊಳ್ಳುತ್ತಿದ್ದಾಳೆ** ಎನ್ನುವ **ಗುರುತನ್ನು ಇಲ್ಲವಾಗಿಸುವುದು** ಎರಡನೆಯದ್ದು. ಅಂದರೆ ಅಗತ್ಯಕ್ಕೆ ತಕ್ಕಂತಹ ಬಳಕೆಯ ಕನ್ನಡ ಭಾಷೆ ಇಲ್ಲದಿರುವುದು.

ಹಾಗೆ ನೋಡಿದರೆ, ಇಂದಿಗೂ ಆಡಳಿತದಲ್ಲಿ ಬಳಸುತ್ತಿರುವ ಅನೇಕ ಪದಗಳು ಯಾವ ಅರ್ಥದಲ್ಲಿ ಬಳಕೆಯಾಗುತ್ತಿವೆ ಎನ್ನುವ ಸ್ಪಷ್ಟತೆ ಇಲ್ಲದೆ, ಕೆಲವೊಮ್ಮೆ ಇಂಗ್ಲಿಷ್ ಪದಗಳನ್ನೇ ಬಳಸಬೇಕಾದ ಒತ್ತಾಯಕ್ಕೆ ಬೀಳುತ್ತಿರುತ್ತೇವೆ. ಇದಕ್ಕೆ ಕಾರಣ, ಮಹಿಳೆಯಾಗಿ ಪುರುಷ ವಾಚಕಗಳಿಂದ ತಪ್ಪಿಸಿಕೊಳ್ಳಬೇಕಾದ ಅನಿವಾರ್ಯತೆ ಒಂದು. ಜನ ಬಳಕೆಯಲ್ಲದ ಸಂಸ್ಕೃತ ಪದಗಳು ಬಂದು ಅನಾಯಾಸವಾಗಿ ಕುಳಿತಿರುವುದು ಇನ್ನೊಂದು. ಯಾಕೆಂದರೆ ಇಂತಹ ಪದ ಬಳಕೆಯ **ಹಿಂದೆ ಆಡಳಿತ ಎಂದರೆ ಪುರುಷರದ್ದು** ಎನ್ನುವ ಲಿಂಗೀಯ ಕುರುಡುತನವು ನಿರಂತರವಾಗಿ ಕೆಲಸ ಮಾಡುತ್ತಿರುತ್ತದೆ. ಮಹಿಳೆ ಕೆಲಸ ಮಾಡುವಾಗಲೂ ತನ್ನನ್ನು ಇಲ್ಲವಾಗಿಸಿಕೊಂಡು ಪುರುಷ ಧೋರಣೆಗಳನ್ನೇ ಮುಂದುವರೆಸಬೇಕಾಗುತ್ತದೆ. ಹಾಗೂ ಜನಬಳಕೆಯ ಕನ್ನಡವನ್ನು ತಿರಸ್ಕರಿಸಿದ, ಆಡಳಿತವು ತಲುಪಬೇಕಾದವರಿಗೆ ಅರ್ಥವಾಗದ ಸಂಸ್ಕೃತ ಮತ್ತು ಇಂಗ್ಲಿಶನ್ನೆ ಬಳಸಬೇಕಾಗುತ್ತದೆ. ಅಧಿಕಾರ ಭಾಷೆಯಾಗಿ **ಸಂಸ್ಕೃತ–ಇಂಗ್ಲಿಶು**ಗಳನ್ನು ಕನ್ನಡದ ಮೂಲಕ ಕಟ್ಟುವ, ಉಳಿಸುವ ಉಪಯೋಗದ ಬಗೆಯು ಚಾಲನೆಗೊಳ್ಳುತ್ತಿರುತ್ತದೆ. ಇದು, ಯಾವ ಜನಬದುಕುಗಳಿಗಾಗಿ ಆಡಳಿತವನ್ನು ರೂಪಿಸಲಾಗಿದೆಯೋ, ಯಾವ ಮಂದಿಗಾಗಿ ಆಡಳಿತವನ್ನು ನಡೆಸಲಾಗುತ್ತಿದೆಯೋ ಆ ನೆಲೆಯಲ್ಲಿ ನಿಂತು ನೋಡುವಾಗ ಅಂತಿಮವಾಗಿ ಅವು ಪ್ರಜಾಪ್ರಭುತ್ವ ವಿರೋಧಿ ಧೋರಣೆಯಾಗಿ ಆಡಳಿತವು ಬೆಳೆದಿರುವುದು ಉಳಿದಿರುವುದು ದಿಟವಾಗಿ ಕಾಣುತ್ತದೆ.

ಇಂದು ಆಡಳಿತದ ಎಲ್ಲಾ ಸ್ತರಗಳಲ್ಲಿ ಸರ್ಕಾರಗಳು ಜನಬದುಕುಗಳ ಒಳಗೊಳ್ಳುವಿಕೆಯ ನೀತಿ ನಿರೂಪಣೆಗಳನ್ನು ಮಾಡುತ್ತಿರುತ್ತವೆ. ಆದರೆ ಆಡಳಿತಕ್ಕೆ

ಬಳಕೆಯಾಗುವ ಭಾಷೆಯು ಅಂತಹ ಅವಕಾಶವನ್ನು ತೆರೆಯದಾಗಿರುವಾಗ ಈ **'ಒಳಗೊಳ್ಳುವಿಕೆ'** ಎನ್ನುವ ತಾತ್ವಿಕತೆಯೇ ಹುಸಿ ಎನಿಸಿಬಿಡುತ್ತದೆ. ಯಾರನ್ನು ಒಳಗೊಳ್ಳುತ್ತದೆ ಎನ್ನುವ ಸವಾಲು ಎದುರಾಗುತ್ತದೆ. ಆಗ, ಅಧಿಕಾರ ಸಂಬಂಧಗಳನ್ನು ಯಾರು ಯಥಾಸ್ಥಿತಿಯಲ್ಲಿ ಮುಂದುವರಿಸಿಕೊಂಡು ಹೋಗುತ್ತಾರೋ ಅಂತವರನ್ನು ಮಾತ್ರ ಫಲಾನುಭವಿಗಳನ್ನಾಗಿ ಆಡಳಿತ ಪರಿಗಣಿಸುತ್ತದೆ. ಹೀಗೆ ಉಪಯೋಗ ಪಡೆದುಕೊಳ್ಳುವ ಒಂದು ಗುಂಪು ತಯಾರಾಗಿ ಅದೇ ಇಡೀ ನಾಡ ಜನಬದುಕಿನ ಮುಖದ ಪಾತ್ರವನ್ನು ಧರಿಸಿಬಿಡುತ್ತದೆ. ಇದನ್ನು ಬಹು ಹಿಂದೆಯೇ ಡಿ.ಆರ್. ನಾಗರಾಜ್‌ರವರು **ಉದಯೀಮಾನ ಮಧ್ಯಮ ವರ್ಗ**ವೊಂದು ಸಾರ್ವಜನಿಕವಾಗಿ ಕ್ರಿಯಾಶೀಲವಾಗುತ್ತದೆ ಎಂದಿರುವುದು. ಅದು ಅಂತಿಮವಾಗಿ ಸವಲತ್ತುಗಳನ್ನು ಪಡೆಯುವ, ರಾಜಕೀಯಾಧಿಕಾರವನ್ನು ಗಳಿಸುವ ದಾರಿಯನ್ನು ಮಾಡಿಕೊಳ್ಳುತ್ತದೆ. ಇದಕ್ಕೆ ಅನುಕೂಲವಲ್ಲದ ಜನಬದುಕುಗಳ ಸಾಮಾಜಿಕ ಸಮಸ್ಯೆಗಳು ದೊಡ್ಡದಾಗಿ ಕಾಣದಂತೆ ಉಪಾಯಗಳನ್ನು ಹೆಣೆಯಲು ಕಾರಣವಾಗುತ್ತದೆ. ಆ ಮೂಲಕ ಜನಬಳಕೆಯ ಭಾಷೆಗೆ ವಿರೋಧಿಯಾಗಿಬಿಡುತ್ತದೆ.ಈ ಸಾಮಾಜಿಕ ಗುಂಪು ಇಂತಹ ಕೆಲಸದಲ್ಲಿ ತೊಡಗಿರುವುದರಿಂದಾಗಿ;

> "ಕನ್ನಡ ಮಧ್ಯಮ ವರ್ಗ ದಿನೇ ದಿನೇ ಆತ್ಮಹೀನವಾಗುತ್ತಾ ಬಂದಿದೆ.... ತಮ್ಮ ತಾಯ್ನುಡಿಯೂ ಸೇರಿದಂತೆ ಯಾವುದೇ ದೇಶೀ ಭಾಷೆಗಳ ಬಗ್ಗೆ ಇವರಿಗೆ ಪ್ರೀತಿಯಾಗಲೀ, ಗೌರವವಾಗಲೀ ಇಲ್ಲ. ಇಂಗ್ಲಿಷಿಗೆ ತಮ್ಮನ್ನು ತಾವು ಅರ್ಪಿಸಿಕೊಂಡಿರುವ ವರ್ಗ ಇದು... 1947 ರಿಂದೀಚೆಗೆ ಕರ್ನಾಟಕದ ಬದುಕಿನಲ್ಲಿ ಇಂಗ್ಲಿಷ್‌ಗೆ ಹಿಂದೆ ಎಂದೂ ಇರದಿದ್ದಷ್ಟು ಪ್ರಾಧಾನ್ಯತೆ ಬಂದುಬಿಟ್ಟಿದೆ... ಸರ್ಕಾರವಂತೂ ತನ್ನ ಇಂಗ್ಲಿಷ್ ಮಾಧ್ಯಮದ ಮೋಹದಿಂದಾಗಿ ತೂಕಡಿಸುವವರಿಗೆ ಹಾಸಿಗೆ ಹಾಕಿ ಕೊಟ್ಟಿದೆ. ಬೆಂಗಳೂರಿನ ಅಥವಾ ಯಾವುದೇ ನಗರದ ಮೇಲುಜಾತಿಯ ಸ್ಥಿತಿವಂತ ಕನ್ನಡಿಗರ ಮನೆಗೆ ಹೋದರೆ ಅಲ್ಲಿಯ ವಾತಾವರಣದಿಂದಾಗಿ ಬೆಚ್ಚಿ ಬೀಳುವಂತಾಗುತ್ತದೆ. ಅಲ್ಲಿಯ ಪುಸ್ತಕ, ಪತ್ರಿಕೆ, ಕೆಸೆಟ್ ಎಲ್ಲವೂ ಇಂಗ್ಲಿಷ್‌ಮಯವೇ. ಇದರಿಂದಾಗಿ ನಗರೀಕರಣ ಎಂದರೇನೇ ಕನ್ನಡದ ನಿರ್ನಾಮ ಎಂಬಂತಾಗಿದೆ. ಈ ಮೇಲುಜಾತಿ ನಗರಿಗರ ಮೌಲ್ಯಗಳು ಉಳಿದ ಜಾತಿ ಜನಾಂಗಗಳ ಮೇಲೂ ದಟ್ಟವಾದ ಪ್ರಭಾವವನ್ನು ಬೀರುತ್ತಿವೆ. ಸಾಮಾಜಿಕ ಅಂತಸ್ಥಿನಲ್ಲಿ ಮೇಲಕ್ಕೆ ಹೋದಷ್ಟೂ ಕನ್ನಡ ಮರೆಯಾಗುತ್ತಾ ಹೋಗುತ್ತದೆ."[5]

ಡಿ.ಆರ್.ನಾಗರಾಜ್ ಅವರೇ ಹೇಳುವಂತೆ, 'ಕನ್ನಡಪರ ಚಳುವಳಿಗಳು ಎಂದರೆ ಮಧ್ಯಮವರ್ಗದ ಆಶೋತ್ತರಗಳನ್ನು ಮಾತ್ರ ಬಿಂಬಿಸುವ (ಕನ್ನಡ) ಚಳುವಳಿಯಾಗಿಟ್ಟಿವೆ. ಕರ್ನಾಟಕದ ಬಹುಸಂಖ್ಯಾತ ಬಡವರ ವಾಸ್ತವವನ್ನು ಒಳಗೊಳ್ಳದ ನಾಡಿನ ಕಲ್ಪನೆ, ನುಡಿಯ ಕಲ್ಪನೆ ಸುಳ್ಳು ಎಂಬುದು ಮನದಟ್ಟಾಗದಿದ್ದರೆ ಹುಟ್ಟುವ ಅಪಾಯಗಳು ಅಸಂಖ್ಯ...' ಇಂತಹ ಬೆಳವಣಿಗೆಯನ್ನು ಡಿ.ಆರ್.ನಾಗರಾಜ್ ಎರಡು ಅಪಾಯಕಾರಿ ನಡೆಗಳೆಂದು

---

[5]ಡಿ.ಆರ್. ನಾಗರಾಜ್, ಅಗ್ರಹಾರ ಕೃಷ್ಣಮೂರ್ತಿ (ಸಂ), 2006, ಸಂಸ್ಕೃತಿ ಕಥನ, ಸಮಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು.43

ಗುರುತಿಸಿದ್ದಾರೆ: ಮೊದಲನೇ ಅಪಾಯ- **ಕನ್ನಡ ಭಾಷೆಯ ದುರಭಿಮಾನ-ಕನ್ನಡ ಸಂಸ್ಕೃತಿಯನ್ನು ಜಡ್ಡಾಗಿಸುತ್ತದೆ.** ಎರಡನೆಯದ್ದು, ಇಂತಹ **ಭಾಷಿಕ ಚಳುವಳಿ ಇತರ ಪ್ರಗತೀಪರ ಚಳುವಳಿಗಳೊಡನೆ ಯಾವುದೇ ಸಂಬಂಧವಿಲ್ಲದೆ ಅವಕ್ಕೆ ಪ್ರತಿಸ್ಪರ್ಧಿ ಎಂಬಂತೆ ವರ್ತಿಸಿ ಕೊನೆಗೆ ಶಿವಸೇನೆಯಂತಾಗುತ್ತದೆ**... ಅಂದರೆ; "ಇಂಥ ಚಳುವಳಿಗಳು ಕನ್ನಡವನ್ನು ಅಮೂರ್ತವನ್ನಾಗಿ ನೋಡದೆ, ಕೋಟ್ಯಾಂತರ ದುಡಿಯುವ ಕನ್ನಡಿಗರ ಭಾಷೆಯನ್ನಾಗಿ ನೋಡಿದಾಗ ಮೇಲಿನ ಸಮಸ್ಯೆಗಳನ್ನು ವ್ಯಾಪಕವಾಗಿ ನೋಡುವ ಅನಿವಾರ್ಯವಾಗುತ್ತದೆ. ಆದರೆ, ಹೀಗೆ ನೋಡುವ ರಾಜಕೀಯ ಸಂಕಲ್ಪವಾಗಲೀ ಶಕ್ತಿಯಾಗಲೀ ನಾವಿಂದು ಕಾಣುತ್ತಿಲ್ಲ"[6] ಆದ್ದರಿಂದ ಇಂದು ಪ್ರಜಾಪ್ರಭುತ್ವದಲ್ಲಿ ಒಳಗೊಳ್ಳುವಿಕೆಯ ಬಗ್ಗೆ ಎಲ್ಲರೂ ಮಾತನಾಡುತ್ತಿರುತ್ತೇವೆ ನಿಜ. ಆದರೆ, ಇಲ್ಲಿ ಮುಖ್ಯವಾದುದೆಂದರೆ; ಯಾರು ಒಳಗೊಳ್ಳುವಿಕೆಯ ಬಗ್ಗೆ ಮಾತನಾಡುತ್ತಾರೆ?, ಏಕೆ ಮಾತನಾಡುತ್ತಾರೆ?, ಯಾವ ಉದ್ದೇಶಕ್ಕಾಗಿ ಮಾತನಾಡುತ್ತಾರೆ ಎನ್ನುವುದು. ಇಂತಹ ಕೇಳ್ವಿಗಳನ್ನು ಎದುರಾಗಿರಿಸಿಕೊಂಡು ನೋಡಿದರೆ, ಆಡಳಿತ ಭಾಷೆ, ಆಳುವವರ ಉಪಾಯ ಮತ್ತು ಜನತೆಯ ಸಂಕಟಗಳು ಇವು ಒಂದೇ ಅಲ್ಲ ಎನ್ನುವುದು ಅರಿವಿಗೆ ಬರುತ್ತದೆ. ಇದು ಕಳೆದ 60ಕ್ಕೂ ಹೆಚ್ಚು ವರುಶಗಳಿಂದ ಮತ್ತೆಮತ್ತೆ ಸಮಸ್ಯೆಗಳನ್ನು ತಂದೊಡ್ಡುತ್ತಿದೆ ಎನ್ನುವುದು ತಿಳಿಯುತ್ತದೆ. ಜನರನ್ನು ನಿಯಂತ್ರಿಸಲು, ಯಥಾಸ್ಥಿತಿಯನ್ನು ಮುಂದುವರಿಸಲು ಆಡಳಿತ ಭಾಷೆ ಅಸ್ತ್ರವಾಗಿ ಬಳಕೆಯಾಗುತ್ತಿರುವುದನ್ನು ಗ್ರಹಿಸಬಹುದಾಗಿದೆ.ಕನ್ನಡದ ಜನಬದುಕಿನ ನೆಪದಲ್ಲಿನ ಇಂತಹ ಆಡಳಿತದ ಸನ್ನಿವೇಶ ದುರಂತವೇ ಸರಿ. ಕರ್ನಾಟಕ-ಕನ್ನಡದ ಆಡಳಿತದ ನಡೆಗಳು ಹೀಗಿರುವಾಗ ಒಳಗೊಳ್ಳುವಿಕೆಯ ಅವಕಾಶವನ್ನು ಕಲ್ಪಿಸಿಕೊಡುವವರು ಯಾರು? ಯಾರಿಗಾಗಿ ಅವಕಾಶ ಕಲ್ಪಿಸುತ್ತಾರೆ? ಏಕೆ ಅವಕಾಶ ಕಲ್ಪಿಸುತ್ತಾರೆ? ನಿಜವಾಗಿಯು ಇದರ ಗುರಿಯೇನು? ಎಂಬ ಕೇಳ್ವಿಗಳು ಮುನ್ನೆಲೆಯನ್ನು ಪಡೆದುಕೊಳ್ಳುತ್ತವೆ.

ಯಾವುದೇ ಕಾಲದ 'ಆಡಳಿತದ ಭಾಷೆ' ಯನ್ನು ಗ್ರಹಿಸುವಾಗ, ಅದರ ಹಿಂದಿನ ರಾಜಕಾರಣವೇನು? ಆ ರಾಜಕಾರಣವನ್ನು ಸೃಷ್ಟಿಸುತ್ತಿರುವ ತಾತ್ವಿಕತೆಯು ಯಾವ ಬಗೆಯದು? ನಾಡಿನ ಜನಬದುಕನ್ನು ಒಳಗೊಳ್ಳುವ ದಾರಿಗಳನ್ನು ಅದು ಹೇಗೆ ಆಗುಮಾಡಿಕೊಂಡಿದೆ? ಬದಲಾದ ಸಾಮಾಜಿಕ ಸನ್ನಿವೇಶಗಳಲ್ಲಿ ಅದು ಹೇಗೆ ಹೊಸಹೊಸ ವಲಯಗಳನ್ನು ಜನಬದುಕಿಗೆ ಅನುಕೂಲವಾಗುವಂತೆ ಬದಲಿಸಿಕೊಳ್ಳುತ್ತದೆ? ಒಂದು ಸಮಾಜದ ನೂರಾರು ಬಗೆಯ ಉಪಯೋಗಗಳ ಮೂಲಕ ನಾಡಿನ ಗುರುತನ್ನು ಹೇಗೆ ಉಳಿಸುತ್ತದೆ? ಎನ್ನುವುದನ್ನು ಅರಿಯಬೇಕಾಗುತ್ತದೆ. ಆಡಳಿತದ ಭಾಷೆಯೆಂದರೆ ಕಚೇರಿಯ

---

[6] ಡಿ.ಆರ್. ನಾಗರಾಜ್, ಅಗ್ರಹಾರ ಕೃಷ್ಣಮೂರ್ತಿ (ಸಂ), 2006, ಸಂಸ್ಕೃತಿ ಕಥನ, ಸಮಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು.43

ಕಡತದ ಮಾತು ಎಂದು ಮೇಲ್ನೋಟಕ್ಕೆ ಮಾತ್ರವೇ ಅದನ್ನು ಗ್ರಹಿಸಲು ಬರುವುದಿಲ್ಲ. ಕಲಿಕೆ, ಉದ್ಯೋಗ, ವ್ಯಾಪಾರ-ವಾಣಿಜ್ಯ, ಸರಕಾರದ ನೂರಾರು ಇಲಾಖೆಗಳ ವಹಿವಾಟು ಮೊದಲಾದ ಸಂಗತಿಗಳನ್ನು ಜನಬದುಕಿನ ನಂಟನಲ್ಲಿ ಬೆಸೆಯುವ ಕೆಲಸವನ್ನು 'ಆಡಳಿತ ಭಾಷೆ' ಮಾಡಬೇಕಾಗುತ್ತದೆ. ಇವೆಲ್ಲವುಗಳು ಒಳಗೊಳ್ಳಬೇಕಾದ ನಡೆಯನ್ನು ಕೂಡ ಅದು ನಿರ್ಧರಿಸುತ್ತಿರುತ್ತದೆ. ಅಂದರೆ ಜನಬದುಕುಗಳನ್ನು ಒಳಗೊಳ್ಳುವ ನೆಲೆಯನ್ನು ತಲುಪಬೇಕಾದರೆ ಅದಕ್ಕೆ ಯಾವುದೇ ಬಗೆಯ ಯಜಮಾನಿಕೆಯ ನಡೆಯೂ ಇರಕೂಡದು. ಆದರೆ, ಈಗಿನ ಆಡಳಿತ ಭಾಷೆಯೆನಿಸಿರುವ ಕನ್ನಡವು ಕರ್ನಾಟಕದ ಜನಬದುಕುಗಳಿಂದ ದೂರವೇ ಇದೆ. ಜನರು ಆಡಳಿತದೊಟ್ಟಿಗೆ ವ್ಯವಹರಿಸಬೇಕಾದರೆ ಮಧ್ಯವರ್ತಿಗಳನ್ನು ಬಳಸಿಯೇ ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ಸಾಧ್ಯವಾಗುವಂತೆ ರೂಪುಗೊಂಡಿದೆ. ಜನಬದುಕುಗಳ ಉಸ್ತುವಾರಿಗಿಂತ, ಅಧಿಕಾರದ ನಡೆಗಳ ಉಸ್ತುವಾರಿಯನ್ನು ಕಾಪಾಡಿಕೊಳ್ಳುವ ಚಹರೆಗಳಿಂದ ಕೂಡಿದೆ. ಹೀಗಾಗಿ ಆಡಳಿತದಲ್ಲಿ ಭ್ರಷ್ಟತೆ ತಾನೇ ತಾನಾಗಿ ಬೆಳೆಯಲು ಅವಕಾಶ ಮಾಡಿಕೊಟ್ಟಂತಾಗಿದೆ. ಆಡಳಿತ ಭಾಷೆಯನ್ನು ಸುಧಾರಿಸಬೇಕು ಎನ್ನುವಾಗಲೂ ಈ ಯಜಮಾನಿಕೆಯ ನೆಲೆಗಳನ್ನು ಗಟ್ಟಿಗೊಳಿಸುವ ಪ್ರಯತ್ನಗಳೇ ಕಾಣುತ್ತವೆ. ಇಂತಹ ಯಜಮಾನಿಕೆಯ ನೆಲೆಗಳು ರೂಪುಗೊಳ್ಳಲು ಕಾರಣವಾದ ಸಂಗತಿಗಳನ್ನು ಗುರುತಿಸಿಕೊಂಡು ಅದನ್ನು ಪಲ್ಲಟಗೊಳಿಸಬೇಕಾಗಿದೆ. ನಾಡಿನ ಬದುಕು ಮತ್ತು ಆಡಳಿತ ಬೇರೆಬೇರೆಯಲ್ಲ ಎನ್ನುವುದನ್ನು ಸಾಧಿಸಿ ತೋರಿಸಬೇಕಾಗುತ್ತದೆ. ಆದ್ದರಿಂದ ಈ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳುವುದು ಹೇಗೆ? ಎಲ್ಲರ ಕನ್ನಡವನ್ನು ಹಾಗೂ ಅದರ ತಿಳಿವನ್ನು ಆಡಳಿತ ಕನ್ನಡದ ಭಾಗವಾಗಿ ಮಾಡುವುದರ ಮೂಲಕ ಕನ್ನಡ ಸಮಾಜದ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಹೇಗೆ? ಎನ್ನುವ ಕೇಳ್ವಿಗಳು ದೊಡ್ಡದಾಗಿವೆ ಇವತ್ತಿನಲ್ಲಿ.

2. ಅಧ್ಯಯನದ ಗುರಿ, ಸ್ವರೂಪ ಮತ್ತು ವ್ಯಾಪ್ತಿ:

ಕರ್ನಾಟಕದ ಸನ್ನಿವೇಶದಲ್ಲಿ ಜನಭಾಷೆಗೂ ಮತ್ತು ಆಡಳಿತ ಭಾಷೆಗೂ ಇರುವ ವ್ಯತ್ಯಾಸದಿಂದ ಮಹಿಳೆಯೂ ಸೇರಿದಂತೆ ತಳಸಮುದಾಯದ ಜನರಲ್ಲಿ ಉಂಟಾಗುವ ಅವಮಾನ ಮತ್ತು ಕೀಳರಿಮೆ ದೊಡ್ಡದಾಗಿಯೇ ಇರುತ್ತದೆ. ಅಧಿಕಾರಸ್ಥ ನೆಲೆಗಳ ನಡುವೆ ಇವರ ಮಾತುಕತೆ ಸರಳವಾಗಿರಲು ಸಾಧ್ಯವಾಗುವುದೇ ಇಲ್ಲ. 'ಆಡಳಿತ'ವೆಂದರೆ ಇದು ನಮ್ಮದಲ್ಲ, ಇದು ಯಾರೋ ನಮಗಾಗಿ ಕೊಡುತ್ತಿರುವ ಕೊಡುಗೆ-ವರ, ಇದರ ಎದುರಲ್ಲಿ ದೈನ್ಯದಿಂದ ನಡೆದುಕೊಂಡರೆ ಮಾತ್ರವೇ ನಮಗೆ ಬೇಕಾದ ವಹಿವಾಟುಗಳನ್ನು ಪೂರೈಸಿಕೊಳ್ಳಲು ಸಾಧ್ಯ ಎಂಬ ಹಿಂಜರಿಕೆಗಳು ಬಲವಾಗಿರುತ್ತವೆ. ಆಡಳಿತಾತ್ಮಕ ಅಧಿಕಾರ

ಮತ್ತು ಅದನ್ನು ಬಳಸಿಕೊಳ್ಳಬೇಕಾದ ಜನರ ನಡುವಿನ ಸಂಬಂಧದ ಚಹರೆಗಳು ಹೇಗಿರುತ್ತವೆಯೆಂದರೆ, ದೇವಸ್ಥಾನದ ದೇವರು ಮತ್ತು ದಮನಿತ ಜನದ ನಡುವಿನ ದೈನ್ಯದ ನೆಲೆಯ ಸ್ವರೂಪವನ್ನು ಪಡೆದುಕೊಂಡು ಬಿಟ್ಟಿರುತ್ತವೆ. ದೈವ ಮತ್ತು ಜನರ ನಡುವೆ ಪುರೋಹಿತರು ಮಧ್ಯವರ್ತಿಗಳಾಗಿ ಸಾಮಾಜಿಕ ಭ್ರಷ್ಟತೆಯು ಬೆಳೆದಿರುವಂತೆ ಪ್ರತಿಯೊಂದು ಸರಕಾರಿ ಇಲಾಖೆಯ ಸುತ್ತಮುತ್ತಲೂ ಮಧ್ಯವರ್ತಿಗಳ ದಂಡು ಇರುವಂತಾಗಿದೆ. ಪುರೋಹಿತರ ಮಂತ್ರಗಳಂತೆ ಅರ್ಥವಾಗದಿರುವ ನಮೂನೆಗಳನ್ನು ಹಿಡಿದು ಇಲಾಖೆಗಳ ಹೊರಗಿರುವ 'ಇಲಾಖೆಗಳ ನಡುವಿನ ಈ ಪುರೋಹಿತರ' ಬಳಿಗೆ ಅಂಡಲೆಯುತ್ತಾ ತಮ್ಮ ಕೆಲಸಗಳನ್ನು ಪೂರೈಸಿಕೊಳ್ಳುವ ಅನಿವಾರ್ಯತೆ ಸೃಷ್ಟಿಯಾಗಿಬಿಟ್ಟಿದೆ. ಇದು ಇಲಾಖೆಗಳ ಒಳಗೂ ಮತ್ತು ಹೊರಗೂ ಮಹಾನ್ ಭ್ರಷ್ಟತೆಯನ್ನು ಬೆಳೆಸಲು ಕಾರಣವಾಗಿದೆ. ಇದು ಬಿಡಿಸಿಕೊಳ್ಳಲು ಆಗದ ದೊಡ್ಡ ಜಾಲದಂತಿದೆ. ಶಿಕ್ಷಣದ ಮೂಲಕ ದೊರೆತಿರುವ ತಿಳುವಳಿಕೆಗಳು ಸೆಕ್ಯುಲರ್ ಸೋಗಿನಲ್ಲಿದ್ದು ಆಡಳಿತಾತ್ಮಕವಾದ ನಡೆಗಳು, ನಿಲುವುಗಳು ಮತ್ತು ಅಲ್ಲಿ ಬಳಸುವ ಭಾಷೆಯಿಂದ ದೂರವೇ ಇರುವುದರಿಂದಾಗಿ ಎಂತಹ ವಿದ್ಯಾವಂತರೂ ಕೂಡ ಸರಕಾರಿ ಇಲಾಖೆಯ ಮಧ್ಯವರ್ತಿಯ ಕೆಲಸಗಳಲ್ಲಿ ಪಳಗಿರುವ ಈ 'ಪುರೋಹಿತ'ರನ್ನೇ ನೆಚ್ಚಿ ಸರಕಾರಿ ವ್ಯವಹಾರಗಳನ್ನು ಪೂರೈಸಿಕೊಳ್ಳಬೇಕಾದ ದೊಡ್ಡ ಬಿಕ್ಕಟ್ಟು–ಸಂಕಟಗಳು ಬೆಳೆದುಬಿಟ್ಟಿವೆ.

ಆಡಳಿತ ಭಾಷೆಯನ್ನು ಅಧಿಕಾರದ ವಲಯ ಮತ್ತು ಅದರ ಸುತ್ತ ಬೆಳೆದಿರುವ ಮಧ್ಯವರ್ತಿಗಳ ಸನ್ನಿವೇಶದಿಂದ ಪಲ್ಲಟಗೊಳಿಸಬೇಕಾಗಿದೆ. ಮಹಿಳೆಯೂ ಸೇರಿದಂತೆ ಜನಸಂವೇದನೆಯನ್ನು ಒಳಗೊಂಡ ಜನಭಾಷೆಯನ್ನು ಮರು ರೂಪಿಸಬೇಕಾಗುತ್ತದೆ. ಆ ಮೂಲಕ ಜನಬದುಕುಗಳು ನೇರವಾಗಿ ಆಡಳಿತದೊಂದಿಗೆ ವ್ಯವಹರಿಸಲು, ವಹಿವಾಟು ನಡೆಸಲು ದಾರಿಯಾಗುತ್ತದೆ. ಈ ಅಧ್ಯಯನವು ಅಂತಹ ದಾರಿಗಳನ್ನು ಹುಡುಕಲು, ಆ ದಾರಿಗಳತ್ತ ಬೆಳಕು ಚೆಲ್ಲಲು ಪ್ರಯತ್ನಿಸುತ್ತದೆ. ಈ ನಿಟ್ಟಿನಲ್ಲಿ ಕನ್ನಡದ ಜನಬದುಕುಗಳ ಒಳಗೊಳ್ಳುವಿಕೆಗೆ ಪೂರಕವಾಗಿ ಆಡಳಿತ ಭಾಷೆಯಾಗಿ ಕನ್ನಡ ರೂಪುಗೊಂಡ ಚಾರಿತ್ರಿಕ ಸಂದರ್ಭವನ್ನೂ ಬಿಡಿಸಿ ಅರ್ಥೈಸಿಕೊಳ್ಳಬೇಕಾಗುತ್ತದೆ.

ಈಗಿನ ಆಡಳಿತ ಭಾಷೆಯಾಗಿ ಬಳಕೆಯಾಗುತ್ತಿರುವ ಕನ್ನಡವು ಬ್ರಿಟಿಷ್ ಆಡಳಿತದ ನಡೆಯನ್ನು ಅನುಸರಿಸಿ ಬೆಳೆದಿರುವಂತಹುದು. ವಸಾಹತುಶಾಹಿ ಆಧುನಿಕತೆಯ ಸಂದರ್ಭದಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ಇಲ್ಲಿ ಸ್ಥಿರಗೊಳಿಸಲು ಸೃಷ್ಟಿಯಾದ ದಾರಿಯಲ್ಲಿ ಇರುವಂತಹುದು. ಆ ಮೂಲಕ ಸ್ಥಳೀಯತೆಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡು

ಸ್ಥಳಿಯ ಜನ ಬದುಕುಗಳನ್ನು ಗುಲಾಮರನ್ನಾಗಿಸಿಕೊಳ್ಳುವ ದಾರಿಯಲ್ಲಿ ಮೈಪಡೆದಿರುವಂತಹುದು. ಇಂತದೇ ದಾರಿಯನ್ನು ಹಿಡಿದು ಮುಂದುವರೆದಿರುವ ಭಾರತೀಯ ಸನ್ನಿವೇಶದ ಆಡಳಿತಗಳೂ ಕೂಡ ಈ ಗುಲಾಮತನಗಳು ಮತ್ತಷ್ಟು ಗಟ್ಟಿಯಾಗುವಂತೆಯೇ ನಡೆದುಕೊಂಡಿವೆ. ಆದ್ದರಿಂದಾಗಿ ಇಂಥ ಅಧಿಕಾರ ಮತ್ತು ಆಡಳಿತದ ನಡೆಗಳು ಜನಬದುಕುಗಳಿಗೆ ಅಪರಿಚಿತವಾಗಿಯೇ ಇವೆ. ಹೀಗಾಗಿ ಇಂತಹ ಆಡಳಿತ ಸನ್ನಿವೇಶದ ಪದಬಳಕೆ ಅನಿವಾರ್ಯವಾಗಿ ಇಂಗ್ಲಿಷ್ ನಡೆಗಳನ್ನು ಅವಲಂಬಿಸಿದೆ. ಕರ್ನಾಟಕದಲ್ಲಿ ಕನ್ನಡವು ಆಡಳಿತ ಭಾಷೆಯಾಗಿರಬೇಕು ಎನ್ನುವಾಗ ಸ್ವತಂತ್ರ ಭಾರತದ ಏಕೀಕರಣಗೊಂಡ ಕರ್ನಾಟಕ ಆಡಳಿತದ ಆಧಿಕಾರಸ್ಥ ನೆಲೆಗಳಲ್ಲಿ ಸಂಸ್ಕೃತ ಪರಂಪರೆಯ ಮೇಲುಜಾತಿಗಳವರೇ ಇದ್ದರಾದ್ದರಿಂದ ಇಂಗ್ಲಿಶಿಗೆ ಪರ್ಯಾಯವಾದ ಜಾಗಗಳಲ್ಲಿ ಕನ್ನಡದ ನೆಪದಲ್ಲಿ ಸಂಸ್ಕೃತ ಬದುಕುವಂತಾಗಿದೆ. ಪಾರಸಿ, ಉರ್ದುವಿನಂತಹ ಪದಗಳು ಇರುವುವಾದರೂ ಅವು ಕನ್ನಡದಿಂದ ಹೊರಗೆ ಎನ್ನುವಂತಹ ಬಳಕೆಯಲ್ಲಿಲ್ಲ ಮತ್ತು ಕನ್ನಡದ ಬಳಕೆಯ ಮೇಲೆ ಅಧಿಕಾರವನ್ನು ಹಿಡಿದಿಲ್ಲ. ಬದಲಾಗಿ ಕನ್ನಡದ ಬೆಳವಣಿಗೆಯನ್ನು ಬೆಳೆಸಿವೆ. ಆದರೆ ಕನ್ನಡ ಬಳಕೆಯ ಆಡಳಿತದ ಸನ್ನಿವೇಶದಲ್ಲಿ ಇಂಗ್ಲಿಶ್ ಮತ್ತು ಸಂಸ್ಕೃತ ಭಾಷೆಯ ನಡೆಗಳು ಕನ್ನಡವನ್ನು ಅಧೀನದಲ್ಲಿ ನಡೆಸಿಕೊಳ್ಳುತ್ತಿರುವುದು ನಿಚ್ಚಳವಾಗಿ ಕಾಣುತ್ತದೆ. ಇಂಗ್ಲಿಷನ್ನು ಹೊರಗಿರಿಸಬೇಕು ಎನ್ನುವ ಪ್ರಯತ್ನವನ್ನು ತೋರಿಸಿಕೊಳ್ಳುವಾಗಲೆಲ್ಲಾ ಆ ಜಾಗದಲ್ಲಿ ಸಂಸ್ಕೃತದ ಪದಗಳನ್ನೆ ಹೆಚ್ಚು ಹೆಚ್ಚಾಗಿ ಬಳಕೆಗೆ ತಂದಿರುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಇದು ಇಂಗ್ಲಿಶಿನ ಮೂಲಕ ಸಂಸ್ಕೃತವನ್ನು, ಸಂಸ್ಕೃತದ ದಾರಿಯಲ್ಲಿ ಇಂಗ್ಲಿಶನ್ನು ಬದುಕಿಸುವ, ಉಳಿಸಿಕೊಳ್ಳುವ ದಾರಿಯೇ? ಎಂದು ಕೇಳಿಕೊಳ್ಳಲೇಬೇಕಾದ ಸವಾಲು ಎದುರಾಗಿದೆ. ಯಾಕೆಂದರೆ, ಕನ್ನಡ ಆಡಳಿತದ ಸನ್ನಿವೇಶದಲ್ಲಿ ಸಂಸ್ಕೃತ ಪದಬಳಕೆಯು ಕನ್ನಡ ಜನಬದುಕುಗಳಿಗೆ ತಿಳಿಯದಾಗಿ ಮತ್ತೆ ಇಂಗ್ಲಿಶನ್ನೇ ಆಶ್ರಯಿಸುವಂತೆ ಮಾಡುತ್ತಿದೆ. ಇದು ಮಹಿಳೆಯೂ ಸೇರಿದಂತೆ ದಮನಿತ ಸಮುದಾಯಗಳಿಗೆ ಆಡಳಿತದ ಅನುಕೂಲಗಳನ್ನು ನೇರವಾಗಿ ಪಡೆದುಕೊಳ್ಳಲಾಗದಂತೆ ತಡೆಯೊಡ್ಡಾಗಿದೆ.

ಸ್ವಾತಂತ್ರ್ಯೋತ್ತರ ಭಾರತವು ಕಾಲಾನುಕಾಲದ ಸಾಮಾಜಿಕ ಏಣಿ–ಶ್ರೇಣಿಗಳನ್ನು ಇಲ್ಲವಾಗಿಸುವ ಕಾರಣಕ್ಕಾಗಿಯೇ ಸಂವಿಧಾನಾತ್ಮಕವಾಗಿ ಪಾಲ್ಗೊಳ್ಳುವಿಕೆಯ ರಾಜಕಾರಣ ಮತ್ತು ಆಡಳಿತ ಪದ್ಧತಿಗಳನ್ನು ಜಾರಿಗೆ ತಂದಿದೆ. ಇದರ ಗುರಿಯು ಸಾಮಾಜಿಕವಾಗಿ ಅಧಿಕಾರಸ್ಥ ಜಾತಿ, ಆಸ್ತಿವಂತರು ಮತ್ತು ಗಂಡು ಅಹಂಕಾರದ ದಮನಿತ ಆಚರಣೆಗೆ ಬಲಿಯಾಗಿರುವ ಮಹಿಳೆ ಮತ್ತು ದುಡಿಮೆಯ ಜಾತಿ ಗುಂಪುಗಳವರನ್ನು ದಬ್ಬಾಳಿಕೆಯಿಂದ

ಬಿಡಿಸುವುದೆ ಆಗಿದೆ. ಹೀಗೆ ಮೇಲುತನದ ಆಹಂಕಾರಗಳಿಂದ ಉಂಟಾಗಿರುವ ದಮನಿತ ಆಚರಣೆಗಳಿಂದ ಬಿಡಿಸಿಕೊಂಡು ದೇಶದ ಎಲ್ಲಾ ಜನರು ಪಾಲ್ಗೊಳ್ಳಲು ಆಗುವ ನಡೆಗಳನ್ನೇ **'ಜನರಾಳ್ವಿಕೆ-ಪ್ರಜಾಪ್ರಭುತ್ವ'** ಎಂದು ಕರೆದದ್ದು. ಆದರೆ, ಮಹಿಳೆ ಮತ್ತು ದುಡಿಮೆಯ ಜಾತಿಸಮುದಾಯಗಳು ನೇರವಾಗಿ ಮತ್ತು ನ್ಯಾಯಬದ್ಧವಾಗಿ ಪಾಲ್ಗೊಳ್ಳುವ ಸಂದರ್ಭ ಒದಗಿ ಬಂದಾಗ, ಇಂತಹ ಪಾಲ್ಗೊಳ್ಳುವಿಕೆಯಿಂದ ದೂರವಿರಿಸಲು ಬೇಕಾದ ಉಪಾಯಗಳನ್ನೂ ಹೆಣೆಯಲಾಗಿದೆ. ಅಂತಹ ಉಪಾಯಗಳಲ್ಲಿ ಆಡಳಿತಕ್ಕೆ ಬಳಕೆಯಾಗುವ ಭಾಷೆಯೂ ಒಂದು. ಪಾಲ್ಗೊಳ್ಳುವಿಕೆಯ ತತ್ವಗಳು ಸಂವಿಧಾನದಲ್ಲಿ ಇರುವುವಾದರೂ ಅವನ್ನು ಜಾರಿಗೆ ತರುವ ದಾರಿಯನ್ನು ಜನಮುಖಿ-ಜನಪರ ಅಲ್ಲದಿರುವಂತೆ ಹೆಣೆಯಲಾಗಿದೆ. ಇಂತಿಷ್ಟು ವರುಶಗಳವರೆಗೆ ಆಡಳಿತದಲ್ಲಿ ಇಂಗ್ಲಿಶನ್ನೇ ಬಳಸುವುದು, ಮುಂದಿನ ದಿನಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ಆಡಳಿತವನ್ನು ನಡೆಸಲು ತಯಾರಾಗುವುದು (ಇದು ಆಗಲೆ ಇಲ್ಲ, ಇವತ್ತಿಗೂ) ಉತ್ತರ ನಾಡಿನವರ ಹಿಂದಿಯನ್ನು ದೇಶಭಾಷೆಯನ್ನಾಗಿ ಬಳಸುವುದು ಮತ್ತು ಸಂಸ್ಕೃತವನ್ನು ಭಾರತೀಯ ಪರಂಪರೆಯ ಭಾಷೆಯನ್ನಾಗಿ ಉಳಿಸುವುದು ಮೊದಲಾದ ನಡೆಗಳು ಜನಬದುಕುಗಳ ಭಾಷೆಯ ಬಳಕೆಗಳನ್ನು ತಡೆದಿರುವುದು ನಿಚ್ಚಳವಾಗಿ ಕಾಣುತ್ತಿದೆ. ಈ ಉಪಾಯಗಳೆಲ್ಲವೂ ಮೇಲುಜಾತಿಗಳ ಅಧಿಕಾರವನ್ನು, ಹಿಂದಿನ ಪುರುಷಾಧಿಕಾರದ ಚಹರೆಗಳನ್ನು ಹಾಗೆಯೇ ಉಳಿಸಿಕೊಂಡವಲ್ಲದೆ, ಹೊಸ ಪರಿಸ್ಥಿತಿಗಳನುಗುಣವಾಗಿ ಅದು ಉಳಿಯಲು ಬೇಕಾದಂತೆಯೇ ಬದಲಾವಣೆಯನ್ನು ಮಾಡಿಕೊಂಡಿವೆ (ಇದು ಕೇವಲ ಆಡಳಿತ ವಲಯಕ್ಕೆ ಮಾತ್ರವೇ ಸೀಮಿತ ಎಂದೇನೂ ಅಲ್ಲ). ಆದ್ದರಿಂದಾಗಿ, ಕರ್ನಾಟಕದ ಬಹುಸಂಖ್ಯಾತ ಸಮುದಾಯವಾದ ಹಲವು ಬಗೆಯ ದುಡಿಮೆಯ ಗುಂಪುಗಳು, ರೈತಾಪಿಜನ, ಮಹಿಳೆಯರ ಬದುಕನ್ನು ನಿಯಂತ್ರಿಸುವ ಪ್ರಭುತ್ವದ ಹೆಸರಿನ ನಡೆಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ'ಕನ್ನಡ ಆಡಳಿತ ಭಾಷೆ'ಯ ಕುರಿತಾದ ಈ ಓದು-ಅಧ್ಯಯನವು ಜನಪರ ಪ್ರಭುತ್ವವನ್ನು ಆಗುಮಾಡುವ ತಾತ್ವಿಕತೆಯ ಜನಮುಖಿ ಹೆಜ್ಜೆಗಳನ್ನು ಕಂಡುಕೊಳ್ಳುವುದೂ ಆಗುತ್ತದೆ. ಯಾಕೆಂದರೆ, ಅಧಿಕಾರಸ್ಥ ನೆಲೆಗಳನ್ನು ಎಟುಕಿಸಿಕೊಳ್ಳಲೂ ಆಗದೆ ದಮನಿತರಾಗಿಯೇ ಉಳಿಯಬೇಕಾಗಿರುವ ಈ ಜನರೇ ಕನ್ನಡದ ಜೀವದಾತರು. ಇವರಲ್ಲೇ ಕನ್ನಡದ ಮುನ್ನೋಟವನ್ನು ಕಂಡುಕೊಳ್ಳುವ ದಾರಿಯಿರುವುದು.

ಚಾರಿತ್ರಿಕವಾಗಿ ಭಾಷಾವಾರು ಪ್ರಾಂತಗಳ ವಿಂಗಡಣೆಯ ಆನಂತರದಲ್ಲಿ ರಾಜ್ಯ ರಚನೆಯಾಗಿದೆ. ಆ ಸಂದರ್ಭದಲ್ಲಿ ಆಡಳಿತದ ನೆಲೆಯಲ್ಲಿ ಕನ್ನಡವನ್ನು ಪ್ರಮಾಣ ಭಾಷೆಯನ್ನಾಗಿ ಮಾಡಲಾಗದೆ. ಇಂತಹ ನಿಲುವುಗಳನ್ನು ಎಂ.ಎಸ್.ಪುಟ್ಟಣ್ಣನವರು ಬಹು

ಹಿಂದೆಯೇ ಸೂಕ್ತವಲ್ಲ ಎಂದಿದ್ದರು. ಅಂದರೆ, ಹೀಗೆ ಕನ್ನಡವನ್ನು ಪ್ರಮಾಣ ಭಾಷೆಯನ್ನಾಗಿ ಮಾಡುವುದು ಎಂದರೇನು? ಜನರು ಬಳಸುವ ಬಹುಕನ್ನಡಂಗಳ ನೆಲೆಗಳನ್ನು ಜನಬದುಕಿನ ವ್ಯವಹಾರ, ವಹಿವಾಟುಗಳಿಗೆ ಸುಲಭವಾಗಿ ದಕ್ಕದಂತೆ 'ಏಕೀಕೃತಕನ್ನಡ'[7]ದ ನೆಲೆಗೆ ತಂದ ಈ ಪ್ರಮಾಣೀಕರಣ ಎಂತಹುದು? ಆ ಸಂದರ್ಭದಲ್ಲಿ ಆಡಳಿತ ಭಾಷೆಯಾಗಿ ಕನ್ನಡಕ್ಕೆ ಇದ್ದ ಸಾಂಸ್ಕೃತಿಕ ನೆಲೆಯ ಸವಾಲುಗಳು ಯಾವುವು? ಬಹು ರೂಪಗಳು ಏಕರೂಪದ ಸ್ವರೂಪವನ್ನು ಪಡೆಯುವಾಗ ಜನಬದುಕಿನ ಈ ನೆಲೆಯ ಪ್ರಶ್ನೆಗಳು ಮುಖ್ಯವಾಗಿ ಪರಿಗಣಿತವಾದವೇ? ಪರಿಗಣಿತವಾಗಿದ್ದಿದ್ದರೆ ಆರು ದಶಕಗಳ ನಂತರವೂ ಆಡಳಿತವು ಜನರ ಕೈಗೆ ಸಿಗದಂತೆ ಯಾಕೆ ಭ್ರಷ್ಟಗೊಂಡಿದೆ? ಎಂದು ಕೇಳಿಕೊಳ್ಳಬೇಕಾಗುತ್ತದೆ. ಇದಕ್ಕೆ ಎದುರಾದ ಪ್ರತಿರೋಧದ ನೆಲೆಗಳನ್ನು ಗುರುತಿಸಿಕೊಳ್ಳಬೇಕಾಗುತ್ತದೆ.

ಆಡಳಿತ ಭಾಷೆಯನ್ನು ಹೇಗೆ ಬಳಸಬೇಕು ಎಂಬುದನ್ನು ರೂಪಿಸಿರುವುದು ಪುರುಷರೇ ಆಗಿದ್ದುದು ಒಂದು ತೊಡಕು. ಅವರೇ ಅಂದೂ ಇಂದೂ ಆಳುವ ವರ್ಗವಾಗಿ ಅಧಿಕಾರದಲ್ಲಿ ಕೂತಿರುವುದು ಇನ್ನೊಂದು ತೊಡಕು. ಈ ಆಳುವ ಅಧಿಕಾರವನ್ನು ಅವತ್ತಿನಿಂದಲೂ ನಿಯಂತ್ರಿಸುತ್ತಾ ಬರುತ್ತಿರುವುದು ಮೇಲ್ಜಾತಿಯ ಅಹಂಗಳು ಎನ್ನುವುದು ಮಗದೊಂದು ತೊಡಕು. ಆದ್ದರಿಂದ ಇಲ್ಲಿ ಎಲ್ಲರ ಹಿತಾಸಕ್ತಿ ಎನ್ನುವುದು ಕೇವಲ ನೆಪವಾಗಿದೆ. ಪ್ರಜಾಪ್ರಭುತ್ವದ ನಡೆಗಳನ್ನು ಕೆಲವರ ಆಸಕ್ತಿಗಳನ್ನೇ ಕಾಪಾಡಿಕೊಂಡು ಬರಲು ಬಳಸಲಾಗಿದೆ. ಈ ಸಂಗತಿಗಳನ್ನು 'ಆಡಳಿತ ಭಾಷೆ'ಯ ಚೌಕಟ್ಟಿನಲ್ಲಿ ಅರ್ಥೈಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನ ಕೈಗೊಳ್ಳುತ್ತದೆ.

ಇಲ್ಲಿ ಮತ್ತೊಂದು ಪ್ರಶ್ನೆಯೂ ಇದೆ. ವಸಾಹತುಶಾಹಿ ಆಧುನಿಕತೆಯು ಕನ್ನಡವನ್ನೂ ಆಧುನೀಕರಿಸಿದೆ ದಿಟ. ಆದರೆ, ಈ ಆಧುನಿಕತೆಯಲ್ಲಿ ಹುಟ್ಟಿಗೊಂಡ ದೇಶಿ–ನೌಕರಶಾಹಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಆಡಳಿತವನ್ನು ಹೇಗೆ ಬಳಸಿಕೊಂಡಿತು? ಈ ನೌಕರಶಾಹಿಯಲ್ಲಿ ಯಾವಯಾವ ಜಾತಿಗಳು ಪ್ರವೇಶವನ್ನು ಪಡೆದಿದ್ದವು? ಅವು ರಾಜ್ಯರಚನೆಯ ಆನಂತರದಲ್ಲಿ ಪಡೆದುಕೊಂಡ ಸ್ಥಳೀಯವಾದ ಹಿಡಿತಗಳು ಎಂತವು ಮತ್ತು ಹೇಗೆ? ಇದರಲ್ಲಿ ಇದ್ದ ಕನ್ನಡತನದ ಹಿತಾಸಕ್ತಿಗಳು ಯಾವುವು? ಸ್ವಯಂ ಆಡಳಿತದ ಭಾಷೆಯ ಹಕ್ಕು, ಪ್ರಜಾತಂತ್ರ ವ್ಯವಸ್ಥೆಯನ್ನು ಆ ಮೂಲಕ ರೂಪಿಸಿಕೊಳ್ಳುವಿಕೆ, ಈ

---

[7]ವಸಾಹತುಶಾಹಿ ಜಾರಿಯಾಗುವಾಗ ಸ್ಥಳೀಯ ಭಾಷೆಗಳನ್ನು ಜನತೆಯಿಂದ ತಪ್ಪಿಸಿ, ಆ ಭಾಷೆಯನ್ನು ವಸಾಹುಶಾಹಿ ಆಳ್ವಿಕೆಗೆ ಪೂರಕವಾಗಿ ಪ್ರಮಾಣಬದ್ಧಗೊಳಿಸಲಾಗುತ್ತದೆ. ಈ ಸಂಗತಿಯನ್ನು ಬರ್ನಾಡ್ ಎಸ್ ಕ್ಲೂನ್‌ರವರು 'ಅಧಿಕಾರದ ಭಾಷೆ ಮತ್ತು ಭಾಷೆಯ ಅಧಿಕಾರ ಹೇಗೆ ಜನತೆಯ ಮೇಲೆ ನಿಯಂತ್ರಣವನ್ನು ಸಾಧಿಸುತ್ತದೆ' ಎನ್ನುವುದನ್ನು ವಿವರಿಸುತ್ತಾರೆ. ಕನ್ನಡದಲ್ಲಿ ಕವಿರಾಜಮಾರ್ಗ ಕೃತಿಯೂ ಸಹ ಇಂತದ್ದೇ ಸಂದರ್ಭವನ್ನು ಎದುರಿಸಿದ ಬಗೆಯನ್ನು ಸಾವು ಕಾಣಬಹುದು. ವಿವರಗಳಿಗಾಗಿ ನೋಡಿ, ರಹಮತ್ ತರೀಕರೆ (ಸಂ), 2006, ಕವಿರಾಜಮಾರ್ಗ ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹೋರಾಟಗಳು ಎಂತಹ ಕನ್ನಡ ನುಡಿಯ ಬಳಕೆಗೆ ಸಿದ್ಧತೆಯನ್ನು ಮಾಡಿಕೊಂಡವು ಮುಂತಾದ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ನಡೆದಿರುವ ಅಧ್ಯಯನ ಇದು.

ಈ ಅಧ್ಯಯನವು ಆಡಳಿತ ಕನ್ನಡದಲ್ಲಿ ಬಳಸುವ ನುಡಿಯ ರೂಪದ ವರಸೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಪ್ರಯತ್ನಿಸಿದೆ. ಅಧಿಕಾರವನ್ನು ಮುಖ್ಯ ಗುರಿಯನ್ನಾಗಿಸಿಕೊಂಡು ಆಳುವ ಗುಂಪುಗಳು ಸೃಷ್ಟಿಸಿಕೊಂಡಿರುವ ನೌಕರಶಾಹಿಯು ಜನಬದುಕಿನ ನುಡಿಯನ್ನು ಶಕ್ತಿಹೀನಗೊಳಿಸಿದ ಬಗೆಯನ್ನು ಬಿಡಿಸಿ ವಿವರಿಸಿದೆ. ಆಡಳಿತ ಭಾಷೆಯನ್ನು ಜನಬದುಕಿಗೆ ಹತ್ತಿರವಾಗಿಸುವ–ಜನಬದುಕಿನದೇ ಭಾಷೆಯಾಗಿಸುವ ನಿಟ್ಟಿನಲ್ಲಿ ಹೇಗೆ ಕ್ರಮಗಳನ್ನು ಕೈಗೊಳ್ಳಬಹುದು ಎನ್ನುವುದನ್ನು ಶೋಧಿಸಲು ಪ್ರಯತ್ನಿಸಿದೆ. ಭಾಷೆ ಅಧಿಕಾರವನ್ನು ನಿಭಾಯಿಸುವ ಮೇಲುಜಾತಿ ಮತ್ತು ಗಂಡಸಿನ ಅಹಂನ ರೂಪವೇ ಆಗಿರುವಾಗ, ಅದಕ್ಕೆ ಪ್ರತಿರೋಧದ ನೆಲೆಗಟ್ಟಾಗಿ ಭವಿಷ್ಯದ ಸಮಾಜವನ್ನು ಬದಲಿ ನೆಲೆಗಳಲ್ಲಿ ರೂಪಿಸಲು ಸಾಧ್ಯವೇ ಎಂಬ ದಾರಿಯನ್ನುಕಾಣಲು ಶ್ರಮಿಸಿದೆ.

ಆಡಳಿತ ಭಾಷೆಯನ್ನು ಇದುವರೆಗೆ ಯಾರೂ ಸಹ ಹೀಗೇ ಎಂದು ವ್ಯಾಖ್ಯಾನಿಸಿಲ್ಲ. ಆದ್ದರಿಂದ ಆಡಳಿತ ಭಾಷೆಗೆ ಮತ್ತು ಬಳಕೆಗೆ ಒಂದು ನಿರ್ದಿಷ್ಟತೆ ಇಲ್ಲದಿರುವುದು ದೊಡ್ಡದಾಗಿ ಗೋಚರಿಸುತ್ತದೆ. ಆದ್ದರಿಂದ 'ಕನ್ನಡದಲ್ಲಿ ಆಡಳಿತ' ಎನ್ನುವ ಚೌಕಟ್ಟಿನಲ್ಲಿ ಕನ್ನಡ ಸಮಾಜವನ್ನು ನೋಡುವಾಗ ಮೂರು ನಡೆಗಳು ಎದುರಾಗುತ್ತವೆ;

1. ಸರ್ಕಾರದಲ್ಲಿ ಹೊರಡಿಸಿರುವ ಅಧಿನಿಯಮಗಳು/ನಿಯಮಗಳ ವಿವೇಚನೆ
2. ಆಡಳಿತಾಂಗದ ಒಳಗೇ ನಡೆಯುವ ಸಂವಹನ ಪ್ರಕ್ರಿಯೆಗಳು ಮತ್ತು ಅದರಿಂದ ಉದಯಿಸುವ ತಿಳಿವುಗಳು
3. ಜನರು ಮತ್ತು ಆಡಳಿತದ ನಡುವಿನ ಸಂಬಂಧಗಳ ಸ್ವರೂಪ

ಈ ನಡೆಗಳು ಏನು? ಹೇಗೆ? ಮತ್ತು ಯಾಕೆ? ಎನ್ನುವುದನ್ನು ಬಿಡಿಸಿ ನೋಡುತ್ತಾ ಆಡಳಿತ ಭಾಷೆಯ ಸ್ವರೂಪ, ಅದರ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಪ್ರಸ್ತುತ ಅಧ್ಯಯನವು ನಡೆದಿದೆ. ಈ ಸಂದರ್ಭದಲ್ಲಿ ಪ್ರಭುತ್ವ ಮತ್ತು ಜನತೆಯ ನಂಟನ್ನು ಆಡಳಿತ ಭಾಷೆಯ ಮೂಲಕ ಯಾವ ರೀತಿಯಲ್ಲಿ ನಿರ್ಧರಿಸಲಾಗಿದೆ? ಆಡಳಿತ ಭಾಷೆಯ ಜಾರಿ ಮತ್ತು ಬಳಕೆಯಲ್ಲಿ ನಿರ್ಧಾರಾತ್ಮಕ ಪಾತ್ರ ವಹಿಸಿರುವ ಸಾಮಾಜಿಕ ಸಂಗತಿಗಳೇನು? ಈ ಪಾತ್ರವನ್ನು ವಹಿಸಿರುವ ಸಾಮಾಜಿಕ ಗುಂಪು ಯಾವುದು? ಮತ್ತು ಯಾಕೆ?

ಈ ಪ್ರಶ್ನೆಗಳನ್ನು ಆಡಳಿತದ ಚಾರಿತ್ರಿಕ ಸಂಗತಿಗಳಾದ; ವಸಾಹತುಪೂರ್ವದ ಸಂದರ್ಭದಲ್ಲಿ ಕನ್ನಡ ಆಡಳಿತ ಸ್ವರೂಪ, ವಸಾಹತುಶಾಹಿ ಸಂದರ್ಭದ ಆಡಳಿತದ ಸ್ವರೂಪದ ನಡೆಗಳಲ್ಲಿ ಕೇಳಿಕೊಳ್ಳಲಾಗಿದೆ. ವಸಾಹತೋತ್ತರ ಕಾಲಘಟ್ಟದ ಆಡಳಿತದಲ್ಲಿ

ಕಾಣುತ್ತಿರುವ ಚಹರೆಗಳನ್ನು ಹಿಡಿದು ಇದರ ಬೆಳವಣಿಗೆಯನ್ನು ಅರಿಯಲು ಪ್ರಯತ್ನಿಸಲಾಗಿದೆ. ಆ ಮೂಲಕ ಆಡಳಿತದ ನಾಳಿನ ನಡೆಗಳು ಹೇಗಿರಬಹುದು, ಹೇಗಿರಬೇಕುಎನ್ನುವ ಕಡೆಗೆ ಪ್ರಸ್ತುತ ಅಧ್ಯಯನ ನಡೆದಿದೆ.

3. ಸಂಶೋಧನೆಯ ವೈಧಾನಿಕತೆ ಮತ್ತು ಆಕರಗಳು:

ಪ್ರಸ್ತುತ ಅಧ್ಯಯನ ಮುಖ್ಯವಾಗಿ ಆಡಳಿತ ಭಾಷೆಯ ಅಧ್ಯಯನದಂತೆ ತೋರಿಕೆಗೆ ಕಂಡುಬಂದರೂ ಅದನ್ನು ವಿವರಿಸಿಕೊಳ್ಳುವ ಮತ್ತು ವಿಶ್ಲೇಷಿಸುವ ವಿಧಾನವು ಕನ್ನಡದ ತಿಳಿವನ್ನು ಆಧಾರವಾಗಿರಿಸಿಕೊಂಡಿದೆ. ಅದನ್ನು ಮತ್ತಷ್ಟು ನಿರ್ದಿಷ್ಟಗೊಳಿಸಲು ಕುಲಮೂಲೀಯ (ಎತ್ನೋಗ್ರಾಫಿಕ್) ಭಾಷಾ ವಿಜ್ಞಾನದ ಆಯಾಮಗಳನ್ನು ಬಳಸಿಕೊಳ್ಳಲಾಗುವುದು. ಅಂದರೆ, ಕನ್ನಡದ ಸಂದರ್ಭದಲ್ಲಿ ಯಾವುದೇ ಅಧ್ಯಯನ ಜಾತಿ ಸಂಬಂಧಿ ಮತ್ತು ಲಿಂಗ ಸಂಬಂಧಿ ಆಯಾಮಗಳು ಮುಂದಿಡುತ್ತಿರುವ ಭಾಷಿಕ ತಿಳಿವುಗಳನ್ನು ಆಧರಿಸಿ, ಆಡಳಿತ ಭಾಷೆಯಲ್ಲಿ ನಡೆಯುತ್ತಿರುವ ತಾರತಮ್ಯದ ನೆಲೆಗಳನ್ನು ವಿಶ್ಲೇಷಿಸಲಾಗುವುದು. ಹಾಗೆ ಮುಂದುವರೆಯುವಾಗ ಆಡಳಿತಾತ್ಮಕ ದಾಖಲೆಗಳು, ಕಾನೂನು–ತೀರ್ಪುಗಳು, ಭಾಷಿಕ ಯೋಜನೆಗಳು ಇವುಗಳನ್ನು ಗಮನಿಸುತ್ತಲೇ, ಇವುಗಳನ್ನು ಆಧರಿಸಿ ಬಂದಿರುವ ಹೊತ್ತಗೆಗಳು ಮುಂದಿಡುವ ಚರ್ಚೆಗಳನ್ನು ಆಧರಿಸಿ ವೈಧಾನಿಕತೆಯೊಂದನ್ನು ಶೋಧಿಸಲಾಗವುದು. ಇದಕ್ಕೆ ಪೂರಕವಾಗಿ ಪರಿಕಲ್ಪಿತವಾಗಿರುವ 'Public space' ಅಥವಾ ಸಾರ್ವಜನಿಕ ಜಾಗ ಎಂಬುದನ್ನು ತಾತ್ವಿಕ ವಿವೇಚನೆಗೆ ಒಳಪಡಿಸುತ್ತಾ ಅದು ಹೇಗೆ ಮಹಿಳೆಯನ್ನು ಮತ್ತು ತಳ ಜಾತಿ ಸಮುದಾಯಗಳ ವ್ಯಕ್ತಿಗಳನ್ನು ತನ್ನ ಭಾಷಿಕ ವಲಯದಿಂದ ದೂರಿವಿರಿಸುತ್ತಿದೆ ಎಂಬುದನ್ನು ಗುರುತಿಸಿಕೊಳ್ಳಲಾಗುವುದು. ಇಲ್ಲೇ ಆಡಳಿತ ಭಾಷೆ ಎನ್ನುವುದೂ ಸಹ ಸಮಸ್ಯೀಕರಣಕ್ಕೆ ಒಳಗಾಗುವುದು. ಈ ನಡುವೆ ನಡೆಯುವ ಏಣಿ – ಶ್ರೇಣಿ ಆಟದಲ್ಲಿ ಲಿಂಗ ಸಮಾನತೆ ಎನ್ನುವುದು ಮಹಿಳೆಯರನ್ನು ಮತ್ತೆ ಅಪಮಾನಕ್ಕೆ ಒಳಪಡಿಸುವ ನೆಲೆಯಾಗಿಬಿಡುವಾಗ, ಇದಕ್ಕೆ ಗಂಡಸು ಕಾರಣ ಎಂದು ವಿವರಿಸಲು ಸಾಧ್ಯವಾಗದೆ, ಅದೇ ಸೆಕ್ಯುಲರ್ ಆದ ಪುರುಷ ಭಾಷೆಯನ್ನೇ ಬಳಸುವ ಒತ್ತಡಕ್ಕೆ ಮಹಿಳೆ/ತಳಸಮುದಾಯಗಳು ಸಿಲುಕುತ್ತವೆ. ಹೀಗಿರುವಾಗ, **ಒಳಗೊಳ್ಳುವ ಸಮಾನ ಅವಕಾಶ** ಎಂಬುದನ್ನು ಮರೆತು ಇವರು ಆಂತರಿಕ ಮೌನಕ್ಕೆ ಶರಣಾಗುತ್ತಾರೆ. ಅಂದರೆ, ಜನಸಮುದಾಯಗಳು ತಮ್ಮೊಳಗಿನ ತಲ್ಲಣಗಳನ್ನು, ನಿರೀಕ್ಷೆಗಳನ್ನು ಮಂಡಿಸಬೇಕು ಎನ್ನುವಾಗ ನೂರು ಬಾರಿ, ಸಾವಿರ ಬಾರಿ ಯೋಚಿಸುವ ಸಂದರ್ಭ ಎದುರಾಗುತ್ತದೆ. ಅವರ ಈ ನಡಾವಳಿಯು ಅವರೊಳಗಿಂದಲೇ ಸ್ವತಂತ್ರವಾಗಿ ಸೃಷ್ಟಿಯಾದದ್ದಲ್ಲ. ಬದಲಾಗಿ ಆಡಳಿತ ವಲಯದಲ್ಲಿ ಬಳಸಲಾಗುವ ಕನ್ನಡ ಭಾಷೆಯಿಂದಲೇ

ಎನ್ನುವುದನ್ನು ಗುರುತಿಸಿಕೊಳ್ಳಬೇಕಾದರೆ ಅದಕ್ಕೆ ಪೂರಕವಾದ ಸೈದ್ಧಾಂತಿಕ ನೆಲೆಗಟ್ಟನ್ನು ಶೋಧಿಸಬೇಕಾಗುತ್ತದೆ.

ಈ ಅಧ್ಯಯನಕ್ಕೆ ತೊಡಗಿದಾಗ ಪರಿಕಲ್ಪನಾತ್ಮಕ ಮತ್ತು ವಿವರಣಾತ್ಮಕವಾಗಿ ಕೆಲವು ಚಾರಿತ್ರಕ ಸಂಗತಿಗಳನ್ನು ಸುಲಭವಾಗಿ ಆಯ್ದುಕೊಳ್ಳುವ ಭಾಷಿಕ ಆವರಣಗಳಿಗೆ ಮತ್ತೆ ಮತ್ತೆ ಸಿಲುಕುತ್ತೇವೆ. ಅಂತಹ ಪರಿಕಲ್ಪನಾತ್ಮಕ ನೆಲೆಗಳನ್ನು ಪ್ರಸ್ತುತ ಅಧ್ಯಯನವು ಈ ಕೆಳಗಿನಂತೆ ಗುರುತಿಸಿಕೊಳ್ಳುತ್ತದೆ:

1. ಆಧುನಿಕತೆ ಮತ್ತು ಜನತಂತ್ರ ಮೌಲ್ಯಗಳು:

ಈ ತಾತ್ವಿಕ ವಿಚಾರಗಳಿಗೆ ಒಂದು ಚಾರಿತ್ರಿಕ ನೆಲೆ ಇದೆ. ಇದನ್ನು ಇಲಿ ವಿವರಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಆಧುನಿಕತೆಯ ಪರಿಕಲ್ಪನೆ ಫ್ರಾನ್ಸ್‌ನ ಚಿಂತಕರೊಂದಿಗೆ ತಳಕುಹಾಕಿಕೊಳ್ಳುತ್ತದೆ. ರಿನೆ ಡೆಕಾರ್ಟ್‌ನಿಂದ ಹಿಡಿದು ರೂಸ್ಸೋನ ತನಕ ಈ ವೈಚಾರಿಕತೆ ಹರಡಿಕೊಳ್ಳುತ್ತದೆ. ಇಲ್ಲಿ ತತ್ವಜ್ಞಾನಿಗಳು ಮತ್ತು ಶ್ರೀಸಾಮಾನ್ಯರು ಒಂದಾಗಿ ತಮ್ಮ ಮೇಲೆ ಇದ್ದ ನಿರ್ಭಂದಗಳನ್ನು ಕಿತ್ತೊಗೆಯುತ್ತಾರೆ. ಇದನ್ನೇ ಫ್ರಾನ್ಸ್ ಕ್ರಾಂತಿಯೆಂತಲೂ ಕರೆಯಲಾಗುತ್ತದೆ[8] (ಈ ಫ್ರಾನ್ಸ್ ಕ್ರಾಂತಿಗೂ ಕರ್ನಾಟಕಕ್ಕೂ ಅವಿನಾಭಾವ ಸಂಬಂಧವಿದೆ ಎನ್ನುವುದನ್ನು ನಾವು ಮರೆಯುವಂತಿಲ್ಲ).

---

[8] 18ನೇ ಶತಮಾನದಲ್ಲಿ ಫ್ರೆಂಚ್ ಸಮಾಜವು ಪ್ರಮುಖ ಮೂರು ವಿಭಾಗಗಳಾಗಿತ್ತು – ಊಳಿಗಮಾನ್ಯ ಪದ್ಧತಿಯ ಮುಂದುವರಿದ ಭಾಗದಂತೆ ತೋರುವ ಈ ವಿಂಗಡಣೆಯ ವಿವಿಧ ಮಜಲುಗಳಿಗೆ 'ಎಸ್ಟೇಟ್' ಎಂದು ಕರೆಯಲಾಗುತ್ತಿತ್ತು. ಅರ್ಥಾತ್ ಮೂರು ಎಸ್ಟೇಟ್ ದರ್ಜೆಗಳು ಫ್ರೆಂಚ್ ಸಮಾಜದಲ್ಲಿ ಚಾಲ್ತಿಯಲ್ಲಿದ್ದವು. ಅವುಗಳೆಂದರೆ:
ಎಸ್ಟೇಟ್ 1: ಕ್ರೈಸ್ತ ಪಾದ್ರಿಗಳು ಹಾಗೂ ಚರ್ಚ್ ಗೆ ಸಂಬಂಧಪಟ್ಟ ಇನ್ನಿತರ ಪ್ರಮುಖ ವ್ಯಕ್ತಿಗಳು.
ಎಸ್ಟೇಟ್ 2: ರಾಜನ ಆಸ್ಥಾನದಲ್ಲಿ ಪ್ರಮುಖ ಹುದ್ದೆಗಳನ್ನು ನಿಭಾಯಿಸುವ, ಉಚ್ಚ ಶಿಕ್ಷಿತ ವರ್ಗದ ವ್ಯಕ್ತಿಗಳು.
ಎಸ್ಟೇಟ್ 3: ದೊಡ್ಡ ವ್ಯಾಪಾರಿಗಳು, ವ್ಯವಹಾರ ತಜ್ಞರು, ನ್ಯಾಯಾಲಯಕ್ಕೆ ಸಂಬಂಧಪಟ್ಟ ವ್ಯಕ್ತಿಗಳು, ರೈತರು, ಕಲಾವಿದರು, ಸಣ್ಣ ಹಿಡುವಳಿದಾರರು, ಕೂಲಿ ಕಾರ್ಮಿಕರು, ಸೇವಕರು.

ಇದರಲ್ಲಿ ಪ್ರಮುಖವಾದ ವಿಭಿನ್ನತೆಯೆಂದರೆ 1 ಹಾಗು 2ನೇ ಎಸ್ಟೇಟ್ ದರ್ಜೆಯವರು ಫ್ರೆಂಚ್ ಸಮಾಜದ ಒಟ್ಟು ಜನಸಂಖ್ಯೆಯ ಕೇವಲ 10% ದಷ್ಟು ಮಾತ್ರವಿದ್ದರು. ಇನ್ನುಳಿದ 90% ಜನ 3 ನೇ ಎಸ್ಟೇಟ್ ದರ್ಜೆಗೆ ಸೇರಿದವರಾಗಿದ್ದರು ಹಾಗು ಅವರು ಮಾತ್ರ ತೆರಿಗೆ ಕಟ್ಟುತ್ತಿದ್ದರು. ಇನ್ನುಳಿದ ಎಸ್ಟೇಟ್ ನವರಿಗೆ ತೆರಿಗೆ ಪಾವತಿಯಲ್ಲಿ ಸಂಪೂರ್ಣ ಸಡಿಲಿಕೆಯನ್ನು ಕೊಡಮಾಡಲಾಗಿತ್ತು. ಪ್ರಮುಖವಾಗಿ 1 ಹಾಗು 2 ನೇ ಎಸ್ಟೇಟ್ ನವರೆಲ್ಲರೂ ಉಚ್ಚ ಶಿಕ್ಷಿತ ವರ್ಗದವರು ಹಾಗು ರಾಜ ಪ್ರಭುತ್ವದಲ್ಲಿ ಅಪಾರ ಹಿಡಿತ ಉಳ್ಳವರಾಗಿದ್ದರು. ಈ ಭಿನ್ನತೆ 3 ನೇ ಎಸ್ಟೇಟ್ ಗೆ ಸೇರಿದವರಲ್ಲಿ ರೊಚ್ಚಿಗೇಳುವಂತೆ ಮಾಡಿತ್ತು.

ಜಾನ್ ಲಾಕ್, ಜಾನ್‌ಜಾಕ್ವೆಸ್ ರೋಶಿಯೋ, ಮಾಂಟೆಸ್ಕ್ಯೂರಂತಹ ಸಾಮಾಜಿಕ ದಾರ್ಶನಿಕರು ತಮ್ಮ ಪುಸ್ತಕಗಳಲ್ಲಿ ಹಾಗು ಪತ್ರಿಕೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಜನ ಸಾಮಾನ್ಯರೊಂದಿಗೆ ಹಂಚಿಕೊಂಡರು. ಇವರು ಜನರ ಕಣ್ಣುಗಳನ್ನು ತೆರೆಸಿ, ಸಮಾನತೆಯ ಸಮಾಜವನ್ನು ತೋರಿಸಿದರು. ಇವರ ಈ ವಿಚಾರಗಳು, ಹಾಗು ಕಲ್ಪನೆಗಳು ಸಮಾಜವನ್ನು ಕ್ರಾಂತಿಗೆ ಮುನ್ನುಗ್ಗಿಸಿತು.

ಮಧ್ಯಮ ವರ್ಗದ ಜನತೆಗೆ 18ನೇ ಶತಮಾನ ವರವಾಗಿ ಪರಿಣಮಿಸಿತೆಂದೇ ಹೇಳಬಹುದು. ಈ ಜನಾಂಗ ವಕೀಲಿ ವೃತ್ತಿ, ಕಾರ್ಯಕರ್ತರು ಹಾಗೂ ಶಿಕ್ಷಿತ ವ್ಯಕ್ತಿಗಳಾಗಿದ್ದು ಯಾವ ಜನಾಂಗಕ್ಕೂ ಹಕ್ಕುಗಳು ಸೀಮಿತವಾಗಿರಬಾರದು ಹಾಗೂ ಹಕ್ಕುಗಳು ಸರ್ವರಿಗೂ ಸಮಾನವಾಗಿ ದೊರೆಯಬೇಕು ಎಂಬ ನಿಲುವು ಹೊಂದಿದ್ದರು. ಶಿಕ್ಷಿತ ಜನಾಂಗದವರಾದ ಇವರು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮುಂತಾದ ನಿಲುವುಗಳ ಪರ ಪ್ರಬಲ ಧೋರಣೆ ತಳೆದಿದ್ದರು. ಹಾಗೂ ಅವಿದ್ಯಾವಂತ, ಅಶಿಕ್ಷಿತ ವರ್ಗದವರಿಗೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸಮಾನತೆ, ಸ್ವಾತಂತ್ರ್ಯ ಕುರಿತಾದ ಲೇಖನಗಳನ್ನು ಓದಿ ಹೇಳುತ್ತಿದ್ದರು. ಇದರಿಂದಾಗಿ ಪರೋಕ್ಷವಾಗಿ ಅವಿದ್ಯಾವಂತರನ್ನು ಕ್ರಾಂತಿಯಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರು. 16ನೇ ಲೂಯಿಸನು ಎಸ್ಟೇಟ್ ಜೆನರಲ್ಸ್ ಸಮಿತಿಯನ್ನು ಸಭೆ ಕರೆದು ಅಲ್ಲಿ "ರಾಜನು ಏನೇ ನಿರ್ಧಾರ ತೆಗೆದುಕೊಂಡರೂ 3ನೇ ಎಸ್ಟೇಟ್ ನವರು ಅದನ್ನು ಮರು ಪ್ರಶ್ನೆಯೇ ಇಲ್ಲದೆ ಒಪ್ಪಿಕೊಳ್ಳಬೇಕು, ಹಾಗೂ ಪ್ರತೀತಿಯಂತೆ 'ಒಂದು ಎಸ್ಟೇಟ್ ಒಂದು ವೋಟ್' ನಡೆಯಬೇಕು" ಎಂದು ತಿಳಿಯಪಡಿಸಿದನು. ಎಸ್ಟೇಟ್ ಜೆನೆರಲ್ಸ್ ಸಮಿತಿಯು ಇದನ್ನು 3ನೇ ಎಸ್ಟೇಟ್ ನವರೊಂದಿಗೆ ಚರ್ಚಿಸಿದಾಗ ಅವರು ಆ ಹೇಳಿಕೆಗೆ ತಿದ್ದುಪಡಿಯಾಗುವಂತೆ ವಿನಂತಿಸಿಕೊಂಡರು ಅಂದರೆ 'ಒಬ್ಬ ಸದಸ್ಯ ಒಂದು ವೋಟ್'

ಸಂತಾಗಲಿ ಎಂಬುದಾಗಿ. ಆದರೆ 3ನೇ ಎಸ್ಟೇಟ್ ದರ್ಜೆಯ ಜನರ ವಿರೋಧ ಅದಾಗಲೇ ರಾಜನಿಗೆ ತಿಳಿದಿದ್ದರಿಂದ ಆ ಕೋರಿಕೆಯನ್ನು ಒಪ್ಪದೇ ತಿರಸ್ಕರಿಸಿದನು. ಇದು ಮತ್ತೂ ಜನರನ್ನು ಕ್ರಾಂತಿಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿತು. ಯಾವಾಗ ಅರಸನು 3ನೇ ಎಸ್ಟೇಟ್ ನವರ ಬೇಡಿಕೆಗಳನ್ನು ಒಪ್ಪಲಿಲ್ಲವೋ ಆ ಕೂಡಲೇ 3ನೇ ಎಸ್ಟೇಟ್ ದರ್ಜೆಯ ಎಲ್ಲರೂ ವರ್ಸೆಲ್ ನಗರದ ಟೆನಿಸ್ ಒಳಾಂಗಣ ಕ್ರೀಡಾಂಗಣದಲ್ಲಿ ಫ್ರಾನ್ಸ್ ದೇಶಕ್ಕೆ ಪ್ರಜಾಪ್ರಭುತ್ವ ಸರ್ಕಾರ ಕೊಡಲೇಬೇಕೆಂದು ಪಟ್ಟು ಹಿಡಿದು ಧರಣಿ ಕುಳಿತರು. ಇವರನ್ನು ಮಿರಬೋಹಾಗು **ಅಬ್ಬೆ ಸಿಯೆಸ್** ನಾಯಕತ್ವದಲ್ಲಿ ಮುನ್ನಡೆಸಿದರು. 14 ಜುಲೈ 1789ರಂದು ನೂರಕ್ಕೂ ಹೆಚ್ಚು ಜನರು ಪ್ಯಾರಿಸ್ ನಗರದ ನಗರದ ಕಾರಾಗೃಹವಾದ **ಬಾಸ್ಟಿಲ್ಗೆಲ್ಗೆ** ನುಗ್ಗಿ ಅಲ್ಲಿಯ ನಾಯಕನನ್ನು ಸೋಲಿಸಿ ಅಲ್ಲಿದ್ದ 7 ಜನ ಬಂಧಿತರನ್ನು ಬಿಡುಗಡೆಗೊಳಿಸಿದರು. ಬಾಸ್ಟಿಲ್ 16ನೇ ಲೂಯಿಸ್ ನ ಆಳ್ವಿಕೆಯ ಅತಿ ಘನತೆವೆತ್ತ ಸ್ಥಳಗಳಲ್ಲೊಂದಾಗಿತ್ತು. 4 ಆಗಸ್ಟ್ 1789ರಂದು ಕ್ರಾಂತಿಯನ್ನು ತಾಳಲಾರದ ರಾಜನು ರಾಷ್ಟ್ರೀಯ ಸಭೆಯನ್ನು ಅಂಗೀಕರಿಸಿ ಸಂವಿಧಾನವನ್ನು ಸ್ವೀಕರಿಸಿದ.ಇದರಿಂದ ಫ್ರಾನ್ಸ್ ರಾಜಪ್ರಭುತ್ವದಿಂದ ಸಂವಿಧಾನ ಪ್ರಭುತ್ವಕ್ಕೆ ಬದಲಾಯಿತು.

ಜೀತ ಪದ್ಧತಿಯ ನಿರ್ಮೂಲನೆ: 4ನೇ ಆಗಸ್ಟ್ ರಾತ್ರಿಯು ರಾಷ್ಟ್ರೀಯ ಸಭೆ *ಜೀತ ಪದ್ಧತಿಯ ನಿರ್ಮೂಲನೆ* ಎಂಬ ನ್ಯಾಯಾಜ್ಞೆಯನ್ನು ಅಂಗೀಕರಿಸಿತು. ಇದರ ಪ್ರಕಾರ ಯಾರೂ ಜೀತ ಮಾಡದೆ ಎಲ್ಲರು ತಮ್ಮ ತಮ್ಮ ಆದಾಯಕ್ಕೆ ತಕ್ಕ ಹಾಗೆ ಕಂದಾಯವನ್ನು ಕಟ್ಟಬೇಕಾಗಿತ್ತು. ಈ ಆಜ್ಞೆಯಿಂದ ದೇಶ 2 ಬಿಲಿಯನ್ ಲಿವರ್ಸ್ ಪಡೆಯಿತು. ಇದಿಷ್ಟೇ ಅಲ್ಲದೆ 26 ಆಗಸ್ಟರಂದು **ಮಾನವ ಹಕ್ಕುಗಳ ಘೋಷಣೆ**ಯನ್ನು ಮಾಡಿತು. ಇದು ಎಲ್ಲರಿಗು ಸಮಾನ ಹಕ್ಕುಗಳನ್ನು ನೀಡಿತು. ಈ ಸಮಯದಲ್ಲಿ *ರಾಜೆಟ್ ದೆ ಲ್'ಇಸೆಲ್* ರಚಿಸಿದ **ಮರ್ಸೈಲೆಸ್** ಹಾಡು ಫ್ರಾನ್ಸ್ ದೇಶದ ರಾಷ್ಟ್ರಗೀತೆಯಾಯಿತು.

1791ರ ಈ ಸಂವಿಧಾನದ ಪ್ರಕಾರ ನಾಗರೀಕರು **ಸಕ್ರಿಯ ನಾಗರೀಕರು** ಮತ್ತು '**ವಿಕ್ರಿಯ ನಾಗರೀಕರು** ಎಂದು ಭಾಗ ಮಾಡಿದರು. ಸಕ್ರಿಯ ನಾಗರೀಕರು 25ವರ್ಷ ಮೇಲ್ಪಟ್ಟ ಹಾಗು ಕೂಲಿಕಾರರ 3 ದಿನದ ಸಂಬಳಕ್ಕೆ ಸಮಾನಾದ ಕಂದಾಯವನ್ನು ಕಟ್ಟುವ ಪುರುಷರು ಮಾತ್ರ, ಒಬ್ಬ ಸದಸ್ಯ ಒಂದು ವೋಟ್ ನಿಯಮ ಜಾರಿಯಾದ ಕಾರಣ ಸುಮಾರು 4 ಮಿಲಿಯನ್ ಜನ ಮತ ಚಲಾಯಿಸಲು ಅರ್ಹತೆ ಪಡೆದುಕೊಂಡರು. ಪ್ರತೀ ಸದಸ್ಯನೂ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ ಮತ ನೀಡುವ ಮೂಲಕ 245 ಸಂಖ್ಯೆಯುಳ್ಳ ರಾಷ್ಟ್ರೀಯ ಸಭೆಗೆ ಕಳುಹಿಸಬಹುದಾಗಿತ್ತು. ಸಕ್ರಿಯ ನಾಗರೀಕರು ನ್ಯಾಯಧೀಶನನ್ನು ಮತಗಳ ಮೂಲಕ ಸೂಚಿಸುತ್ತಿದ್ದರು. ಆದರೆ ಮಿಕ್ಕ 24 ಮಿಲಿಯನ್ ಜನಸಂಖ್ಯೆ ವಿಕ್ರಿಯ ನಾಗರೀಕರಾಗಿದ್ದು ಯಾವ ಮತದ ಹಕ್ಕು ಇರಲಿಲ್ಲ. ಸಂವಿಧಾನವು **ಮಾನವ ಹಕ್ಕುಗಳ ಘೋಷಣೆ**ಯಿಂದ ಪ್ರಾರಂಭವಾಯಿತು. ಅದು ಪ್ರತಿಯೊಬ್ಬ ಮನುಷ್ಯನಿಗೂ ಸಮಾನ ಹಕ್ಕುಗಳನ್ನು ನೀಡಿತು. ಇದು ಪರಾಮರ್ಶಕ-ರಹಿತ ಮಾಧ್ಯಮವನ್ನು ಜನರಿಗೆ ನೀಡಿತು. ಇದರಿಂದ ಪತ್ರಿಕೆಗಳು, ಚರ್ಚೆಗಳು ಇತ್ಯಾದಿಗಳು ಹೆಚ್ಚಾದವು.

ಫ್ರೆಂಚ್ ಕ್ರಾಂತಿಯ ಪದಗಳಾಗಿ ಸ್ವಾತಂತ್ರ್ಯ, ಸಮಾನತೆ ಮತ್ತು ಒಡಹುಟ್ಟುತನ (liberty, equality and fraternity) ಹೊರಹೊಮ್ಮಿತು. ಇಂದೂ ಕೂಡ ಈ ಶಬ್ದಗಳು ಹಲವಾರು ದೇಶಗಳ ಸಂವಿಧಾನದ ಮೇಲಿದೆ. ಫ್ರಾನ್ಸಿಂದ ಬೇರೆ ದೇಶಗಳಿಗೂ ಹರಡಿದ ಈ ಸಾಮಾಜಿಕ ವಿಚಾರಗಳು *ಜೀತಪದ್ಧತಿ*ಯನ್ನು ತೆಗೆದುಹಾಕಿತು. ಫ್ರಾನ್ಸ್ ದೇಶದಲ್ಲಿ ಮಾರ್ಪಡದ ಗಣರಾಜ್ಯವನ್ನು ಸೃಷ್ಟಿಸಲು ಆಗದಿದ್ದರು, ಬೇರೆ ದೇಶಗಳಿಗೆ ತನ್ನ ಕಲ್ಪನೆಗಳನ್ನು ಹರಡಿಸಿ ಈ ಕ್ರಾಂತಿಯು ಸಫಲವಾಯಿತು.

ಫ್ರಾನ್ಸಿನ ಮಹಾಕ್ರಾಂತಿಯಲ್ಲಿ ಚಿಂತಕರ ಪ್ರಭಾವ ಮಹತ್ವದ್ದು. ಮುಖ್ಯವಾಗಿ ರುಸೋ, ವಾಲ್ಟೇರ್, ಮಾಂಟೆಸ್ಕ್ಯೂ ಕ್ರಾಂತಿಯ ಮೇಲೆ ಪ್ರಭಾವ ಬೀರಿದ ಪ್ರಮುಖ ಚಿಂತಕರು. ಮಾಂಟೆಸ್ಕ್ಯೂ(1689-1755) ನ್ಯಾಯಾಧೀಶನೂ ಆಗಿದ್ದ. ಮಾಂಟೆಸ್ಕ್ಯೂ 1689-1755 ಬ್ರಿಟಿಷ್ ಪಾರ್ಲಿಮೆಂಟರಿ ಸರ್ಕಾರ ವ್ಯವಸ್ಥೆಯ ಪ್ರಶಂಸಕನಾಗಿದ್ದ. 20ವರ್ಷಗಳ ನಂತರ ಇವನು ಸ್ಪಿರಿಟ್ ಆಫ್ ಲಾಸ್ ಎಂಬ ಉದ್ಗ್ರಂಥವನ್ನು ಪ್ರಕಟಿಸಿದನು. ಇದರಲ್ಲಿ ಇವನು ವಿವಿಧ ಸರ್ಕಾರ ಪದ್ಧತಿಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾನೆ. ಫ್ರಾನ್ಸಿಗೆ ವೈಜ್ಞಾನಿಕ, ಸಂವಿಧಾನಬದ್ಧ, ನಿಯಂತ್ರಿತ ರಾಜಪ್ರಭುತ್ವ ತಕ್ಕದ್ದೆಂದು ಪ್ರತಿಪಾದಿಸಿದನು. ದೊರೆಗಳ ದೇವದತ್ತ ಅಧಿಕಾರದ ಸಿದ್ಧಾಂತವು ಹುರುಳಿಲ್ಲ ಎಂಬುದನ್ನು ತೋರಿಸಿಕೊಟ್ಟನು. ನಿರಂಕುಶ ಪ್ರಭುಗಳ ದಬ್ಬಾಳಿಕೆ ಮತ್ತು ಸರ್ವಾಧಿಕಾರತ್ವ ತಡೆಗಟ್ಟಲು ಸರಕಾರದ ಕಾರ್ಯಾಂಗ, ನ್ಯಾಯಾಂಗ ಹಾಗೂ ಶಾಸಕಾಂಗಗಳನ್ನು ಜಾಗರೂಕತೆಯಿಂದ ಬೇರ್ಪಡಿಸುವುದು ಅಗತ್ಯವೆಂದು ಪ್ರತಿಪಾದಿಸಿದನು. 1721ರಲ್ಲಿ ಪರ್ಷಿಯನ್ ಲೆಟರ್ಸ್ ಎಂಬ ಕೃತಿಯನ್ನು ಪ್ರಕಟಿಸಿದನು. ಸ್ಪಿರಿಟ್ ಆಫ್ ದಿ ಲಾಸ್ ಇವನ ಪ್ರಸಿದ್ಧ ಕೃತಿ.

ವಾಲ್ಟೇರ್(1694-1778) ಫ್ರಾನ್ಸಿನ ಮಧ್ಯಮ ವರ್ಗಕ್ಕೆ ಸೇರಿದ ವಾಲ್ಟೇರ್ ದಿಟ್ಟ ದಾರ್ಶನಿಕ ವಿಡಂಬನಕಾರನಾಗಿದ್ದನು. ಈತನು ನಿರಂಕುಶ ಪ್ರಭುತ್ವದ ದಬ್ಬಾಳಿಕೆ ಅನ್ಯಾಯ ಅಕ್ರಮಗಳನ್ನು ಮತ್ತು ಚರ್ಚಿನ ಧರ್ಮಾಂಧತೆ, ಬ್ರಷ್ಟಾಚಾರಗಳನ್ನು ನಿರ್ಭೀತಿಯಿಂದ ಬಯಲಿಗೆಳೆದನು. ಅನ್ಯಾಯ ಅತ್ಯಾಚಾರದ ವಿರುದ್ಧ ಜೀವಮಾನದುದ್ದಕ್ಕೂ ಕಲಿತನದಿಂದ ಹೋರಾಡಿದನು. ಇತನ ಪ್ರಭಾವಶಾಲಿ ಲೇಖನಗಳು, ಪ್ರಬಂದಗಳು, ಕವಿತೆಗಳು, ಚರಿತ್ರೆ ಮತ್ತು ನಾಟಕಗಳು ಫ್ರಾನ್ಸಿನಲ್ಲಿ ಜನಪ್ರಿಯವಾಗಿದ್ದವು. ಇವನ ಕಟು ವಿಡಂಬನೆಗಳು ಫ್ರಾನ್ಸಿನ ಧರ್ಮಾಧಿಕಾರಿಗಳಲ್ಲಿ ಮತ್ತು ಶ್ರೀಮಂತರಲ್ಲಿ ನಡುಕ ಹುಟ್ಟಿಸಿದವು. ಇವನು ಪ್ರಜಾಪ್ರಭುತ್ವವಾದಿಯಾಗಿರಲಿಲ್ಲ. ಪ್ರಗತಿಪರ ರಾಜಪ್ರಭುತ್ವದ ಪ್ರತಿಪಾದಕನಾಗಿದ್ದನು. ನೂರು ಇಲಿಗಳ ಪ್ರಭುತ್ವಕ್ಕಿಂತ ಒಂದು ಹುಲಿಯ ಪ್ರಭುತ್ವವೇ ಲೇಸು ಎಂದು ವಾಲ್ಟೇರ್ ಅಭಿಪ್ರಾಯ ಪಟ್ಟವನು. ವಿಚಾರಶೀಲತೆಗೆ ಪ್ರಾಧಾನ್ಯತೆ ನೀಡಿದನು. ಅತ್ಯುತ್ತಮ ಫ್ರೆಂಚ್ ಬರಹಗಾರ. ವಿಮರ್ಶಕ, ಚಿಂತಕ. ಯುರೋಪಿನ ಇತಿಹಾಸದಲ್ಲಿ ವಾಲ್ಟೇರ್ ಒಬ್ಬ ಪ್ರಭಾವಶಾಲಿ ,ಪ್ರಭುತ್ವಶಾಲಿ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದಾನೆ.ಇವನೊಬ್ಬ ಯುಗ ಪ್ರವರ್ತಕ.ಇವನ ಕಾಲವನ್ನು ವಾಲ್ಟೇರ್ ಯುಗವೆಂದೇ ಕರೆಯುತ್ತಾರೆ.ಇವನನ್ನು ಎಲ್ಲರೂ ಸ್ಮರಿಸುವುದು ನಿರಂಕುಶ ಪ್ರಭುತ್ವ,ಮತಾಂಧತೆ &ಕ್ರೌರ್ಯ ಇವುಗಳ ವಿರುದ್ಧ ಹೋರಾಡಿದ ದಿಟ್ಟ ಹೋರಾಟಗಾರನೆಂದು.ಇವನು ಕವಿ, ಚಿತ್ರಕಾರ &ನಾಟಕಕಾರನಾಗಿ ಹಾಗೂ ವಿಜ್ಞಾನಿಯಾಗಿ ತನ್ನ 23ನೇ ವಯಸ್ಸಿನಲ್ಲಿ ಪ್ರಸಿದ್ಧನಾಗಿದ್ದನು.ಫ್ರಾನ್ಸಿನ ಜನತೆ ಇವನಿಗೆ 'ರಾಜಾ ವಾಲ್ಟೇರ್' ಎಂಬ ಬಿರುದನ್ನು ನೀಡಿದ್ದರು.

ರುಸೋ (1712-1778) ಫ್ರಾನ್ಸಿನ ತತ್ವಜ್ಞಾನಿಗಳಲ್ಲಿ ರುಸೋ ಸರ್ವಶ್ರೇಷ್ಠ. ಇವನನ್ನು ನವಯುಗದ ಪ್ರವಾದಿ ಅಥವಾ ಹರಿಕಾರನೆಂದು ಕರೆಯಲಾಗಿದೆ. ಪೂರ್ಣ ಹೆಸರು, ಜೀನ್ ಜಾಕಸ್ ರುಸೋ. ನೆಪೋಲಿಯನ್ ಬೋನಾಪಾರ್ಟೆಯು "ರುಸೋ ಜನಿಸದಿದ್ದರೆ ಫ್ರಾನ್ಸಿನಲ್ಲಿ ಕ್ರಾಂತಿಯೇ ಆಗುತ್ತಿರಲಿಲ್ಲ" ಎಂದು ಅಭಿಪ್ರಾಯಪಟ್ಟಿದ್ದಾನೆ. ಮಾನವನ ಎಲ್ಲ ತೊಂದರೆಗಳಿಗೂ ಮೂಲ ಗತಕಾಲ, ಮಾನವ ಕುಲವು ಬಹುಬೇಗನೇ ಅದರಿಂದ ವಿಮೋಚನೆ ಹೊಂದಬೇಕು ಎಂಬುದಾಗಿ ತಿಳಿಸಿದನು. ಇವನ ಸಾಮಾಜಿಕ ಒಪ್ಪಂದ ಅಥವಾ Social Contract ಎನ್ನುವ ಕೃತಿ ಪ್ರಸಿದ್ಧವಾದುದು. ಇದನ್ನು ಫ್ರಾನ್ಸಿನ ಮಹಾಕ್ರಾಂತಿಯ ಬೈಬಲ್ ಎಂಬುದಾಗಿ ಕರೆಯಲಾಗಿದೆ. ಈ ಕೃತಿಯು "ಜನ್ಮತಃ ಮನುಷ್ಯನು ಸ್ವತಂತ್ರವಾಗಿ ಹುಟ್ಟಿದ್ದಾನೆ

ಆದ್ದರಿಂದ, ಫ್ರಾನ್ಸ್ ಕ್ರಾಂತಿಯ ಹಿಂದೆ ಜ್ಞಾನೋದಯ ಕಾಲ ಅಥವಾ ಪುನರುಜ್ಜೀವನದ ಕಾಲ ಸನ್ನಿವೇಶಗಳು ಕ್ರಿಯಾಶೀಲವಾಗಿವೆ. ಇಂತಹ ಸನ್ನಿವೇಶದಲ್ಲೇ ಜನತಂತ್ರ ಮೌಲ್ಯಗಳಾದ 'ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆ' ಸಾಮಾಜಿಕವಾಗಿ ನೆಲೆಗೊಳ್ಳುವುದು. ಇವೇ ಮುಂದೆ ವಿಶ್ವಾತ್ಮಕವಾಗಿ, ಆಡಳಿತಾತ್ಮಕ ತಿಳಿವಿಗೆ ಕಾರಣವಾಗುತ್ತವೆ. ಇಂತಹ ತಾತ್ವಿಕ ಚಹರೆಗಳು ಇಂದಿಗೂ ನಮಗೆ ಅನುಕರಣೀಯವೆಂದೆನಿಸಿವೆ.

ಆದರೆ, ಇಂತಹ ಮೌಲ್ಯಗಳ ಹಿಂದೆಯೂ ಒಂದು ಕರಾಳವಾದ ಪ್ರಭುತ್ವದ ಅಂಜೆಂಡಾ ಕ್ರಿಯಾಶೀಲವಾಗಿರುವುದನ್ನು ನಾವು ಅಲ್ಲಗಳೆಯಲಾಗದು. ಯಾವ ಮೌಲ್ಯಗಳು ಜನತಂತ್ರ ಆಡಳಿತಕ್ಕೆ ಕಾರಣವಾದವೋ ಅವುಗಳ ಹಿಂದೆಯೇ ಧರ್ಮ ಮತ್ತು ಆಳುವ ಜನರ ಕುತಂತ್ರಗಳೂ ಇವೆ ಎನ್ನುವುದನ್ನು ಮರೆಯುವಂತಿಲ್ಲ.[9]

2. ಭಾರತೀಯ/ಕರ್ನಾಟಕದಲ್ಲಿ ಸಾಮಾಜಿಕ ಆವರಣದ (ಸೋಶಿಯಲ್ ಸ್ಪೇಸ್) ಉದಯ

ಇದಕ್ಕೆ ಬಹು ಮುಖ್ಯ ಕಾರಣವೆಂದರೆ 'ವಸಾಹತುಶಾಹಿ ಆಧುನಿಕತೆ'ಯೇ ಆಗಿದೆ. ಇದು ಮುಂದೆ **ಏಕಾಕಾರದ ರಾಷ್ಟ್ರಶಕ್ತಿಯಾಗಿ** ರೂಪುಗೊಳ್ಳುತ್ತದೆ. ಅದಕ್ಕೆ ಮೊದಲು, ಅದು **ಬೃಹದಾಕಾರದ ಸಾಮಾಜಿಕ-ವಾಸ್ತವ-ರೂಪ** ತಾಳಿದ್ದು ಮಾತ್ರ ವಿಶೇಷವೆನಿಸುತ್ತದೆ. ಅದು ಬ್ರಿಟಿಶ್-ಕರ್ನಾಟಕದಲ್ಲಿ ತಲೆಯೆತ್ತುತ್ತದೆ ಎನ್ನುವುದೂ ಅಷ್ಟೇ ಮುಖ್ಯ – ಆ ಪ್ರಕ್ರಿಯೆ ತನ್ನೊಳಗೆ ಹಲವಾರು ಪ್ರವಾಹಗಳನ್ನು ಕೂಡಿಸಿಕೊಂಡು ಸಂಗಮಗೊಂಡ ಕಾಲವೆಂದೇ ಈಗ ಅನಿಸುತ್ತದೆ. ಏಕೆಂದರೆ ಅಂದು ಸಂಗಮಗೊಂಡು ಅರಳಿದ ಆ **"ಸಾಮಾಜಜಿಕ-ಆವರಣ"** (ಜಾಗ) ಮುಂದಿನ/ನಮ್ಮ ನಾಳೆಯ **'ಭಾರತೀಯ ಪ್ರಜಾಸತ್ತೆ'**ಯ ಪೂರ್ಣತ್ವದ ಕಲ್ಪನೆಯ ಕನಸನ್ನು ಮೂಡಿಸಿತ್ತು...! ಹಾಗಾದರೆ ಅದು ಸಾಧ್ಯವಾದು ಹೇಗೆ? ಅಂತಹ

ಆದರೆ, ಅವನು ಎಲ್ಲ ಕಡೆಯಿಂದಲೂ ಸರಪಳಿಯಿಂದ ಬಂಧಿತನಾಗಿದ್ದಾನೆ" ಎಂಬ ಮಹಾ ವಾಕ್ಯದೊಂದಿಗೆ ಪ್ರಾರಂಭವಾಗಿತ್ತು.

[9] ಹೇಗೆ ಫ್ರಾನ್ಸ್ ಕ್ರಾಂತಿ ಮಾನವನ ವೈಚಾರಿಕತೆಗೆ ಕಾರಣವಾಯಿತೋ ಅದೇ ಸಂದರ್ಭದಲ್ಲಿ ಕಥೋಲಿಕ ಪುರೋಹಿತಶಾಹಿ ಮತ್ತು ಕುಲೀನ ಸಿರಿವಂತರು ಮತ್ತೆ ಧರ್ಮವನ್ನು ಜನರ ಮಧ್ಯೆ ಬೆಳೆಯಬೇಕಾಗಿದ್ದ ವೈಚಾರಿಕತೆಗೆ ವಿರುದ್ಧವಾಗ ಭಕ್ತಿ ಪಂಥಗಳನ್ನು ಹುಟ್ಟುಹಾಕಿದ್ದರು. ಇದಕ್ಕೆ ನಿದರ್ಶನವೆಂಬಂತೆ ಕ್ರಾಂತಿಯಿಂದ ಬಹಳಷ್ಟು ತೊಂದರೆಯನ್ನು ಅನುಭವಿಸಿದ ಕಥೋಲಿಕ ಚರ್ಚ್ ನಿಧಾನವಾಗಿ ಮೇಲೇಳುತ್ತದೆ. ಈ ಸುಧಾರಣೆಯ ಪ್ರತಿಫಲವೇ ಮಿಶನರಿ ಚಟುವಟಿಕೆಗಳು ವಸಾಹತು ಪ್ರದೇಶಗಳಲ್ಲಿ ಹರಡಿದ್ದು ಮತ್ತು ಜನಪ್ರಿಯ ಭಕ್ತಿಯಾಚರಣೆಗಳೂ ಸಹ ಇದೇ ಸನ್ನಿವೇಶದಲ್ಲಿ ಮಾನ್ಯತೆಯನ್ನೂ ಸಹ ಪಡೆದದ್ದು. ಪೋರ್ಚುಗಲ್ ಮತ್ತು ಸ್ಪೇಯ್ನ್‌ನ ಶಕ್ತಿ ಕಳೆದುಕೊಳ್ಳುತ್ತಿರುವಾಗ ಫ್ರಾನ್ಸ್ ದೇಶ ತನ್ನ ಮಿಶನರಿಗಳನ್ನು ಕಳುಹಿಸಿ ಅಂತಹ ಶ್ತಹೀನತೆಯನ್ನು ತುಂಬಿತು. ಇದನ್ನು ಅನುಸರಿಸಿ ಇತರೆ ದೇಶಗಳಾದ ಇಟಲಿ, ಜರ್ಮನಿ, ಬೆಲ್ಜಿಯಂ ಮತ್ತು ಹೋಲ್ಯಾಂಡ್‌ಗಳೂ ಸಹ ಮಿಶನರಿಗಳನ್ನು ವಸಾಹತು ಪ್ರದೇಶಗಳಿಗೆ ಕಳುಹಿಸುತ್ತವೆ.

ಚರ್ಚ್‌ನ ಹೊಸತನ ಅದರ ಧಾರ್ಮಿಕ ಮಠಗಳ ಉದಯದಲ್ಲೂ ಕಾಣಬಹುದು. 1820-1880ರ ನಡುವೆ ಫ್ರಾನ್ಸ್‌ನಲ್ಲೇ ಸುಮಾರು 140 ಧಾರ್ಮಿಕ ಕ್ರೈಸ್ತ ಸನ್ಯಾಸಿನಿಯರ ಮಠಗಳು ಸ್ಥಾಪನೆಯಾಗಿದ್ದವು. ಹಾಗೆಯೇ ಲೇ-ಪೀಪಲ್ (ಸನ್ಯಾಸೇತರ ಜನ) ಸಹ ಕ್ಯಾಥರಿನ್ ಜೆರಿಕಾಟ್ಸ್ ಎಂಬ ಭಕ್ತಿ ಸಂಘಟನೆಯನ್ನು 1789ರಲ್ಲಿ ಆರಂಭಿಸಿದ್ದರು. ಇದೇ ಶತಮಾನದಲ್ಲಿ ಸುಮಾರು 5 ದೈವದರ್ಶನಗಳು ಫ್ರಾನ್ಸ್‌ನಲ್ಲಿ ಆಗಿದ್ದವು. ಅಲ್ಲದೆ ಈ ದೈವ ದರ್ಶನಗಳು ಸಾಂಕೇತಿಕವಾಗಿದ್ದು ಮಹಿಳಾ ಸನ್ಯಾಸಿ ಮಠಗಳು ಧಾರ್ಮಿಕ ಪುನರುಜ್ಜೀವನ್ನು ಸೂಚಿಸುತ್ತಿದ್ದವು (ಬೋಗ್ಲಿಯೋಲೊ 1974:13-26). ಇದೇ ತೆರನ ಸಂಗತಿಗಳು ತದನಂತರದಲ್ಲಿ ವಿಜಯನಗರದ ಸಾಮ್ರಾಜ್ಯಕ್ಕೂ ಪಸರಿಸಿದ್ದನ್ನು ಕಾಣಬಹುದು. ಇಸ್ಲಾಂನಿಂದ ಸವಾಲು ಅದಕ್ಕೆ ಎದುರಾಗಿತ್ತು. ಇದರೊಂದಿಗೆ ಪೋರ್ಚುಗೀಸರ ಮತ್ತು ಮೇಲ್ಜಾತಿಗಳ ಹಿತಾಸಕ್ತಿಗಳೂ ಸಹ ಒಂದುಗೂಡಿದಂತಾಗಿ, ನಿಧಾನವಾಗಿ **ಧರ್ಮ ಎನ್ನುವುದು ಭಕ್ತಿ ಮತ್ತು ಬಾಹ್ಯ ಆಚರಣೆಗಳಿಗೆ** ಪ್ರಮುಖ್ಯತೆ ನೀಡುವಂತಾಯಿತು. ಇದೊಂದು ಮೌಢ್ಯವಾಗಿ ಈಗಳೂ ನಮ್ಮ ಸಮಾಜವನ್ನು ಆವರಿಸಿರುವುದನ್ನು ಕಾಣುತ್ತೇವೆ.

ಬಹುರೂಪಿಯಾದ ಪ್ರವಾಹಗಳನ್ನು ಸೆರೆ ಹಿಡಿಯುವುದಾರೂ ಹೇಗೆ? ಈ ಕಾರ್ಯ ಸವಾಲಿನದ್ದೇ ಆಗಿದೆ. ಆದರೆ, ಅದೇನೂ ಅಸಾಧ್ಯವಾದುದೇನೂ ಅಲ್ಲ...! ಉದಾಹರಣೆಗೆ, ಕರ್ನಾಟಕದ ಏಕೀಕರಣದ ಬಗೆಯನ್ನು ಸ್ವಲ್ಪ ಯೋಚಿಸಿದರೆ, ಅಲ್ಲಿ **ಬೌದ್ಧಿಕ ಚಹರೆ**ಗಿಂತ ಭಾವಾನಾತ್ಮಕ ನುಡಿ-ಸಂಸ್ಕೃತಿಯೊಂದು ನಮ್ಮೆಲ್ಲರನ್ನು ಒಂದುಗೂಡಿಸಿದ್ದನ್ನು ಕಾಣಬಹುದು. ಹೀಗೆಯೇ, ಆಧುನಿಕ **'ಪ್ರಬುದ್ಧ-ಪ್ರಜೆ'** ಎನ್ನುವ ಕಲ್ಪನೆಯೂ ಸಹ ಮೂಡಿದುದು 1920ರ ಸಂದರ್ಭದಲ್ಲೇ...! ಇಂತಹ ಮಾಹಾನ್ **'ಸಾಮಾಜಿಕ-ಅವಕಾಶ'**(ಸ್ಪೇಸ್) ಸಾಧ್ಯವಾದುದು ಡಾ. ಅಂಬೇಡ್ಕರ್, ಗಾಂಧಿ, ತಿಳಕ್, ರಾನಡೆ ಮುಂತಾದ ವ್ಯಕ್ತಿಗಳು ಜನಸಮುದಾಯಗಳನ್ನು ಮುನ್ನಡೆಸಿ, ಬ್ರಿಟಿಶ್-ಭಾರತದ ವಿರುದ್ಧ **ಪ್ರತಿರೋಧವನ್ನು** ಸಂಘಟಿಸಿದ ಪ್ರಕ್ರಿಯೆಯಲ್ಲಿ... ಇವರೊಂದಿಗೆ ನಮ್ಮ ನವೋದಯದ ಬರಹಗಾರರೂ ಸಹ ಪಾಲ್ಗೊಂಡದ್ದು **ಮಹತ್ವದ ಐತಿಹಾಸಿಕ ತಿರುವು** ಎಂದೆನಿಸುತ್ತದೆ. ಅಂದರೆ, ಇಲ್ಲೊಂದು **ಸಾಮಾಜಿಕವಾದ ತಿಳಿವೊಂದು (ಸೋಶಿಯಲ್ ಎಪಿಸ್ಟಮೊಲಜಿ)** ದಿಟವಾಗಿ ಕಾಣಿಸುತ್ತದೆ. ಈ ವಿದ್ಯಮಾನವನ್ನು ಮತ್ತೊಂದು ರೀತಿಯಲ್ಲಿ ಗಮನಿಸುವುದಾದರೆ, 20ನೇ ಶತಮಾನದ ಪ್ರಾರಂಭದ ವೇಳೆಗೆ ನಾಗರಿಕ ಸ್ವಾತಂತ್ರ್ಯ, ರಾಜಕೀಯ ಹಕ್ಕು, ಸಂಸ್ಕೃತಿ ಹಾಗೂ ದಿನನಿತ್ಯದ ಜೀವನದ ಮೇಲೆ ಬ್ರಿಟಿಷ್ ದಬ್ಬಾಳಿಕೆಯ ಆಡಳಿತದ ವಿರುದ್ಧ ಜನರ ದನಿ ಜೋರಾಗತೊಡಗಿ ಜನರು ಸ್ವರಾಜ್ಯಕ್ಕೆ ಆಗ್ರಹಿಸತೊಡಗಿದ್ದರು. ಈ ಎಲ್ಲಾ ಕಾರಣಗಳಿಂದಾಗಿ ಮೈಸೂರು ಒಡೆಯರ ಕಾಲದಲ್ಲಿ ಪ್ರಜಾಪ್ರತಿನೀಧಿ ಸಭೆಯ ಉದಯವಾಗುವುದನ್ನೂ ಮತ್ತೂ ಬ್ರಾಹಣೇತರ ಚಳುವಳಿ ರೂಪುಗೊಳ್ಳುವುದನ್ನು ನಾವು ಗಮನಿಸಬಹುದಾಗಿದೆ. ಈ ಮೂಲಕ ಕನ್ನಡ ಜನತೆಯ ಸಮಾನತೆಯ ಮತ್ತು ಸ್ವಾತಂತ್ರ್ಯದ ಆಶಯಗಳನ್ನು ಆಡಳಿತಾತ್ಮಕವಾಗಿ ಈಡೇರಿಸಿಕೊಳ್ಳುವ ಸಾಧ್ಯತೆಗಳನ್ನು ಕಂಡುಕೊಳ್ಳುವುದು ಮುಖ್ಯವಾಗುತ್ತದೆ.

3. ಸಾರ್ವಜನಿಕ ಆಡಳಿತ ವ್ಯವಸ್ಥೆಯ ಉದಯ – ಇಲ್ಲಿ ಎರಡು ಪ್ರಮುಖ ಅರಿಮೆಯನ್ನಾಗಿಸಿರುವ ಪರಿಕಲ್ಪನೆಯೆಂದರೆ ಸಮಸ್ಯೀಕರಣ.

ಈ ಹಿಂದೆ ಗಮನಿಸಿದಂತೆ, ಯೂರೋಪಿನಲ್ಲಿ ಉದಯವಾದ ಆಧುನಿಕತೆಯ ಸ್ವರೂಪವನ್ನು ಸಮಸ್ಯೀಕರಿಸಿದವನೆಂದರೆ ಫ್ರೆಂಚ್ ಚಿಂತಕನಾದ ಮೈಖಲ್ ಫೂಕೋ. ಆತನ ಪ್ರಕಾರ 'ಸಮಸ್ಯೀಕರಣ'ವೆನ್ನುವುದು ವಸ್ತು-ಸಂಗತಿಗಳನ್ನು ಒಪ್ಪಿಸುವುದು ಅಥವಾ ತಿರಸ್ಕರಿಸುವುದು ಅಲ್ಲ. ಬದಲಾಗಿ, ಆಧುನಿಕತೆಯನ್ನು ಜ್ಞಾನೋದಯದ ಕಾಲದ ತಾತ್ವಿಕ ಚೌಕಟ್ಟಿಂದು ಒಪ್ಪಿತವಾಗಿರುವ ಚಿಂತನೆಯನ್ನು ಕುರಿತು ವಿವೇಚಿಸುವಂಥದ್ದು. ಹೀಗೆ ವಿವೇಚಿಸುವಾಗ ಎರಡು ಸಂಗತಿಗಳನ್ನು ಗಮನಿಸಬೇಕೆಂದು ಫೂಕೋ ಹೇಳುತ್ತಾನೆ –

ಒಂದು, ಆಧುನಿಕತೆಯ ಚರಿತ್ರೆಯನ್ನು ಗಮನಿಸುವಾಗ, ಹಾಗೇ ಗಮನಿಸುವಂಥ ವ್ಯಕ್ತಿಯು ನಿರ್ದಿಷ್ಟವಾಗಿ ತನ್ನ ಸನ್ನಿವೇಶವನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಹಾಗೇ ಗುರುತಿಸಿಕೊಳ್ಳುವಾಗ ಆತ/ಆಕೆಯ ವ್ಯಕ್ತಿತ್ವವೂ ಸಹ **ಐಡಿಯಲಾಜಿಕಲ್** ಆಗಿ ಸಂಘಟಿತವಾಗಿರುವುದನ್ನು ಗಮನಿಸಬಹುದಾಗಿದೆ. ಎರಡು, ಆಧುನಿಕತೆಯ ಚರಿತ್ರೆಯನ್ನು ಬಗೆಯು ಕ್ರಮದಲ್ಲೇ ಕೆಲವನ್ನು ಮಾನ್ಯ ಮಾಡುವ ಅಥವಾ ತಿರಸ್ಕರಿಸುವ ಅಥವಾ ಮೌನವಾಗಿಸುವ ಕ್ರಿಯೆ ನಡೆದಿರುತ್ತದೆ. ಉದಾಹರಣೆಗೆ, **ಮೈಖಲ್ ಪೂಕೋ, ಲೈಂಗಿಕ ಚರಿತ್ರೆ** (ಸಂ.1) ಯನ್ನು ವಿವರಿಸುವಾಗ, ಸಮಾಜವೊಂದು ರೂಢಿಗತ ಸಂಗತಿಗಳನ್ನು ಮುಂದುವರಿಸುತ್ತಾ, ಹೆಣ್ಣು-ಗಂಡು ಸಂಬಂಧಗಳನ್ನೇ ಗಟ್ಟಿಗೊಳಿಸುತ್ತಾ, ಅಂತಿಮವಾಗಿ ಪುರುಷಾಧಿಕಾರವನ್ನು ಸ್ಥಾಪಿಸುವ ಒಲವನ್ನು ಹೊಂದಿರುತ್ತದೆ. ಹಾಗಾಗಿ, ಆಧುನಿಕತೆಯ ಚರಿತ್ರೆಯನ್ನು ವಿವರಿಸಿಕೊಳ್ಳುವಾಗ ಈ ಸೂಕ್ಷ್ಮಗಳನ್ನು ಗಮನಿಸದಿದ್ದಲ್ಲಿ, ಮತ್ತೆ ಸಾಂಪ್ರದಾಯಿಕ ನೈತಿಕ ನಿಯಮಗಳನ್ನೇ ಆಧುನಿಕತೆ ನಡಾವಳಿಯ ಚೌಕಟ್ಟನ್ನಾಗಿ ಹಾಕಿಕೊಂಡು ಸಾಮಾಜಿಕ ಸಂಬಂಧಗಳನ್ನು ನಿಯಂತ್ರಿಸಲಾಗುತ್ತದೆ.

ಆದ್ದರಿಂದ 'ಸಮಸ್ಯೀಕರಣ' ಎನ್ನುವುದು ಮೇಲಿನ ಎರಡೂ ಸಂಗತಿಗಳನ್ನು ಗಮನಿಸುತ್ತಾ ಅವು ಬೇರೆಯಾಗಿರದೆ, ಒಂದಕ್ಕೊಂದು ಪೂರಕವಾಗಿರುವ ಪ್ರಕ್ರಿಯೆ ಎನ್ನುವುದನ್ನು ಗಮನಿಸಬೇಕಾಗುತ್ತದೆ. ಸಮಸ್ಯೀಕರಣ ಎನ್ನುವುದು ಇಲ್ಲಿ ವಿಶ್ಲೇಷಣಾತ್ಮಕ ಮಾನದಂಡವಾಗಿ ತಿಳಿವನ್ನು ನಿರ್ದಿಷ್ಟಗೊಳಿಸಿ, ಅದರ ಧೋರಣೆಗಳನ್ನು ಸ್ಪಷ್ಟೀಕರಿಸಿಕೊಳ್ಳುತ್ತದೆ. ಇದು ಯಾವತ್ತೂ ವ್ಯಕ್ತಿನಿಷ್ಟ ಮಾದರಿಯಲ್ಲೇ ಸಾಗುತ್ತಾ, ಅಂಥ ವ್ಯಕ್ತಿ ನಿಷ್ಟ ಮಾದರಿಯೂ ಸಹ ತನ್ನದೇ ಆದ ಗ್ರಹೀತಗಳಿಂದ ಮುಕ್ತವಾಗಿರುವುದಿಲ್ಲ ಎನ್ನುವುದನ್ನು ಎಚ್ಚರಿಸುತ್ತಿರುತ್ತದೆ. ಹಾಗಾಗಿ ಸಂಶೋಧನಾ ವಿನ್ಯಾಸದಲ್ಲಿ ಅದರಲ್ಲೂ ಮಾನವಿಕ ವಿಜ್ಞಾನಗಳಲ್ಲಿ ಒಪ್ಪಿತವಾಗಿರುವ ವೈಜ್ಞಾನಿಕ ವಿಧಾನವೆನ್ನುವುದು 'ಸಮಸ್ಯೀಕರಣ' ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಆದ್ದರಿಂದ ಆಧುನಿಕತೆಯನ್ನು ವೈಜ್ಞಾನಿಕವಾಗಿ ನಿರೂಪಿಸಿರುವ ಮಾದರಿಯಾದ ನ್ಯೂಟನ್‌ನ ತಿಳಿವು ಕುಸಿದು ಬಿದ್ದಿದೆ, ಏಕೆಂದರೆ ಈ ವೈಜ್ಞಾನಿಕತೆಯಲ್ಲಿ ಸಾಮಾಜಿಕ ಸಂಬಂಧಗಳೆನ್ನುವುದು ಮಾನವ ಮಾತ್ರ ನಿರ್ಧರಿಸುವಂಥದ್ದು. ಅಂದರೆ ಈ ಮಾನವ ಜೀವರಹಿತವೂ, ಯಾಂತ್ರಿಕವೂ ಆದ ಪ್ರಕೃತಿಯ ಒಡೆಯ. ಆತನ ತಿಳಿವಿನ ಮೇರೆಗೆ ಈ ಪ್ರಕೃತಿಯೂ ಬದಲಾಗುತ್ತಿರುತ್ತದೆ. ಈ ತಿಳಿವು ಸಮಸ್ಯೀಕರಣದಿಂದಾಗಿ ಬಿದ್ದು ಹೋಗಿದೆ. ಬದಲಾಗಿ, ಮಾನವ ಚೈತನ್ಯವೂ. ಅಖಂಡವೂ ಆದ ಜೀವಜಾಲವಾದ ಪ್ರಕೃತಿಯ ಭಾಗ ಮಾತ್ರ, ಈ ಸತ್ಯವು ಇಂದು ನಮ್ಮೆಲ್ಲರ ಎದುರು ಇದೆ. ಈ ಲೋಕ ದೃಷ್ಟಿಯು ನಮ್ಮನ್ನು ಏಕಕಾಲದಲ್ಲಿ

'ಆಧುನಿಕಪೂರ್ವ' ಸಮುದಾಯದ ಬಿಂಬವಾಗಿಯೂ ಮತ್ತು ಆಧುನಿಕೋತ್ತರ ಕಾಲದ ಅಸ್ತಿತ್ವವಾಗಿಯೂ ಗುರುತಿಸಿಕೊಳ್ಳುವಂತೆ ಮಾಡುತ್ತದೆ. ಅಂದರೆ, ವಾಸ್ತವದಲ್ಲಿ ನಾವು ಎಂದೂ ಸಹ ಆಧುನಿಕರಾಗಿ ಬದುಕಲಿಲ್ಲ. ಹಾಗೆಂದು ನಾವು ಭ್ರಮಿಸಿದ್ದೆವು ಅಷ್ಟೆ. ಎಂದರೆ ಈ ವಿಶ್ವದಲ್ಲಿ ನಮ್ಮನ್ನು ಬಿಟ್ಟು ಉಳಿದ ಯಾವ ಜೀವಜಾಲಕ್ಕೂ ಚೈತನ್ಯವನ್ನು ತುಂಬದೆ ಆತ್ಮ ವಂಚನೆಯನ್ನು ಮಾಡಿಕೊಂಡೆವು.

ಇಂಥ ತಿಳಿವನ್ನು ಗುರುತಿಸಿಕೊಳ್ಳದೆ 'ಸಮಸ್ಯೀಕರಣ'ದ ಪ್ರಕ್ರಿಯೆಯಲ್ಲಿ ಮುಂದುವರೆಯಲಾಗದು. ಹಾಗಾಗಿ ಸಮಸ್ಯೀಕರಣ ಎನ್ನುವ ಪ್ರಕ್ರಿಯೆಯು ಹಾಲಿ ಇರುವ ತಿಳಿವಿನ ಕ್ರಮಗಳನ್ನು ಬುಡಮೇಲು ಮಾಡುವ ಗುಣವನ್ನು ಹೊಂದಿದ್ದು, ಪಟ್ಟಭದ್ರ ಹಿತಾಸಕ್ತಿಗಳನ್ನು ಬಯಲುಗೊಳಿಸುತ್ತದೆ. ಈ ಕಾರಣದಿಂದ ಆಧುನಿಕತೆಯಿಂದ ಹೊಮ್ಮಿದ ಏಕಚಕ್ರಾಧಿಪತ್ಯವನ್ನು ಗಳಿಸಿರುವ ಬಂಡವಾಳಶಾಹಿ ಮಾರುಕಟ್ಟೆಯ ಅರ್ಥವ್ಯವಸ್ಥೆಯು ಯಾವುದೇ ದಿಟ ತಿಳಿವಿನ ಅಸ್ತಿತ್ವ ಹೊಂದದೆ ಸೋಲುತ್ತದೆ. ಎಂದರೆ ಈ ವಿವೇಚನೆಯನ್ನು ಮಾಡುವಾಗ ಸಮಸ್ಯೀಕರಣ ಎನ್ನುವುದು ನ್ಯೂಟನ್ ಮಾದರಿಯ ತಿಳಿವಿನಲ್ಲಿನ ಸಮಸ್ಯೆಗಳನ್ನು ಗುರುತಿಸಿಕೊಳ್ಳುತ್ತದೆ. ಅಂಥ ತಿಳಿವು ಎನ್ನುವುದೇ ಅಪಕಲ್ಪನೆಯಾಗಿದ್ದು ವಾಸ್ತವವನ್ನು ಮರೆಮಾಚುತ್ತದೆ.

ಆದ್ದರಿಂದ, ಸಮಸ್ಯೀಕರಣ ಎನ್ನುವ ಪರಿಕಲ್ಪನೆಯು ಒಂದು ವಿಷಯವನ್ನು ಗ್ರಹಿಸುತ್ತಲೇ ಆ ವಿಷಯದ ಸುತ್ತಲೂ ಹೆಣೆದುಕೊಂಡಿರುವ 'ಜ್ಞಾನಾಧಿಕಾರ' ಸಂಬಂಧಗಳ ಜಾಲವನ್ನು ಬಯಲುಗೊಳಿಸುತ್ತಾ, ಆ ವಿಷಯವನ್ನು ಕಟ್ಟಿರುವ ತಿಳಿವೂ ಸಹ ಒಂದು ಆಗಿರದೆ, ಬಹುವಾಗಿರುವುದನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತದೆ. ಎಂದರೆ ಒಂದು ವಿಷಯ ಎನ್ನುವ ಕಟ್ಟುವಿಕೆಯೇ ಹಲವಾರು ವಿಷಯಗಳು ಒಂದರೊಳಗೊಂದು ಹೆಣೆದುಕೊಂಡು, ಬಹು ಸಂಕೀರ್ಣವಾದ ಸ್ಥಿತಿಯಾಗಿರುತ್ತದೆ. ಎಂದರೆ ಸಮಸ್ಯೀಕರಣ ಎನ್ನುವ ಇಂಥ ಬಹುರೂಪಿ ಜ್ಞಾನ – ಅಧಿಕಾರ ಸಂಬಂಧಗಳ ಜಾಲವನ್ನು ಗುರುತಿಸಿಕೊಳ್ಳಬೇಕಾದರೆ, ಆ ವಿಷಯದ '**ವಂಶಾವಳಿ**'ಯನ್ನು ಹುಡುಕಿಕೊಳ್ಳಬೇಕಾಗುತ್ತದೆ. ಫೂಕೋನ ಪ್ರಕಾರ ಸಮಸ್ಯೀಕರಣ ಎನ್ನುವುದು ಅಂತಿಮವಾಗಿ ಸುಲಭ ಉತ್ತರಗಳು ಇಲ್ಲದ ಪ್ರಶ್ನೆಗಳ ವಂಶಾವಳಿಯ ಸರಣಿಯನ್ನು ಒಳಗೊಂಡಿರುತ್ತದೆ. ಈ ಕಾರಣದಿಂದ ಸಂಶೋಧನೆಯೆನ್ನುವುದು ಬಹುರೂಪಿಯಾದ ತಿಳಿವಿನ ಕ್ರಮಗಳಿಗೆ ಮುಖಾಮುಖಿಯಾಗುತ್ತಾ, ಹೊಸ ಬಗೆಯ ತಿಳಿವಿನ ಅನ್ವೇಷಣೆಯಲ್ಲಿರುತ್ತದೆ. ಈ ತಿಳಿವಿನ ಅನ್ವೇಷಣೆಯು ಜೈವಿಕವಾಗಿರುವುದನ್ನು "**ಸಮಸ್ಯೀಕರಣ–ವಂಶಾವಳಿ**"ಯು ಸೂಚಿಸುತ್ತದೆ.

ಇದರಿಂದಾಗಿ, ಕಳೆದ ದಶಕದಲ್ಲಿ ಎಲ್ಲಾ ಮಾನವಿಕ ವಿಜ್ಞಾನಗಳೂ ಸಹ ತಮ್ಮದೆ ಆದ ತಿಳಿವೊಂದನ್ನು ಸಂಘಟಿಸಿಕೊಂಡಾಗ, ಅವುಗಳು ಬಳಸುವ 'ಭಾಷಿಕ ವಲಯ'ವನ್ನು ಯಾವುದೇ ಸಮಸ್ಯೆ ಇಲ್ಲದೆ ಒಪ್ಪಿಕೊಂಡು ಬಿಟ್ಟಿದ್ದರು. ಆದರೆ ಈ 'ಭಾಷಿಕ ವಲಯ'ವೇ ಅಂತಿಮವಾಗಿ ಅಧಿಕಾರ ಸಂಬಂಧಗಳ ಹೆಣೆಗೆಯಾಗಿ ಸಾಮಾಜಿಕ ಯಜಮಾನಿಕೆಯನ್ನು ಸಂಘಟಿಸುತ್ತಿರುತ್ತದೆ. ಇದನ್ನೇ 'ಸಾಂಸ್ಕೃತಿಕ ಸಾಮ್ರಾಜ್ಯಶಾಹಿ' ತಿಳಿವು ಎಂದು ಅನೇಕರು ಗುರುತಿಸಿದ್ದಾರೆ. ಆದ್ದರಿಂದ, ಈ ಸಾಮಾಜಿಕ ಅಧಿಕಾರವಾಗಿರುವ 'ಭಾಷಿಕವಲಯ'ವನ್ನು ಗಮನಿಸದೇ ಹೋದಲ್ಲಿ ಸಂಶೋಧನೆಯೆನ್ನುವುದು ಜಾಣ-ಕುರುಡುತನವಾಗಿಬಿಡುತ್ತದೆ. ಈ ಕ್ರಮವನ್ನೇ ಅನುಸರಿಸುವ ಸಂಶೋಧನೆಯು 'ವಸ್ತುನಿಷ್ಠ' ನಿರೂಪಣೆಯ, ಸಮಸ್ಯೆ ಇಲ್ಲದ ತಿಳಿವಾಗಿ ಬಿಂಬಿತವಾಗುತ್ತದೆ. ಇದೊಂದು ಯಾಂತ್ರಿಕ ಮಾದರಿಯ ಮತ್ತು ಸರಳೀಕೃತ ಮಾದರಿಯ ಸಂಶೋಧನೆ ಮಾತ್ರ ಎನಿಸುತ್ತದೆ. ಇದರಿಂದ ಹೊರ ಬರಬೇಕಾದರೆ, ಮೇಲೆ ಚರ್ಚಿಸಿದ 'ಸಮಸ್ಯೀಕರಣ-ವಂಶಾವಳಿ' ಸರಣಿಯ ಮಾದರಿಯನ್ನಿಟ್ಟುಕೊಂಡು ಸಂಶೋಧನೆಯ ವಿಷಯವನ್ನು ವಿವೇಚನೆಗೆ ಒಳಪಡಿಸುವುದು ಅಗತ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ **"ಕನ್ನಡದಲ್ಲಿ ಆಡಳಿತ: ಪ್ರಭುತ್ವ ಮತ್ತು ಜನತೆ"** ವಿಷಯವನ್ನು ಸಮಸ್ಯೀಕರಿಸಲು ಪ್ರಯತ್ನಿಸಲಾಗಿದೆ. ಪ್ರಸ್ತುತ ಆಡಳಿತ ಭಾಷೆಗೆ ಇರುವ ಸ್ವರೂಪ, ಆಡಳಿತ ಭಾಷೆಯಲ್ಲಿ ಲಿಂಗೀಯ ಕುರುಡುತನವಿದ್ದು ಪುರುಷ ಧೋರಣೆಗಳನ್ನು ಮುಂದುವರೆಸಿದೆ. ಜನರ ಕನ್ನಡವನ್ನು ತಿರಸ್ಕರಿಸಿ ಅವರಿಗೆ ಅರ್ಥವಾಗದ ಅಧಿಕಾರ ಭಾಷೆಯಾಗಿ ಸಂಸ್ಕೃತ ಹಾಗೂ ಇಂಗ್ಲಿಷನ್ನು ಕನ್ನಡದ ಮೂಲಕ ಕಟ್ಟಿರುವುದನ್ನು ಕಾಣಬಹುದು. ಇಂದು ಆಡಳಿತದ ಎಲ್ಲಾ ಸ್ತರಗಳಲ್ಲಿ ಒಳಗೊಳ್ಳುವಿಕೆಯ ಬಗ್ಗೆ ನೀತಿ ನಿರೂಪಣೆಗಳನ್ನು ಮಾಡಲಾಗುತ್ತದೆ. 'ಒಳಗೊಳ್ಳುವಿಕೆ' ಎಂಬುದು ಯಾರನ್ನು ಒಳಗೊಳ್ಳುತ್ತದೆ, ಯಾರು ಒಳಗೊಳ್ಳುವಿಕೆ ಬಗ್ಗೆ ಮಾತನಾಡುತ್ತರೆ? ಏಕೆ ಮಾತನಾಡುತ್ತಾರೆ? ಯಾವ ಉದ್ದೇಶಕ್ಕಾಗಿ ಮಾತನಾಡುತ್ತಾರೆ? ಒಳಗೊಳ್ಳುವಿಕೆಯ ಅವಕಾಶವನ್ನು ಕಲ್ಪಿಸಿಕೊಡುವವರು ಯಾರು? ಯಾರಿಗಾಗಿ ಅವಕಾಶ ಕಲ್ಪಿಸುತ್ತಾರೆ? ಯಾಕೆ ಅವಕಾಶ ಕಲ್ಪಿಸುತ್ತಾರೆ ಎಂಬ ಪ್ರಶ್ನೆಗಳು ಎದುರಾಗಿ ಆಡಳಿತ ಭಾಷೆ ಮತ್ತಷ್ಟು ಸಮಸ್ಯೆಗಳನ್ನು ತಂದೊಡ್ಡುತ್ತದೆ. ಈ ಪ್ರಶ್ನೆಗಳು ಸಂಶೋಧನೆಯಲ್ಲಿ ಸಮಸ್ಯೀಕರಣದ ಬಗ್ಗೆ ಒಂದು ಆಯಾಮವನ್ನು ಮಾತ್ರ ತೋರಿಸುತ್ತದೆ. ಅಂದರೆ ಇದನ್ನು ಚಾರಿತ್ರಿಕ ಮತ್ತು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ.

4. **ಆಡಳಿತದಲ್ಲಿ ಲೀಂಗೀಯ ಕುರುಡುತನ – ಅಂದರೆ** ಪುರುಷ–ಮಹಿಳೆ, ಮಹಿಳೆ–ಪುರುಷ, ಮೇಲ್ಜಾತಿ–ಗಂಡಸು–ಮೇಲ್ಜಾತಿ ಹೆಂಗಸು; ಮೇಲ್ಜಾತಿ ಹೆಂಗಸು–ಮೇಲ್ಜಾತಿ ಗಂಡಸು; ಕೆಳಜಾತಿ ಗಂಡಸು–ಕೆಳಜಾತಿ ಹೆಂಗಸು; ಕೆಳಜಾತಿ ಹೆಂಗಸು–ಕೆಳಜಾತಿ ಗಂಡಸು; ಕೆಳಜಾತಿ

ಗಂಡಸು–ಮೇಲ್ಜಾತಿ ಹೆಂಗಸು; ಕೆಳಜಾತಿ ಹೆಂಗಸು–ಮೇಲ್ಜಾತಿ ಗಂಡಸು... (ಈ ಮೇಲಿನ ತಾತ್ವಿಕ ಅರಿಮೆಗಳನ್ನು 3ನೇ ಅಧ್ಯಾಯದಲ್ಲಿ ವಿವರಿಸಿಕೊಳ್ಳಲಾಗುವುದು)

ಈ ಎಲ್ಲಾ ನಾಗರೀಕ ಪ್ರಜೆಗಳ ನಡುವೆ ವಿಭಿನ್ನವಾದ, ವಿಚಿತ್ರವಾದ ಅಧಿಕಾರ ಸಂಬಂಧಗಳು ಏರ್ಪಟ್ಟು ಅಧ್ಯಯನ ಮಾಡುವವರನ್ನು ಈ ಬಲೆಯಲ್ಲಿ ಸಿಲುಕಿಸುತ್ತದೆ. ಇಂಥ ಸಂದರ್ಭಗಳಲ್ಲಿ ತಪ್ಪಿಸಿಕೊಳ್ಳುವ ಹುನ್ನಾರಗಳೇ ಅಧ್ಯಯನದ ವಿಧಾನಗಳಾಗಿ ಬಿಡುವ ಸಾಧ್ಯತೆಗಳು ಇರುವುದರಿಂದ, ಇವುಗಳನ್ನು ಬಿಡಿಸಿಕೊಳ್ಳುವ ತಿಳಿವುಗಳನ್ನು ಪ್ರಸ್ತುತ ಅಧ್ಯಯನ ವಿವರಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆದ್ದರಿಂದ ಪ್ರಸ್ತುತ ಅಧ್ಯಯನ ಈವರೆಗೆ ನಡೆದಿರುವ ಎಲ್ಲ ಅಧ್ಯಯನ ಮಾದರಿಗಿಂತ ಭಿನ್ನವಾದದ್ದನ್ನು ಅರಸುತ್ತದೆ. ಮಾಹಿತಿ ಸಂಗ್ರಹಿಸುವ ಮಾದರಿಯನ್ನು ಬಿಟ್ಟು ಮಾಹಿತಿಯನ್ನು ಸಂಘಟಿಸುತ್ತಿರುವ ಕರ್ತೃವನ್ನು, ಅವರ ಭಾಷಿಕ ರಚನೆಗಳನ್ನು ಬಿಟ್ಟು ಮೂರನೆಯ ಆಯಾಮವನ್ನು ಇಲ್ಲಿ ಅಧ್ಯಯನ ಶೋಧಿಸುತ್ತದೆ. ಅಂದರೆ ಅಕ್ಷರ ಮಾಧ್ಯಮದಲ್ಲಿ ಆಡಳಿತ ಭಾಷೆ ದಾಖಲಾಗಿರುವುದು ಕನಿಷ್ಠ ಎಂದೇ ಹೇಳಬೇಕಾಗುತ್ತದೆ. ಅಕ್ಷರ ಎನ್ನುವುದು ಅದರದ್ದೇ ಆದ ಅಧಿಕಾರದ ಜಾಲದಲ್ಲಿರುವುದರಿಂದ ಮಾತನಾಡುವವರ ಏಣಿ–ಶ್ರೇಣಿ ತುಮುಲಗಳಿಗೆ ಪೂರಕವಾಗಿ ಮಾತನಾಡುವವರ ಮಾತುಗಳನ್ನು ಅಧೀನಕ್ಕೊಳಪಡಿಸುತ್ತದೆ. ಇಲ್ಲಿ ಕೆಲವರ ಮಾತುಗಳಿಗೆ ಅಸಹಾಯಕತೆಯ ಆವರಣ ತೊಡಿಸಿದರೆ, ಮತ್ತೆ ಕೆಲವರಿಗೆ ಅಂದರೆ ಅಕ್ಷರ ಗೊತ್ತಿರುವವರಿಗೆ ಮನ್ನಣೆಯ ಅವಕಾಶವನ್ನು ಕಲ್ಪಿಸುತ್ತಿರುತ್ತದೆ. ಇಂಥ ಸನ್ನಿವೇಶದಲ್ಲಿ ಅಧ್ಯಯನ ನಡೆಸುವಾಗ ಆಡಳಿತದಲ್ಲಿ ಒಳಗೊಳ್ಳುವ ವಿನ್ಯಾಸಗಳು ಎನ್ನುವಾಗ, ಅದೆಲ್ಲೊ ಹೊರಗಡೆ ಅಥವಾ ನಿರ್ವಾತದಲ್ಲಿ ರಚನೆಯಾಗುವುದಿಲ್ಲ. ಅದು ನಡೆಯುವುದು ಯಾವತ್ತೂ ಸಹ ತಿಳಿವು ಎನ್ನುವ ಅಧಿಕಾರಸಂಬಂಧಿ ನೆಲೆಯಲ್ಲಿ ಎನ್ನುವುದನ್ನು ಗಮನದಲ್ಲಿಟ್ಟು, ದಿನನಿತ್ಯದ ಅನುಭವಗಳನ್ನು ಮತ್ತು ಮಾತಿನಲ್ಲಿ ನಿರೂಪಿಸಿರುವ ಪ್ರತಿರೋಧದ ನೆಲೆಗಳನ್ನು ಅನುಸರಿಸಿ ಆಡಳಿತಾತ್ಮಕ ನೆಲೆಯನ್ನು ನಿರೂಪಿಸುವ ಜರೂರನ್ನು ಪ್ರಸ್ತುತ ಅಧ್ಯಯನ ಸವಾಲಾಗಿ ಸ್ವೀಕರಿಸಿ ಮುನ್ನಡೆಯುತ್ತದೆ.

ಹೀಗೆ, ಇಲ್ಲಿಯವರೆಗೆ ಮರೆಮಾಚಿದ ಕನ್ನಡದ ತಿರುಳನ್ನು ಅದರ ಪಾರಂಪರಿಕ ಬಹುತ್ವದ ನೆಲೆಗಟ್ಟಿನಲ್ಲಿ ಮರುಶೋಧಿಸಿಕೊಳ್ಳಲಾಗುತ್ತದೆ. ಈ ನಡಿಗೆಯ ನೆಲೆಗಳನ್ನು 'ಕನ್ನಡದ್ದೇ ಆದ ಬೌದ್ಧಿಕ ಪರಂಪರೆಗಳ ಮೂಲಕ ಶೋಧಿಸಬೇಕೆನ್ನುತ್ತಾರೆ' ಡಿ.ಆರ್.ನಾಗರಾಜ್. ಆಗ ಕನ್ನಡದ ತಿರುಳು:

> "ತೀವ್ರವಾಗಿ ಅಂತರ್ಮುಖಿಯಾಗಿ ಬೆಳೆಯುತ್ತ ಹೋಗುತ್ತದೆ. ಅಂದರೆ ಅದರ ಶಕ್ತಿ ಸಂವರ್ಧಿಸುತ್ತದೆ. ನವವಸಾಹತೀಕರಣದಿಂದ ಪಾರಾಗಲು ಇದೊಂದು

ಸಮರ್ಥ ದಾರಿ... ವಸಾಹತೀಕರಣದ ಮೂಲ ಲಕ್ಷಣವೆಂದರೆ ನಮ್ಮಿಂದ ಕಚ್ಚಾ ಪದಾರ್ಥಗಳನ್ನು ತೆಗೆದುಕೊಂಡು, ಅವನ್ನೇ ಸಿದ್ಧಸರಕುಗಳನ್ನಾಗಿಸಿ, ಮತ್ತೆ ನಮಗೇ ಮಾರುವುದು. ಶೈಕ್ಷಣಿಕವಾಗಿ ಕೂಡಾ ಈ ವ್ಯಾಪಾರ ಕಳೆದ ನೂರು ವರ್ಷಗಳಿಂದ ನಡೆಯುತ್ತಿದೆ. ನಮ್ಮದು ಏನಿದ್ದರೂ ಮಾಹಿತಿ ಸಂಗ್ರಹದ ಕ್ಷೇತ್ರ ಫೀಲ್ಡ್‌ವರ್ಕ್‌ನ ಸ್ಥಳ. ಆದರೆ, ಸಿದ್ಧಾಂತಗಳು ಹೊರಗಿನವು. ಸಂಸ್ಕೃತಿಯೊಂದು ಚಾರಿತ್ರಿಕವಾಗಿ, ಸಮಕಾಲೀನವಾಗಿ ರೂಪಿಸಿಕೊಂಡಿರುವ ಆತ್ಮಜ್ಞಾನದ ಪರಂಪರೆಗಳಿಂದ ಮಾಹಿತಿಯನ್ನು ಬೇರ್ಪಡಿಸಿ ನೋಡುವ ಸಂಶೋಧನೆ ಅದು. ಶೈಕ್ಷಣಿಕ ಸಂಶೋಧನೆಗೆ ಬರೇ ಕಚ್ಚಾ ಪದಾರ್ಥವಾಗುವ ಅವಮಾನಕಾರೀ ವ್ಯಾಪಾರವನ್ನು ಇಲ್ಲೇ ಒಲ್ಲೆ ಎಂದಾಗ ಮಾತ್ರ ಸಂಸ್ಕೃತಿಯೊಂದರ ಆತ್ಮಗೌರವ ವರ್ಧಿಸುತ್ತದೆ"[10]

"ಕನ್ನಡದಲ್ಲಿ ಆಡಳಿತ: ಪ್ರಭುತ್ವ ಮತ್ತು ಜನತೆ" ಎನ್ನುವ ವಿಷಯವನ್ನು ವಿಶ್ಲೇಷಣೆಗೆ ಒಳಪಡಿಸುವಾಗ ಈ ಕೆಳಗಿನ ಆಕರಗಳನ್ನು ಪ್ರಧಾನವಾಗಿ ಪರಿಶೀಲಿಸಲಾಗುವುದು:

1. ವಸಾಹತುಶಾಹಿ ಆಳ್ವಿಕೆಯಲ್ಲಿ ಜಾರಿಗೆ ತಂದ ಆಡಳಿತ ಭಾಷಾ ಅಧಿನಿಯಮಗಳು ಮತ್ತು ಮೈಸೂರು ಆಡಳಿತದ ಸಂದರ್ಭದಲ್ಲಿ ಹೊರಬಂದ ಭಾಷಾ ನೀತಿಗಳು
2. ಭಾಷಾವಾರು ಪ್ರಾಂತ್ಯದ ಬೇಡಿಕೆಗಳು ಮತ್ತು ಆ ಸನ್ನಿವೇಶದಲ್ಲಿ ತಳೆದಿರುವ ನಿಲುವುಗಳು ಮತ್ತು ಹೊರಡಿಸಿರುವ ಆಡಳಿತಾತ್ಮಕ ಆದೇಶಗಳು.
3. ಸ್ವಾತಂತ್ರ್ಯನಂತರದ ಕರ್ನಾಟಕ ಸರ್ಕಾರದ ನಡಾವಳಿಗಳು, ನಡೆದಿರುವ ಚರ್ಚೆಗಳು ಮತ್ತು ಕನ್ನಡ ಆಡಳಿತ ಭಾಷೆಯನ್ನಾಗಿಸಲು ತೆಗೆದುಕೊಂಡ ಆದೇಶ/ಸುತ್ತೋಲೆಗಳು ಮತ್ತು ಅಧಿನಿಯಮಗಳು
4. ಕನ್ನಡದಲ್ಲಿ ಆಡಳಿತವನ್ನು ಜಾರಿಯಾಗಿಸುವ ನಿಟ್ಟಿನಲ್ಲಿ ರಚಿತವಾದ ಆಯೋಗದ ವರದಿಗಳು.
5. ಆಡಳಿತದ ಭಾಗವಾಗಿ ಶಿಕ್ಷಣ, ಕಂದಾಯ, ಆರೋಗ್ಯ, ವಾಣಿಜ್ಯ ಮೊದಲಾದ ವಲಯಗಳಲ್ಲಿ ಬಳಸುತ್ತಿರುವ ಪ್ರಭುತ್ವ ಮತ್ತು ಜನತೆಯ ನಂಟಿನ ನಮೂನೆಗಳು.
6. ಆಡಳಿತಕ್ಕಾಗಿ ಬಳಸುತ್ತಿರುವ ಭಾಷಿಕ ನಡೆಗಳ ಒಳಗುರುತುಗಳು
7. ಸರಕಾರಿ ಇಲಾಖೆಗಳ ನಡುವಿನ ನಂಟನ್ನು ನಿಭಾಯಿಸಲು ಬಳಸುತ್ತಿರುವ ಭಾಷಿಕ ದಾಖಲೆಗಳು.

[10]ಅಗ್ರಹಾರ ಕೃಷ್ಣಮೂರ್ತಿ (ಸಂ), 2006, ಸಂಸ್ಕೃತಿ ಕಥನ, ಡಿ.ಆರ್. ನಾಗರಾಜ್, ಸಮಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು.73

ಮೇಲಿನ ಆಕರಗಳ ಭಾಷಿಕ ಮತ್ತು ರಾಚನಿಕ ಸ್ವರೂಪವನ್ನು ಬಿಡಿಸಿ ವಿವರಿಸಿಕೊಳ್ಳಲಾಗಿದೆ. ಆ ಮೂಲಕ ಅವುಗಳ ಹಿಂದಿನ ಸಾಮಾಜಿಕ ಆಯಾಮಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತಾ ಸಂಶೋಧನೆಯ ಸಿದ್ಧಾಂತದ ದಾರಿಯನ್ನು ಕಟ್ಟಿಕೊಳ್ಳಲಾಗಿದೆ.

4. ಅಧ್ಯಯನದ ವಿಭಾಗೀಕರಣ:

1. ಅಧ್ಯಯನದ ಗುರಿ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಈ ಭಾಗದಲ್ಲಿ ಪ್ರಸ್ತುತ ಸಂಶೋಧನಾ ವಿಷಯವಾದ **'ಕನ್ನಡದಲ್ಲಿ ಆಡಳಿತ: ಪ್ರಭುತ್ವ ಮತ್ತು ಜನತೆ'** ಗೆ ಪೂರಕವಾದ ಪರಿಕಲ್ಪನೆಗಳ ಮತ್ತು ಪರಿಭಾಷೆಗಳ ಹಿನ್ನೆಲೆಯಲ್ಲಿ ಅಧ್ಯಯನದ ವೈಧಾನಿಕತೆಯನ್ನು ರೂಪಿಸಿಕೊಳ್ಳಲಾಗುವುದು.

2. ಇದುವರೆಗಿನ ಅಧ್ಯಯನಗಳು: ಬಗೆಹರಿಯದ ತಾತ್ವಿಕ ಪ್ರಶ್ನೆಗಳು:

ಈ ಭಾಗದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಪೂರಕವಾದ ಅಧ್ಯಯನ ಕೃತಿಗಳ ವಿವೇಚನೆಯನ್ನು ಮಾಡಲಾಗುವುದು. ಆಡಳಿತ ಭಾಷೆ ಸ್ವರೂಪ, ಆಡಳಿತ ಭಾಷೆಯಾಗಿ ಕನ್ನಡದ ಎದುರಿಗಿರುವ ಸವಾಲುಗಳು, ಭವಿಷ್ಯಕ್ಕೆ ಯಾವ ರೀತಿ ಆಡಳಿತ ಭಾಷೆಯಾಗಿ ರೂಪಿಸಿಕೊಳ್ಳುವ ಬಗೆಗಳ ಕುರಿತಂತೆ ಕೆಲವು ಮುಖ್ಯ ಕೃತಿಗಳನ್ನು ವಿಶ್ಲೇಷಣೆಗೆ ತೆಗೆದುಕೊಂಡು ಪ್ರಸ್ತುತ ಅಧ್ಯಯನದ ಮಹತ್ವ ಮತ್ತು ಮಿತಿಗಳನ್ನು ಹಾಗೂ ಅದರ ವೈಧಾನಿಕತೆಯನ್ನು ನಿರೂಪಿಸಿಕೊಳ್ಳಲಾಗುವುದು.

3. ಆಡಳಿತ ಕನ್ನಡ ಬಳಕೆ: ತಾತ್ವಿಕ ತೊಡಕುಗಳು:

ಪ್ರಭುತ್ವ ಮತ್ತು ಜನತೆಯ ಒಡನಾಟವನ್ನು ಆಗುಮಾಡಿಕೊಂಡಿರುವ ಕರ್ನಾಟಕ ಆಡಳಿತವು ಒಂದು ವಿಶಾಲವಾದ ಚೌಕಟ್ಟನ್ನು ಒಳಗೊಂಡಿದೆ. 6 ಕೋಟಿಗೂ ಮೀರಿದ ಜನಬಾಹುಳ್ಯವಿದ್ದು 30 ಜಿಲ್ಲೆಗಳಲ್ಲಿ ಹರಡಿಕೊಂಡಿರುವ ಕನ್ನಡ ಸಮಾಜವು ನೂರಾರು ಬಗೆಯ ಸರಕಾರಿ ಇಲಾಖೆಗಳ ಮೂಲಕ ನೋಡಿಕೊಳ್ಳಲ್ಪಡುತ್ತಿದೆ. ಇದರ ವಿನ್ಯಾಸ, ಆಡಳಿತದ ಹೊಣೆಗಾರಿಕೆಗಳನ್ನು ಪರಿಚಯಿಸಿಕೊಡುವ ಅಧ್ಯಾಯ ಇದಾಗಿದೆ. ಈ ಮೂಲಕ ಆಡಳಿತವು ನಿಜವಾಗಿಯೂ ಎದುರುಗೊಳ್ಳಬೇಕಾದ ವಾಸ್ತವವನ್ನು ಗ್ರಹಿಸಲಾಗುತ್ತದೆ. ಈ ಭಾಗದಲ್ಲಿ ಆಡಳಿತ ಭಾಷೆಯಾದ ಕನ್ನಡವು ಇಂದು ಜನ ಬಳಸುವ ಭಾಷೆಯ ಪರಿಸರವನ್ನು ಬಿಟ್ಟು, ತಮ್ಮದಲ್ಲದ ಮತ್ತು ಹೊರಗಿನ ತಿಳಿವಿನಿಂದ ಹೇರಿರುವ ಪ್ರಮಾಣಬದ್ಧ

ಕನ್ನಡ ಭಾಷೆಯನ್ನು ಬಳಸುವಂತೆ ಒತ್ತಡವನ್ನು ಹೇರಲಾಗಿದೆ. ಈ ಒತ್ತಡಗಳು ಹೇಗೆ ಬಂದಿವೆ ಮತ್ತು ಅವುಗಳನ್ನು ಬಗೆಹರಿಸಿಕೊಳ್ಳುವ ಬಗೆಗಳನ್ನು ಇಲ್ಲಿ ಚರ್ಚಿಸಲಾಗುವುದು.

4. ಆಡಳಿತದಲ್ಲಿ ಮಹಿಳೆ ಮತ್ತು ತಳಸಮುದಾಯಗಳಿಗೆ ಎದುರಾಗುವ ಭಾಷಿಕ ಸಂಕಟಗಳು:

ದಮನಿತರಾದ ದಲಿತ ಮತ್ತು ಮಹಿಳಾ ಸಮುದಾಯಗಳು ಪಾಲ್ಗೊಂಡಾಗ ಎದುರಾಗುವ ಭಾಷಿಕ ತೊಡಕುಗಳು (ಸೆಕ್ಯುಲರ್ ಭಾಷಿಕ ನೆಲೆಗಟ್ಟಿನ ಅರ್ಥೈಸುವಿಕೆಯ ಸವಾಲುಗಳು:) ಈ ಅಧ್ಯಾಯದಲ್ಲಿ ಆಡಳಿತ ಭಾಷೆಯನ್ನು ಪುರುಷನ ಅಧಿಕಾರವನ್ನು ಕಾಯ್ದುಕೊಳ್ಳಲೆಂದೇ ನಿರೂಪಿಸಿರುವ ಕ್ರಮಗಳನ್ನು ಚರ್ಚಿಸುತ್ತಲೇ, ಅದು ಹೇಗೆ ಲಿಂಗೀಯ ಕುರುಡುತನವನ್ನು ಕಾಯ್ದುಕೊಂಡಿದ್ದು, ಮಹಿಳಾ ಭಾಷೆಯನ್ನು ನಿರ್ಲಕ್ಷಿಸಿದೆ ಎನ್ನುವುದನ್ನು ಕುರಿತು ವಿವೇಚಿಸಲಾಗುವುದು

5. ಕನ್ನಡದಲ್ಲಿ ಆಡಳಿತ: ಸಂಸ್ಕೃತ ವಿನ್ಯಾಸದ ತೊಡಕುಗಳ ಸ್ವರೂಪ:

ಈ ಅಧ್ಯಾಯದಲ್ಲಿ ಸಂಸ್ಕೃತ ಸತ್ತ ಭಾಷೆಯಾಗಿದ್ದರೂ ಸಹ, ಅದು ಕನ್ನಡದಲ್ಲಿ ಪರಾವಲಂಬಿಯಾಗಿ ಸೇರಿಕೊಂಡಿರುವುದನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದು. ಹಾಗೆ ಚರ್ಚೆ ಮಾಡುವಾಗ ಇಲ್ಲಿನ ಜನಗಳ ಭಾಷೆಯಾದ ಕನ್ನಡವನ್ನು ಅದು ತನಗೆ ಪೂರಕವಾಗಿ ಸಂಘಟಿಸಿರುವುದಲ್ಲದೆ, ಜನಭಾಷೆಯನ್ನು ಶಿಷ್ಟ-ಪರಿಶಿಷ್ಟ ನೆಲೆಯಲ್ಲಿ ವರ್ಗೀಕರಿಸಿ, ಶ್ರೇಣೀಕೃತ ಮೌಲ್ಯವ್ಯವಸ್ಥೆಯನ್ನು ರೂಪಿಸಿರುವ ಕುರಿತು ವಿಶ್ಲೇಷಣೆ ನಡೆಸಲಾಗುವುದು.

6. ಕನ್ನಡದಲ್ಲಿ ಆಡಳಿತ: ಇಂಗ್ಲಿಶ್ ತೊಡಕಿನ ಸ್ವರೂಪ: ಈ ಭಾಗದಲ್ಲಿ ಸ್ಥಳೀಯ ಜನ ಬದುಕನ್ನು ನಿಯಂತ್ರಿಸುತ್ತಿರುವ ಇಂಗ್ಲಿಷ್ ತಿಳಿವಿನ ಕುರಿತು ಚರ್ಚೆ ನಡೆಸಲಾಗುವುದು. ಅದು ಹೇಗೆ ಜನರನ್ನು ತಮ್ಮದೇ ಆದ ಬದುಕಿನ ತಿಳಿವಿನಿಂದ ಪರಕೀಯಗೊಳಿಸಿ, ಅತಂತ್ರರನ್ನಾಗಿಸಿದೆ ಎನ್ನುವುದನ್ನು ಚರ್ಚಿಸಲಾಗುವುದು.

7. ಕನ್ನಡದಲ್ಲಿ ಆಧುನೀಕರಣ ಮತ್ತು ಕಂಪ್ಯೂಟರೀಕರಣ:

ಸ್ವಾತಂತ್ರ್ಯೋತ್ತರ ಕನ್ನಡ/ಕರ್ನಾಟಕದ ಜನಸಮುದಾಯಗಳನ್ನು ಹಾಗೂ ಆಡಳಿತ ಕನ್ನಡವನ್ನು ಗಮನಿಸಿದರೆ ಈ ಕೆಳಗಿನ ಸಂಗತಿಗಳು ಎದ್ದು ಕಾಣುತ್ತವೆ:

ಅ) ಕನ್ನಡ ತಿಳಿವು ಎನ್ನುವುದು ಜನಸಮುದಾಯಗಳ ನುಡಿಪಯಣದಿಂದ ಹೊರಗುಳಿದು, ಸಾಹಿತ್ಯ ಸಮಾವೇಶ–ಸರ್ಕಾರ–ಘೋಷಣೆಗಳ ಕಡತ ಇವುಗಳಲ್ಲೇ ಮುಳುಗಿ ಹೋಗಿರುವುದು.

ಆ) ಕನ್ನಡ ತಿಳಿವು ಎನ್ನುವುದು ಪ್ರಮಾಣೀಕರಣಗೊಂಡ ನಡೆಯಾಗಿ ಇಂಗ್ಲಿಷ್ ತಿಳಿವಿನೊಡನೆ ಸಂಸ್ಕೃತದ ತಿಳಿವು ಮತ್ತು ನುಡಿಗಟ್ಟನ್ನು ಧರಿಸಿಕೊಂಡು ಅದೇ ದಿಟವಾದುದೆಂದು ಬಿಂಬಿಸುತ್ತಿರುವುದು.

ಇ) ಈ ನಡುವೆ ಜನ ಹೋರಾಟಗಳು, ನಿಜವಾದ ಒಳನುಡಿ ಪಯಣವನ್ನು ಗಮನಿಸುತ್ತವಾದರೂ ಪ್ರಭುತ್ವದ ಕಪಿಮುಷ್ಟಿಯಿಂದ ಕನ್ನಡವನ್ನು ಹೊರತರಲು ಆಗದೇ ಇರುವುದು.

ಈ) ಕನ್ನಡ ತಿಳಿವಿನಲ್ಲಿ ಶಿಕ್ಷಣ "ಮಾಧ್ಯಮ ಪ್ರಶ್ನೆ' ಯನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸಿದರೂ ಸಹ ಕಾನೂನಾತ್ಮಕವಾಗಿ ಅದು "ಇಂಗ್ಲಿಶ್ – ಹಿಂದಿ – ಕನ್ನಡ" ಎಂದಾಗಿರುವುದು.

ಉ) ಈ ನಡುವೆ ಜಾಗತೀಕರಣದ ಪ್ರಕ್ರಿಯೆ, ಮಾಹಿತಿ ಕ್ರಾಂತಿ ಮತ್ತು ತಂತ್ರಜ್ಞಾನದಿಂದ, ಮಹತ್ವದ ಪಲ್ಲಟಗಳು ಕನ್ನಡದಲ್ಲಿ ಉಂಟಾಗಿರುವುದು ದಿಟ. ಆದರೆ ಇದು ಸಣ್ಣ ಸಮುದಾಯಗಳ, ಅವರ ನುಡಿಪಯಣಗಳನ್ನು ಕತ್ತುಹಿಸುಕುವ ರಾಜಕಾರಣವಾಗಿ ನಿಂತಿರುವುದು.

ಊ) ಡಿಜಿಟಲ್ ತಂತ್ರಜ್ಞಾನದ ಪರಿಣಾಮವಾಗಿ ಆಧುನಿಕ ಪ್ರಭುತ್ವಗಳು ಸಂಕೀರ್ಣವಾದ ಸಮಸ್ಯೆಯನ್ನು ಇಂದು ಎದುರಿಸುತ್ತಿವೆ. ಎಲ್ಲಾ ಸರ್ಕಾರಗಳು ಮುಕ್ತ ಮಾರುಕಟ್ಟೆಯ ಆರ್ಥಿಕತೆಯನ್ನು ಒಪ್ಪಿಕೊಂಡಿದೆ. ಡಿಜಿಟಲ್ ತಂತ್ರಜ್ಞಾನದ ಮುಂದುವರಿಕೆಯು ಇದೇ ಆರ್ಥಿಕತೆಯ ಭಾಗವಾಗಿದೆ. ಇಂದು ತಂತ್ರಜ್ಞಾನ ಬೆಳೆಯುತ್ತಿರುವ ವೇಗಕ್ಕೆ ಸ್ಪಂದಿಸುವ ಸಾಂಸ್ಥಿಕ ಮನಸ್ಥಿತಿ ಸರ್ಕಾರಗಳಿಗೆ ಇಲ್ಲ. ಇದನ್ನು ತಂತ್ರಜ್ಞಾನದ ಸಹಜ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವ ನಿಯಂತ್ರಣ ತತ್ಪರತೆಯನ್ನು ಕಾಣಬಹುದು.ಇದು ಜನತಂತ್ರ ವ್ಯವಸ್ಥೆಗೆ ವಿರುದ್ಧವಾಗಿರುವಂತಹುದು.

ಆದ್ದರಿಂದ ಕನ್ನಡದಲ್ಲಿ ಆಧುನೀಕರಣ ಮತ್ತು ಕಂಪ್ಯೂಟರೀಕರಣವೆಂದರೆ ಎಲ್ಲಾ ಕನ್ನಡಿಗರು ಖಾಸಗೀ ಕಂಪ್ಯೂಟರ್‌ನಿಂದ ಹೊರಬಂದು ಮುಕ್ತ ಮತ್ತು ಸ್ವತಂತ್ರ ತಂತ್ರಾಂಶವನ್ನು ಬಳಸಿಕೊಂಡು ತಮ್ಮ ನಾಳೆಗಳನ್ನು ತಮ್ಮದೇ ಆದ ಆಧುನೀಕತೆಗಳಲ್ಲಿ ನೆಲೆಗೊಳಿಸಿಕೊಳ್ಳುವುದು ಮುಖ್ಯವಾಗುತ್ತದೆ.

8. ಕನ್ನಡ ಬಳಕೆ: ಸರಕಾರಿ ಆಡಳಿತ ಮತ್ತು ಜನಬದುಕು:

ಇವತ್ತು ಕನ್ನಡನಾಡು ಮತ್ತು ಕನ್ನಡ ನುಡಿಯ ನಂಟಿನಲ್ಲಿ ಜನಬದುಕುಗಳು ಎದುರಿಸುತ್ತಿರುವ ಇಕ್ಕಟ್ಟುಗಳು ಯಾಕೆ? ಇದು ಆಳುತ್ತಿರುವವರ ಸಮಸ್ಯೆಯೇ? ಸಂವಿಧಾನದ ತೊಡಕೇ? **'1 ರಿಂದ 7ನೇ ತರಗತಿವರೆಗೆ ಕನ್ನಡ ಇಲ್ಲವೇ ಯಾವುದೇ ತಾಯಿನುಡಿಯಲ್ಲಿ ಕಲಿಯಬೇಕು ಎಂದು 1994ರಲ್ಲಿ ಕರ್ನಾಟಕ ಸರಕಾರ ಹೊರಡಿಸಿರುವ ಅದೇಶ ವಿವಾದಾತ್ಮಕ'** ಎನ್ನುವುದು ಹೇಗೆ? ದೇಶ ಮತ್ತು ವಿದೇಶಗಳೊಂದಿಗೆ ನಂಟನ್ನು ಆಗುಮಾಡಿಕೊಳ್ಳಲು ಇಂಗ್ಲಿಶ್ ಮತ್ತು ಹಿಂದಿಯನ್ನು ನೆಚ್ಚಿಕೊಂಡು ಮುನ್ನೆಲೆಗೆ ತರಲು ಪ್ರಯತ್ನಿಸುತ್ತಿರುವವರ ನಿಲುವುಗಳೇನು? 'ಒಂದು ತರಗತಿಯಲ್ಲಿ ಬೇರೆಬೇರೆ ತಾಯಿನುಡಿಯವರು ಇದ್ದರೆ ಹೇಗೆ ಕಲಿಸುತ್ತೀರಿ' ಎನ್ನುವ ನಮ್ಮದೇ ಕೋರ್ಟಿನ ಪ್ರಶ್ನೆಯನ್ನು ಹೇಗೆ ನೋಡಬೇಕು? ನಾಡಿನ ಆಳ್ವಿಕೆ 'ಕಲಿಕೆಯ ಖಾಸಗೀಕರಣ'ಗಳ ಜಗಳವನ್ನು ನಿವಾರಿಸಲು ಹೊರಟಿರುವ ಕೋರ್ಟುಗಳೂ ಕೂಡ ಹೊರುತ್ತಿರುವ ನಾಡಿನ ಹೊಣೆಯ ಬಗೆ ಯಾವುದದು? 'ಯಾವ ನುಡಿಯ ಮೂಲಕ ಕಲಿಯಬೇಕು ಎನ್ನುವ ಆಯ್ಕೆಯನ್ನು ಮಗುವಿನ ಹೊಣೆ ಹೊತ್ತವರಿಗೆ ಬಿಡಬೇಕು' ಎನ್ನುವ ಕೋರ್ಟು ಸಂವಿಧಾನಕ್ಕೆ ಬದ್ದವಾಗಿ ಕಟ್ಟಿಕೊಂಡಿರುವ ನುಡಿಗುರುತಿನ ನಾಡುಗಳ ಜನಬದುಕನ್ನು ಹೇಗೆ ನೋಡುತ್ತದೆ? ಯಾವ ನುಡಿಯ ಮೂಲಕ ಕಲಿಯಬೇಕು ಎನ್ನುವವರ ಮಾತಿನ ಕಟ್ಟುನಿಟ್ಟಾದ ಒಳಗುಟ್ಟು 'ಇಂಗ್ಲಿಶೇ' ಆಗಿಬಿಟ್ಟಿದೆ ಎನ್ನುವುದು ಕೊಂಕು ಮಾತಂತೂ ಅಲ್ಲವಲ್ಲ?.

ಒಂದು ನಾಡಿನ ಜನಬದುಕು ಮತ್ತು ಆ ಜನಬದುಕನ್ನು ಕಾಪಿಟ್ಟುಕೊಳ್ಳಬೇಕಾದ ಸರಕಾರಗಳು ಕಾನೂನು ಕಟ್ಟಳೆಗಳ ಮೂಲಕ ಸ್ಥಳೀಯ ಸನ್ನಿವೇಶಕ್ಕೆ ಎದುರಾದರೆ, ಎರಡು ಬಗೆಯ ತೊಡಕುಗಳು ಎದ್ದು ಕಾಣುತ್ತವೆ. 1. ನಾಡಿನ ನುಡಿಯನ್ನು ತಾಯಿನುಡಿ(ಮಾತೃಭಾಷೆ)ಯನ್ನಾಗಿ ಗ್ರಹಿಸುವಲ್ಲಿನ ಸರಕಾರ, ಕಾನೂನು, ಕಟ್ಟಳೆಗಳ ತೊಡಕು. 2. ಡೆಮಾಕ್ರಸಿಯನ್ನು ಒಂದು ನುಡಿಯ ಜನಬದುಕನ್ನು ಹತ್ತಿಕ್ಕುವಂತೆಯೂ ವಿವರಿಸಿಕೊಳ್ಳಬಹುದಾದ ತೊಡಕು. ಯಾಕೆಂದರೆ, ಜನಾಡಳಿತ ಎನ್ನುವಾಗ ಅದರೊಳಗೆ ಕಂಡುಕೊಂಡಿರುವ 'ಸಿಟಿಜನ್‌ಶಿಪ್' ಯಾವ ಬಗೆಯದು? ಹೇಗೆ? ಎನ್ನುವ ಪ್ರಶ್ನೆಗಳು ಇದ್ದೇ ಇರುತ್ತವೆ ತಾನೇ? ಎಂಬ ಬಗ್ಗೆ ಚರ್ಚಿಸಲಾಗಿದೆ.

9. ಮುಂದಿನ ಆಡಳಿತ: ಭಾಷಿಕ ನಡೆಯ ದಾರಿ:

ಕನ್ನಡ ನುಡಿ, ಕನ್ನಡನಾಡು ಮತ್ತು ಇಲ್ಲಿನ ಜನಬದುಕು 'ಸಂಸ್ಕೃತ' ಇಲ್ಲವೇ 'ಇಂಗ್ಲಿಶ್' ಎಂಬ ಹೊರಗಿನ ನುಡಿ ಮತ್ತು ಚಿಂತನೆಗಳ ಆಕ್ರಮಣದಲ್ಲಿ ಮಾತ್ರವೇ ಬದುಕಬಲ್ಲುದು. ಈ ನಿಟ್ಟಿನಲ್ಲಿ:

- ಕನ್ನಡದ ನೆಪದಲ್ಲಿ ಬಳಸುತ್ತಿರುವ ಅಗತ್ಯವಲ್ಲದ 'ಸಂಸ್ಕೃತ' ಪದಗಳ ಬಳಕೆಯನ್ನು ನಿಲ್ಲಿಸಿ ಎಲ್ಲರಿಗೂ ತಿಳಿಯುವಂತಹ ಕನ್ನಡವನ್ನು ಬಳಸಬೇಕಾಗಿದೆ.
- 'ಸಂಸ್ಕೃತ'ದಿಂದಲೇ ಕನ್ನಡ ಬದುಕುತ್ತದೆ ಎನ್ನುವ ನಿಲುವನ್ನು ದೂರ ಇಡಬೇಕಾಗಿದೆ.
- ಇದನ್ನು ಸಪೋರ್ಟ್ ಮಾಡುತ್ತಾ 'ಸಂಸ್ಕೃತ ಚಿಂತನೆ'ಯೇ ಕನ್ನಡ ಚಿಂತನೆ ಎಂದು ನಂಬಿಸುತ್ತಿರುವ ದಾರಿಗಳನ್ನು ತಡೆದು ಕನ್ನಡ ಜನಬದುಕಿನ ನೆಲೆಯನ್ನೇ ಚಿಂತನೆಯ ಜಾಡಾಗಿ ಬಳಸಬೇಕಾಗಿದೆ.
- ಜಗತ್ತಿನ ತಿಳಿವೆಲ್ಲವೂ 'ಇಂಗ್ಲಿಶ್'ನಲ್ಲಿಯೇ ಇದೆ ಎನ್ನುವ ತಪ್ಪು ತಿಳಿವನ್ನು ಕನ್ನಡ ತಿಳಿವಿನ ಮೂಲಕ ಕಳೆಯಬೇಕಾಗಿದೆ.
- ಅದಕ್ಕಾಗಿ ತಿಳಿವನ್ನು ಕಲಿಯುವ, ಅರಿಯುವ ದಾರಿಗಳು ಕನ್ನಡದಲ್ಲಿಯೇ ಇವೆಯೆಂಬುದನ್ನು ತೋರಿಸಿಕೊಡಬೇಕಾಗಿದೆ.
- ಕರ್ನಾಟಕದ ಜನಬದುಕಿನ ಹೆಚ್ಚುಗಾರಿಕೆಯನ್ನು ಹೊರಜಗತ್ತಿನ ಜೊತೆಯಲ್ಲಿ ಉಳಿಸಿಕೊಳ್ಳಬೇಕಾದರೆ ಕಲಿಕೆಯನ್ನು ಕನ್ನಡದಲ್ಲಿಯೇ ಆಗುಮಾಡಬೇಕಾಗಿದೆ.
- ಕರ್ನಾಟಕವನ್ನು ಆಳುತ್ತಿರುವವರು ಕನ್ನಡ ಜನಬದುಕಿನ ಬೆಳವಣಿಗೆಗಾಗಿಯೆ ದುಡಿಯಬೇಕಾಗಿದೆ ಎನ್ನುವುದನ್ನು ಮೊದಲು ತಿಳಿಯಬೇಕಾಗಿದೆ.
- ಅದಕ್ಕಾಗಿ ಆಡಳಿತವನ್ನು ಜನಮಾತಿನಲ್ಲಿ, ಜನಮಾತಿಗೆ ಹತ್ತಿರವಿರುವಂತೆ ರೂಪಿಸಬೇಕಾಗಿದೆ.
- ಹೊರಗಿನದನ್ನು ಏನನ್ನೇ ತಂದರೂ ಕರ್ನಾಟಕ-ಕನ್ನಡ ಸಮಾಜಕ್ಕಾಗಿ ತರುತ್ತಿದ್ದೇವೆ ಎನ್ನುವ ಕಬರನ್ನು ತೋರಿಸಿಕೊಳ್ಳಬೇಕಾಗಿದೆ.
- ಅಂದರೆ, ಹೊರಗಿನಿಂದ ಬರುವುದಕ್ಕಾಗಿಯೇ, ತರುವುದಕ್ಕಾಗಿಯೇ ಕರ್ನಾಟಕ-ಕನ್ನಡಗಳು ಕಾದು ಕುಳಿತಿಲ್ಲ ಎನ್ನುವ ತಿಳಿವಿನಲ್ಲಿ ಬೆಳವಣಿಗೆಗಳು ನಡೆಯಬೇಕಾಗಿದೆ.
- ಹೀಗಾಗಿ, ಗ್ಲೋಬಲ್ ಮಾರುಕಟ್ಟೆಯಿರಲಿ, ಇನ್ನಾವುದೇ ತಂತ್ರಜ್ಞಾನವಿರಲಿ, ಅವು ಎಲ್ಲಿಂದಲೇ ಇಲ್ಲಿಗೆ ಬರಲಿ, ಎಲ್ಲವೂ ಕರ್ನಾಟಕ-ಕನ್ನಡವನ್ನೇ ಬಳಸಿಕೊಂಡು ಬೆಳೆಸುತ್ತಾ ಬೆಳೆಯಬೇಕಾಗಿದೆ ಎನ್ನುವ ನಿಲುವನ್ನು ಒಪ್ಪಬೇಕಾಗಿದೆ.
- ಡೆಮಾಕ್ರೆಸಿಯಲ್ಲಿ 'ಕರ್ನಾಟಕ-ಕನ್ನಡ'ಕ್ಕೂ ಈ ಹಕ್ಕಿದೆ ಎನ್ನುವುದನ್ನು ಒಪ್ಪಿ ಕನ್ನಡ ಜನಬದುಕಿನ ನಡೆಗಳನ್ನು ಮುನ್ನಡೆಸಬೇಕಾಗುತ್ತದೆ.

- ಅಂತರಾಷ್ಟ್ರೀಯ/ ರಾಷ್ಟ್ರೀಯ ಮಟ್ಟದಲ್ಲಿ ಕನ್ನಡಕ್ಕೆ ಅಸ್ತಿತ್ವ ದೊರೆಯುವ ಬಗ್ಗೆ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಅದಕ್ಕೆ ಪೂರಕವಾದ ಕ್ರಮಗಳನ್ನು ಕೈಗೊಳ್ಳಬೇಕು.

ಇಂತಹ ದರ್ದನ್ನು ಕನ್ನಡ ಸಮಾಜ ಆಡಳಿತ, ಕಲಿಕೆ, ದುಡಿಮೆ, ವ್ಯಾಪಾರ, ವ್ಯವಹಾರ, ಎಲ್ಲಾ ನಿಟ್ಟಿನಿಂದಲೂ ಇವತ್ತು ಎದುರು ನೋಡುತ್ತಿದೆ. ಕನ್ನಡಸಮಾಜದ ಜನಬದುಕಿನ ಎಲ್ಲಾ ನಡೆಗಳಲ್ಲೂ ಕನ್ನಡದ್ದೇ ಬೇರುಗಳು ಗಟ್ಟಿಯಾಗಿ ಉಳಿಯುವಂತೆ, ಕನ್ನಡಸಮಾಜದಲ್ಲಿ ಬದುಕನ್ನು ಕಟ್ಟಿಕೊಳ್ಳಬಯಸುವವರು ಇಲ್ಲಿಂದಲೇ ನಿರಾಳವಾಗಿ ಉಸಿರಾಡುವಂತೆಯೂ ಆಗಬೇಕಾಗಿದೆ. ನಮ್ಮೊಂದಿಗೆ ಕನ್ನಡವಿದೆ ದಿಟ, ಅದನ್ನು ಉಳಿಸಿ ಬೆಳೆಸಿಕೊಳ್ಳಬೇಕಾದ ಸವಾಲುಗಳು ಅತ್ಯಂತ ದೊಡ್ಡವಾಗಿವೆ.

ಅಧ್ಯಾಯ – 2

2.1: ಪ್ರಸ್ತಾವನೆ

2.2: ಇದುವರೆಗಿನ ಅಧ್ಯಯನಗಳು

2.3: ಬಗೆಹರಿಯದ ತಾತ್ವಿಕ ಪ್ರಶ್ನೆಗಳು

2. 1: ಪ್ರಸ್ತಾವನೆ:

'ಲಾಂಗ್ವೇಜ್ ಈಸ್ ಎ ಕಲ್ಚರ್' ಎನ್ನುವ ಮಾತೊಂದಿದೆ. ಯಾವುದೇ ಒಂದು ಪ್ರಾದೇಶಿಕ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಸಾಮಾಜಿಕ ಸಮುದಾಯ ತಾನು ಬಳಸುವ ಭಾಷೆಯ ಮೂಲಕವೇ ಕಲ್ಚರ್ ಒಂದನ್ನು ಬದುಕುತ್ತಿರುತ್ತದೆ. ಆದ್ದರಿಂದಾಗಿಯೇ ಬಹುಭಾಷಿಕ ಪರಿಸರದಲ್ಲಿರುವ ನಮ್ಮ ದೇಶದ ಬಹುಜನ ಸಂಸ್ಕೃತಿಗಳನ್ನು ಕಾಪಾಡಿಕೊಳ್ಳುವ ಅವಕಾಶವನ್ನು ಸಂವಿಧಾನದ ಮೂಲಕವೇ ಇರಿಸಿಕೊಳ್ಳಲಾಗಿದೆ ಎಂಬ ನಿಟ್ಟಿನಲ್ಲಿ ಸ್ವತಂತ್ರ ಭಾರತದಲ್ಲಿ ಈ ಬಹುತ್ವವನ್ನು ಉಳಿಸಿ ಬೆಳೆಸಿಕೊಳ್ಳುವ ಸಲುವಾಗಿ ಭಾಷಿಕ ಗುರುತುಗಳಲ್ಲಿಯೇ ಜನಸಮುದಾಯಗಳ ಆಡಳಿತ ವ್ಯಾಪ್ತಿಯನ್ನು ಮಾನ್ಯ ಮಾಡಲಾಗಿದೆ. ಮೊನ್ನೆಮೊನ್ನೆ ರೂಪುಗೊಂಡ ತೆಲಂಗಾಣ ರಾಜ್ಯದಿಂದ ಹಿಡಿದು, ಇವತ್ತಿಗೂ ಪ್ರತ್ಯೇಕ ಐಡೆಂಟಿಟಿಗಾಗಿ ಹೋರಾಟವನ್ನು ಮಾಡುತ್ತಿರುವ ಅನೇಕ ಸಮುದಾಯಗಳ ಪ್ರಾದೇಶಿಕ ಹೋರಾಟಗಳವರೆವಿಗೂ ಇದನ್ನು ಗುರುತಿಸಬಹುದಾಗಿದೆ.

ತಮಿಳು, ತೆಲುಗು, ಮಲೆಯಾಳ, ಒರಿಯಾ, ಅಸ್ಸಾಮಿ, ಬಂಗಾಳಿ, ಮಣಿಪುರಿ, ಗುಜರಾತಿ ಮೊದಲಾಗಿ ಇಂಡಿಯಾದ ಭಾಷಿಕ ಪ್ರದೇಶಗಳು ಪ್ರತ್ಯೇಕ ಗುರುತಿನ ಆಡಳಿತಕ್ಕಾಗಿ ರಾಜ್ಯಗಳಾಗಿ ರೂಪುಗೊಂಡಿರುವುದು ನುಡಿಬದುಕಿನ ಅನನ್ಯತೆಯಲ್ಲಿ. ಕನ್ನಡ ಭಾಷೆಯ ಗುರುತಿನ ಕರ್ನಾಟಕವೂ ಕೂಡ ಭಾಷಿಕ ಹೋರಾಟದ ಇಂತಹ ಫಲವೇ ಆಗಿದೆ ಎನ್ನುವುದನ್ನು ಆಧುನಿಕ ಭಾರತದ ಇತಿಹಾಸವೇ ಹೇಳುತ್ತಿದೆ. ಇದನ್ನು ಯಾರೂ ಅಲ್ಲಗಳೆಯಲು ಬರುವುದಿಲ್ಲ. ಭಾರತದ ಯಾವುದೇ ಪ್ರಾದೇಶಿಕ ಭಾಷೆ ರಾಷ್ಟ್ರೀಯತೆಯ ಗುಣ–ಮೌಲ್ಯಗಳನ್ನು ಹೊಂದಿರುವುದೂ ಈ ಕಾರಣದಿಂದಲೇ. ಆದ್ದರಿಂದಾಗಿಯೇ ಭಾರತದ ಉದ್ದಗಲವನ್ನು ಏಕಭಾಷಿಕ ಆಡಳಿತವನ್ನಾಗಿಸುವ ರಾಜಕೀಯ ಪ್ರಯತ್ನಗಳಿಗೆ ಯಾವಾಗಲೂ ಹಿನ್ನಡೆಯುಂಟಾಗುತ್ತಿರುತ್ತದೆ.

ಭಾಷೆಯೆನ್ನುವುದು ಒಂದು ಭಾಷಿಕ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ 'ಆಡುಭಾಷೆ' ಮಾತ್ರವೇ ಅಲ್ಲ. ಅದು ಅಲ್ಲಿನ ಎಲ್ಲಾ ಜನಬದುಕುಗಳ ನಡುವಿನ ಸಂಬಂಧದ ಕೊಂಡಿಯಾಗಿ ಕೆಲಸ ಮಾಡುತ್ತಿರುತ್ತದೆಯಾದ್ದರಿಂದ ಅದಕ್ಕೆ 'ಆಡಳಿತ ಭಾಷೆ'ಯ ಚಹರೆಗಳು, ನಿರ್ದೇಶಿತ ನಡೆಗಳು, ಹೊರಗಿನಿಂದ ಹೊಸದಾಗಿ ಪ್ರವೇಶ ಪಡೆಯುವ ಯಾವುದೇ ಜನಬದುಕು ಅಲ್ಲಿನ ಸಾಮಾಜಿಕ ಬದುಕಿಗೆ ಒಪ್ಪಿತವಾಗಿ ಬದುಕುವಂತೆ ಅವಕಾಶ ಮಾಡಿಕೊಡುವ ಗುಣ ತಾನೇತಾನಾಗಿ ಮೈಗೂಡಿರುತ್ತದೆ.

ಯಾವುದೇ ಭಾಷಿಕ ಗುಂಪುಗಳನ್ನೂ ಹೊರಗೆಸೆಯದೆ ಒಳಗು ಮಾಡಿಕೊಂಡು ನಿಭಾಯಿಸಿಕೊಳ್ಳುವ ಶಕ್ತಿ ಪಡೆದುಕೊಂಡಿರುತ್ತವೆ ಅಂತಹ ಭಾಷೆಗಳು. ಒಂದು ಸಾಮಾಜಿಕ ಪ್ರದೇಶದಲ್ಲಿನ ಎಲ್ಲಾ ಜನ, ಜಾತಿ ಗುಂಪುಗಳ ಭಾಷಿಕ ಕೊಂಡಿಯಾಗಿ ಅಲ್ಲಿನ ಜನಬದುಕುಗಳ ಬೆಳವಣಿಗೆ, ಬದಲಾವಣೆಗಳ ಸಾಧನವೂ, ಸಾಧ್ಯತೆಯೂ ಆಗಿ ಬೆಳೆಯುತ್ತಿರುತ್ತದೆ. ಒಂದು ಗುರುತಿಸಲ್ಪಟ್ಟ ಸಮಾಜದ ಹಲವು ನಡೆಯಲ್ಲಿ, ನೂರಾರು ಬಗೆಯಲ್ಲಿ ಅಂತಹ ಭಾಷೆಯ ಬಳಕೆಯನ್ನು ನಡೆಸಲಾಗುತ್ತದೆಯಾದ್ದರಿಂದ, ಜಾತಿ, ಮತ, ಪ್ರದೇಶ, ಹೆಣ್ಣು, ಗಂಡು ಮೊದಲಾದ ಗುರುತುಗಳಲ್ಲಿ ಬದುಕುತ್ತಿರುವವರ ಬದುಕಿನ ಅನನ್ಯತೆಯನ್ನು ಕಾಪಾಡಿಕೊಳ್ಳುವ ಹೊಣೆಗಾರಿಕೆಯು ಅಂತಹ ಭಾಷೆಗೆ ಮಾತ್ರವೇ ದಕ್ಕಿರುತ್ತದೆ. ಹೀಗಾಗಿ ಕರ್ನಾಟಕದಲ್ಲಿ 'ಕನ್ನಡ ಆಡಳಿತ' ಎಂದರೆ ಅದೊಂದು 'ಸಾಂಸ್ಕೃತಿಕ ಹೊಣೆಗಾರಿಕೆ' ಎಂದೇ ತಿಳಿಯಬೇಕಾಗಿರುತ್ತದೆ. ಅಲ್ಲಿನ ಜನಭಾಷೆಯಲ್ಲದ ಇನ್ನೊಂದು ಭಾಷೆಗೆ ಆ ಜನಬದುಕಿನ ಅನನ್ಯತೆಯನ್ನು ಉಳಿಸುವ, ಬೆಳೆಸುವ, ಅದನ್ನು ನಾಳೆಗಳಿಗೆ ಕೊಂಡೊಯ್ಯುವ ಕಸುವು ಇರುವುದಿಲ್ಲ. ಈ ನಿಟ್ಟಿನಿಂದ ನೋಡುವಾಗ **'ಕನ್ನಡದಲ್ಲಿ ಆಡಳಿತ' ಎಂಬ ಗುರಿಯು ಕನ್ನಡ ಜನಬದುಕಿಗೆ ನ್ಯಾಯವನ್ನು ದಕ್ಕಿಸುವ ದಾರಿಯಲ್ಲಿ ಇದೆಯೇ?** ಎನ್ನುವುದು ಕರ್ನಾಟಕದ ಸನ್ನಿವೇಶದಲ್ಲಿ ದೊಡ್ಡ ಸವಾಲಾಗಿ ಕಾಣುತ್ತದೆ. ಅಂದರೆ:

- **ಭಾರತ ಸ್ವತಂತ್ರ ರಾಜ್ಯವಾಗಿ ಮುಕ್ಕಾಲು ಶತಮಾನವಾದರೂ ಕರ್ನಾಟಕದ ಆಡಳಿತದಲ್ಲಿ ಭಾಷಿಕ ಅನನ್ಯತೆ ಎನ್ನುವುದು ಕನಸಾಗಿಯೇ ಉಳಿದಿದೆ ಯಾಕೆ?**
- **'ಕನ್ನಡ ಆಡಳಿತ ಭಾಷೆಯಾಗಬೇಕು' ಎಂದು ಇನ್ನೂ ಸುತ್ತೋಲೆಗಳನ್ನು ಹೊರಡಿಸುತ್ತಿರುವುದರ ಹಿಂದಿರುವ ಬಿಕ್ಕಟ್ಟುಗಳೇನು?**
- **ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಆಡಳಿತವನ್ನು ನಡೆಸಿದ ಪಕ್ಷ ರಾಜಕಾರಣದ ನಡೆಗಳು ಹೇಗಿವೆ?**
- **ಕರ್ನಾಟಕದ ಭಾಷಾನೀತಿ ಎಂತಹುದು? ಶಿಕ್ಷಣ–ಉದ್ಯೋಗ–ಸಮಾಜದ ಬೆಳವಣಿಗೆಗಳ ಕೊಂಡಿಯಲ್ಲಿ ಆಡಳಿತವು ಭಾಷಾನೀತಿಯನ್ನು ರೂಪಿಸಿಕೊಂಡಿದೆಯೇ? ಇಲ್ಲವೇ?**
- **ಹಾಗಿದ್ದರೆ, ಕರ್ನಾಟಕದಲ್ಲಿ ಆಡಳಿತ ಭಾಷೆಯ ಸ್ವರೂಪವೇನು?**

- ಆಡಳಿತ ಭಾಷೆಯಾಗಿ ಕನ್ನಡ ಬಳಕೆಯಾಗುವ ದಾರಿಯಲ್ಲಿ ಎದುರಾಗಿರುವ ತೊಡಕುಗಳು, ಸವಾಲುಗಳು ಎಂತವು?
- ಇವತ್ತಿನ ಜಾಗತಿಕ ಮಾರುಕಟ್ಟೆಯನ್ನು ನಿಭಾಯಿಸುವ ಕರ್ನಾಟಕ–ಕನ್ನಡದ ಕಸುವು–ಕೌಶಲ ಯಾವ ಬಗೆಯದು?
- ಕರ್ನಾಟಕದ ನಾಳೆಗಳಿಗೆ ಯಾವ ಬಗೆಯಲ್ಲಿ ಕನ್ನಡವು ಆಡಳಿತ ಭಾಷೆಯಾಗಿ ಉತ್ತರದಾಯಿತ್ವವನ್ನು ಹೊಂದಿದೆ?

ಈ ಪ್ರಶ್ನೆಗಳು ಮುಖ್ಯವಾಗುತ್ತವೆ. ಈ ನಿಟ್ಟಿನಲ್ಲಿ ಈವರೆಗೆ ನಡೆದಿರುವ ಚರ್ಚೆಗಳನ್ನು ಈ ಅಧ್ಯಾಯದಲ್ಲಿ ಅವಲೋಕನ ಮಾಡಲಾಗಿದೆ. ಹೀಗೆ ಮಾಡುವಾಗ ಈ ಚರ್ಚೆಗಳ ಹಿಂದಿರುವ ತಾತ್ವಿಕ ಧೋರಣೆಗಳನ್ನು, ಅವು ಹೇಗೆ ಕನ್ನಡ ಜನಬದುಕಿಗೆ ಉಪಯುಕ್ತ, ಉಪಯುಕ್ತವಲ್ಲ ಎನ್ನುವ ಸಂಗತಿಗಳನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಆ ಮೂಲಕ ಈ ಮೇಲೆ ಹಾಕಿಕೊಂಡ ಪ್ರಶ್ನೆಗಳ ಹಿನ್ನೆಲೆಯಲ್ಲಿ ಚರ್ಚೆಗೆ ಒಡ್ಡಿಕೊಳ್ಳಬೇಕಾದ ಅಗತ್ಯವೂ ಇದೆ. ಈ ನಿಟ್ಟಿನಲ್ಲಿ ಆಡಳಿತ ಕನ್ನಡದ ಬಗೆಗಿನ ಈವರೆಗಿನ ಚರ್ಚೆಯು ಮುಂದಿನ ದಾರಿಗಳನ್ನು ಕಂಡುಕೊಳ್ಳುವ ನಡೆಯೂ ಆಗಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಅಗತ್ಯವಾದ ಸಾಹಿತ್ಯ ಸಮೀಕ್ಷೆಯನ್ನು ಇನ್ನು ಚರ್ಚೆಗೆ ತೆಗೆದುಕೊಳ್ಳಬಹುದು:

2.2: ಇದುವರೆಗಿನ ಅಧ್ಯಯನಗಳು

1. 'ಗೇಣಿ'ಯ ಬಹುರೂಪ ದರ್ಶನ[1]

ಬ್ರಿಟಿಶ್‌ರ ಆಡಳಿತಕ್ಕೆ ಒಳಪಟ್ಟ ಅಂದಿನ ದಕಿಣ ಕನ್ನಡ ನಾಡಿನಲ್ಲಿ ಕಂದಾಯ ಹಾಗೂ ಇತರ ಸರಕಾರೀ ಇಲಾಖೆಗೆ ಸಂಬಂಧಿಸಿದ ಅನೇಕ ಕಾನೂನು ವಿಧಿಗಳನ್ನು ಬ್ರಿಟಿಷ್ ಅಧಿಕಾರಿಗಳು ಹಳ್ಳಿಯ ಹತ್ತೂ ಸಮಸ್ತರಿಗೂ ಅರ್ಥವಾಗುವಂತೆ ಸರಳವಾದ ಕನ್ನಡದಲ್ಲಿ ಪುಸ್ತಕಗಳನ್ನು ರಚಿಸಿದ್ದರು ಎಂದು ಕೆ. ಎಸ್. ಮಧುಸೂದನರವರು ಹೇಳುತ್ತಾರೆ. ಆದರೆ ಅಂತಹ ಪುಸ್ತಕದಿಂದ ಕನ್ನಡರಿಗರಿಗೆ ಲಾಭವಾಗುವುದಕ್ಕಿಂತ ಅವರ

---

[1] ಇದೊಂದು ಅಪರೂಪದ ಬರಹವಾಗಿದ್ದು ಈ ಹೊತ್ತಗೆಯ ಕುರಿತು ಕೆ.ಎಸ್. ಮಧುಸೂದನರವರು ಪ್ರಜಾವಾಣಿಯಲ್ಲಿ ದಿನಾಂಕ 12 ಫೆಬ್ರವರಿ 2017ರಂದು ಪ್ರಕಟಿಸಿದ್ದರು.

ನುಡಿಯ ಮೂಲಕವೇ ಅವರನ್ನು ಕಂದಾಯ ಪಾವತಿಸುವವರನ್ನಾಗಿಸಿದ್ದು ವ್ಯಂಗ್ಯವೆಂದು ತೋರುತ್ತದೆ.

ಆದರೂ ಈ ಹೊತ್ತಗೆಯು ಬಹಳ ಅಪರೂಪದ್ದಾಗಿದೆ. 'ಗೇಣೀ ವಸೂಲಾತೀ ಆಕ್ಟು' ಕೃತಿಯನ್ನು ಜನವರಿ 6, 1866ರಲ್ಲಿ ಬೆಂಗಳೂರಿನ 'ವೆಸ್ಲಿಯನ್ ಮಿಷನ್ ಪ್ರೆಸ್'ನಲ್ಲಿ ಮುದ್ರಿಸಲಾಗಿದೆ. ಡೆಮಿ ಆಕಾರದ 28 ಪುಟಗಳ ಈ ಕೃತಿಯ ಬೆಲೆಯನ್ನು ನಮೂದಿಸಲಾಗಿಲ್ಲ. ಮುಖಪುಟ ಹಾಗೂ ಹಿಂಬದಿಯ ರಕ್ಷಾಪುಟಗಳು ಹಾಳಾಗಿರುವ ಈ ಪುಸ್ತಕದ ಮೊದಲ ಆವೃತ್ತಿಯ ಹಳೆಯ ಪ್ರತಿಯನ್ನು ಡಿ.ವಿ. ಗುಂಡಪ್ಪನವರು ನಿಧನರಾಗುವುದಕ್ಕೆ ಕೆಲವು ತಿಂಗಳು ಮೊದಲು ಅವರಿಗೆ ಶಿವರಾಮ ಕಾರಂತರು ನೀಡಿರುತ್ತಾರೆ. 1975ರ ಮಾರ್ಚ್8ರಂದು ಡಿವಿಜಿ ಅವರ ಬಂಧುಗಳೂ 'ಗೋಖಲೆ ಸಂಸ್ಥೆ'ಯಲ್ಲಿ ಡಿವಿಜಿ ಅವರಿಗೆ ಹಿರಿಯ ಸಹಾಯಕರೂ ಆಗಿದ್ದ ಸ. ವೆಂಕಟಾಚಲಪತಿಯವರು ತಮ್ಮ ಸ್ವಹಸ್ತಾಕ್ಷರಗಳಲ್ಲಿ ಕಾರಂತರಿಂದ ಈ ಕೃತಿ ಸ್ವೀಕೃತಿಯಾಗಿರುವುದನ್ನು ಹೀಗೆ ನಮೂದಿಸಿರುತ್ತಾರೆ: "109 years old copy received for GIPA from Sri K. shivarama Karanth'.

ಆ ಕಾಲಘಟ್ಟದಲ್ಲಿ ಕಂದಾಯ ಹಾಗೂ ಇತರ ಸರಕಾರೀ ಇಲಾಖೆಗೆ ಸಂಬಂಧಿಸಿದ ಅನೇಕ ಕಾನೂನು ವಿಧಿಗಳನ್ನು ಬ್ರಿಟಿಷ್ ಅಧಿಕಾರಿಗಳು ಹಳ್ಳಿಯ ಹತ್ತೂ ಸಮಸ್ತರಿಗೂ ಅರ್ಥವಾಗುವಂತೆ ಸರಳವಾದ ಕನ್ನಡದಲ್ಲಿ ಪುಸ್ತಕಗಳನ್ನು ರಚಿಸಿದ್ದರು. ಅಂತಹ ಪುಸ್ತಕಗಳಲ್ಲಿ ಇದೂ ಒಂದು.

ಪ್ರಸ್ತುತ ಕೃತಿಯಲ್ಲಿ ಗೇಣೀ ಎನ್ನುವ ಕನ್ನಡ ಶಬ್ದಕ್ಕೆ ಇಂಗ್ಲಿಷಿನಲ್ಲಿ 'ರೆಂಟ್' ಎನ್ನವ ಪರ್ಯಾಯ ಪದವನ್ನು ಬಳಸಲಾಗಿದೆ. ಅರ್ಥಾತ್ ಇಲ್ಲಿ 'ರೆಂಟ್' ಎಂದರೆ ಬಾಡಿಗೆ ಎನ್ನುವ ಅರ್ಥವಲ್ಲ, ಗೇಣೀ ಎಂದರ್ಥ. ಸಾಮಾನ್ಯವಾಗಿ ಕನ್ನಡದಲ್ಲಿ 'ರೆಂಟ್' ಎಂದರೆ ಮನೆ ಬಾಡಿಗೆ ಎನ್ನುವ ಅರ್ಥದಲ್ಲಿ ಈಗ ಬಳಕೆಯಲ್ಲಿದೆ. ಈ ಕೃತಿಯು ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಾಲೂವಿನಲ್ಲಿದ್ದ ಗೇಣೀ ವಸೂಲಾತಿ ವಿಚಾರಕ್ಕೆ ಸಂಬಂಧಿಸಿದ್ದು. ಆ ಕಾಲಘಟ್ಟದಲ್ಲಿ ಕನ್ನಡದ ಆಡಳಿತ ಭಾಷೆಯ ಸ್ವರೂಪ, ವಾಕ್ಯಗಳ ರಚನೆ, ವಿಶಿಷ್ಟ ಶಬ್ದಗಳ ಬಳಕೆ ಹೇಗಿತ್ತು ಎನ್ನುವುದರ ಚಿತ್ರ ಈ ಕೃತಿಯ ಮೂಲಕ ಉಂಟಾಗುವುದಲ್ಲದೆ, ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ಕುರಿತು ಅಧ್ಯಯನ ಮಾಡುವ ಸಂಶೋಧಕರಿಗೆ ಇಂತಹ ಕೃತಿಗಳು ಆಕರ ಗ್ರಂಥಗಳಾಗಿ ಒದಗುತ್ತವೆ.

ಪುಸ್ತಕದ ಆರಂಭದಲ್ಲಿ “1865ನೇ ಇಸವಿ 8ನೇ ನಂಬರ ಆಕ್ಟು, ಮದ್ರಾಸು, (1865ನೇ ಇಸವಿ ಏಪ್ರಿಲ್ ತಿಂಗಳು 8ನೇ ತಾರೀಖಿನಲ್ಲಿ ಗವರ್ನರವರ ಅನುಮತಿಯನ್ನೂ 1865ನೇ ಇಸವಿ ಸೆಪ್ಟೆಂಬರು ತಿಂಗಳು 19ನೇ ತಾರೀಖಿನಲ್ಲಿ ಗವರ್ನರ್ ಜನರಲವರ ಅನುಮತಿಯನ್ನೂ ಉಳ್ಳದ್ದಾಯಿತು.) ಹಾಗೂ ಗೇಣಿಯನ್ನು ವಸೂಲು ಮಾಡುವ ಬಗ್ಗೆ ನಡಿಸಬೇಕಾದ ಕ್ರಮವನ್ನು ತಿಳಿಸುವ ಕಾನೂನುಗಳನ್ನು ಒಟ್ಟುಪಡಿಸಿ ದಿಟ್ಟ ಮಾಡ ತಕ್ಕ ಬಗ್ಗೆ ಉಂಟಾದ ಆಕ್ಟು” ಎನ್ನುವ ಒಕ್ಕಣೆ ಇದೆ. ನಂತರ ಕ್ರಮವಾಗಿ ಒಟ್ಟು 90 ಪ್ರಕರಣಗಳ ವಿಲೇವಾರಿಯನ್ನು ಕುರಿತ ವಿವರಣೆಗಳು ಶುರುವಾಗುತ್ತದೆ.

‘ಅರ್ಥದ ಕಲಂನಲ್ಲಿ ಮೂಲಗಾರ’, ‘ಗೇಣೀ ಒಕ್ಕಲು’, ‘ಕಲೆಕ್ಟರು’, ‘ಲಿಂಗ’, ’ವಚನ’, ‘ಬಾಕಿಗಳನ್ನು ವಸೂಲು ಮಾಡುವ ಕ್ರಮ’, ‘ಮೂಲಗಾರ ಹಾಗೂ ಗೇಣೀ ಒಕ್ಕಲುಗಳ ನಡುವಣ ಕರಾರು’, ‘ಪಟ್ಟಾವಿನ ಮುಚ್ಚಳಿಕೆಯ ಮಜಲುಗಳು’, ‘ಅಕ್ರಮವಾಗಿ ಸುಲಿಗೆ ಮಾಡಿದರೆ ಅದಕ್ಕೆ ಪರಿಹಾರ’, ‘ಪಟ್ಟಾಗಳನ್ನೂ ಮುಚ್ಚಳಿಕೆಗಳನ್ನು ದಸ್ಕತು ಮಾಡಿ ರಿಜಿಸ್ತರು ಮಾಡಿಸುವ ವಿಚಾರ’, ‘ಪಟ್ಟಾಗಳನ್ನೂ ಮುಚ್ಚಳಿಕೆಗಳನ್ನೂ ಪಡಕೊಳ್ಳದೆಯಾಗಲಿ ಅಸತ್ಯವಿಲ್ಲವೆಂತ ಬಿಟ್ಟಬಿಡದೆಯಾಗಲಿ ಇದ್ದರೆ ಬರುವ ವ್ಯಾಜ್ಯದ ವಿಚಾರ’, ‘ಪಟ್ಟಾಗಳನ್ನು ಕೊಡದೆ ಇದ್ದರೆ, ಪಟ್ಟಾಗಳನ್ನು ತೆಗೆದುಕೊಂಡಿಲ್ಲವೆಂದರೆ ವ್ಯಾಜ್ಯಗಳನ್ನು ತೀರಿಸುವ ಕ್ರಮ’ – ಈ ಮುಂತಾದ ವಿಚಾರಗಳನ್ನು ಮೊದಲ ಹತ್ತು ಪ್ರಕರಣಗಳಲ್ಲಿ ವಿಲೇವಾರಿ ಮಾಡಲಾಗಿದೆ. ಮುಂದಿನ ಐದು ಪ್ರಕರಣಗಳಲ್ಲಿ – ಗೇಣಿಯ ದರಗಳ ಕುರಿತ ತಕರಾರುಗಳನ್ನು ತೀರಿಸಲಿಕ್ಕೆ ಕಾಯಿದೆಗಳು, ಸ್ವಾಧೀನ ತಪ್ಪಿಸುವ ಕ್ರಮ ಗೇಣೀ ಚೀಟಿಗೆ ರಾಜೀನಾಮೆ ಕೊಡೋಣ, ರೈತವಾರಿ ಕಂದಾಯ ಕ್ರಮದ ಬಾಬತು ಮೂಲಗಾರರು ಗೇಣೀ ವಸೂಲು ಮಾಡೋಣ, ಗೇಣೀ ಬಾಕಿ ಅದನ್ನೂ ಜಪ್ತಿ ಮೂಲವಾಗಿ ವಸೂಲು ಮಾಡಬಹುದು, ಚರ ಸ್ವೊತ್ತಿನ ಜಪ್ತಿಯ ವಿಕ್ರಯ – ಬಾಕಿಯ ಬಾಬತು ತಗಾದಾ ಚೀಟು, ಈ ಮೊದಲಾದ ವಿಚಾರಗಳನ್ನು ಕುರಿತಾಗಿದೆ.

19ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಕಂದಾಯ, ಆರ್ಥಿಕ, ಅಂಕಿ–ಸಂಖ್ಯೆ, ಮುಜರಾಯಿ, ಶಿಕ್ಷಣ, ಅಬಕಾರಿ, ಸಾರಿಗೆ, ಲೋಕೋಪಯೋಗಿ, ರೈಲ್ವೇ, ಅಂಚೆಕಚೇರಿ ಮುಂತಾದ ಸರಕಾರದ ವಿವಿಧ ಇಲಾಖೆಗಳ ಕಾನೂನಿನ ವಿವಿಧ

ಆಕ್ಷುಗಳಿಗೆ ಸಂಬಂಧಿಸಿದ ತಿಳಿವಳಿಕೆಯ ಸಾಕಷ್ಟು ಸಂಖ್ಯೆಯ ಪುಸ್ತಕಗಳು ಕನ್ನಡದಲ್ಲಿ ಪ್ರಕಟಗೊಂಡವು. ಅಂತಹುವುಗಳ ಪುಸ್ತಕ ಸರಣಿಯಲ್ಲಿ ಪ್ರಸಕ್ತ 'ಗೇಣೀ ವಸೂಲಾತಿ ಆಕ್ಷು' ಕೃತಿ ಕೂಡ ಒಂದು. ಅಮಲು, ಷುರು, ಮಹಸೂಲು, ಮಾಫು, ಬಾಬತು, ಬಚಾವು, ವಸೂಲು, ಜಫ್ತಿ, ತಗಾದ, ಇಜಾರೇದಾರ್, ಜಾಮೀನು, ದಾವೆ, ದಸ್ತಾವೇಜು, ವ್ಯಾಜ್ಯ, ಪಟ್ಟಾ, ಕರಾರು, ಪೇರೇಜು ಮುಂತಾದ ಹಿಂದೂಸ್ತಾನಿ ಭಾಷೆಯ, ಆಡಳಿತ ಪರಿಭಾಷಾ ಶಬ್ದ ಸಮುದಾಯವು ಇಲ್ಲಿ ಓತಪ್ರೋತವಾಗಿ ಬಳಕೆಯಾಗಿರುವುದನ್ನು ಗಮನಿಸಬಹುದು.

ಅಂದಿನ ಕಾಲಘಟ್ಟದ ಕನ್ನಡ ಭಾಷೆಯ ಕ್ರಮ, ತನ್ನದೇ ಆದ ಶಬ್ದಕೋಶದ ವಿಶಿಷ್ಟ ಚಹರೆ, ಭಾಷೆಯ ದೇಸೀ ನೆಲೆಯ ಅಸ್ಮಿತೆಗಳನ್ನು ಇಲ್ಲಿನ ಕನ್ನಡ ಭಾಷೆಯ ರಚನೆ ಮತ್ತು ಬಳಕೆಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

2. ಕನ್ನಡ ಜಗತ್ತು ಅರ್ಧ ಶತಮಾನ[2]

ಡಾ. ಕೆ. ವಿ. ನಾರಾಯಣರವರ ರಚಿಸಿರುವ ಈ ಕೃತಿಯಲ್ಲಿ ಒಟ್ಟು ನಾಲ್ಕು ಭಾಗಗಳಿವೆ: ಮುಖ್ಯವಾಗಿ ಏಕೀಕರಣದ ಸಂದರ್ಭದ ಕನ್ನಡದ ಸ್ವರೂಪ, ಭಾಷಾನೀತಿ, ಭಾಷಾ ಯೋಜನೆಗೆ ಸಂಬಂಧಿಸಿದ ಲೇಖನಗಳು ಭಾಗ ಒಂದರಲ್ಲಿ ಇವೆ. ಭಾಗ ಎರಡರಲ್ಲಿ – ಆಡಳಿತದಲ್ಲಿ ಕನ್ನಡ ಬಳಕೆ, ಶಿಕ್ಷಣದಲ್ಲಿ ಕನ್ನಡ, ಸಮೂಹ ಮಾಧ್ಯಮಗಳಲ್ಲಿ ಕನ್ನಡ, ಪ್ರಮಾಣೀಕರಣ, ಆಧುನೀಕರಣ ಹಾಗೂ ಕನ್ನಡ ಪ್ರಭೇಧಗಳು: ನಿರ್ವಹಣೆಯ ಸಮಸ್ಯೆಗಳು ಎಂಬ ಮುಖ್ಯ ಲೇಖನಗಳಿವೆ. ಭಾಗ ಮೂರರಲ್ಲಿ – ಕನ್ನಡ ರಚನೆಯಲ್ಲಿ ಆಗಿರುವ ಪಲ್ಲಟಗಳು, ಮಾತು ಮತ್ತು ಬರಹ, ಕನ್ನಡ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಲೇಖನಗಳಿವೆ. ಭಾಗ ನಾಲ್ಕರಲ್ಲಿ ಕನ್ನಡ ಚಳುವಳಿಗಳು, ಕನ್ನಡ ಗುರುತುಗಳು, ಕನ್ನಡ ಭಾಷೆಯ ಅಧ್ಯಯನಗಳು, ಕನ್ನಡ ಮತ್ತು ಸಾಹಿತ್ಯ, ಕನ್ನಡ ಆತಂಕಗಳು ಹಾಗೂ ಕನ್ನಡ: ಒಂದು ಮುನ್ನೋಟ ಎಂಬ ಲೇಖನಗಳಿವೆ.

ಭಾಷೆಯನ್ನು ನೆಲೆಯಾಗಿ ಇರಿಸಿಕೊಂಡು, ರಾಜ್ಯ ನಿರ್ಮಿಸಬೇಕೆಂಬ ಒತ್ತಾಯ, ಏಕೀಕರಣದ ಸಂದರ್ಭ, ಆಡಳಿತಾತ್ಮಕ ಘಟಕವನ್ನು ರಚಿಸುವಾಗ ಬಹುಸಂಖ್ಯಾತರ

---

[2] ನಾರಾಯನ ಕೆ.ವಿ, 2019, ಕನ್ನಡ ಜಗತ್ತು ಅರ್ಧ ಶತಮಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷೆಯನ್ನು ಆಧಾರವಾಗಿ ತೆಗೆದುಕೊಂಡ ಬಗೆ, ಆಡಳಿತ ವರ್ಗದ ಮುಂದಿರುವ ಸವಾಲುಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ಭಾಷಾ ನೀತಿಗೆ ಸಂಬಂಧಿಸಿದಂತೆ, "ಕರ್ನಾಟಕ ಸರ್ಕಾರದ ಭಾಷಾ ನೀತಿಯು ಎಲ್ಲಿಯೂ ನಿರ್ದಿಷ್ಟ ದಾಖಲೆಯಾಗಿ ಲಭಿಸುವುದಿಲ್ಲ. ಕಾಲದಿಂದ ಕಾಲಕ್ಕೆ ಸರ್ಕಾರ ತನ್ನ ನಿರ್ಣಯ, ಸ್ವರೂಪ, ಕಾರ್ಯಕ್ರಮಗಳ ಮೂಲಕ ತನ್ನ ಭಾಷಾ ನೀತಿಯನ್ನು ತಾನೇ ಕಂಡುಕೊಳ್ಳುತ್ತಾ ಹೋದಂತೆ ಕಾಣುತ್ತದೆ" ಎಂಬುದಾಗಿ ಲೇಖಕರು ಹೇಳುತ್ತಾರೆ.

ಭಾಷಾ ಯೋಜನೆ ಬಗ್ಗೆ "ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಎಂಬಂತಹ ಮಾತು ಒಂದು ಹೇಳಿಕೆಯಾಗಿ ತೋರುವುದೇ ಹೊರತು, ವಾಸ್ತವವಾಗಿ ಒಂದು ನಿರ್ಧರಿತ ಕಾರ್ಯಕ್ರಮವಾಗಲಾರದು" ಎಂದು ಹೇಳುತ್ತಾ, ಕನ್ನಡವು ಶಿಕ್ಷಣ, ಆಡಳಿತ, ವಾಣಿಜ್ಯ ಕ್ಷೇತ್ರಗಳಲ್ಲಿ ಒಂದೇ ರೀತಿಯ ಸ್ಥಾನಮಾನವನ್ನು ಹೊಂದಿಲ್ಲ ಎಂಬುದನ್ನು ಸವಿವರವಾಗಿ ವಿವರಿಸುತ್ತಾರೆ.

ಆಡಳಿತದಲ್ಲಿ ಕನ್ನಡ ಬಳಕೆಯ ಸಮಸ್ಯೆಗಳೇನು? ಕನ್ನಡವು ಇಂದಿಗೂ ಸಹ ಇಂಗ್ಲೀಷಿನ ಅಡಿಯಲ್ಲಿ ಇರಬೇಕಾಯಿತು ಎಂಬುದನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಇನ್ನೊಂದು ಮುಖ್ಯ ಲೇಖನ **'ಪ್ರಮಾಣೀಕರಣ'**. ಇದರಲ್ಲಿ ಪ್ರಮಾಣೀಕರಣದ ಮೊದಲ ವ್ಯವಸ್ಥಿತ ಪ್ರಯತ್ನವೆಂದರೆ ಅಖಿಲ ಕರ್ನಾಟಕ ವ್ಯಾಪ್ತಿಯ ಶಾಲಾ ಪಠ್ಯ, ವಸ್ತುವನ್ನು ಮತ್ತು ಪಠ್ಯ ಕ್ರಮವನ್ನು ಇಡೀ ಕರ್ನಾಟಕದಲ್ಲಿ ಏಕರೂಪಿಯಾಗಿರುವಂತೆ ನಿರ್ಧರಿಸಲು ಕೈಗೊಂಡ ಕ್ರಮ, ಕನ್ನಡದ ಹತ್ತಾರು ಪ್ರಭೇದಗಳಲ್ಲಿ ಕೆಲವನ್ನು ಮಾತ್ರ ಪ್ರಮಾಣ ಭಾಷೆಯ ಮಾದರಿಯನ್ನಾಗಿ ಆಯ್ಕೆ ಮಾಡಿಕೊಂಡಿರುವುದು ಒಂದು ವಿಪರ್ಯಾಸ ಎಂಬುದನ್ನು ಗುರುತಿಸುತ್ತಾರೆ.

'ಕನ್ನಡ: ಆತಂಕಗಳು' ಲೇಖನದಲ್ಲಿ ಕನ್ನಡವು ಅಪಾಯ ಎದುರಿಸುತ್ತಿರುವ ಭಾಷೆ ಎಂಬ ಆತಂಕದ ಮಾತುಗಳು ಕೇಳಿಬರುತ್ತಿವೆ. ಆದರೆ ಔಪಚಾರಿಕ ವಲಯಗಳಲ್ಲಿ ಕನ್ನಡದ ಬಳಕೆ ಮಿತಗೊಳ್ಳುತ್ತಾ ಹೋಗುತ್ತದೆ. ಅನೌಪಚಾರಿಕ ವಲಯಗಳಲ್ಲಿ ಕನ್ನಡದ ಬಳಕೆ ಹೆಚ್ಚಾಗುತ್ತಾ ಹೋಗುತ್ತದೆ. ಆದ್ದರಿಂದ, ಈ ಆತಂಕಕ್ಕೆ ಕಾರಣವಿಲ್ಲ ಎಂಬುದನ್ನು ಚರ್ಚಿಸಲಾಗಿದೆ.

'ಕನ್ನಡ: ಒಂದು ಮುನ್ನೋಟ' ಲೇಖನದಲ್ಲಿ ಭಾಷಿಕವಾಗಿ ಆಗುವ ಬದಲಾವಣೆಗಳನ್ನು ಗುರುತಿಸುತ್ತಾ, "ಮಾತನ್ನು ಬಳಸುವ ಸಮಯ ಮತ್ತು ಸಂದರ್ಭಗಳು ಕಡಿಮೆಯಾಗಿ, ಮಾತನ್ನು ಕೇಳಿಸಿಕೊಳ್ಳುವ ಸಮಯ ಹೆಚ್ಚಾಗುತ್ತಿದೆ. ಆದ್ದರಿಂದ ಅನೌಪಚಾರಿಕ ವಲಯಗಳಲ್ಲಿ ಕನ್ನಡವು ಕೇಳುವ ಭಾಷೆಯಾಗಿ ಸಂವಹನದ ಅಗತ್ಯಗಳನ್ನು ಪೂರೈಸುವ ಭಾಷೆಯಾಗಿದೆ". ಹೊಸ ತಂತ್ರಜ್ಞಾನದ ನೆರವಿನಿಂದ ಹೊಸ ಅಗತ್ಯಗಳಿಗೆ ಅನುಗುಣವಾಗಿ ಬಳಕೆಯ ವಲಯಗಳನ್ನು ನಿರ್ವಹಿಸಲು ಕನ್ನಡ ಶಕ್ತವಾಗುವಂತೆ ಮಾಡುವುದೇ ಸರಿಯಾದ ದಾರಿ. ಮೂರನೆಯ ಸಹಸ್ರಮಾನಕ್ಕೂ ದಾಟಿ ಬಂದ ಜಗತ್ತಿನ ಕೆಲವೇ ಭಾಷೆಗಳಲ್ಲಿ ಒಂದಾಗಿರುವ ಕನ್ನಡಕ್ಕೆ ಇಂದು–ನಿನ್ನೆಗಳಿರುವಂತೆ ನಾಳೆಗಳೂ ಇರುತ್ತವೆ' ಎನ್ನುತ್ತಾರೆ ಲೇಖಕರು.

ಈ ಮೇಲಿನ ನಿಲುವುಗಳು, ಆಡಳಿತ ಕನ್ನಡದ ಬಗ್ಗೆ ಸಮಗ್ರವಾಗಿ ಪರಿಶೀಲಿಸುತ್ತಾ, ಆಡಳಿತ ಎನ್ನುವುದೇ ಕನ್ನಡ ತಿಳಿವಾಗಿ ಮೈದೆಳೆಯಬೇಕಾಗುತ್ತದೆ ಎನ್ನುವುದನ್ನು ಬಹಳ ಸೂಕ್ಷ್ಮವಾಗಿ ಲೇಖಕರು ಚರ್ಚಿಸುತ್ತಾರೆ. ಈ ಚರ್ಚೆಯು ಸರ್ಕಾರದ ನೀತಿ ನಿರೂಪಗಳನ್ನು ಮತ್ತು ಕನ್ನಡವನ್ನು ಬೆಳೆಸುವ ದಾರಿಯನ್ನು ಸೂಚಿಸುತ್ತದೆ. ಆದ್ದರಿಂದ ಈ ಕೃತಿ ಪ್ರಸ್ತುತ ಸಂಶೋಧನೆಗೆ ಒಂದು ತಾತ್ವಿಕ ನಿರೂಪಣೆಯಾಗಿ ನಿಲ್ಲುತ್ತದೆ.

3. ಹೆಣ್ಣು ಮತ್ತು ಭಾಷೆ[3]

ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿ.ವಿ. ಹಂಪಿಯಿಂದ ಇವರು ಪ್ರಕಟಿಸಿದ ಡಾ: ಎಚ್.ಎಸ್. ಶ್ರೀಮತಿ ಇವರ ಸಂಪಾದಿಸಿದ ಕೃತಿ. ಈ ಕೃತಿಯಲ್ಲಿ ವಿವಿಧ ಲೇಖಕರು ಬರೆದಿರುವ ಒಂಭತ್ತು ಲೇಖನಗಳಿವೆ. ಡಾ: ಕೆ.ವಿ.ನಾರಾಯಣರವರು ಬರೆದಿರುವ **"ಭಾಷಾ ಕಲಿಕೆ ಮತ್ತು ಬಳಕೆಗಳಲ್ಲಿ ಹೆಣ್ಣಿಗೆ ಇರುವ ಸವಾಲುಗಳು"** ಲೇಖನದಲ್ಲಿ ಮುಖ್ಯವಾಗಿ (1) ಹೆಣ್ಣಿನ ಭಾಷೆ ಮೌನವಾಗುವ ಬಗೆ, (2) ಹೆಣ್ಣಿನ ಮೌನವು ಸ್ವಗತವಾಗುವ ಪ್ರಕ್ರಿಯೆ, (3) ಹೆಣ್ಣಿನ ಭಾಷಾ ಸಾಮರ್ಥ್ಯ ಕಳೆದುಹೋಗುವ ಬಗೆ, (4) ಮೌನವಾಗುವಿಕೆ ಮತ್ತು ಮೂಖವಾಗುವಿಕೆ ಎಂಬ ಅಧ್ಯಾಯಗಳಿವೆ.

---

[3] ಶ್ರೀಮತಿ ಎಚ್. ಎಸ್. ಮತ್ತು ಇತರರು, 2007, ಹೆಣ್ಣು ಮತ್ತು ಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಈ ಸಂದರ್ಭದಲ್ಲಿ ಮೊದಲ ಅಧ್ಯಾಯದಲ್ಲಿ ರೊಮಾನ್ ಯೂಕೊಬ್ಸನ್‌ರ ಚಿಂತನೆಗಳನ್ನು ವಿವರಿಸುತ್ತಾ ಲೇಖಕರು – ಒಂದು ಮೆಟೋಫರಿಕ್ ಚಿಂತನೆ ಅಂದರೆ ಸಾಧ್ಯಶ್ಯಮೂಲವಾದ ಚಿಂತನಾ ಕ್ರಮ; ಇನ್ನೊಂದು ಮೆಟಾನಾಮಿಕ್ ಅಂದರೆ ಸಂಬಂಧ ಮೂಲವಾಗಿರುವಂತಹುದು ಎನ್ನುವ ಪತಿಕಲ್ಪನಾತ್ಮಕ ಚರ್ಚೆಯನ್ನು ಆರಂಭಿಸುತ್ತಾರೆ – ಅಂದರೆ ಯಾವುದಾದರೂ ಎರಡು ಸಂಗತಿಗಳ ನಡುವೆ ಇರುವ ಸಾದೃಶ್ಯದ ಮೂಲಕ ಚಿಂತನೆಗಳನ್ನು ಮಾಡುವಂತಹದು.

ಸ್ತ್ರೀವಾದಿಗಳ ತಿಳುವಳಿಕಯಲ್ಲಿ ಎರಡು ಬಗೆಯನ್ನು ಗುರುತಿಸುತ್ತಾರೆ ಒಂದು ಬಗೆಯ ಚಿಂತನೆಯನ್ನು ಗಂಡು ಚಿಂತಾನಾ ಕ್ರಮವೆಂದೂ (ಅದು ಮೆಟಫಾರಿಕ್) ಮತ್ತು ಇನ್ನೊಂದು ಹೆಣ್ಣು ಚಿಂತನಾಕ್ರಮವೆಂದೂ (ಅದು ಮೆಟನಾಮಿಕ್) ವಿವರಿಸತೊಡಗಿದರು. ಸಾದೃಶ್ಯ ಮೂಲವಾಗಿ ಚಿಂತಿಸತಕ್ಕದ್ದು ಗಂಡು ಚಿಂತನಾಕ್ರಮ. ಸಂಬಂಧದ ಮೂಲವಾಗಿ ಚಿಂತಿಸತಕ್ಕದು, ಗ್ರಹಿಸತಕ್ಕದು ಮತ್ತು ಅಭಿವ್ಯಕ್ತಿ ಮಾಡತಕ್ಕದು ಹೆಣ್ಣು ಚಿಂತನಾ ಕ್ರಮ. ಉದಾಹರಣೆಗೆ: ಈ ಸಾಧ್ಯಶ್ಯಮೂಲ ಚಿಂತನೆಯನ್ನು, ಹಾಗೆ ಯೋಚನೆ ಮಾಡುವಂತಹಹುದನ್ನು ಆಂಡ್ರೋ–ಸೆಂಟ್ರಿಕ್ (ಪುರುಷ ಕೇಂದ್ರಿತ) ಎಂತಲೂ. ಸಂಬಂಧ ಮೂಲ ಚಿಂಥನೆಯನ್ನು ಗೈನೋ–ಸೆಂಟ್ರಿಕ್ (ಸ್ತ್ರೀ ಕೇಂದ್ರಿತ) ಎಂತಲೂ ಹೇಳುತ್ತಾರೆ. ಗಂಡು ಚಿಂತನಾ ಕ್ರಮದಲ್ಲಿ ಗ್ರಹಿಕೆ ಮತ್ತು ಅಭಿವ್ಯಕ್ತಿ ಯಾವಾಗಲೂ ಸವಾಲು ಹಾಕುವ ರೀತಿಯದ್ದು. ಏನನ್ನಾದರೂ ಸ್ಥಾಪಿಸುವ, ಸಾಧಿಸುವ ಮಾದರಿಯದು. ಈ ಚಿಂತನಾ ಕ್ರಮವೇ ಒಂದು ಅಭಿಪ್ರಾಯವನ್ನು ಸ್ಥಾಪಿಸುವ ದೃಷ್ಟಿಯಿಂದ, ಬೇರೊಂದು ಅಭಿಪ್ರಾಯವನ್ನು ನಿರಾಕರಿಸುವ ದೃಷ್ಟಿಯನ್ನು ಹೊಂದಿರುತ್ತದೆ. ಹೆಣ್ಣು ಚಿಂತನಾ ಕ್ರಮ ಎನ್ನುವುದು ಹಾಗಲ್ಲ. ಅದು ಒಳಗೊಳ್ಳುವ ವಿಧಾನವನ್ನು ಅನುಸರಿಸುತ್ತದೆ. ಒಂದು ಚಿಂತನಾ ಕ್ರಮ ತನಗೆ ಒಪ್ಪಿತವಲ್ಲದ್ದನ್ನು ಹೊರಗಿಡುವ ವಿಧಾನವನ್ನು ಅನುಸರಿಸಿದರೆ ಇನ್ನೊಂದು ಭಿನ್ನವಾದುದನ್ನು ಒಳಗೊಳ್ಳುವ ಮಾರ್ಗವನ್ನು ಅನುಸರಿಸುತ್ತದೆ. ಈ ವ್ಯತ್ಯಾಸವನ್ನು ಇನ್ನೂ ವಿಸ್ತರಿಸಿ ಚರ್ಚಿಸಿರುವುದುಂಟು. ಗಂಡು ಚಿಂತನಾ ಕ್ರಮವನ್ನು ವಾದ ಹೂಡುವ ಬಗೆಯೆಂದೂ, ಹೆಣ್ಣು ಚಿಂತನಾ ಕ್ರಮವು ನಿರೂಪಣಾ ಮಾರ್ಗವನ್ನು ಅವಲಂಬಿಸುವ ಬಗೆಯೆಂದೂ ಹೇಳುತ್ತಾರೆ.

ಮುಂದುವರೆಯುತ್ತಾ ಒಂದು – ಹೆಣ್ಣು ನೆಲೆಯ ಭಾಷಾ ಬಳಕೆಯಾದರೆ ಇನ್ನೊಂದು ಗಂಡು ನೆಲೆಯ ಭಾಷಾ ಬಳಕೆಯಾಗಿದೆ. ಅವೆರಡರ ನಡುವೆ ವಿರೋಧಿ ನೆಲೆ ಇಲ್ಲ. ಅವರೆರಡು ಪರಸ್ಪರ ಮುಖಾಮುಖಿಯಾಗುವ ನೆಲೆಯಲ್ಲಿಲ್ಲ. ಪೂರಕ ನೆಲೆಯಲ್ಲಿವೆ. ಇವುಗಳನ್ನು ಗಂಡಸಾದರೂ ಬಳಸಬಹುದು ಇಲ್ಲವೇ ಹೆಂಗಸಾದರೂ ಬಳಸಬಹುದು. ಹೆಂಗಸಿಗೆ ಕೊಟ್ಟದ್ದನ್ನು ಪಡೆದುಕೊಳ್ಳುವ ನೆಲೆಯಲ್ಲಿ ಗೊತ್ತು ಮಾಡಿದ್ದರಿಂದ ಅವಳಿಗೆ ಭಾಷೆಯ ದೃಷ್ಟಿಯಿಂದ ಎರಡು ನಿಯಂತ್ರಣಗಳು ರೂಪುಗೊಂಡಿವೆ. ಅವುಗಳಲ್ಲಿ ಒಂದು ಶಬ್ದದಿಂದ ನಿಶ್ಯಬ್ದದ ಕಡೆಗೆ ಚಲಿಸುವುದು. ಅಂದರೆ ಸದ್ದಿನಿಂದ ಮೌನದ ಕಡೆಗೆ ಚಲನೆ. ಭಾಷಿಕ ಸಾಮಥ್ಯವನ್ನು ಪಡೆದುಕೊಳ್ಳುವ ಹಂತದಲ್ಲಿ ಹೆಣ್ಣು ಮತ್ತು ಗಂಡು ಎಂಬ ವ್ಯತ್ಯಾಸವಿಲ್ಲದೆ ಇರಬಹುದು. ಆದರೆ ಸಾಮರ್ಥ್ಯವನ್ನು ಪಡೆದುಕೊಂಡ ಮೇಲೆ ಅದರ ಬಳಕೆಯ ನೆಲೆಗೆ ಬಂದಾಗ ಹೆಂಗಸಿನ ಪ್ರಯಾಣ ಶಬ್ದದಿಂದ ಮೌನದ ಕಡೆಗೆ.

ಮುಖ್ಯವಾಗಿ ಹೆಣ್ಣಿನ ಅವಕಾಶವನ್ನು ನಿರಾಕರಿಸುತ್ತಾ ಕ್ರಮೇಣ ಅವಳ ಮಾತು ಹೇಗೆ ಮೌನವಾಗುತ್ತಾ ಸಾಗುತ್ತದೆ ಎಂಬುದನ್ನು ಲೇಖಕರು ತಿಳಿಸುತ್ತಾರೆ. 3ನೇ ಲೇಖನದಲ್ಲಿ "ಭಾಷೆಯ ರಚನೆ ಮತ್ತು ಬಳಕೆಯ ವಿಚಾರದಲ್ಲೂ ಗಂಡಸು ಮತ್ತು ಹೆಂಗಸರಲ್ಲಿ ವ್ಯತ್ಯಾಸವಿದ್ದು, ಅದು ತಾರತಮ್ಯ ಸೂಚಕವೂ ಆಗಿದೆ" ಎಂದು ಹೇಳುತ್ತಾ "ಹೆಂಗಸಿಗೆ ಮಾತನಾಡುವ ಅವಕಾಶವಿರುತ್ತದೆ. ಆದರೆ ಆ ಮಾತಿಗೆ ಅಧಿಕಾರವಿರುವುದಿಲ್ಲ..." ಎಂದು ತಿಳಿದಾಗ ಹೆಣ್ಣು ಮಾತನ್ನು ಬಳಸದೆ ಮೌನಕ್ಕೆ ಶರಣಾಗುತ್ತಾಳೆ. ಆಕೆ ಪ್ರತಿಕ್ರಿಯೆ ನೀಡುವುದಿಲ್ಲ. ತನ್ನೊಳಗೆ ತಾನು ಮಾತನಾಡಿಕೊಳ್ಳುವ ತಂತ್ರಗಾರಿಕೆಗೆ ಒಳಗಾಗುತ್ತಾಳೆ ಎಂಬುದನ್ನು ಲೇಖಕರು ಗುರುತಿಸುತ್ತಾರೆ.

"ಹೆಣ್ಣಿನ ಭಾಷಾ ಸಾಮರ್ಥ್ಯ ಕಳೆದುಹೋಗುವ ಬಗೆ"ಯಲ್ಲಿ ಗಂಡಸಿನ ಭಾಷೆ, ಹೆಂಗಸಿನ ಭಾಷೆ ಎಂದು ವಿಭಾಗಿಸಲಾಗಿದ್ದು, ಇದನ್ನೇ ಅವರ ಸ್ವಭಾವವನ್ನು ಅರಿಯಲು ಸಾಮಾಜಿಕ ಸ್ಥಾನಮಾನಗಳ ನಿರ್ಧಾರಕ್ಕಾಗಲಿ ಬಳಸಿದರೆ, ನಾವು ಈ ಭಿನ್ನತೆಯನ್ನು ತಾರತಮ್ಯವಾಗಿ ನೆಲಗೊಳಿಸಿದಂತಾಗುತ್ತದೆ. ಕುತೂಹಲವೆಂದರೆ ಈ ತಾರತಮ್ಯ ಹೆಂಗಸಿನ ಭಾಷೆಯ ಬಳಕೆ ಅಥವಾ ರಚನೆಯಲ್ಲಿ ಒಂದು ಶೋಷಣೆಯ ನೆಲೆಗಟ್ಟಾಗಿ ಕಾಣಿಸಿಕೊಳ್ಳುತ್ತದೆ ಎಂಬುದು. ಈ ಭಿನ್ನತೆಯ ನೆಲೆಯನ್ನು ಗಮನಿಸಿದಾಗ

ಸಾಮುದಾಯಿಕವಾಗಿ ಕೆಲವು ಭಾಷೆಗಳನ್ನು ಗಂಡು, ಕೆಲವನ್ನು ಸಾಮಾನ್ಯ ಭಾಷೆ ಎಂದು ಹೇಳಲಾಗುತ್ತದೆ.

ಗಂಡಿನ ಭಾಷಾ ಸಂವಹನವು ಯಾರ ಜೊತೆಯಲ್ಲಿ ನಡೆಯುತ್ತಿರಲಿ ಅವರು ಎಲ್ಲಿ, ಹೇಗೆ ಮಾತನಾಡುತ್ತಿರಲಿ ಅದರ ಮೂಲ ಲಕ್ಷಣ ರಿಪೋರ್ಟಿಂಗ್ ಆಗಿರುತ್ತದೆ. ಅವರು ತಮ್ಮನ್ನು ತಾವು ಮಂಡಿಸಿಕೊಳ್ಳುತ್ತಿರುತ್ತಾರೆ. ಗಂಡಿನ ಭಾಷೆಯ ಪ್ರಧಾನ ಲಕ್ಷಣ ತನ್ನನ್ನು ತಾವು ಮಂಡಿಸಿಕೊಳ್ಳುತ್ತಿರುತ್ತಾರೆ. ಗಂಡಿನ ಭಾಷೆಯ ಪ್ರಧಾನ ಲಕ್ಷಣ ತನ್ನನ್ನು ತಾನು ಹೊರಗಿಟ್ಟುಕೊಂಡು ಅಂದರೆ ತನ್ನ ವ್ಯಕ್ತಿತ್ವ, ಮನಸ್ಥಿತಿಯನ್ನು ಹೊರಗಿರಿಸಿಕೊಂಡು ಸಂಭಾಷಣೆ/ ಸಂವಹನದಲ್ಲಿ ತೊಡಗಿರುವುದು. ಹೆಂಗಸಿನ ಭಾಷೆಯಲ್ಲಿ ರ್‍ಯಾಪೋರ್ಟು ಕಲ್ಪಿಸಿಕೊಳ್ಳುವುದು ಮುಖ್ಯವಾಗಿರುತ್ತದೆ. ಒಂದು ಬಗೆಯ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಅವರ ಭಾಷಾ ಸಂವಹನದ, ಮುಖ್ಯ ಲಕ್ಷಣವಾಗಿರುತ್ತದೆ. ಅವರು ಯಾವಾಗಲು ಮಾತನಾಡುವವರ ಜೊತೆ ಒಂದು ಬಗೆಯ ಸಂಬಂಧ ಕಲ್ಪಿಸಿಕೊಳ್ಳಲು ಯತ್ನಿಸುತ್ತಿರುತ್ತಾರೆ. ಅದಕ್ಕಾಗಿ ಈ ಸಂಬಂಧದ ಪರಿಕರಗಳನ್ನು ಭಾಷೆಯಲ್ಲಿ ಅಡಕಗೊಳಿಸಿಕೊಂಡಿರುತ್ತರೆ. ಗಂಡಸು ಮಾತನಾಡುವಾಗ ಯಾವುದೇ ಸಂಗತಿಯಾಗಿದ್ದರೂ ಅದೊಂದು ನಿರ್ಧಾರದ ನೆಲೆಯಲ್ಲಿರುತ್ತದೆ. ಪ್ರತಿಕ್ರಿಯೆಯನ್ನು ನಿರೀಕ್ಷಿಸುವ ನೆಲೆಯಲ್ಲಿರುವುದಿಲ್ಲ. ಆದರೆ ಹೆಂಗಸು ಮಾತನಾಡುವಾಗ ಅದಕ್ಕೆಂದು ಅವರಿಗೆ ಪ್ರತಿಕ್ರಿಯೆ ಮುಖ್ಯವಾಗಿರುತ್ತದೆ.

"ಮೌನವಾಗುವಿಕೆ ಮತ್ತು ಮೂಕವಾಗುವಿಕೆ" ಎಂಬ ಲೇಖನದಲ್ಲಿ ಹೆಂಗಸು ಭಾಷೆ ಕಲಿಯುವ ಸಂದರ್ಭದಲ್ಲಿ ಗಂಡಸಿಗಿಂತ ವೇಗವಾಗಿ ಭಾಷಾ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾಳೆ. ಆದರೆ ಆ ಸಾಮರ್ಥ್ಯವನ್ನು ಬಳಸುವಾಗ ಸಾಮಾಜಿಕವಾದ ಅಡೆತಡೆಗಳಿಂದಾಗಿ ಹೆಂಗಸಿನ ಮಾತಿನ ಬಳಕೆಯ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಹೆಣ್ಣಿಗೆ ವಿಶಿಷ್ಟವಾದ ಅಭಿವ್ಯಕ್ತಿ ವಿಧಾನಕ್ಕೆ ತಕ್ಕ ಭಾಷೆಯ ರಚನೆಗಳು ಬಳಕೆಯ ಸಾಧ್ಯತೆಗಳು ಇಲ್ಲ. ಇರುವ ಭಾಷೆಯೊಡನೆ ಸಂಬಂಧವನ್ನು ಕಲ್ಪಿಸಿಕೊಳ್ಳಬೇಕಾದ ಒತ್ತಡ ಆಕೆಯ ಮೇಲಿದೆ. ಸಮಾಜ ನಿರ್ಮಿತ ವ್ಯವಸ್ಥೆಯಲ್ಲಿ ಇರುವ ಲಿಂಗ ತಾರತಮ್ಯದ ಪ್ರಭಾವ ಭಾಷೆಯಲ್ಲೂ ಕಂಡುಬರುತ್ತದೆ ಎಂದು ಲೇಖಕರು ಹೇಳುತ್ತಾರೆ.

"ಕಲಾತ್ಮಕ ಅಭಿವ್ಯಕ್ತಿಗಳಲ್ಲಿ ಹೆಣ್ಣಿನ ಭಾಷೆಗಿರುವ ಸವಾಲುಗಳು" ಲೇಖನದಲ್ಲಿ ಡಾ. ಎಚ್.ಎಸ್.ರಾಘವೇಂದ್ರರಾವ್‌ರವರು ಹೆಣ್ಣಿನ ಅಭಿವ್ಯಕ್ತಿ ಹೇಗೆ ದೂರವಾಗುತ್ತದೆ. ಅಭಿವ್ಯಕ್ತಿ ಸಂದರ್ಭದಲ್ಲಿ ಹೆಣ್ಣಿನ ಮೇಲೆ ಆಗುವ ಒತ್ತಡವನ್ನು ವಿವರಿಸುತ್ತಾರೆ.

ಅಲ್ಲದೆ ಈ ಕೃತಿಯಲ್ಲಿ ಲೇಖನಗಳನ್ನು ಬರೆದಿರುವ ವಿವಿಧ ಲೇಖಕರು, ಹೆಣ್ಣಿನ ಭಾಷೆ ಯಾವ ರೀತಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ? ಲಿಂಗತಾರತಮ್ಯ, ಭಾಷಾ ಬಳಕೆಯಲ್ಲೂ ವ್ಯತ್ಯಾಸ, ಸಾರ್ವಜನಿಕ ಹಾಗೂ ಕೌಟುಂಬಿಕ ವಲಯದಲ್ಲಿ ಹೆಣ್ಣಿನ ಮಾತು ಮೂಲೆಗುಂಪಾಗುವ ಬಗೆಯನ್ನು ಅತ್ಯುತ್ತಮವಾಗಿ ವಿವರಿಸಿದ್ದಾರೆ. "ಸ್ತ್ರೀವಾದಿ ಭಾಷಾ ಯೋಜನೆ" ಲೇಖನದಲ್ಲಿ ಡಾ. ಅಶೋಕ ಕುಮಾರ್ ರಂಜೇರೆಯವರು ಬರಹದ ಭಾಷೆಯಲ್ಲಿ ಸ್ತ್ರೀವಾದಿ ಭಾಷಾ ಯೋಜನೆಯನ್ನು ರೂಪುಗೊಳಿಸಬೇಕು. ಪುರುಷ ಸೂಚಕ ಪದ ಇರುವಲ್ಲಿ ಸ್ತ್ರೀಸೂಚಕ ಪ್ರತ್ಯಯ ಬಳಸುವುದಕ್ಕಿಂತ ಭಿನ್ನವಾಗಿ ಭಾಷಾ ರಚನೆ ಆಗಬೇಕು. ಜೆಂಡರ್ ಬಯಾಸ್ಡ್ ಅಲ್ಲದ ಭಾಷೆಯನ್ನು ಶಿಕ್ಷಣದಲ್ಲೂ ಬಳಸಬೇಕು. ಈ ನಿಟ್ಟಿನಲ್ಲಿ ಪ್ರಯತ್ನಗಳು ಆಗಬೇಕು ಎಂದು ಹೇಳುತ್ತಾರೆ.

ಹೆಣ್ಣಿನ ಭಾಷೆಯ ಸಮಸ್ಯೆಗಳನ್ನು ವಿವಿಧ ಆಯಾಮಗಳಲ್ಲಿ ಈ ಕೃತಿ ಗುರುತಿಸುತ್ತದೆ. ಲಿಂಗತಾರತಮ್ಯದ ನೆಲೆಗಳು ಭಾಷೆಯಲ್ಲೂ ಹೇಗೆ ನೆಲೆನಿಂತಿದೆ ಎಂಬುದನ್ನು ಕೃತಿ ಬಿಚ್ಚಿಡುತ್ತದೆ. ಇದೇ ತಾರತಮ್ಯದ ನೆಲೆಗಳನ್ನು 'ಆಡಳಿತ ಕನ್ನಡ'ದ ಬಳಕೆಯಲ್ಲೂ ಕಾಣಬಹುದು ಎಂಬುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಹೀಗೆ ಈ ಬರಹವು ಕನ್ನಡದಲ್ಲಿ ಆಡಳಿತ ಎನ್ನುವಾಗ ಯಾರ ಆಡಳಿತ ಎನ್ನುವ ಸವಾಲನ್ನು ನಮ್ಮೆದುರು ಇಡುತ್ತದೆ. ಈ ಸವಾಲನ್ನು ನಾವು ಮುಂದೆ ನಾಲ್ಕನೇ ಅಧ್ಯಾಯದಲ್ಲಿ ಚರ್ಚಿಸಲಿದ್ದೇವೆ.

4. ಎಮ್.ಎಸ್.ಪುಟ್ಟಣ್ಣರವರ The condition of our Kannada (Iris Press, Bangalore) ಲೇಖನ 'ನಮ್ಮ ಕನ್ನಡದ ಸ್ಥಿತಿ[4]'. ಈ ಲೇಖನವು ಬಿ.ಎಂ.ಶ್ರೀಯವರ "ಕನ್ನಡ ಮಾತು ತಲೆಯೆತ್ತುವ ಬಗೆ"ಗಿಂತ ಪೂರ್ವದಲ್ಲಿ ಬಂದಿರುವ ಬರೆಹ. ಅಂದಿನ ದಿನಗಳಲ್ಲಿ ಕನ್ನಡದ ಬಗೆಗೆ ವಿವರವಾಗಿ, ವೈಜ್ಞಾನಿಕವಾಗಿ ಕನ್ನಡ ಭಾಷಿಕ ಸ್ಥಿತಿ ಹೇಗಿದೆ

---

[4] ನಮ್ಮ ಕನ್ನಡದ ಸ್ಥಿತಿ: ಇಂಗ್ಲಿಷ್ ಮೂಲ-ಎಂ.ಎಸ್.ಪುಟ್ಟಣ್ಣ, ಅನು-ಎಚ್.ಎಸ್.ಸುಜಾತ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1976.

ಎಂಬುದನ್ನು ವಿವರಿಸಲಾಗಿದೆ. ಕನ್ನಡ ಭಾಷೆಯ ಬಗ್ಗೆ ಬರೆಯುತ್ತಾ "ಇಂದಿನ ಜನಸಾಮಾನ್ಯರೂ ಕಾರ್ಯಶೀಲರಾದ ಉದ್ಯೋಗಿಗಳೂ ಮಾತಾಡುವ ಬರೆಯುವ ತಾಯ್ನುಡಿಯೇ ಹೊರತು, ಸುಶಿಕ್ಷಿತ ಜನರೂ ಭಾಷಾತಜ್ಞರೂ ಉಪಯೋಗಿಸುವ ಭಾಷೆಯಲ್ಲ (ಪು.7). ಕನ್ನಡದ ಪುನರುಜ್ಜೀವನ ಎಂಬುದು ಅರ್ಥವಿಲ್ಲದ ಮಾತು. ಶುಷ್ಕ ಪಂಡಿತ ಶೈಲಿಯಲ್ಲಿ ಮಾತಾಡುವ ಅಥವಾ ಬರೆಯುವುದರಲ್ಲಿನ ಅನೇಕ ತೊಂದರೆ ಕಷ್ಟಗಳನ್ನು ಗಮನಿಸಿದರೆ ಒಂದು ಗಂಭೀರವಾದ ಅಪಾಯವನ್ನು ಮುಂಗಾಣದೆ ಇರಲಾಗುವುದಿಲ್ಲ. ಅಂದರೆ ಜನಸಾಮಾನ್ಯರು ತಮ್ಮದೇ ಆದ ಭಾಷೆಯನ್ನು ರೂಪಿಸಿಕೊಳ್ಳುತ್ತಾರೆ ಮತ್ತು ಶಿಷ್ಟವರ್ಗದವರಿಗೂ ಜನಸಾಮಾನ್ಯರಿಗೂ ಮಧ್ಯೆ ಇರಬೇಕಿಲ್ಲದ ಒಂದು ಅಗಾಧ ಕಂದರ ಏರ್ಪಡುವುದರ ಮೂಲಕ ಐಕ್ಯಮತದ ಮುಖ್ಯಪಾಶವಾಗಿರುವ ಸರ್ವಸಮವಾದ ಭಾಷೆಯು ತ್ಯಾಜ್ಯವಾಗುತ್ತದೆ ಮತ್ತು ಈಗಾಗಲೇ ಆಳವಾಗಿರುವ ರೂಡವೈರವು ಯಾವುದೋ ಅಜ್ಞಾತ ಕ್ರಾಂತಿಯಲ್ಲೂ ರಾಷ್ಟ್ರೀಯ ದುರಂತದಲ್ಲೂ ಮಾತ್ರ ಕೊನೆಗೊಳ್ಳುತ್ತದೆ" (ಪು.9) ಎಂದಿದ್ದಾರೆ. ಜನಸಾಮಾನ್ಯರ ಆಡುಮಾತಿಗೆ ಕೊಡಬೇಕಾದ ಪ್ರಾಮುಖ್ಯತೆಯ ಬಗ್ಗೆ ಇಲ್ಲಿ ನಮ್ಮ ಗಮನವನ್ನು ಲೇಖಕರು ಸೆಳೆಯುತ್ತಾರೆ. ಜನಸಾಮಾನ್ಯರು ಬಳಸುವ ಭಾಷೆಯು ಉಳಿಯುತ್ತದೆಯೇ ಹೊರತು ಪ್ರಾಚೀನ ರೂಪಕ ಭಾಷೆ ಅಥವಾ ಶಿಷ್ಟಭಾಷೆ ಉಳಿಯುವುದಿಲ್ಲ ಎಂಬುದನ್ನು ಇಲ್ಲಿ ಒತ್ತಿ ಹೇಳಲಾಗಿದೆ.

1930ಕ್ಕಿಂತ ಪೂರ್ವದಲ್ಲೇ ಭಾಷಿಕ ನ್ಯಾಯದ ಬಗ್ಗೆ ಚರ್ಚಿಸಿರುವ ಲೇಖನ ಇದಾಗಿದ್ದು, ಇಂದಿಗೆ ಬೇಕಾದ ಕನ್ನಡದ ಬಗೆಗಿನ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಪ್ರಮುಖವಾದ ತೀರ್ಮಾನಗಳನ್ನು ಒಳಗೊಂಡಿದೆ.

5. **'ಕರ್ನಾಟಕದಲ್ಲಿ ಆಡಳಿತ ಭಾಷಾ ನೀತಿ ಮತ್ತು ಅದರ ಜಾರಿ'**[5]

ಈ ಕೃತಿಯಲ್ಲಿ **ಆಡಳಿತ ಭಾಷಾ ನೀತಿಯನ್ನು ಜಾರಿಗೊಳಿಸಿದ** ಬಗೆಯನ್ನು ಚಾರಿತ್ರಿಕವಾಗಿ ಕಟ್ಟಿಕೊಡಲಾಗಿದೆ. 1956ಕ್ಕಿಂತ ಹಿಂದೆ, ಕರ್ನಾಟಕದಲ್ಲಿ ಆಡಳಿತ ಭಾಷಾನೀತಿಯ ವಿಕಾಸ ಹೇಗಾಯಿತು? ವಿವಿಧ ಕ್ಷೇತ್ರಗಳಲ್ಲಿ ಎಂದರೆ ಆಡಳಿತ,

---

[5] ಡಾ: ಮಿಡತಲರಾಣಿ, 1977, ಕರ್ನಾಟಕದಲ್ಲಿ ಆಡಳಿತ ಭಾಷಾ ನೀತಿ ಮತ್ತು ಅದರ ಜಾರಿ, ಚೇತನ ಬುಕ್ ಹೌಸ್, ಮೈಸೂರು

ನ್ಯಾಯಾಂಗಗಳಲ್ಲಿ ಅದನ್ನು ಜಾರಿಗೆ ತಂದ ಬಗೆ ಹಾಗೂ ಜಾರಿಗೆ ತರುವ ಸಂದರ್ಭದಲ್ಲಿ ಎದುರಾದ ಸಮಸ್ಯೆಗಳ ಬಗ್ಗೆ ಚರ್ಚೆಗಳನ್ನು ನಡೆಸಿರುವುದು ಇಲ್ಲಿ ಕಾಣುತ್ತದೆ. ಸರ್ಕಾರದಲ್ಲಿ ಹೊರಡಿಸಿದ ಆದೇಶಗಳನ್ನು, ಅವು ಜಾರಿಯಾದ ಅಂಕಿ–ಅಂಶಗಳ ಸಮೇತವಾದ ಮಾಹಿತಿಯನ್ನು ವಿವರಣಾತ್ಮಕವಾಗಿ ಈ ಕೃತಿಯು ಒದಗಿಸುತ್ತದೆ.

ಮುಖ್ಯವಾಗಿ ಈ ಕೃತಿಯಲ್ಲಿ ಕರ್ನಾಟಕದಲ್ಲಿ ಭಾಷಾ ಸ್ವರೂಪದ ಬಗ್ಗೆ ವಿವರಿಸುತ್ತಾ, ಇತರೇ ರಾಜ್ಯಗಳಿಗೆ ಹೋಲಿಸಿದಾಗ, ಕರ್ನಾಟಕದಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಕಡಿಮೆಯಾಗಿದೆ. ಕರ್ನಾಟಕದಲ್ಲಿ 1981ರ ಜನಗಣತಿ ಪ್ರಕಾರ ಶೇ.65.7ರಷ್ಟು ಜನರು ಕನ್ನಡ ಮಾತನಾಡುತ್ತಾರೆ. ಇತರೇ ರಾಜ್ಯಗಳಲ್ಲಿ ಈ ಪ್ರಮಾಣ ಶೇ.85ಕ್ಕಿಂತ ಹೆಚ್ಚಿದೆ. ಆಡಳಿತ ಭಾಷಾ ನೀತಿ ಮತ್ತು ಕರ್ನಾಟಕದಲ್ಲಿ ಅದರ ಜಾರಿ ಬಗ್ಗೆ ಮಾತನಾಡುತ್ತಾ, 20ನೇ ಶತಮಾನದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿ ನಡೆದ ಚಳುವಳಿಗಳ ಬಗ್ಗೆ ಅದರ ಚಾರಿತ್ರಿಕ ಅಂಶಗಳೊಂದಿಗೆ ವಿವರವಾಗಿ ಕಟ್ಟಿಕೊಡುತ್ತಾರೆ. ರಾಜ್ಯ ಏಕೀಕರಣದ ಪರಿಣಾಮಗಳು, ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೊಳಿಸುವ ಸಂಬಂಧ ರಚಿಸಲಾದ ಅನೇಕ ಸಮಿತಿಗಳು, ಅದರ ವರದಿಗಳನ್ನು ಕೂಲಂಕಷವಾಗಿ ಚರ್ಚಿಸಿದ್ದಾರೆ. ವಿಧಾನಮಂಡಲದಲ್ಲಿ ಭಾಷಾ ವಿಧೇಯಕದ ಕುರಿತಾದ ಚರ್ಚೆಯ ಬಗ್ಗೆಯೂ ಸಹ ವಿವರವಾಗಿ ಚರ್ಚಿಸಿದ್ದಾರೆ. ಮೈಸೂರು 'ಕರ್ನಾಟಕ' ಎಂದು ಬದಲಾದ ಸನ್ನಿವೇಶ, ಆಡಳಿತ ವ್ಯವಸ್ಥೆ, ರಾಜ್ಯದ ಪುನರ್ ಸಂಘಟನೆಯಾದ ನಂತರದ ವ್ಯವಸ್ಥೆ, ಆಡಳಿತ ಕನ್ನಡ ಜಾರಿಗೆ ಪೂರಕವಾಗಿ, ಸರ್ಕಾರ ತೆಗೆದುಕೊಂಡ ಕ್ರಮಗಳು, ಹೊರಡಿಸಿದ ಆದೇಶಗಳು, ರಚಿಸಿದ ಸಮಿತಿಗಳು, ಆಯೋಗಗಳು– ಅವುಗಳ ಶಿಫಾರಸ್ಸುಗಳ ಬಗ್ಗೆ ಈ ಕೃತಿಯಲ್ಲಿ ಚರ್ಚಿಸಲಾಗಿದೆ. ಒಟ್ಟಾರೆಯಾಗಿ ಆಡಳಿತ ಕನ್ನಡವು ಹಂತಹಂತವಾಗಿ ಬೆಳೆದುಬಂದ ರೀತಿ, ಅದಕ್ಕೆ ಪೂರಕವಾಗಿ ಅಂದಂದಿನ ಸರ್ಕಾರಗಳು ತೆಗೆದುಕೊಂಡ ಕ್ರಮಗಳು, ಇವುಗಳನ್ನು ಚಾರಿತ್ರಿಕ ಹಾಗೂ ರಾಜಕೀಯ ನೆಲೆಯಲ್ಲಿ ಕೃತಿಯು ಬಿಚ್ಚಿಡುತ್ತಾ ಸಾಗಿದೆ. ಆಡಳಿತ ಕನ್ನಡದ ಅಧ್ಯಯನ ನಡೆಸುವವರಿಗೆ, ಸಂಶೋಧಕರಿಗೆ ಅತ್ಯುತ್ತಮ ಮಾಹಿತಿಯನ್ನು ಒದಗಿಸುವ ಕೃತಿ ಇದಾಗಿದೆ.

6. ಎಲ್.ಎಸ್.ಶೇಷಗಿರಿರಾವ್ ಸಂಪಾದಿಸಿದ **'ಕನ್ನಡದ ಅಳಿವು ಉಳಿವು'**[6] ಕೃತಿಯು 1985ರಲ್ಲಿ ಪ್ರಕಟಗೊಂಡಿದ್ದು, ಲೇಖಕರೇ ಹೇಳಿಕೊಂಡ ಹಾಗೇ ಕನ್ನಡ ಭಾಷೆಯ ಅಭಿವೃದ್ಧಿ ಸಮೀಕ್ಷೆಗೆ ಸಂಬಂಧಿಸಿದ ಕೃತಿಯಾಗಿದೆ. ಕನ್ನಡ ಭಾಷೆಯ ಪರಿಚಯದಿಂದ ಹಿಡಿದು, ಕಾರ್ಖಾನೆ, ನ್ಯಾಯಾಲಯ, ಬ್ಯಾಂಕು, ಅಂಚೆ ಕಚೇರಿ, ಪತ್ರಿಕೋದ್ಯಮ, ಶಿಕ್ಷಣ, ಪ್ರಕಾಶನೋದ್ಯಮ, ಆಕಾಶವಾಣಿ, ದೂರದರ್ಶನ ಈ ರಂಗಗಳಲ್ಲಿ ಕನ್ನಡದ ಬಳಕೆ ಹೇಗಿತ್ತು? ಹೇಗಿರಬೇಕು ಎಂಬುದರ ಬಗ್ಗೆ ಲೇಖನಗಳನ್ನು ಒಳಗೊಂಡಿದೆ. ಅಲ್ಲದೆ, ಕನ್ನಡಿಗರು ಕನ್ನಡವನ್ನು ಬಳಸುವಲ್ಲಿ ತೋರಬೇಕಾದ ಔದಾರ್ಯತೆ, ಇಂಗ್ಲೀಷನ್ನು ಬದಿಗಿರಿಸಿ, ಕನ್ನಡದ ಅಭಿಮಾನವನ್ನು ಬೆಳೆಸಿಕೊಳ್ಳಬೇಕು ಎಂಬುದಾಗಿ ತಿಳಿಸುತ್ತದೆ. ಕನ್ನಡಿಗರಿಗೆ ಆತ್ಮಾಭಿಮಾನ ಮೂಡಿಸುವ ನೆಲೆಯಲ್ಲಿದೆ ಇಲ್ಲಿನ ಬರೆಹ. ಒಟ್ಟಿನಲ್ಲಿ ಹೇಳುವುದಾದರೆ ಈ ಕೃತಿಯು ವಿವರಣಾತ್ಮಕವಾಗಿದ್ದು, ಅನುಭವಜನ್ಯ (positivism) ನೆಲೆಯಲ್ಲಿದೆ.

7. **'ಆಂಗ್ಲರ ಆಡಳಿತದಲ್ಲಿ ಕನ್ನಡ'**[7]

ಈ ಕೃತಿಯು ಒಂದು ಸಂಶೋಧನಾ ಗ್ರಂಥವಾಗಿದ್ದು ಆಡಳಿತ ಭಾಷೆಯಾಗಿ ಕನ್ನಡವನ್ನು ಬಳಸಿದ ಆಂಗ್ಲ ಅಧಿಕಾರಿಗಳ ವಿವರಗಳು, ಸಾಮಾನ್ಯ ಆಡಳಿತದಲ್ಲಿ ಕನ್ನಡವನ್ನು ಬಳಸಬಹುದಾದ ಬಗೆ... ಇವುಗಳ ಬಗ್ಗೆ ವಿವರವಾಗಿ ಚರ್ಚೆ ನಡೆಸಲಾಗಿದೆ. ಕೃತಿಯು ಮಾಹಿತಿ ಪ್ರಧಾನವಾಗಿದ್ದು, ಮಾಹಿತಿ ಸಂಗ್ರಹಣೆಗಾಗಿ ಕೃತಿಕಾರರು ಸಾಕಷ್ಟು ಪರಿಶ್ರಮ ಪಟ್ಟಿರುವುದನ್ನು ಕಾಣಬಹುದು. ಪ್ರಾದೇಶಿಕ ಭಾಷೆಯಲ್ಲಿ ಆಡಳಿತ ನಡೆಸಬೇಕು ಎಂಬ ಉದ್ದೇಶದಿಂದ ಆಂಗ್ಲ ಅಧಿಕಾರಿಗಳು ಹೇಗೆ ಕನ್ನಡವನ್ನು ಕಲಿತರು? ಕನ್ನಡನಾಡಿನ ವಿವಿಧ ಕ್ಷೇತ್ರಗಳ ಅಧ್ಯಯನ ಮಾಡಿ, ಕನ್ನಡಕ್ಕೆ ವಿಶಿಷ್ಟವಾದ ಕಾಣಿಕೆಯನ್ನು ಈ ಆಂಗ್ಲರು ನೀಡಿದರು ಎಂಬುದನ್ನು ಬಣಕಾರರು ಗುರುತಿಸಿದ್ದಾರೆ. ಆಂಗ್ಲ ಅಧಿಕಾರಿಗಳ ಬಗೆಗೆ ಅನಗತ್ಯವಾದ ವ್ಯಾಮೋಹವನ್ನು ಇಟ್ಟುಕೊಂಡೇ ಕೃತಿ ರಚನೆ ಮಾಡಿದ್ದಾರೋ ಎಂಬ ಗುಮಾನಿ ನಮ್ಮನ್ನು ಕಾಡುತ್ತದೆ. ಅಷ್ಟರಮಟ್ಟಿಗೆ ಆಂಗ್ಲ

---

[6] ಕನ್ನಡದ ಅಳಿವು ಉಳಿವು: ಸಂ–ಎಲ್.ಎಸ್.ಶೇಷಗಿರಿರಾವ್, ಕನ್ನಡ ಭಾಷಾ ಅಭಿವೃದ್ಧಿಯ ಸಮೀಕ್ಷಾ ಪ್ರಕಾಶನ, ಬೆಂಗಳೂರು, 1985

[7] ಮಹದೇವ ಬಣಕಾರರ, 1986, 'ಆಂಗ್ಲರ ಆಡಳಿತದಲ್ಲಿ ಕನ್ನಡ', ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಅಧಿಕಾರಿಗಳ ಕಾರ್ಯವನ್ನು ಲೇಖಕರು ವೈಭವೀಕರಿಸಿ ಬರೆದಿರುವುದು ಇದಕ್ಕೆ ಕಾರಣವಾಗಿದೆ. ಇದು ಕೂಡ **ಎಂಪಿರಿಕಲ್ ವಿಧಾನದಲ್ಲಿ** ನಡೆದ ಅಧ್ಯಯನವಾಗಿದ್ದು, ದೊರಕಿದ ಅಂಕಿ-ಅಂಶಗಳನ್ನು ಇಟ್ಟುಕೊಂಡು ಸಿದ್ಧ **ಮಾದರಿಯ** ವಿಶ್ಲೇಷಣೆಯನ್ನು ಮಾಡುವ ಮೂಲಕ ಯಥಾಸ್ಥಿತಿಯನ್ನೇ ಮುಂದುವರಿಸಿದೆ. ಅಂದರೆ, ಅಪಾರವಾದ ಮಾಹಿತಿಗಳನ್ನು ತೆಗೆದುಕೊಂಡು ಚರ್ಚೆಗೆ ತೊಡಗಲು ಅವಕಾಶವಿದ್ದರೂ ಭವಿಷ್ಯದ ಬದಲಾವಣೆಯ ಮುನ್ನೋಟಗಳನ್ನು ನೀಡುವಲ್ಲಿ ಕೃತಿ ವಿಫಲವಾಗಿದೆ ಎಂದೇ ಹೇಳಬಹುದು.

8. **'ಆಡಳಿತ ಕನ್ನಡ ಕೈಪಿಡಿ'**[8]

ಸಿ.ಎಂ.ವೀರಭದ್ರಯ್ಯರವರು ಬರೆದ ಈ ಕೃತಿಯಲ್ಲಿ ಆಡಳಿತ ಭಾಷೆಯ ಅಧ್ಯಯನ, ಕನ್ನಡ ಆಡಳಿತ ಪರಂಪರೆ, ಭಾಷಾದೋಷ ಮತ್ತು ಸಂಧಿ, ವಿವಿಧ ಬಗೆಯ ಪತ್ರಗಳು, ವ್ಯಾಕರಣಕ್ಕೆ ಸಂಬಂಧಿಸಿದ ಲೇಖನಗಳಿವೆ. ಹೊಸದಾಗಿ ಕನ್ನಡವನ್ನು ಕಲಿಯುವವರಿಗೆ ಮಾಹಿತಿಯನ್ನು ಒದಗಿಸುವಂತಿದೆ ಈ ಪುಸ್ತಕ. ಕನ್ನಡವು ಹೀಗಿತ್ತು, ಹೀಗಿದೆ ಎನ್ನುವುದನ್ನು ಹೇಳುವ ನೆಲೆಗೆ ಸೀಮಿತಗೊಂಡಿರುವುದನ್ನು ಇಲ್ಲಿ ಕಾಣಬಹುದು. ಕನ್ನಡವನ್ನು ಯಥಾಸ್ಥಿತಿ ನೆಲೆಯಲ್ಲಿ ಉಳಿಸುವ ಕೆಲಸವನ್ನು ಈ ಕೃತಿಯೂ ಮಾಡುತ್ತದೆ.

9. **'ಆಡಳಿತ ಭಾಷೆ ಕನ್ನಡ'**[9]

ಈ ಕೃತಿಯು ಬ್ರಿಟೀಷರ ಕಾಲದಿಂದ ಹಿಡಿದು, 1996 ರವರೆಗೆ ಕನ್ನಡವನ್ನು ಆಡಳಿತದಲ್ಲಿ ಜರುಗಿಸಿರುವುದರ ಬಗ್ಗೆ ಸಂಕ್ಷಿಪ್ತವಾದ ಚಾರಿತ್ರಿಕ ಮಾಹಿತಿಯನ್ನು ಒದಗಿಸುತ್ತದೆ. ಅಂದಿನ ಸರ್ಕಾರಕ್ಕೆ ಸಲ್ಲಿಸಿದ ವಿವಿಧ ಮನವಿ ಪತ್ರಗಳು, ಪತ್ರ ವ್ಯವಹಾರ ವಿಧಾನಗಳು, ಆಡಳಿತ ಪಾರಿಭಾಷಿಕ ಪದಗಳ ಪಟ್ಟಿಯನ್ನು ಈ ಕೃತಿಯಲ್ಲಿ ನೀಡಲಾಗಿದೆ. ಇಂಗ್ಲೀಷರು ಕರ್ನಾಟಕದಲ್ಲಿ ಕನ್ನಡವನ್ನು ಹೇಗೆ ಬಳಸಿದರು ಎಂಬುದನ್ನು ವೈಭವೀಕರಿಸುವ ನೆಲೆಯಲ್ಲಿ ಇದರಲ್ಲಿ ವಿವರಗಳು ಇವೆ. ವಿದೇಶಿಯರಿಗೆ ಸಾಧ್ಯವಾದದ್ದು ಕನ್ನಡಿಗರಿಗೆ ಯಾಕೆ ಸಾಧ್ಯವಾಗುತ್ತಿಲ್ಲ, ಅವರಿಗಿದ್ದ ಕನ್ನಡ ಪ್ರೀತಿ, ಕನ್ನಡಿಗರಿಗೆ ಕನ್ನಡದ

---

[8] ಆಡಳಿತ ಕನ್ನಡ ಕೈಪಿಡಿ: ಸಿ.ಎಂ.ವೀರಭದ್ರಯ್ಯ, ಜಿಲ್ಲಾ ತರಬೇತಿ ಸಂಸ್ಥೆ ಪ್ರಕಾಶನ, ಬಳ್ಳಾರಿ, 1994

[9] ಡಿ.ಎಸ್.ಛಾಯಾಪತಿ, 1996. ಆಡಳಿತ ಭಾಷೆ ಕನ್ನಡ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು

ಬಗ್ಗೆ ಇಲ್ಲವಲ್ಲ ಎಂಬುದಾಗಿ ಲೇಖಕರು ಮರುಗುತ್ತಾರೆ. ಈ ಸಂದರ್ಭದಲ್ಲಿ ವಿದೇಶಿಯರಿಗಿದ್ದ ಸ್ವಾರ್ಥ, ಅನಿವಾರ್ಯತೆಗಳ ಬಗ್ಗೆ ಕೃತಿ ಏನನ್ನೂ ಹೇಳುತ್ತಿಲ್ಲ. ಆ ಕಾಲದಲ್ಲಿ ವಿದೇಶಿ ವಸಾಹತುಗಾರರರು ತಮ್ಮ ಆಳ್ವಿಕೆಗೆ ಅಗತ್ಯವಿದ್ದ ಸಮರ್ಥನೆ ಮತ್ತು ಬೆಂಬಲವನ್ನು ಮಾತ್ರವೆ ಆ ಮೂಲಕ ಪಡೆದುಕೊಂಡರು ಎಂಬುದನ್ನು ಲೇಖಕರು ಗಮನಿಸದಿರುವುದು ಅಚ್ಚರಿಯನ್ನುಂಟುಮಾಡುತ್ತದೆ. ಅಂದರೆ ಅಂದಿನ ವಸಾಹತುಶಾಹಿಗೆ ಅಗತ್ಯವಾದ Positivism ಎನ್ನುವ ತಾತ್ವಿಕತೆಯನ್ನೇ ಈ ಕೃತಿಯೂ ನೀಡುತ್ತದೆ. ಮಾಹಿತಿಯನ್ನು ಕ್ರೋಢೀಕರಿಸುವ ವಿವರಿಸುವ ಕೆಲಸವನ್ನು ಮಾತ್ರವೇ ಇಲ್ಲಿ ಮಾಡಲಾಗಿದೆ.

10. ಕರ್ನಾಟಕ ಸರ್ಕಾರದ ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯವು ಪ್ರಕಟಿಸಿದ ಜಯತೀರ್ಥ ರಾಜಪುರೋಹಿತರವರು ಬರೆದ "**ಆಡಳಿತದಲ್ಲಿ ಕನ್ನಡವೇ ಏಕೆ ಬೇಕು**? (1977) ಎಂಬ ಕೃತಿಯು ಇಂಗ್ಲೀಷರು ಭಾರತಕ್ಕೆ ಬಂದು ಆಡಳಿತದ ದೈನಂದಿನ ಕೆಲಸಕಾರ್ಯಗಳಿಗೆ ಅವಶ್ಯಕವಾದ ಕಾರಕೂನರನ್ನು ಸೃಷ್ಟಿಸಲು ಶಿಕ್ಷಣದ ಆಂಗ್ಲೀಕರಣವನ್ನು ಮಾಡಿದರು. ಈ ಮೂಲಕ ದೇಶಭಾಷೆಗಳ ಮಹತ್ವ ಮರೆಯಾಯಿತು. ನಂತರದಲ್ಲಿ ಬ್ರಿಟಿಷ್ ಅಧಿಕಾರಿಗಳು ಕನ್ನಡದ ಮಹತ್ವವನ್ನು ಮನಗಂಡು ಕನ್ನಡವನ್ನು ಕಲಿತರು. ಕನ್ನಡ ಶಾಲೆ ತೆರೆದರು. ಕನ್ನಡವನ್ನು ಬಳಸುವವರಿಗೆ ಭಾಷೆ ತಯಾರಾಗಿಲ್ಲ ಎಂಬುದು ಸುಳ್ಳು, ಬಳಸುತ್ತಾ ಹೋದಂತೆ ತಯಾರಾಗುತ್ತದೆ ಎಂದಿದ್ದಾರೆ ಲೇಖಕರು. ಒಟ್ಟಿನಲ್ಲಿ ಆಡಳಿತದಲ್ಲಿ ಕನ್ನಡವನ್ನು ಬಳಸಬೇಕೆಂಬ ಉತ್ಕಟ ಅಪೇಕ್ಷೆಯನ್ನು ಈ ಕೃತಿಯೂ ವ್ಯಕ್ತಪಡಿಸುತ್ತದೆ. ಕನ್ನಡದ ಬಗೆಗಿನ ಅಭಿಮಾನವು ಇಲ್ಲಿ ಎದ್ದುಕಾಣುತ್ತದೆ.

ಈ ಮೇಲಿನ ಸಮೀಕ್ಷೆಯಲ್ಲಿ, ಕಾಣುವ ತಾತ್ವಿಕ ಪ್ರಶ್ನೆಯೆಂದರೆ, ಅಂಕಿ ಅಂಶಾಧಾರಿತ ಅಧ್ಯಯನಗಳೇ ಹೆಚ್ಚಾಗಿದ್ದು, ಪ್ರಸ್ತುತ ಇರುವ ವ್ಯವಸ್ಥೆಯನ್ನೇ ಮುಂದುವರಿಸುವ ಹುಸಿ ಅರಿವಿನ ಚೌಕಟ್ಟನ್ನೆ ಮಂಡಿಸುತ್ತವೆ. ಈ ಅಧ್ಯಯನಗಳಲ್ಲಿ ಮುಖ್ಯವಾಗಿ ಮಾಹಿತಿ ಮೂಲವನ್ನು ಎದುರಿಗಿಟ್ಟುಕೊಂಡು, ನಿರ್ದೇಶನವೊಂದನ್ನು ಭಾಷೆಯ ಕುರಿತಂತೆ ನೀಡಲಾಗಿರುವುದನ್ನು ಗಮನಿಸಬಹುದು. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಭಾಷಿಕ ಅರಿವನ್ನು ಅನ್ವಯಿಕ ವಿಜ್ಞಾನದ ಮಾದರಿಯಲ್ಲಿ ನೋಡಿರುವುದೇ ಆಗಿದೆ. ಆದ್ದರಿಂದ ಇಂತಹ ಸಿದ್ಧಮಾದರಿಯ ಅಧ್ಯಯನವು

ತಿಳುವಳಿಕೆಯ ನಿಜದ ವಿಧಾನಗಳನ್ನು ಮರೆಮಾಚುತ್ತದೆ. ಇವತ್ತಿಗೂ ಕೂಡ ಕರ್ನಾಟಕದಲ್ಲಿ ಆಡಳಿತ ಭಾಷೆಯ ಅಧ್ಯಯನ ಕುರಿತಂತೆ ಅದೇ ರೀತಿಯ ತಿಳುವಳಿಕೆಯ ವಿಧಾನವನ್ನು ಅನ್ವಯಿಸಿರುವುದು ಎದ್ದು ಕಾಣುತ್ತದೆ. ಆದರೆ ಕನ್ನಡ ಜನಭಾಷೆಯ ಬಳಕೆ ಕುರಿತಂತೆ ಇಲ್ಲಿಯವರೆಗೆ ನಡೆದಿರುವ ಅಧ್ಯಯನದ ಚೌಕಟ್ಟುಗಳನ್ನು ಬಿಟ್ಟುಕೊಟ್ಟು ಭಿನ್ನ ಮಾದರಿಯನ್ನು ಅನುಸರಿಸಬೇಕಾದ ಅಗತ್ಯವಿದೆ. ಯಾಕೆಂದರೆ, ಜನಸಮುದಾಯದ ಒಳಗಿನಿಂದಲೇ ಕಟ್ಟಿಕೊಂಡಿರುವ ಲೋಕಗ್ರಹಿಕೆಯನ್ನು ಗಮನಿಸಿದಲ್ಲಿ ಭಾಷೆಯೆನ್ನುವುದು ಪ್ರಮಾಣೀಕರಣಕ್ಕೊಳಗಾಗುವ ಸಂಗತಿ ಮಾತ್ರವೇ ಅಲ್ಲ. ಎಂದರೆ ಅದನ್ನು ಕಾರ್ಯಕಾರಣ ಸಂಬಂಧದಲ್ಲಿ ಮಾತ್ರವೇ ಅನ್ವಯಿಸಲಾಗದು. ಇಂಥ ವೈಧಾನಿಕತೆಯು ಪರಿಣಾಮವಾದವಾಗಿ ಮಾತ್ರ ಗೋಚರಿಸುತ್ತದೆ. ಈ ನಡೆಯನ್ನು ಮೀರಬೇಕಾದಲ್ಲಿ ಭಾಷೆಯ ಬಳಕೆದಾರರು ನಿರ್ದಿಷ್ಟ ಸನ್ನಿವೇಶಗಳಲ್ಲಿ ತಮ್ಮ ಬದುಕನ್ನು ನಿಭಾಯಿಸಿಕೊಳ್ಳಲು ಭಾಷೆಯನ್ನು ಸಂಘಟಿಸಿಕೊಳ್ಳುತ್ತಾರೆ ಎಂಬುದನ್ನು ಗ್ರಹಿಸಬೇಕಾಗುತ್ತದೆ. ಆದ್ದರಿಂದ ಕನ್ನಡ ಆಡಳಿತ ಭಾಷೆಯು ಸಾರ್ವತ್ರಿಕವಾಗಿರುವುದನ್ನು ಬಿಟ್ಟು ನಿರ್ದಿಷ್ಟ ಸನ್ನಿವೇಶಗಳಲ್ಲಿ, ಸ್ಥಳಗಳಲ್ಲಿ, ನಿರ್ದಿಷ್ಟ ಅಗತ್ಯಗಳನ್ನು ರೂಪಿಸುವಂತಹ ಯೋಜನೆಗಳನ್ನು/ನೀತಿಗಳನ್ನು ಹುಡುಕಿಕೊಳ್ಳುತ್ತಿರುತ್ತದೆ ಎನ್ನುವುದನ್ನೂ ಅರಿಯುವುದು ಅತ್ಯಗತ್ಯವಾಗಿದೆ.

ಆಡಳಿತ ಭಾಷೆಯ ಕನ್ನಡ ಸ್ವರೂಪ, ಆಡಳಿತ ಭಾಷೆಯಾಗಿ ಕನ್ನಡದ ಎದುರಿಗಿರುವ ಸವಾಲುಗಳು ಹಾಗೂ ಕನ್ನಡದಲ್ಲಿ ಆಡಳಿತ ಕನ್ನಡ ಜನಬದುಕುಗಳನ್ನು ಒಳಗೊಳ್ಳುವ ಬಗೆ ಹೇಗೆ ಎಂಬ ಬಗ್ಗೆ ಅಧ್ಯಯನಗಳು ಆಗಿಲ್ಲ. ಪ್ರಸ್ತುತ ಸಂಶೋಧನಾ ವಿಷಯದಲ್ಲಿ ಈ ಅಂಶಗಳ ಬಗ್ಗೆ ಬೆಳಕು ಚೆಲ್ಲಲು ಪ್ರಯತ್ನಿಸಲಾಗಿದೆ.

ಬ್ರಿಟಿಷ್ ಆಡಳಿತದಲ್ಲಿ ಕನ್ನಡವನ್ನು ಬಳಸುತ್ತಿದ್ದ ಬಗ್ಗೆ ಕೆಲವು ಗ್ರಂಥಗಳು, ಆಡಳಿತ ಭಾಷೆಯಾಗಿ ಕನ್ನಡ ಜಾರಿಯ ಬಗ್ಗೆ ಇರುವ ತೊಂದರೆಗಳ ಅಧ್ಯಯನದ ಕೆಲವು ಕೃತಿಗಳು ಬಂದಿವೆ. ಈ ಕುರಿತು ನಡೆದಿರುವ ಅಧ್ಯಯನಗಳು ಪ್ರಸ್ತುತ ಇರುವ ಮಾದರಿಯಲ್ಲಿಯೇ ಕೆಲವು ಸುಧಾರಣೆಗಳನ್ನು ಮಾತ್ರ ಸೂಚಿಸುತ್ತವೆಯೇ ಹೊರತು, ಯಾವುದೇ ಸಕಾರಾತ್ಮಕ ಬದಲಾವಣೆಯನ್ನು ತರುವ ನೆಲೆಯಲ್ಲಿ ನಡೆದಿಲ್ಲ ಎನ್ನುವುದನ್ನು ಈ ಪ್ರಬಂಧದಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ. ಆಡಳಿತ ಭಾಷೆಯಾಗಿ ಕನ್ನಡವನ್ನು ಇಂದಿಗೆ ಸಜ್ಜುಗೊಳಿಸಲೇಬೇಕಾದ ಒತ್ತಡಗಳ ಹಿನ್ನೆಲೆಯಲ್ಲಿ ಹಾಗೆ ಗುರುತಿಸುವುದು

ಅತ್ಯಗತ್ಯವೆನಿಸುತ್ತದೆ. ಇದು ಆಡಳಿತ ಭಾಷೆಯಾಗಿ ಕನ್ನಡವನ್ನು ಕಟ್ಟುವ ದಾರಿಗೆ ಮುಖ್ಯವಾಗುತ್ತದೆ ಎಂದು ತಿಳಿಯಲಾಗಿದೆ.

ಆದರೆ, ಈವರೆಗಿನ ಅಧ್ಯಯನಗಳಲ್ಲಿ ಕನ್ನಡದ ಬಗೆಗಿನ ವಿಶೇಷ ಅಭಿಮಾನ ವ್ಯಕ್ತವಾಗಿರುವುದನ್ನು, ಅದನ್ನು ಭಾವನಾತ್ಮಕ ನೆಲೆಯಲ್ಲಿ ವಿವರಿಸಿಕೊಂಡಿರುವುದನ್ನು ಮಾತ್ರವೇ ಕಾಣಬಹುದು. ಅಲ್ಲಿ ಒಂದು ರೀತಿಯ ವೈಭವೀಕೃತ ನೆಲೆಯೇ ಮುನ್ನೆಲೆಯನ್ನು ಪಡೆದಿದ್ದು, ಅಧಿಕೃತತೆಯ ಪ್ರಶ್ನೆಯು ಭಾವನಾತ್ಮಕ ವೈಭವದಲ್ಲಿ ಮರೆಗೆ ಸರಿದಿರುವುದು ಎದ್ದು ಕಾಣುತ್ತದೆ. ಹಾಗಾಗಿ ಅಂತಹ ಕೃತಿಗಳನ್ನು ಹೆಚ್ಚಿಗೆ ಚರ್ಚಿಸಲು ಹೋಗದೆ ಆ ಕೃತಿಗಳಲ್ಲಿ ಇರುವ ತಾತ್ವಿಕ ಪ್ರಶ್ನೆಗಳನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾತ್ರವೇ ಮಾಡಲಾಗಿದೆ.

11. **ಕನ್ನಡ ವಿ.ವಿ. ಹಂಪಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ** ಸಹಯೋಗದಲ್ಲಿ ಪ್ರಕಟಿಸಿದ **'ಆಡಳಿತ ಕನ್ನಡ'** ಕೃತಿಯು ಕರ್ನಾಟಕದಲ್ಲಿ ಆಡಳಿತಭಾಷೆ ನಡೆದು ಬಂದ ದಾರಿ, ಆಡಳಿತ ಭಾಷೆಯಾಗಿ ಕನ್ನಡದ ಇಂದಿನ ಸ್ಥಿತಿಗತಿ, ಕನ್ನಡ ಭಾಷೆಯ ಚರಿತ್ರೆ, ವಿವಿಧ ಪತ್ರವ್ಯವಹಾರದ ಬಗೆಗಳು, ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಆಡಳಿತ ಕನ್ನಡದ ಸ್ಥಿತಿಗತಿಯ ಮಾಹಿತಿಯನ್ನು ಒಳಗೊಂಡಿದೆ. ಈ ವಿವರಗಳನ್ನು ಅತ್ಯುತ್ತಮವಾಗಿ ಒದಗಿಸುತ್ತದೆ.

ಆಡಳಿತ ಕನ್ನಡ ನಡೆದ ಬಂದ ದಾರಿ, ವ್ಯವಹಾರದ ಬಗೆಗಳು, ಆಡಳಿತ ಪಾರಿಭಾಷಿಕ ಪದರಚನೆ, ಇವುಗಳ ಬಗ್ಗೆ ಕೃತಿಯಲ್ಲಿ ಮಾಹಿತಿ ದೊರೆಯುತ್ತದೆ.

ಆಡಳಿತದಲ್ಲಿ ಕನ್ನಡ ಪೂರ್ಣವಾಗಿ ಏಕೆ ಬಳಕೆಯಾಗಿಲ್ಲ, ಇದಕ್ಕೆ ಕಾರಣಗಳೇನು ಎಂಬುದನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಜನರ ಭಾಷೆ ಆಡಳಿತ ಭಾಷೆಯಾಗುವುದು ಹೇಗೆ? ಆಳುವವರು ಮತ್ತು ಆಳಿಸಿಕೊಳ್ಳುವವರ ಮಧ್ಯದಲ್ಲಿನ ಸಂಬಂಧಗಳು ಯಾವ ರೀತಿಯದು ಎಂಬುದನ್ನು ಚರ್ಚಿಸುತ್ತಾ, ಕನ್ನಡ ಭಾಷೆಯ ಬಗೆಗಿನ ನಿರಭಿಮಾನ, ನಿರುತ್ಸಾಹ, ತಟಸ್ಥ ಮನೋಭಾವಗಳ ಬಗ್ಗೆಯೂ ಕೃತಿಯಲ್ಲಿ ವಿವರಿಸಲಾಗಿದೆ. ಕನ್ನಡ ಬಳಕೆಗೆ ಸಂಬಂಧಿಸಿದಂತೆ, ಇಚ್ಛಾಶಕ್ತಿಯ ಕೊರತೆ, ಕೀಳರಿಮೆ ಮನೋಭಾವ, ಕನ್ನಡ ಭಾಷೆಯು ಆಡಳಿತ ಬಳಕೆಗೆ ತಯಾರಾಗಿಲ್ಲ ಎಂಬ ಅಭಿಪ್ರಾಯ, ಕೇಂದ್ರ ಹಾಗೂ ಹೊರ ರಾಜ್ಯದೊಡನೆ ವ್ಯವಹರಿಸಲು ಇಂಗ್ಲೀಷ್ ಭಾಷೆ ಅವಶ್ಯಕತೆ ಇದೆ ಎಂಬ

ಮನೋಭಾವನೆ, – ಈ ಕಾರಣಗಳಿಂದಾಗಿ ಆಡಳಿತ ಕನ್ನಡವು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ ಎಂಬುದನ್ನು ಕೃತಿಯಲ್ಲಿ ಗುರುತಿಸಲಾಗಿದೆ.

12. 'Communication and Linguistic Situation in Karnataka: Demographic perspectives' M.Johnson Samuel (Institute for Social and Economic Change, 2001).

ಈ ಕೃತಿಯು ಭಾಷಾವಾರು ಪ್ರಾಂತ್ಯವಾಗಿ ಕರ್ನಾಟಕ ಉದಯವಾದ ಸಂದರ್ಭದಲ್ಲಿ ಕರ್ನಾಟಕದ ಭಾಷಿಕ ವಲಯ ಹೇಗಿತ್ತು? ಕರ್ನಾಟಕವನ್ನು ಭಾಷಾವಾರು ಪ್ರಾಂತ್ಯದ ಆಧಾರದ ಮೇರೆಗೆ ರಚಿಸುವಾಗ ಕರ್ನಾಟಕದಲ್ಲಿ ಭಾಷಿಕ ಏಕತೆ ಇತ್ತೆ? ಈ ರೀತಿಯ ಭಾಷಿಕ ಬದಲಾವಣೆಗೆ ಅಲ್ಪಸಂಖ್ಯಾತರ ಪ್ರತಿಕ್ರಿಯೆ ಏನಾಗಿತ್ತು? ಎಂಬದರ ಬಗ್ಗೆ ಕೃತಿ ಚರ್ಚಿಸುತ್ತದೆ. 1961–1991ರ ನಡುವಿನ ಜನಗಣತಿಯ ಅಂಕಿಅಂಶಗಳನ್ನು ಇಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ ಇಲ್ಲಿ. 1991ರ ಹೊತ್ತಿಗೆ ಕನ್ನಡ ಮಾತನಾಡುವವರ ಜನಸಂಖ್ಯೆ ದ್ವಿಗುಣಗೊಳ್ಳುತ್ತದೆ. ಅಂದು 45 ಮಿಲಿಯನ್ ಜನರು ಕನ್ನಡದಲ್ಲಿ ವ್ಯವಹಾರ ಮಾಡಲು ಸಾಧ್ಯವಿದ್ದವರು ಇದ್ದರು ಎಂಬುದನ್ನು ಗುರುತಿಸಲಾಗಿದೆ.

ಕರ್ನಾಟಕದಲ್ಲಿ ಕನ್ನಡವು ಏಕರೂಪತೆಯನ್ನು ಸಾಧಿಸುತ್ತಾ ಮುಂದುವರೆಯುವುದನ್ನು ಗುರುತಿಸಲಾಗಿದೆ. ಅಲ್ಪಸಂಖ್ಯಾತ ಭಾಷಿಕರು ಬಹುಭಾಷಿಕರಾಗಿ ಪರಿವರ್ತನೆಗೊಂಡಿರುವುದನ್ನು ಹೇಳುತ್ತದೆ. ಕನ್ನಡ ಮನೆ ಮಾತು ಆಡುವವರು ಬಹುಭಾಷಿಕರಾಗುತ್ತಿಲ್ಲ, ಬೇರೆ ಭಾಷೆಯನ್ನು ಮನೆಯಲ್ಲಿ ಮಾತನಾಡುವವರು ಮಾತ್ರವೇ ಕನ್ನಡವನ್ನು ಹೆಚ್ಚು ವ್ಯವಹಾರಿಕದಲ್ಲಿ ಬಳಸುತ್ತಿದ್ದಾರೆ. ಕನ್ನಡ ಮಾಡನಾಡುವವರು ಹೆಚ್ಚು ಇಂಗ್ಲೀಷ್ ಕಲಿಯಲು ಆದ್ಯತೆ ನೀಡುತ್ತಿದ್ದಾರೆ ಎನ್ನುವುದನ್ನು ಈ ಕೃತಿಯಲ್ಲಿ ಗುರುತಿಸಲಾಗಿದೆ. ಕನ್ನಡ ಭಾಷಿಕ ಪ್ರದೇಶದಲ್ಲಿ ಬಹುಭಾಷಿಕತೆಯನ್ನು ಉಳಿಸಿಕೊಳ್ಳುತ್ತಲೇ, ಸಾಂಸ್ಕೃತಿಕ ವೈವಿಧ್ಯತೆಯನ್ನು ಉಳಿಸಿಕೊಂಡಿದೆ. ಇದು ಒಳ್ಳೆಯ ಬೆಳವಣಿಗೆ ಎಂದು ಲೇಖಕರು ಗುರುತಿಸಿದ್ದಾರೆ. ಆಡಳಿತ ಭಾಷೆಯನ್ನು ಸರ್ಕಾರವು ಅನುಷ್ಠಾನಗೊಳಿಸಿದಲ್ಲಿ, ಅದಕ್ಕೆ ಕರ್ನಾಟಕದ ಒಳಗಿನ ಭಾಷಿಕ ಅಲ್ಪಸಂಖ್ಯಾತರಿಂದ ಯಾವುದೇ ವಿರೋಧ ಇರಲಾರದು. ಕನ್ನಡ

ಭಾಷಿಕರಿಂದಲೇ ವಿರೋಧ ವ್ಯಕ್ತವಾಗುವ ಸಾಧ್ಯತೆ ಇರಬಹುದಾಗಿದೆ ಎಂಬುದನ್ನೂ ಮನಗಾಣಿಸುವ ಪ್ರಯತ್ನ ಇಲ್ಲಿನದಾಗಿದೆ.

13. ಬಿ. ಪಾರ್ಥಸಾರಥಿಯವರ **'ಕನ್ನಡದಲ್ಲಿ ಆಡಳಿತ'**[10] ಕೃತಿಯು ಆಡಳಿತ ಭಾಷೆಯಾಗಿ ಕನ್ನಡ, ಪೂರ್ಣ ಪ್ರಮಾಣದಲ್ಲಿ ಆಡಳಿತ ಕನ್ನಡವನ್ನು ಏಕೆ ಅನುಷ್ಠಾನಗೊಳಿಸಬೇಕು, ಕನ್ನಡ ಆಡಳಿತ ಭಾಷೆಯಾಗಲು ಇರುವ ಅಡಚಣೆಗಳು, ಆಡಳಿತವನ್ನು ಕನ್ನಡಮಯವಾಗಿಸಲು ಏನು ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಮಾಹಿತಿ ಒದಗಿಸುತ್ತದೆ. ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸಬೇಕೆಂಬ ಪ್ರಾಮಾಣಿಕ ಕಾಳಜಿಯನ್ನು ಈ ಕೃತಿಯುಲ್ಲಿ ಕಾಣಬಹುದು.

14. ಕನ್ನಡ ವಿಶ್ವವಿದ್ಯಾಲಯ, ಹಂಪಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರು ಪ್ರಕಟಿಸಿರುವ **ಆಡಳಿತ ಕನ್ನಡ ಕಾರ್ಯಶಿಬಿರ ಕೈಪಿಡಿ** (2009)ಯು ಸರ್ಕಾರದ ವಿವಿಧ ಹಂತದ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ತರಬೇತಿ ನೀಡಲು ಬೇಕಾದ ವಿವರವನ್ನು ಒಳಗೊಂಡಿದೆ. ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ಇದುವರೆಗಿನ ಸರ್ಕಾರದ ಪ್ರಯತ್ನಗಳ ಸ್ಥೂಲ ವಿವರ ಇದರಲ್ಲಿದೆ. ಆಡಳಿತ ಕನ್ನಡ ಜಾರಿಗೆ ಇರುವ ಅಡೆತಡೆಗಳ ಬಗ್ಗೆ ಮಾಹಿತಿಯನ್ನು ಈ ಕೃತಿ ನೀಡುತ್ತದೆ. ಪ್ರಕರಣದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಂದು ಶ್ರೇಣಿಯ ಅಧಿಕಾರಿ/ನೌಕರರು ದಿನನಿತ್ಯದ ಆಡಳಿತದಲ್ಲಿ ಕನ್ನಡವನ್ನು ಬಳಸುವ ಬಗ್ಗೆ ನೀಡುವ ವಿವರವನ್ನು ಒಳಗೊಂಡಿದೆ. ಈ ಕೃತಿಯಲ್ಲಿ ತರಬೇತಿಗೆ ಪೂರಕವಾಗಿ ಮಾಹಿತಿಯನ್ನು ಉದಾಹರಣೆ ಮೂಲಕ ವಿವರಿಸಲಾಗಿದೆ. ಅಧಿಕಾರಿಗಳು ಹಾಗೂ ನೌಕರರು ಆಡಳಿತ ಕನ್ನಡವನ್ನು ಬಳಸುವ ಸಂದರ್ಭದಲ್ಲಿ ವಿವಿಧ ರೀತಿಯ ತೊಡಕುಗಳನ್ನು ಹಾಗೂ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವುಗಳನ್ನು ನಿವಾರಿಸಿಕೊಂಡು, ಆಡಳಿತ ಕನ್ನಡವನ್ನು ಪರಿಣಾಮಕಾರಿಯಾಗಿ ಬಳಸುವ ನೆಲೆಯಲ್ಲಿ ವಿವರಗಳು ಕೃತಿಯಲ್ಲಿ ಮೂಡಿಬಂದಿದೆ.

---

[10] ಕನ್ನಡದಲ್ಲಿ ಆಡಳಿತ: ಬಿ.ಪಾರ್ಥಸಾರಥಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2006

15. ಎಂ. ನಂಜುಂಡಸ್ವಾಮಿಯವರು ಮೈಸೂರು ವಿಶ್ವವಿದ್ಯಾಲಯಕ್ಕೆ ಪಿ.ಹೆಚ್.ಡಿ. ಅಧ್ಯಯನಕ್ಕಾಗಿ ಸಲ್ಲಿಸಿದ ಪ್ರಬಂಧ **'ಆಡಳಿತ ಕನ್ನಡ:ಒಂದು ಭಾಷಿಕ ಅಧ್ಯಯನ'**. ಈ ಮಹಾಪ್ರಬಂಧದಲ್ಲಿ

- ಸ್ವಾತಂತ್ರ್ಯ ಪೂರ್ವದಿಂದ ಕನ್ನಡ ಬಳಕೆಯಾಗುತ್ತಿದ್ದ ಬಗೆ,
- ವಿವಿಧ ಕ್ಷೇತ್ರಗಳಲ್ಲಿ ಕನ್ನಡದ ಬಳಕೆ,
- ಕರ್ನಾಟಕವನ್ನು ಆಳಿದ ರಾಜರುಗಳ ಸಂದರ್ಭದಲ್ಲಿ ಕನ್ನಡ ಹೇಗೆ ಬಳಕೆಯಾಗುತ್ತಿತ್ತು
- ಪತ್ರ ವ್ಯವಹಾರದ ಸ್ವರೂಪ, ಲಕ್ಷಣ ಹಾಗೂ
- ಆಡಳಿತ ಕನ್ನಡದ ಭಾಷಿಕ ವಿಶ್ಲೇಷಣೆ

ಇವುಗಳ ಚರ್ಚೆ ನಡೆಸಲಾಗಿದೆ. ಫಲಿತಗಳ ಅಧ್ಯಾಯದಲ್ಲಿ ಆಡಳಿತ ಕನ್ನಡವನ್ನು ಜಾರಿಗೆ ತರುವ ನಿಟ್ಟಿನಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಸೂಚಿಸಲಾಗಿದೆ.

ಪ್ರಬಂಧವು ಅನುಭವಜನ್ಯ ವಿಧಾನದಲ್ಲಿ ವಿವರಣಾತ್ಮಕವಾಗಿ ಮಾಹಿತಿಯನ್ನು ಒದಗಿಸುತ್ತದೆ. ವಿಶ್ಲೇಷಣೆಯನ್ನು ಸರಳರೂಪದಲ್ಲಿ ಮಾಡಲಾಗಿದೆ. ಇದುವರೆಗಿನ ಅಧ್ಯಯನಗಳು ಚರ್ಚಿಸಿರುವ ನೆಲೆಯಲ್ಲೇ ಚರ್ಚೆ ಮಾಡಿರುವುದನ್ನು ಇಲ್ಲಿ ಕಾಣಬಹುದು. ಅನುಭವಜನ್ಯ ನೆಲೆಯನ್ನು ಬಿಟ್ಟು, ಭಿನ್ನ ನೆಲೆಯಲ್ಲಿ ನೋಡುವ ಪ್ರಯತ್ನವನ್ನು ಮಾಡಿದ್ದರೆ ಹೆಚ್ಚು ಉಪಯುಕ್ತವಾಗಬಹುದಿತ್ತು ಅನಿಸುತ್ತದೆ.

16. ಬಿ.ಮಲ್ಲಿಕಾರ್ಜುನ ಇವರು ಬರೆದಿರುವ **'language in India'**[11] ಎಂಬ ಪ್ರಬಂಧದಲ್ಲಿ ಭಾರತದ ಬಹುಭಾಷಿಕತೆಯ ವಿವಿಧ ನೆಲೆಗಳು, ಭಾಷಿಕ ಗುಣಲಕ್ಷಣಗಳು, ಭಾಷೆ ಮತ್ತು ಕಾನೂನು, ಭಾಷಾ ಉಪಬಂಧಗಳ ಅನುಷ್ಠಾನದ ಬಗ್ಗೆ ಚರ್ಚಿಸಲಾಗಿದೆ.

ಈ ಕೃತಿಯಲ್ಲಿ ಲೇಖಕರು ಇದುವರೆಗಿನ ಸರ್ಕಾರದ ಮಟ್ಟದ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಸರ್ಕಾರಿ ನೀತಿಗಳನ್ನು ವಿವರಣಾತ್ಮಕ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಹಾಗಾಗಿ ಕೃತಿಕಾರರಿಗೆ ಭಾರತದ ಬಹುಭಾಷಿಕ ಪರಿಸರ ಮುಖ್ಯವಾಗುವಾಗ ಅದನ್ನು ಅಧಿಕೃತವಾಗಿ ಜನ ಹೇಗೆ ಬಳಸುತ್ತಿದ್ದಾರೆ ಎನ್ನುವುದನ್ನು

---

[11] ಇದು ಅಪ್ರಕಟಿತ ಕೃತಿ

ಚರ್ಚೆಗೆ ತೆಗೆದುಕೊಂಡಿರುವುದು ಸೂಕ್ತವಾಗಿದೆ ಅನಿಸುತ್ತದೆ. ಆದರೆ ಹೀಗೆ ಮಾಡುವಾಗ ವಸಾಹತುಶಾಹಿ ಭಾರತದಲ್ಲಿ ಆದಂತಹ ಭಾಷಿಕ ಪಲ್ಲಟಗಳನ್ನು ಹಾಗೂ ಅಂದಿನ ಸರ್ಕಾರ ಅನುಸರಿಸಿದ ನೀತಿಗಳನ್ನು ವಿಶ್ಲೇಷಣೆಗೆ ಒಡ್ಡಿದ್ದರೆ ಅಂದಿನ ಭಾಷಿಕ ಬಿಕ್ಕಟ್ಟುಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿತ್ತು ಅನಿಸುತ್ತದೆ.

17 ಆಂಗ್ಲರ ಆಡಳಿತದಲ್ಲಿ ಕನ್ನಡ[12]

ಈ ಹೊತ್ತಗೆಯಲ್ಲಿ ಒಟ್ಟು 10 ಅಧ್ಯಾಯಗಳಿದ್ದು ಆಂಗ್ಲರ ಕಾಲದಲ್ಲಿ ಕನ್ನಡ ಭಾಷೆಯು ಆಡಳಿತ ಭಾಷೆಯಾಗಿತ್ತು ಎನ್ನುವುದನ್ನು ನಿದರ್ಶನಗಳ ಮೂಲಕ ಖಚಿತ ಪಡಿಸುತ್ತಾರೆ ಲೇಖಕರಾದ ಮಹದೇವ ಬಣಕಾರರವರು. ಇದೊಂದು ಮಹತ್ವದ ಸಂಶೋಧನೆಯಾಗಿದ್ದು ಆಂಗ್ಲರು ಕನ್ನಡದ ಪ್ರದೇಶದಲ್ಲಿ ಆಡಳಿತ ನಡೆಸುವಾಗ ಜನಭಾಷೆಯನ್ನೇ ಬಳಸಿ ಕನ್ನಡಿಗರಿಗೆ ಒಳ್ಳೇಯ ಆಡಳಿತವನ್ನು ನೀಡಿದ್ದನ್ನು ಈ ಕೃತಿಯು ದಾಖಲಿಸುತ್ತದೆ. ಆದ್ದರಿಂದಲೇ ಈ ಕೃತಿಯ ಲೇಖಕರು ಹೀಗೆನ್ನುತ್ತಾರೆ, "ಜನತೆಯಿಂದ ಜನತೆಗಾಗಿ ನಿರ್ಮಾಣವಾಗುವ ರಾಜ್ಯಾಡಳಿತೆಯನ್ನು ಜನತೆಯ ಭಾಷೆಯಲ್ಲಿಯೇ ನಡೆಸಬೇಕಾಗುತ್ತದೆ. ಹಾಗಿಲ್ಲದೆ ಹೋದಲ್ಲಿ, ಜನತೆಯ ಅಭಿಮಾನ ಆ ರಾಜ್ಯ ಸರಕಾರದ ಬಗ್ಗೆ ಮೂಡಲಾರದು. ಪ್ರದೇಶಿಕ ಭಾಷೆಯಲ್ಲದೆ ಬೇರೊಂದು ಭಾಷೆಯಲ್ಲಿ ಸರಕಾರದ ಆಡಳಿತ ನಡೆಯುವುದಾದರೆ, ಭಾಷೆ ಬಾರದ ಮುಗ್ದ ಜನಾಂಗವು ತಾವು ಯಾವುದೋ ಪರಕೀಯರ ಕೈಯಲ್ಲಿ ಸಿಕ್ಕಿಬಿದ್ದಿದ್ದೇವೆ; ನಮಗೆ ಅರ್ಥವಾಗದ ಭಾಷೆಯಲ್ಲಿ ವ್ಯವಹರಿಸುವ ಆಡಳಿತಗಾರರು ನಮಗೆ ಮೋಸಮಾಡುತ್ತಿದ್ದಾರೆ ಎನ್ನುವ ಭಾವನೆಯನ್ನು ತಾಳಬೇಕಾಗುತ್ತದೆ. ಜನತೆಗೂ-ಆಡಳಿತೆಗೂ ಮಧುರ ಬಾಂಧವ್ಯ ಏರ್ಪಡಬೇಕಾದರೆ ಭಾಷೆಯ ಮೂಲಕವೇ ಹೊರತು ಕಾನೂನುನಿಂದಲ್ಲ. ನಮ್ಮನ್ನು ಆಳುವ ಜನರು ನಮ್ಮವರೇ ಆಗಿದ್ದರೂ ನಮಗೆ ಗೊತ್ತಾಗದ ರೀತಿಯಲ್ಲಿ ಬೇರೊಂದು ಭಾಷೆಯ ಮೂಲಕ ವ್ಯವಹರಿಸುತ್ತಿರುವುದೇಕೆ? ಎಂಬುದು ಅವರನ್ನು ನಿತ್ಯ ಕಾಡುತ್ತಲೇ ಇರುತ್ತದೆ. ಆಳುವ ಸೂತ್ರದಾರಿಗಳ ಬಗ್ಗೆ ಸಾರ್ವಜನಿಕರ ಅಭಿಮಾನವು ಆಡಳಿತೆಯ ಬಗ್ಗೆ ಶ್ರೀಸಾಮಾನ್ಯರ ನಂಬಿಕೆಯು ಹುಟ್ಟಬೇಕಾದರೆ ಅವರಾಡುವ ಮೂಲಕವೇ ರಾಜ್ಯದ ಆಡಳಿತ ನಡೆಯಬೇಕು. ಅದುವೇ ನಿಜವಾದ ಪ್ರಜಾಪ್ರಭುತ್ವ.. ಅನೇಕ ಮುಂದುವರೆದ

---

[12] ಮಹದೇವ ಬಣಕಾರ, ಆಂಗ್ಲರ ಆಡಳಿತದಲ್ಲಿ ಕನ್ನಡ, ಅನುಭವ ಪ್ರಿಂಟರ್ಸ್, ಬೆಂಗಳೂರು, 1986

ರಾಷ್ಟ್ರಗಳು ಈ ಕ್ರಮವನ್ನೇ ಅನುಸರಿಸಿವೆ".[13] ಇಂತಹ ಮಾತುಗಳು ಅಂಗ್ಲರನ್ನು ಹೊಗಳುತ್ತದೆಂದು ಭಾವಿಸಬಹುದಾದರೂ, ಈ ಬರೆಹದ ಒಳಗೆ ಇವತ್ತಿನ ನಮ್ಮನ್ನು ಆಳುವ ಪ್ರತಿನಿಧಿಗಳು ಜನಭಾಷೆಗೆ ಮಾರಕವಾಗಿದ್ದಾರೆಂಬುದನ್ನು ಸೂಚ್ಯವಾಗಿ ಹೇಳಲಾಗಿದೆ. ಇಂತಹದೊಂದು ಮಹತ್ವದ ಹೊತ್ತಗೆಯನ್ನು ದ್ವಿತೀಯ ಆಕರವನ್ನಾಗಿ ಮುಂದೆ ಈ ಮಹಾ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ.

18. ಕವಿರಾಜ ಮಾರ್ಗ: ಸಾಂಸ್ಕೃತಿಕ ಮುಖಾಮುಖಿ[14]

ಕನ್ನಡ ವಿಶ್ವವಿದ್ಯಾಲಯ(ಹಂಪಿ)ವು ಕನ್ನಡದ ಗುರುತಗಳನ್ನು ಕಟ್ಟಿಕೊಟ್ಟ ಮುಖ್ಯವಾದ ಪಠ್ಯಗಳನ್ನು **'ಸಾಂಸ್ಕೃತಿಕ ಮುಖಾಮುಖಿ'**ಗೆ ಒಳಪಡಿಸಿ ಮಹತ್ತರ ತಿರುವಿಗೆ ಕಾರಣವಾದುದು ನಮಗೆ ತಿಳಿದಿದೆ. ಅಂತಹ ಮಹತ್ವದ ಒಂದು ಪಠ್ಯವೆಂದರೆ **ಕವಿರಾಜ ಮಾರ್ಗ: ಸಾಂಸ್ಕೃತಿಕ ಮುಖಾಮುಖಿ** ಎನ್ನುವುದು. ಈ ಹೊತ್ತಗೆಯು ಕನ್ನಡದ ಭಾಷಾ ಸಮುದಾಯವೊಂದರ ಗುರುತುಗಳನ್ನು ಕಟ್ಟಿಕೊಡುವುದಲ್ಲದೆ ಅಂತಹ ಸಮುದಾಯವೊಂದನ್ನು ನೆಲೆಗೊಳಿಸುವ ಬಗೆಯನ್ನು ಮಾದರಿಯಾಗಿಸುತ್ತಾ, ಇವತ್ತಿನ ಕನ್ನಡ ಸಮುದಾಯಗಳಿಗೆ ಸ್ಫೂರ್ತಿಯ ನೆಲೆಯಾಗುವಂತೆ ಮಾಡಿದೆ. ಇದು ಕರ್ನಾಟಕದ ನಾಡು, ನುಡಿ, ಜನ ಮತ್ತು ಸಂಸ್ಕೃತಿಗಳನ್ನು ಕುರಿತ ಸಮೃದ್ಧ ಮಾಹಿತಿಯ ಗಣಿಯಾಗಿದೆ. ಕನ್ನಡ ನಾಡಿನ ಭೌಗೋಳಿಕವಾದ ಮತ್ತು ಸಾಂಸ್ಕೃತಿಕವಾದ ಗಡಿಗೆರೆಗಳನ್ನು ಗುರುತಿಸುವ ಮೊದಲ ಪ್ರಯತ್ನವನ್ನು ಮಾಡಿದ ಪುಸ್ತಕವೂ 'ಕವಿರಾಜಮಾರ್ಗ'ವೇ ಆಗಿದೆ. 'ಕವಿರಾಜಮಾರ್ಗ'ವನ್ನು ಬರೆದವರು ಯಾರೆಂಬುದನ್ನು ಕುರಿತ ಚರ್ಚೆಯು ಈಗ ಶ್ರೀವಿಜಯನ ಪರವಾಗಿ ತೀರ್ಮಾನವಾಗಿದೆ. ಅವನು ಕ್ರಿ.ಶ.814–878 ರ ಅವಧಿಯಲ್ಲಿ ಆಳ್ವಿಕೆ ನಡೆಸಿದ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿ ಇದ್ದ ಲೇಖಕ. ಆದರೂ ಕೂಡ ಆ ಕೃತಿಯೊಳಗಿರುವ ವಿಷಯಗಳನ್ನು ಕುರಿತು ರಾಜ ಮತ್ತು ಕವಿಗಳ ನಡುವೆ ಸಹಮತವಿರುವಂತೆ ತೋರುತ್ತದೆ. ಕೃತಿಯಲ್ಲಿಯೇ ಬರುವ 'ನೃಪತುಂಗದೇವಾನುಮತ' ಎಂಬ ಮಾತು ಇದಕ್ಕೆ ಸಾಕ್ಷಿಯಾಗಿದೆ.

---

[13] ಅದೇ ನೋಡಿ, ಪ್ರಸ್ತಾವನೆ ಪು.2

[14] ಕವಿರಾಜಮಾರ್ಗ: ಸಾಂಸ್ಕೃತಿಕ ಮುಖಾಮುಖಿ (ಸಂ), ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000

ಈ ಕೃತಿಯಲ್ಲಿ ಮೂರು ಪರಿಚ್ಛೇದಗಳಿವೆ. ಮೊದಲನೆಯ ಅಧ್ಯಾಯವು ತಿರುಳುಗನ್ನಡ ಪ್ರದೇಶ, ಕರ್ನಾಟಕದ ಗಡಿಗಳು, ಕನ್ನಡದ ಉಪಭಾಷೆಗಳು ಹಾಗೂ ಪ್ರಮಾಣ ಭಾಷೆಯನ್ನು ಕುರಿತಾದ ಮಾಹಿತಿಯನ್ನು ನೀಡುತ್ತದೆ. ಕವಿಯು ಕನ್ನಡಿಗರ ನಿಷ್ಪಕ್ಷಪಾತವೂ ನ್ಯಾಯಪರವೂ ಬುದ್ಧಿಶಾಲಿಯೂ ಆದ ಸ್ವಭಾವದ ಬಗ್ಗೆ ಮಾತನಾಡುತ್ತಾನೆ. ಅನಂತರ ಹತ್ತನೆಯ ಶತಮಾನದ ಕೊನೆಯವರೆಗಿನ ಕನ್ನಡ ಸಾಹಿತ್ಯದ ಪಕ್ಷಿನೋಟವನ್ನು ಕೊಡಲು ಪ್ರಯತ್ನಿಸುತ್ತಾನೆ. ಗದ್ಯ ಮತ್ತು ಪದ್ಯಗಳಲ್ಲಿ ಕೃತಿರಚನೆ ಮಾಡುತ್ತಿದ್ದ ಸಾಹಿತಿಗಳ ಪಟ್ಟಿಯನ್ನು ಕೊಡುತ್ತಾನೆ.

ಆಮೇಲೆ ಕನ್ನಡ ಸಾಹಿತ್ಯದ ಕೆಲವು ವಿಶಿಷ್ಟ ಲಕ್ಷಣಗಳನ್ನು ವಿವರಿಸುತ್ತಾ ಬೆದಂಡೆ, ಚತ್ತಾಣ, ಒನಕೆವಾಡು, ಬಾಜನೆಗಬ್ಬ ಮುಂತಾದ ಸಾಹಿತ್ಯರೂಪಗಳ ಪರಿಚಯ ಮಾಡಿಕೊಡುತ್ತಾನೆ. ಕಾವ್ಯದಲ್ಲಿ ಇರಬಹುದಾದ ಗುಣ ದೋಷಗಳ ವಿವರಣೆಯನ್ನೂ ಇಲ್ಲಿಯೇ ಕೊಡಲಾಗಿದೆ.

'ಕವಿರಾಜಮಾರ್ಗ'ದ ಎರಡನೆಯ ಅಧ್ಯಾಯವು ಶಬ್ದಾಲಂಕಾರಗಳ ವಿವರಣೆಗೆ ಮೀಸಲಾಗಿದೆ. ಇವು ಭಾಷೆಯ ಧ್ವನಿರಚನೆ ಮತ್ತು ಪದರಚನೆಯ ಹಂತದಲ್ಲಿ ಕೆಲಸಮಾಡಿ ಕಾವ್ಯಸೌಂದರ್ಯವನ್ನು ಹೆಚ್ಚಿಸುವ ಅಲಂಕಾರಗಳು. ಈ ಅಲಂಕಾರಗಳನ್ನು ಪ್ರಾಚೀನ ಕಾವ್ಯಗಳಿಂದ ಆಯ್ದು ತೆಗೆದ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಲಾಗಿದೆ. ಇಂತಹ ಉಲ್ಲೇಖಗಳು ಕನ್ನಡಸಾಹಿತ್ಯದ ಪ್ರಾಚೀನತೆಯನ್ನು ನಿರ್ಧರಿಸುವ ಕೆಲಸದಲ್ಲಿ ಬಹಳ ಉಪಯುಕ್ತವಾಗಿವೆ. ಮೂರನೆಯ ಅಧ್ಯಾಯವು ಭಾಷೆಯ ಅರ್ಥದ ನೆಲೆಯಲ್ಲಿ ಸೌಂದರ್ಯವನ್ನು ಸೃಷ್ಟಿಸುವ ಅರ್ಥಾಲಂಕಾರಗಳನ್ನು ಪರಿಚಯ ಮಾಡಿಕೊಡುತ್ತದೆ. ಸಂಸ್ಕೃತ ಗ್ರಂಥಗಳ ಮೇಲೆ ಶ್ರೀವಿಜಯನಿಗಿದ್ದ ಹಿಡಿತ ಮತ್ತು ಅದನ್ನು ಕನ್ನಡಕ್ಕೆ ಒಗ್ಗಿಸಿಕೊಳ್ಳುವ ಬಗೆ ಅನನ್ಯವಾದುದು. ಆದರೆ, ವಿದ್ವಾಂಸರಾದ ಶೆಲ್ಡನ್ ಪೋಲಕ್‌ರಂತಹವರು ಆ ಕಾಲದಲ್ಲಿ ಕನ್ನಡ ಸಂಸ್ಕೃತಿಯು ಎದುರಿಸುತ್ತಿದ್ದ ಸಮಸ್ಯೆಗಳನ್ನು ಅರ್ಥಪೂರ್ಣವಾಗಿ ನಿರ್ವಹಿಸಿ, ಸಂಸ್ಕೃತಕ್ಕೆ ದೇಸಿ ಭಾಷೆಯಾಗಿ ದಿಟ್ಟ ಪ್ರತಿರೋದವನ್ನೊಡ್ಡಿತು ಎಂಬಂತಹ ಸಂಶೋಧನೆಯನ್ನು ಮಾಡಿದ್ದಾರೆ.[15]

[15] ಡಾ। ಷೆಲ್ಡನ್ ಪೊಲಾಕ್ ಅಮೆರಿಕ ಸಂಯುಕ್ತ ಸಂಸ್ಥಾನದ ಚಿಕಾಗೋ ವಿಶ್ವವಿದ್ಯಾಲಯದಲ್ಲಿ 'ಸಂಸ್ಕೃತ ಮತ್ತು ಭಾರತ ಅಧ್ಯಯನ' ವಿಭಾಗದಲ್ಲಿ ಪ್ರಾಧ್ಯಾಪಕರು, ಪೊಲಾಕ್ ಅವರ ಎರಡು ಲೇಖನಗಳನ್ನು ಕೆ.ವಿ.ಅಕ್ಷರ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. 'ದ ಕಾಸ್ಮೊಪೊಲಿಟನ್ ವೆರ್ನ್ಯಾಕ್ಯುಲರ್' (ವಿಶ್ವಾತ್ಮಕ ದೇಶ ಭಾಷೆ) 'ಜರ್ನಲ್ ಆಫ್ ಏಶಿಯನ್

ಆದರೆ, ಕೆ.ವಿ. ನಾರಾಯಣ ಅವರ 'ಕವಿರಾಜಮಾರ್ಗ ಏನಿದರ ಹೆಚ್ಚಳ' ಲೇಖನದಲ್ಲಿ ಹೇಳುವಂತೆ ಸಂಸ್ಕೃತವು ಕನ್ನಡದೊಡನೆ ಸಹಚರ್ಯವನ್ನು ಬಯಸಿ, ಕನ್ನಡದ ಲಿಪಿಯನ್ನು ಬಳಸಿಕೊಳ್ಳುವ ಮೂಲಕ ಅದನ್ನು ಒಡನಾಡಿಯನ್ನಾಗಿ ಮಾಡಿಕೊಂಡಿತು ಎನ್ನುವುದು ಮತ್ತೊಂದು ಬಗೆಯ ತಿರುವನ್ನು ಚಾರಿತ್ರಿಕವಾಗಿ ಕಟ್ಟಿಕೊಡುತ್ತದೆ. ಇದನ್ನು ಚರಿತ್ರಾಶಾಸ್ತ್ರಜ್ಞರಾದ ಷ. ಶೆಟ್ಟರ್ ಮತ್ತಷ್ಟು ವಿಸ್ತರಿಸಿದ್ದಾರೆ.

ಇದರಲ್ಲಿ ಬಹು ಮುಖ್ಯವಾಗಿ ಕೆ.ವಿ.ನಾರಾಯಣರವರು ನೀಡುವ ಒಳನೋಟಗಳು ಮುಖ್ಯವಾದುವು – ಕವಿರಾಜಮಾರ್ಗಕಾರ ಅಂದಿನ ಆಡುನುಡಿಯ ಮಾದರಿಯೊಂದನ್ನು ಕನ್ನಡದ ಲಿಪಿಗೆ ಬಳಸಿಕೊಳ್ಳುವ ಮೂಲಕ ಲಿಪಿಯೊಂದು ಎದರಿಸುವ ಬಿಕ್ಕಟ್ಟನ್ನು ಸಲಲಿತವಾಗಿ ಬಗೆಹರಿಸಿಕೊಂಡ. ಆ ಮೂಲಕವೇ ಅದು ಸಂಸ್ಕೃತವನ್ನು ಒಗ್ಗಿಸಿಕೊಳ್ಳಲು ಶಕ್ತಿಯನ್ನು ಪಡೆದುಕೊಂಡಿತು ಎನ್ನುತ್ತಾರೆ ಕೆ.ವಿ ನಾರಾಯಣರವರು. ಇದು ಪ್ರಸ್ತುತ ಅಧ್ಯಯನಕ್ಕೆ ಬಹು ಮುಖ್ಯವಾದ ತಾತ್ವಿಕ ನೆಲೆಯನ್ನು ಒದಗಿಸುತ್ತದೆ. ಅಂದರೆ, ಕನ್ನಡದಲ್ಲಿ ಆಡಳಿತ ಎನ್ನುವಾಗ ಜನಸಮುದಾಯಗಳ ಆಡುನುಡಿಯನ್ನು ಮತ್ತದರ ತಿಳಿವನ್ನು ಬಳಸಿಕೊಳ್ಳುವುದು ಮತ್ತು

ಸ್ಟಡೀಸ್'ನಲ್ಲಿ ಪ್ರಕಟವಾಗಿರುವ ಲೇಖನ. 'ಪ್ರಾದೇಶಿಕ ಜಗತ್ತೊಂದರ ನಿರ್ಮಿತಿ–ಕನ್ನಡದ ದೃಷ್ಟಾಂತ' ಎಂಬ ಎರಡನೆಯ ಲೇಖನ.

ಈ ಪುಸ್ತಕಕ್ಕೆ ಬರೆದಿರುವ 'ಮಾರ್ಗದೇಶಿ' ಎಂಬ ಮುನ್ನುಡಿಯಲ್ಲಿ ಷೆಲ್ಡನ್ ಪೊಲಾಕ್ ಅವರು 'ಕವಿರಾಜ ಮಾರ್ಗ'ದ ಮಹತ್ತ್ವವನ್ನು ಹೀಗೆ ಗುರುತಿಸುತ್ತಾರೆ, ನಾನು ತೀರ್ಮಾನಿಸಿರುವ ಪ್ರಕಾರ, ಹೀಗೆ ವಿಶ್ವಾತ್ಮಕ ಸಂದರ್ಭವೊಂದರಲ್ಲಿ ದೇಶಭಾಷಾ ನಿರ್ಮಾಣದ ಸಮಸ್ಯಾತ್ಮಕತೆಯನ್ನು ಕುರಿತು ಇಷ್ಟು ಸ್ಪಷ್ಟವಾಗಿ ವಿಶದೀಕರಿಸುವ ಕನ್ನಡದ ಉದಾಹರಣೆಯು ಜಾಗತಿಕ ಇತಿಹಾಸದಲ್ಲಿಯೇ ಪ್ರಥಮವಾದದ್ದು. ಪೊಲಾಕ್ ಅವರು ಸಂಸ್ಕೃತ ವಿಶ್ವವ್ಯಸ್ಥೆಯ ಉಗಮ ಮತ್ತು ವಿಕಾಸವನ್ನು ವಿವರಿಸಿ ಆಮೇಲೆ ದಕ್ಷಿಣ ಏಶಿಯಾದಾದ್ಯಂತ ಆ ಬೆಳವಣಿಗೆಗಳು ದೇಶೀ ವ್ಯವಸ್ಥೆಗಳಿಂದ ಸೋಲುವ ಪ್ರಕ್ರಿಯೆಯನ್ನು ವಿಶ್ಲೇಷಿಸಿದ್ದಾರೆ.

ಸಂಸ್ಕೃತ ವಿಶ್ವದ ಇತಿಹಾಸೀಕರಣ, ಸಂಸ್ಕೃತ ಸಾಹಿತ್ಯಕ ಶೈಲಿಯ ಸ್ಥಳಾವರಣ, ದೇಶಭಾಷಾ ನಿರ್ಮಾಣ, ಜಾಗತಿಕತೆಯನ್ನು ಸ್ಥಳೀಯಗೊಳಿಸುವಿಕೆ, ದೇಶಭಾಷೆಯ ರಾಜಕೀಯ ಆವರಣ, ದೇಶಭಾಷಾ ಲೇಖನದಲ್ಲಿ ಪೊಲಾಕ್ ಚರ್ಚಿಸಿರುವ ಮುಖ್ಯಾಂಶಗಳು. 'ಕವಿರಾಜಮಾರ್ಗ'ದಲ್ಲಿ ವಿಶ್ವಾತ್ಮಕ ಕಾವ್ಯ ಮೀಮಾಂಸೆಯನ್ನು ಸ್ಥಳೀಯವಾಗಿರುವ ಮತ್ತು ಕನ್ನಡ ಸಾಹಿತ್ಯದ ಅನನ್ಯತೆಯನ್ನು ಸ್ಥಾಪಿಸುವ ಸಫಲ ಪ್ರಯೋಗವನ್ನು ಕಾಣುತ್ತೇವೆ ಎಂಬುದು ಪೊಲಾಕ್ ಅವರ ಮುಖ್ಯ ವಾದ.

ದೇಶಭಾಷಾ ನಿರ್ಮಾಣ ಮತ್ತು ರಾಜಕೀಯ ಶಾಸನ, 'ಕವಿರಾಜ ಮಾರ್ಗ ಮತ್ತು ಕಾವ್ಯದ ದೇಶಿಗಳು, ಸಾರ್ವತ್ರಿಕ ರಾಜಕಾರಣದ ಸ್ಥಳೀಕರಣ (ಪಂಪಭಾರತ) ಹೊಸ ಭಾಷಾ ವಿಜ್ಞಾನ–ತತ್ತ್ವಾಧಾರಿತ ಪ್ರಯೋಗದಿಂದ ಪ್ರಯೋಗಾಧಾರಿತ ತತ್ತ್ವದ ಕಡೆಗೆ – ಇವು ಪೊಲಾಕ್ ಅವರು ತನ್ನ ಎರಡನೆಯ ಲೇಖನದಲ್ಲಿ ಚಚರ್?ಸುವ ಮುಖ್ಯಾಂಶಗಳು. ಪೊಲಾಕ್ ಅವರ ಪ್ರಕಾರ 'ಕವಿರಾಜಮಾರ್ಗ'ವು ತನ್ನ ದೇಶೀಯತೆಯ ವಲಯದಲ್ಲಿ ತನ್ನ ಮುಂದಿಟ್ಟುಕೊಂಡಿರುವ ಉದ್ದೇಶಗಳಿವು – ಕನ್ನಡ ಸಾಹಿತ್ಯವನ್ನು ತಾತ್ವಿಕವಾಗಿ ಸ್ಥಾಪಿಸಿ ಅದನ್ನು ವ್ಯಾಖ್ಯಾನಿಸಲು ಮತ್ತು ಅದಕ್ಕೆ ವಿಧಿ ನಿರ್ಣಯಗಳನ್ನು ಸೂಚಿಸಲು ಸಾಧ್ಯವಾಗುವಂತೆ ಮಾಡುವುದು, ಭಾಷೆಯ ಬಳಕೆಯನ್ನು ಶಿಸ್ತಿಗೊಳಪಡಿಸುವುದು ಮತ್ತು ಭಾಷೆಯನ್ನು ಸಾಹಿತ್ಯಿಕ ಭಾಷೆಯಾಗಿ ಮಾರ್ಪಡಿಸಲಿಕ್ಕೆ ಅಗತ್ಯವಾಗಿದ್ದ ದೃಢತೆ ಮತ್ತು ಗಾಂಭೀರ್ಯಗಳನ್ನು ಕನ್ನಡಕ್ಕೆ ತಂದು ಕೊಡುವುದು. ವಿಶ್ವಾತ್ಮಕ ಸಂಸ್ಕೃತದ ಎದುರಿಗೆ ಕನ್ನಡದ ಭಿನ್ನತೆಯನ್ನು ಪಟ್ಟಿ ಮಾಡುವುದು.

ಒಂಬತ್ತು–ಹತ್ತನೆಯ ಶತಮಾನದ ದೇಶಭಾಷಾ ಕವಿಗಳು ಯಾಕೆ ತಮ್ಮೆದುರಿಗೆ ತೆರೆದುಕೊಂಡಿದ್ದ ಸಂಸ್ಕೃತವೆಂಬ ಪ್ರಾಂತ್ಯಾಂತರ ವ್ಯಾಪ್ತಿಯ ಅರೆಜಾಗತಿಕ ಸ್ವರೂಪದ ಭಾಷಾ ಸಾಧ್ಯತೆಯನ್ನು ನಿರಾಕರಿಸಿದರು? ಯಾಕೆ ಅವರು ಸ್ಥಳೀಯ ನೆಲೆಯಲ್ಲಿಯೇ ಸಂವಹನಕ್ಕೆ ತೊಡಗಿದರು? ಸಮಕಾಲೀನ ಭಾರತದ ಪ್ರಬಲ ಶಕ್ತಿ ಕೇಂದ್ರಗಳಿಂದ ಬಂದ ಆ ದೇಶಿ, ಧೀಮಂತರು ಯಾಕೆ ತಮ್ಮ ಭಾಷೆಯು ಹೊಸದೊಂದು ಜ್ಞಾನಜಗತ್ತಾಗಬೇಕೆಂದೂ ಹೊಸದೊಂದು ಪ್ರಮಾಣ ನಿರ್ಣಯದ ಮಾಧ್ಯಮವಾಗಬೇಕೆಂದೂ ನಿರ್ಧರಿಸಿದರು? ಐತಿಹಾಸಿಕ ದೃಷ್ಟಿಯಿಂದ ಅವರೆಲ್ಲ ಸೃಷ್ಟಿಸುತ್ತಿದ್ದ ಹೊಸ ಸಾಂಸ್ಕೃತಿಕ ಆಕೃತಿಗಳ ರಾಜಕೀಯ ಮತ್ತು ಸಾಮಾಜಿಕ ತಥ್ಯವೆಂಥದು? ಈ ಮಹತ್ತ್ವದ ಪ್ರಶ್ನೆಗಳನ್ನು ಡಾ। ಷೆಲ್ಡನ್ ಪೊಲಾಕ್ ಕೇಳುತ್ತಾರೆ.

ಅದನ್ನೇ ಬಳಕೆಗೆ ತರುವುದು. ಇದೊಂದು ಅನಿವಾರ್ಯಕ್ರಿಯೆ ಎಂಬುದನ್ನು ನಾವು ಮರೆಯುವಂತಿಲ್ಲ. ಇದನ್ನೇ ಎಂ.ಎಂ. ಕಲಬುರ್ಗಿ ಅವರ 'ಕವಿರಾಜಮಾರ್ಗ ಮತ್ತು ದೇಸಿಯತೆ ಎನ್ನುವ ಲೇಖನ ಸಾಬೀತು ಮಾಡುತ್ತದೆ – ಯಾವುದೇ ಭಾಷೆ ಲಿಪಿಯತ್ತ ಹೊರಳುವಾಗ ಅದು ಆಡುಮಾತಿನಲ್ಲಿ ಸಾಕಷ್ಟು ಬಗೆಯ ಪ್ರಾಯೋಗಿಕ ನೆಲೆಗಳನ್ನು ದಕ್ಕಿಕೊಂಡು ದೇಸಿ ನಡೆಯಾಗುವತ್ತ ಸಾಗುವುದನ್ನು ಗುರುತಿಸುತ್ತಾರೆ.

19. ಕವಿರಾಜ ಮಾರ್ಗ ಮತ್ತು ಕನ್ನಡ ಜಗತ್ತು[16]

'ನನ್ನ ಕನ್ನಡ ಜಗತ್ತು, ಕವಿರಾಜಮಾರ್ಗವು ನಿರ್ಮಿಸಿದ ಕನ್ನಡ ಜಗತ್ತು ಮತ್ತು ಕನ್ನಡವು ದಕ್ಕಿಸಿಕೊಂಡ ಅರಿವು ಮತ್ತು ಎಚ್ಚರ' ಎನ್ನುವ ಮೂರು ಮುಖ್ಯ ಅಧ್ಯಾಯಗಳನ್ನು ಒಳಗೊಂಡ ಈ ಕೃತಿಯು ಕವಿರಾಜ ಮಾರ್ಗಕಾರನು ತನ್ನ ಕೃತಿಯ ಮೂಲಕ ಕಟ್ಟದ ಗುರುತು ತನ್ನ ಗುರುತಾಗಿದ್ದನ್ನು ಕೆ.ವಿ.ಸುಬ್ಬಣ್ಣ ಗುರುತಿಸಿಕೊಳ್ಳುತ್ತಾರೆ. ಹೀಗೆ ಗುರುತಿಸಿಕೊಳ್ಳುವಾಗ ಅದರ ಮುನ್ನುಡಿಯ ಭಾಗದಲ್ಲಿ 'ನ್ಯೂ ಏಜೆಸ್'[17] ಎನ್ನುವ ಸಣ್ಣ ಕವನವೊಂದನ್ನು ನೀಡಿದ್ದಾರೆ:

'ಈಗಲೇ ಉದಯಿಸಿದೆ ಹೊಸ ಯುಗವೊಂದು
ಈ ಹೊಸಯುಗದಿ ಜೀವಿಸದ್ದ ನನ್ನ ತಾತ
ನನ್ನ ಮೊಮ್ಮಗ ಮಾತ್ರ ಇನ್ನೂ ಇದ್ದಾನೆ ಹಳೆಯದರಲ್ಲೇ...
ಬಾಡೂಟ ಸಾಗುತ್ತಿದೆ ತುಕ್ಕ್ಹಿಡಿದ ಚಮಚದಲ್ಲೇ
ಅದೇನೂ ಮೊಟ್ಟಮೊದಲ ಕಾರುಗಳಲ್ಲ
ಅಲ್ಲವೇ ಅಲ್ಲ ಟ್ಯಾಂಕುಗಳು

---

[16] ಕೆ.ವಿ.ಸುಬ್ಬಣ್ಣ, ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2010

[17] **NEW AGES**
A new age does not begin all of a sudden.
My grandfather was already living in the new age
My grandson will probably still be living in the old one.
The new meat is eaten with the old forks.
It was not the first cars
Nor the tanks
It was not the airplanes over our roofs
Nor the bombers
From new transmitters came the old stupidities.
Wisdom was passed on from mouth to mouth.
-Bertolt Brecht

ಮನೆಯ ಮೇಗಡೆ ಹಾರುತ್ತಿರುವ ಏರೋಪ್ಲೇನುಗಳಲ್ಲ
ಅಲ್ಲವೇ ಅಲ್ಲ ಬಾಂಬರ್ಗಳು
ಹೊರಬರುತ್ತಿವೆ ಗೊಡ್ಡುತನಗಳು ನವೀನವಾದ ತರಂಗಯಂತ್ರಗಳಿಂದ...
ಬಾಯಿಂದ ಬಾಯಿಗೆ ಪಸರಿಸುತ್ತಿದೆ ವಿವೇಕ.

ಆ ಕುರಿತಂತೆ, ಕ.ವಿ.ಸುಬ್ಬಣ್ಣನವರು ಓದುಗರಿಗೆ ವಿವೇಚನೆಗೆ ಬಿಟ್ಟು, "ಕನ್ನಡದ ವಿಷಯವಾಗಿ ಮಾತಾಡುತ್ತೇನೆಂದು ತಟ್ಟನೆ ಅನೈಚ್ಛಿಕವಾಗಿ ಹೇಳಲು ಅದಾವ ನನ್ನ ಒಳಗಿನ ಒತ್ತಡ ಕಾರಣವಿದ್ದೀತು ಅಂತ ಯೋಚಿಸುತ್ತೇನೆ. ನನಗೆ ಸಲೀಸಾಗಿ ಬರುವ ಭಾಷೆ ಇದೊಂದೇ ಆಗಿರುವ ಕಾರಣ ಕನ್ನಡದಲ್ಲಿ ಮಾತನಾಡಲು ನನಗೆ ಯಾವತ್ತೂ ಖುಶಿಯೇ. ಆದರೆ ಇಲ್ಲಿ ಕನ್ನಡದಲ್ಲಿ ಮಾತಾಡಲು ಸಾಧ್ಯವಿಲ್ಲವಾಗಿದ್ದ ಕಾರಣ ಕನ್ನಡದ ಬಗ್ಗೆಯಾದರೂ ಮಾತಾಡಬಹುದಲ್ಲ, ಅಂತ ನನಗೆ ಅನ್ನಿಸಿರಬೇಕು. ಅಥವಾ ಏನೇ ಮಾತನಾಡಲಿ ಯಾವುದೇ ಭಾಷೆಯಲ್ಲಿ ಮಾತನಾಡಲಿ, ವಾಸ್ತವವಾಗಿ ನಾನು ಮಾತಾಡುವುದೆಲ್ಲ ಕನ್ನಡದಲ್ಲಿಯೇ ಮತ್ತು ಕನ್ನಡದ ಬಗ್ಗೆಯೇ ಎಂದರೂ ತಪ್ಪಾಗಲಿಕ್ಕಿಲ್ಲ. ಅಚಾನಕವಾಗಿ ಈ ಜಗತ್ತಿಗೆ ನಾನು ಬಂದುಬಿದ್ದಾಗ, ನನ್ನ ತಾಯಿ ಮತ್ತು ಬಳಿ ಬಳಗದವರು ನನ್ನ ತುಟಿಗಳೊಳಕ್ಕೆ ಕನ್ನಡ ಶಬ್ದಗಳನ್ನೂಡಿಸಿ, ಆ ಶಬ್ದಗಳ ಮೂಲಕವೇ ನನ್ನ ಮನಸ್ಸು ನಿಧಾನವಾಗಿ ಈ ಜಗತ್ತನ್ನು ಗ್ರಹಿಸುವ ಹಾಗೆ ಮಾಡಿದರು. ಶಬ್ದಗಳು ನನಗೆ ಹೆಸರುಗಳನ್ನು ಕೊಟ್ಟವು; ಹೆಸರುಗಳು ಆಕಾರಗಳನ್ನು ಮೂಡಿಸಿದವು; ಈ ಆಕೃತಿಗಳೇ ಈ ಆಕೃತಿಗಳನ್ನು ಕಲ್ಪಿಸಿದ ಕನ್ನಡ ಶಬ್ದಗಳೇ ನನ್ನ ಪ್ರಪಂಚ, ಇವೊತ್ತಿಗೂ. ಈ ಶಬ್ದಗಳಿಲ್ಲದಿದ್ದರೆ ಗ್ರಹಿಕೆಯೇ ಇಲ್ಲವಲ್ಲ? ಪ್ರತಿಕ್ರಿಯೆಯೆಂಬುದೇ ಇಲ್ಲವಲ್ಲ? ಆಗ ನಾನು ಕಿವುಡ, ಕುರುಡ, ಮೂಕ, ಒಂದು ಕಲ್ಲು ಅಷ್ಟೇ. ಆಗ ಜಗತ್ತು ಎನ್ನುವುದೇ ಇಲ್ಲ...

ಕನ್ನಡವು ಚಿಕ್ಕದು, ನಿಜ. ಜಗತ್ತಿನ ತುಂಬ ಇರುವ ಕನ್ನಡದಂಥ ಅಸಂಖ್ಯಾತ ಸ್ಥಳ ಭಾಷೆಗಳು ಚಿಕ್ಕವೇ. ಹಾಗಿದ್ದರೂ ಜಗತ್ತಿನ ತುಂಬ ಇರುವ ಇಂಥ ಕಿರುನೆಲ–ಕಿರುಭಾಷೆ–ಕಿರು ಸಮುದಾಯಗಳು ತಮ್ಮ ಕಿರುತನವನ್ನು ಎಂತೋ ಮೀರಿಕೊಂಡು, ತಮ್ಮ ಕಿರು ಕೂಪದಲ್ಲೂ ತಮ್ಮ ಸುತ್ತ ಜಗದಗಲದ ಅನಂತ ವಿಶ್ವಾಕಾಶವನ್ನು ಸೃಜಿಸಿಕೊಂಡು ಬಾಳಿಬಂದಿದ್ದಾರೆ... ಕನ್ನಡಕ್ಕೇ ಬಂದರೆ, ಕರ್ಣಾಟಕವೆಂದು ಈಗ ನಾವು

ಗುರುತಿಸುವ ಈ ನಾಡು, ಭಾರತದ ಒಟ್ಟೂ ಭೂಭಾಗದಲ್ಲಿ ಅತ್ಯಂತ ಪ್ರಾಚೀನವೂ ಬಹು ಸ್ಥಿರವೂ ಆದ ದಖಿನ್ ಪ್ರಸ್ಥಭೂಮಿಯ ಭದ್ರಪೀಠದ ಮೇಲೆ ದೃಢವಾಗಿ ನಿಂತಿದೆ. (ಪು.2–3). ಕ್ರಿಸ್ತಪೂರ್ವದ ಸಹಸ್ರಮಾನವನ್ನು ಪರಿಗಣಿಸಿದರೆ ಈ ಭಾಗದ ಜನಸಮುದಾಯವು, ಸ್ಥಳೀಯವಾಗಿದ್ದಿರಬಹುದಾದ ಹತ್ತು ಹಲವು ಧಾರ್ಮಿಕ ಪಂಥಗಳ ಜತೆಗೆ ವೈದಿಕೋತ್ತರ ಧರ್ಮದಿಂದಲೂ ಬೌದ್ಧ ಧರ್ಮದಿಂದಲೂ ಪ್ರಭಾವಗೊಂಡಿರಬೇಕು. ಕ್ರಿಸ್ತನ ಅನಂತರದ ಸಹಸ್ರಮಾನದಲ್ಲಿ ಬೌದ್ಧ–ಜೈನಶೈವ–ಸ್ಮಾರ್ತ–ವೈಷ್ಣವ–ತಾಂತ್ರಿಕ ಇತ್ಯಾದಿ ಧರ್ಮಗಳು ಇಲ್ಲಿ ಪ್ರಭಾವಕಾರಿ ಯಾಗಿದ್ದವು. ಈ ಅವಧಿಯಲ್ಲಿ ಬಹಳ ಕಾಲ ಜೈನ ಧರ್ಮವು ಕನ್ನಡ ಭಾಷೆಸಾಹಿತ್ಯ–ಸಂಸ್ಕೃತಿಗಳ ನಿರ್ಮಾಣದ ಹೊಣೆ ಹೊತ್ತು ನಿಂತಿತ್ತು. ಈ ಎರಡನೇ ಸಹಸ್ರಮಾನದಲ್ಲಿ ನಮ್ಮ ಕನ್ನಡ ಜನಪದವು ಹಿಂದಿನ ಧರ್ಮಗಳಲ್ಲದೆ ಶೈವವೀರಶೈವ–ತಾಂತ್ರಿಕ–ಭಕ್ತಿಪಂಥಗಳಿಂದಲೂ ಅದಕ್ಕೆ ಮುಂದೆ ಇಸ್ಲಾಮ್–ಸೂಫಿ ಕ್ರೈಸ್ತ ಮುಂತಾದ ವಿದೇಶಿ ಧರ್ಮಗಳಿಂದಲೂ ಗಾಢವಾಗಿ ಪ್ರಭಾವಗೊಂಡಿತು. ನಾವು ಜಗತ್ತಿನ ಬಹುತೇಕ ಎಲ್ಲಾ ಜನ – ಜನಾಂಗ – ಬುಡಕಟ್ಟು – ಧರ್ಮ ಜಾತಿಗಳನ್ನೂ ಅರಗಿಸಿಕೊಂಡಿರುವ ವಿಶ್ವಮಾನವರು ಮತ್ತು ನಮ್ಮ ಕನ್ನಡವು ಜಗತ್ತಿನ ಅಸಂಖ್ಯ ಭಾಷೆಗಳನ್ನು ಅರಗಿಸಿಕೊಂಡಿರುವ ವಿಶ್ವಭಾಷೆ. ಹಾಗೆ ನಮ್ಮದು ಕನ್ನಡ ಕೂಪವಲ್ಲ, ಕನ್ನಡ ವಿಶ್ವ, ಕನ್ನಡ ಬ್ರಹ್ಮಾಂಡ.

ತಮಿಳು ಭಾಷೆಯ ಮೊದಲ ಆಧಾರಗ್ರಂಥವೆನ್ನಬಹುದಾದ 'ತೊಳ್ಕಾಪ್ಪಿಯಂ' (ಕ್ರಿ.ಶ. 4–5ನೇ ಶತಮಾನ?) ಮತ್ತು ಅದೇ ಬಗೆಯಲ್ಲಿ ಕನ್ನಡಕ್ಕೆ ಆಧಾರಗ್ರಂಥವಾದ 'ಕವಿರಾಜಮಾರ್ಗ' (ಸು. ಕ್ರಿ.ಶ. 860–870) ಈ ಯೆರಡುಸಮಾನಗ್ರಂಥಗಳನ್ನು ಪರಸ್ಪರ ಹೋಲಿಸಿ ನೋಡಿದರೆ, ತಮಿಳು ಮತ್ತು ಕನ್ನಡ ಭಾಷೆಗಳು ಪ್ರತ್ಯೇಕ–ಸ್ವತಂತ್ರವಾಗಿ ಹರಳುಗಟ್ಟಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಯಾವ ಯಾವ ಬಗೆಯ ಸ್ವಂತಿಕೆಗಳನ್ನು ಸೃಷ್ಟಿಸಿಕೊಂಡವು ಮತ್ತು ಭಿನ್ನತೆಗಳನ್ನು ಹೊರಗೊಳಿಸಿಕೊಂಡವು ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಒಂದು ಉದಾಹರಣೆಯನ್ನು ಹೇಳುತ್ತೇನೆ. ಸಂಸ್ಕೃತದಲ್ಲಿ ಆಗ ವಿಪುಲವಾಗಿ ಬೆಳೆದುಕೊಳ್ಳುತ್ತಿದ್ದ 'ಕಾವ್ಯಮೀಮಾಂಸೆ'ಯು ತನಗೆ ಅ–ಪ್ರಸ್ತುತ ಅಥವಾ ಅಪರಿಚಿತ ಎನ್ನುವ ಹಾಗೆ 'ತೊಳ್ಕಾಪ್ಪಿಯಂ', ತಮಿಳಿನದೇ ಆದ ಒಂದು ಸ್ವಂತ ಕಾವ್ಯಶಾಸ್ತ್ರವನ್ನು ರಚಿಸಿಕೊಳ್ಳಲು ಯತ್ನಿಸಿತು. 'ಕವಿರಾಜಮಾರ್ಗ'ವು ಅದಕ್ಕೆ ಬದಲಾಗಿ,

ಸಂಸ್ಕೃತ ಕಾವ್ಯಮೀಮಾಂಸೆಯನ್ನು ಆಧಾರಕ್ಕಿಟ್ಟುಕೊಂಡು ಅದರಲ್ಲಿ ಕನ್ನಡದ ಸ್ವಂತ ಚಿಂತನೆಗಳೇನೆಂಬುದನ್ನು ಖಚಿತವಾಗಿ ನಮೂದಿಸಿಕೊಳ್ಳುತ್ತ ಹೋಯಿತು. ಸಂಸ್ಕೃತದಲ್ಲಿ 'ಶಾಂತರಸ'ದ ಬಗ್ಗೆ ಚರ್ಚೆಯು ಪ್ರಾರಂಭವಾದದ್ದೇ ಬಹುಶಃ, ಕನ್ನಡದ ವಿಶಿಷ್ಟ ಚಿಂತನೆಯ ಪರಿಣಾಮವಾಗಿ. 'ಕವಿರಾಜಮಾರ್ಗ'ವೆಂಬ... ಗ್ರಂಥವು, ತನ್ನ ಕಿರುಭಾಷೆಯ ಅಂಗೈನೆಲದಲ್ಲಿ ಪ್ರಪಂಚಜಗತ್ತನ್ನು ಅವಾಹಿಸಿ ಅರಗಿಸಿಕೊಂಡು ಕನ್ನಡವೆಂಬ ನಿಸ್ಸೀಮೆಯ ಪ್ರತಿಜಗತ್ತನ್ನು ಹೇಗೆ ಸೃಷ್ಟಿಸಿಕೊಳ್ಳಬೇಕೆಂಬುದನ್ನು ಕುರಿತು ಚಿಂತಿಸುತ್ತದೆ. 'ಕವಿರಾಜಮಾರ್ಗ'ದಲ್ಲಿನ ಒಂದು ಕಿರು ಕಂದಪದ್ಯವು ಅದನ್ನು ಮನೋಜ್ಞವಾಗಿ ಬಣ್ಣಿಸುತ್ತದೆ. 'ಕಾವೇರಿಯಿಂದಂ–ಆ–ಗೋದಾವರಿವರಂ– ಇರ್ದ–ನಾಡು–ಅದು ಆ ಕನ್ನಡದೊಳ್ ಭಾವಿಸಿದ ಜನಪದಂ'. ಈ ನಾಡು ಮತ್ತು ಜನಪದವು ತತ್ಕಾಲದಲ್ಲಿ ಕಾಣಿಸುತ್ತಿದ್ದ ಭೌಗೋಲಿಕ ಘಟಕವಷ್ಟೇ ಅಲ್ಲ; ಅದು 'ಭಾವಿತ'ವಾದದ್ದು; 'ಕನ್ನಡ'ವೆಂಬುದರ ಒಳಗಡೆ–ಆಚೆಪ್ಪಿನ ಒಳಗೆ ಎನ್ನಿ–'ಭಾವಿತ'ವಾದದ್ದು. ಅಂದರೆ, 'ಕನ್ನಡ'ವೆಂಬುದು ಒಂದು ಚಿತ್‌ಜಗತ್ತು, ಒಂದು ಕಣಸು, ದರ್ಶನ; ಮೊದಲು ಚಿತ್ ಜಗತ್ತಿನೊಳಗೆ ಮೈದಾಳಿದ್ದಾಗಿ ಅನಂತರ ನಿರ್ಮಿತಗೊಂಡಿದೆ. ಮತ್ತು ಇದು, 'ವಸುಧಾವಲಯ–ವಿಲೀನ, ವಿಶದ–ವಿಷಯ–ವಿಶೇಷಂ'. ವಸುಧಾ (ಭೂಮಿ) ಎನ್ನುವುದು ಅನಂತ ಬ್ರಹ್ಮಾಂಡದೊಳಗಿನ ಒಂದು 'ವಲಯ' ಅಷ್ಟೇ: ಮತ್ತು 'ಕನ್ನಡ'ವೆಂಬ 'ವಿಷಯ' (ನಾಡು)ವು ಆ ವಸುಧಾವಲಯದದಲ್ಲಿ 'ವಿಲೀನ'ವಾಗಿದೆ, ಸಮರಸವಾಗಿ ಬೆರೆತುಕೊಂಡಿದೆ. ಹಾಗೆಂದಮಾತ್ರಕ್ಕೆ ಇದು ಸ್ವಂತಿಕೆಯ ಚಹರೆಯಿಲ್ಲದೆ ವಸುಧೆಯಲ್ಲಿ ಗುರುತು ಸಿಗದಂತೆ ಮುಳುಗಿಹೋದದ್ದಲ್ಲ; ತನ್ನದೇ 'ವಿಶೇಷ' (ವೈಶಿಷ್ಟ್ಯ) ಇರುವ ನಾಡು. ಅಷ್ಟೇ ಅಲ್ಲ–ಇದು 'ವಿಶದ'ವಾದದ್ದು; ವಸುಧೆ ಅಥವಾ ಬ್ರಹ್ಮಾಂಡದಷ್ಟೇ ವ್ಯಾಪಕವಾದದ್ದು. ಯಾಕೆಂದರೆ ಇದು, 'ವಸುಧಾವಲಯ ವಿಲೀನ', ಇಲ್ಲಿ 'ವಸುಧಾವಲಯವಿಲೀನ' ಎಂಬುದರ ಇನ್ನೊಂದು ಅರ್ಥವನ್ನು (ವಸುಧಾವಲಯಗಳನ್ನು ತನ್ನೊಳಗೆ ಅರಗಿಸಿಕೊಂಡಿರು ವಂಥದು ಎಂಬ ಅರ್ಥವನ್ನು) ಪರಿಭಾವಿಸಿಕೊಳ್ಳಬೇಕು. ವಸುಧೆಯ ಒಳಗಿನ ಒಂದು ಕಿರುಬಿಂದುವಾಗಿದ್ದೂ ತನ್ನೊಳಗೆ ಆ ವಸುಧೆಯನ್ನೇ ಅರಗಿಸಿಕೊಂಡಿರುವ 'ಕನ್ನಡ'ದ ಇಂಥ ಪ್ರತಿಮೆಯನ್ನು 'ಕವಿರಾಜಮಾರ್ಗ'ವು ಕಂಡರಿಸಿಟ್ಟಿದೆ". ಈ ಮಾತುಗಳು ಕನ್ನಡಿಗರು ತಮ್ಮ ನಾಳೆಗಳನ್ನು ಕಟ್ಟಿಕೊಳ್ಳುವ ಬಗೆಯೊಂದು ಇಲ್ಲಿ ಕಾಣಸಿಗುತ್ತದೆ.

2.3: ಬಗೆಹರಿಯದ ತಾತ್ವಿಕ ಪ್ರಶ್ನೆಗಳು:

ಈ ಮೇಲಿನ ಸಮೀಕ್ಷೆಯಲ್ಲಿ, ಕಾಣುವ ತಾತ್ವಿಕ ಪ್ರಶ್ನೆಗಳೆಂದರೆ, ಅಂಕಿ ಅಂಶಾಧಾರಿತ ಅಧ್ಯಯನಗಳೇ ಹೆಚ್ಚಾಗಿದ್ದು, ಪ್ರಸ್ತುತ ಇರುವ ವ್ಯವಸ್ಥೆಯನ್ನೇ ಮುಂದುವರಿಸುವ ಹುಸಿ ಅರಿವಿನ ಚೌಕಟ್ಟನ್ನೆ ಮಂಡಿಸುತ್ತವೆ. ಈ ಅಧ್ಯಯನಗಳಲ್ಲಿ ಮುಖ್ಯವಾಗಿ ಮಾಹಿತಿ ಮೂಲವನ್ನು ಎದುರಿಗಿಟ್ಟುಕೊಂಡು, ನಿರ್ದೇಶನವೊಂದನ್ನು ಭಾಷೆಯ ಕುರಿತಂತೆ ನೀಡಲಾಗಿರುವುದನ್ನು ಗಮನಿಸಬಹುದು. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಭಾಷಿಕ ಅರಿವನ್ನು ಅನ್ವಯಿಕ ವಿಜ್ಞಾನದ ಮಾದರಿಯಲ್ಲಿ ನೋಡಿರುವುದೇ ಆಗಿದೆ. ಆದ್ದರಿಂದ ಇಂತಹ ಸಿದ್ಧಮಾದರಿಯ ಅಧ್ಯಯನವು ತಿಳುವಳಿಕೆಯ ನಿಜದ ವಿಧಾನಗಳನ್ನು ಮರೆಮಾಚುತ್ತದೆ. ಇವತ್ತಿಗೂ ಕೂಡ ಕರ್ನಾಟಕದಲ್ಲಿ ಆಡಳಿತ ಭಾಷೆಯ ಅಧ್ಯಯನ ಕುರಿತಂತೆ ಅದೇ ರೀತಿಯ ತಿಳುವಳಿಕೆಯ ವಿಧಾನವನ್ನು ಅನ್ವಯಿಸಿರುವುದು ಎದ್ದು ಕಾಣುತ್ತದೆ. ಆದರೆ ಕನ್ನಡ ಜನಭಾಷೆಯ ಬಳಕೆ ಕುರಿತಂತೆ ಇಲ್ಲಿಯವರೆಗೆ ನಡೆದಿರುವ ಅಧ್ಯಯನದ ಚೌಕಟ್ಟುಗಳನ್ನು ಬಿಟ್ಟುಕೊಟ್ಟು ಭಿನ್ನ ಮಾದರಿಯನ್ನು ಅನುಸರಿಸಬೇಕಾದ ಅಗತ್ಯವಿದೆ. ಯಾಕೆಂದರೆ, ಜನಸಮುದಾಯದೊಳಗಿನಿಂದಲೇ ಕಟ್ಟಿಕೊಂಡಿರುವ ಲೋಕಗ್ರಹಿಕೆಯನ್ನು ಗಮನಿಸಿದಲ್ಲಿ ಭಾಷೆಯೆನ್ನುವುದು ಪ್ರಮಾಣೀಕರಣಕ್ಕೊಳಗಾಗುವ ಸಂಗತಿ ಮಾತ್ರವೇ ಅಲ್ಲ. ಎಂದರೆ ಅದನ್ನು ಕಾರ್ಯಕಾರಣ ಸಂಬಂಧದಲ್ಲಿ ಮಾತ್ರವೇ ಅನ್ವಯಿಸಲಾಗದು. ಇಂಥ ವೈಧಾನಿಕತೆಯು ಪರಿಣಾಮವಾದವಾಗಿ ಮಾತ್ರ ಗೋಚರಿಸುತ್ತದೆ. ಈ ನಡೆಯನ್ನು ಮೀರಬೇಕಾದಲ್ಲಿ ಭಾಷೆಯ ಬಳಕೆದಾರರು ನಿರ್ದಿಷ್ಟ ಸನ್ನಿವೇಶಗಳಲ್ಲಿ ತಮ್ಮ ಬದುಕನ್ನು ನಿಭಾಯಿಸಿಕೊಳ್ಳಲು ಭಾಷೆಯನ್ನು ಸಂಘಟಿಸಿಕೊಳ್ಳುತ್ತಾರೆ ಎಂಬುದನ್ನು ಗ್ರಹಿಸಬೇಕಾಗುತ್ತದೆ. ಆದ್ದರಿಂದ ಕನ್ನಡ ಆಡಳಿತ ಭಾಷೆಯು ಸಾರ್ವತ್ರಿಕವಾಗಿರುವುದನ್ನು ಬಿಟ್ಟು ನಿರ್ದಿಷ್ಟ ಸನ್ನಿವೇಶಗಳಲ್ಲಿ, ಸ್ಥಳಗಳಲ್ಲಿ, ನಿರ್ದಿಷ್ಟ ಅಗತ್ಯಗಳನ್ನು ರೂಪಿಸುವಂತಹ ಯೋಜನೆಗಳನ್ನು/ನೀತಿಗಳನ್ನು ಹುಡುಕಿಕೊಳ್ಳುತ್ತಿರುತ್ತದೆ ಎನ್ನುವುದನ್ನೂ ಅರಿಯುವುದು ಅತ್ಯಗತ್ಯವಾಗಿದೆ.

ಆಡಳಿತ ಭಾಷೆಯ ಕನ್ನಡ ಸ್ವರೂಪ, ಆಡಳಿತ ಭಾಷೆಯಾಗಿ ಕನ್ನಡದ ಎದುರಿಗಿರುವ ಸವಾಲುಗಳು ಹಾಗೂ ಕನ್ನಡದಲ್ಲಿ ಆಡಳಿತ ಕನ್ನಡ ಜನಬದುಕುಗಳನ್ನು

ಒಳಗೊಳ್ಳುವ ಬಗೆ ಹೇಗೆ ಎಂಬ ಬಗ್ಗೆ ಅಧ್ಯಯನಗಳು ಆಗಿಲ್ಲ. ಪ್ರಸ್ತುತ ಸಂಶೋಧನಾ ವಿಷಯದಲ್ಲಿ ಈ ಅಂಶಗಳ ಬಗ್ಗೆ ಬೆಳಕು ಚೆಲ್ಲಲು ಪ್ರಯತ್ನಿಸಲಾಗಿದೆ.

ಬ್ರಿಟಿಷ್ ಆಡಳಿತದಲ್ಲಿ ಕನ್ನಡವನ್ನು ಬಳಸುತ್ತಿದ್ದ ಬಗ್ಗೆ ಕೆಲವು ಗ್ರಂಥಗಳು, ಆಡಳಿತ ಭಾಷೆಯಾಗಿ ಕನ್ನಡ ಜಾರಿಯ ಬಗ್ಗೆ ಇರುವ ತೊಂದರೆಗಳ ಅಧ್ಯಯನದ ಕೆಲವು ಕೃತಿಗಳು ಬಂದಿವೆ. ಈ ಕುರಿತು ನಡೆದಿರುವ ಅಧ್ಯಯನಗಳು ಪ್ರಸ್ತುತ ಇರುವ ಮಾದರಿಯಲ್ಲಿಯೇ ಕೆಲವು ಸುಧಾರಣೆಗಳನ್ನು ಮಾತ್ರ ಸೂಚಿಸುತ್ತವೆಯೇ ಹೊರತು, ಯಾವುದೇ ಸಕಾರಾತ್ಮಕ ಬದಲಾವಣೆಯನ್ನು ತರುವ ನೆಲೆಯಲ್ಲಿ ನಡೆದಿಲ್ಲ ಎನ್ನುವುದನ್ನು ಈ ಪ್ರಬಂಧದಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ. ಆಡಳಿತ ಭಾಷೆಯಾಗಿ ಕನ್ನಡವನ್ನು ಇಂದಿಗೆ ಸಜ್ಜುಗೊಳಿಸಲೇಬೇಕಾದ ಒತ್ತಡಗಳ ಹಿನ್ನೆಲೆಯಲ್ಲಿ ಹಾಗೆ ಗುರುತಿಸುವುದು ಅತ್ಯಗತ್ಯವೆನಿಸುತ್ತದೆ. ಇದು ಆಡಳಿತ ಭಾಷೆಯಾಗಿ ಕನ್ನಡವನ್ನು ಕಟ್ಟುವ ದಾರಿಗೆ ಮುಖ್ಯವಾಗುತ್ತದೆ ಎಂದು ತಿಳಿಯಲಾಗಿದೆ.

ಆದರೆ, ಈವರೆಗಿನ ಅಧ್ಯಯನಗಳಲ್ಲಿ ಕನ್ನಡದ ಬಗೆಗಿನ ವಿಶೇಷ ಅಭಿಮಾನ ವ್ಯಕ್ತವಾಗಿರುವುದನ್ನು, ಅದನ್ನು ಭಾವನಾತ್ಮಕ ನೆಲೆಯಲ್ಲಿ ವಿವರಿಸಿಕೊಂಡಿರುವುದನ್ನು ಮಾತ್ರವೇ ಕಾಣಬಹುದು. ಅಲ್ಲಿ ಒಂದು ರೀತಿಯ ವೈಭವೀಕೃತ ನೆಲೆಯೇ ಮುನ್ನೆಲೆಯನ್ನು ಪಡೆದಿದ್ದು, ಅಧಿಕೃತತೆಯ ಪ್ರಶ್ನೆಯು ಭಾವನಾತ್ಮಕ ವೈಭವದಲ್ಲಿ ಮರೆಗೆ ಸರಿದಿರುವುದು ಎದ್ದು ಕಾಣುತ್ತದೆ. ಹಾಗಾಗಿ ಅಂತಹ ಕೃತಿಗಳನ್ನು ಹೆಚ್ಚಿಗೆ ಚರ್ಚಿಸಲು ಹೋಗದೆ ಆ ಕೃತಿಗಳಲ್ಲಿ ಇರುವ ತಾತ್ವಿಕ ಪ್ರಶ್ನೆಗಳನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾತ್ರವೇ ಮಾಡಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಇಲ್ಲಿ ಎದುರಾಗುವ ಸೈದ್ಧಾಂತಿಕ ವಿಶ್ಲೇಷಣೆಯನ್ನು ನೋಡುವುದಾದರೆ:

1. ಈ ಕೃತಿಗಳಲ್ಲಿ ಕೆಲವನ್ನು ಹೊರತು ಪಡಿಸಿದರೆ ಉಳಿದವು ವಿವರಣಾತ್ಮಕ ನೆಲೆಯಲ್ಲಿ ಮಾಹಿತಿಯನ್ನು ಒದಗಿಸುತ್ತವೆ.
2. ಎಂಪಿರಿಕಲ್ ನೆಲೆಯಲ್ಲಿ ನಿಂತು, ಯಥಾಸ್ಥಿತಿಯ ವಿವರಣೆಯನ್ನು ಮಾತ್ರ ಮಾಡುತ್ತದೆ.
3. ಮಾಹಿತಿ ಸಂಗ್ರಹಣೆಗೆ ಮಾತ್ರ ಪ್ರಾಧ್ಯಾನ್ಯತೆ ನೀಡಿದ್ದು, ಭವಿಷ್ಯದ ಆಡಳಿತದ ಕನ್ನಡದ ಬಳಕೆಯ ದಿಕ್ಸೂಚಿಯನ್ನು ನೀಡುವುದಿಲ್ಲ.

4. ಆಡಳಿತ ಭಾಷೆಯ ಸ್ವರೂಪ, ಆಡಳಿತ ಕನ್ನಡದ ಸವಾಲುಗಳು, ಜನಬದುಕುಗಳನ್ನು ಒಳಗೊಳ್ಳುವ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನಗಳನ್ನು ಮಾಡಿಲ್ಲ.
5. ಕನ್ನಡದ ಬಗೆಗಿನ ಅಭಿಮಾನದಿಂದ ವೈಭವೀಕೃತ ನೆಲೆಗೆ ಮಾತ್ರ ಸಾಗಿರುವುದನ್ನು ಕೆಲವು ಕೃತಿಗಳಲ್ಲಿ ಕಾಣಬಹುದು.

ಕನ್ನಡವು ಶೈಕ್ಷಣಿಕವಾಗಿ, ಆಡಳಿತಾತ್ಮಕವಾಗಿ ಬಳಕೆಯಾಗುತ್ತಿರುವ ನೆಲೆಗಳನ್ನು ಗಮನಿಸಿದಾಗ ಹಾಗೂ 2011 ರ ಜನಗಣತಿಯ ವರದಿಗಳನ್ನು ಅವಲೋಕಿಸಿದಾಗ ಬೆಚ್ಚಿಬೀಳಿಸುವ ಪರಿಸ್ಥಿತಿಯಂತಾಗಿದೆ. ಹಿಂದಿ ಭಾಷೆಯನ್ನು ಮಾತನಾಡುವವರ ಶೇಕಡಾವಾರು 43.2% ಆಗಿದ್ದರೆ, ಕನ್ನಡ ಭಾಷೆ ಮಾತನಾಡುವವರ ಶೇಕಡಾವಾರು 8.1% ಆಗಿದೆ. ತೆಲುಗು, ತಮಿಳುಗಳಿಗಿಂತ ಕನ್ನಡವು ಹೀನ ಪರಿಸ್ಥಿತಿಯಲ್ಲಿದೆ. ಕನ್ನಡ ಭಾಷೆಯನ್ನು Knowledge Bank ಆಗಿ ಬೆಳೆಸುವಲ್ಲಿ ವಿಫಲವಾಗಿದ್ದೇವೆ. ಕನ್ನಡವು ರಾಷ್ಟ್ರಮಟ್ಟದಲ್ಲಿ ದುರ್ಬಲವಾಗಿ ಕಾಣಿಸುತ್ತಿದೆ. ಕನ್ನಡಕ್ಕೆ ರಾಷ್ಟ್ರೀಯ ಅಸ್ತಿತ್ವ ಕಡಿಮೆಯಾಗುವ ಸಾಧ್ಯತೆ ಇದೆ. ಅಂತರರಾಷ್ಟ್ರೀಯ ಮಟ್ಟಕ್ಕೆ ಕನ್ನಡವನ್ನು ಇದರಿಂದ ಏರಿಸಲು ಅವಕಾಶವಿಲ್ಲ. ಉನ್ನತ ಶಿಕ್ಷಣದಲ್ಲಿ ಇಂದು ದೇಶ–ವಿದೇಶಗಳ ನಡುವೆ ಕೊಡುಕೊಳುಗೆ ನಡೆಯುತ್ತಿದೆ. ಯಾವುದೇ ದೇಶವು ಭಾರತದಲ್ಲಿ / ಕರ್ನಾಟಕದಲ್ಲಿ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲು 2005 ರ ಗ್ಯಾಟ್ ಒಪ್ಪಂದದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಆದರೆ ಕನ್ನಡದಲ್ಲಿ ಉನ್ನತ ಶಿಕ್ಷಣವನ್ನು ವ್ಯವಸ್ಥೆಗೊಳಿಸಲು ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಕೇಂದ್ರಗಳನ್ನು ತೆರೆಯಲು ಬೇಕಾದ ವ್ಯವಸ್ಥೆಗಳು ಇಲ್ಲ. ಪೂರಕವಾದ ಪಠ್ಯಗಳು ಇಲ್ಲ. ತಂತ್ರಜ್ಞಾನದ ಕೊರತೆಯೂ ಇದೆ. ಆದ್ದರಿಂದ ಕನ್ನಡಕ್ಕೆ ಸಂಬಂಧಿಸಿದಂತೆ ವಿದೇಶಿ, ವಿಶ್ವವಿದ್ಯಾನಿಲಯಗಳೊಂದಿಗೆ ಕೆಲಸ ಮಾಡುವ ಅವಕಾಶ ಇಲ್ಲದಂತಾಗಿದೆ. ಈ ಹಿನ್ನೆಲೆಯಲ್ಲಿ ನಾವು ಕನ್ನಡವನ್ನು ಸಜ್ಜುಗೊಳಿಸದೇ ಇದ್ದರೆ ಕನ್ನಡವು ಸೋಲುವ ಪರಿಸ್ಥಿತಿ ಉಂಟಾಗುತ್ತದೆ. ಈ ಸವಾಲನ್ನು ಮುಂದೆ ಸಿದ್ಧಾಂತೀಕರಿಸಲಾಗುವುದು.

ಅಧ್ಯಾಯ–3

ಆಡಳಿತ ಕನ್ನಡ ಬಳಕೆ: ತಾತ್ವಿಕ ನೋಟಗಳು

3.1: ಪ್ರಸ್ತಾವನೆ

3.2: ಚಾರಿತ್ರಿಕವಾಗಿ ಕನ್ನಡ–ಕರ್ನಾಟಕದಲ್ಲಿ ಆಡಳಿತದ ಸ್ವರೂಪ

3.4: ಇಂದಿನ ಆಡಳಿತ ಕನ್ನಡ

3.1: ಪ್ರಸ್ತಾವನೆ:

'ರಾಜಕೀಯವಾಗಿ ಪ್ರಸ್ತುತವಾದ ಸಂಗತಿ ಅಂದರೆ, ಈ ಕರ್ನಾಟಕ ಅನ್ನೋದು ಏಕೀಕರಣ ಆಗಿ ರಾಜ್ಯವಾಗಿ, ನಾಡಾಗಿ, ಆ ನಾಡಿನ ಭಾಷೆಯ ಕನ್ನಡವಾಗಿರುವುದು ಕೂಡ ಆಧುನಿಕ ಪ್ರಜಾಪ್ರಭುತ್ವದ ರಾಜಕೀಯದೊಳಗೆ ನಡೆದಿರುವ ಘಟನೆ.' ಆದರೆ ಈ ಘಟನೆಯ ಹಿಂದೆ ಒಂದು ಚರಿತ್ರೆಯೂ ಇದೆ. ಇದರ ಎಲ್ಲಾ ವಿವರಗಳಿಗೆ ಹೋಗುವ ಬದಲು ಈ ಅಧ್ಯಾದಲ್ಲಿ ಬಹು ಮುಖ್ಯವಾಗಿ ಆಡಳಿತ ವ್ಯವಸ್ಥೆಯು ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಬೆಳೆದು ಬಂದ ಬಗೆಯನ್ನು ಗಮನಿಸಲಾಗುತ್ತದೆ. ಅಂದರೆ, ಹಿಂದಿನ ಆಡಳಿತ ವ್ವವಸ್ಥೆ, ಮೊಗಲರ ಆಡಳಿತ ಹಾಗೂ ಬ್ರಿಟಿಷರ ಆಡಳಿತ ವ್ಯವಸ್ಥೆಯನ್ನು ಸ್ಥೂಲವಾಗಿ ಗಮನಿಸಿದ್ದಲ್ಲಿ ಕರ್ನಾಟಕದ ಇಂದಿನ ಆಡಳಿತ ವ್ಯವಸ್ಥೆಯನ್ನು ವಿಶ್ಲೇಷಿಸಲು ಸಾಧ್ಯವಾಗಬಹುದು ಎನಿಸುತ್ತದೆ.

3.2: ಚಾರಿತ್ರಿಕವಾಗಿ ಕನ್ನಡ-ಕರ್ನಾಟಕದಲ್ಲಿ ಆಡಳಿತದ ಸ್ವರೂಪ:

ಈ ಸ್ವರೂಪವನ್ನು ಕೆಳಗಿನ ಮೂರು ಭಾಗಗಳಲ್ಲಿ ನಿರೂಪಿಸಲಾಗಿದೆ:

1. **ಪ್ರಾಚೀನ ಭಾರತೀಯ ಆಡಳಿತ ವ್ಯವಸ್ಥೆಯು ಧರ್ಮ ಕೇಂದ್ರಿತವಾಗಿದ್ದದ್ದು.**[1]

ಈ ಸಂಗತಿಯ ಕುರಿತಂತೆ ಪ್ರೊಫೆಸರ್ ಕಿ.ರಂ ನಾಗರಾಜುರವರು ಹೀಗೆನ್ನುತ್ತಾರೆ, "ಕರ್ನಾಟಕದ ಸಂದರ್ಭದಲ್ಲಿನ (ಒಟ್ಟು ಭಾರತದ ಸಂದರ್ಭದಲ್ಲೂ ಕೂಡ) ರಾಜತ್ವವನ್ನು ವಿವರಿಸುವಾಗ ಧರ್ಮವನ್ನು ಬೇರ್ಪಡಿಸುವುದು ಸಾಧ್ಯವಿಲ್ಲ. ಮನುಷ್ಯ ಅಮೂರ್ತದಲ್ಲಿ ಇರುವವನಲ್ಲ. ಮನುಷ್ಯನು ತನ್ನ ವೈಯುಕ್ತಿಕ ಅನುಭೂತಿಯಿಂದ ಸಮಾಜದ ಇನ್ನಿತರ ವ್ಯಕ್ತಿಗಳೊಂದಿಗೆ ಕ್ರಿಯಾಶೀಲವಾದ ಸಾಮಾಜಿಕ ಸಂಬಂಧಗಳನ್ನು ಪಡೆದುಕೊಳ್ಳುತ್ತಾನೆ.

---

[1] ಸಾಂಸ್ಕೃತಿಕ ಚರಿತ್ರೆಯ ಪುನಾರಚನೆಯ ಸಂದರ್ಭದಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತಿವೆ. ಓಲೆಗರಿಗಳಿಗೂ ಶಾಸನಗಳಿಗೂ ನಡುವಣ ಕಂದರ, ರಕ್ಷಿಸಲಾಗಿರುವ ಭಂಡಾರಗಳು, ಆರ್ಕೀವ್ಸ್ ಮತ್ತು ವೈಯುಕ್ತಿಕ ಸಂಗ್ರಹಗಳಿಗೂ ಇರುವ ಕಂದರ ಅಪಾರವಾದದ್ದಾಗಿದೆ. ಎರಡು ಬೇರೆಯದೇ ಆದ ಪ್ರಪಂಚಗಳ ದೃಷ್ಟಿಕೋನ ಮತ್ತು ಎರಡು ಭಿನ್ನ ಶೈಲಿಗಳು ಚರಿತ್ರೆಯ ವಿವರಣೆಯಲ್ಲಿ ಏರ್ಪಟ್ಟಿವೆ. ಅದರಲ್ಲಿ ಒಂದು ಪ್ರಪಂಚ ಆಶ್ಚರ್ಯವನ್ನು ಹುಟ್ಟಿಸುವ, ಇಲ್ಲಿಲ್ಲದ- ದೂರದ ವಿವರವನ್ನು ಹೇಳುವ ಕಾರಣದಿಂದ ರೂಪುಗೊಂಡಿದೆ. ಧರ್ಮದ ಹತೋಟಿಗೆ ಒಳಗಾಗಿರುವ ಈ ವಿವರಣೆಗಳು ಮಾನವಿಕ ಸಂಬಂಧವನ್ನೇ ಸ್ಪಷ್ಟವಾಗಿ ವಿರೋಧಿಸುತ್ತಿವೆ. ಈ ಮಾತುಗಳನ್ನು ಪ್ರೊಫೆಸರ್ ಕಿ.ರಂ.ನಾಗರಾಜು ತಮ್ಮ ಲೇಖನ 'ರಾಜನಿಷ್ಟ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ' ದಲ್ಲಿ ಹೇಳಿರುವುದು. ಅಂದರೆ, ಬಿಡಿಬಿಡಿಯಾಗಿರುವ ಆಕರಗಳನ್ನು ಗಮನಿಸಿ ಚರಿತ್ರೆಯನ್ನು ಕಟ್ಟುವುದೆಂದರೆ ಅವರ ಪ್ರಕಾರ 'ವಚನಕಾರರು ಹೇಳುವಂತೆ **ಸುಣ್ಣದ ಕಲ್ಲ ಕಟ್ಟಿಕೊಂಡು ಮಡುವ ಹಾಯ್ದಂತೆ**'. ಅದೇ ಲೇಖನದಲ್ಲಿ ಅವರು ಮುಂದುವರೆದು ಹೇಳುವುದೇನೆಂದರೆ, 'ಪ್ರಾಚೀನ ಕರ್ನಾಟಕದ ಬುದ್ಧಿವಂತರು ನರಕದಲ್ಲಿ ನಿಂತು ಸ್ವರ್ಗವನ್ನು ಯೋಚಿಸಿದವರು... ಎಲ್ಲವೂ ಒಂದು ದೃಷ್ಟಿಯಲ್ಲಿ ಶುದ್ಧ ದೃಷ್ಟಿಯದು; ವಿಶ್ವದ ಚಿರಂತನ ನಿಯಮಗಳ ಬಗೆಗೆ ದೃಷ್ಟಿ ಇರುವ ಭಾಗಗಳೇ ಹೆಚ್ಚು. ವೈಯುಕ್ತಿಕವಾಗಿ ದಾಖಲೆಗಳನ್ನು ರಚಿಸಿಕೊಳ್ಳುವುದಕ್ಕೆ ಅಂದಿನ ಸಂದರ್ಭದಲ್ಲಿ ಅಂಗೀಕಾರವಿದ್ದಂತೆ ತೋರುವುದಿಲ್ಲ. ಶಾಸನಗಳು, ಕೂಟ-ಶಾಸನಗಳು, ಬಖೈರುಗಳು, ಅರ್ಥಶಾಸ್ತ್ರ, ಕಾಮಶಾಸ್ತ್ರ, ನ್ಯಾಯ-ಸಿದ್ಧಾಂತ ನೀತಿ, ಟೀಕು-ಟಿಪ್ಪಣಿಗಳು, ವಂಶಾವಳಿಗಳು ಅವು ಈಗಿರುವಂತೆಯೇ ನಿರ್ದಿಷ್ಟ ಉದ್ದೇಶವನ್ನು ಹೊಂದಿರುವ ದಾಖಲೆಗಳು. ಬಹುತೇಕ ದಾಖಲೆಗಳು ಜನ ಏನು ಮಾಡಬೇಕು ಎಂಬುದನ್ನು ನಿರ್ದೇಶಿಸುತ್ತವೆ. ರಾಜನ ಅಥವಾ ಶ್ರೀಮಂತನ ಅನುಗ್ರಹ ಮತ್ತು ದಯಪಾಲಿಸುವಿಕೆಯ ಚಿತ್ರವನ್ನು ಕಾಣುತ್ತಿದ್ದೇವೆಯೇ ಹೊರತು ಸಹಜವಾಗಿ ಜನ ಏನು ಮಾಡಿದರು ಎಂಬ ಚಿತ್ರವನ್ನು ಅಲ್ಲಿ ಕಾಣಲು ಸಾಧ್ಯವಿಲ್ಲ... ಇಂಥ ಸಂದರ್ಭದಲ್ಲಿ ವೈಜ್ಞಾನಿಕ ದೃಷ್ಟಿಯ ಚರಿತ್ರೆಯ ಪುನಾರಚನೆಯನ್ನು ಮಾಡುವುದು ಕೇವಲ ದೂರದ ಆಸೆ.

ಇದರಿಂದಾಗಿ ಸಾಮಾಜಿಕ ಸ್ವರೂಪಕ್ಕೆ ಒಂದು ನಿರ್ದಿಷ್ಟ ವೈಶಿಷ್ಟ್ಯವುಂಟಾಗುತ್ತದೆ. ಒಬ್ಬ ವ್ಯಕ್ತಿಯ ವೈಯುಕ್ತಿಕ ಅನುಭೂತಿಯು ಒಂದು ನಿರ್ದಿಷ್ಟ ಸಮಾಜದ ಒಂದು ಕಾಲದ ರಾಜಕೀಯ ಮತ್ತು ಧಾರ್ಮಿಕ ಸಂಬಂಧಗಳನ್ನು ಒಳಗೊಂಡೇ ರೂಪುಗೊಂಡದ್ದಾಗಿರುತ್ತವೆ. ಹೀಗಾಗಿ ರಾಜಕೀಯ ಮತ್ತು ಧಾರ್ಮಿಕ ಸಂಬಂಧಗಳು ಒಂದರೊಡನೆ ಮತ್ತೊಂದು ವಾಸ್ತವಿಕ ಸಂಬಂಧಗಳನ್ನು ಬೆಸೆದುಕೊಂಡಿರುವುದರಿಂದ ಹೊರತುಪಡಿಸಿ ನೋಡುವ ನೋಟದಿಂದ ವಸ್ತುಸ್ಥಿತಿಯನ್ನು ಕಾಣಲು ಸಾಧ್ಯವಾಗುವುದಿಲ್ಲ. ಹೀಗೆ ರೂಪುಗೊಂಡ ಪ್ರಭುತ್ವಗಳು ಧರ್ಮಪೀಠಗಳ ದಿಗ್ದರ್ಶನಕ್ಕೆ ಜೋತುಬಿದ್ದು ಪ್ರಪಂಚದ ಬಗೆಗಿನ ದೃಷ್ಟಿಯನ್ನು ತಿರುವು ಮುರುವು ಮಾಡಿ ತೋರುತ್ತವೆ. ಮನುಷ್ಯನ ಆಲೋಚನೆಯ ಮೇಲೆ ಧಾರ್ಮಿಕ ವಿಚಾರಗಳ ಅನಿಷ್ಟಕಾರಿ ಹೊಡೆತ ಬಿದ್ದಿದೆ. ಇದರಿಂದ ಸಮಾಜ ಜೀವನದಲ್ಲಿ ಭ್ರಾಮಕ ಕಲ್ಪನೆ, ಭೀತಿಯೇ ಮೊದಲಾದ ವಿಚಾರಗಳು ಬೆಳೆಯಿತು. ಪ್ರಭುತ್ವ ಮತ್ತು ಧರ್ಮಗಳು ಮೇಲುನೋಟಕ್ಕೆ ಬೇರೆ ಬೇರೆಯಾಗಿ ಕಂಡರೂ ಕೂಡ ಕ್ರಿಯಾವರ್ತನೆಯಲ್ಲಿ ಎರಡೂ ಒಂದೇ. ಧರ್ಮದ ವಿಮರ್ಶೆಯೆಂದರೆ ಅದರಲ್ಲಿನ ತತ್ತ್ವಾರ್ಥ ವ್ಯಾಖ್ಯಾನ ಎಂದು ನಂಬಲಾಗಿದೆ. ಆದರೆ ಅದೊಂದು ತಪ್ಪು ಕಲ್ಪನೆ ಮಾತ್ರವಲ್ಲ ಸಮಾಜವಿರೋಧಿ ಧೋರಣೆಯೂ ಆಗುತ್ತದೆ. ಸಾಮಾಜಿಕ ಸಂಬಂಧ ಮತ್ತು ಉತ್ಪಾದನೆಗೆ ಧರ್ಮ ಹೇಗೆ ಅಪಾಯ ಸ್ಥಿತಿಯನ್ನು ತಂದೊಡ್ಡಿದೆಯೆಂಬ ಅಂಶವೂ ಅಲ್ಲಿ ಮನವರಿಕೆಯಾಗುತ್ತದೆ. ಧರ್ಮದ ಮೂಲಕ ಹೋರಾಟ ಎಂಬುದು ಕರ್ನಾಟಕದ ಸಂದರ್ಭದಲ್ಲಿ- ವಾಸ್ತವತೆಗೆ ದೂರಾದ ಸಾಮಾಜಿಕ ವಿಪರ್ಯಾಸಗಳೊಂದಿಗೆ ನಡೆಸಿದ ಹೋರಾಟ ಎಂಬ ಅರ್ಥದಲ್ಲಿಯೇ ಗ್ರಹಿಸಬೇಕು. ಹತ್ತನೆಯ ಶತಮಾನದಲ್ಲಿ ಕಾಣಿಸಿಕೊಂಡ ಧರ್ಮಶ್ರದ್ಧೆಯ ಆಂತರ್ಯದಲ್ಲಿ ಜಾತಿ, ರಾಜಕಾರಣ ಬೆರೆತುಕೊಂಡಿದೆ. ಹನ್ನೆರಡನೆ ಶತಮಾನದವರಿಗೆ ರಾಜತ್ವ ಒಂದು ದೊಡ್ಡ ವಿರೋಧಿ ಶಕ್ತಿಯಾಗಿ ಕಂಡಿದೆ. ಇವುಗಳ ನಡುವಣ ಹರಡಿಕೊಂಡಿರುವ ಚಾರಿತ್ರಿಕ ಸಂಗತಿಗಳು ಕ್ರಮಬದ್ಧ ರಾಜಕೀಯ ಆಸ್ಫೋಟನೆಯನ್ನು ವಿವರಿಸಿಕೊಳ್ಳಲು ಸಹಾಯಕವಾಗಿವೆ.

"ರಾಜ ಪ್ರತ್ಯಕ್ಷ ದೇವತೆ ಎಂಬ ಪುರಾತನ ಕಲ್ಪನೆಯೇ ಇಂದಿಗೂ ಚಲಾವಣೆಯಲ್ಲಿದೆ. ಈ ನಂಬಿಕೆಯ ಮೇಲೆ ನಮ್ಮ ವಿಚಾರ-ವಿವೇಚನೆಗಳೂ ಕೂಡ ಬೆಳೆದಿವೆ. 'ರಾಜಕುಮಾರನಾಗಿ ಬಾಳು', ದೊರೆಮಗ, ರಾಜಕುಮಾರ, ರಾಜವೈಭವ ಮುಂತಾದ ಮಾತುಗಳನ್ನು ದಿನನಿತ್ಯದ ಮಾತಿನಲ್ಲಿ ಕಾಣುತ್ತಿದ್ದೇವೆ. ತಿನ್ನುವ ಅಕ್ಕಿಯ ಹೆಸರುಗಳು ರಾಜತ್ವದ ವಿಶೇಷಣಗಳನ್ನು ಹೇಳುತ್ತಿವೆ. ಇಂದ್ರಭೋಗ, ರಾಜಭೋಗ, ಬಂಗಾರಸಣ್ಣ, ರತ್ನಚೂಡಿ, ದಿಲ್ಲಿಭೋಗ, ಇತ್ಯಾದಿ; ದೇವಾಲಯಗಳ ಹೆಸರುಗಳ ಹೆಸರುಗಳು ರಾಜನ ಹೆಸರಿನಲ್ಲೇ ಅಂಕಿತವಾಗುತ್ತಿದ್ದುದು

ಮುಂತಾದವುಗಳನ್ನು ಇಲ್ಲಿ ಗಮನಿಸಬಹುದು. ತಮಗಿಲ್ಲದ ವೈಭವ ರಾಜನಿಗಿದೆ ಎಂದು ಎಲ್ಲರೂ ತಿಳಿದಿದ್ದರು. ಅವರನ್ನು ಸಮೃದ್ಧಿಗೆ ಸಂಕೇತವನ್ನಾಗಿ ಗುರುತಿಸಿಕೊಂಡದ್ದು ಏಕೆ? ಹೇಗೆ? ಈ ವಿಚಾರ ಬಹಳ ಮುಖ್ಯ. ಏಕೆಂದರೆ ಇಂಥ ಸಂಗತಿಗಳು ಈ ಹೊತ್ತಿನ ನಮ್ಮ ಕೆಲವು ನಿಲುವು-ತೀರ್ಮಾನಗಳ ಹಿಂದೆ ಇವೆ. ಇಂಥ ಸಂಶೋಧನ ತೀರ್ಮಾನಗಳು ರಾಜತ್ವವನ್ನು ಸಮೃದ್ಧ ಸ್ಥಿತಿಯ ಹಿನ್ನೆಲೆಯಲ್ಲಿ ಗುರುತಿಸಿಕೊಂಡಿವೆ. ಈ ಹೊತ್ತಿನ ಅನೇಕ ಪರಿಕಲ್ಪನೆಗಳನ್ನು ಮುಂದಿನ ಚರಿತ್ರೆಕಾರ ಹೇಗೆ ಕಂಡುಕೊಳ್ಳುತ್ತಾನೆ ಎಂಬುದರ ಮೂಲಕ ಇಂಥ ತೀರ್ಮಾನಗಳನ್ನು ನೋಡಬಹುದು. ಜನರು ಏನನ್ನು ನಂಬಿದ್ದರು ಎಂಬ ಮುಂದಿನ ಚರಿತ್ರಕಾರನ ಪ್ರಶ್ನೆಗೆ ನಿಜವಾದ ಉತ್ತರ ಸಿಕ್ಕುವಂತಿರಬೇಕೆಂಬುದೇ ಇಲ್ಲಿನ ಕಳಕಳಿ. ರಾಜತ್ವವನ್ನು ಸಮೃದ್ಧ ಸ್ಥಿತಿಯ ದೃಷ್ಟಿಯಿಂದ ಕಲ್ಪಿಸಿಕೊಂಡು ವಿವರಿಸಿವುದು ಒಂದು ಯಥಾಸ್ಥಿತಿ ಆಲೋಚನೆಗೆ ಪೂರಕವಾದದ್ದಾಗುತ್ತದೆ. ರಾಜತ್ವವನ್ನು ಕುರಿತ ಆಧ್ಯಾತ್ಮವಾದಿ ವಿವರಣೆ ಆ ಹೊತ್ತಿನ ವಿವಿಧ ಅಗತ್ಯಗಳಿಗೆ ತಕ್ಕಂತೆ ರೂಪುಗೊಂಡಿರುವುದಾಗಿದೆ. ರಾಜ್ಯವು ದೇವತೆಗಳಿಂದ ಮತ್ತು ಬಲ್ಲವರಿಂದ ಆಳಲ್ಪಡುತ್ತಿದೆ. ಏಕೆಂದರೆ ಪುರೋಹಿತರು ಮತ್ತು ಬಲ್ಲವರು ಇಡೀ ಜಗತ್ತಿನ ಚಲನೆಯ ಸ್ವರೂಪವನ್ನು ಬಲ್ಲವರೆಂದು ತಿಳಿಯಲಾಗಿತ್ತು. ಮಾರುಕಟ್ಟೆಯಲ್ಲಿ ದೊರಕುವ ವಸ್ತುವೇ ಮ್ಯಾಜಿಕ್ ಸಂದರ್ಭದಲ್ಲಿ ಮತ್ತೆ ಕಾಣುವಂತೆ ರಾಜನು ಪುರೋಹಿತರ ಮ್ಯಾಜಿಕ್ಕಿನ ವಾಹಕನಾಗಿದ್ದ. ಹೀಗೆಂದಮಾತ್ರಕ್ಕೆ ರಾಜನು ಪುರೋಹಿತನಿಗೆ ಅಪರಿಮಿತ ಅಧಿಕಾರವನ್ನು ಕೊಟ್ಟಿದ್ದನೆಂದು ಅರ್ಥವಲ್ಲ. ವ್ಯವಸ್ಥಿತ ಜೀವನ, ಜಗತ್ತಿನ ಋತುಧರ್ಮ, ಎಲ್ಲ ಜೀವಿಗಳೂ 'ಧರ್ಮ'ವನ್ನು ಅನುಸರಿಸುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ತಮ್ಮ 'ದಿವ್ಯದೃಷ್ಟಿ'ಯ ಮೂಲಕ ಗಮನಿಸುವುದೇ ದೇವರ (ಅವನ ಪ್ರತಿನಿಧಿಗಳಾದ ಪುರೋಹಿತರ) ಕೆಲಸವಾಗಿತ್ತು. ರಾಜತ್ವ ನೆಲೆಗೊಳ್ಳಲು ಅಗತ್ಯವಾದ ನೈತಿಕ ಕರ್ತವ್ಯದಲ್ಲಿ ಮಗ್ನತೆ ಮತ್ತು ತಮ್ಮ ತಮ್ಮ ಸ್ಥಾನಗಳಲ್ಲಿ ವಿಚಲಿತಗೊಳ್ಳದಿರುವಂತೆ ಮಾಡಲು ಪುರೋಹಿತವರ್ಗದ ಬುದ್ದಿವಂತಿಕೆ ಕಾರಣವಾಯಿತು. ಹೀಗೆ ಧರ್ಮದಿಂದ ನಿಯಂತ್ರಿತವಾದ ರಾಜ್ಯವನ್ನು ರಕ್ಷಿಸುವುದು ರಾಜನ ಕೆಲಸವಾಗಿತ್ತು. ಜಾತಿಗಳು ತಮತಮಗೆ ನಿಯಮಿತವಾಗಿದ್ದ ವೃತ್ತಿಗಳಲ್ಲಿ ತೊಡಗಿ ತಮ್ಮ ತಮ್ಮ ಸಂಪ್ರದಾಯವನ್ನು ಅನುಸರಿಸುವುದರ ಮಹತ್ವವನ್ನು ಎತ್ತಿಹಿಡಿಯಲಾಗಿತ್ತು. ಸಾಮ, ದಾನ, ಭೇದ, ಮತ್ತು ದಂಡ ಇವುಗಳನ್ನು ಅಧಿಕಾರವನ್ನು ಭದ್ರವಾಗಿ ಹಿಡಿದುಕೊಳ್ಳಲು ಸಹಾಯಕವಾಗುವಂತೆ ಜನರ ಮೇಲೆ ಬಳಸಲಾಗುತ್ತಿತ್ತು. ತಮ್ಮ ಅಧಿಕಾರದ ಭದ್ರತೆಗೆ ಭಂಗ ಬಂದರೆ ಅದಕ್ಕೆ ಕಾರಣರಾದವರನ್ನು ದಂಡಿಸುವ ಪದ್ಧತಿ ಮುಖ್ಯವಾದದ್ದಾಗಿತ್ತು. ಸತ್ಯ-ಧರ್ಮ-ನ್ಯಾಯಗಳ ಮಾತು ರಾಜನ ಪರವಾದ ಮಾತುಗಳಾಗಿದ್ದವೇ ಹೊರತು, ಅದರ ಯಥಾರ್ಥ ವಿವೇಚನೆ ಮುಖ್ಯವಾಗಿರಲಿಲ್ಲ.

"ರಾಜತ್ವವನ್ನು ಎಲ್ಲ ರೀತಿಗಳಿಂದಲೂ ಒಪ್ಪಿ ಹೊರಟಿರುವ ವಿವರಣೆಗಳ ಹಿಂದೆ ಇರುವ ಮುಖ್ಯ ನಿಲುವುಗಳನ್ನು ಇಲ್ಲಿ ಗಮನಿಸಬೇಕು. ಪ್ರಜೆಗಳು ರಾಜತ್ವವನ್ನು ಯಾವ ಪ್ರಶ್ನೆಯನ್ನೂ ಮಾಡದೆ ಒಪ್ಪಿಕೊಂಡಿದ್ದರು ಮತ್ತು ರಾಜನಲ್ಲಿ ವಿಶೇಷವಾದ ನಂಬಿಕೆಯನ್ನು ತೋರುತ್ತಿದ್ದರು ಎಂಬ ಒಟ್ಟಾರೆ ಮಾತು ಪ್ರಜೆ ಮತ್ತು ರಾಜ ಇವರುಗಳ ಸಂಬಂಧ ದೃಢ ವಿಶ್ವಾಸಗಳ, ನಂಬಿಕೆಗಳ ಆಧಾರದ ಮೇಲೆ ನೆಲೆಗೊಂಡಿತ್ತೆಂದು ರಾಜತ್ವದ ವಿಶ್ಲೇಷಕರು ಮೇಲಿಂದ ಮೇಲೆ ಹೇಳುತ್ತಲೇ ಇದ್ದಾರೆ. 'ರಾಜಾ ಕಾಲಸ್ಯ ಕಾರಣಂ', 'ಯಥಾ ರಾಜಾ ತಥಾ ಪ್ರಜಾ' ಮುಂತಾದ ಹೇಳಿಕೆಗಳ ಮೂಲಕ ರಾಜತ್ವದ ಸಂಸ್ಥೆಯನ್ನೇ ಸಮರ್ಥಿಸುತ್ತಾ ಬಂದಿರುವ ವಿವರಣೆಗಳು ಇಲ್ಲದಿಲ್ಲ. 'ರಾಜ್ಯದಲ್ಲಿ ಅರಾಜಕತೆ ಏರ್ಪಟ್ಟ ಸಂದರ್ಭದಲ್ಲಿ ಅದರ ಉಪಟಳಗಳಿಂದ ತಪ್ಪಿಸಿಕೊಳ್ಳಲು ಜನರು ಇಚ್ಚಿಸಿದುದರ ಫಲವಾಗಿ ರಾಜಪದವಿಯ ಉದಯವಾಯಿತು' ಎಂದು ಕೌಟಿಲ್ಯನು ಹೇಳುತ್ತಾನೆ. ಆದರೆ ರಾಜತ್ವದ ಬಗೆಗೆ ಕೌಟಿಲ್ಯನ ಈ ಮಾತು ಎಷ್ಟರ ಮಟ್ಟಿಗೆ ವಿಶ್ವಸನೀಯ ಎಂಬ ಪ್ರಶ್ನೆ ಮುಂದಾಗುತ್ತದೆ. ಏಕೆಂದರೆ, ರಾಜತ್ವವು ಅದಕ್ಕಿಂತ ಹಿಂದೆ ಪ್ರಚಲಿತವಾಗಿದ್ದ ಜೀತಪದ್ಧತಿಯ ಮುಂದುವರೆದ ರೂಪವೇ ಹೊರತು ಪ್ರಜಾಸಂರಕ್ಷಣೆಯ ಕಾರಣದಿಂದ ಹುಟ್ಟಿದುವೆಂಬುದಕ್ಕೆ ಸಮರ್ಥವಾದ ಚಾರಿತ್ರಿಕ ಕಾರಣ ಯಾವುದೂ ಇಲ್ಲ. ಮನುವೇ ಮೊದಲಾದವರು ರಾಜನನ್ನು 'ದೇವತೆ'ಯೆಂದು ನಿರ್ದೇಶಿಸಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಜನರು ರಾಜನಲ್ಲಿ ಅಧಿಕಾರವನ್ನು ಸ್ಥಾಪಿಸಿದವರೆಂಬ ಮಾತಿಗೆ ಕೌಟಿಲ್ಯ ಮನು ಮೊದಲಾದವರಲ್ಲಿ ಯಾವ ಪುರಾವೆಯೂ ದೊರೆಯುವುದಿಲ್ಲ. ದೈವತ್ವದ ನೆಲೆಗಳನ್ನು ಪ್ರತಿಪಾದಿಸಿ ಜಕನರಿಂದ ಅಧಿಕಾರವನ್ನು ಸ್ವಘೋಷಿತವಾಗಿ ಕಸಿದುಕೊಂಡ ರಾಜತ್ವು ಜನತೆಗೆ ತಮ್ಮ ಶಕ್ತಿಯ ಮೂಲಕ ಹೊಸ ವ್ಯವಸ್ಥೆಯನ್ನು ಪಡೆದುಕೊಳ್ಳಲು ಯಾವ ಅವಕಾಶಗಳನ್ನೂ ಕೊಡಲಿಲ್ಲ. ದೈವತ್ವದ ನೆಲೆಗಳನ್ನು ಪ್ರತಿಪಾದಿಸಿ ಜನರಿಂದ ಅಧಿಕಾರವನ್ನು ಸ್ವಘೋಷಿತವಾಗಿ ಕಸಿದುಕೊಂಡ ರಾಜತ್ವವು ಜನತೆಗೆ ತಮ್ಮ ಶಕ್ತಿಯ ಮೂಲಕ ಹೊಸ ವ್ಯವಸ್ಥೆಯನ್ನು ಪಡೆದುಕೊಳ್ಳಲು ಯಾವ ಅವಕಾಶಗಳನ್ನೂ ನೀಡಲಿಲ್ಲ. ದೈವತ್ವದ ಹೆಸರಿನಲ್ಲಿ ಆಶ್ರಯವನ್ನು ಪಡೆದುಕೊಂಡ ರಾಜತ್ವದ ಅಧಿಕಾರವನ್ನು ನಿಯಂತ್ರಿಸಲು ಧರ್ಮದ ಪಟ್ಟಭದ್ರ ಶಕ್ತಿಗಳು ನಿರಂತರವಾಗಿ ಕ್ರಿಯಾಶೀಲವಾಗಿದ್ದ ವಿಚಾರ ಸ್ಪಷ್ಟವಾಗಿಯೇ ಇದೆ. ಮೊದಲೇ ಅನೇಕ ವಿರೋಧಾಭಾಸಗಳನ್ನು ಹೊಂದಿದ್ದ ರಾಜತ್ವ ಧರ್ಮದ ಕೃತಕ ಶಕ್ತಿಗಳ ಕೈಯಲ್ಲಿ ಸಿಲುಕಿ ತನ್ನ ಆಂತರಿಕ ವಿರೋಧಾಭಾಸಗಳನ್ನು ಹೆಚ್ಚುಮಾಡಿಕೊಂಡಿತು. ರಾಜ್ಯದ ನಿರ್ವಹಣೆಯಲ್ಲಿ ರಾಜನಿಗೂ ಅವನ ಕೈಕೆಳಗಿನ ಅಧಿಕಾರವರ್ಗಕ್ಕೂ ಆಗಿಂದಾಗ್ಗೆ ಉಂಟಾಗುತ್ತಿದ್ದ ಮನಸ್ತಾಪಗಳು

ಮತ್ತು ಅದನ್ನು ರಿಪೇರಿಗೊಳಿಸುವ ಪ್ರಯತ್ನಗಳು ನಡೆಯುತ್ತಲೇ ಇದ್ದವು. ಈ ಸಂಬಂಧದ ವಿವರಣೆಗಳು ನಮ್ಮ ಸಾಹಿತ್ಯದ ಕೃತಿಗಳಲ್ಲಿ ಕಾಣಬಹುದಾಗಿದೆ."

ಮೇಲಿನ ಮಾತುಗಳು ಮೂರು ಅರಿಮೆಗಳನ್ನು ನಮ್ಮೆದುರು ಇಡುತ್ತವೆ: ರಾಜಸತ್ತೆ, ಧರ್ಮ ಸತ್ತೆ ಮತ್ತು ಜನಸತ್ತೆ. ಈ ಮೂರರಲ್ಲಿ ಯಾವುದೇ ಎರಡು ಸತ್ತೆಗಳು ಒಂದಾದಲ್ಲಿ ಅಲ್ಲೊಂದು ರೀತಿಯ ಆಳ್ವಿಕೆ, ಆಡಳಿತ ರಚನೆಯಾಗುತ್ತವೆ ಮತ್ತು ಅಲ್ಲಿ ಪ್ರಭುತ್ವ ಎನ್ನುವುದು ಸಾಕಾರಗೊಳ್ಳುತ್ತದೆ. ನಾವಿಂದು ಜನಸತ್ತೆ ಅಥವಾ ಪ್ರಜಾಸತ್ತೆಯಲ್ಲಿ ಜೀವಿಸುತ್ತಿದ್ದೇವೆ. ಆದರೆ ಅಲ್ಲಿ ದಿಟವಾಗಿಯೂ ಪ್ರಜಾಸತ್ತೆ ಇದೆಯೇ ಎನ್ನುವಾಗ 'ರಾಜಸತ್ತೆ'ಯೇ **ಪ್ರಭುತ್ವ**ವಾಗಿ ಜನಸತ್ತೆಯನ್ನು ದಿಕ್ಕುತಪ್ಪಿಸಿದೆ. ಇದರ ಕುರಿತಂತೆ ಮತ್ತಷ್ಟು ಚರ್ಚೆಯನ್ನು ನಂತರದಲ್ಲಿ ಮಾಡಬಹುದು.

ಹೀಗಿರುವಾಗ, ಕನ್ನಡ ಆಡಳಿತ ಪರಿಸರದಲ್ಲಿ ಪ್ರಾಕೃತ, ಸಂಸ್ಕೃತ ಹಾಗೂ ಪಾರಸಿ ಮುಂತಾದ ನುಡಿಗಳಿಂದಲೂ ಕನ್ನಡ ಆಡಳಿತವು ಪ್ರಭಾವಿತವಾಗಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ ಈ ಕೆಳಗಿನ ಪದಗಳು ನಮಗೆ ದೊರೆಯುತ್ತವೆ:

ಅಕ್ಕಾ ಉಡು, ಒಮ್ಮೆಲ್ಲೋ (ಕ. ಉಮ್ಮಳ), ಉಲ್ಲೀ (ಚುಲ್ಲೀ–ಉಲ್ಲೀ), ಕನ್ನಡ, ಒಲೆನೋಡು, ಉರೋ (ಕ.ಊರು) ಇತ್ಯಾದಿ. ವಾಸ್ತವಿಕವಾಗಿ ಪ್ರಾಕೃತ ಭಾಷೆಯನ್ನು ನೋಡಿದಾಗ ಆಗಿನ ಸಂದರ್ಭಗಳಲ್ಲಿ ರಾಜಭಾಷೆಯಾಗಿದ್ದರೂ ಸಹ, ಕನ್ನಡ ಭಾಷೆಗೆ ಅದು ಅಡ್ಡಿಯಾಗದೆ, ಬೆಳೆಯಲು ಅನುವು ಮಾಡಿಕೊಟ್ಟಿತು ಎನ್ನಬಹುದು.[2]

ಹಾಗೆಯೇ, ಸಂಸ್ಕೃತದಿಂದಲೂ ಅನೇಕ ಆಡಳಿತ ಪದಗಳು ಕನ್ನಡದಲ್ಲೂ ಕಣೀಸಿಕೊಂಡಿವೆ: **ಉದಾಹರಣೆಗೆ:** ಋಣದಾನ, ಸಂಧಿಕರ್ಮ, ಸೂತ್ರಾದ್ಯಕ್ಷ, ಶುಲ್ಕಾಧ್ಯಕ್ಷ,

---

[2] ಕನ್ನಡ ಮತ್ತು ಪ್ರಾಕೃತ ಭಾಷೆಗಳು ಕ್ರಿಸ್ತ ಪೂರ್ವದಿಂದ ಸಂಬಂಧವುಳ್ಳದೆಂದು ಹೇಳಲು ನಮ್ಮಲ್ಲಿ ಪುರಾವೆಗಳಿವೆ. ಅಶೋಕನ ಬ್ರಹ್ಮಗಿರಿ ಶಾಸನ ಪ್ರಾಕೃತ ಬಾಷೆಯ ಶಾಸನವಾಗಿದೆ. ಇದರಲ್ಲಿಬಳಸಲಾದ ಇಸಿಲಾ ಎಂದು ಪದವು ಕನ್ನಡದ್ದಾಗಿದೆ ಎಂದು ಈಗಾಗಲೇ ವಿದ್ವಾಂಸರಲ್ಲಿ ಒಮ್ಮತವಿದೆ. ಶಾತವಾಹನರ ಕಾಲದಲ್ಲಿ ಪ್ರಾಕೃತ ರಾಜ್ಯಭಾಷೆಯಾಗಿತ್ತೆಂದು ಇತಿಹಾಸದಿಂದ ತಿಳಿದುಬರುತ್ತದೆ. ಕನ್ನಡ ಮಾತೃಭಾಷೆಯುಳ್ಳ ನೇಮಿಚಂದ್ರ, ದೇವಸೇನ ಪ್ರಾಕೃತ ಗ್ರಂಥಗಳನ್ನು ರಚಿಸಿದ್ದಾರೆಂದು ರಾಜಪ್ಪ ದಳವಾಯಿ ಇವರ ಸಂಪಾದನೆಗೊಂಡ ಕನ್ನಡ ಸಾಹಿತ್ಯ ಕೋಶ ಕೃತಿಯ ಪುಟಸಂ: 282ರಲ್ಲಿ ಉಲ್ಲೇಖಿಸಲಾಗಿದೆ. ಸುಪ್ರಸಿದ್ಧ ವೈಯಾಕರಣಿಕಯಾದ ತ್ರಿವಿಕ್ರಮನು ಸಹಕನ್ನಡಿಗನು. ಈ ಕಾರಣಗಳಿಂದ ಕನ್ನಡದ ಜೊತೆಗೆ ಪ್ರಾಕೃತ ಭಾಷೆಯ ಪದಗಳು ಸೇರಿಕೊಂಡಿದೆ ಎಂದಿದ್ದಾರೆ. ವಿದ್ವಾಂಸರಾದ ಆ.ನೆ.ಉಪಾಧ್ಯೆ ಅವರು ತಮ್ಮ ಒಂದು ಲೇಖನದಲ್ಲಿ ಪ್ರಾಕೃತದಲ್ಲಿರುವ ಕನ್ನಡ ಶಬ್ದಗಳ ಬಗ್ಗೆ ವಿವೇಚಿಸಿದ್ದಾರೆ. ಇವರು ಕನ್ನಡದಿಂದಲೇ ಪ್ರಾಕೃತ ಶಬ್ದಗಳನ್ನು ಸೂಚಿಸಿದ್ದಾರೆ. ವಿವರಗಳಿಗೆ ನೋಡಿ: ಸುರೇಂದ್ರ ಸ್ವಾಮಿ, **ಆಡಳಿತದಲ್ಲಿ ಕನ್ನಡ ಬಳಕೆ: ಸಮಸ್ಯೆಗಳು ಮತ್ತು ಸವಾಲುಗಳು**, ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್‌ಡಿ ಸಂಶೋಧನೆ, ಪು.23 (ಅಪ್ರಕಟಿತ)

ಸುವರ್ಣಾಧ್ಯಕ್ಷ, ನಿಂದಾಪ್ರೇರಣೆ, ಧರ್ಮ ಇತ್ಯಾದಿ ಪದಗಳು.[3] ಹೀಗೆ, ಕನ್ನಡದ ಬರಹ ಮತ್ತು ಸಾಹಿತ್ಯದ ಮೇಲೆ ಸಹಜವಾಗಿಯೇ ಸಂಸ್ಕೃತದ ಪ್ರಭಾವ ಆಗಿರುವುದು ಬಳಕೆಯಲ್ಲಿನ ಭಾಷೆ ಮತ್ತು ದೊರೆತಿರುವ ಶಾಸನ ಮತ್ತು ಲಭ್ಯವಿರುವ ಕೃತಿಗಳಿಂದ ಗೋಚರಿಸುತ್ತವೆ. ಸಂಸ್ಕೃತದ ಸ್ಮೃತಿ, ಸೂತ್ರ, ಧರ್ಮಶಾಸ್ತ್ರ, ಕೌಟಿಲ್ಯನ ಅರ್ಥಶಾಸ್ತ್ರಗಳಲ್ಲಿ ಕಂಡುಬರುವ ಅನೇಕ ಶಬ್ದಗಳನ್ನು ಕನ್ನಡ ಆಡಳಿತ ಭಾಷೆಯಲ್ಲಿ ಅಧಿಕಾರಸ್ಥರ ಹುದ್ದೆ ಮತ್ತು ವಿಶೇಷ ಕಾರ್ಯಗಳನ್ನು ಸೂಚಿಸವುದರಲ್ಲಿ ಕನ್ನಡ ಶಬ್ದಗಳಂತೆಯೇ ಬಳಸಲಾಗಿವೆ.

2. **ಮೊಗಲರ ಆಡಳಿತವು ಕೂಡಾ ಘರಿತ್ತು ಮತ್ತು ಖುರಾನಿ ತತ್ವಗಳಿಂದ** ಪ್ರಭಾವಿತವಾಗಿದ್ದವು.

ಮಧ್ಯ ಏಶಿಯಾದಿಂದ ಬಂದ ಮೊಗಲರು ಅಲ್ಲಿನ ಆಡಳಿತ ವ್ಯವಸ್ಥೆಯನ್ನು ಭಾರತದ ಪರಿಸ್ಥಿತಿಗೆ ತಕ್ಕಂತೆ ಅಳವಡಿಸಿಕೊಂಡರು. ಇವರ ಆಡಳಿತವು ಧಾರ್ಮಿಕ ಹಾಗೂ ರಾಜಕೀಯಾಂಸಗಳ ಸಂಗತಿವಾಗಿದ್ದಿತು. ಅಕ್ಬರನ ಕಾಲದಲ್ಲಿ ಮಾತ್ರ ಇದು ಬದಲಾವಣೆಯನ್ನು ಕಂಡಿತು. ರಾಜಪ್ರಭುತ್ವದ ತತ್ವವನ್ನು ಕೈಬಿಟ್ಟು, ದೊರೆಯು ಎಲ್ಲ ಪ್ರಜೆಗಳನ್ನು ಸಮದೃಷ್ಟಿಯಿಂದ ಕಾಣಬೇಕು ಎಂಬ ದೃಷ್ಟಿಕೋನವನ್ನು ಬೆಳೆಸಿಕೊಂಡಿದ್ದ.

ಮೊಗಲರ ಕಾಲದಲ್ಲಿ ಲಿಖಿತ ದಾಖಲೆಗಳ ಸಂಖ್ಯೆ ಅಧಿಕವಾಗಿತ್ತು. ಮೊಗಲರ ಸರಕಾರವನ್ನು ಕಾಗದಪತ್ರಗಳ ಸರ್ಕಾರ (ಕಾಗಜೀರಾಜ್) ಎಂದು ಕರೆಯಲಾಗುತ್ತಿತ್ತು. ಪರ್ಶಿಯನ್ ಭಾಷೆ ಅವರ ಆಡಳಿತ ಭಾಷೆಯಾಗಿತ್ತು. ನ್ಯಾಯ ವಿತರಣೆ ಹಾಗೂ ಶಾಂತಿ ಪರಿಪಾಲನೆ ಆಧುನಿಕ ರಾಜ್ಯದ ಅವಕಾಶ ಕಾರ್ಯಗಳೆಂದು ಮೊಗಲರು ಭಾವಿಸಿದ್ದರು. ಆದ್ದರಿಂದ ಇದನ್ನು ಸ್ಥಳೀಯ ಆಡಳಿತಕ್ಕೆ ವಹಿಸಿಕೊಟ್ಟಿದ್ದರು.

ಮೊಗಲರ ನೌಕರಶಾಹಿಯು 'ಮನ್ಸಬಾರಿ' ಪದ್ಧತಿಯನ್ನು ಅವಲಂಬಿಸಿದ್ದಿತು. ಪರ್ಶಿಯದಲ್ಲಿನ ಈ ಪದ್ಧತಿಯನ್ನು ಇಲ್ಲಿ ಅಳವಡಿಸಿಕೊಂಡರು. ಮೊಗಲರ ಕಾಲದಲ್ಲಿ ಭೂಕಂದಾಯವು ಪ್ರಮುಖ ಆದಾಯದ ಮೂಲವಾಗಿದ್ದಿತು. ಬೇಸಾಯಕ್ಕೆ ಒಳಪಟ್ಟಿದ್ದ ಎಲ್ಲಾ ಜಮೀನುಗಳನ್ನು ಸರ್ವೆ ಮಾಡಲಾಗಿತ್ತು. ಭೂಸಾಗುವಳಿಯ ಕಾಲಾವಧಿ ಹಾಗೂ ಫಲವತ್ತತೆಯನ್ನು ಆಧರಿಸಿ ಜಮೀನುಗಳನ್ನು ನಾಲ್ಕು ಪ್ರಕಾರಗಳಾಗಿ ವಿಂಗಡಿಸಿ, ತೆರಿಗೆ ವಿಧಿಸಲಾಗುತ್ತಿತ್ತು. ಧಾನ್ಯರೂಪದ ಕಂದಾಯವನ್ನು ಹಣದ ರೂಪಕ್ಕೆ ಪರಿವರ್ತಿಸಿದರು. ಭೂಕಂದಾಯ ನಿರ್ಣಯ ಮತ್ತು ಭೂತೆರಿಗೆ ಸಲ್ಲಿಕೆ ಇವುಗಳ ವಿಷಯದಲ್ಲಿ ಸರಕಾರ ಮತ್ತು

---

[3] ಅದೇ ನೋಡಿ: ಪು.24

ರೈತರ ನಡುವೆ ನೇರ ಸಂಪರ್ಕವಿತ್ತು. ಇದನ್ನು 'ರೈತವಾರಿ ಪದ್ದತಿ' ಎಂದು ಕರೆಯಲಾಗಿದೆ. ಪ್ರತಿಯೊಬ್ಬ ರೈತನಿಗೆ ಪಟ್ಟಾ (ಹಕ್ಕುಪತ್ರವನ್ನು) ಕೊಡಲಾಗಿತ್ತು.

ಮೊಗಲ್ ಸರಕಾರದ ಚಟುವಟಿಕೆಗಳು ಕೇವಲ ಜನತೆಯ ರಕ್ಷಣೆ ಮತ್ತು ತೆರಿಗೆ ಸಂಗ್ರಹ ಕಾರ್ಯಗಳಿಗೆ ಸೀಮಿತವಾಗಿರದೆ ಕೃಷಿ, ವ್ಯಾಪಾರ ವಾಣಿಜ್ಯ, ಕೈಗಾರಿಕೆ, ಆಸ್ಪತ್ರೆ, ಶಿಕ್ಷಣ ಕ್ಷೇತ್ರಗಳಿಗೂ ಸಂಬಂಧಿಸಿದ್ದವು. ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದ ಸರಕಾರಿ ಪತ್ರ ವ್ಯವಹಾರ ಮೊಗಲ್ ಆಡಳಿತದ ವೈಶಿಷ್ಟ್ಯವಾಗಿತ್ತು. ಆಡಳಿತದ ನಾಗರೀಕ ಸೇವಾ ವರ್ಗವನ್ನು ಮಿಲಿಟರಿ ತಳಹದಿಯ ಮೇಲೆ ಸಂಘಟಿತಲಾಗಿತ್ತು.

ಈ ಸಂದರ್ಭದಲ್ಲಿ, ಅರಬ್ಬಿ, ಪರ್ಶಿಯನ್, ಉರ್ದು, ಪಾರಸಿ ಭಾಷೆಗಳಿಂದಲೂ ಕನ್ನಡ ಆಡಳಿತದಲ್ಲಿ ಪದಗಳನ್ನು ಸ್ವೀಕರಿಸಲಾಗಿದ್ದು ಅವು ಇಂದು ಕನ್ನಡದ್ದೇ ಎನ್ನುವಂತಹ ಚಹರೆಗಗಳನ್ನು ಪಡೆದುಕೊಂಡಿವೆ. ಉದಾಹರಣೆಗೆ ಈ ಕೆಳಗಿನವುಗಳನ್ನು ಗಮನಿಸಬಹುದು: ಜಮೀನು, ರಸ್ತೆ, ಸಿಬ್ಬಂದಿ, ಸಿಪಾಯಿ, ಸರಬರಾಜು, ಬಂದೋಬಸ್ತು. ಆಸಾಮಿ, ಖಜಾನೆ, ಕಾಯ್ದೆ, ಇಲಾಖೆ, ಜಪ್ತಿ, ವಸೂಲು ಮಾಮೂಲು, ಪಾತ್ಯಾವು (ಬಾದಷ) ವಜೀರ, ಸಲಾಮು, ಪೌಜು, ಸರತ್ತಾಣ (ಸುಲ್ತಾನ), ದರಖಾಸ್ತು, ರುಜು, ಮೊಹರು, ದಸ್ತಾವೇಜು, ಮೊಕದ್ದಮೆ, ಇನಾಮು, ಅಸಲು, ನಗದು, ಬಂದೋಬಸ್ತು, ರುಸಂ, ಖಾಯಂ, ಮೊಲ್ಲುಜಾರಿ, ದರಖಾಸ್ತು, ಮಹಜರು, ಪಂಚನಾಮ, ಪರಾರು, ಹಾರೆಮ್, ಹುಕುಂ, ಮೊಕದ್ದಮೆ, ವಜಾ, ದಸ್ತಿಗೀರು, ಬೇಜಿಗಾರು, ಜಮಾಬಂದಿ, ದಸ್ತಾಗಿರು, ಹಾಜರು, ಇರಸಾಲು, ತರಿ, ತಕರಾರು, ತ:ಖ್ತೆ, ಅಹವಾಲು, ಅಮೀರ, ಇಲಾಖೆ, ಖರ್ಚು, ಕಬೂಲ, ಕಿಮ್ಮತ್, ಖೈದಿ, ಖಾಲಿ, ಜಮಾ, ಜಮೀನು, ತಹಶೀಲ್ದಾರ್, ತಾರೀಖು, ತಾಲೂಕು, ದವಾಲತು, ಪರಾರಿ, ಫಸಲು, ಮುನ್ನ, ವಹಿ, ಸಾಬೀತು, ರದ್ದು, ವಕಾಲತು, ವಕೀಲ, ವಗೈರ, ವಜಾ, ಷರತ್ತು, ಷರಾ, ಮಂಜೂರು, ಸಹಿ, ಹಕ್ಕು, ಹವಾ, ಹೆಕ್ ಮತ್ತು ಅಬ್ಕಾರಿ, ಸಬೂರು ಇತ್ಯಾದಿ ಪದಗಳನ್ನು ಇಂದಿಗೂ ಕನ್ನಡವೇ ಎಂಬಂತೆ ಬಳಕೆಮಾಡಲಾಗುತ್ತಿದೆ.

3. ಇನ್ನೂ **ಬ್ರಿಟಿಷರ ಕಾಲದ ಆಡಳಿತ ವ್ಯವಸ್ಥೆಯು** ಕನ್ನಡ ಆಡಳಿತ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಪಲ್ಲಟಗೊಳಿಸಿದ್ದನ್ನು ನೋಡಬಹುದಾಗಿದೆ. ಸಚಿವಾಲಯದ ವ್ಯವಸ್ಥೆ, ಅಖಿಲಭಾರತ ಸೇವೆಗಳು, ನೇಮಕಾತಿ, ತರಬೇತಿ ವ್ಯವಸ್ಥೆ, ಕಚೇರಿ ಕಾರ್ಯವಿಧಾನಗಳು, ಸ್ಥಳೀಯ ಸರಕಾರದ ಆಡಳಿತ, ಜಿಲ್ಲಾಡಳಿತ, ಮುಂಗಡ ಪತ್ರ, ಲೆಕ್ಕ ಪರಿಶೋಧನೆ, ಪೊಲೀಸ್

ಆಡಳಿತ, ರೆವೆನ್ಯೂ ಆಡಳಿತ ಮುಂತಾದವುಗಳನ್ನು ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ ಕಾಣಬಹುದು.

ಈಸ್ಟ್ ಇಂಡಿಯಾ ಕಂಪೆನಿಯು ಆಡಳಿತವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಹಲವು ಶಾಸನಗಳನ್ನು ಜಾರಿಗೆ ತಂದಿತು. ಮುಖ್ಯವಾಗಿ, ರೆಗ್ಯುಲೇಟಿಂಗ್ ಆಕ್ಟ್ 1773, ಚಾರ್ಟರ್ ಆಕ್ಟ್ 1833, ಭಾರತ ಸರಕಾರದ ಕಾಯ್ದೆ 1858, ಇಂಡಿಯಾ ಕೌನ್ಸಿಲ್ ಆಕ್ಟ್ 1861, 1935ರ ಭಾರತ ಸರಕಾರದ ಕಾಯ್ದೆ ಮುಂತಾದುವು. ಇಂದಿಗೂ ಸಹ ಭಾರತದ/ಕರ್ನಾಟಕದ ಆಡಳಿತ ವ್ಯವಸ್ಥೆಯು ಇದೇ ಮಾದರಿಯ ಶಾಸನಗಳ ಮೂಲಕವೇ ನಡೆಯುತ್ತಿದೆ. ನಾಗರೀಕ ಸೇವೆಯ ಪದ್ಧತಿಯು ಬ್ರಿಟಿಷರ ಅವಧಿಯಲ್ಲಿ ಪ್ರಾರಂಭವಾಯಿತು. ಕಂಪೆನಿಯ ವ್ಯಾಪಾರಿ ವ್ಯವಹಾರವನ್ನು ನಡೆಸಿಕೊಂಡು ಹೋಗುತ್ತಿದ್ದ ನೌಕರರನ್ನು ನಾಗರೀಕ ಸೇವೆಯ ಅಧಿಕಾರಿಗಳು ಎಂದು ಕರೆಯುತ್ತಿದ್ದರು. ಇದೇ ಆಧುನಿಕ ಭಾರತದ ನಾಗರೀಕ ಸೇವೆಯ ಮೂಲವಾಗಿದೆ. ತದನಂತರದಲ್ಲಿ ಇದೇ ನೌಕರರನ್ನು ಪ್ರಾಂತೀಯ ಆಡಳಿತ ನಡೆಸುವ ಆಡಳಿತಾಧಿಕಾರಿಗಳನ್ನಾಗಿ ನೇಮಕ ಮಾಡಲಾರಂಭಿಸಿತು. ಇದರಿಂದ ಭಾರತದಲ್ಲಿ "ನಾಗರೀಕ ಸೇವೆ" ಅಸ್ತಿತ್ವಕ್ಕೆ ಬಂದಿತು.

1919ರಲ್ಲಿ ಭಾರತ ಸರಕಾರ ಕಾಯ್ದೆಯನ್ನು ಅಂಗೀಕರಿಸಿ, ಈ ಕೆಳಕಂಡ ಸೇವೆಗಳನ್ನು ಅಸ್ತಿತ್ವಕ್ಕೆ ತರಲಾಯಿತು – 1) ಭಾರತೀಯ ನಾಗರೀಕ ಸೇವೆ, 2) ಭಾರತೀಯ ಪೋಲೀಸ್ ಸೇವೆ, 3) ಭಾರತೀಯ ಅರಣ್ಯ ಸೇವೆ, 4) ಭಾರತೀಯ ವೈದ್ಯಕೀಯ ಸೇವೆ, 5) ಭಾರತೀಯ ಶೈಕ್ಷಣಿಕ ಸೇವೆ, 6) ಭಾರತೀಯ ಕೃಷಿ ಸೇವೆ, 7) ಭಾರತೀಯ ಇಂಜಿನಿಯರ್ ಸೇವೆ, 8) ವೆಟರ್‌ನರಿ ಸೇವೆ

ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ – ಇವರು ಈ ಮೇಲ್ಕಂಡ ಸೇವೆಗಳಿಗೆ ಸದಸ್ಯರನ್ನು ನೇಮಕ ಮಾಡುತ್ತಿದ್ದರು. ಹೀಗಿರುವಾಗ, 1922 ರಲ್ಲಿ 'ಸಿಬ್ಬಂದಿ ಆಯ್ಕೆ ಮಂಡಳಿ' ಮೂಲಕ ಕೆಳದರ್ಜೆಯ ನೌಕರರನ್ನು ನೇಮಕ ಮಾಡಲು ಶುರು ಮಾಡಿದರು. 1926ರಲ್ಲಿ ಹೊಸದಾಗಿ ಸಾರ್ವಜನಿಕ ಸೇವಾ ಆಯೋಗ ಸ್ಥಾಪಿತವಾಯಿತು. ಭಾರತದಲ್ಲಿ ನಾಗರೀಕ ಸೇವೆ ಹೇಗಿತ್ತು ಎಂಬುದನ್ನು ಕೆ.ಎಂ. ಪಣಿಕ್ಕರ್ ಅವರು ಈ ರೀತಿ ವಿವರಿಸಿದ್ದಾರೆ "ಭಾರತದಲ್ಲಿ ಆ ಕಾಲದ ಸಿವಿಲ್ ಸರ್ವಿಸ್ಸೇ ಸರಕಾರವಾಗಿತ್ತು". ಅದು ನಮ್ಮ ದೇಶದ ಆಡಳಿತ ನಡೆಸುವುದರ ಜೊತೆಗೆ ದೇಶವನ್ನು ಆಳುತ್ತಿತ್ತು. 1915 ರವರೆಗೆ ಭಾರತೀಯ ನಾಗರೀಕ ಸೇವೆಯು ಕೇವಲ ಬಿಳಿಯ ಜನರನ್ನೇ ಒಳಗೊಂಡಿತ್ತು. 1915ರ ನಂತರ ಭಾರತೀಯರನ್ನು ಈ ಸೇವೆಗೆ ನೇಮಕ ಮಾಡಲಾಯಿತು. ಆದರೂ ಬಿಳಿಯವರಿಗೆ ಹೆಚ್ಚಿನ ಸ್ಥಾನಗಳು

ಮೀಸಲಾಗಿದ್ದಿತು. 1947ರ ನಂತರ ಭಾರತೀಯ ನಾಗರೀಕ ಸೇವೆಯು ಪೂರ್ಣವಾಗಿ ಭಾರತೀಕರಣವಾಯಿತು" 'ಅಖಿಲ ಭಾರತ ಆಡಳಿತ ಸೇವೆ' ಎಂದಾಯಿತು. ಆದರೆ ಅಧಿಕಾರಿಗಳು ಭಾರತೀಯರಾದರೂ ಮನಸ್ಥಿತಿ ಬ್ರಿಟಿಷರದ್ದಾಗಿತ್ತು. ಮೆದುಳು ಮಾರ್ಪಾಟಾಗಲಿಲ್ಲ. ಇದರಿಂದಾಗಿ ನೌಕರಶಾಹಿ ಮತ್ತು ಅಧಿಕಾರಶಾಹಿ ಒಂದುಗೂಡಿ ಜನಸತ್ತೆಯನ್ನು ಶಕ್ತಿಹೀನವಾಗಿಸಿದೆ.

ಇಂತಹ ಸಂದರ್ಭದಲ್ಲಿ **ರಾಜ್ಯದ ಆಡಳಿತ** ಪಲ್ಲಟಗೊಳ್ಳುವುದನ್ನು ನೋಡಬಹುದು: 1772ರಲ್ಲಿ ವಾರನ್ ಹೇಸ್ಟಿಂಗ್ಸ್‌ನು ಕಂದಾಯ ಸಂಗ್ರಹಣೆ ಹಾಗೂ ನ್ಯಾಯ ವಿತರಣೆಗಾಗಿ ಡಿಸ್ಟ್ರಿಕ್ಟ್ ಕಲೆಕ್ಟರ್‌ರವರ ಕಚೇರಿಯನ್ನು ಸ್ಥಾಪಿಸಿದರು. 1786ರಲ್ಲಿ ಕಂದಾಯ ಆಡಳಿತಕ್ಕಾಗಿ ರಾಜ್ಯಮಟ್ಟದಲ್ಲಿ ಬೋರ್ಡ್ ಆಫ್ ರೆವೆನ್ಯೂ ಸ್ಥಾಪನೆಯಾಯಿತು. 1829ರಲ್ಲಿ ಜಿಲ್ಲಾಡಳಿತ ಮತ್ತು ರಾಜ್ಯದ ಕೇಂದ್ರಸ್ಥಾನದ ಮಧ್ಯೆ ಮಧ್ಯವರ್ತಿಯಾಗಿ ವಿಭಾಗೀಯ ಆಯುಕ್ತರ ಕಚೇರಿಯನ್ನು ಸ್ಥಾಪಿಸಲಾಯಿತು.

ಇಂತಹ ಸನ್ನಿವೇಶಗಳ ತಿಕ್ಕಾಟಗಳಲ್ಲೇ **ಸ್ಥಳೀಯ ಆಡಳಿತ** ಎನ್ನುವುದು ರೂಪುಗೊಳ್ಳುವುದು. 1687ರಲ್ಲಿ ಪ್ರಥಮ ಮುನ್ಸಿಪಲ್ ಕಾರ್ಪೋರೇಶನ್‌ನನ್ನು ಮದ್ರಾಸಿನಲ್ಲಿ ಸ್ಥಾಪಿಸಲಾಗುತ್ತದೆ. 1726ರಲ್ಲಿ ಬೊಂಬಾಯಿ ಮತ್ತು ಕಲ್ಕತ್ತಾದಲ್ಲಿ ಮುನ್ಸಿಪಲ್ ಕಾರ್ಪೋರೇಷನ್‌ಗಳನ್ನು ಸ್ಥಾಪಿಸಿದರು. 1860 ರಿಂದ ಆಯ ವ್ಯಯ ಪದ್ದತಿಯನ್ನು ಜಾರಿಗೆ ತಂದರು. ಸಾಮಾನ್ಯ ಮುಂಗಡ ಪತ್ರದಿಂದ ರೈಲ್ವೆ ಮುಂಗಡ ಪತ್ರವನ್ನು 1921 ರಲ್ಲಿ ಪ್ರತ್ಯೇಕಿಸಿದರು. ಬ್ರಿಟಿಷರು ಬಂದ ನಂತರ ಭಾರತ ರಾಜಕೀಯವಾಗಿ ಒಗ್ಗೂಡಿತು. ಅವರ ಆಡಳಿತದ ಸಂದರ್ಭದಲ್ಲೇ ಭಾರತವು ಏಕರೂಪದ ಆಡಳಿತಕ್ಕೆ ಒಳಗಾಯಿತು. ಬ್ರಿಟಿಷರು ವಿಶಾಲವಾದ ಭಾರತದ ಆಡಳಿತವನ್ನು ನಿರ್ವಹಿಸಲು ಸಂಪರ್ಕವನ್ನು ವ್ಯವಸ್ಥೆ ಮಾಡಿದರು. ಈ ಮೂಲಕ ಕೇಂದ್ರೀಕೃತ ಆಡಳಿತ ಪ್ರಭುತ್ವ ನಡೆಸಲು ವ್ಯವಸ್ಥೆ ಮಾಡಿಕೊಂಡರು. ಅಲ್ಲಿಯವರೆಗೆ ಇದ್ದ ರಾಜಪ್ರಭುತ್ವ ಆಡಳಿತ ಕಣ್ಮರೆಯಾಗಿ ಹೊಸದೊಂದು ಬಗೆಯ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ನಿರ್ವಹಿಸಲು ಪ್ರಾರಂಭಿಸಿದರು. ದೇಶವು ಪ್ರಾಂತಗಳು, ವಿಭಾಗಗಳು, ಜಿಲ್ಲೆಗಳು, ತಾಲೂಕುಗಳು, ಹೋಬಳಿ, ಗ್ರಾಮಗಳನ್ನೊಳಗೊಂಡ ವಿವಿಧ ಘಟಕಗಳಲ್ಲಿ ವಿಭಜಿತಗೊಂಡಿತು. ಬ್ರಿಟಿಷರು ತಮ್ಮ ವ್ಯವಹಾರಕ್ಕಾಗಿ ಹಾಗೂ ಇಲ್ಲಿನ ಸಂಪತ್ತನ್ನು ಇಂಗ್ಲೆಂಡಿಗೆ ಸಾಗಿಸಲು ಕೇಂದ್ರೀಕೃತ ಆಡಳಿತಕ್ಕೆ ನಾಂದಿ ಹಾಡಿದರೂ ಸಹ ಅದು ನಂತರದಲ್ಲಿ ಏಕೀಕರಣ ಭಾವನೆಯನ್ನು ಜನರಲ್ಲಿ ಬಿತ್ತಿತು.

ಇಂದಿನ ಸಚಿವಾಲಯದ ವ್ಯವಸ್ಥೆಯು ಬಿಟ್ರಿಷ್ ಆಡಳಿತ ಪರಂಪರೆಯಿಂದ ಬೆಳೆದುಬಂದಿದೆ. ಮೊದಲು ಒಂದೇ ಇಲಾಖೆಯು ಮೂಲಕ ಆಡಳಿತದ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಕಾಲಕ್ರಮೇಣ ಸಚಿವಾಲಯದ ಗಾತ್ರ, ಕಾರ್ಯ ಚಟುವಟಿಕೆ ವಿಸ್ತಾರವಾಗುತ್ತಾ ಬದಲಾಗುತ್ತಾ ಬಂತು. 1843ರಲ್ಲಿ ಮಿಲಿಟರಿ, ವಿದೇಶಾಂಗ, ಗೃಹ, ಹಣಕಾಸು ಎಂಬ ನಾಲ್ಕು ಇಲಾಖೆಗಳನ್ನು ಹೊಂದಿತ್ತು. ಪ್ರತಿಯೊಂದು ಇಲಾಖೆಯು ಒಬ್ಬ ಕಾರ್ಯದರ್ಶಿಯ ಅಧೀನದಲ್ಲಿತ್ತು. ಎಲ್ಲಾ ನಾಲ್ಕು ಇಲಾಖೆಗಳು ಒಬ್ಬ ಮುಖ್ಯ ಕಾರ್ಯದರ್ಶಿಯ ಪೂರ್ಣ ನಿಯಂತ್ರಣದಲ್ಲಿತ್ತು. ಇವರು ಗವರ್ನರ್ ಜನರಲ್ ಪರವಾಗಿ ಆದೇಶವನ್ನು ಹೊರಡಿಸುತ್ತಿದ್ದರು. ಈ ಪದ್ಧತಿಯನ್ನು ಸ್ವಾತಂತ್ರ್ಯ ನಂತರದ ಭಾರತದ ಆಡಳಿತದಲ್ಲಿ ಅಳವಡಿಸಿಕೊಳ್ಳಲಾಯಿತು. 1781ರ ವೇಳೆಗೆ ಜಿಲ್ಲೆಯನ್ನು ಒಂದು ಆಡಳಿತ ಘಟಕವಾಗಿ ಮಾಡಿ ಜಿಲ್ಲಾಧಿಕಾರಿಯನ್ನು ನೇಮಿಸಿ ಆತನ ಅಧೀನಕ್ಕೊಳಪಡಿಸಲಾಯಿತು. 1905ರಲ್ಲಿ 'ಅವಧಿ ಪದ್ಧತಿ' (Tenure System) ಜಾರಿಗೆ ತರಲಾಯಿತು. ಮುಂದಿನ ವರ್ಷಗಳಲ್ಲಿ ಇದು ಭಾರತದ ಆಡಳಿತದ ಒಂದು ಪ್ರಮುಖ ಲಕ್ಷಣವಾಯಿತು. ಆಧುನಿಕ ಕಾಲದ ಜಿಲ್ಲಾಡಳಿತದ ಐತಿಹಾಸಿಕ ಬೇರುಗಳು ಈ ಟೆನ್ಯೂರ್ ಪದ್ಧತಿಯಲ್ಲಿದೆ. ಹೀಗೆ ಬ್ರಿಟಿಷರು ತಮ್ಮದೇ ಆಡಳಿತ ಪದ್ಧತಿಯನ್ನು ಸ್ಥಾಪಿಸಿದರು.

ಭಾರತವು ಸ್ವಾತಂತ್ರ್ಯಾನಂತರ ತನ್ನ ಅವಶ್ಯಕತೆಗಳಿಗೆ ತಕ್ಕಂತೆ ಕೆಲವು ಮಾರ್ಪಾಡುಗಳನ್ನು ಮಾಡಿ ಬ್ರಿಟಿಷ್ ಆಡಳಿತಾತ್ಮಕ ಪದ್ಧತಿಯನ್ನು ಮುಂದುವರೆಸಿದೆ. ಭಾರತದ ಇಂದಿನ ಆಡಳಿತ ವ್ಯವಸ್ಥೆಯು ಬ್ರಿಟಿಷ್ ಆಳ್ವಿಕೆಯ ಮುಂದುವರಿಕೆಯಾಗಿದೆ. ಭಾರತದ ಒಕ್ಕೂಟ ಸ್ವರೂಪದ ಆಡಳಿತ (Federal System) ಸಂಸದೀಯ ಪದ್ಧತಿಯ ಸರಕಾರ, ನಾಗರಿಕ ಸೇವೆಗಳು, ಸಚಿವಾಲಯಗಳು, ನಿರ್ದೇಶನಾಲಯಗಳು, ಖಾತೆಗಳ ಪದ್ಧತಿ, ಅವಧಿ ಪದ್ಧತಿ (Tenure System) ಜಿಲ್ಲಾಡಳಿತ, ಜಿಲ್ಲಾಧಿಕಾರಿ ಹುದ್ದೆ, ಶ್ರೇಣೀಕೃತ ಆಡಳಿತ ವ್ಯವಸ್ಥೆ, ಸ್ವತಂತ್ರ ನೇಮಕಾತಿ ಮಂಡಲಿ, ತರಬೇತಿ ವ್ಯವಸ್ಥೆ, ಆಡಳಿತದ ಕಾರ್ಯ ವಿಧಾನಗಳು, ನ್ಯಾಯಾಂಗ ಪದ್ಧತಿ, ಸ್ಥಳೀಯ ಆಡಳಿತವು ಬಿಟ್ರಿಷ್ ಆಡಳಿತದ ಬಳುವಳಿಯಾಗಿದೆ.

ಆದರೆ, ನಾವು ಮೊದಲನೇ ಅಧ್ಯಾಯದಲ್ಲಿ ಗಮನಿಸಿದಂತೆ **'ಆಧುನಿಕತೆ ಮತ್ತು ಸಾರ್ವಜನಿಕ ಮೌಲ್ಯಗಳು'** ಫ್ರಾನ್ಸ್ ಕ್ರಾಂತಿಯ ನಂತರದಲ್ಲಿ ಬಂದದ್ದು ಹೌದು. ಆದರೆ, ಭಾರತೀಯ ಸಂದರ್ಭದಲ್ಲಿ ಈ 'ಆಧುನಿಕತೆ ಮತ್ತು ಸಾರ್ವಜನಿಕ ಮೌಲ್ಯಗಳು' ಎನ್ನುವುದು ಧರ್ಮ, ಜಾತಿ,

ಲಿಂಗ ಮತ್ತು ವರ್ಗ ಪರಿಕಲ್ಪನೆಗಳಲ್ಲಿ ಸಾಗಿ ಖಚಿತವಾದ **"ಪ್ರಭುತ್ವ ಮತ್ತು ಜನತೆ"** ಎಂಬುದು ಉದಯಿಸುವುದನ್ನು ನಾವಿಲ್ಲಿ ಗಮನಿಸುತ್ತೇವೆ. ಅಂದರೆ 'ಪ್ರಭುತ್ವ ಮತ್ತು ಜನತೆ' – ಇವೆರಡರ ನಡುವೆ ವಿರೋಧಾಭಾಸಗಳು ಸಾರ್ವಜನಿಕವಾಗಿ ನೆಲೆಗೊಂಡು ಅಂತಿಮವಾಗಿ ಜನತೆಯು ಬಡವಾಗುವುದನ್ನು ಸೂಚಿಸುತ್ತಿವೆ. ಇದನ್ನು ಸಾಮಾನ್ಯೀಕರಿಸುವಿಕೆ ಅಥವಾ ಮೌಲ್ಯಹೀನಗೊಳಿಸುವುದು ಎಂದಾಗುತ್ತದೆ. ಹಾಗಾದರೆ ಇಲ್ಲಿ ಉದಯಿಸಿದ ಪ್ರಭುತ್ವ ಮತ್ತು ಅಧಿಕಾರ ಎನ್ನುವುದನ್ನು 'ವಸಾಹತುಶಾಹಿ'ಯ ಸಂದರ್ಭದಲ್ಲಿ ಇಟ್ಟು ನೋಡಬೇಕಾಗುತ್ತದೆ.

ವಸಾಹತುಶಾಹಿಯ ಕುರಿತಂತೆ ಈಗೀಗ ಕನ್ನಡದಲ್ಲಿ ಗಂಭೀರವಾದ ಚರ್ಚೆ ನಡೆದಿದೆ. "ವಸಾಹಾತುಶಾಹಿಯೆಂಬುದು ಅಸ್ತಿತ್ವದಲ್ಲಿರುವ ಒಂದು ಜನಾಂಗ ಅಥವಾ ಸಮುದಾಯದ ಬದುಕು, ಸಂಪನ್ಮೂಲ ಮತ್ತು ಸಂಸ್ಕೃತಿಯ ಮೇಲೆ ಮತ್ತೊಂದು ಸಮುದಾಯ ಬಲವಂತವಾಗಿ ಅಧಿಕಾರವನ್ನು ಸ್ಥಾಪಿಸುವುದೇ ಅಗಿದೆ. ಈ ದಬ್ಬಾಳಿಕೆಗೆ ಮುಖ್ಯವಾಗಿ ವಾಣಿಜ್ಯ, ವ್ಯಾಪಾರ, ಸಂಪನ್ಮೂಲಗಳ ಮೇಲಿನ ಆಧಿಪತ್ಯದ ಆಸೆಯೇ ಕಾರಣಗಳೆಂಬುದು ಮೇಲ್ನೋಟಕ್ಕೆ ಗೋಚರವಾಗುವ ವಿಷಯ. ವಿಶ್ವದ ಇತಿಹಾಸದಲ್ಲಿ ಹದಿನೈದನೇ ಶತಮಾನದ ಸುಮಾರಿಗೆ ಯೂರೋಪಿಯನ್ ದೇಶಗಳು (ಮುಖ್ಯವಾಗಿ ಇಂಗ್ಲೆಂಡ್, ಫ್ರಾನ್ಸ್, ಡಚ್, ಪೋರ್ಚುಗೀಸ್) ದಕ್ಷಿಣ ಆಫ್ರಿಕಾ, ಭಾರತ, ಆಸ್ಟ್ರೇಲಿಯ, ಅಮೇರಿಕಾ, ಮತ್ತು ಅನೇಕ ದ್ವೀಪಗಳಲ್ಲಿ ವಾಸವಾಗಿದ್ದ ಪೌರಾತ್ಯ ಸಮುದಾಯಗಳ ಭೂ ಒಡೆತನ, ಸಂಪನ್ಮೂಲಗಳ ಮೇಲಿನ ಹತೋಟಿ, ಮಾನವ ಸಂಪನ್ಮೂಲಗಳ ಬಳಕೆಗಾಗಿ ಮಾಡಿದ ಆಕ್ರಮಣ ಮತ್ತು ಸಾಧಿಸಿದ ಜಯವನ್ನು ವಸಾಹಾತು ಅಕ್ರಮಣ ಎನ್ನಲಾಗಿದೆ. ಎರಡನೇ ಮಹಾಯುದ್ಧದ ನಂತರದಲ್ಲಿ ರಾಷ್ಟ್ರೀಯತೆಯ ಉಗಮದೊಂದಿಗೆ ರಾಜಕೀಯ ವಸಾಹಾತುಗಳು ಕೊನೆಗೊಂಡವಾದರೂ, ವಸಾಹಾತು ಪ್ರಕ್ರಿಯೆಯಿಂದಾಗಿ ಮೂಡಿಬಂದ ಸಾಂಸ್ಕೃತಿಕ ಸಂಘರ್ಷವು ಸೃಷ್ಟಿಸಿದ ಆರ್ಥಿಕ, ಸಾಮಾಜಿಕ, ಮನೋವೈಜ್ಞಾನಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಗಳು ಅಧೀನ ಸಮುದಾಯಗಳ ಒಳಗಿನ ಪದರಗಳಲ್ಲಿ ಹುದುಗಿದ್ದು ಮತ್ತೆ ಮತ್ತೆ ಆಸ್ಫೋಟಿಸುತ್ತಲೇ ಇವೆ. ವಸಾಹತು ಪ್ರಜ್ಞೆಯು ಯಾವ ರೀತಿಯಾಗಿ ಸಮುದಾಯಗಳ ಬದುಕು ಮತ್ತು ನಡವಳಿಕೆಗಳನ್ನು ಈಗಲೂ ಪ್ರಭಾವಿಸುತ್ತಿವೆ ಎಂಬುದು ಇವತ್ತಿಗೂ ವಸಾಹತೋತ್ತರ ಅಧ್ಯಯನಗಳ ಮುಖ್ಯ ವಿಷಯವಾಗಿದೆ. ವಸಾಹಾತುಶಾಹಿ ಎಂಬುದು ಒಂದು ವಾಣಿಜ್ಯ ಪ್ರೇರಿತ ಸಾಹಸ. ಆರ್ಥಿಕ ಶೋಷಣೆ, ನೆಲ ಮತ್ತು ಜನ ಸಂಪನ್ಮೂಲಗಳನ್ನು ಕಡಿಮೆ ವೆಚ್ಚದಲ್ಲಿ ಅನುಭೋಗಿಸಲು ಬೇಕಾದ ಮಾರ್ಗಗಳನ್ನು ರಾಜಕೀಯ ಅಧಿಕಾರ ಮತ್ತು ಕಾನೂನಿನ ಸಹಾಯದಿಂದ ಪಡೆದುಕೊಳ್ಳುವ ಹುನ್ನಾರ.

ಸಾಮ್ರಾಜ್ಯಶಾಹಿಯು ತನ್ನ ಆಳ್ವಿಕೆಯ ಕಬಂಧ ಬಾಹುಗಳನ್ನು ಹರಡಲು ಬಳಸಿಕೊಳ್ಳುವ ಅನೇಕ ಮಾರ್ಗಗಳಲ್ಲಿ ವಸಾಹತುಪ್ರಜ್ಞೆಯನ್ನು ಸಮುದಾಯ ಗಳಲ್ಲಿ ರೂಪಿಸುವುದೂ ಸಹ ಸೇರಿದೆ. ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯ ಹಿಡಿತ ರಾಜಕೀಯ ವಸಾಹತು ಕೊನೆಗೊಂಡ ಮೇಲೂ ಮುಂದುವರೆಯುವುದು ಹೀಗೆ. ವಸಾಹತುಪ್ರಜ್ಞೆಯು ಸಮುದಾಯದ ಇತಿಹಾಸ, ಸ್ತ್ರೀ–ಪುರುಷರ ಸಂಬಂಧ, ಕಲೆ, ವಾಸ್ತು, ವಾಣಿಜ್ಯ ಸಂಬಂಧಗಳು, ಆರ್ಥಿಕತೆ, ಶಿಕ್ಷಣ, ಸಾಹಿತ್ಯ ಮತ್ತು ಸಮೂಹ ಮಾಧ್ಯಮಗಳನ್ನು ಪ್ರಭಾವಿಸುತ್ತದೆ. ವಸಾಹಾತುಶಾಹಿ ಕಾರಣದಿಂದ ಉಂಟಾಗುವ ತೀವ್ರ ಅಸಮಾನತೆಯು ದೇಸಿ ಸಮುದಾಯಗಳ ಒಳಗೇ ಇದ್ದ ಶ್ರೇಣೀಕರಣವನ್ನು ಇನ್ನೊಂದು ರೀತಿಯಲ್ಲಿ ಪುನರ್‌ರಚಿಸುತ್ತವೆ. ಆಳುವುದು ತನ್ನ ನಿಜ ಧರ್ಮವಾದರೆ, ಆಳಿಸಿಕೊಳ್ಳುವುದು ಅಧೀನರ ಅನಿವಾರ್ಯತೆ ಎಂಬುದನ್ನು ಪೋಷಿಸುವುದು ವಸಾಹಾತುಶಾಹಿಯ ಮುಖ್ಯ ಧ್ಯೇಯವಾಗಿದೆ. ಈ ಚೌಕಟ್ಟಿನಿಂದ ಹೊರಬರುವ ಕ್ರಮವನ್ನು ಗೂಗಿವಥಿಯಾಂಗೋ ಎನ್ನುವ ಆಫ್ರಿಕನ್ ಲೇಖಕ 'Decolonising the Mind' ಎಂದು ಕರೆಯುತ್ತಾನೆ. ವಸಾಹಾತೀಕರಣವನ್ನು 'ಸಾಂಸ್ಕೃತಿಕ ಬಾಂಬ್' ಎಂದು ಕರೆಯುವ ಗೂಗಿ ಅದರ ಪರಿಣಾಮವು, "ಜನರಿಗೆ ತಮ್ಮ ಹೆಸರಲ್ಲಿ, ತಮ್ಮ ಭಾಷೆಗಳಲ್ಲಿ, ತಮ್ಮ ವಾತಾವರಣದಲ್ಲಿ, ತಮ್ಮ ಬದುಕನ್ನು ರೂಪಿಸಿದ ಹೋರಾಟಗಳ ಪರಂಪರೆಯಲ್ಲಿ, ತಮ್ಮ ಏಕತೆಯಲ್ಲಿ, ತಮ್ಮ ಸಾಮರ್ಥ್ಯಗಳಲ್ಲಿ ಹಾಗು ಅಂತಿಮವಾಗಿ ತಮ್ಮ ಅಸ್ತಿತ್ವದಲ್ಲಿಯೇ ನಂಬಿಕೆಗಳನ್ನು ಅಳಿಸಿಹಾಕುವುದಾಗಿದೆ." ವಸಾಹಾತುಶಾಹಿಯು ದಾಸ್ಯಕ್ಕೆ ಒಳಪಟ್ಟವರ ಇತಿಹಾಸವನ್ನು ನಿರಾಕರಿಸಿ, ತಮ್ಮ ಅಧಿಕಾರವನ್ನು ಸಮರ್ಥಿಸಿಕೊಳ್ಳಲು ಬೇಕಾದ ಚರಿತ್ರೆಯನ್ನೇ ಅಧಿಕೃತ ದಾಖಲೆಯೆಂದು ಅವರನ್ನು ಒಪ್ಪಿಸುತ್ತದೆ. ಭಾರತದ ಚರಿತ್ರೆಯನ್ನು ಕೇಂಬ್ರಿಜ್ ಇತಿಹಾಸಕಾರರು, ಹಿಂದೂ ಸುವರ್ಣಯುಗ, ಮುಸ್ಲಿಮ್ ದಾಳಿಯ ಕತ್ತಲೆಯ ಯುಗ ಮತ್ತು ಬ್ರಿಟಿಷ ವಸಾಹತುಶಾಹಿಯೆಂಬ ಆಧುನಿಕ ಯುಗವೆಂಬ ವಿಭಜನೆಯ ಮೂಲಕ ರಚಿಸಿದ್ದನ್ನು ಇಲ್ಲಿ ಉದಾಹರಿಸಬಹುದು. ಈ ಚರಿತ್ರೆಯಿಂದಾಗಿ ಬ್ರಿಟಿಷರಿಗೆ ಭಾರತವನ್ನು ಆಳಲು ಬೇಕಾದ ಸಮರ್ಥನೆಯನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ದುರಂತವೆಂದರೆ, ನಮ್ಮ ರಾಷ್ಟ್ರೀಯವಾದಿ ಇತಿಹಾಸಕಾರರೂ ಕೂಡ ಈ ವಸಾಹತು ಪ್ರಣೀತ ಚರಿತ್ರೆಯನ್ನೇ ತಮ್ಮ ಕೋಮುವಾದಿ ರಾಷ್ಟ್ರೀಯತೆಯ ಸಿದ್ಧಾಂತವನ್ನು ಬೆಳೆಸಲು ಬಳಸಿಕೊಳ್ಳುತ್ತಿರುವುದು. ಹೀಗೆ ಹಿಂದುತ್ವ ಸಾಂಸ್ಕೃತಿಕ ರಾಷ್ಟ್ರೀಯತೆಯ ದೇಶಪ್ರೇಮಕ್ಕೆ ವಸಾಹತುಶಾಹಿಯ ಚರಿತ್ರೆಯನ್ನು ಬಳಸುವುದರ ಮೂಲಕ ಅದನ್ನು ಅಧಿಕೃತಗೊಳಿಸುತ್ತದೆ. ಕೆಲವು ಸ್ತರಗಳಲ್ಲಿ ವಸಾಹತುಶಾಹಿ ಆಧುನಿಕತೆ, ಅಧೀನ ಸಮಾಜದ ಸಂಚಲನಕ್ಕೂ ಕಾರಣವಾಗಿರುವುದು ಉಂಟು. ಸಮುದಾಯಗಳಲ್ಲಿ ರೂಢಿಯಲ್ಲಿರುವ ಅನಿಷ್ಟ ಪದ್ಧತಿಗಳನ್ನು

(ಭಾರತದಲ್ಲಿ ಜಾತಿಪದ್ಧತಿ, ಬಾಲ್ಯವಿವಾಹ, ಸತಿಪದ್ಧತಿ, ಮೇಲ್ಜಾತಿ ಯಲ್ಲದವರಿಗೆ ವಿದ್ಯಾಭ್ಯಾಸ ನಿರಾಕರಣೆ, ಆಫ್ರಿಕನ್ ಬುಡಕಟ್ಟುಗಳಲ್ಲಿ ಬಲವಾಗಿ ಬೇರೂರಲ್ಪಟ್ಟ ಮೂಢ ನಂಬಿಕೆಗಳು, ನರಬಲಿ ಇತ್ಯಾದಿ ಅಮಾನವೀಯ ಆಚರಣೆಗಳು) ವಸಾಹಾತುಶಾಹಿ ಆಳ್ವಿಕೆಯು ತೀವ್ರವಾಗಿ ಪ್ರಶ್ನಿಸಿದ್ದರಿಂದ ಜಾಗೃತರಾದ ದಮನಿತ ದೇಸಿವಾಸಿಗಳು ವಸಾಹಾತುಶಾಹಿಯನ್ನು ವರಸಮಾನವಾಗಿ ಭಾವಿಸಿದರು. ನಂತರದ ಕಾಲಘಟ್ಟದಲ್ಲಿ ಇದೇ ಸಮುದಾಯಗಳು ವಸಾಹಾತುಶಾಹಿಗೆ ಪ್ರತಿರೋಧ ತೋರಿದರೂ ಸಹ, ವಸಹಾತು ಆಳ್ವಿಕೆಯು ಪ್ರಾರಂಭದಲ್ಲಿ ಇದರಿಂದ ಸಮರ್ಥನೆಯನ್ನು ಪಡೆಯಿತು. ವಸಾಹತುಶಾಹಿ ವಸಾಹಾತು ನೀತಿಯು ಎರಡು ಅಲುಗಿನ ಖಡ್ಗವಾಯಿತು: ಸಂಸ್ಕೃತಿ ನಾಶದ ಜೊತೆ ಜೊತೆಗೇ ದೇಸೀ ಸಮುದಾಯಗಳಲ್ಲಿದ್ದ ಸಾಮಾಜಿಕ ಅನಿಷ್ಟಗಳಿಂದ ಬಳಲುತ್ತಿದ್ದವರ ಮೇಲ್ಚನೆಗೆ ಕಾರಣವಾಯಿತು. ವಸಾಹಾತುಶಾಹಿಯು ಬದುಕನ್ನು ಗ್ರಹಿಸುವ ಒಂದು ಕ್ರಮ. ಒಬ್ಬ ವ್ಯಕ್ತಿ ಅಥವಾ ಸಮುದಾಯವನ್ನು ತನ್ನ ಪರಂಪರೆಗೇ ಅನ್ಯವಾಗಿಸುವ ಒಂದು ಕ್ರಿಯೆ. ಒಂದು ಸಮುದಾಯದ ಸಾಂಸ್ಕೃತಿಕ ಪ್ರಜ್ಞೆಯು ಅನೇಕ ಲೋಕ ದೃಷ್ಟಿಗಳ, ನಂಬಿಕೆಗಳ, ಆಚರಣೆಗಳ ಮತ್ತು ಸಮೂಹ ಮನೋಭಾವಗಳ ಮೊತ್ತವಾಗಿರುತ್ತದೆ. ಕೇವಲ ತನ್ನ ಸಂಬಂಧಿಕರೊಂದಿಗಿನ ಅನುಬಂಧವಷ್ಟೇ ಅಲ್ಲದೆ ಇಡೀ ಕುಲವನ್ನು ಕಾಯ್ದು ಪೋಷಿಸುವ ಗಾಳಿ, ನೀರು, ಪರಿಸರ, ಜೀವಸಂಕುಲವನ್ನು ಈ ಪ್ರಜ್ಞೆಯು ಒಳಗೊಂಡಿರುತ್ತದೆ. ನಿರ್ದಿಷ್ಟ ಭೌಗೋಳಿಕ ಪ್ರದೇಶದ ಕತೆಗಳು, ಇತಿಹಾಸ, ರೂಢಿ ಆಚರಣೆಗಳು, ಕಾಲಾಂತರಗಳಿಂದ ಸಮುದಾಯದ ನೆನಪುಗಳಲ್ಲಿ ಹುದುಗಿರುತ್ತವೆ. ಪ್ರತಿಯೊಂದು ನಾಗರಿಕತೆಗೂ ಒಂದೊಂದು ಕತೆಗಳಿರುತ್ತವೆ. ಈ ಕತೆಗಳನ್ನು ಕಟ್ಟಿರುವ ಭಾಷೆಗಳನ್ನು, ಅಭಿವ್ಯಕ್ತಿಯ ವಿಧಾನಗಳನ್ನು ವಸಾಹಾತುಶಾಹಿ ನಗಣ್ಯಗೊಳಿಸುತ್ತದೆ; ನೆನಪುಗಳನ್ನು ಅಳಿಸಿಹಾಕಿ ಸಾಂಸ್ಕೃತಿಕ ವಿಸ್ಮೃತಿಗೆ ಕಾರಣವಾಗುತ್ತದೆ. ರಾಜಕೀಯ ವಸಾಹತೀಕರಣವನ್ನು ಸಾಮಾಜಿಕ ಚಳವಳಿಗಳ ಮೂಲಕ ಹತ್ತಿಕ್ಕಬಹುದು ಆದರೆ ಸಾಂಸ್ಕೃತಿಕ ವಸಾಹತುಶಾಹಿಯನ್ನು ಅರ್ಥಮಾಡಿಕೊಂಡು ಅದರ ಬಲೆಗೆ ಸಿಗದಂತೆ ತಪ್ಪಿಸಿಕೊಳ್ಳಲು ವಿಶೇಷ ತಯಾರಿಯ ಆವಶ್ಯಕತೆಯಿದೆ. ಏಕೆಂದರೆ, ಅದು ವಸಾಹತುಗೆ ಒಳಗಾದ ಸಮಾಜಗಳನ್ನು ಕುರಿತ ವ್ಯಾಖ್ಯಾನವನ್ನು ಅವು ನಮ್ಮವೇ ಎಂದು ನಂಬುವಂತೆ ಮಾಡುತ್ತವೆ; ದೇಸೀ ಜ್ಞಾನ ಮೂಲಗಳಿಗೆ ನಮ್ಮನ್ನೇ ಪರಕೀಯವನ್ನಾಗಿಸುತ್ತದೆ. ಸಮಕಾಲೀನ ಸಂದರ್ಭದಲ್ಲಿ ವಸಾಹಾತೀಕರಣವನ್ನು ಮರುವ್ಯಾಖ್ಯಾನಿಸಿ, ಪುನರ್ ವಿಮರ್ಶೆಗೆ ಒಳಪಡಿಸುವ ಸವಾಲಿದೆ. ಸಾಮ್ರಾಜ್ಯಶಾಹಿ ಬಂಡವಾಳವು ಜಾಗತೀಕರಣದ ಹೆಸರಿನಲ್ಲಿ ಮತ್ತೊಮ್ಮೆ ನಮ್ಮ ಮನೆ–ಮನಗಳನ್ನು ಹೊಕ್ಕಿವೆ. ಇಂದು ನಮ್ಮ ಆಳುವ ವರ್ಗ ಮತ್ತು ಅದರ ಪಾಲುದಾರರಾದ

ಮಧ್ಯಮ ವರ್ಗಗಳು ಜಾಗತೀಕರಣ/ ಖಾಸಗೀಕರಣಗಳೆಂಬ ನವವಸಾಹತೀಕರಣದ ಪ್ರಕ್ರಿಯೆಯನ್ನೇ ಅಭಿವೃದ್ಧಿ ಮಾರ್ಗ ವೆಂದು ನಂಬಿರುವ ಮನಸ್ಥಿತಿಯನ್ನು ಸೃಷ್ಟಿಸಿದೆ."[4]

ಇಂತಹ ಸನ್ನಿವೇಶದಲ್ಲಿ ವಸಾಹತುಶಾಹಿ ನಿರ್ಮಿಸಿದ ಜ್ಞಾನಾಧೀಕಾರ ಸಂಬಂಧಗಳನ್ನು ಕನ್ನಡದ ಸಂದರ್ಭದಲ್ಲಿ ಪರಿಶೀಲಿಸುವುದು ಮುಖ್ಯ. "**ಅಧಿಕಾರ** ಸಂಬಂಧವೆಂದರೆ ಅಶಕ್ತರ ಮೇಲೆ ಶಕ್ತರ ಆಧಿಪತ್ಯ ಅಥವಾ ಪ್ರಾಬಲ್ಯ ಎನ್ನುವ ಮಾರ್ಕ್ಸ್‌ವಾದಿ ಕಲ್ಪನೆಯನ್ನು ಹೆಚ್ಚು ಅಧ್ಯಯನಕ್ಕೆ ಒಳಪಡಿಸಿ, ಅಧಿಕಾರ ಸಂಬಂಧಗಳನ್ನು ತಲೆಕೆಳಗು ಮಾಡಲಾದ ವಿರೋಧಿ ರೂಪಗಳನ್ನು ಫುಕೊ ಅಧ್ಯಯನ ನಡೆಸುತ್ತಾನೆ. ಇಂತಹ ವಿರೋಧಿ ಅಲೆಗಳ ಉದ್ದೇಶ, ಒಂದು ರೀತಿಯ ಅಧಿಕಾರ, ತಂತ್ರ ಅಥವಾ ಅಧಿಕಾರದ ಸಂಸ್ಥೆಯ ಮೇಲೆ ಆಕ್ರಮಣ ಮಾಡುವುದಾಗಿದೆ. ಫುಕೊನ ಅಧಿಕಾರದ ಪದಕಟ್ಟಿಗೆ ವ್ಯಕ್ತಿತ್ವದ ಅವಿನಾಭಾವ ಸಂಬಂಧ ಇದೆ. ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಅಧಿಕಾರ ಸಂಬಂಧಗಳಿಗೆ ಜನರು (Subjects) ಗುಲಾಮರಾಗಿರುತ್ತಾರೆ. ಫುಕೊ ಎರಡು ರೀತಿಯ ಜನರನ್ನು ಗುರುತಿಸುತ್ತಾನೆ. 1. ಬೇರೆಯವರ ನಿಯಂತ್ರಣ ಮತ್ತು ಅವಲಂಬನೆಗೆ ಗುರಿಯಾಗಿರುವವರು. 2. ತನ್ನ ವ್ಯಕ್ತಿತ್ವ ಹಾಗೂ ಆತ್ಮಸಾಕ್ಷಿಗೆ ಕಟ್ಟು ಬೀಳುವವರು. ಆಧುನಿಕ ರಾಜ್ಯದೇಶವನ್ನು ಫುಕೊ ಒಂದು ಸಂಕೀರ್ಣ ವ್ಯವಸ್ಥೆಯಾಗಿ ಪರಿಭಾವಿಸುತ್ತಾನೆ, ಇಲ್ಲಿನ ವ್ಯವಸ್ಥೆಗೆ ವ್ಯಕ್ತಿಯೊಬ್ಬನನ್ನು ಸೇರಿಸಿಕೊಳ್ಳಲು(ಒಟ್ಟುಗೂಡಿಸಿಕೊಳ್ಳಲು) ಒಂದು ಕರಾರು ಏನೆಂದರೆ, ಒಂದು ನಿಶ್ಚಿತ ವ್ಯವಸ್ಥೆಗೆ ವ್ಯಕ್ತಿತ್ವವನ್ನು ಒಂದು ಹೊಸ ರೀತಿಯಲ್ಲಿ ರೂಪುಗೊಳಿಸಿಕೊಳ್ಳಬೇಕು ಹಾಗೂ ಕೆಲವು ನಿರ್ದಿಷ್ಟ ವಿನ್ಯಾಸಗಳಿಗೆ ಹೊಂದಿಸಿ ಕೊಳ್ಳಬೇಕು ಮತ್ತು ರೂಪುಗೊಳಿಸಿಕೊಳ್ಳಬೇಕು ಎಂದು. ಹಾಗಾಗಿ ಆಡಳಿತ ವ್ಯವಸ್ಥೆ ಎನ್ನುವುದು ಒಂದು ವ್ಯಕ್ತಿತ್ವ ನಿರ್ಮಾಣದ ವಿನ್ಯಾಸವಾಗಿರುತ್ತದೆ. ಮೂರು ರೀತಿಯ ಅಧಿಕಾರ ಸಂಬಂಧಗಳನ್ನು ಫುಕೊ ಗುರುತಿಸುತ್ತಾನೆ: 1. ವಸ್ತುಗಳನ್ನು ಬದಲಾಯಿಸುವ, ಮಾರ್ಪಾಡಿಸುವ, ಅನುಭೋಗಿಸುವ ಹಾಗೂ ನಾಶಮಾಡುವ ಅಧಿಕಾರ. 2. ವ್ಯಕ್ತಿಗಳ ನಡುವೆ ಸಂಬಂಧಗಳನ್ನು ಜಾರಿಗೆ ತರುವ ಅಧಿಕಾರ. 3. ಮಾಹಿತಿ ರವಾನೆ. (ಭಾಷೆಯ ಸಂಜ್ಞೆಗಳ ಅಥವಾ ಸಂಕೇತಗಳ ಮೂಲಕ ಪಡೆಯುವ ಅಧಿಕಾರ, ಸಂವಹನದ ತಯಾರಿ, ಉತ್ಪಾದನೆ ಮತ್ತು ಚಲಾವಣೆ (production and circulation) ಕೂಡ ಅಧಿಕಾರ ಸಂಬಂಧಗಳ ಮೇಲೆ ಪ್ರಭಾವ ಬೀರುತ್ತದೆ. ಈ ಮೂರು ಅಧಿಕಾರಗಳೂ ಒಂದರ ಮೇಲೊಂದು ವ್ಯಾಪಿಸಿರುತ್ತವೆ (overlap).

---

[4] ಸರಸ್ವತಿ ಕೆ ಬಿ, ವಸಾಹತುಶಾಹಿ, ಪರಿಭಾಷಾಕೋಶ, ಕುವೆಂಪು ಭಾಷಾ ಭಾರತಿ ಪುಸ್ತಕ ಪ್ರಾಧಿಕಾರ, 2015, ಪು. 208–210

ಈ ಮೂರು ಅಧಿಕಾರಗಳು ನಿಯಂತ್ರಿತ ವ್ಯವಸ್ಥೆಗಳಾಗಿದ್ದು, ಈ ವ್ಯವಸ್ಥೆಯಲ್ಲಿ ಸಾಮರ್ಥ್ಯಗಳ ಹೊಂದಾಣಿಕೆಗೆ, ಸಂವಹನದ ಸಂಪನ್ಮೂಲ ಹಾಗೂ ಅಧಿಕಾರ ಸಂಬಂಧಗಳು ಶಿಸ್ತುಗಳನ್ನು (disciplines) ಬಳಸಲಾಗುತ್ತದೆ. ಫುಕೊ ಅಧಿಕಾರ ಎನ್ನುವ 'ವಸ್ತು' ಇರುವುದಿಲ್ಲ, ಬದಲಾಗಿ ಬೇರೆಯ ವ್ಯಕ್ತಿಯ ಮೇಲೆ ಅಧಿಕಾರ ಚಲಾಯಿಸಿದಾಗ ಮಾತ್ರ ಅಸ್ತಿತ್ವಕ್ಕೆ ಬರುತ್ತದೆ ಎನ್ನುತ್ತಾನೆ. ಅದನ್ನು ವೃತ್ತಿಗೆ ಇಳಿಸಿದಾಗ ಅಧಿಕಾರ ಎನ್ನುವುದು ಒಪ್ಪಿಗೆಯ ವಸ್ತುವಲ್ಲ. ಸ್ವಾತಂತ್ರ್ಯದ ತ್ಯಾಗವೂ ಅಲ್ಲ, ಯಾವುದೇ ಸೀಮಿತ ವ್ಯಕ್ತಿಗೆ ಅಥವಾ ಗುಂಪಿಗೆ ಭಾಷಾಂತರಿಸಿದ ಹಕ್ಕುಗಳು ಅಥವಾ ಅಧಿಕಾರವಲ್ಲ. ಅಧಿಕಾರ ಸಂಬಂಧಗಳು ಒಂದು ವಿಧವಾದ ಕ್ರಿಯೆಯಾಗಿದ್ದು ಅದು ನೇರವಾಗಿ, ಅಥವಾ ಪರೋಕ್ಷವಾಗಿ ಇನ್ನೊಬ್ಬರ ಮೇಲೆ ತೀರಿಸಿಕೊಳ್ಳುವುದು, ಪ್ರವಹಿಸುವುದಿಲ್ಲ. ಬದಲಾಗಿ ಅದು ವ್ಯಕ್ತಿಯೊಬ್ಬನ ಕ್ರಿಯೆಯ ಮೇಲೆ ವರ್ತಿಸುತ್ತದೆ. ಎರಡು ಅಂಶಗಳಿಂದ ಇದನ್ನು ಅರ್ಥೈಸಿಕೊಳ್ಳಬಹುದಾಗಿದೆ. 1. ಯಾರ ಮೇಲೆ ಅಧಿಕಾರ ಚಲಾವಣೆಯಾಗಿದೆಯೊ ಆತನನ್ನು Subject ಎಂದು ಗುರುತಿಸಲ್ಪಟ್ಟು, ಆತ ಪ್ರತಿಕ್ರಿಯಿಸುತ್ತಾನೆ ಮತ್ತು ಕ್ರಿಯಾಶೀಲನಾಗುತ್ತಾನೆ. 2. ಅಧಿಕಾರ ಸಂಬಂಧಗಳನ್ನು ಎದುರಿಸುವಾಗ ವಿವಿಧ ಪ್ರತಿಕ್ರಿಯೆಗಳು, ಪ್ರತ್ಯುತ್ತರಗಳು ತೆರೆದುಕೊಳ್ಳುತ್ತವೆ. ಅಧಿಕಾರದ ಚಲಾವಣೆ ಒಂದು ಸಾಧ್ಯತೆ ಅಥವಾ ಸಂಭವ. ಹಲವಾರು ಅವಕಾಶಗಳ ನಿರ್ವಹಣೆ. ಇಬ್ಬರು ಎದುರಾಳಿಗಳ ನಡುವಿನ ಸಂಘರ್ಷಕ್ಕಿಂತ, ವ್ಯಕ್ತಿಯ ಅಥವಾ ಗುಂಪುಗಳನ್ನು ಹೇಗೆ ನಿರ್ದೇಶಿಸುತ್ತಾರೆನ್ನುವುದನ್ನು ಅಧಿಕಾರ ಎನ್ನುತ್ತೇವೆ. ಅಧಿಕಾರದಲ್ಲಿ ನ್ಯಾಯಬದ್ಧವಾಗಿ ರೂಪುಗೊಂಡ ರಾಜಕೀಯ ಹಾಗೂ ಆರ್ಥಿಕ ಸಂಸ್ಥೆಗಳು, ಅಂಗಗಳು ಮಾತ್ರವಲ್ಲದೆ, ವ್ಯಕ್ತಿಯೊಬ್ಬನ ಸಾಧ್ಯವಿರುವ, ಅವಕಾಶವಿರುವ ಎಲ್ಲಾ ಕ್ರಿಯೆಗಳ ಮೇಲೆ ಕಾರ್ಯ ಮಾಡುವ ಎಲ್ಲಾ ವಿಧವಾದ ಕ್ರಿಯೆಗಳನ್ನು ಅಧಿಕಾರ ಸಂಬಂಧಗಳು ಎನ್ನುತ್ತೇವೆ. ವ್ಯಕ್ತಿಯೊಬ್ಬನ ಅಥವಾ ಗುಂಪಿನ ಕ್ರಿಯೆಗೆ ಸಾಧ್ಯವಿರುವ ಎಲ್ಲಾ ಪ್ರಕ್ರಿಯೆಗಳನ್ನು, ಎಲ್ಲಾ ಅವಕಾಶಗಳನ್ನು ನಿರ್ದೇಶಿಸುವ, ಆಡಳಿತ ನಡೆಸುವ ಅಥವಾ ವಿನ್ಯಾಸಗೊಳಿಸುವಿಕೆಯನ್ನು ಅಧಿಕಾರ ಸಂಬಂಧಗಳು ಎಂದು ಫುಕೊ ಗುರುತಿಸುತ್ತಾನೆ. ಅಧಿಕಾರ ಸಂಬಂಧಗಳ ಹಾಗೂ ತಿಕ್ಕಾಟದ ವಿನ್ಯಾಸಗಳ ನಡುವಿನ ಸಂಬಂಧಗಳನ್ನು ಎದುರಿಸುತ್ತಾ, ಅಧಿಕಾರ ಸಂಬಂಧಗಳ ಹೃದಯದಲ್ಲಿ ಹಠಮಾರಿತನ ಮತ್ತು ಅಧ್ಯಯನಗೊಳಪಡಲು ಇಚ್ಛಿಸದ ಮನಃಸ್ಥಿತಿ ಇರುತ್ತದೆ. ಪಲಾಯನ ಇಲ್ಲದ ಯಾವುದೇ ಅಧಿಕಾರ ಸಂಬಂಧ ಅಸ್ತಿತ್ವದಲ್ಲಿ ಇಲ್ಲ. ಹಾಗಾಗಿ ಯಾವುದೇ ಅಧಿಕಾರ ಸಂಬಂಧಗಳು ತಿಕ್ಕಾಟ ಅಥವಾ ಹೋರಾಟದ ವಿನ್ಯಾಸಗಳಾಗಿವೆ. ಪಲಾಯನ ಮತ್ತು ಹೊಸ ಅಧಿಕಾರ ಸಂಬಂಧಗಳ ನಡುವಿನ ಪ್ರತಿಯೊಂದು ಸಂಧಿಸುವಿಕೆಯಲ್ಲಿಯೂ ಹೊಸ ಅಧಿಕಾರ

ಸಂಬಂಧದ ಕನಸು ಇರುತ್ತವೆ. ಇಲ್ಲಿ ಪ್ರತಿಯೊಂದು ಸಂಧಿಸುವಿಕೆ ಕೂಡ ಗೆಲುವಿನ ಯೋಜನೆ ಮಾಡುತ್ತದೆ. ಹಾಗಾಗಿ ಒಂದು ಅಧಿಕಾರದ ಸಂಬಂಧ ಇಬ್ಬರು ವಿರೋಧಿಗಳ ನಡುವಿನ ಹೋರಾಟದಂತೆ. ಈ ಸಂಬಂಧದಲ್ಲಿ ಯಾವುದೇ ಸಂದರ್ಭದಲ್ಲಾದರೂ ಅಧಿಕಾರದ ಕಾರ್ಯಾಚರಣೆಯನ್ನು ಕಾರ್ಯರೂಪಕ್ಕೆ ತರಬಹದಾಗಿದೆ. ಹಾಗಾಗಿ ಪ್ರಭುತ್ವ ಅನ್ನುವುದು ಯಾವುದೇ ಸಾಮಾನ್ಯ ಅಧಿಕಾರದ ವಿನ್ಯಾಸವಾಗಿದೆ. ಒಂದು ಕೌಶಲ್ಯಯುಕ್ತವಾದ ಪರಿಸ್ಥಿತಿ ಕೂಡ ಆಗಿದೆ. ಫುಕೊ 'ಪ್ರಜೆಯನ್ನಾಗಿಸುವ ಐತಿಹಾಸಿಕ ವಿಧಾನಗಳನ್ನು' ತೋರಿಸಿಕೊಡುವ ಉದ್ದೇಶ ಹೊಂದಿದ್ದಾನೆ. ಮೂರು ವಿಧಾನಗಳಿಂದ ವ್ಯಕ್ತಿಯೊಬ್ಬನನ್ನು ಪ್ರಜೆಯನ್ನಾಗಿಸ ಬಹುದಾಗಿದೆ. ಅವುಗಳಾವುವೆಂದರೆ1. ಅನ್ವೇಷಣಾ ಮಾರ್ಗಗಳು ವ್ಯಕ್ತಿಯ ಅಳತೆ, ವಸ್ತುನಿಷ್ಠತೆಯ ಮಾಪನಗಳು. 2. ವ್ಯಕ್ತಿಯೊಬ್ಬನನ್ನು ಹಲವಾರು 'ಲಕ್ಷಣಗಳೆಂದು' ವರ್ಗೀಕರಿಸುವ ಅಥವಾ ವಿಭಾಗಿಸುವ ಅಭ್ಯಾಸಗಳು. 3. ವ್ಯಕ್ತಿಗಳು ತಮ್ಮಿಂದ ತಾವೇ ಪ್ರಜೆಗಳಾಗಿ ಬದಲಾಯಿಸಿಕೊಳ್ಳುವ ವಿಧಾನಗಳು.

ಅಧಿಕಾರವು ಕ್ರಿಯೆಯಲ್ಲಿ ಮಾತ್ರವೆ ಅಸ್ತಿತ್ವದಲ್ಲಿರುತ್ತದೆ. ಅದು ಒಪ್ಪಿಗೆಯಲ್ಲಿ ಹುದುಗಿರುವುದಿಲ್ಲ. ಹಾಗಾಗಿ ಅಧಿಕಾರ ತನ್ನ ಅಧೀನದಲ್ಲಿರುವವನ ಮುಂದೆ ನೇರವಾಗಿ ಕಾರ್ಯ ಮಾಡುವುದಿಲ್ಲ. ಅದು ಬೇರೆಯವರ ಕ್ರಿಯೆಗಳ ಮೇಲೆ ಪರಿಣಾಮ ಬೀರಲು ಕ್ರಿಯಾಶೀಲವಾಗಿರುತ್ತದೆ. ಅಧಿಕಾರ ಕ್ರೂರತನ ಅಲ್ಲ, ಆದರೂ ಅಧಿಕಾರ ಕ್ರಿಯಾಶೀಲವಾಗಲು ಕ್ರೂರತನವನ್ನು ಬಳಸಬಹುದು ಹಾಗಾಗಿ ಅಧಿಕಾರವೆನ್ನುವುದು. ಒಂದು ಸಂಘರ್ಷ, ಒಂದು ಸಂಪೂರ್ಣ ಕ್ರಿಯೆಗಳ ವಿನ್ಯಾಸವಾಗಿದ್ದು, ಬೇರೆಯವರ ಕ್ರಿಯೆಗಳ ಮೇಲೆ ಪ್ರಭಾವ ಬೀರುವಂಥದ್ದು ಆಗಿ, ಪ್ರಚೋದನಾಕಾರಿಯಾಗುತ್ತದೆ; ಆಕರ್ಷಿಸುತ್ತದೆ ಮತ್ತು ಬಲಾತ್ಕರಿಸುತ್ತದೆ. ಅದು ಕ್ರಿಯೆಯೆನ್ನು ಕಷ್ಟವಾಗಿಸಬಹುದು ಅಥವಾ ಸುಲಭವಾಗಿಸಬಹುದು. ಕೆಲವು ಸಂದರ್ಭದಲ್ಲಿ ಅದು ನಿರ್ಬಂಧಿಸಬಹುದು ಅಥವಾ ನಿಷೇಧಿಸಬಹುದು. ಪ್ರಜೆಯೊಬ್ಬನ ಕ್ರಿಯೆಯ ಮೇಲೆ ಕೆಲಸ ಮಾಡುವ ವಿಧಾನ. ಬೇರೆಯವರ ಕ್ರಿಯೆಗಳ ಮೇಲೆ ಪ್ರಭಾವಿಸುವ ಕ್ರಿಯೆಗಳ ಸರಮಾಲೆ. ಬೇರೆಯವರ ಮೇಲೆ ಪ್ರಭಾವ ಬೀರಲೆಂದು ಮಾಡಿಕೊಂಡಿರುವ ಕ್ರಿಯೆಗಳ ವ್ಯವಸ್ಥೆ. (A set of actions upon others actions) ಹಾಗಾಗಿ ಅಧಿಕಾರದ ಚಲಾವಣೆಗೆ, ವ್ಯಕ್ತಿಗಳ ಮೇಲೆ ಪ್ರಭಾವ ಬೀರುವಂತೆ ಮಾಡಲು ಸರ್ಕಾರದ ಅಸ್ತಿತ್ವ ಬೇಕಾಗುತ್ತದೆ. ಇಂತಹ ಸರ್ಕಾರಗಳು ವ್ಯಕ್ತಿಗಳಿಗೆ ಇರುವ ಅಥವಾ ಲಭ್ಯವಿರುವ ಆಯ್ಕೆಗಳನ್ನು ವಿನ್ಯಾಸಗೊಳಿಸುವುದು ಅಥವಾ ರಚನೆಗೊಳಿಸುವುದು. ವ್ಯಕ್ತಿಗಳ ಕ್ರಿಯೆಗಳ ಮೇಲಿರುವ ಕ್ರಿಯೆಗಳ

ನಡುವಿನ ಆಟದಲ್ಲಿ ಮಾರ್ಗದರ್ಶಿಯಾಗಿ ಸರ್ಕಾರ ಇರಲೇಬೇಕಾದರೆ, ಒಂದು ಅಂಶ ಇರಲೇಬೇಕಾಗುತ್ತದೆ. ಆ ಅಂಶ ಯಾವುದೆಂದರೆ ಸ್ವತಂತ್ರ ಅಧಿಕಾರವನ್ನು ಸ್ವತಂತ್ರ ವ್ಯಕ್ತಿಯೊಬ್ಬನ ಮೇಲೆ ಮಾತ್ರವೇ ಸ್ಥಾಪಿಸಲಾಗುತ್ತದೆ. ದಾಸ್ಯದಲ್ಲಿರುವ ವ್ಯಕ್ತಿಯೊಬ್ಬನ ಮೇಲೆ ಅಧಿಕಾರ ಚಲಾಯಿಸಲಾಗುವುದಿಲ್ಲ. ಏಕೆಂದರೆ ಯಾವುದೇ ಕ್ರಿಯೆಯಿಂದ ಪ್ರಭಾವಿತನಾಗಿ ಪ್ರತಿಕ್ರಿಯೆ ಮಾಡಲು, ಆತನಿಗೆ ಸಾಧ್ಯವಿಲ್ಲ, ಏಕೆಂದರೆ ಅವನು ತನ್ನ ಸಂಪೂರ್ಣ ಸ್ವಾತಂತ್ರ್ಯವನ್ನು ಕಳೆದುಕೊಂಡಿರುತ್ತಾನೆ. ಹಾಗಾಗಿ ಅಧಿಕಾರ ಮತ್ತು ದಾಸ್ಯ ಪ್ರತ್ಯೇಕ. ಅವರೆಡರ ನಡುವೆ ನಿರಂತರ ಹೋರಾಟವಿದೆ. ಅಧಿಕಾರವಿದ್ದಲ್ಲಿ ದಾಸ್ಯವಿರುವುದಿಲ್ಲ. ದಾಸ್ಯವಿದ್ದಲ್ಲಿ ಅಧಿಕಾರವಿರುವುದಿಲ್ಲ. ಅಧಿಕಾರವನ್ನು ವ್ಯಾಖ್ಯಾನಿಸಲು, ವಿಶ್ಲೇಷಿಸಲು, ನಿಶ್ಚಿತ ಸಂಸ್ಥೆಗಳ (ಸ್ಕೂಲು, ಆಸ್ಪತ್ರೆ, ಹುಚ್ಚಾಸ್ಪತ್ರೆ, ಅನಾಥಾಲಯಗಳ) ಮೇಲೆ ಗಮನವನ್ನು ಕೇಂದ್ರೀಕರಿಸಬೇಕಾಗುತ್ತದೆ. ಸಂಸ್ಥೆಗಳಿಂದ ಅಧಿಕಾರ ಹೊರಬರುತ್ತಿರುತ್ತದೆ ಎಂದು ತೀರ್ಮಾನಕ್ಕೆ ಬರುವುದರಲ್ಲಿ ಕೆಲವು ಸಮಸ್ಯೆಗಳಿವೆ ಎನ್ನುತ್ತಾನೆ ಫುಕೊ. ಹಾಗಾಗಿ ಅಧಿಕಾರ ಸಂಬಂಧಗಳು ಚಲಾವಣೆಯ ಹಂತ ಸಂಸ್ಥೆಗಳಲ್ಲಿ ಇದೆ. ಆದರೂ, ಅದರ ಹುಟ್ಟು ಸಂಸ್ಥೆಗಳಿಂದ ಹೊರಗಿರುತ್ತದೆ. ಹಾಗಾಗಿ ಅಧಿಕಾರ ಸಂಬಂಧಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಆಳವಾಗಿ ಹುದುಗಿ ಹೋಗಿದೆ. ಹಾಗೂ ಮೇಲೆ ಕಾಣುವ ರಾಜಕೀಯ ಪದರದ ಮೇಲಲ್ಲ. ಅಧಿಕಾರ ಸಂಬಂಧಗಳಿಲ್ಲದ ಸಮಾಜವಿಲ್ಲ ಹಾಗೂ, ಸಮಾಜದಲ್ಲಿ ಬದುಕಲು ಬೇರೆಯವರ ಕ್ರಿಯೆಗಳು ನಮ್ಮ ಕ್ರಿಯೆಗಳಲ್ಲಿ ಸಾಧ್ಯವಾದರೆ ಮಾತ್ರ ಬದುಕಲು ಸಾಧ್ಯ. ಆಳವಾಗಿ ಬೇರೂರಿರುವ ಸ್ವಭಾವ ಹೊಂದಿರುವ ಅಧಿಕಾರ ಸಂಬಂಧಗಳಿಂದ ಹೊರಬರುವ ತಿಕ್ಕಾಟ, ಘರ್ಷಣೆಯನ್ನು ಅರ್ಥೈಸಿಕೊಳ್ಳಲು ಐದು ಅಂಶಗಳನ್ನು ಗುರುತಿಸುತ್ತಾನೆ: 1. ವ್ಯತ್ಯಾಸಗಳ ವ್ಯವಸ್ಥೆ, ಅಧಿಕಾರ ಸಂಬಂಧಗಳಿಂದ ಮಾಡಲ್ಪಟ್ಟ ವ್ಯತ್ಯಾಸಗಳು. 2. ವ್ಯಕ್ತಿಗಳ ಮೇಲೆ ಪ್ರಭಾವಿಸಲು ಮಾಡಿಕೊಂಡ ಕ್ರಿಯೆಗಳಿಂದ ಸಾಧಿಸಲಾದ ಉದ್ದೇಶಗಳು. 3. ಅಧಿಕಾರ ಸಂಬಂಧಗಳನ್ನು ಸ್ಥಾಪಿಸಲು ಹಾಕಿಕೊಂಡ ಮಾರ್ಗಗಳು. 4. ಸಾಂಸ್ಥೀಕರಣದ ವಿಧಾನ. 5. ತೆಗೆದುಕೊಂಡ ಮಾರ್ಗಗಳ ಯುಕ್ತಾಯುಕ್ತತೆ ಮತ್ತು ಉಪಾಯ. ಯಾವುದೇ ಅಧಿಕಾರ ಸಂಬಂಧವೂ ಪಲಾಯನ ಅಥವಾ ತಪ್ಪಿಸಿಕೊಳ್ಳುವ ಮಾರ್ಗವಿಲ್ಲದೆ ಇಲ್ಲ. ಪ್ರತಿಯೊಂದು ಅಧಿಕಾರ ಸಂಬಂಧದಲ್ಲಿಯೂ ಹೋರಾಟದ ಯೋಜನೆ ಇದ್ದೇ ಇರುತ್ತದೆ ಮತ್ತು ಇಂತಹ ಹೋರಾಟದಲ್ಲಿ ಎರಡು ಬಲಗಳು ತಮ್ಮ ತಮ್ಮ ಸ್ವಭಾವಗಳನ್ನು ಕಳೆದುಕೊಳ್ಳುವುದಿಲ್ಲ ಹಾಗೂ ಅಂತಿಮವಾಗಿ ಶಾಶ್ವತ ನಿಯಂತ್ರಣ ಹಾಗೂ ಅವಕಾಶವಿರುವ ಪರಾವರ್ತನವಾಗುತ್ತದೆ. ಫುಕೊನ ಪ್ರಕಾರ ಆಡಳಿತವೆಂದರೆ ತರಬೇತುಗೊಳಿಸುವುದು, ಆಕಾರವನ್ನು ನೀಡುವುದು, ಒಂದು ಗುರಿಯ ಕಡೆಗೆ ದಿಕ್ಕು ತೋರಿಸುವುದು ಎಂದರ್ಥ.

ಪ್ರಜಾಪ್ರಭುತ್ವದಲ್ಲಿ ಶಿಸ್ತು ಶಿಕ್ಷೆಯನ್ನು ವಿಧಿಸುತ್ತದೆ. ಅಪರಾಧಿಯೊಬ್ಬನನ್ನು ಸಾರ್ವಜನಿಕರಿಂದ ದೂರವಿಡುವುದು ಸಾರ್ವಜನಿಕವಾಗಿ ಸಾಯಿಸುವುದಕ್ಕಿಂತ ಹೆಚ್ಚಿನ ನೋವು ನೀಡುತ್ತದೆ. ರಾಜನ ಆಡಳಿತದ ಅಧಿಕಾರ ಮೇಲಿಂದ ಕೆಳಗೆ ಹರಡಿದೆ. ರಾಜನ ಆಡಳಿತದ ಶಿಕ್ಷೆಯಲ್ಲಿ, ಮನುಷ್ಯನ ಭೌತಿಕ ದೇಹದ ಮೇಲೆ ಪ್ರಾಮುಖ್ಯತೆ ಕೊಡಲಾಗುತ್ತಿತ್ತು. ಈ ರೀತಿ ಅಧಿಕಾರದಲ್ಲಿ ಅಧಿಕಾರ ಪರಿಭಾಷಾ ಕೋಶ ಸಮಯ ಮತ್ತು ಶ್ರಮದ ಆವಶ್ಯಕತೆ ಇದೆ. ಆದರೆ ಆಧುನಿಕ ಶಿಕ್ಷೆಯಲ್ಲಿ ಅಧಿಕಾರವನ್ನು ನಿರಂತರ ಮೇಲ್ವಿಚಾರಣೆ ಮಾಡಲಾಗುತ್ತದೆ. ಶಿಸ್ತು ಎನ್ನುವುದು ಒಂದು ವಿಧವಾದ ಸ್ವಯಂ ನಿಯಂತ್ರಣವಾಗಿದ್ದು, ಸಂಸ್ಥೆಗಳಿಂದ ಉತ್ತೇಜಿಸಲ್ಪಡುತ್ತದೆ. ಹಾಗೂ ಆಧುನಿಕ ಸಮಾಜಗಳ ನಿಯಮವಾಗಿದೆ. ಇಂಥ ಅಧಿಕಾರವು ವ್ಯಕ್ತಿಗಳನ್ನು ಬೇರ್ಪಡಿಸುತ್ತದೆ, ನಿಗ್ರಹಿಸುತ್ತದೆ, ಸಮಾಧಾನಪಡಿಸುತ್ತದೆ, ಮುಖವಾಡ ಹಾಕುತ್ತದೆ, ರಹಸ್ಯವಾಗಿ ಇಡುತ್ತದೆ. ಹಾಗೂ ತನ್ನಿಂದ ಜನರನ್ನು ದೂರ ಒಯ್ಯುತ್ತದೆ. ಹಾಗಾಗಿ ಅಧಿಕಾರವು ವಾಸ್ತವವನ್ನು, ಸತ್ಯದ ರೂಢಿಗಳನ್ನು ಅಭ್ಯಾಸಗಳನ್ನು, ವಸ್ತುಗಳನ್ನು ತಯಾರಿಸುತ್ತದೆ ಮತ್ತು ಸೃಷ್ಟಿಸುತ್ತದೆ. ಸಂಸ್ಥೆಗಳು ಕೆಲವು ಕಾರ್ಯ ವಿಧಾನಗಳಿಂದ ಹಾಗೂ ತಂತ್ರಗಳಿಂದ, ಅಧಿಕಾರದ ಚಲಾವಣೆಯನ್ನು ತರುತ್ತವೆ. ಉದಾಹರಣೆಗೆ ಇಂತಹ ಸಂಸ್ಥೆಗಳು ಆಸ್ಪತ್ರೆ, ವಿಶ್ವವಿದ್ಯಾಲಯ, ಜೈಲು, ನ್ಯಾಯಾಲಯ ಆಗಬಹುದು. ಶಿಸ್ತು ಒಂದು ವಿಧವಾದ ನಿಯಂತ್ರಣವಾಗಿದ್ದು, ಪ್ರತಿಯೊಬ್ಬ ವ್ಯಕ್ತಿಯೂ ಇದನ್ನು ಆಂತರಿಕರಣಗೊಳಿಸಿಕೊಳ್ಳುತ್ತಾನೆ. ಆತನ ಭಂಗಿ, ನಿಲುವು, ಕಾರ್ಯಗಳು, ಆಸೆಗಳು, ಏರಿಬರುವ ಭಾವನೆಗಳು, ಇಂತಹ ಶಿಸ್ತಿನ ಒತ್ತಡದಿಂದ ನಿಯಂತ್ರಣ ಬೆಳೆಸಿಕೊಂಡಂಥವುಗಳಾಗಿರುತ್ತವೆ. ವ್ಯಕ್ತಿಯೊಬ್ಬನನ್ನು ಪ್ರಜೆ ಅಥವ subject ಆಗಿ ಬದಲಾಯಿಸುತ್ತವೆ. ಫುಕೊನ ಪ್ರಕಾರ ಶಿಸ್ತು ಎನ್ನುವುದು ಒಂದು ಗುಂಪು ತಂತ್ರಗಾರಿಕೆ. ಕೌಶಲ್ಯ, ಕಾರ್ಯವಿಧಾನ, ನಡತೆಗಳಾಗಿದ್ದು, ಸಂಸ್ಥೆಗಳ ಪರಿಸ್ಥಿತಿಯಲ್ಲಿ ಹೊಂದಿಸಿಕೊಂಡಿರುತ್ತವೆ. ಇವು ಸಂಸ್ಥೆಗಳಲ್ಲಿ ವಾಸಮಾಡಿರುವ ವ್ಯಕ್ತಿಗಳ ಯೋಚನಾ ಕ್ರಮದಲ್ಲಿ, ನಡತೆಯಲ್ಲಿ ಹೊಕ್ಕಿರುತ್ತವೆ. ನಾಲ್ಕು ವಿಶಿಷ್ಟ ವಿಧಾನಗಳಲ್ಲಿ ವ್ಯಕ್ತಿಗಳ ಮೇಲೆ ಈ ಶಿಸ್ತು ಆಕ್ರಮಣ ನಡೆಸುತ್ತದೆ: 1) ವ್ಯಕ್ತಿಯ ಬಾಹ್ಯ ವಾಸ್ತವ್ಯದ ಮುಖಾಂತರ, ತನ್ನ ಜೊತೆಗಾರರಿಂದ ದೂರಮಾಡುವುದು, ವ್ಯಕ್ತಿಯೊಬ್ಬನಿಗೆ ತನ್ನ ಸ್ಥಾನದ ಪರಿಚಯ ಮಾಡಿಕೊಡುವುದು ಇತ್ಯಾದಿ. 2) ದಿನನಿತ್ಯದ ಕಾರ್ಯ ಚಟುವಟಿಕೆಗಳನ್ನು ದೇಹಕ್ಕೆ ನಿಗದಿತ ಸಮಯದಲ್ಲಿ ಮಾಡಲು ಹೇಳಿದಾಗ ಸಮಯಕ್ಕೆ ಅನುಗುಣವಾಗಿ ದೇಹವನ್ನು ಹೊಂದಿಸಿರುವುದು. 3) ಶಿಸ್ತಿನ ವ್ಯಕ್ತಿಯೊಬ್ಬನು ಶಿಕ್ಷಣದ ಹಂತಗಳನ್ನು ವಿನ್ಯಾಸಗೊಳಿಸುತ್ತದೆ, ಶಿಸ್ತಿನ ಅಧಿಕಾರದಿಂದ ಗುರು ಮತ್ತು ಶಿಷ್ಯರ ನಡುವೆ ಒಂದು ರೀತಿಯ ಸಂಬಂಧಗಳನ್ನು ಅಭಿವೃದ್ಧಿಪಡಿಸುತ್ತದೆ. ವ್ಯಕ್ತಿ ವ್ಯಕ್ತಿಗಳ ನಡುವೆ

ವ್ಯತ್ಯಾಸಗಳನ್ನು ಹಾಗೂ ವಿವಿಧ ಕೌಶಲ್ಯಗಳನ್ನು ಗುರುತಿಸಿ ಅವರ ನಡುವೆ ಬೇಧ-ಭಾವಗಳನ್ನು ಅಭಿವೃದ್ಧಿ ಪಡಿಸುತ್ತದೆ. 4) ಶಿಸ್ತು ಸಾಮಾನ್ಯ ಅನ್ಯೋನ್ಯತೆ (Coordination) ತರುತ್ತದೆ. ಈ ಎಲ್ಲವುಗಳ ಉದ್ದೇಶವು ನಿಯಮಿತತೆಯನ್ನು ತರುವುದು ಆಗಿದೆ. ವ್ಯಕ್ತಿಯೊಬ್ಬನ ಆತ್ಮವನ್ನು ಆಂತರಿಕ ಶಿಸ್ತಿಗೆ ತರುವುದರಿಂದ ಹಲವಾರು ರೀತಿಯ ವ್ಯಕ್ತಿತ್ವಗಳು ನಿರ್ಮಾಣವಾಗುತ್ತವೆ. ಅಧಿಕಾರದ ಪ್ರಮುಖ ಪರಿಣಾಮ, ಕೆಲವು ದೇಹಗಳ, ಕೆಲವು ನಿಲುವುಗಳ, ಕೆಲವು ಆಸೆಗಳನ್ನು ಪ್ರಮುಖವಾಗಿ ಗುರುತಿಸಿ ವ್ಯಕ್ತಿಗಳ ಮೇಲೆ ಸ್ಥಾಪಿತವಾಗುತ್ತವೆ. ಈ ಶಿಸ್ತಿನ ವಿನ್ಯಾಸವನ್ನು ಫುಕೊ Panopticon ಎನ್ನುತ್ತಾನೆ.[5]

3.3: **ವಸಾಹತುಶಾಹಿ ಪ್ರಭುತ್ವ ಕನ್ನಡದಲ್ಲಿ ಉಂಟುಮಾಡಿರುವ ಬಿಕ್ಕಟ್ಟು:**

ವಸಾಹತುಶಾಹಿ ಸಂದರ್ಭದಲ್ಲಿ ರಾಷ್ಟ್ರ-ಪ್ರಭುತ್ವ ಮೈದಾಳುತ್ತದೆ. ಅದಕ್ಕೆ ಆಧುನಿಕ ವಿಜ್ಞಾನವೂ ಸಹ ಶಕ್ತಿ ತುಂಬುತ್ತದೆ. ಇಂತಹ ರಾಷ್ಟ್ರ-ಪ್ರಭುತ್ವದ ಲಕ್ಷಣಗಳು ಕನ್ನಡದಲ್ಲೂ ನಿಧಾನವಾಗಿ ತಲೆ ಎತ್ತುತ್ತವೆ. ಈ ಪ್ರಭುತ್ವ ತನ್ನ ಉಳಿವಿಗಾಗಿ ತನ್ನದೇ ಆದ ಕನ್ನಡವನ್ನು ಸಂಘಟಿಸಿಕೊಳ್ಳುತ್ತದೆ. ಉದಾಹರಣೆಗೆ, **ಕವಿರಾಜಮಾರ್ಗ**ವನ್ನು 1865ರಲ್ಲಿ ಮರು ಉತ್ಪಾದಿಸಲಾಗುತ್ತದೆ. ಅದರ ಮುಖ್ಯ ಉದ್ದೇಶ **ಹೆಚ್.ಎಸ್.ರಾಘವೇಂದ್ರರಾವ್** ಹೇಳುವಂತೆ, 'ರಾಜಕೀಯ ಕೇಂದ್ರೀಕರಣದ ಮಾನದಂಡಗಳಾಗಿ ಭಾಷೆ, ಜನ ಮತ್ತು ರಾಜ-ಶಕ್ತಿಗಳೆಂಬ ಸಂಗತಿಗಳನ್ನು ಸ್ಥಾಪಿಸುವುದು ಕವಿರಾಜಮಾರ್ಗವನ್ನು ಒಟ್ಟಾಗಿ ರಚಿಸಿದ ನೃಪತುಂಗ ಮತ್ತು ಶ್ರೀವಿಜಯರ ಉದ್ದೇಶವಾಗಿತ್ತು'.[6] ಅಲ್ಲದೆ, ಕವಿರಾಜ ಮಾರ್ಗ ದೇಸೀ ಮಾದರಿಗಳನ್ನು ಪ್ರಭುತ್ವದ ಮಾದರಿಗೆ ಒತ್ತೆ ಇಟ್ಟಿತ್ತೆಂದು ಡಿ.ಆರ್. ನಾಗರಾಜ್ ಅಭಿಪ್ರಾಯ ಪಡುತ್ತಾರೆ. ಅವರ ಪ್ರಕಾರ ಕವಿರಾಜ ಮಾರ್ಗವು ಪ್ರಭುತ್ವದ ಅಧಿಕಾರ ಕಟ್ಟಳೆಗಳನ್ನು ಮೀರಲಾಗಲಿಲ್ಲ. ಪ್ರಭುತ್ವದ ರಾಜಕೀಯವನ್ನು ಕವಿರಾಜ ಮಾರ್ಗದ ಕರ್ತೃವು ತಿರಸ್ಕರಿಸಲಾಗಲಿಲ್ಲ.[7] ಇಂತಹ ಕನ್ನಡ, ವಸಾಹತುಶಾಹಿ ಸನ್ನಿವೇಶದಲ್ಲಿ ಸಂಸ್ಕೃತವನ್ನು ಒಳಗೊಂಡಂತೆ **ಇಂಡೋ-ಯೂರೋಪಿಯನ್ ಭಾಷಾ-ಪರಿವಾರದ** ಹಿನ್ನೆಲೆಯಲ್ಲಿ ಇಂಗ್ಲಿಶ್ ಮೂಲಕ ಕಟ್ಟಲಾಗುತ್ತದೆ ಎನ್ನುವುದು ಮುಖ್ಯವಾದುದು. ಹೀಗೆ ಕಟ್ಟಿದ ಕನ್ನಡದಲ್ಲಿ ಇಂದಿಗೂ

---

[5] ಕೆ.ಬಿ.ಜ್ಯೋತಿ, ಅಧಿಕಾರ, ಪರಿಭಾಷಾಕೋಶ, ಕುವೆಂಪು ಭಾಷಾ ಭಾರತಿ ಪುಸ್ತಕ ಪ್ರಾಧಿಕಾರ, 2015, ಪು. 1–8

[6] ನೋಡಿ, ಜನವಾಹಿನಿ, ಬಹುಮುಖಿ, ಜುಲೈ 22, 2001

[7] ಉದ್ಧೃತ, ಕನ್ನಡ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998, ಪು.14.

ಜನಸತ್ತೆಯ ನುಡಿಯು ಸಿಲುಕಿದೆ. ಇದನ್ನು ತಿಳಿಯಲು ಕೆ. ವಿ. ನಾರಾಯಣರವರ ಬರೆಹವನ್ನು ಗಮನಿಸಬಹುದು – "ಸಂಬಂಧದ ಹೊಸ ವಿನ್ಯಾಸ ಎರಡು ಭಾಷೆಗಳ ನಡುವೆ ಇರುವ ಸಂಬಂಧದ ಸ್ವರೂಪವನ್ನು ತಿಳಿಯಲು ಹಲವು ವಿಧಾನಗಳಿವೆ. ಎರಡೂ ಭಾಷೆಗಳನ್ನು ಆಡುವ ಜನ ಸಮುದಾಯಗಳು ಭೌಗೋಳಿಕವಾಗಿ ಸಮೀಪವಾಗಿದ್ದಾಗ ಅವುಗಳ ನಡುವೆ ಏರ್ಪಡುವ ಸಂಬಂಧ ಒಂದು ಬಗೆಯದ್ದು. ಆ ಎರಡೂ ಭಾಷೆಗಳ ನಡುವೆ ಇರುವ ಅಧಿಕಾರದ ಸಂಬಂಧಗಳಲ್ಲಿ ಸಮಾನತೆ ಇರುವಾಗ ಭೌಗೋಳಿಕ ಸಾಮೀಪ್ಯವಿಲ್ಲದಿದ್ದಾಗಲೂ ಉಂಟಾಗುವ ಸಂಬಂಧ ಇನ್ನೊಂದು ಬಗೆಯದ್ದು. ಅವುಗಳಲ್ಲಿ ಒಂದು ಭಾಷೆ ಇನ್ನೊಂದು ಭಾಷೆಗಿಂತ ಹೆಚ್ಚಿನ ರಾಜಕೀಯ ಪ್ರಾಬಲ್ಯವನ್ನು ಹೊಂದಿದ್ದಾಗ ಏರ್ಪಡುವ ಸಂಬಂಧ ಮತ್ತೊಂದು ಬಗೆಯಲ್ಲಿ ಇರುತ್ತದೆ. ಕನ್ನಡ ಮತ್ತು ಇಂಗ್ಲಿಶ್ ನಡುವೆ ಇರುವ ಸಂಬಂಧವನ್ನು ನಾವು ಈ ಸಂಕೀರ್ಣ ವ್ಯವಸ್ಥೆಯಲ್ಲಿ ಅರಿತುಕೊಳ್ಳಬೇಕಾಗಿದೆ. ಈ ಎರಡು ಭಾಷೆಗಳ ಮಧ್ಯೆ ಏರ್ಪಟ್ಟಿರುವ ಸಂಬಂಧ ಚಾರಿತ್ರಿಕವಾಗಿ ಬದಲಾಗುತ್ತ ಬಂದಿರುವುದನ್ನು ಕೂಡ ಮರೆಯುವಂತಿಲ್ಲ.

ಇಂಗ್ಲಿಶ್ ಭಾಷೆಯನ್ನು ಭಾರತೀಯರಿಗೆ ಕಲಿಸುವ ಅತ್ಯಂತ ಎಚ್ಚರದ ನಿರ್ಣಯವನ್ನು ಬ್ರಿಟಿಶ್ ಆಡಳಿತಗಾರರು ತೆಗೆದುಕೊಂಡಾಗ ಅವರು ಮೇಲು ನೋಟಕ್ಕೆ ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಗಳಿಗೆ ಪರ್ಯಾಯವಾಗಿ ಇಂಗ್ಲಿಶ್ ಭಾಷೆಯನ್ನು ಭಾರತದಲ್ಲಿ ನೆಲೆಗೊಳಿಸುವ ಉದ್ದೇಶವನ್ನು ಹೊಂದಿದ್ದರು. ಆದರೆ ಇದು ಮತ್ತೊಂದು ಬಗೆಯ ಕ್ರಿಯಾವರ್ತಕ್ಕೆ ಕಾರಣವಾಯಿತು. ಆಡಳಿತ, ಶಿಕ್ಷಣ ಮತ್ತು ನ್ಯಾಯಾಂಗಗಳಲ್ಲಿ ಈ ಎರಡು ಅಭಿಜಾತ ಭಾಷೆಗಳ ಜಾಗದಲ್ಲಿ ಇಂಗ್ಲಿಶ್ ಭಾಷೆಗೂ ಒಂದು ಸಂಬಂಧ ಏರ್ಪಡಲು ಮೊದಲಾಯಿತು. ಕನ್ನಡವನ್ನೇ ಇಲ್ಲಿ ನಿದರ್ಶನವನ್ನಾಗಿ ನೋಡೋಣ. ಮದರಾಸ್ ಪ್ರೆಸಿಡೆನ್ಸಿಯ ಅಂತರ್ಗತವಾಗಿದ್ದ ಆದರೆ ರೆಸಿಡೆಂಟ್ ಒಬ್ಬರಿಂದ ಆಳ್ವಿಕೆಗೆ ಒಳಪಟ್ಟಿದ್ದ ಮೈಸೂರು ಸಂಸ್ಥಾನದಲ್ಲಿ ಆಡಳಿತಕ್ಕಾಗಿ ಅಥವಾ ಕನಿಷ್ಠ ಪತ್ರವ್ಯವಹಾರಕ್ಕಾಗಿ ಕನ್ನಡವನ್ನು ಬಳಸುವುದು ಅನಿವಾರ್ಯವಾಗಿತ್ತು. ಶಿಕ್ಷಣದ ವ್ಯಾಪಕತೆಯ ಹಿನ್ನೆಲೆಯಲ್ಲಿ ಇಂಗ್ಲಿಶ್ ಜೊತೆಯಲ್ಲಿ ಕನ್ನಡವನ್ನೂ ಶಾಲೆಗಳಲ್ಲಿ ಕಲಿಸುವ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಇವೆಲ್ಲವೂ ಇಂಗ್ಲಿಶ್ ಮತ್ತು ಕನ್ನಡಗಳ ನಡುವೆ ಸಂಪರ್ಕವೊಂದು ಏರ್ಪಡಲು ಕಾರಣವಾದವು. ಇದರ ಪರಿಣಾಮವಾಗಿ ಕನ್ನಡದ ಹೊಸ ಮಾದರಿ ವ್ಯಾಕರಣಗಳು ರಚನೆಯಾದವು. ಕನ್ನಡ ಮತ್ತು ಇಂಗ್ಲಿಶ್ ಅಥವಾ ಇಂಗ್ಲಿಶ್ ಮತ್ತು ಕನ್ನಡ ದ್ವಿಭಾಷಾ ನಿಘಂಟುಗಳು ನಿರ್ಮಾಣವಾಗತೊಡಗಿದವು.

ಈ ಎರಡೂ ಬಗೆಯ ಪ್ರಯತ್ನಗಳ ಹಿನ್ನೆಲೆಯಲ್ಲಿ ಇಂಗ್ಲಿಶ್ ಪರಾಮರ್ಶನ ಬಿಂದುವಾಗಿ ನಿಲ್ಲುತ್ತದೆ. ಆ ಪರಾಮರ್ಶನ ಬಿಂದುವಿಗೆ ಅನುಗುಣವಾಗಿ ಕನ್ನಡವನ್ನು ನೆಲೆಯಾಗಿಸುವ ಉದ್ದೇಶಗಳು ಈ ವ್ಯಾಕರಣ ಮತ್ತು ನಿಘಂಟುಗಳ ಹಿಂದೆ ಸ್ಪಷ್ಟವಾಗಿದೆ. ಆವರೆಗೆ ಕನ್ನಡ ವ್ಯಾಕರಣಗಳನ್ನು ರಚಿಸುವಾಗ ಸಂಸ್ಕೃತದ ಮಾದರಿಗಳನ್ನು ಅನುಸರಿಸಲಾಗುತ್ತಿತ್ತು. ಈಗ ಅದರ ಬದಲು ಲ್ಯಾಟಿನ್ ವ್ಯಾಕರಣದ ಪರಿಕಲ್ಪನೆಗಳು ಮುಂಚೂಣಿಗೆ ಬಂದವು, ಪರೋಕ್ಷವಾಗಿ ಇಂಗ್ಲಿಶ್ ಮಾದರಿಯಾಯಿತು. ಏಕೆಂದರೆ ಇಂಗ್ಲಿಶ್ ಭಾಂಶಿಕವಾಗಿ ಲ್ಯಾಟಿನ್ ಮಾದರಿಯನ್ನು ಅನುಸರಿಸುವ ಭಾಷೆಯಾಗಿದೆ. ನಿಘಂಟುಗಳ ರಚನೆಯಲ್ಲೂ ಇದೇ ವಿಧಾನ ಮೇಲುಗೈ ಪಡೆಯುತ್ತದೆ. ಆವರೆಗೂ ನಿಘಂಟುಗಳ ರಚನೆಗೆ ಅನುಸರಿಸಲಾಗುತ್ತಿದ್ದ ಮಾದರಿ ಮತ್ತು ವಿಧಾನವನ್ನು ಬದಲಿಸಿ ಯುರೋಪಿನ ಜ್ಞಾನೋದಯದ ಅನಂತರದಲ್ಲಿ ಆಕಾರ ಪಡೆದಿದ್ದ ಹೊಸ ಶಾಸ್ತ್ರೀಯ ವಿಧಾನಗಳು ಇಲ್ಲಿ ಚಲಾವಣೆಗೆ ಬಂದವು. ಇಲ್ಲಿಯೂ ಬರೆಹ ಭಾಷೆ ಮತ್ತು ಆಡು ಮಾತುಗಳೆರಡನ್ನೂ ಒಂದೇ ಚೌಕಟ್ಟಿನಲ್ಲಿಡುವ ಯತ್ನವೂ ಮೊದಲಾಯಿತು. ಕಿಟ್ಟೆಲ್ ತನ್ನ ನಿಘಂಟಿನಲ್ಲಿ ಹೀಗೆ ಕನ್ನಡದ ಮೌಖಿಕ ಆಕರಗಳಿಂದ ಅಗಾಧ ಪ್ರಮಾಣದ ಸಾಮಗ್ರಿಯನ್ನು ಸಂಗ್ರಹಿಸಿದ್ದನ್ನು ಉದಾಹರಣೆಯನ್ನಾಗಿ ನೋಡಬಹುದು. ಕನ್ನಡದ ವಿವಿಧ ಉಪಭಾಷಿಕ ರೂಪಗಳನ್ನು ದಾಖಲಿಸುತ್ತಲೇ ಅವುಗಳನ್ನು ಇಂಗ್ಲಿಶ್ ಪದಗಳ ಅರ್ಥಛಾಯೆಗೆ ಹೊಂದಿಸುವ ವಿಧಾನವನ್ನು ಈ ನಿಘಂಟುಕಾರರು ಗುರುತಿಸುತ್ತಾರೆ. ಹೀಗೆ ಕನ್ನಡದ ಪ್ರಮಾಣೀಕರಣಕ್ಕೆ ಮೊದಲ ಹೆಜ್ಜೆಯನ್ನಿಟ್ಟರು. ಅಲ್ಲದೆ ಹೀಗೆ ಪ್ರಮಾಣೀಕರಣಗೊಳ್ಳುವಾಗ ಇಂಗ್ಲಿಶ್ ಮಾದರಿಯನ್ನು ಅನುಸರಿಸುವ ಅಗತ್ಯವನ್ನೂ ಅವರು ಸ್ಪಷ್ಟಪಡಿಸಿದರು. ಇದೇ ಪರಿಸ್ಥಿತಿ ಇಪ್ಪತ್ತನೇ ಶತಮಾನದ ಮಧ್ಯ ಭಾಗದವರೆಗೂ ಮುಂದುವರೆಯುತ್ತಾ ಬಂದಿತು. ಕನ್ನಡ ಮಾತಾಡುತ್ತಿದ್ದ ವಿವಿಧ ಪ್ರದೇಶಗಳಲ್ಲಿ ಇಂಗ್ಲಿಶ್‌ನ ಪ್ರಭಾವ ಸಮಪ್ರಮಾಣದಲ್ಲಿ ಇರಲಿಲ್ಲ. ಅರಸರ ಆಳ್ವಿಕೆಯಲ್ಲಿದ್ದ ಪ್ರದೇಶದಲ್ಲಿ ಈ ಪ್ರಭಾವ ಅಧಿಕವಾಗಿದ್ದರೆ ನಿಜಾಮರ ಆಳ್ವಿಕೆಗೆ ಅಧೀನವಾಗಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತ್ಯಂತ ಕನಿಷ್ಠ ಪ್ರಮಾಣದಲ್ಲಿತ್ತು. ಮುಂಬಯಿ ಆಳ್ವಿಕೆಯ ಕರ್ನಾಟಕ ಪ್ರದೇಶ ಮತ್ತು ಕರಾವಳಿಯ ಪ್ರದೇಶಗಳಲ್ಲಿ ಇಂಗ್ಲಿಶ್ ಮತ್ತು ಕನ್ನಡಗಳ ಸಂಬಂಧ ಈ ಎರಡು ತುದಿಗಳ ನಡುವೆ ಇದ್ದಂತೆ ತೋರುತ್ತದೆ. ದೇಶೀಯ ಆಳ್ವಿಕೆ ಮೊದಲಾದ ಇಪ್ಪತ್ತನೆಯ ಶತಮಾನದ ಎರಡನೆಯ ಅರ್ಧದಲ್ಲಿ ಕನ್ನಡ ಮತ್ತು ಇಂಗ್ಲಿಶ್‌ಗಳ ನಡುವಣ ಸಂಬಂಧ ಬೇರೆಯ ನೆಲೆಗಳನ್ನು ತಲುಪುತ್ತವೆ. ಇದಕ್ಕೆ ಸ್ವಾಯತ್ತ ಆಳ್ವಿಕೆಯ ಕಾರಣಗಳಿರುವಂತೆ ಜಾಗತಿಕ ವಲಯದಲ್ಲಿ ನಡೆಯುತ್ತಿದ್ದ ಬದಲಾವಣೆಗಳೂ ಕಾರಣವಾಗುತ್ತವೆ. 1950ರ ರಾಜ್ಯಾಂಗವು 'ಕೆಲಕಾಲ'ದವರೆಗೆ ಇಂಗ್ಲಿಶ್ ಭಾಷೆಯನ್ನು ಅದು ಹೊಂದಿದ್ದ ಸ್ಥಾನದಲ್ಲೇ

ಮುಂದುವರೆಸಲು ಅವಕಾಶ ಕಲ್ಪಿಸಿತಷ್ಟೆ. ಇಂಗ್ಲಿಶಿಗೆ ಪರ್ಯಾಯವಾಗಿ ರಾಷ್ಟ್ರ ಮಟ್ಟದಲ್ಲಿ ಹಿಂದಿಯನ್ನು, ಪ್ರಾಂತ್ಯಗಳ ಮಟ್ಟದಲ್ಲಿ ಆಯಾ ಪ್ರಾಂತ್ಯಗಳ ಭಾಷೆಯನ್ನು ಕಲ್ಪಿಸಿಕೊಳ್ಳಲಾಗಿತ್ತು. ಇದರಿಂದ ಯಾವ ಸಂದರ್ಭಗಳು ಉಂಟಾಗಬಹುದು ಎಂಬುದನ್ನು ಆಗ ಇಡಿಯಾಗಿ ಊಹಿಸಲು ಅಂದಿನ ನಾಯಕರಿಗೆ ಸಾಧ್ಯವಾಗಲಿಲ್ಲ. ಅಥವಾ ಚಾರಿತ್ರಿಕವಾಗಿ ಮೈತಳೆಯುತ್ತಿದ್ದ ಹೊಸ ಸಾಮಾಜಿಕ ವಿನ್ಯಾಸಗಳು ಇಡೀ ಪರಿಸ್ಥಿತಿಗೆ ಬೇರೆಯೇ ತಿರುವನ್ನು ನೀಡಬಹುದೆಂದೂ ಆಗ ಊಹಿಸುವುದೂ ಸಾಧ್ಯವಿರಲಿಲ್ಲ. ಉದಾಹರಣೆಗೆ ರಾಜ್ಯ ಪುನರ್ವಿಂಗಡಣೆಗೆ ಭಾಷೆಯನ್ನು ಆಧಾರವಾಗಿ ಇರಿಸಿಕೊಳ್ಳುವ ನಿರ್ಣಯ ರಾಜ್ಯಾಂಗ ನಿರ್ಮಾಣದ ಅನಂತರ ಆಕಾರ ಪಡೆದದ್ದು ತಾನೆ. ರಾಜ್ಯಾಂಗವು ಇಂಗ್ಲಿಶಿಗೆ ಕಲ್ಪಿಸಿಕೊಟ್ಟಿದ್ದ 'ಕೆಲಕಾಲ'ದ ಅವಕಾಶ ಹಲವು ಕಾರಣಗಳಿಂದ ಮುಂದುವರೆಯುವ ಪರಿಸ್ಥಿತಿ ಉಂಟಾಯಿತು. ಈಗಲೂ ಈ ಇಬ್ಬಂದಿ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲ. ಕನ್ನಡದ ಜೊತೆಗೆ ಇಂಗ್ಲಿಶ್ ಹೊಂದಿರುವ ಸಂಬಂಧದ ಸ್ವರೂಪ ಮಾತ್ರ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಎರಡು ಮುಖ್ಯ ಬದಲಾವಣೆಗಳನ್ನು ಕಂಡಿದೆ. ಒಂದು: ಇಂಗ್ಲಿಶ್ ಭಾಷೆಯ ಸಾರ್ವಭೌಮತ್ವವನ್ನು ವಿರೋಧಿಸುವುದು ಅಥವಾ ಕನ್ನಡಕ್ಕೆ ಅಗತ್ಯವಾದ ಸ್ಥಾನಮಾನಗಳನ್ನು ಒದಗಿಸುವುದು. ಎರಡು: ಇಂಗ್ಲಿಶ್ ಜಾಗತಿಕ ಸನ್ನಿವೇಶದಲ್ಲಿ ಸಾಮಾಜಿಕ ಸಮಾನತೆಯ ಸಾಧನೆಗೆ ಅನಿವಾರ್ಯವೆಂದು ತಿಳಿಯುವುದು. ಈ ಎರಡು ಸನ್ನಿವೇಶಗಳಲ್ಲಿ ವಿರೋಧವಿರುವುದು ಎದ್ದುಕಾಣುವಂತಿದೆ. ಈ ನಿಲುವುಗಳು ಮೈತಳೆದು ಮುಪ್ಪಿಗೊಂಡ ಬಗೆಯನ್ನು ತಿಳಿಯುವುದು ಅಗತ್ಯವಾಗಿದೆ."[8]

ಹಾಗಾದರೆ ನಮಗೆ ಬೇಕಿರುವ ಇಂಗ್ಲಿಶ್ ಯಾವುದು? ಇಂತಹ ಇಂಗ್ಲಿಶ್‌ನ ಕುರಿತಂತೆ ನಡೆದಿರುವ ಪ್ರಯತ್ನಗಳೇನು ಎನ್ನುವಾಗ, ಅದಕ್ಕೆ ಕೆ.ವಿ.ನಾರಾಯಣರವರೇ ಉತ್ತರಿಸುತ್ತಾರೆ, "ಕನ್ನಡಿಗರು ಆಡುವ ಇಂಗ್ಲಿಶ್ ಲಭ್ಯದಾಖಲೆಯಂತೆ ತೀನಂಶ್ರೀಯವರು 1940ರಲ್ಲಿ 'ಇಂಗ್ಲಿಶ್ ಆ್ಯಸ್ ದ ಕನ್ನಡಿಗಾಸ್ ಸ್ಪೀಕ್ ಇಟ್' ಎಂಬ ಲೇಖನವನ್ನು ಬರೆದಿದ್ದಾರೆ. ಇದು ಮೈಸೂರಿನಿಂದ ಪ್ರಕಟವಾಗುತ್ತಿದ್ದ **ದ ಬುಲೆಟಿನ್ ಆಫ್ ಫೋನೆಟಿಕ್ ಸ್ಟಡೀಸ್**‌ನ ಮೊದಲ ಸಂಚಿಕೆಯಲ್ಲಿ ಪ್ರಕಟಗೊಂಡಿದೆ. ಈ ಲೇಖನಕ್ಕಾಗಿ ಬೇಕಾಗಿದ್ದ ಮಾಹಿತಿಯನ್ನು ತಮ್ಮ ಉಚ್ಚಾರಣೆಯಿಂದಲೇ ಪಡೆದುಕೊಂಡಿದ್ದೇನೆಂದು ತಿಳಿಸುತ್ತಾರೆ. ಹಾಗಾಗಿ ಈ ಲೇಖನಕ್ಕೆ **'ಇಂಗ್ಲಿಶ್ ಆ್ಯಸ್ ಐ ಆರ್ಡಿನರಿಲಿ ಸ್ಪೀಕ್ ಇಟ್'** ಎಂಬ ಪರ್ಯಾಯ ಹೆಸರನ್ನು ಸೂಚಿಸಿದ್ದಾರೆ. ಮೈಸೂರು ದೇಶದಲ್ಲಿ

[8] ನಾರಾಯಣ ಕೆ.ವಿ., ಕನ್ನಡ-ಇಂಗ್ಲಿಶ್, ತೆಂಕಣ ನುಡಿಗಳು ಮತ್ತು ಇಂಗ್ಲಿಶ್, ಕುವೆಂಪು ಭಾಷಾ ಪ್ರಾಧಿಕಾರ, ಬೆಂಗಳೂರು, 2015, ಪು. 95...

ಇಂಗ್ಲಿಶನ್ನು ಹೇಳಿಕೊಡುವ ಅಧ್ಯಾಪಕರು ಸಾಮಾನ್ಯವಾಗಿ ಕನ್ನಡಿಗರು ಅಥವಾ ದೇಶಭಾಷಿಕರೇ ಆಗಿದ್ದರು. ತಮ್ಮ ಇಂಗ್ಲಿಶಿನ ಉಚ್ಚಾರಣೆ ಸ್ವಭಾಷಿಕರು ಆಡುವ ಇಂಗ್ಲಿಶನ್ನು ಸಮೀಪಿಸಬೇಕೆಂಬ ಇರಾದೆ ಇಂಗ್ಲಿಶ್ ಕಲಿಯುವವರಿಗೆ ಇದ್ದದ್ದು ಅಸಹಜವಲ್ಲ. ಅಂಥ ಸಾಧನೆ ಸಾಧ್ಯವಾಗಲಿಲ್ಲವೆಂಬ ಕೊರಗು ಕಲಿಯುವವರಲ್ಲಿ ನೆಲೆಸಿತ್ತು. ಕನ್ನಡಿಗರು ಉಚ್ಚರಿಸುವ ಇಂಗ್ಲಿಶಿನಲ್ಲಿ ಯಾವ ಬಗೆಯ ದೋಷಗಳು ಸಂಭವಿಸುತ್ತವೆ ಎನ್ನುವುದನ್ನು ಅವರ ಲೇಖನದಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಈ ದೋಷಗಳಿಗೆ ಎರಡು ಮುಖ್ಯ ಕಾರಣಗಳನ್ನು ಗುರುತಿಸಿದ್ದಾರೆ. 1. ಕನ್ನಡಿಗರಿಗೆ ಇಂಗ್ಲಿಶ್ ಧ್ವನಿಗಳ 'ನಿಜ ಉಚ್ಚಾರಣೆ'ಗಳನ್ನು ಕಿವಿಯಿಂದ ಕೇಳಸಿಕೊಳ್ಳುವ ಅವಕಾಶವಿಲ್ಲದಿರುವುದು. ಇದರಿಂದ ಕನ್ನಡಿಗರಿಗೆ ಅನುಕರಣೆಗೆ ಮಾದರಿಗಳಿಲ್ಲದೆ ಅವರು ಬರೆಹವನ್ನು ಅಂದರೆ ಲಿಪಿಯನ್ನು ಆಧರಿಸಿ ಇಂಗ್ಲಿಶನ್ನು ಮಾತನಾಡುತ್ತಾರೆ. 2. ಇಂಗ್ಲಿಶಿನ ಧ್ವನಿವ್ಯವಸ್ಥೆಗೂ ಕನ್ನಡದ ಧ್ವನಿವ್ಯವಸ್ಥೆಗೂ ಅಂತರವಿದೆ. ಇಂಗ್ಲಿಶಿನಲ್ಲಿದ್ದು ಕನ್ನಡದಲ್ಲಿರದ ಧ್ವನಿಗಳನ್ನು ಉಚ್ಚರಿಸುವಾಗ 'ಸಮೀಪಸ್ಥ ಕನ್ನಡ' ಧ್ವನಿಗಳಿಗೆ ಹೊಂದಿಸಿಕೊಂಡು ಉಚ್ಚರಿಸಬೇಕಾಗುತ್ತದೆ. ಒಂದು ವೇಳೆ 'ನಿಜ ಉಚ್ಚಾರಣೆ' ಕೇಳುವ ಮತ್ತು ಕಲಿಯುವ ಅವಕಾಶವಿದ್ದಿದ್ದರೆ (ಕಾರಣ 1) ಧ್ವನಿ ರಚನೆಯ ವ್ಯತ್ಯಾಸಗಳ (ಕಾರಣ 2) ಸಮಸ್ಯೆ ನಿವಾರಣೆಯಾಗುತ್ತಿತ್ತೇ? ಹೌದಾದರೆ, ಆಗ ಕನ್ನಡಿಗರು ಎರಡು ಪ್ರತ್ಯೇಕ ಧ್ವನಿರಚನಾ ವ್ಯವಸ್ಥೆಗಳನ್ನು ಪಡೆದುಕೊಂಡು ಒಂದನ್ನು ಕನ್ನಡಕ್ಕೂ ಇನ್ನೊಂದನ್ನು ಇಂಗ್ಲಿಶಿಗೂ ಬಳಸುವುದು ಸಾಧ್ಯವೆಂದು ತಿಳಿಯಬೇಕಾಗುತ್ತದೆ. ಆದರೆ ವಾಸ್ತವದಲ್ಲಿ ಇಂಥ ಸಾಧನೆಗಳು ಅಪರೂಪ. ಆದ್ದರಿಂದ ಕನ್ನಡಿಗರು ತಮ್ಮ ಕನ್ನಡದ ಭಾಷಾಧ್ವನಿ ರಚನೆಗೆ 'ಅನುಗುಣ'ವಾಗಿ ಇಂಗ್ಲಿಶನ್ನು ಉಚ್ಚರಿಸುತ್ತಿರುವುದು ಹೆಚ್ಚು ಸಹಜವಾದ ಮಾದರಿ. ಈ ಲೇಖನದಲ್ಲಿ ಒಂದು ಆತಂಕದ ದನಿ ಇದೆ. ಕನ್ನಡಿಗರು ಇಂಗ್ಲಿಶನ್ನು 'ಸರಿಯಾಗಿ' ಉಚ್ಚರಿಸಲು ಆಗುತ್ತಿಲ್ಲವಲ್ಲ ಎನ್ನುವುದೇ ಆ ಆತಂಕ. 60 ವರ್ಷಗಳು ಕಳೆದಿವೆ. ಈಗ ಆತಂಕ ಪಡಲು ಕಾರಣಗಳಿಲ್ಲ. ಅಂದರೆ ಕನ್ನಡಿಗರು ಇಂಗ್ಲಿಶನ್ನು ಸರಿಯಾಗಿ ಉಚ್ಚರಿಸುತ್ತಿದ್ದಾರೆ ಎಂದಲ್ಲ. ಅವರು ಉಚ್ಚರಿಸುವುದೇ ಹೆಚ್ಚು ಮಾನ್ಯವಾಗಿದೆ. ಅದೇ ಎಲ್ಲರಿಗೂ ಒಪ್ಪಿಗೆಯಾಗಿದೆ. ಅಲ್ಲದೆ ಕನ್ನಡಿಗರಿಗೆ ಈಗ ಅದು ಓದು ಬರೆಹದ ಭಾಷೆ. ಅದರಲ್ಲೂ ಓದಿನ ಭಾಷೆಯಾಗಿ ಅದರ ಪಾತ್ರ ವ್ಯಾಪಕವಾಗಿದೆ. ಅಷ್ಟಿಷ್ಟು ಪ್ರಮಾಣದಲ್ಲಿ ಬರೆಹದ ಭಾಷೆಯಾಗಿಯೂ ಇದೆ. ಇವೆರಡೂ ಉದ್ದೇಶಗಳಿಗೆ ಉಚ್ಚಾರಣೆಯ ಮಾದರಿ ಬೇಕಿಲ್ಲ. ಅಂದರೆ ಕಿವಿಯ ನೆಲೆಯಿಂದ ಸ್ವೀಕರಿಸಿ ಅದನ್ನು ಉಚ್ಚಾರಣೆಯನ್ನಾಗಿ ಪರಿವರ್ತಿಸುವ ಕೆಲಸ ತೀರಾ ಕಡಿಮೆ. ಮಾತಿನ ರೂಪದ ಇಂಗ್ಲಿಶ್ ಸಂಕಥನಗಳನ್ನು ಈಗ ಕನ್ನಡಿಗರು ಕೇಳಿಸಿಕೊಳ್ಳುವುದು ಹೆಚ್ಚಿದೆ. ದೂರದರ್ಶನದ ವಾರ್ತೆಗಳು, ವಿವಿಧ ಚಾನೆಲ್‌ಗಳ

ಕಾರ್ಯಕ್ರಮಗಳು, ವಾರ್ತಾ ಮಾಧ್ಯಮದ ಪ್ರಸಾರಗಳು, ಭಾಷಣಗಳು, ಚಲನಚಿತ್ರಗಳು, ಹೀಗೆ ಹಲವಾರು ಮೂಲಗಳಿಂದ ಇಂಗ್ಲಿಶನ್ನು ಕೇಳಿಸಿಕೊಂಡರೂ ಅದೀಗ ಇಂಗ್ಲಿಶಿನ ಓದು, ಬರೆಹಕ್ಕೆ ಅಡ್ಡಿತರದು. ಅಂದರೆ ಇವೆರಡೂ ಬೇರೆ ಬೇರೆಯಾಗಿಯೇ ಕಾರ್ಯನಿರ್ವಹಿಸುತ್ತಿವೆ. ಬರೆಯುವಾಗ ಬಳಸಬೇಕಾದ 'ಸರಿಯಾದ' ಕಾಗುಣಿತ ಕುರಿತು ಮಾರ್ಗದರ್ಶನ ನೀಡಲು ಈಗ ಹಲವಾರು ಪರಾಮರ್ಶನ ಗ್ರಂಥಗಳಿವೆ. ಗಣಕದಲ್ಲೂ ಇದೀಗ ಅದು ಅಳವಟ್ಟಿವೆ. ತೀನಂಶ್ರೀಯವರು ಈ ಉಲ್ಲೇಖಿತ ಲೇಖನ ಬರೆದ ಕಾಲದಿಂದ ಈಚೆಗೆ ಆಗಿರುವ ಪ್ರಮುಖ ಬದಲಾವಣೆಗಳು ಎರಡು. 1. ಇಂಗ್ಲಿಶಿನ ಎರಡು ಶೈಲಿಗಳು ಬಳಕೆಗೆ ಬಂದಿರುವುದು. 2. ಇಂಗ್ಲಿಶ್ ಕಲಿಯುವವರ ಸಂಖ್ಯೆಯಲ್ಲಿ ಹೆಚ್ಚಳ. ಇಂಗ್ಲಿಶಿನ ಬರೆವಣಿಗೆಯಲ್ಲಿ ಕಾಗುಣಿತ ದೋಷ, ಬರೆವಣಿಗೆಯ ನಿಯಮಗಳ ಉಲ್ಲಂಘನೆಯ ದೋಷ ಮತ್ತು ವ್ಯಾಕರಣ ದೋಷಗಳನ್ನು ಈಗಲೂ ಇಂಗ್ಲಿಶ್ ಶಿಕ್ಷಕರು ಒಪ್ಪುವುದಿಲ್ಲ. ಆದ್ದರಿಂದ 'ಶುದ್ಧ' ಇಂಗ್ಲಿಶ್ ಬರೆವಣಿಗೆಯ ಅಪೇಕ್ಷೆ ಈಗಲೂ ಒಂದು ಆದರ್ಶವಾಗಿದೆ. ಆ ಇಂಗ್ಲಿಶ್‌ನ ಶೈಲಿ ಒಂದು ಕಡೆ ನಿಗದಿಗೊಂಡು ನಮ್ಮೆದುರು ಇದೆ. ಇನ್ನೊಂದೆಡೆ ಅಂಥ 'ಶುದ್ಧತೆ'ಯ ಹಂಗಿಲ್ಲದೆ ಇಂಗ್ಲಿಶನ್ನು ಮಾತಾಡುವ ಬಗೆಯೊಂದು ನೆಲೆಗೊಂಡಿದೆ. ಇಂಗ್ಲಿಶಿನ 'ಮೂಲ' ಉಚ್ಚಾರಣೆ ಹಾಗೂ ವ್ಯಾಕರಣ ನಿಯಮಗಳನ್ನು ಅಷ್ಟಾಗಿ ಪಾಲಿಸದ ಶೈಲಿಯೊಂದು ಬಳಕೆಯಲ್ಲಿದೆ. ಇವೆರಡೂ ಈಗ ಕನ್ನಡಿಗರಲ್ಲಿ ನೆಲೆಯೂರಿವೆ. ಶಿಕ್ಷಣವ್ಯವಸ್ಥೆಯು ಮೊದಲನೆ ಶೈಲಿಯನ್ನು ಪ್ರವೃತ್ತಗೊಳಿಸುತ್ತದೆ. ಇನ್ನೊಂದು ಶೈಲಿ ದಿನನಿತ್ಯದಲ್ಲಿ ವ್ಯಾವಹಾರಿಕ ಮಟ್ಟದಲ್ಲಿ ಬಳಕೆಯಾಗುತ್ತಿದೆ.

"ಕೆ. ವಿ. ಸುಬ್ಬಣ್ಣನವರು ಕನ್ನಡ ಮುಗ್ಧ ಭಜನೆ (ನಮ್ಮ ತವಕ ತಲ್ಲಣಗಳು 1998 ಪುಟ. 86–88) ಎಂಬ ಲೇಖನದಲ್ಲಿ ಇಂಗ್ಲಿಶ್ ಬದಲು ಕನ್ನಡ ಎಂಬ ನಿಲುವನ್ನು ವಿರೋಧಿಸುತ್ತಾರೆ. ಇಂಗ್ಲಿಶ್‌ನ್ನು ಸಾಮಾನ್ಯರನ್ನು ಸಬಲೀಕರಿಸುವ ಮತ್ತು ಕೀಳರಿಮೆಯನ್ನು ಕಳೆಯುವ ಅಸ್ತ್ರವೆಂದು ಪರಿಗಣಿಸಲು ಅವರು ಸೂಚಿಸುತ್ತಾರೆ. ಇದು ಹಲವು ಕಾರಣಗಳಿಂದ ಸರಿ." ಅದೇನೇ ಇರಲಿ ಅವರ ಪ್ರಕಾರ, "ಇಂಗ್ಲಿಶ್ ನಮ್ಮನ್ನು ಕಾಡುವ ಗುಮ್ಮ. ಒಂದೋ ಈ ಗುಮ್ಮ ಇಲ್ಲವೆಂದಾಗಬೇಕು ಅಥವಾ ಗುಮ್ಮನಿಗೆ ಹೆದರದಷ್ಟು ಪ್ರಬುದ್ಧತೆ ನಮ್ಮಲ್ಲಿ ಬೆಳೆಯಬೇಕು. ಇವೆರಡೂ ಆಗುವುದು ವೈಯಕ್ತಿಕ ನೆಲೆಯಲ್ಲಿ ಅಲ್ಲ. ಸಾಮಾಜಿಕವಾಗಿ ನಿರ್ದಿಷ್ಟ ಚಿಂತನೆ, ಯೋಜನೆಗಳ ಮೂಲಕ ಇದು ಆಕಾರ ಪಡೆಯಬೇಕಾಗಿದೆ."[9]

ಈ ಹಿನ್ನೆಲೆಯಲ್ಲಿ 'ಆಡಳಿತ' ಎನ್ನುವಾಗ ಯಾವ ಆಡಳಿತ? ಯಾರಿಗಾಗಿ ಆಡಳಿತ? ಎಂಬ ಪ್ರಶ್ನೆಯನ್ನು ವಿವರಿಸಿಕೊಳ್ಳಬೇಕಾಗುತ್ತದೆ.

---

[9] ಅದೇ ನೋಡಿ, ಪು. 98

30 ಜಿಲ್ಲೆ[10]ಗಳಿಂದ ಕೂಡಿರುವ ಒಟ್ಟು ಕರ್ನಾಟಕದ ಜನಬದುಕನ್ನು ನೇರ್ಪಡಿಸುವ, ಕಾಪಾಡಿಕೊಳ್ಳುವ ಆಡಳಿತ ವ್ಯವಸ್ಥೆಯನ್ನು ಪ್ರಭುತ್ವವು 35ಕ್ಕೂ ಹೆಚ್ಚು ಇಲಾಖೆ–ಸಚಿವಾಲಯಗಳ ಮೂಲಕ ನಡೆಯುವಂತೆ ಯೋಜಿಸಿಕೊಂಡಿದೆ[11]. ವಸತಿ, ಆಹಾರ, ಆರೋಗ್ಯ, ಮೂಲಸೌಕರ್ಯ, ಶಿಕ್ಷಣ, ಸಹಕಾರ, ಕೃಷಿ, ತೋಟಗಾರಿಕೆ, ಪಶು ಸಂಗೋಪನೆ–ಮೀನುಗಾರಿಕೆ, ಅರಣ್ಯ, ನೀರಾವರಿ, ಜಲಸಂಪನ್ಮೂಲ, ಉದ್ಯೋಗ, ಆರ್ಥಿಕತೆ, ಇಂದನ ಬಳಕೆ, ಕಂದಾಯ, ವಾಣಿಜ್ಯ ಮತ್ತು ಕೈಗಾರಿಕೆ, ಕಾರ್ಮಿಕರ ಕ್ಷೇಮ, ಸಾರ್ವಜನಿಕ ಉದ್ಯಮ, ಲೋಕೋಪಯೋಗಿ, ಹಿಂದುಳಿದವರ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಸಮಾಜ ಕಲ್ಯಾಣ, ಯುವಜನ ಸೇವೆ, ಸಾರಿಗೆ, ಕಾನೂನು, ಯೋಜನಾ ಇಲಾಖೆ, ವಿಜ್ಞಾನ ತಂತ್ರಜ್ಞಾನಗಳು ಮೊದಲಾಗಿ ಇವೆಲ್ಲವುಗಳನ್ನು ರೂಪಿಸುವ ಹೊಣೆಯ ಸಂಸದೀಯ ವ್ಯವಹಾರದ ಬೆಳವಣಿಗೆಗಳನ್ನು ಕಾಯ್ದುಕೊಳ್ಳುವವರೆಗೂ ಆಡಳಿತದ ಇಲಾಖೆಗಳು–ಸಚಿವಾಲಯಗಳು ರೂಪುಗೊಂಡಿವೆ[12]. ಕನ್ನಡ ಸಮಾಜದ ಒಟ್ಟು ಸಂಸ್ಕೃತಿಯನ್ನು ಮುನ್ನೆಲೆಗಿರಿಸಿಕೊಳ್ಳಲು ಬೇಕಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೂ ಇದೆ. ಈ ಇಲಾಖೆ–ಸಚಿವಾಲಯಗಳ ಅಡಿಯಲ್ಲಿ 12 ನಿರ್ದೇಶನಾಲಯಗಳು, ಸುಮಾರು 70 ನಿಗಮ–ಮಂಡಳಿಗಳು ಕೆಲಸ ಮಾಡುತ್ತವೆ[13].

ಇವುಗಳಿಗೆ ಪೂರಕವಾಗಿ ಒಟ್ಟು ಸಾಮಾಜಿಕ ಕ್ಷೇಮವನ್ನು ಕಾಯ್ದುಕೊಳ್ಳುವ ಸಲುವಾಗಿ 13 ನ್ಯಾಯಾಂಗ ಮತ್ತು ಆಯುಕ್ತ ಕಚೇರಿಗಳು ಸ್ವಾಯುತ್ತವಾಗಿ ಕಾರ್ಯ ನಿರ್ವಹಿಸುತ್ತವೆ[14]. ಕರ್ನಾಟಕ ಕಾನೂನು ಆಯೋಗ, ಚುನಾವಣಾ ಆಯೋಗ, ವೋಟರ್ಸ್ ಪೋರ್ಟಲ್, ಆಡಳಿತ ಸುಧಾರಣಾ ಆಯೋಗ, ಜುಡಿಶಿಯಲ್ ಪೆ ಕಮಿಶನ್, ಹೈಕೋರ್ಟ್, ಜ್ಞಾನ ಆಯೋಗ, ಲೋಕಾಯುಕ್ತ, ಮಾಹಿತಿ ಆಯೋಗ, ಗ್ರಾಹಕ ವ್ಯಾಜ್ಯ, ಲೋಕಸೇವಾ ಆಯೋಗ, ಸಾರಿಗೆ ಟ್ರಿಬ್ಯುನಲ್, ನ್ಯಾಯದೇಗುಲ ಮೊದಲಾಗಿ ಕೆಲಸ ಮಾಡುತ್ತಿರುವುದು ಕಾಣುತ್ತದೆ.

ಈ ಇಲಾಖೆ–ಸಚಿವಾಲಯ–ಆಯೋಗಗಳು ಯಾವೂ ತಮತಮಗೆ ಪ್ರತ್ಯೇಕತೆಯನ್ನು ಬೆಂಬಲಿಸದೆ ಕರ್ನಾಟಕದ ಜನಬದುಕಿನ ಒಟ್ಟು ಬೆಳವಣಿಗೆಯ ಕೊಂಡಿಗಳಲ್ಲಿ ಕೆಲಸ ಮಾಡಬೇಕಾಗಿರುತ್ತದೆ. 35ಕ್ಕೂ ಹೆಚ್ಚಿನ ದೊಡ್ಡ ಗುರುತಗಳಲ್ಲಿರುವ ಸಚಿವಾಲಯ–ಇಲಾಖೆಗಳು

---

[10]ನೋಡಿ ಅನುಬಂಧ–1

[11]ಕರ್ನಾಟಕ ಸರಕಾರದ ಅಧಿಕೃತ ವೆಬ್‌ಸೈಟಿನಲ್ಲಿ 37 ಇಲಾಖೆ/ಸಚಿವಾಲಯಗಳನ್ನು ಪ್ರಕಟಿಸಲಾಗಿದೆ.

[12] ನೋಡಿ ಅನುಬಂಧ–2

[13] ನೋಡಿ ಅನುಬಂಧ–3

10 ನೋಡಿ ಅನುಬಂಧ–4

ಒಂದೊಂದಕ್ಕೆ ಹತ್ತಾರು ಟೊಂಗೆಗಳಿದ್ದು ಅವು ನೂರಾರು ಕವಲುಗಳಲ್ಲಿ ತನ್ನದೇ ಆದ ವಿಷಯ, ಪ್ರದೇಶವಾರು ಕೆಲಸಗಳ ಹೊಣೆಯನ್ನು ಹೊತ್ತಿರುತ್ತವೆ. ಆ ಮೂಲಕ ಜನಸಾಮಾನ್ಯರನ್ನು ಒಳಗುಮಾಡಿಕೊಳ್ಳುವ ಕೊಂಡಿಯಾಗಿ ನಿಭಾವಣೆಗೆ ಒಳಪಟ್ಟಿರುತ್ತವೆ. ಪ್ರತಿಯೊಂದು ಜಿಲ್ಲೆ, ತಾಲ್ಲೂಕು, ಹೋಬಳಿ, ಪಂಚಾಯಿತಿಗಳು ಒಳಗೊಂಡ ಒಂದು ದೊಡ್ಡ ನೆಟ್‌ವರ್ಕ್ ಆಗಿ ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಆಡಳಿತ ಹಬ್ಬಿಕೊಂಡಿದೆ. ಸುಮಾರು ಶೇಕಡ 70ರಷ್ಟು ಕನ್ನಡ ಭಾಷಿಕ ಸಮುದಾಯದ ಜೊತೆಗೆ ಇತರೆ ಭಾಷಿಕ ಸಮುದಾಯಗಳೂ ಕರ್ನಾಟಕ ಪ್ರದೇಶದಲ್ಲಿ ವಾಸಿಸುತ್ತಿದ್ದು ಅವುಗಳಲ್ಲಿ ಅನೇಕವು ಕರ್ನಾಟಕ ನೆಲದವೇ ಎನಿಸಿದ್ದರೆ ಹಲವು ಹೊರಗಿನಿಂದ ಉದ್ಯೋಗ ಮತ್ತಿತರೆ ಕಾರಣಗಳಿಂದ ವಲಸೆ ಬಂದು ನೆಲೆಸಿರುವವರಾಗಿದ್ದಾರೆ.

ಸಂವಿಧಾನ ಬದ್ಧವಾಗಿ ಪ್ರಜಾಪ್ರಭುತ್ವವು ಆಡಳಿತದ ತಳಹದಿಯಾಗಿರುವುದರಿಂದ ಕೆ. ವಿ. ನಾರಾಯಣ ಅವರು ಗುರುತಿಸಿರುವಂತೆ:

- ಭಾಷೆಗೆ ಸಂಬಂಧಿಸಿದ ನಿರ್ಣಯವು ಒಟ್ಟು ಸಮುದಾಯವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.
- ನುಡಿಸಮುದಾಯಗಳಿಗೆ ಒಂದು ಭಾಷಾನೀತಿ ಇರಬೇಕು.
- ಭಾಷಾ ನೀತಿಯನ್ನು ಅನುಸರಿಸಿ ಭಾಷಾಯೋಜನೆ ಇರಬೇಕು.
- ಕರ್ನಾಟಕದ ಭಾಷಾನೀತಿ ಮತ್ತು ಭಾಷಾಯೋಜನೆಯನ್ನು ಕರ್ನಾಟಕ ಆಡಳಿತ ವಲಯದಲ್ಲಿರುವ ಎಲ್ಲಾಭಾಷಿಕರನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ.
- ಕರ್ನಾಟಕದಲ್ಲಿರುವ ಭಾಷೆಗಳ ಮತ್ತು ಭಾಷಿಕರ ನಡುವಣ ಸಂಬಂಧಗಳ ಕುರಿತಂತೆ ನೀತಿಯೊಂದನ್ನು ಸಂವಿಧಾನಬದ್ಧವಾಗಿ ಮಾಡಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಕರ್ನಾಟಕದ ಭಾಷಿಕ ನೆಲೆಯ ಆಧುನಿಕ ಆಡಳಿತದ ಚರಿತ್ರೆಯೊಂದನ್ನು ಹೇಳುವ ಕೆ.ವಿ.ನಾರಾಯಣ ಮಾತುಗಳನ್ನು ಹೀಗೆ ಸಂಗ್ರಹಿಸಬಹುದು[15];

ಉತ್ತರ ಕರ್ನಾಟಕವನ್ನು ಆಳುತ್ತಿದ್ದ ಬ್ರಿಟಿಷ್ ಅಧಿಕಾರಿಗಳಿಗೆ ಭಾಷಾಪರವಾದ ಪ್ರಾಂತಗಳಾದರೆ ಆಡಳಿತವು ಸುಸೂತ್ರವಾಗುತ್ತದೆ ಎಂಬ ಅಭಿಪ್ರಾಯವಿತ್ತು. ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಆಗಿದ್ದ ಸರ್ ಥಾಮಸ್ ಮನ್ರೋ ಎಂಬ ಅಧಿಕಾರಿ ಕನ್ನಡ ಭಾಷೆಯನ್ನು ಆಡುವ ಜನರು ಒಂದೇ ಪ್ರಭುತ್ವಕ್ಕೆ ಒಳಪಡಬೇಕೆಂದು 1825 ರಲ್ಲೇ ಯೋಚಿಸಿದ್ದ. ಅಂದಿನ ಆಡಳಿತವು

[15]ಕನ್ನಡ ಜಗತ್ತು ಅರ್ಧ ಶತಮಾನ: ಕೆ.ವಿ.ನಾರಾಯಣ, 2006, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. 128

ಇಂಗ್ಲಿಷ್ ಭಾಷೆಯಲ್ಲಿ ಇತ್ತು. ಸರ್ಕಾರದ ಎಲ್ಲ ವ್ಯವಹಾರಗಳೂ ಇಂಗ್ಲಿಷ್‌ನಲ್ಲಿ ನಡೆಯುತ್ತಿದ್ದವು. ನ್ಯಾಯಾಲಯಗಳಲ್ಲಿ ನ್ಯಾಯಾಧೀಶರುಗಳಿಗೆ ಕನ್ನಡ ಬರುತ್ತಿರಲಿಲ್ಲ. ಹೀಗಾಗಿ ಪ್ರತಿಯೊಂದನ್ನೂ ಕನ್ನಡದಿಂದ ಇಂಗ್ಲೀಷ್‌ಗೆ ಅನುವಾದ ಮಾಡಲಾಗುತ್ತಿತ್ತು. ಹೀಗಾಗಿ ನ್ಯಾಯಾಲಯಗಳಲ್ಲಿ ಇಂಗ್ಲೀಷ್ ಭಾಷೆಯದ್ದೇ ಪ್ರಾಬಲ್ಯವಿತ್ತು.

ಸ್ವತಂತ್ರ ಭಾರತದಲ್ಲಿ ಭಾಷೆಗಳ ಆಧಾರದ ಮೇಲೆ ನಡೆದ ರಾಜ್ಯಗಳ ಪುನರ್‌ವಿಂಗಡಣೆಯ ಭಾಗವಾಗಿ ಕರ್ನಾಟಕ ಆಡಳಿತದ ಕನ್ನಡೀಕರಣ ಪ್ರಾರಂಭವಾಯಿತು. ಆದರೆ, ಕನ್ನಡವನ್ನೇ ಆಡಳಿತದಲ್ಲಿ ಬೆಳೆಸಬೇಕಾದ ನಿಷ್ಠೆಯನ್ನು ಆಡಳಿತ ನಡೆಸಿದ ಸರಕಾರಗಳು ವಹಿಸಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಜಾಗತೀಕರಣಕ್ಕೆ ತನಗರಿವಿಲ್ಲದಂತೆಯೇ ರಾಜ್ಯಗಳ ಆಡಳಿತವೂ ಒಳಗಾಗುತ್ತಿರುವುದು ಏಕೆಂಬುದನ್ನು ಗಮನಿಸಿದರೆ ಇದು ತಿಳಿಯುತ್ತದೆ. ಜಾಗತೀಕರಣದ ಅಂಗವಾಗಿ ಮಾಹಿತಿ ತಂತ್ರಜ್ಞಾನ ಬೆಳೆಯುತ್ತಿದೆ. ಇಂದು ವಿದ್ಯುನ್ಮಾನ ಆಡಳಿತವಾಗಿ ಬದಲಾವಣೆಗಳು ಕಾಣುತ್ತವೆ. ಬಹುಪಾಲು ಇದು ಇಂಗ್ಲಿಷ್ ಆಡಳಿತದಂತೆಯೇ ಗೋಚರಿಸುತ್ತಿದೆ. ಇದು, ಏಕೀಕರಣದ ಕಾಲದಿಂದಲೂ ಆಡಳಿತ ಪೂರ್ಣ ಕನ್ನಡೀಕರಣವಾಗದ್ದರ ದೊಡ್ಡ ತೊಡಕು.

ಕನ್ನಡ ಮಾತನಾಡುವ ಜನರೆಲ್ಲರೂ ಒಂದೇ ಆಡಳಿತ ಪ್ರದೇಶಕ್ಕೆ ಒಳಪಡಬೇಕೆಂಬ ಅಪೇಕ್ಷೆ 19ನೇ ಶತಮಾನದ ಕೊನೆಕೊನೆಗೆ ತಲೆ ಎತ್ತಿತ್ತು. ಅದು 20ನೇ ಶತಮಾನದಲ್ಲಿ ಒಂದು ಚಳುವಳಿಯಾಗಿ ರೂಪುಗೊಂಡಿತು. ಏಕೀಕರಣ ಚಳುವಳಿಯೆಂದು ಅದನ್ನು ಸಾಮಾನ್ಯವಾಗಿ ಗುರುತಿಸಲಾಗುತ್ತಿದೆ. ಬ್ರಿಟಿಷರು ಬಿಟ್ಟು ಹೋದ ಭಾರತದಲ್ಲಿ ಕನ್ನಡ ಮಾತನಾಡುವ ಜನರು ಹಲವು ಆಡಳಿತ ಪ್ರದೇಶಗಳಲ್ಲಿ ಹಂಚಿ ಹೋಗಿದ್ದರು. ಹಳೆಯ ಮೈಸೂರು ಪ್ರದೇಶ ರಾಜರ ಆಳ್ವಿಕೆಗೆ ಮತ್ತು ಬ್ರಿಟಿಷರ ಪರೋಕ್ಷ ಹಿಡಿತಕ್ಕೆ ಸಿಕ್ಕಿತು. ಬ್ರಿಟಿಷರ ಎರಡು ಪ್ರೆಸಿಡೆನ್ಸಿಗಳಲ್ಲಿ ಕೆಲವು ಪ್ರದೇಶಗಳಿದ್ದವು. ಹೈದರಾಬಾದ್‌ನ ನಿಜಾಮರ ಆಡಳಿತಕ್ಕೆ ಮತ್ತೆ ಕೆಲವು ಪ್ರದೇಶಗಳು ಸೇರಿದ್ದವು.

ಕರ್ನಾಟಕ ರಾಜ್ಯ ನಿರ್ಮಿತಿಯ ಸಂದರ್ಭದಲ್ಲಿ ಅಂದಿನ ಆಡಳಿತ ವರ್ಗಕ್ಕೆ ಭಿನ್ನ ಹಿನ್ನೆಲೆಯ ಭಾಷಾ ಪ್ರದೇಶದ ಜನರನ್ನು ಒಂದು ಚೌಕಟ್ಟಿಗೆ ಹೇಗೆ ತರುವುದು ಎಂಬ ಪ್ರಶ್ನೆ ಇತ್ತು. ರಾಜ್ಯಾಂಗದಲ್ಲಿ ಆಗ ಲಭ್ಯವಿದ್ದ ಅವಕಾಶವನ್ನು ಬಳಸಿಕೊಂಡು ಆ ಹೊತ್ತಿಗೆ ಇಂಗ್ಲೀಷನ್ನು ಆಡಳಿತ ಭಾಷೆಯೆಂದು ಬಳಸಲು ಒಪ್ಪಿಗೆ ನೀಡಿದರು. ಇದು ಆಡಳಿತಗಳಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಲಿಲ್ಲ. ಏಕೆಂದರೆ ಆಡಳಿತ ವರ್ಗದ ತಾತ್ವಿಕತೆಯು ಜನಪರವಾದುದ್ದಾಗಿರಲಿಲ್ಲ. ಆಡಳಿತದ ವಿವಿಧ ಅಂಗಗಳು ಜನರಿಗೆ ಉತ್ತರದಾಯಿಯಾಗಿರಲಿಲ್ಲ.

ಜನರನ್ನು ಪ್ರತಿನಿಧಿಸುವ ಅನೇಕರು ಆಡಳಿತದೊಡನೆ ಸಂಪರ್ಕ ಹೊಂದಲು ತಾವು ಇಂಗ್ಲೀಷ್ ಮೂಲಕ ಆ ಕೆಲಸವನ್ನು ಮಾಡುತ್ತಿದ್ದರು.

1950ರ ಭಾರತ ಸಂವಿಧಾನ, ಪ್ರಜಾಪ್ರಭುತ್ವವನ್ನು ತನ್ನ ಆಯ್ಕೆಯ ಆಡಳಿತ ಮಾದರಿಯನ್ನಾಗಿ ಪ್ರತಿಪಾದಿಸಿದ್ದರಿಂದ ತಾತ್ವಿಕವಾಗಿಯಾದರೂ ಆಡಳಿತ ಜನರಿಗೂ ಉತ್ತರದಾಯಿಯಾಗಿತ್ತು. ರಾಜ್ಯಾಂಗವು ಎಲ್ಲಾ ರಾಜ್ಯಗಳು ತನ್ನ ವ್ಯಾಪ್ತಿಯ ಮಕ್ಕಳಿಗೆ ಗೊತ್ತಾದ ಅವಧಿಯವರೆಗೆ ಶಿಕ್ಷಣ ನೀಡುವುದು ಕಡ್ಡಾಯವೆಂದು ಸೂಚಿಸಿತ್ತು. ಇದರಿಂದಾಗಿ, ಜನರ ಭಾಷೆ ಮತ್ತು ಸರ್ಕಾರದ ಭಾಷೆ ಬೇರೆ ಬೇರೆಯಾಗಿ ಉಳಿಯುವುದು ಸಾಧ್ಯವಿರಲಿಲ್ಲ. ಕರ್ನಾಟಕದಲ್ಲೂ ಕನ್ನಡವನ್ನು ಅದು ಯಾವ ಸ್ಥಿತಿಯಲ್ಲೇ ಇರಲಿ ಆ ಸ್ಥಿತಿಯಿಂದ ಬೇರ್ಪಡಿಸಿ ಅದಕ್ಕೆ ಅಖಿಲ ಕರ್ನಾಟಕ ವ್ಯಾಪ್ತಿ ಮತ್ತು ಬಳಕೆಯ ಮನ್ನಣೆಯನ್ನು ತಂದುಕೊಡುವುದು ಸರ್ಕಾರದ ಜವಾಬ್ದಾರಿಯಾಯಿತು.

ಶಿಕ್ಷಣ ಸರಕಾರದ ಒಂದು ಕಾರ್ಯಕ್ರಮವಾದ್ದರಿಂದ ಇಡೀ ಕರ್ನಾಟಕದ ಪ್ರಾಥಮಿಕ ಶಾಲೆಗಳ ಪಠ್ಯದಲ್ಲಿ ಬಳಕೆಯಾಗುವ ಕನ್ನಡದಲ್ಲಿ ಒಂದು ಸಾಮಾನ್ಯ ರೂಪವನ್ನು ತರುವುದು ಸರಕಾರದ ನೀತಿಯಾಯಿತು. ಇಡೀ ಕರ್ನಾಟಕದ ಎಲ್ಲ ಶಾಲೆಗಳಿಗೂ ಒಂದೇ ಬಗೆಯ ಪಠ್ಯಕ್ರಮ ಮತ್ತು ಪಠ್ಯವಸ್ತುವನ್ನು ರೂಪಿಸಬೇಕೆಂದು ಸರಕಾರ ನಿರ್ಣಯಿಸಿತು.

ಆಗ ಚುನಾಯಿತ ಸರಕಾರ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸುವ ದೃಷ್ಟಿಯಿಂದ ಗುರಿಯುಳ್ಳ ಯೋಜನೆಗಳನ್ನು ಭಾಷಾ ಪರಿವರ್ತನೆಗಾಗಿ ರೂಪಿಸುವುದು ಅಗತ್ಯವಾಗಿತ್ತು. ಆದರೆ ನಿರ್ದಿಷ್ಟ ಗುರಿಗಳನ್ನಾಗಲಿ, ಯೋಜಿತ ಕಾರ್ಯಕ್ರಮಗಳನ್ನಾಗಲೀ ಅನುಸರಿಸಿರಲಿಲ್ಲ. ರಾಜ್ಯ ಸರ್ಕಾರಗಳ ಭಾಷಾ ನೀತಿಯಲ್ಲಿ ಪ್ರಾಂತೀಯ ಭಾಷೆಗಳನ್ನು ನಿರಾಕರಿಸುವ ಧೋರಣೆ ಇರಲಿಲ್ಲ. ಆದರೆ, ಕಲ್ಪಿಸಿಕೊಟ್ಟ ಅಮೂರ್ತ ಅಧಿಕಾರಗಳಿಂದಾಗಿ ಪ್ರಾಯೋಗಿಕ ನೆಲೆಯಲ್ಲಿ ಸ್ಪಷ್ಟ ಅವಕಾಶಗಳನ್ನು ನಿರ್ಮಿಸಲು ಆಗಲಿಲ್ಲ. ಕನ್ನಡವನ್ನು ಬಳಸಬಾರದು ಎಂದು ಹೇಳುವುದಿಲ್ಲವಾದರೂ ಸದ್ದಿಲ್ಲದೇ ಇಂಗ್ಲೀಷಿನ ಬಳಕೆಯನ್ನು ಮುಂದುವರೆಸುತ್ತ ಹೋಗುವ ಮೂಲಕ ಕನ್ನಡಕ್ಕಿರುವ ಅವಕಾಶವನ್ನು ಪರೋಕ್ಷವಾಗಿ ನಿರಾಕರಿಸುವ ಪ್ರಯತ್ನ ಎದ್ದು ಕಾಣುತ್ತದೆ.

ಮತ್ತೊಂದು ತೊಡಕೆಂದರೆ, ಇಂದಿನ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಹಿಂದೆ ಕನ್ನಡ, ಮರಾಠಿ, ಉರ್ದು ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಆಡಳಿತ ನಡೆದಿರುವುದನ್ನು ಇತಿಹಾಸ ಹೇಳುತ್ತದೆ. ಅದೆಲ್ಲವೂ ಕನ್ನಡನಾಡು ಒಂದು ಆಡಳಿತ ವ್ಯವಸ್ಥೆಗೆ ಒಳಪಟ್ಟಾಗ ಕನ್ನಡೀಕರಣ ಆಗಬೇಕಿತ್ತು, ಆಗಲಿಲ್ಲ. ಆಡಳಿತದ ಭಾಷಾ ನೀತಿಗೂ, ಶಿಕ್ಷಣದಲ್ಲಿ ಭಾಷೆಗಳ

ಬಳಕೆಯ ನೀತಿಗೂ ಸಂಬಂಧವನ್ನು ಕಲ್ಪಿಸಲಿಲ್ಲ. ಇದರಿಂದಾಗಿ ಕರ್ನಾಟಕ ರಾಜಭಾಷಾ ಅಧಿನಿಯಮ 1963ರಲ್ಲಿ ಜಾರಿಗೆ ಬಂದ ನಂತರ ಇದ್ದ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಯು ಕರ್ನಾಟಕದಲ್ಲಿ ಕನ್ನಡವನ್ನು ಕಲಿಯದೇ ಪ್ರೌಢ ಶಿಕ್ಷಣವನ್ನು ಮುಗಿಸುವುದು ಸಾಧ್ಯವಿತ್ತು ಎಂದು ಕನ್ನಡ ಬಳಕೆಯ ಚರಿತ್ರೆಯನ್ನು ಬಿಡಿಸಿ ತೋರಿಸುವ ಕೆಲಸವನ್ನು ಕೆವಿಎನ್ ಅಚ್ಚುಕಟ್ಟಾಗಿ ಮಾಡಿದ್ದಾರೆ. ಇದನ್ನು ಗ್ರಹಿಸಿದರೆ ಭಾಷಿಕವಾದ ಆಡಳಿತ ಕುರಿತಂತೆ ಪ್ರಭುತ್ವದ ನಿಲುವುಗಳ ನಡೆ ಎಂತಹುದೆಂಬುದು ಅರಿವಿಗೆ ಬರುತ್ತದೆ.

ಕೆ.ವಿ.ಎನ್ ಅವರು ಹೇಳುವಂತೆ 'ನಮ್ಮದೇ ಆದ ಮಾದರಿಗಳನ್ನು ಅಲಕ್ಷಿಸಿ ಅನ್ಯ ಮಾದರಿಗಳ ಕಡೆ ನಾವು ಮುಖ ಮಾಡಿದ್ದೇವೆ. ಇದರಿಂದಾಗಿ ಅಚ್ಚಕನ್ನಡದ ದೇಸೀ ನೆಲೆಯಿಂದ ನಾವು ಹೊರಗೆ ಸರಿಯುವ ಹಾಗೆ ಆಗಿದೆ[16]'.

3.4: ಹಾಗಾದರೆ ಇಂದಿನ ಆಡಳಿತ ಕನ್ನಡ ಏನಾಗಿದೆ?

ಇಂದಿನ ಬಳಕೆಯಲ್ಲಿರುವ ಆಡಳಿತ ಪ್ರಕ್ರಿಯೆಯನ್ನು ಈ ಕೆಳಗಿನಂತೆ ಗುರುತಿಸಬಹುದು:

1. ಆಡಳಿತದ ನೀತಿ, ನಿಯಮ, ಕಾನೂನು ರೂಪಿಸುವುದು (ಸಾರ್ವಜನಿಕರಿಗೆ ಇದರಲ್ಲಿ ಪಾಲ್ಗೊಳ್ಳಲು ಅವಕಾಶವಿರುವುದಿಲ್ಲ).
2. ಸರಕಾರದ ಕಛೇರಿಗಳಲ್ಲಿ ಅಧಿಕಾರಿಗಳು, ನೌಕರರು ಕಡತಗಳಲ್ಲಿ ವಿಷಯಗಳನ್ನು ಪ್ರಸ್ತುತಪಡಿಸುವ, ಚರ್ಚಿಸುವುದು ಮತ್ತು ವಿಷಯಗಳನ್ನು ವಿಶ್ಲೇಷಿಸಿ ಮಂಡಿಸುವಿಕೆ.
3. ಸರ್ಕಾರದ ಕಚೇರಿಗಳಿಂದ ಸಾರ್ವಜನಿಕರಿಗೆ ತಲುಪುವ ಪತ್ರಗಳು, ಆದೇಶಗಳು, ಸುತ್ತೋಲೆಗಳು.
4. ಸರ್ಕಾರದ ಆಡಳಿತ ನಿರ್ವಹಣೆಯ ಭಾಗವಾಗಿ ಸಾರ್ವಜನಿಕವಾಗಿ ಪ್ರಸ್ತುತವಾಗುವ ಆಡಳಿತ ವಿಷಯಗಳು ಎಂದು ವಿಂಗಡಿಸಿ ನೋಡಬಹುದು.

ದಿನಬಳಕೆಯ ಆಡಳಿತ ರೂಪದ ಭಾಷಾರೂಪಗಳನ್ನು ಗಮನಿಸಿದಾಗ ಇದರಲ್ಲಿ:

1. ಆಡಳಿತ ಪದಗಳು
2. ಕಾನೂನಿನ ಪದಗಳು ಮತ್ತು

---

[16]ನಮ್ಮ ಕ್ರಿಯಾಶೀಲತೆಯ ಮೇಲೆ ಪರಿಣಾಮ ಬೀರಿರುವ ಈ ಅನ್ಯ ಮಾದರಿಗಳನ್ನು ಬಿಟ್ಟು, ದೇಸೀ ಮಾದರಿಯನ್ನು ಅಳವಡಿಸಿಕೊಂಡರೆ ಭಾಷೆಯ ಅಭಿವೃದ್ಧಿ, ಭಾಷೆಯ ಅಭಿವೃದ್ಧಿಯ ಮೂಲಕ ಸಾಹಿತ್ಯದ ಸಂಸ್ಕೃತಿಗಳ ಬೆಳವಣಿಗೆ ಸಾಧ್ಯವಾಗುತ್ತದೆ. ನಮ್ಮ ದೇಸೀ ನೆಲೆಯನ್ನು ಹೆಚ್ಚು ಕಂಡುಕೊಂಡಾಗ ಕನ್ನಡದ ಇಡೀ ಜಾನಪದ ಜಗತ್ತು ತೆರೆದುಕೊಳ್ಳುತ್ತದೆ ಎನ್ನುವುದು ಕೆವಿಎನ್ ಅವರ ನಿಲುವು. ಹೀಗೆ ಆಗುವುದು ಪ್ರಭುತ್ವ ತೆಗೆದುಕೊಳ್ಳುವ ತೀರ್ಮಾನದ ನಡೆಗಳಿಂದ ಮಾತ್ರವೇ ಸಾಧ್ಯವಾಗುತ್ತದೆ. ಆಗಮಾತ್ರ ಈ ಮೂಲಕ ಕನ್ನಡದ ಬೆಳವಣಿಗೆಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಕನ್ನಡ ಜಗತ್ತು ಅರ್ಧ ಶತಮಾನ: ಕೆ.ವಿ.ನಾರಾಯಣ, 2006, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.129

3. ಆಡಳಿತ ನಿರ್ವಹಣೆಗಾಗಿಯೇ ಇರುವ ವಾಕ್ಯಗಳನ್ನು ಒಳಗೊಂಡಿರುವುದು ಕಾಣುತ್ತದೆ.

ಆಡಳಿತ ಕನ್ನಡದ ಬಳಕೆಯ ಕುರಿತಾಗಿ ಮುಖ್ಯವಾದ ಪ್ರಶ್ನೆಯಿರುವುದು ಅಲ್ಲಿ ಬಳಕೆಯಾಗುತ್ತಿರುವ ಭಾಷಾ ರೂಪಗಳಲ್ಲಿಯೇ. ಹೀಗೆ ಬಳಕೆಯಾಗುವ ಭಾಷಾ ರೂಪಗಳು ಭಾಷಾನೀತಿ ಮತ್ತು ಭಾಷಾಯೋಜನೆಯನ್ನು ಅನುಸರಿಸಿದ ಜನಪರವಾದ ನೆಲೆಯಲ್ಲಿ ಇರಬೇಕಾಗುತ್ತದೆ. ಹಾಗಿದ್ದಾಗ ಜನಪದ ಆಡಳಿತದ ಜನಪರವಾದ ಕಾಳಜಿಯೊಂದು ಅಲ್ಲಿರಲು ಸಾಧ್ಯವಾಗುತ್ತದೆ. ಆಡಳಿತದ ಮೊದಲ ಮೆಟ್ಟಿಲು ಜನಸಮುದಾಯದ ಪಾಲ್ಗೊಳ್ಳುವಿಕೆಯಿಂದಲೇ ಶುರುವಾಗುತ್ತದೆಯಾದ್ದರಿಂದ ಆಡಳಿತದ ಭಾಷೆಯೂ ಕೂಡ ಜನಬದುಕುಗಳಿಗೆ ಹತ್ತಿರವಾಗಿ ಇರಬೇಕಾದುದು ಅತ್ಯಂತ ಅವಶ್ಯಕವಾಗಿರುತ್ತದೆ.ಈ ಭಾಷಾರೂಪಗಳು ಜನ ಸಾಮಾನ್ಯರಿಗೆ ನಿಲುಕುವ ನೆಲೆಯಲ್ಲಿ ಇರಬೇಕಾಗುತ್ತದೆ. ಇದು ಮಾತ್ರವೇ ಅಲ್ಲದೆ ಈ ಹಂತದಲ್ಲಿ ಪ್ರಭುತ್ವದ ಗುರಿಯಲ್ಲಿ ಸರಳವೆನಿಸುವ ಜೀವಂತಿಕೆಯನ್ನು ಉಳಿಸಿಕೊಳ್ಳುವುದು ಮುಖ್ಯ. ಈ ನಿಟ್ಟಿನಲ್ಲಿ ಗ್ರಹಿಸಿದರೆ, ಈವತ್ತಿನ ಆಡಳಿತ ಬಳಕೆಯ ಕನ್ನಡವು ಜನಸಾಮಾನ್ಯರಿಗೆ ಅರ್ಥವಾಗದ ರೀತಿಯಲ್ಲಿ ಇದೆ. ಅದನ್ನು ಬದಲಾಯಿಸಬೇಕಾದ ಅವಶ್ಯಕತೆ ಇದೆ. ಈ ಹಂತದಲ್ಲಿ ಭಾಷೆಯನ್ನು ಕನ್ನಡ ಜಾಯಮಾನಕ್ಕೆ ಹೊಂದುವಂತೆ ಸಂವಹನಶೀಲವನ್ನಾಗಿಸಬೇಕಾಗಿದೆ.

ಆಡಳಿತ ಕನ್ನಡ ಅನುಷ್ಠಾನ ಯೋಜನೆಯು ಆಡಳಿತ ಭಾಷಾ ಅಧಿನಿಯಮದ ಅಂಗೀಕಾರದ ನಂತರ (1) ನಿಯಮ, ಕಾನೂನು ರಚನೆ (2) ಮೂಲ ಹಾಗೂ ಪೂರಕ ಸಾಹಿತ್ಯ ರಚನೆ (3) ತರಬೇತಿ (4) ಜನ ಜಾಗೃತಿ ಮೂಡಿಸುವುದು (5) ಆಡಳಿತ ಭಾಷಾ ಬಳಕೆಗೆ ಪ್ರೋತ್ಸಾಹ ಮತ್ತು (6) ಆಡಳಿತದಲ್ಲಿ ಕನ್ನಡ ಬಳಕೆಯ ಬಗ್ಗೆ ಉಸ್ತುವಾರಿ/ಮೇಲ್ವಿಚಾರಣೆ/ಕಾವಲು ಮೊದಲಾದ ನಡೆಗಳನ್ನು ಒಳಗೊಂಡಿರುತ್ತದೆ. ಕನ್ನಡವನ್ನು ಆಡಳಿತದ ಬಳಕೆಗೆ ಜಾರಿಗೊಳಿಸುವ ಈ ನಡೆಗಳು ಕಠಿಣಗೊಳ್ಳದಂತೆ, ಜಡಗೊಳ್ಳದಂತೆ ಎಚ್ಚರ ವಹಿಸಬೇಕಾಗುತ್ತದೆ.ಕನ್ನಡವನ್ನು ಬಳಸಿ ಯಾರನ್ನು ಉದ್ದೇಶಿಸಿ ಆಡಳಿತ ವ್ಯವಹಾರ ನಡೆಸಲಾಗಿರುತ್ತದೆಯೋ, ಅವರಿಗೆ ಆ ವಿಷಯವಸ್ತುವು ನೇರವಾಗಿ ತಲುಪುವಂತಿದೆಯೇ? ಎನ್ನುವುದುಮುಖ್ಯವಾಗುತ್ತದೆ. ಅಂದರೆ, ಆಡಳಿತವು ಶ್ರೀಸಾಮಾನ್ಯರನ್ನು ತಲುಪುತ್ತಿದೆಯೇ? ಎನ್ನುವುದೇ ಮುನ್ನೆಲೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಬಳಕೆಭಾಷೆಯ ದೃಷ್ಟಿಯಿಂದ 'ಸರಳ'ತೆ ಎಂದರೆ ಯಾವ ಜನಸಮುದಾಯಕ್ಕಾಗಿ ವಿಚಾರಗಳನ್ನು ವ್ಯಕ್ತಪಡಿಸಲಾಗಿದೆಯೋ ಅವರಿಗೆ ತಾವೇ ಓದಿಕೊಂಡಾಗ, ಓದು ಬರಹ ಬರದವರು ಬೇರೆಯವರಿಂದ ಓದಿಸಿ ಕೇಳಿಸಿಕೊಂಡಾಗ ವಿಷಯವು ನೇರವಾಗಿ ಅರ್ಥವಾಗುವಂತಿರಬೇಕು.

ಆಡಳಿತದಲ್ಲಿನ ಕನ್ನಡ ಕ್ಲಿಷ್ಟವಾಗಲು ಎರಡು ಮುಖ್ಯ ಕಾರಣಗಳೆಂದರೆ ಅಲ್ಲಿ ಬಳಸುವಂತಹ ತಾಂತ್ರಿಕ ಪದಗಳು ಮತ್ತು ವಾಕ್ಯರೂಪಗಳು. ಇಲ್ಲಿನ ವಾಕ್ಯರೂಪಗಳು ಸಂಯೋಜಕ ಪದಗಳನ್ನು ಬಳಸಿ ಮಾಡಿರುವಂತಹ ಉದ್ದುದ್ದದ ವಾಕ್ಯಗಳಾಗಿವೆ. ವಾಕ್ಯವು ಹೆಚ್ಚು ಉದ್ದವಿದ್ದಷ್ಟು ಹೆಚ್ಚು ತಪ್ಪುಗಳಾಗುವ ಸಾಧ್ಯತೆ ಇರುತ್ತದೆ. ಇವತ್ತಿನ ಆಡಳಿತ ಕನ್ನಡದಲ್ಲಿರುವ ಈ ವಾಕ್ಯರೂಪಗಳ ಬೆಳವಣಿಗೆಗೆ ಕಾರಣ ಇವು ಇಂಗ್ಲೀಷ್ ವಾಕ್ಯರಚನಾ ರೂಪಗಳನ್ನು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಅನುಸರಿಸಿರುವುದಾಗಿದೆ. ಅಲ್ಲದೆ ಬಹುಮಟ್ಟಿಗೆ ಜನಸಾಮಾನ್ಯರಲ್ಲಿ ಬಳಕೆಯಲ್ಲಿಲ್ಲದಂತಹ ವಾಕ್ಯರೂಪಗಳನ್ನು ಒಳಗೊಂಡಿದೆ.

ಕನ್ನಡ ಜಾಯಮಾನಕ್ಕೆ ಒಗ್ಗದಂತಹ ವಾಕ್ಯರೂಪಗಳನ್ನು ಮತ್ತು ಕರ್ಮಣಿ ರೂಪಗಳನ್ನು ಆಡಳಿತದಲ್ಲಿ ಬಳಸುತ್ತಿರುವುದು ಎದ್ದು ಕಾಣುತ್ತದೆ. ನೇರವಾಗಿ ನಿಕರವಾಗಿ ಹೇಳಬಹುದೆಂಬ ಉತ್ಪ್ರೇಕ್ಷೆಯಲ್ಲಿ ಅರ್ಥವಾಗುವ ಹಾಗೆ ಹೇಳಲಾಗುತ್ತಿಲ್ಲ. ಇದರಿಂದಾಗಿ, ವಿಷಯ ವಸ್ತುಗಳನ್ನು ಸುತ್ತಿ ಬಳಸಿ ತಿಳಿಯಬೇಕಾದ ಅನಿವಾರ್ಯತೆ ಕನ್ನಡ ಜನಬದುಕುಗಳ ಮುಂದಿದೆ. ಕೆಲವೊಮ್ಮೆ ಕಾನೂನು ಮತ್ತು ಆಡಳಿತ ಪುಸ್ತಕಗಳಿಂದ ಖಂಡಗಳನ್ನು ನೇರವಾಗಿ ಉದ್ಧರಿಸಬೇಕಾಗಿ ಬರುವುದರಿಂದಲೂ ಜನಸಾಮಾನ್ಯರಿಗೆ ಅಲ್ಲಿನ–ಆಡಳಿತದ ನೆಪದ–ಕ್ಲಿಷ್ಟ ಪಂಡಿತ ಕನ್ನಡ ಅರ್ಥವಾಗದೆ ಮಧ್ಯವರ್ತಿಗಳನ್ನು ಆಶ್ರಯಿಸಬೇಕಾಗಿದೆ.

ಹೆಚ್ಚಿನ ಮಟ್ಟಿನ ಅಧಿಕಾರಿವರ್ಗದ ಸಾಮಾನ್ಯ ಶಿಕ್ಷಣ ಮತ್ತು ಆಡಳಿತ ಶಿಕ್ಷಣ ಇಂಗ್ಲಿಷಿನಲ್ಲಾಗುವುದರಿಂದ ಅವರು ಬಳಸುವ ಆಡಳಿತ ಕನ್ನಡವೂ ಸಹ ಇಂಗ್ಲಿಷ್ ಮೂಸೆಯಲ್ಲಿ ರೂಪುಗೊಂಡಿರುವಂತಹದ್ದಾಗಿರುತ್ತದೆ. ಹೀಗಾಗಿ ಬರವಣಿಗೆಯ ಚೌಕಟ್ಟಿನಲ್ಲಿ ಕನ್ನಡ ಪದಗಳನ್ನು ತುಂಬಿದಂತೆ ಮಾತ್ರವೇ ಕಾಣಲು ಸಾಧ್ಯ. ಕ್ಲಿಷ್ಟವಾದ ಕನ್ನಡವನ್ನು ಆಡಳಿತದಲ್ಲಿ ಬಳಸುವುದರಿಂದ ಇಂಗ್ಲಿಶಿನಷ್ಟೇ ಕನ್ನಡವೂ ಜನಸಾಮಾನ್ಯರಿಗೆ ಕಷ್ಟವಾಗುತ್ತದೆ ಎನ್ನುವ ಎಚ್ಚರವು ಇಲ್ಲವಾದರೆ ಕನ್ನಡದಲ್ಲಿ ಆಡಳಿತ ಎನ್ನುವುದು ತೋರಿಕೆಯದ್ದು ಮಾತ್ರವೇ ಆಗಿರುತ್ತದೆ. ಹೀಗಾದಾಗ ಪ್ರಭುತ್ವ ಮತ್ತು ಜನತೆಯ ನಡುವೆ ಅಂತರ ಹೆಚ್ಚಾಗುತ್ತಾ ಹೋಗುತ್ತದೆ.

ಅನೇಕ ಸಾರಿ ಆಡಳಿತದ ವಿಚಾರದಲ್ಲಿ ಆಡಳಿತಾಧಿಕಾರಿಗೆ ಸರಳವೆಂದು ಕಾಣುವ ಕನ್ನಡ ಜನಸಾಮಾನ್ಯರಿಗೆ ಕಷ್ಟವಾಗಿರುತ್ತದೆ. ಏಕೆಂದರೆ ನಿತ್ಯವೂ ಆಡಳಿತದಲ್ಲಿ ಭಾಗಿಯಾಗುವ ಆಡಳಿತಾಧಿಕಾರಿಗಳಿಗೆ ಅಭ್ಯಾಸದಿಂದಾಗಿ ಮಾತ್ರವೇ ಸರಳವೆನಿಸುವ ತಾಂತ್ರಿಕ ಪದಗಳು, ಕ್ಲಿಷ್ಟ ವಾಕ್ಯರೂಪಗಳು ಜನ ಸಾಮಾನ್ಯಕ್ಕೆ ಅರ್ಥವಾಗದಿರುವುದು ಸಹಜವೇ ಆಗಿದೆ. ಆಡಳಿತ, ಆಡಳಿತದ ಭಾಷೆ ಮೊದಲಾಗಿ ಅಲ್ಲಿನ ಜ್ಞಾನ ಮತ್ತು ವ್ಯವಹಾರದ ಪರಿಧಿ

ಆಡಳಿತಾಧಿಕಾರಿಗಳಿಗೂ, ಜನಸಾಮಾನ್ಯಕ್ಕೂ ಬೇರೆಯೇ ಆಗಿರುತ್ತದೆ. ಇವೆರಡೂ ನೆಲೆಗಳು ಪೂರಕವಾಗಿರುವ ಆಡಳಿತ ಸನ್ನಿವೇಶವು ಮಾತ್ರವೇ ಆರೋಗ್ಯವಾಗಿರಬಹುದಾಗಿರುತ್ತದೆ.

ಶ್ರೀಸಾಮಾನ್ಯನಿಗೆ ಸರಳವೆನಿಸುವ ಕನ್ನಡವು ಆಡಳಿತದ ದೃಷ್ಟಿಯಿಂದ ಘನತೆಯನ್ನು, ಗಾಂಭೀರ್ಯವನ್ನು ಹೊಂದಿರುವುದಿಲ್ಲ, ಅದಕ್ಕೆ ಶಿಷ್ಟತೆ ಇರುವುದಿಲ್ಲ ಎಂಬ ನಂಬಿಕೆಯು ಕರ್ನಾಟಕದ ಸನ್ನಿವೇಶದಲ್ಲಿ ಆಳವಾಗಿ ಬೇರೂರಿ ಬೆಳೆದಿದೆ. ಇಂತಹ ಅನಗತ್ಯ ನಂಬಿಕೆಯಿಂದಾಗಿ ದಿನಬಳಕೆಯ ಕನ್ನಡದಲ್ಲಿ ಇಲ್ಲದಂತಹ ಭಾಷಾರೂಪಗಳು ಆಡಳಿತ ಕನ್ನಡದಲ್ಲಿ ನೆಲೆಯನ್ನು ಪಡೆದುಕೊಳ್ಳುವಂತಾಗಿವೆ. ಹೀಗಾಗಿ ಭಾಷೆ ತಾನು ಹೇಳುವ ಆಡಳಿತ ವಿಷಯವು ಜನತೆಯ ಅರಿವಿಗೆ ನಿಲುಕದಂತೆ ದೂರವೇ ಉಳಿದು ಬಿಡುವಂತಾಗುತ್ತಿದೆ.

ವಸಾಹತುಶಾಹಿ ಭಾಷೆಯಾದ ಇಂಗ್ಲಿಷ್‌ನ ಛಾಯೆಯಲ್ಲಿ ಆಡಳಿತ ಕನ್ನಡ ಯೋಜಿತವಾಗಿ ಬೆಳೆದುಬಂದುದರಿಂದ ಬಳಕೆಯಾಗುವ ಆಡಳಿತ ಭಾಷೆಯಲ್ಲಿ ಅನೇಕ ಸಾರಿ ಗುಲಾಮಿಕೆಯ ನೆರಳು ಕಾಣುತ್ತದೆ. ಸಾರ್ವಜನಿಕರು ಸರ್ಕಾರವನ್ನು ಅಂದರೆ ಸರ್ಕಾರದ ಅಧಿಕಾರಗಳನ್ನು 'ಕ್ಷೇಳಿಕೊಳ್ಳುವರು', 'ಬೇಡಿಕೊಳ್ಳುವರು', 'ಪ್ರಾರ್ಥಿಸಿಕೊಳ್ಳುವರು' ಆಗಿ ಮಾತ್ರವೇ ಪಾಲ್ಗೊಳ್ಳುವಂತಾಗಿದೆ. ಪ್ರಭುತ್ವದೊಂದಿಗಿನ ಜನರ ಆಡಳಿತ ವ್ಯವಹಾರಗಳಲ್ಲಿ'ಕೇಳಿಕೊಳ್ಳುತ್ತೇನೆ', 'ಬೇಡಿಕೊಳ್ಳುತ್ತೇನೆ', 'ಪ್ರಾರ್ಥಿಸಿಕೊಳ್ಳುತ್ತೇನೆ' ಎಂದು ಬಳಸುವುದು ಸಾಮಾನ್ಯವೆನಿಸಿಬಿಟ್ಟಿದೆ. ಈ ವಿಚಾರದಲ್ಲಿ ಪ್ರಭುತ್ವದ ನಡೆಗಳು ಯಾವಾಗಲೂ 'ಸೂಚಿಸಲಾಗಿದೆ', 'ತಿಳಿಸಲಾಗಿದೆ', 'ಕೊಡತಕ್ಕದ್ದು', 'ಮಾಡತಕ್ಕದ್ದು' ಮುಂತಾಗಿ ಆದೇಶಿತ ವಾಕ್ಯರೂಪಗಳ ಬಳಕೆಯ ರೂಪದಲ್ಲಿದ್ದರೆ ಸಾರ್ವಜನಿಕರೆನಿಸಿಕೊಂಡವರು'ಸ್ವಾಮಿ' 'ಮಹಾಸ್ವಾಮಿ', 'ಖಾವಂದರೇ', 'ಸಾಹೇಬರೇ' ಇತ್ಯಾದಿಗಳನ್ನು ಬಳಸುವುದರ ಜೊತೆಗೆ 'ಅರ್ಪಿಸಲಾಗಿದೆ', 'ಸಮರ್ಪಿಸಲಾಗಿದೆ' ಮೊದಲಾಗಿ ಬೇಡಿಕೊಳ್ಳುವ ನೆಲೆಯಲ್ಲಿರುವುದು ಕಾಣುತ್ತದೆ[17].

ಅಂದರೆ; ಹೇರಿಕೆಯ, ಆದೇಶಿತ ಅಧಿಕಾರದ ಲಕ್ಷಣಗಳು ಪ್ರಭುತ್ವ ಪ್ರೇರಿತ ಆಡಳಿತದ ನಡೆಯಾಗಿದ್ದರೆ, ಜನಸಾಮಾನ್ಯರ ಪಾಲ್ಗೊಳ್ಳುವಿಕೆಯು ಕೋರಿಕೆಯ ಬಗೆಯದೇ ಆಗಿರಬೇಕೆಂಬುದನ್ನು ನಿರೀಕ್ಷಿಸಲಾಗುತ್ತದೆ. ಆದ್ದರಿಂದಾಗಿ ಜನಸಾಮಾನ್ಯರ ಬೇಡಿಕೆಯು ಅಹವಾಲು, ಮನವಿಯ ರೂಪದಲ್ಲಿಯೇ ಇರುತ್ತದೆ. ಇಲ್ಲಿ ಮುಖ್ಯವಾದ ಪ್ರಶ್ನೆಯೆಂದರೆ, ಪ್ರಭುತ್ವ ಮತ್ತು ಜನತೆಯ ನಡುವೆ ಇರುವ ವ್ಯತ್ಯಾಸದ್ದು. ಪ್ರಭುತ್ವ ಮತ್ತು ಜನತೆ ಒಂದೇ ವಿಷಯಕ್ಕೆ

---

[17] ಭ.ಮಲ್ಲಿಕಾರ್ಜುನ ಆಡಳಿತದಲ್ಲಿ ಕನ್ನಡ ಪು.58, ನಾಡೋಜ ಪ್ರೊ. ಹಂಪ ನಾಗರಾಜಯ್ಯ ರವರ (ಸಂ) ಪುನರಾವಲೋಕನ. ಕನ್ನಡ ಸಂಸ್ಕೃತಿ ಇಲಾಖೆ, 2011

ಸ್ಪಂಧಿಸುವಾಗ ಇರುವ ಇಂತಹ ಭಿನ್ನತೆಯು ಆಡಳಿತವನ್ನು ಜನರ ಬಳಿಗೆ ಹೋಗದಂತೆ ತಡೆಯುತ್ತದೆ. ಪ್ರಜಾಪ್ರಭುತ್ವದ ಮೂಲವಾದ ಸಮಾನತೆ ಎಂಬುದನ್ನು ವಾಸ್ತವದಲ್ಲಿ ಆಚರಿಸಲಾಗದಂತೆ ಮಾಡುತ್ತದೆ.

ಜನಸಮುದಾಯದ ಪಾಲ್ಗೊಳ್ಳುವಿಕೆಯ ಮೂಲಕವೇ ಸಾಮಾಜಿಕ ಸಮಾನತೆಯ ಆಶಯವನ್ನು ಹೊತ್ತ ಆಡಳಿತದಲ್ಲಿ ಹೀಗೆ ಬಳಸಲ್ಪಡುವ ಭಾಷೆಯು ಸಮಾನ ಅವಕಾಶವನ್ನು ಪ್ರತಿಫಲಿಸುವಂತಿದೆಯೇ? ಈ ಅಂತರವನ್ನು ಹೋಗಲಾಡಿಸಿಕೊಳ್ಳುವುದು ಹೇಗೆ? ಈ ಅಂತರವನ್ನು ಕಡಿಮೆ ಮಾಡುವುದಕ್ಕೆ ಆಗುವುದಿಲ್ಲವೇ? ಇದನ್ನು ಸಂಪೂರ್ಣವಾಗಿ ಅಳಿಸಲು ಸಾಧ್ಯವಿರುವ ದಾರಿಗಳು ಯಾವುವು? ಈ ಅಂತರ ಯಾವಾಗಲೂ ಅಲ್ಲಿ ಬಳಸುವ ಭಾಷೆಯ ಮೂಲಕವೇ ವ್ಯಕ್ತವಾಗುತ್ತಿರುತ್ತದೆ. ಹೀಗಾಗಿ ಸರ್ಕಾರ ಮತ್ತು ಸಾರ್ವಜನಿಕರ ನಡುವಿನ ಅಂತರದ ಆಚರಣೆ ನಡೆಯುತ್ತಿರುತ್ತದೆ. ಭಾಷೆ ಅದರ ಅಭಿವ್ಯಕ್ತಿಯ ಸಾಧನವಾದಾಗ ಪ್ರಜಾಪ್ರಭುತ್ವದ ಸೋಲು ನಿರಂತರವಾಗುವಂತಾಗುತ್ತದೆ. ಈ ಗುಲಾಮಿ ಭಾಷಾರೂಪಗಳನ್ನು ಬದಲಿಸಿಕೊಳ್ಳುವುದು ಆಡಳಿತ ಭಾಷೆಯ ಮುಖ್ಯ ಗುರಿಗಳಲ್ಲಿ ಒಂದಾಗಬೇಕಾಗುತ್ತದೆ. ಇದು ಆಡಳಿತ ಕನ್ನಡವನ್ನು ಸರಳವಾಗಿಸುವ ನಡೆಗೇ ಚಾಲನೆಯನ್ನು ಒದಗಿಸುತ್ತದೆ. ಇಲ್ಲವಾದಲ್ಲಿ ಅಧಿಕಾರವು ಕ್ಲಿಷ್ಟವಾಗುವ ನಡೆಯಲ್ಲಿಯೇ ಆಡಳಿತ ಭಾಷೆಯು ವಿಜೃಂಭಿಸುವಂತಾಗುತ್ತದೆ.

ಕರ್ನಾಟಕ ರಾಜಭಾಷಾ ಅಧಿನಿಯಮ, 1963ರಲ್ಲಿ "ಸರ್ಕಾರವು ಅನ್ಯಥಾ ನಿರ್ದೇಶಿಸುವವರೆಗೆ ಸರ್ಕಾರಿ ಉದ್ದೇಶಗಳಿಗಾಗಿ ಇಂಗ್ಲಿಷ್ ಉಪಯೋಗಿಸುವುದನ್ನು ಮುಂದುವರಿಸುವುದು" ಎಂದಿದೆ. ಈವತ್ತಿಗೂ ಕೂಡ ಪ್ರಭುತ್ವದ ಎಲ್ಲಾ ಚರ್ಚೆಗಳು, ನಿರ್ಣಯಗಳು, ಶಾಸನಗಳು ಮೊದಲಾಗಿ ಎಲ್ಲವೂ ಮೊದಲು ಇಂಗ್ಲಿಶಿನಲ್ಲಿ ದಾಖಲುಗೊಳ್ಳುತ್ತವೆ. ಹಾಗೆ ದಾಖಲುಗೊಂಡ ಆನಂತರವೇ ಕನ್ನಡಕ್ಕೆ ತರ್ಜುಮೆ ಮಾಡಿಕೊಂಡು ಬಳಸಬೇಕೆಂಬ ನಿಯಮವನ್ನು ಜಾರಿಯಲ್ಲಿಡಲಾಗಿದೆ. ಇದು ಕನ್ನಡದಲ್ಲಿ ಆಡಳಿತ ಇರಬೇಕು ಎನ್ನುವ ನಡೆಯಲ್ಲಿ ಬಹುದೊಡ್ಡ ಸವಾಲಾಗಿದೆ. ಆಡಳಿತ ಕನ್ನಡ ಎದುರಿಸುತ್ತಿರುವ ದೊಡ್ಡ ಎದುರಾಳಿ ಕೂಡ ಇದೇನೆ. ಇದರಿಂದ ಕನ್ನಡ ಬಳಕೆಯಲ್ಲಿ ಏನೇನು ಅನಾಹುತಗಳು ನಡೆಯುತ್ತಿವೆ ಎನ್ನುವುದನ್ನು ಗ್ರಹಿಸಿದರೆ ಇದು ತಿಳಿಯುತ್ತದೆ (ಐದು ಮತ್ತು ಆರನೇ ಅಧ್ಯಾಯಗಳಲ್ಲಿ ಇದನ್ನು ವಿಸ್ತಾರವಾಗಿ ಚರ್ಚಿಸಲಾಗಿದೆ).

ಕರ್ನಾಟಕದ ಆಡಳಿತ ನೂರಕ್ಕೆ ನೂರರಷ್ಟು ಕನ್ನಡದಲ್ಲಿ ಆಗಬೇಕೇ? ಎಂದು ಪ್ರಶ್ನೆಯನ್ನು ಹಾಕಿಕೊಂಡು ಚರ್ಚಿಸುವ ಭ.ಮಲ್ಲಿಕಾರ್ಜುನ ಅವರು ಅದು ಕೇವಲ ನಿರ್ಣಯಗಳ ನಾಟಕಗಳಿಂದ, ಕನ್ನಡ ಬಳಸದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು

ಎಂದು ಹೋರಾಡುವುದರ ಮೂಲಕ ಮಾತ್ರವೇ ಆಗದ ಕೆಲಸ ಎನ್ನುವುದನ್ನು ಹೀಗೆ ನಿರ್ದೇಶಿಸಿದ್ದಾರೆ. ಅವರೆನ್ನುವಂತೆ; ಕರ್ನಾಟಕ ರಾಜಭಾಷಾ ಅಧಿನಿಯಮ 1963ಕ್ಕೆ ತಕ್ಷಣ ತಿದ್ದುಪಡಿ ತರಬೇಕು. ಅಧಿನಿಯಮಕ್ಕೆ ತಿದ್ದುಪಡಿಯನ್ನು ತರುವುದರ ಮೂಲಕ ಇಂಗ್ಲಿಶನ್ನು ಉಳಿಸಿಕೊಳ್ಳುವ ಈ ಖಂಡಿಕೆಯನ್ನು ಕೈ ಬಿಡುವ ಅಗತ್ಯ ಇಂದು ಇದೆ. ಆಗ ಪೂರ್ಣ ಪ್ರಮಾಣದಲ್ಲಿ ಕನ್ನಡವು ಕರ್ನಾಟಕ ರಾಜ್ಯದ ರಾಜಭಾಷೆಯಾಗುತ್ತದೆ ಎಂಬುದು ಅವರ ನಿಲುವು.

ಏಕೆ ಕನ್ನಡ ಆಡಳಿತ ಭಾಷೆಯಾಗಬೇಕು, ಹಾಗೆ ಆಗದಿದ್ದರೆ ಆಗುವ ತೊಂದರೆಗಳೇನು? ಕನ್ನಡ ಬಳಕೆಯಾಗದಿದ್ದಲ್ಲಿ ಅದರ ಪ್ರಯೋಜನಗಳು ಪೂರ್ವನಿರ್ಧಾರಿತವಾಗಿ ಯಾರಿಗಾದರೂ ಇರುವುದು ಸಾಧ್ಯವೇ? ಎಂಬ ಪ್ರಶ್ನೆಗಳ ಹಿನ್ನೆಲೆಯಲ್ಲಿ ಚರ್ಚಿಸಿದವರು ಭಾಷೆ ಮತ್ತು ಸಂಸ್ಕೃತಿ ಚಿಂತಕರಾದ ಕೆ.ವಿ.ನಾರಾಯಣ ಅವರು. ಜನರ ಭಾಷೆ, ಆಡಳಿತ ಭಾಷೆ ಮತ್ತು ಆಡಳಿತದಲ್ಲಿ ಜನಸಾಮಾನ್ಯರ ಪಾತ್ರ ಇವುಗಳ ಬಗೆಗೆ ಮಾತನಾಡುತ್ತಾ ಅವರು ಮುಖ್ಯವಾಗಿ ಎರಡು ಸಂಗತಿಗಳನ್ನು ಪ್ರಸ್ತಾಪಿಸುತ್ತಾರೆ. ಒಂದು: ಆಡಳಿತಯಂತ್ರದ ಉತ್ತರದಾಯಿತ್ವ; ಎರಡು: ಆಡಳಿತ ಯಂತ್ರದ ಪಾರದರ್ಶಕತೆ. ಕಳೆದ ಐವತ್ತು ವರ್ಷಗಳ ಚರಿತ್ರೆಯಲ್ಲಿ ಈ ಎರಡು ಸಂಗತಿಗಳು ದೃಢಗೊಳ್ಳುತ್ತಾ ಹೋಗುವ ಬದಲು ಸಡಿಲವಾಗುತ್ತಾ ಬಂದಿವೆ ಎನ್ನುತ್ತಾ, ಈ ಕಾರಣದಿಂದ ಜನರು ಆಡಳಿತ ಯಂತ್ರದೊಡನೆ ಹೊಂದಿರುವ ಸಂಬಂಧ ಅತ್ಯಂತ ಕನಿಷ್ಠ ಪ್ರಮಾಣದ್ದಾಗಿದೆ. ಹಾಗೆ ಉಳಿದಿರುವ ಸಂಬಂಧದಲ್ಲೂ ಜನರ ಅಪೇಕ್ಷೆಗಳು, ದೃಷ್ಟಿಕೋನಗಳು ಮಾನ್ಯವಾಗುವುದಿಲ್ಲ. ಹೀಗಾಗಿ ಜನಭಾಷೆಯು ಆಡಳಿತದ ಭಾಷೆಯಾಗಿ ನೆಲೆಗೊಳ್ಳುವ ಅವಕಾಶಗಳು ಕಡಿಮೆಯಾಗುತ್ತಿರುವ ಆತಂಕವು ಅವರ ಮಾತುಗಳಲ್ಲಿ ಕಾಣುತ್ತದೆ[18].

ಪ್ರಭುತ್ವದ ವ್ಯಾಪ್ತಿಯಲ್ಲಿ ನಡೆಸಲ್ಪಡುವ ಜನ ಬದುಕುಗಳ ಕಲ್ಯಾಣ ಕೆಲಸಗಳು ಜನಮುಖಿಯ ಗುರಿಯನ್ನು ಹೊಂದಿರಬೇಕೆಂಬುದು ಆಶಯವಾಗಿರುತ್ತದೆ. ಆದರೆ, ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಯುವ ಆಡಳಿತವು ಕೂಡ ಕೊಡುವ, ನೀಡುವ ನೆಲೆಯ ಯಜಮಾನಿಕೆಯಲ್ಲಿ ವರ್ತಿಸುತ್ತಿರುತ್ತದೆ. ಜನರು ಬೇಡಿ ಪಡೆಯಬೇಕೆಂಬ ಗತ್ತನ್ನು ಅಧಿಕಾರದಲ್ಲಿದ್ದವರು ತೋರಿಸುವವರಾಗುತ್ತಾರೆ. ಅಂದರೆ, 'ಜನರನ್ನು ಫಲಾನುಭವಿಗಳನ್ನಾಗಿಯೇ ಪರಿಗಣಿಸಲಾಗುತ್ತಿದೆ. ಅವರನ್ನು ಭಾಗಿದಾರರನ್ನಾಗಿ ಮಾಡುತ್ತಿಲ್ಲ. ಇದರಿಂದಾಗಿ ಆಡಳಿತವು ಜನಸಾಮಾನ್ಯ ಮತ್ತು ಸರ್ಕಾರ ಬೇಡುವ-ಕೊಡುವ ಸೀಮಿತ

---

[18]ಕನ್ನಡ ಜಗತ್ತು ಅರ್ಧ ಶತಮಾನ: ಕೆ.ವಿ.ನಾರಾಯಣ, 2006, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 139

ನೆಲೆಯಲ್ಲಿ ಆಚರಿಸಲ್ಪಡುತ್ತದೆ. ಇಂತಹ ಸನ್ನಿವೇಶದಲ್ಲಿ ಆಡಳಿತ ಭಾಷೆಯು ಕೂಡ 'ಅಧಿಕಾರ'ವನ್ನು ಮಾತ್ರವೇ ಬಿಂಬಿಸುತ್ತಿರುತ್ತದೆ. ಕನ್ನಡವನ್ನು ಪ್ರಭುತ್ವದ ನಡುವಿನ ಜನಸಂಪರ್ಕಕ್ಕಾಗಿ ಬಳಸಿದರೂ ಇಂತಹ ಪರಿಸ್ಥಿತಿಯಲ್ಲಿ ಅದರ ಉದ್ದೇಶವು ಪೂರ್ಣವಾಗಿ ಯಶಸ್ಸು ಪಡೆಯಲಾರದು.

ಇದು ಮತ್ತೊಂದು ಬಗೆಯಲ್ಲಿ ಬ್ರಿಟಿಷ್ ಆಡಳಿತದ ತಾತ್ವಿಕತೆಯೇ ಆಗಿ ಉಳಿದಿರುವುದನ್ನು ತೋರಿಸುತ್ತದೆ. ಜೊತೆಗೆ ಭಾರತೀಯ ಸಮಾಜವು ಆಚರಿಸಿಕೊಂಡು ಬಂದ ಭಾರತೀಯ ರಾಜಪ್ರಭುತ್ವದ ಸಾಮಂತಶಾಹಿಯಂತೆಯೂ, ಇಂದಿಗೂ ಇರುವ ಜಾತಿ ವ್ಯವಸ್ಥೆಯೊಳಗಿನ ಮೇಲುಕೀಳುಗಳ ಆಚರಣೆಯಂತೆಯೂ ಕಾಣುತ್ತದೆ. ಬ್ರಿಟಿಷ್ ಆಡಳಿತ ಮತ್ತು ಮೇಲುಜಾತಿಗಳ ಫ್ಯೂಡಲ್ ಆಚರಣೆ ಒಂದಾದ ಮಾದರಿ ಎಂತಲೂ ಇದನ್ನು ಗುರುತಿಸಬಹುದಾಗಿದೆ[19]. ಇದು ಸಂವಿಧಾನಾತ್ಮಕ ಆಶಯದ ಪ್ರಜಾಪ್ರಭುತ್ವದ ತಾತ್ತ್ವಿಕತೆಗಿಂತ ಬೇರೆಯಾದುದು. 'ಜನರೊಡನೆ ಅಧಿಕಾರವುಳ್ಳವರು ಮಾತಾಡುವಾಗ ಬಳಸುವ ಭಾಷೆಗೂ, ಜನರು ಅಧಿಕಾರವುಳ್ಳವರೊಡನೆ ಮಾತಾಡುವಾಗ ಬಳಸುವ ಭಾಷೆಗೂ, ಅಧಿಕಾರವುಳ್ಳವರು ತಮ್ಮತಮ್ಮಲ್ಲೇ ವ್ಯವಹರಿಸುವಾಗ ಬಳಸುವ ಭಾಷೆಗೂ ಅಗಾಧ ವ್ಯತ್ಯಾಸವಿರುತ್ತದೆ. ಈ ಸಂಕೀರ್ಣತೆಯಲ್ಲಿ ನಾವು ಕನ್ನಡದ ಸ್ಥಾನಮಾನಗಳ ಸ್ವರೂಪವನ್ನು ಗ್ರಹಿಸಬೇಕಾಗುತ್ತದೆ'.

ಕನ್ನಡದಲ್ಲಿ ಆಡಳಿತದ ಅವಶ್ಯಕತೆಯ ಪ್ರಶ್ನೆಯನ್ನು ಕೇಳಿಕೊಳ್ಳುವಾಗ ಕರ್ನಾಟಕ ಸಮಾಜದಲ್ಲಿ ನಡೆಯುತ್ತಿರುವ ಅನೇಕ ಪಲ್ಲಟಗಳು ಮುಖ್ಯವಾಗುತ್ತವೆ. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹೇಗೆ ನಡೆದಿದೆ ಹಾಗೂ ನಡೆಯುತ್ತಿದೆ, ಅವು ಒಡ್ಡುತ್ತಿರುವ ಸವಾಲುಗಳು, ಕರ್ನಾಟಕದ ನಾಳೆಗಳಲ್ಲಿ ಕನ್ನಡದ ಪ್ರಸ್ತುತತೆಯನ್ನು ಉಳಿಸಿಕೊಳ್ಳುವ ಬಗೆ ಮೊದಲಾದ ಸಂಗತಿಗಳು ಮುನ್ನೆಲೆಯನ್ನು ಪಡೆದುಕೊಳ್ಳುತ್ತಿವೆ. ಈಗಾಗಲೇ ಈಪಲ್ಲಟಗಳು ಭಾಷೆಯ ಮೇಲೆಯೂ ಸಾಕಷ್ಟು ಪ್ರಭಾವವನ್ನುಉಂಟುಮಾಡಿವೆ. ಇಂದು ಬಳಕೆಯಲ್ಲಿರುವ ಆಡಳಿತ ಕನ್ನಡವು 'ಸಂಸ್ಕೃತೀಕರಣ'ದ ಹೊಡೆತಕ್ಕೆ ಸಿಲುಕಿದೆ. ಇದೇ 'ಸಂಸ್ಕೃತ' ಭಾಷೆಯ ಮಾನದಿಂದ ಅಳೆಯಲ್ಪಡುವ ಪ್ರಮಾಣಭೂತ ಭಾಷೆಯಾಗಿ ಮಾರ್ಪಟ್ಟಿದೆ. ಈ ಮೂಲಕ 'ಶುದ್ಧಭಾಷೆ' ಎಂಬ ಪರಿಕಲ್ಪನೆಯು ಅನಧಿಕೃತವಾಗಿ ಜಾರಿಗೆ ಬಂದಂತಾಗಿ ಜನಭಾಷೆ ಮತ್ತು ಪ್ರಭುತ್ವದ ಭಾಷೆಯ

---

[19]'ಇಲ್ಲಿ ಜನರು ತಮ್ಮ ದೈನಂದಿನ ಬದುಕಿನಲ್ಲಿ ಆಡಳಿತದೊಂದಿಗೆ ಯಾವ ಸಂಪರ್ಕವನ್ನೂ ಇರಿಸಿಕೊಳ್ಳದೆ ಕೇವಲ ತೆರಿಗೆದಾರರಾಗಿ ಅಥವಾ ಸರಕಾರಕ್ಕೆ ಬೇಕಾದ ಸೇವಾವಲಯದಲ್ಲಿ ಸೇವೆಗಳನ್ನು ಸಲ್ಲಿಸುವವರಾಗಿ ಇರುತ್ತಿದ್ದರು. ಆಡಳಿತದ ಸಾರ್ವಭೌಮತ್ವವೆಲ್ಲಾ ಜನರ ಪ್ರಜ್ಞೆಯ ಆಚೆಗಿನ ಮಾತಾಗಿತ್ತು. ಎಲ್ಲಾ ಸಾಮಂತಶಾಹಿ ವ್ಯವಸ್ಥೆಗಳಲ್ಲೂ ಕಂಡುಬರುವ ಈ ಸ್ಥಿತಿಯು ಇಲ್ಲಿಯೂ ಮುಂದುವರೆದಿತ್ತು. ಹೀಗಿರುವಾಗ ಆಗಿನ ಆಡಳಿತದಲ್ಲಿ ಕನ್ನಡಕ್ಕೆ ಸಾರ್ವಭೌಮ ಸ್ಥಾನ ದೊರಕುವುದು ಖಂಡಿತ ಸಾಧ್ಯವಿರಲಿಲ್ಲ. ಜನರಿಗೆ ಅಗತ್ಯವಾದ ಮಾಹಿತಿಗಳನ್ನು ಮಾತು ಇಲ್ಲವೇ ಬರಹಗಳ ಮೂಲಕ ಒದಗಿಸುವ ಸರ್ಕಾರ ಯಾವಾಗಲೂ ಜನರ ಭಾಷೆಯನ್ನೇ ಬಳಸಿಕೊಳ್ಳುತ್ತಿರುತ್ತದೆ. ಇಂತಹ ಬಳಕೆಗಳನ್ನು ನಾವು ಎಲ್ಲಾ ಕಾಲದಲ್ಲೂ ಕಾಣುತ್ತೇವೆ. ನಮ್ಮ ಪ್ರಾಚೀನ ಶಾಸನಗಳು ಕನ್ನಡದಲ್ಲಿ ಇರುವುದಕ್ಕೆ ಇದೇ ಕಾರಣ.

ನಡುವೆ ಕಂದರ ಏರ್ಪಟ್ಟದೆ. ಶುದ್ಧಭಾಷೆ ಎನ್ನುವುದು ಸಂಸ್ಕೃತ ಪರಂಪರೆಯ ಶಿಷ್ಟೀಕರಣದ ಪರಿಕಲ್ಪನೆಯನ್ನು ಗಟ್ಟಿಗೊಳಿಸುತ್ತಾ ಬಂದದ್ದರಿಂದಾಗಿ ಪ್ರಮಾಣ ಕನ್ನಡದ ನೆಪದಲ್ಲಿ ಕನ್ನಡದ ಒಳನುಡಿಗಳು (ಕನ್ನಡ ಜನಭಾಷೆ) ಕೀಳರಿಮೆಗೆ ಒಳಗಾಗಿವೆ.

ಭಾಷೆ ಯಾವಾಗಲೂ ಬದಲಾವಣೆಯನ್ನು ಅರಿಗಿಸಿಕೊಳ್ಳುವಂತಹುದು. ಆದರೆ, ಪ್ರಮಾಣೀಕೃತ ಕನ್ನಡದ ನೆಪದಲ್ಲಿ ಜನಭಾಷೆಯ ಕನ್ನಡವಾದ ಒಳನುಡಿಗಳನ್ನು ನಿರಾಕರಿಸಿ ಬದಿಗೆ ಸರಿಸಿರುವುದು ಕಾಣುತ್ತದೆ. ಒಳನುಡಿಗಳು ಭಾಷಿಕ ಸಮೃದ್ಧತೆಗೆ ಕಾರಣವಾಗಿರುವುದಲ್ಲದೆ ನಿರಂತರವಾದ ಸಾಮಾಜಿಕ ಬೆಳವಣಿಗೆಯಲ್ಲಿ ಬದಲಾವಣೆಗಳನ್ನು ಪಡೆದುಕೊಳ್ಳುತ್ತಿರುವವೂ ಆಗಿ ಬೆಳೆಯುತ್ತಿವೆ. ಕನ್ನಡದಲ್ಲಿ ಆಡಳಿತ ಎಂದರೆ ಪ್ರಮಾಣ ಭಾಷೆಯ ನೆಪದಲ್ಲಿ ನಿರಾಕರಿಸಲ್ಪಟ್ಟ ಒಳನುಡಿಗಳನ್ನು ಉಪಯೋಗಿಸಿಕೊಂಡು ಆಡಳಿತವನ್ನು ಮಾಡುವಂತಹದು ಎಂದಾಗುತ್ತದೆ. ಅಂದರೆ, ಭಾಷಿಕರು ಆಡಳಿತದಲ್ಲಿ ಪಾಲ್ಗೊಳ್ಳುವ ನಡೆ ಅದು ಎಂದಾಗುತ್ತದೆ. ಒಳನುಡಿಗಳಿಂದ ರೂಪುಗೊಂಡ ಆಡಳಿತ ಭಾಷೆಯು ಸಮುದಾಯದ ನಂಟನ್ನು ಸಾಧ್ಯವಾಗಿಸುತ್ತದೆ. ಇದರಿಂದ ಆಡಳಿತವೂ ಜನಬದುಕುಗಳಿಗೆ ಪೂರಕವಾಗಿರುತ್ತದೆ. ಒಳನುಡಿಗಳ ಸಮೃದ್ಧತೆಯು ಜನಬದುಕಿನ ತಿಳಿವನ್ನು ಒಳಗೊಂಡಿರುವುದರಿಂದಾಗಿ ಅದರ ಮೂಲಕ ರೂಪುಗೊಳ್ಳುವ ಆಡಳಿತ ಭಾಷೆಯು ಆ ವ್ಯಾಪ್ತಿಯ ಜನಬದುಕುಗಳನ್ನು ತಲುವುದಕ್ಕೆ ಸರಿಯಾದ ಸಾಧನವೂ ಆಗುತ್ತದೆ.ವಸಾಹತೋತ್ತರ ಕಾಲಘಟ್ಟದ ಭಾಷಾವಿಜ್ಞಾನದ ಅಧ್ಯಯನದಲ್ಲಿ ಆದ ತಿರುವುಗಳು ಇದನ್ನು ತೋರಿಸಿಕೊಟ್ಟಿವೆ.ಈ ನಿಟ್ಟಿನಲ್ಲಿ ಆಡಳಿತ ಭಾಷೆಯಾಗಿ ಕನ್ನಡವನ್ನು ಗ್ರಹಿಸಬೇಕಾಗುತ್ತದೆ. ಆದರೆ, ಒಳನುಡಿಗಳು ಮುನ್ನೆಲೆಗೆ ಬರಲು ಅವಕಾಶ ಇರುವಾಗಲೂ ಸಂಸ್ಕೃತ ಪರಂಪರೆಯಿಂದಾಗಿ ಹೇರಿಕೊಂಡಿರುವ ಶುದ್ಧತೆಯ ಗೀಳು ಜನಬದುಕಿನ ಕನ್ನಡದಿಂದ ಆಡಳಿತವನ್ನು ದೂರವೇ ಉಳಿಸಿದೆ.

ಈ ನಿಟ್ಟಿನಲ್ಲಿ ಮಾಡಬಹುದಾದ ಬದಲಾವಣೆಗಳನ್ನು ಕನ್ನಡದ ಅನೇಕ ಚಿಂತಕರು ಹೀಗೆ ಪಟ್ಟಿ ಮಾಡುತ್ತಾರೆ:

- ಆಡಳಿತಕ್ಕೆ ಸಂಬಂಧಿಸಿದ ಎಲ್ಲ ನೀತಿ, ನಿಯಮ, ಕಾನೂನು ಇತ್ಯಾದಿಗಳು ಮೂಲತಃ ಕನ್ನಡದಲ್ಲಿಯೇ ಸಿದ್ಧವಾಗಬೇಕು.
- ಆಂಗ್ಲ ಭಾಷೆಯಲ್ಲಿ ಸಿದ್ಧಪಡಿಸಿ ಕನ್ನಡಕ್ಕೆ ತರ್ಜುಮೆ ಮಾಡಿ ಬಳಸುವುದನ್ನು ನಿಲ್ಲಿಸಬೇಕು.

- ಮೊದಲ ಓದಿಗೇ ಅರ್ಥವಾಗುವಂತಹ ಸರಳ ಆಡಳಿತ ಕನ್ನಡದ ಬೆಳವಣಿಗೆ ಮತ್ತು ಬಳಕೆ ನಡೆಯಬೇಕು. ಅದು ಸಮಾನತೆಯ ಪ್ರತೀಕವಾಗಿರಬೇಕು.
- ಈಗ ಸಿದ್ಧವಿರುವ ಆಡಳಿತ, ಆಡಳಿತಪೂರಕ ಸಾಹಿತ್ಯವನ್ನು ಪುನರಾವಲೋಕಿಸಿ ಅದರಲ್ಲಿ ಅಗತ್ಯ ಬದಲಾವಣೆಗಳನ್ನು ತರಬೇಕು.
- ಶಿಕ್ಷಣದ ಭಾಗವಾಗಿ ಆಡಳಿತ ಕನ್ನಡದ ಪರಿಚಯವಾಗಬೇಕು. ಇದೂ ಶಾಲಾ ಶಿಕ್ಷಣದ ಪಠ್ಯಕ್ರಮದಲ್ಲಿ ಸೇರಬೇಕು.
- ಸಾರ್ವಜನಿಕ ಆವರಣದಲ್ಲಿ ಬಳಸುವ ಎಲ್ಲ ಆಡಳಿತ ಬರಹಗಳೂ ಕನ್ನಡದಲ್ಲಿಯೇ ಇರಬೇಕು.
- ಕೇಂದ್ರ ಸರಕಾರದ ಎಲ್ಲ ಪ್ರಕಟಣೆಗಳು, ನಮೂನೆಗಳು ಕಡ್ಡಾಯವಾಗಿ ಕನ್ನಡದಲ್ಲಿ ಸಿಗುವಂತಾಗಬೇಕು.
- ವಿದ್ಯುನ್ಮಾನ ಆಡಳಿತ ಜಾರಿಗೆ ಬರುವುದರಿಂದ ಪೂರ್ಣವಾಗಿ ಕನ್ನಡದಲ್ಲಿಯೇ ಆಡಳಿತವನ್ನು ನಡೆಸಲು ಬೇಕಾದ ಸಿದ್ಧತೆಯನ್ನು ಮಾಡಿಕೊಳ್ಳಬೇಕಿದೆ. ಅನುಕೂಲಕರವಾದ ತಂತ್ರಾಂಶಗಳನ್ನು ಸಿದ್ಧಪಡಿಸಿ ಬಳಸಬೇಕು. ಈ ತಂತ್ರಾಂಶಗಳಿಗೆ ವ್ಯಾಪಕ ಪ್ರಚಾರ ಮತ್ತು ಬಳಕೆಯ ತರಬೇತಿಯನ್ನು ಏರ್ಪಡಿಸಬೇಕು.
- ಕಾರ್ಯಾಲಯಗಳ ಕಂಪ್ಯೂಟರುಗಳಲ್ಲಿ ಕನ್ನಡ ಬಳಕೆಯನ್ನು ಕಡ್ಡಾಯವಾಗಿಸಬೇಕು. ಮಾಹಿತಿ ಸಂಗ್ರಹಕ್ಕೆ ಯೂನಿಕೋಡನ್ನೇ ಬಳಸಬೇಕು. ಉತ್ತಮ ಓಪನ್ ಟೈಪ್ ಕನ್ನಡ ಅಕ್ಷರಗಳನ್ನು ಸಿದ್ಧಪಡಿಸಿ ಕರ್ನಾಟಕದ ಉದ್ದಗಲಕ್ಕೂ ಬಳಕೆಗೆ ತರಬೇಕು. ಸರ್ಕಾರದ ಎಲ್ಲಾ ಅಂತರ್ಜಾಲತಾಣಗಳೂ ಕನ್ನಡದಲ್ಲಿ ಇರಲೇಬೇಕು.

ಆಡಳಿತ ಕನ್ನಡದ ಬಳಕೆಯ ಕುರಿತು ಯೋಚಿಸುವಾಗ ಈ ನಡೆಗಳನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ. ಆದರೆ, ಈ ನಡೆಯ ನೆಪದಲ್ಲಿ ನಡೆಸಿರುವ ಪ್ರಯತ್ನಗಳು 'ಶುದ್ಧಭಾಷೆ'ಯ ಸಂಸ್ಕೃತ ಪರಂಪರೆಯ ಮೋಹದಿಂದ ತಪ್ಪಿಸಿಕೊಂಡಿಲ್ಲದಿರುವುದು ಪ್ರಭುತ್ವ ಹೊರಡಿಸಿರುವ, ಹೊರಡಿಸುತ್ತಿರುವ ಎಲ್ಲಾ ದಾಖಲೆಗಳಲ್ಲಿಯೂ ಎದ್ದು ಕಾಣುತ್ತದೆ. ಕರ್ನಾಟಕ ಸರಕಾರದ ಅಂತರ್ಜಾಲ ತಾಣದಲ್ಲಿನ ಮಾಹಿತಿಗಳನ್ನು ನೋಡಿದರೂ ಇದು ತಟ್ಟನೆ ಗ್ರಹಿಕೆಗೆ ಬರುತ್ತದೆ.

ಜನಸಂಪರ್ಕದ ನಡೆಯಲ್ಲಿಯೇ ಕ್ಲಿಷ್ಟತೆ ಇರುವುದರಿಂದ ಮತ್ತೆ ಅದನ್ನು ಅನುಕೂಲಕರ ಒಡನಾಟದ ಸ್ಥಿತಿಗೆ ತರಬೇಕಾಗುತ್ತದೆ. ಈ ದೃಷ್ಟಿಯಿಂದ ಯೋಚಿಸುವಾಗ, ಈಗಾಗಲೇ ಆಡಳಿತದ ಬಳಕೆಯಲ್ಲಿರುವ ಕನ್ನಡ ಭಾಷೆಯನ್ನು ಸರಳವಾಗಿಸಬಹುದೇ? ಅಥವಾ ಸರಳವಾದ ಕನ್ನಡ ಭಾಷೆಯನ್ನು ಬಳಸುವಂತೆ ಹೊಸ ಸಾಧ್ಯತೆಯನ್ನು ಕಂಡುಕೊಳ್ಳಬೇಕೆ? ಎನ್ನುವ ಸವಾಲುಗಳು ಎದುರಾಗುತ್ತವೆ. ಯಾವುದೇ ಬಗೆಯ ಕ್ರಿಯೆಯಾದರೂ ಅದು ಒಬ್ಬಿಬ್ಬರಿಂದ ಅಥವಾ ಕೆಲವೇ ಜನರ ಗುಂಪಿನಿಂದ ಆಗುವಂತಹ ಕಾರ್ಯವಲ್ಲ. ಇದು ಬಹಳ ವಿಶಾಲವಾದ ವ್ಯವಸ್ಥೆಯೊಂದರ ಅಮೂಲಾಗ್ರ ಬದಲಾವಣೆಯ ಪ್ರಶ್ನೆಯಾದುದರಿಂದ ವ್ಯವಸ್ಥೆಯ ಅಂಗವಾಗಿರುವ ಬಹುಸಂಖ್ಯಾತ ಜನಸಮುದಾಯದ ಪಾಲ್ಗೊಳ್ಳುವಿಕೆಯ ಮುಖ್ಯ ಗುರಿಯಲ್ಲಿ ನಡೆಯಬೇಕಾಗಿರುತ್ತದೆ. ಕ್ಲಿಷ್ಟತೆ ಮತ್ತು ಅದರಿಂದುಂಟಾಗುವ ಅನಾನುಕೂಲಗಳ ಅರಿವಿರುವ, ಅದರಿಂದಾಗಿ ಉಂಟಾಗುತ್ತಿರುವ ಭ್ರಷ್ಟತೆಯ ತಿಳಿವಿರುವ ಜನಸಾಮಾನ್ಯರು ಸರಳ ಆಡಳಿತದತ್ತ ಒಲವು ತೋರಬಲ್ಲರೆಂಬುದನ್ನು ನಂಬಿ 'ಆಡಳಿತ ಕನ್ನಡ'ವನ್ನು ರೂಪುಗೊಳಿಸಬೇಕಾಗುತ್ತದೆ.

ಅಂದರೆ ಆಡಳಿತ ಈ ಎಲ್ಲಾ ಹಂತಗಳಲ್ಲಿಯೂ ಸರಳತೆಯತ್ತ ಹರಿದರೆ ಆಡಳಿತ ಕನ್ನಡದಲ್ಲಿ ಜೀವಂತಿಕೆಯನ್ನುಳಿಸಿಕೊಳ್ಳುವುದು ಸಾಧ್ಯವಿದೆ. ಆದ್ದರಿಂದಾಗಿ, ಕನ್ನಡದ ಜಾಯಮಾನಕ್ಕೆ ಹೊಂದುವಂತಹ ಒಡನಾಟ ಸಾಧ್ಯವಾಗುವಂತೆ ಜನತೆ ಮತ್ತು ಪ್ರಭುತ್ವದ ಸಂಬಂಧಗಳಿಗೆ ಬುನಾದಿಯನ್ನು ಹಾಕಿಕೊಳ್ಳಬೇಕಾಗುತ್ತದೆ.

ಕನ್ನಡ ಬಳಕೆಯ ಕೆಲವು ಅಂಗಗಳಲ್ಲಿ ಮಾತ್ರವೇ ಇಂದು ಕ್ಲಿಷ್ಟತೆ ತಲೆದೋರಿರುವುದಲ್ಲ. ಕನ್ನಡ ಸಮಾಜದ ಬೆಳವಣಿಗೆಯ ಎಲ್ಲ ಅಂಗಗಳಲ್ಲು ಇದರ ಪಿಡುಗು ಕಾಣುತ್ತಿದೆ. ಆಧುನಿಕ ಇತಿಹಾಸದ ತಿರುವೊಂದರ ಸಂದರ್ಭದಲ್ಲಿ ಸೃಷ್ಟಿಸಿಕೊಂಡ ಭಾಷಿಕ ದಾರಿಗಳು ಇಂದು ಕನ್ನಡ ಭಾಷೆಯ ಸರಳವಾದ, ಸುಲಲಿತವೆನಿಸುವ ಬಳಕೆಗೆ ಅಡ್ಡಗಾಲಾಗಿ ಬಿಟ್ಟಿವೆ. ಹೊಸ ಶತಮಾನವೊಂದರ ಹೊಸ್ತಿಲಲ್ಲಿ ನಿಂತು ಸಾವಿರಾರು ವರ್ಷಗಳ ಭಾಷೆಗಳ ಬಗ್ಗೆ ಸಮೃದ್ಧವಾಗಿಲ್ಲ, ಪದಸಂಪತ್ತಿಲ್ಲ, ಆಡಳಿತ, ವಿಜ್ಞಾನ ಮುಂತಾದ ವಿಷಯಗಳನ್ನು ಅಭಿವ್ಯಕ್ತಪಡಿಸಲು ಸಮರ್ಥವಾಗಿಲ್ಲ ಎಂದು ಕೂಗು ಹಾಕುತ್ತಿರುವುದು ಹುಂಬತನದಂತೆ ಕಾಣುತ್ತದೆ. ಸಾವಿರಾರು ವರ್ಷಗಳ ಭಾಷಿಕ ಇತಿಹಾಸದ ಬೆಂಬಲದಿಂದ ಇವತ್ತಿಗೆ ಅಗತ್ಯವಾದ ಭಾಷಿಕ ನೆಲೆಗಳನ್ನು ಕಟ್ಟಿಕೊಳ್ಳಲಾರೆವೇ ಎಂಬ ಪ್ರಶ್ನೆ, ಸವಾಲು ಎದುರಾಗುತ್ತದೆ.

ಏಕೀಕರಣ ನಂತರದ ಆಡಳಿತದಲ್ಲಿ ಕನ್ನಡ ಬಳಕೆಗೆ ಅನುಸರಿಸಿದ ಯೋಜನಾ ಮಾದರಿಗಳನ್ನು ಗ್ರಹಿಸಿ ಹೇಳುವುದಾದರೆ; ಆಡಳಿತ ಕನ್ನಡ ಅನುಷ್ಠಾನಕ್ಕಾಗಿ

(1) ನಿಯಮ, ಕಾನೂನು ರಚನೆ

(2) ಮೂಲ ಹಾಗೂ ಪೂರಕ ಸಾಹಿತ್ಯ ರಚನೆ

(3) ತರಬೇತಿ

(4) ಜನ ಜಾಗೃತಿ ಮೂಡಿಸುವುದು

(5) ಆಡಳಿತ ಭಾಷಾ ಬಳಕೆಗೆ ಪ್ರೋತ್ಸಾಹ

(6) ಆಡಳಿತದಲ್ಲಿ ಕನ್ನಡ ಬಳಕೆಯ ಬಗ್ಗೆ ಉಸ್ತುವಾರಿ/ಮೇಲ್ವಿಚಾರಣೆ/ಕಾವಲು

ಎಲ್ಲವೂ ಜಾರಿಯಲ್ಲಿವೆ. ಅದಕ್ಕಾಗಿ ಇಲಾಖೆಗಳನ್ನು, ಕಾವಲು ಸಮಿತಿಗಳನ್ನು, ಪ್ರಾಧಿಕಾರವನ್ನು ರಚಿಸಲಾಗಿದೆ. ಆದರೆ ಪ್ರಭುತ್ವ ಮತ್ತು ಜನತೆಯ ನಡುವಿನ ಕನ್ನಡ ಸಂಬಂಧಗಳು ಅತ್ಯಂತ ಕ್ಲಿಷ್ಟವಾಗಿಯೆ ಇವೆ ಎಂದು ಹೇಳಬೇಕಾಗಿದೆ[20]. ಇದು ಯಾಕೆ?

ಹಂಪನಾ ಅವರು ಗುರುತಿಸುವಂತೆ, ಸ್ವಾತಂತ್ರ್ಯಾನಂತರ ನಡೆದ ಜನಬದುಕಿನ ಆಧುನೀಕರಣವು ಕನ್ನಡ ಬಳಕೆಯ ಕ್ಲಿಷ್ಟತೆಯ ಮೇಲೂ ಪರಿಣಾಮವನ್ನು ಬೀರಿದೆ. ಆಧುನೀಕರಣದ ಬೆಳವಣಿಗೆಗಳು ಎಲ್ಲೆಲ್ಲಿ ನಡೆದವೋ ಅಲ್ಲೆಲ್ಲ ಭಾಷೆಯನ್ನು ಬಳಸುವ ಮತ್ತು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದಲೂ ಕ್ಲಿಷ್ಟತೆ ತಲೆದೋರಿದೆ. ಇದಕ್ಕೆ ಕಾರಣ ಪ್ರಭುತ್ವವು ಅನುಸರಿಸಿದ ಇಂಗ್ಲಿಷ್ ದಾರಿ ಮತ್ತು ಸಂಸ್ಕೃತ ಪರಂಪರೆ ಎಂದು ನಿಕರವಾಗಿ ಬೆರಳು ತೋರಿಸಿ ಹೇಳಬಹುದಾಗಿದೆ. ಆಡಳಿತಕ್ಕಾಗಿ ಬ್ರಿಟಿಷ್ ಮಾದರಿಗಳನ್ನು ಅನುಸರಿಸಿದ್ದಲ್ಲದೆ ಸಂಪರ್ಕಕ್ಕಾಗಿ ಇಂಗ್ಲಿಷನ್ನು ಉಳಿಸಿಕೊಂಡದ್ದು ಒಂದು ಸಮಸ್ಯೆ. ಅದನ್ನು ಕನ್ನಡದಲ್ಲಿ ಹೇಳಬೇಕಾದ ಸನ್ನಿವೇಶಗಳಲ್ಲಿ ಸಂಸ್ಕೃತ ಪದಕೋಶದ ಬೆನ್ನು ಬಿದ್ದದ್ದು ಮತ್ತೊಂದು ದೊಡ್ಡ ಸಮಸ್ಯೆ. ಇಂಗ್ಲಿಶ್–ಸಂಸ್ಕೃತಗಳ ಇಂತಹ ಅಸಮರ್ಥ ಬೆಸುಗೆಯಿಂದಾಗಿ ವಿಜ್ಞಾನ, ಸಮಾಜ ವಿಜ್ಞಾನ, ಆರ್ಥಿಕತೆ ಮೊದಲಾಗಿ ಎಲ್ಲಾ ಬಗೆಯ ಶಿಕ್ಷಣದ ಅಧ್ಯಯನಗಳಲ್ಲಿಯೇ ಆಗಲಿ, ಇದನ್ನು ಆಗುಮಾಡಿದ ಆಡಳಿತದ ನಡೆಯಲ್ಲಿ ಆಗಲಿ ಬಳಸುವ ಕನ್ನಡ ಕ್ಲಿಷ್ಟವಾಗಿಯೇ ಬೆಳೆದು ಬಂದಿದೆ. ಕ್ಲಿಷ್ಟ ಎಂಬ ಅನಿಸಿಕೆಗಳು ಬಹು ಜನರಿಂದ ಉಲ್ಲೇಖಗೊಳ್ಳುತ್ತಲೇ ಬರುತ್ತಿದೆ.ಆದ್ದರಿಂದಾಗಿ, ಆಡಳಿತ ಪತ್ರಗಳನ್ನು ಆಡಳಿತ ಪರಿಣತರ ಹತ್ತಿರ ಕಾನೂನು ಪಂಡಿತರ ಹತ್ತಿರ ಹೋಗಿ

---

[20]ಭಾಷಾ ಸಂವಹನದ ಉದ್ದೇಶದ ಈ ಹಿನ್ನೆಲೆಯಲ್ಲಿ ಆಡಳಿತ ಕನ್ನಡ ಶ್ರೀಸಾಮಾನ್ಯನನ್ನು ತಲುಪುತ್ತಿದೆಯೇ. ನಿಲುಕುತ್ತಿದೆಯೇ. ಆಡಳಿತ ಕನ್ನಡವನ್ನು ಬಳಸಿ ಯಾರನ್ನು ಉದ್ದೇಶಿಸಿ ಪತ್ರ ಬರೆಯಲಾಗಿದೆಯೋ. ಭಾಷಾಂತರಿಸಲಾಗಿದೆಯೋ–ಅವರಿಗೆ ಆಯಾ ವಿಷಯವಸ್ತುವು ನೇರವಾಗಿ ಅರ್ಥವಾಗುತ್ತಿದೆಯೇ? ಹೀಗಾಗಿ ಆಯಾಯಾ ಸಂದರ್ಭಗಳಲ್ಲೆ ಶ್ರೀ ಸಾಮಾನ್ಯ ಯಾರು ಎಂಬುದನ್ನು ಸಂದರ್ಭಕ್ಕೆ ತಕ್ಕಂತೆ ನಾವು ಅರ್ಥೈಸಬೇಕಾಗುತ್ತದೆ. ಆಡಳಿತ ಕನ್ನಡದ ಸಂದರ್ಭದಲ್ಲಿ ಎಲ್ಲರೂ ಎಲ್ಲ ಸಂದರ್ಭಗಳಲ್ಲೂ ಶ್ರೀ ಸಾಮಾನ್ಯರಾಗಲು ಸಾಧ್ಯವಿಲ್ಲ. ಅದರಲ್ಲಿಯೂ ಕರ್ನಾಟಕದಂತಹ ಕಡಿಮೆ ಸಾಕ್ಷರತೆಯನ್ನು ಪಡೆದಂತಹ ರಾಜ್ಯದಲ್ಲಿ ಬರೀ ಓದಲು. ಬರೆಯಲು ಬರುವವನನ್ನು ಶ್ರೀ ಸಾಮಾನ್ಯ ಎಂದು ಪರಿಗಣಿಸಿದರೆ ಓದಲು. ಬರೆಯಲು ಬಾರದ ಉಳಿದ ಜನರನ್ನು ಏನೆಂದು ಪರಿಗಣಿಸಬೇಕು?, ನಾಡೋಜ ಪ್ರೊ. ಹಂಪ ನಾಗರಾಜಯ್ಯ ರವರ (ಸಂ) ಪುನರಾವಲೋಕನ. ಕನ್ನಡ ಸಂಸ್ಕೃತಿ ಇಲಾಖೆ. 2011. ಪು. 4

ಅರ್ಥೈಸಿಕೊಳ್ಳುವಂತಹ ಪರಿಸ್ಥಿತಿ ತಲೆದೋರಿದೆ. ಇಂತಹ ಸನ್ನಿವೇಶ ಇರುವಾಗ ಆಡಳಿತ 'ಕನ್ನಡದಲ್ಲಿ ನಡೆದರೇನು? ಇಂಗ್ಲಿಶಿನಲ್ಲಿ ನಡೆದರೇನು? ಎಲ್ಲಾ ಒಂದೇ ಎನ್ನುವಂತಾಗಿ ಹೋಗಿದೆ.

ಕನ್ನಡದಲ್ಲೇ ಆಡಳಿತ ನಡೆಯಬೇಕು ಎನ್ನುವುದು ಕೇವಲ ರಾಜಕೀಯ ಉತ್ಸಾಹವಾಗಿದೆ. ಇದಕ್ಕೆ ಬೇಕಾದ ತೀವ್ರತರವಾದ ಚಿಂತನೆ, ಯೋಜನೆ ಮತ್ತು ನಾಳೆಗಳ ಆಲೋಚನೆಯನ್ನುಮುಂದು ಮಾಡಿಕೊಳ್ಳದೆ ಕೇವಲ ಭಾವನಾತ್ಮಕ ವಿಷಯವನ್ನಾಗಿಯೇ ಜೀವಂತವಾಗಿರಿಸಲಾಗಿದೆ. ಐತಿಹಾಸಿಕವಾಗಿ ಭಾಷೆಯ ಬೆಳವಣಿಗೆ ಮತ್ತು ಬಳಕೆಯಲ್ಲಿ ಆದ ತಪ್ಪುಗಳಿಂದ ಇದಕ್ಕೆ ಸಪೋರ್ಟ್ ಪಡೆದುಕೊಳ್ಳುತ್ತಿರುವಂತೆ ಗೋಚರಿಸುತ್ತದೆ. ಇವತ್ತಿನ ಈ ಸವಾಲುಗಳನ್ನು ಎದುರುಗೊಳ್ಳದೆ ಆಡಳಿತ ಕನ್ನಡದಲ್ಲಿ ಎದುರಾಗುತ್ತಿರುವ ಎಡರುತೊಡರುಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಿಲ್ಲವಾಗಿದೆ.

ಆಡಳಿತ ಕನ್ನಡವು ಎದುರಿಸುತ್ತಿರುವ ತೊಡಕುಗಳು ವಾಸ್ತವವಾಗಿ ಎಂತವು ಎನ್ನುವುದನ್ನು ಮುಂದಿನ ಎರಡು ಅಧ್ಯಾಯಗಳಲ್ಲಿ ವಿವರವಾಗಿ ಗಮನಿಸಿಕೊಳ್ಳಬಹುದಾಗಿದೆ.

ಅಧ್ಯಾಯ – 4

ಆಡಳಿತದಲ್ಲಿ ಮಹಿಳೆ ಮತ್ತು ತಳಸಮುದಾಯಗಳಿಗೆ ಎದುರಾಗುವ ಭಾಷಿಕ ತೊಡಕುಗಳು

4.1: ಪ್ರಸ್ತಾವನೆ

4.2: ಆಡಳಿತದಲ್ಲಿ ಮಹಿಳೆ ಮತ್ತು ಭಾಷಿಕ ತೊಡಕುಗಳು

4.3: ಆಡಳಿತದಲ್ಲಿ ತಳ ಸಮುದಾಯಗಳ ಪಾಲ್ಗೊಳ್ಳುವಿಕೆ ಮತ್ತು ಭಾಷಿಕ ತೊಡಕುಗಳು

4.4: ಆಡಳಿತದಲ್ಲಿ ಪಾಲ್ಗೊಳ್ಳುವಿಕೆ: ಸಂದರ್ಶನದ ವಿವರಗಳು ಮತ್ತು ವಿಶ್ಲೇಷಣೆ

4.5: ಆಡಳಿತ ಮತ್ತು ಆಡಳಿತಾತ್ಮಕತೆ: ತಾತ್ವಿಕ ನೋಟ

4.1: ಪ್ರಸ್ತಾವನೆ:

ಪ್ರಸ್ತುತ ಅಧ್ಯಯನದಲ್ಲಿ **ಆಡಳಿತದಲ್ಲಿ ಮಹಿಳೆ ಮತ್ತು ತಳಸಮುದಾಯಗಳಿಗೆ ಎದುರಾಗುವ ಭಾಷಿಕ ತೊಡಕುಗಳ** ಕುರಿತು ವಿವೇಚಿಸುತ್ತದೆ. ಈ ವಿವಚನೆಯು ನಾವು ತಳೆಯುವ ನಿರ್ಧಾರಕ್ಕೆ ಸಂಬಂಧಿಸಿದ್ದು. ಇಂತಹ ನಿರ್ಧಾರವು ಅಕಾಡೆಮಿಕ್ ಆಗಿ ಇರಬಹುದು. ಹಾಗೇನಾದರು ಅದು ಇದ್ದಲ್ಲಿ ಅದು ಪೊಲಿಟಿಕಲ್ ಕರೆಕ್ಟ್‌ನೆಸ್‌ಗೆ ಸಂಬಂಧಿಸಿದ ನಿಲುವಾಗಿ ನಿಲ್ಲಬಹುದು. ಈ ತಿಳಿವು 'ಜನರಿಂದ ದೂರವೇ ಉಳಿಯುವ ತಿಳಿವಿನ ಬಗೆಗಳು' ಎನ್ನುತ್ತಾರೆ ಡಾ. ಕೆ.ವಿ.ನಾರಾಯಣರವರು.[1] ಅಂದರೆ **ಆಡಳಿತದಲ್ಲಿ ಮಹಿಳೆ ಮತ್ತು ತಳಸಮುದಾಯಗಳಿಗೆ ಎದುರಾಗುವ ಭಾಷಿಕ ತೊಡಕುಗಳಿಗೆ** ಬಹು ಮುಖ್ಯ ಕಾರಣವೆಂದರೆ 'ಜನರಿಂದ ದೂರವೇ ಉಳಿಯುವ ತಿಳಿವಿನ ಬಗೆಗಳು' ಎಂದೂ ಭಾವಿಸಬಹುದು. ಅಲ್ಲದೆ, ಅದು ಭಾಷಿಕವಾಗಿ ಜನರಿಂದ ದೂರಹೋಗಿರ ಬಗೆಯನ್ನು ಸೂಚಿಸುತ್ತದೆ. ಇದನ್ನು ಒಂದು ಘಟನೆಯಿಂದ ಸ್ಪಷ್ಟೀಕರಿಸಬಹುದು – 80ರ ದಶಕದಲ್ಲಿ ನಡೆದ 'ಬೂಸ ಪ್ರಕರಣ' ಕನ್ನಡದ ನುಡಿಯಲ್ಲಿ ಕ್ರಾಂತಿಕಾರಕ ಪಲ್ಲಟಗಳಿಗೆ ಕಾರಣವಾದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆ ಸಂದರ್ಭದಲ್ಲಿ ಕರ್ನಾಟಕ ಸರಕಾರದಲ್ಲಿ ಕಾನೂನು ಸಚಿವರಾಗಿದ್ದ ಬಿ. ಬಸವಲಿಂಗಪ್ಪನವರು ತಮ್ಮ ಒಂದು ಭಾಷಣ[2]ದಲ್ಲಿ ಹೀಗೆನ್ನುತ್ತಾರೆ, "ಕನ್ನಡ ಭಾಷೆಯಲ್ಲಿರುವಷ್ಟು ಸಂಸ್ಕೃತ ಪದಗಳು ಇನ್ನೂ ಯಾವ ಭಾಷೆಯಲ್ಲಿಯೂ ಇಲ್ಲ. ಹಿಂದಿ ಭಾಷೆಯಲ್ಲಿವೆ. ಸಂಸ್ಕೃತ ಪದಗಳು ಎಷ್ಟು ಜನಕ್ಕೆ ಗೊತ್ತಾಗುತ್ತವೆ? ಕನ್ನಡ ಭಾಷೆಯ ಅರಿವೇ ನಮಗಿಲ್ಲದಿರುವಾಗ ಸಂಸ್ಕೃತ ಭಾಷೆ ಹೇಗೆ ಬರುತ್ತದೆ? ನಾನು ಸಂಸ್ಕೃತದಲ್ಲಿ ಒಬ್ಬ ಕಲಿತಿದ್ದೇನೆ. ನನಗೆ ಓದಲಿಕ್ಕೆ, ಬರೆಯಲ್ಲಿಕ್ಕೆ ಬರಬಹುದು. ಏನು ಸಂಸ್ಕೃತ ಭಾಷೆ ಇದೆ. ಅದನ್ನೆಲ್ಲ ತಿಳಿದುಕೊಳ್ಳುವುದಕ್ಕೆ ನಮಗೆ ಶಕ್ತಿ ಇಲ್ಲ. ಆದುದರಿಂದ ಸಾಮಾನ್ಯರಿಗೆ ಈ ಸಂಸ್ಕೃತ ಭಾಷೆ ಎಂದರೆ ಅದು ಅರ್ಥವಾಗುವುದಿಲ್ಲ. ನಮ್ಮ ಹಿರಿಯರು ಏನು ಮಾಡಿದ್ದಾರೆ? ಈ ಕನ್ನಡ ಭಾಷೆಯಲ್ಲಿ ಸಂಸ್ಕೃತ ಶಬ್ದಗಳನ್ನು ನೂರಕ್ಕೆ ಎಪ್ಪತ್ತೈದು ಭಾಗದಷ್ಟು ಉಪಯೋಗಿಸಿ ನಮಗೆ ಅರ್ಥವೇ ತಿಳಿಯದ ರೀತಿಯಲ್ಲಿ ಇಟ್ಟು ಬಿಟ್ಟಿದ್ದಾರೆ. ಶ್ರೀಮಾನ್ ತೇಜಸ್ವಿಯವರು ಮಾತನಾಡಿದರು. ಅವರು ಆಡಿದ ಭಾಷೆ ನನಗೆ ತುಂಬ ಪ್ರಿಯವಾಯಿತು. ನಮ್ಮ ತಂದೆ–ತಾಯಿಗಳು ಮಾತನಾಡುವ ಭಾಷೆ. ನಮ್ಮ ತಂದೆ–ತಾಯಿಗಳು ಹಳ್ಳಿಗಳಲ್ಲಿ ಮಾತನಾಡುವಂತಹ ಭಾಷೆಯನ್ನು ಸಾಹಿತ್ಯದಲ್ಲಿ ಬಳಸುವ ಕಾಲ ಸನ್ನಿಹಿತವಾಗಿದೆ. ಸಂಸ್ಕೃತದಲ್ಲಿ ಮಾತನಾಡಿ, ಸಂಸ್ಕೃತವನ್ನು ಬಳಸಿ ಜನಗಳನ್ನು ಮೋಸ ಮಾಡಿ ಹೊಟ್ಟೆ

---

[1] ನೋಡಿ, ಮೇಟಿ ಮಲ್ಲಿಕಾರ್ಜುನ (ಸಂ), 2013, ಸಬಾಲ್ಟರ್ನ್ ಓದು, ಅರಹು–ಕುರುಹು ಪತ್ರಿಕೆ, ಮೈಸೂರು, ಪು. 1

[2] ದಲಿತ ಚಿಂತನೆ, 2002, ಸಂ: ಮೊಗಳ್ಳಿ ಗಣೇಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 'ಮಾನವೀಯತೆಯ ಕ್ರಾಂತಿ ಆಗಬೇಕು' ಲೇಖನದಿಂದ ಕೆಲವು ಭಾಗಗಳನ್ನು ಆಯ್ದು ಕೊಳ್ಳಲಾಗಿದೆ.

ಹೊರೆದುಕೊಳ್ಳುವಂತಹ ಕಾಲ ದೂರವಾಯಿತು. ರಾಮಸ್ವಾಮಿ ನಾಯ್ಕರ್ ಅವರು ತಮಿಳು ಭಾಷೆಯನ್ನು 'ಕಾಟ್ಟುಮಿರಾಂಡು' ಭಾಷೆ ಎಂದು ಕರೆದರು. 'ಕಾಟ್ಟು ಮಿರಾಂಡು' ಅಂದರೆ ಕಾಡು ಜನಗಳ ಭಾಷೆ ಎಂದು ಅರ್ಥ. ಕಾಟ್ಟು ಮಿರಾಂಡ ಭಾಷೆಯಲ್ಲಿ ಒಂದೂ ಸಂಸ್ಕೃತ ಪದವನ್ನೂ ಸೇರಿಸುವುದಿಲ್ಲ. ನೀವು ಸೇರಿಸಿ ಅಂತ ಕೇಳಿದರೂ ಅವರು ಸೇರಿಸುವುದಿಲ್ಲ. ಆದುದರಿಂದ ಈ ಹೊತ್ತು ತಮಿಳು ಭಾಷೆಯನ್ನು ಆಡುವ ಜನ ಸ್ವತಂತ್ರರಾಗಿದ್ದಾರೆ. ಅವರು ನಿಲುವು ತಾಳಿದ್ದಾರೆ. 40–50 ವರ್ಷಗಳಿಂದ ಈ ಮಡಿವಂತಿಕೆಯ ವಿರುದ್ಧ ಹೋರಾಟ ನಡೆಸಿದ್ದಾರೆ. ಯಶಸ್ವಿಯಾಗಿದ್ದಾರೆ.

"ಈ ಸಂಸ್ಕೃತ ಶಬ್ದಗಳನ್ನು ನಾವು ಕನ್ನಡದಲ್ಲಿ ಬಳಸಿ ನಾವು ಜನಗಳಿಗೆ ಮೋಸ ಮಾಡಿದ್ದೇವೆ – ನಾವು ಬರೆಯುವುದೇ ಅರ್ಥವಾಗುವುದಿಲ್ಲ ಅವರಿಗೆ. ಅದಕ್ಕೆ ನಾನು ಬಳಸುವಂತಹ ಭಾಷೆ ಏನಿದೆ ಈ ಹೊತ್ತು? ಸಾಹಿತ್ಯ ಭಾಷೆಯನ್ನು ಬಳಸಲು ಹೋಗುವುದೇ ಇಲ್ಲ ನಾನು. ಸಾಮಾನ್ಯ ಜನರು ಆಡುವಂತಹ ಭಾಷೆಯನ್ನೇ ಉಪಯೋಗಿಸಬೇಕು. ಅದನ್ನೇ ಸಾಹಿತ್ಯ ರೂಪದಲ್ಲಿ ಬರೆಯಬೇಕು. ವಿಷಯಗಳನ್ನು ನಾವು ನಿರೂಪಣೆ ಮಾಡಬೇಕು. ಅವನ್ನು ಪ್ರಚಾರ ಮಾಡಬೇಕು ಅನ್ನುವಂತಹದು ನನ್ನ ಸ್ಪಷ್ಟ ಅಭಿಪ್ರಾಯ. ಹಾಗೆ ಮಾಡಿದರೆ ಯಶಸ್ವಿಯಾಗಿ ನಮ್ಮ ಕಾರ್ಯ ಕಲಾಪಗಳನ್ನು ಮುಂದುವರಿಸಿಕೊಂಡು ಹೋಗಬಹುದು.

"ಒಂದು ಉದಾಹರಣೆಯನ್ನು ನಿಮಗೆ ಹೇಳಬೇಕು. ಈ ಹೇಲು–ಉಚ್ಚೆ ಹೊರುವಂಥಹುದನ್ನು ನಾನು ನಿಲ್ಲಿಸಿದೆ. ಪತ್ರಿಕೆಗಳಲ್ಲೆಲ್ಲ ಮಲ–ಮೂತ್ರ ಹೊರುವುದನ್ನು ನಿಲ್ಲಿಸಲು ಬಸವಲಿಂಗಪ್ಪ ಪ್ರಯತ್ನ ಮಾಡುತ್ತಿದ್ದಾನೆ ಎಂದು ಬರೆದರೇ ಹೊರತು ಹೇಲು–ಉಚ್ಚೆ ಅಂತ ಒಬ್ಬರೂ ಬರೆಯಲಿಲ್ಲ. ನಾನು ಹೇಳಿದ್ದೆಲ್ಲ ಹೇಲು–ಉಚ್ಚೆ ಅಂತಲೇ. ಏಕೆಂದರೆ ಎಲ್ಲರಿಗೂ ತಿಳುವಳಿಕೆಯಾಗುತ್ತದೆ. ಮಲನೂ ಸಂಸ್ಕೃತ ಮೂತ್ರನೂ ಸಂಸ್ಕೃತ. ಯಾರಿಗೆ ಅರ್ಥವಾಗುತ್ತದೆ? ನಾನು ವೇದಿಕೆಯಿಂದ ಹೇಲು–ಉಚ್ಚೆ ಅಂತ ಹೇಳಿದರೆ 'ಅಸಿಸಿಸೀ' ಅಂತ ಹೇಳುತ್ತಿದ್ದರು. ಹೇಳಿದ್ದನ್ನು ಕೇಳಿಯೇ 'ಅಸಿಸೀ' ಅಂದರೆ, ಹೊರುವಂತಹ ವ್ಯಕ್ತಿಗೆ ಅದು ಹೇಗಿರಬೇಕು? ಆದುದರಿಂದ ನಾವು ಸಮಾಜ ಬದಲಾವಣೆ ಮಾಡಬೇಕು. ಸಮಾಜದ ವಿಚಾರ ಶಕ್ತಿಯನ್ನು ಬದಲಾವಣೆ ಮಾಡಬೇಕು."

ಆಡಳಿತದಲ್ಲಿ ನಾವು ಎಂತಹ ಭಾಷೆಯನ್ನು ಬಳಸಬೇಕು ಎಂಬುದಕ್ಕೆ ಬಿ. ಬಸವಲಿಂಗಪ್ಪನವರು ಈ ರೀತಿ ಅಭಿಪ್ರಾಯ ಪಡುತ್ತಾರೆ. "ಬಸವೇಶ್ವರರು ಎಲ್ಲರಿಗೂ ತಿಳಿಯುವಂತೆ ವಚನಗಳನ್ನು ಬರೆದು ಕ್ರಾಂತಿ ಮಾಡಿದ್ದಾರೆ. ಸರ್ವಜ್ಞಮೂರ್ತಿ ಜನರು ಆಡುವ

ಮಾತಿನಲ್ಲಿಯೇ ಬರೆದು ಕ್ರಾಂತಿ ಮಾಡಿದ್ದಾರೆ. ಆಗ ಕ್ರಾಂತಿಯಾಗಿದೆ. ಆದರೆ ನೂರಕ್ಕೆ ತೊಂಭತ್ತೈದು ಭಾಗ ಜನ ಮೂರ್ಖರಾಗಿ, ದಡ್ಡರಾಗಿ, ಅವಿವೇಕಿಗಳಾಗಿ ಜೀವನ ಮಾಡುತ್ತಿರುದ್ದುದರಿಂದ ಆ ಕ್ರಾಂತಿಯ ಜ್ವಾಲೆ ನಮಗೆ ತಟ್ಟಲಿಲ್ಲ.

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಮುನಿಯಬೇಡ ಇದೇ ಅಂತರಂಗದ ಶುದ್ಧಿ ಇದೇ ಬಹಿರಂಗ ಶುದ್ಧಿ

ಯಾರಿಗೆ ಅರ್ಥವಾಗುವುದಿಲ್ಲ? ಬಸವೇಶ್ವರರು ಹೇಳಿರೋದು ಯಾರಿಗೂ ಅರ್ಥವಾಗುವುದಿಲ್ಲವೋ ದಯವಿಟ್ಟು ಹೇಳಿ?

ಹಣಕ್ಕಾಗಿ ಪೂಜೆಯ ಮಾಡಿ, ದಕ್ಷಿಣಗಾಗಿ ಜನರ ಕಾಡಿ,
ಮಡಿಯನುಟ್ಟು ನಗೆನಗೆದಾಡು
ಪೂಜಾರಿಯ ಚಾಲು ನೋಡ!

ಯಾರಿಗೆ ಅರ್ಥವಾಗುವುದಿಲ್ಲ? ಈ ಭಾಷೆಯಲ್ಲಿ ಸಾಹಿತ್ಯ ಸೃಷ್ಟಿ ಮಾಡಿ ಅಂತ ಹೇಳುತ್ತಿದ್ದೇನೆ.

ಮೂರ್ಖನೊಬ್ಬ ಆರು ಬೆಟ್ಟವನು ಹಾರಿಯಾನೆಂದರೆ
ಹಾರಬಹುದು ಎನಬೇಕು । ಮೂರ್ಖರೊಡನೆ
ಹೋರಾಟ ಸಲ್ಲದು ಸರ್ವಜ್ಞ

ದಯವಿಟ್ಟು ಹೇಳಿ ಸ್ವಾಮಿ ಯಾರಿಗೆ ಅರ್ಥವಾಗಲಿಲ್ಲ? "ಆಶೀತ ಶೇಷ ನವಭಕ್ಷ್ಯ ಶಾಸನ ಪಾಕಶಾಸನ ಇವಾಪರಃ" ಹೇಳಿ ಯಾರಿಗೆ ಅರ್ಥವಾಗುತ್ತದೆ ನೋಡೋಣ? ಒಳ್ಳೆ ಬಾಣ ಬರೆದಿರುವಂತಹ ಸಂಸ್ಕೃತ ಅದು. ಯಾರಿಗೆ ಅರ್ಥವಾಯಿತು ಹೇಳಿ... ಹೀಗೆ ಅರ್ಥವಾಗದಿರುವಂತಹ ಯಾವ ಭಾಷೆಯೇ ಆಗಲಿ ಅದು ಬೇಕಾಗಿಲ್ಲರೀ ನಮಗೆ ಬೇಕಾಗಿಲ್ಲ. ನಿಷೇಧ ಮಾಡಬೇಕು ಈ ದೇಶದಿಂದ. ನಾವು ಛಲವಂತರಾದರೆ ನಮಗೆ ತಿಳಿಯದಿರುವಂತಹ ಭಾಷೆಯನ್ನು ನಾವು ನಿಷೇಧ ಮಾಡಬೇಕಾಗುತ್ತದೆ. ಯಾವ ಭಾಷೆ ನಮಗೆ ಪೌರುಷವನ್ನು ಕೊಡುತ್ತಿವೆಯೋ, ಶೂರರನ್ನಾಗಿ ಮಾಡುತ್ತದೋ, ಅದು, ಸಾಹಿತಿಯನ್ನಾಗಿ ಮಾಡುತ್ತದೆ. ಅಂತಹ ಭಾಷೆಯಲ್ಲಿಯೇ ನಾವು ವ್ಯವಹಾರ ಮಾಡಬೇಕು."[3]

---

[3] ಅದೇ ನೋಡಿ

ಈ ಮೇಲಿನ ಮಾತುಗಳು ಕನ್ನಡದಲ್ಲಿ ಆಡಳಿತದ ಸ್ವರೂಪ ಹೇಗಿರಬೇಕು? ಎನ್ನುವುದನ್ನು ಸೂಚ್ಯವಾಗಿ ಹೇಳುತ್ತಾ, ಅಂತಹ ಆಡಳಿತ ಸಾಧ್ಯವಾಗಿಲ್ಲವಾದರೆ ಅಲ್ಲಿ ಎದುರಾಗುವ ಭಾಷಿಕ ತೊಡಕುಗಳು ಹೇಗಿರುತ್ತವೆ ಎನ್ನುವುದನ್ನು ಖಚಿತಪಡಿಸುತ್ತವೆ.

ಪ್ರಸ್ತುತ ಭಾಗದಲ್ಲಿ ಬಹು ಮುಖ್ಯವಾಗಿ ಮೂರು ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ: ಕನ್ನಡದಲ್ಲಿ ಆಡಳಿತ ಎನ್ನುವಾಗ ಆಡಳಿತ ಎನ್ನುವುದು ಯಾರಿಗಾಗಿ ಮತ್ತು ಅದರಲ್ಲಿ ಪಾಲ್ಗೊಳ್ಳುವಾಗ ಎದುರಾಗುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಕುರಿತು ಗಮನಿಸುವಾಗ ಅಲ್ಲಿ ಮಹಿಳೆ ಮತ್ತು ತಳಸಮುದಾಯಗಳಾದ ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯಗಳು ಎದುರಿಸುವ ಭಾಷಿಕ ತೊಡಕುಗಳನ್ನು ಚರ್ಚಿಸಲಾಗುತ್ತದೆ. ಮೂರನೆದಾಗಿ, ಮಹಿಳೆ ಮತ್ತು ತಳಸಮುದಾಯಗಳಿಗೆ ಸಂಬಂಧಿಸಿದಂತೆ ನಡೆಸಲಾದ ಸಂದರ್ಶನಗಳನ್ನು ವಿಶ್ಲೇಣೆ ಮಾಡಲಾಗಿದೆ.

4.2: ಆಡಳಿತದಲ್ಲಿ ಮಹಿಳೆ ಮತ್ತು ಭಾಷಿಕ ತೊಡಕುಗಳು

ಕರ್ನಾಟಕದ ಸಂದರ್ಭದಲ್ಲಿ ನಡೆದಿರುವ ಮೇಲಿನ ಚರ್ಚೆಗಳನ್ನು ಕುರಿತು ಬರೆಯುವುದೆಂದರೆ ಕನ್ನಡ ಸಮದಾಯಗಳೊಳಗಿನ ಚೈತನ್ಯವನ್ನು ಗುರುತಿಸಿದಂತೆಯೇ ಸರಿ! ಆದರೆ, ಅದರ ವಿಸ್ತಾರ ಅಗಾದವೂ ಮತ್ತು ವೈವಿಧ್ಯಮಯವೂ ಆಗಿರುವುದರಿಂದ ಅದನ್ನು ನಿರ್ದಿಷ್ಟವಾಗಿಸಿಕೊಂಡು ವಿವೇಚಿಸುವುದು ಯುಕ್ತವಾದುದು ಅನಿಸುತ್ತದೆ. ಹೀಗೆ ನಿರ್ದಿಷ್ಟಗೊಳಿಸುವುದೆಂದರೆ ಕೆಲವು ಉದಾಹರಣೆಗಳನ್ನು ತೆಗೆದುಕೊಂಡು 'ಆಡಳಿತ ಮತ್ತು ಸಾರ್ವಜನಿಕ ಸ್ಪೇಸ್' ಕುರಿತಂತೆ ಪರಿಶೀಲನೆ ನಡೆಸಬಹುದು – ಮಹಿಳೆಯರು ಸಾರ್ವಜನಿಕ ಜೀವನ ಪ್ರವೇಶಿಸುವುದನ್ನು ಊಹಿಸಲೂ ಆಗದ ಕಟ್ಟುಪಾಡಿನ ಕಾಲವದು. ಅಂತಹ ಸಂದರ್ಭದಲ್ಲೇ ಭಾರತೀಯ ನಾಗರಿಕ ಸೇವಾ ಪರೀಕ್ಷೆ ಎದುರಿಸಿ ಸ್ವತಂತ್ರ ಭಾರತದ ಮೊದಲ ಮಹಿಳಾ ಐಎಎಸ್ ಅಧಿಕಾರಿಯಾಗಿ ನೇಮಕಗೊಂಡು, ಹುದ್ದೆಯಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ ಕೀರ್ತಿ ಅನ್ನಾ ರಾಜಂ ಮಲ್ಹೋತ್ರಾ ಅವರದ್ದು. ಅನ್ನಾ (91) ಈಚೆಗೆ ಮುಂಬೈನಲ್ಲಿ ನಿಧನರಾದರು. 1951ರಲ್ಲಿ ಮದ್ರಾಸ್ ಕೇಡರ್‌ನಲ್ಲಿ ಭಾರತೀಯ ನಾಗರಿಕ ಸೇವೆಗೆ ಸೇರ್ಪಡೆಯಾಗಿದ್ದ ಇವರು, ಮುಂದೆ ಅನೇಕ ಮಹಿಳೆಯರು ಈ ಹುದ್ದೆಯ ಸವಾಲನ್ನು ಸ್ವೀಕರಿಸಲು ಸ್ಫೂರ್ತಿಯಾದರು. ಸಾರ್ವಜನಿಕ ಜೀವನ ಪ್ರವೇಶಿಸಲು ಮಹಿಳೆಯರಿಗಿದ್ದ ಅಡ್ಡಿ ಆತಂಕಗಳನ್ನು ನಿವಾರಿಸಿದರು. ಅಲ್ಲದೆ, ಅತ್ಯುತ್ತಮವಾಗಿ ಆಡಳಿತ ನಡೆಸಿ, ಸ್ವತಃ ಮಾದರಿಯೂ ಆದರು. 'ಅನ್ನಾ ಅವರಂಥ ವ್ಯಕ್ತಿತ್ವದವರು ಬಹಳ ವಿರಳ. ಅವರಂಥ ದಕ್ಷ ಅಧಿಕಾರಿ ಕೂಡ

ಅಪರೂಪ. ಅವರ ಕಾಲದ ಬೆರಳೆಣಿಕೆಯಷ್ಟು ಮಹಿಳೆಯರು ಬದುಕಬಹುದಾದ ದಿಟ್ಟ ಜೀವನವನ್ನು ಅವರು ನಡೆಸಿದರು' ಎಂದು ಅವರ ಸಮಕಾಲೀನರು ಅವರನ್ನು ಸ್ಮರಿಸುತ್ತಾರೆ.[4] 1950ರಲ್ಲಿ ನಾಗರಿಕ ಸೇವಾ ಪರೀಕ್ಷೆ ಬರೆಯಲು ಅನ್ನಾ ನಿರ್ಧರಿಸಿದರು. ಅಂತೆಯೇ ಸಂದರ್ಶನದ ಸುತ್ತಿಗೆ ಅರ್ಹತೆಯನ್ನೂ ಗಳಿಸಿದರು. 1951ರಲ್ಲಿ ಮುಂದಿನ ಸುತ್ತಿನ ಪರೀಕ್ಷೆ ಎದುರಿಸಲು ಹೋದಾಗ ಅವರಿಗೆ ಪ್ರೋತ್ಸಾಹದಾಯಕ ವಾತಾವರಣವೇನೂ ಇರಲಿಲ್ಲ. ನಾಗರಿಕ ಸೇವೆಗೆ ಸೇರ್ಪಡೆಯಾಗುವ ಅವರ ಆಸೆಯ ಬಗ್ಗೆ ಆಯ್ಕೆ ಮಂಡಳಿಯ ಸದಸ್ಯರೇ ಮೂಗು ಮುರಿಯುತ್ತಾರೆ. 'ಮಹಿಳೆಯರಿಗೆ ಹೆಚ್ಚು ಸೂಕ್ತವಾಗುವ' ವಿದೇಶಾಂಗ ಸೇವೆ ಅಥವಾ ಕೇಂದ್ರದ ಇತರ ಸೇವೆಗಳಿಗೆ ಸೇರುವಂತೆ ಅವರ ಮನವೊಲಿಸಲು ಯತ್ನಿಸುತ್ತಾರೆ. ಆದರೆ ತಮ್ಮ ನಿರ್ಧಾರದಲ್ಲಿ ಅಚಲರಾಗಿದ್ದ ಅವರು, ತಮ್ಮ ಅರ್ಹತೆಗೆ ತಕ್ಕುದಾದ ಐಎಎಸ್‌ಅಧಿಕಾರಿ ಹುದ್ದೆಯನ್ನೇ ಆಯ್ದುಕೊಳ್ಳುತ್ತಾರೆ. ಅವರ ಈ ಹಾದಿ ಸುಗಮವಾಗೇನೂ ಸಾಗುವುದಿಲ್ಲ. ಆಗಿನ ಮದ್ರಾಸ್ ರಾಜ್ಯದಲ್ಲಿ ಅವರು ತಮ್ಮ ಮೊದಲ ಸೇವೆ ಆರಂಭಿಸಿದಾಗ ಮುಖ್ಯಮಂತ್ರಿಯಾಗಿದ್ದ ಸಿ. ರಾಜಗೋಪಾಲಾಚಾರಿ ಅವರೂ ಇವರಿಗೆ ಸಬ್‌ಕಲೆಕ್ಟರ್ ಹುದ್ದೆ ನೀಡಲು ಹಿಂದೇಟು ಹಾಕುತ್ತಾರೆ. ಸಚಿವಾಲಯದಲ್ಲಿ ಕೆಲಸ ನಿರ್ವಹಿಸಲು ಆಹ್ವಾನ ನೀಡುತ್ತಾರೆ. ಆದರೆ ಕುದುರೆ ಸವಾರಿ, ರೈಫಲ್ ಮತ್ತು ರಿವಾಲ್ವರ್ ಶೂಟಿಂಗ್ ತರಬೇತಿ, ದಂಡಾಧಿಕಾರಿಯ ಅಧಿಕಾರ ಬಳಕೆ ಕುರಿತ ತರಬೇತಿ ಪಡೆದ ಬಳಿಕ ಸಹಜವಾಗಿಯೇ ಅನ್ನಾ ಅವರು ಹೊಸೂರಿನಲ್ಲಿ ಸಬ್‌ಕಲೆಕ್ಟರ್ ಆಗಿ ನೇಮಕಗೊಳ್ಳುತ್ತಾರೆ. ತಮ್ಮ ವೃತ್ತಿಯಲ್ಲಿ ಎದುರಾಗಬಹುದಾದ ಯಾವುದೇ ಸನ್ನಿವೇಶವನ್ನು ನಿಭಾಯಿಸಲು ಪುರುಷ ಸಹೋದ್ಯೋಗಿಗಳಂತೆಯೇ ತಾವು ಶಕ್ತರಿರುವುದಾಗಿ ಸಾಬೀತುಪಡಿಸುತ್ತಾರೆ. ಅವರ ವೃತ್ತಿ ನೇಮಕಾತಿ ಆದೇಶ ಪತ್ರದಲ್ಲಿ ಕೂಡ 'ಒಂದು ವೇಳೆ ಮದುವೆಯಾದಲ್ಲಿ ನಿಮ್ಮನ್ನು ಸೇವೆಯಲ್ಲಿ ಮುಂದುವರಿಸಲಾಗದು' ಎಂದು ಬರೆದಿರುತ್ತದೆ. ಅದೃಷ್ಟವಶಾತ್ ಈ ನಿಯಮ ನಂತರದ ವರ್ಷಗಳಲ್ಲಿ ಬದಲಾಗುತ್ತದೆ... ಹೆಜ್ಜೆ ಹೆಜ್ಜೆಗೂ ಎದುರಾದ ತೊಡಕುಗಳನ್ನು ಮೆಟ್ಟಿ ನಿಂತದ್ದೇ ಅವರ ಸಾಧನೆಯೂ ಆಗುತ್ತದೆ. ಲಿಂಗ ತಾರತಮ್ಯ ವಿಷಯವಂತೂ ಅನೇಕ ವರ್ಷಗಳವರೆಗೆ ಅವರಿಗೆ ಕಾಡುತ್ತದೆ. ಹೊಸೂರಿನಲ್ಲಿ ಸಬ್‌ಕಲೆಕ್ಟರ್ ಆದ ವೇಳೆ ಅವರು ತಾಲ್ಲೂಕಿನ ಗ್ರಾಮವೊಂದಕ್ಕೆ ಕುದುರೆ ಮೇಲೆ ಹೋಗುತ್ತಾರೆ. ಗ್ರಾಮದ ಮಹಿಳೆಯರಿಗೆ ಅನ್ನಾ ಅವರನ್ನು ನೋಡುವ ಕುತೂಹಲ. ಅವರ ಹಿಂದೆ ಮುಂದೆ ಸುತ್ತುವ ಮಹಿಳೆಯರು ಅವರನ್ನು ದಿಟ್ಟಿಸಿ ನೋಡುತ್ತಾರೆ. ವೃದ್ಧೆಯೊಬ್ಬರಂತೂ 'ಈಕೆ ನಮ್ಮಂತೆಯೇ

[4] ಕೇರಳದ ಎರ್ನಾಕುಲಂ ಜಿಲ್ಲೆಯಲ್ಲಿ 1927ರಲ್ಲಿ ಜನಿಸಿದ ಅನ್ನಾ ರಾಜಂ ಜಾರ್ಜ್‌ಜ್‌ರ್ಜ್‌ಅವರು ಉನ್ನತ ಶಿಕ್ಷಣವನ್ನು ಮದ್ರಾಸ್‌ವಿಶ್ವವಿದ್ಯಾಲಯದಿಂದ ಪಡೆದರು. ನಾಗರಿಕ ಸೇವೆಗೆ ಸೇರುವ ಮೊದಲು ಅವರು ಇಂಗ್ಲಿಷ್‌ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು.

ಇದ್ದಾರೆ' ಎಂಬ ಉದ್ಗಾರವೆತ್ತುತ್ತಾರೆ. ಆಗ ಅನ್ನಾ ಅವರಿಗೆ ಜನರ ನಿರಾಸೆ ಅರ್ಥವಾಗುತ್ತದೆ. ಅಧಿಕಾರಿಯಾದ ಮಹಿಳೆಯಿಂದ ಜನರು ವಿಭಿನ್ನವಾದದ್ದನ್ನು ಬಯಸುತ್ತಾರೆ ಎಂಬ ಅರಿವಾಗುತ್ತದೆ. ತಮ್ಮ ಅನುಭವಗಳ ಬಗ್ಗೆ ಸಂದರ್ಶನವೊಂದರಲ್ಲಿ ವಿವರಣೆ ನೀಡುವ ಅನ್ನಾ, 'ಸಾರ್ವಜನಿಕ ಆಡಳಿತಕ್ಕೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವ ಮಹಿಳೆಯ ಸಾಮರ್ಥ್ಯದ ಬಗ್ಗೆ ಅನೇಕ ಪುರುಷರಿಗೆ ಶಂಕೆ ಇತ್ತು. ಲಾಠಿ ಪ್ರಹಾರ ನಡೆಸುವ ಆದೇಶ ಅಥವಾ ಗಾಳಿಯಲ್ಲಿ ಗುಂಡು ಹಾರಿಸುವ ಆದೇಶ ಯಾವಾಗ ನೀಡಬೇಕೆಂಬ ವಿವೇಚನೆ ಮಹಿಳೆಗೆ ಇರುತ್ತದೆಯೇ ಎಂಬ ಅನುಮಾನಗಳೂ ಇರುತ್ತಿದ್ದವು. ಹಾಗಾಗಿ, ಲಿಂಗ ತಾರತಮ್ಯದ ವಿರುದ್ಧ ತನ್ನನ್ನು ತಾನು ಸಾಬೀತು ಪಡಿಸಲೇಬೇಕಾದ ಸಂದರ್ಭಗಳು ಆಗಾಗ ಎದುರಾಗುತ್ತಿದ್ದವು' ಎನ್ನುತ್ತಾರೆ.

ಮಹಿಳೆಯರ ವಿರುದ್ಧದ ಇಂತಹ ಅನುಮಾನಗಳಿಗೆ ಪುರುಷರಷ್ಟೆ ಕಾರಣರಲ್ಲ. ಆ ಕಾಲದಲ್ಲಿದ್ದ ಸಾಂಪ್ರದಾಯಿಕ ಮನಸ್ಥಿತಿಗಳು ಸಹ ಇದಕ್ಕೆ ಕಾರಣ ಎಂಬುದು ಅನ್ನಾ ಅಭಿಪ್ರಾಯ. ಅನ್ನಾ ಅವರು ತಮ್ಮ ವೃತ್ತಿ ಜೀವನದ ಸುದೀರ್ಘ ಅವಧಿಯಲ್ಲಿ ಏಳು ಮುಖ್ಯಮಂತ್ರಿಗಳ ಜತೆ ಕಾರ್ಯ ನಿರ್ವಹಿಸಿದ್ದಾರೆ. ಕೇಂದ್ರ ಗೃಹ ಸಚಿವಾಲಯದಲ್ಲೂ ಕೆಲಸ ಮಾಡಿದ್ದಾರೆ. 1982ರಲ್ಲಿ ದೆಹಲಿ ಏಷ್ಯನ್ ಕ್ರೀಡಾಕೂಟದ ಆಯೋಜನೆಯಲ್ಲಿ ರಾಜೀವ್‌ಗಾಂಧಿ ಅವರೊಂದಿಗೆ ನಿಕಟವಾಗಿ ಕಾರ್ಯ ನಿರ್ವಹಿಸಿದ್ದಾರೆ. ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರಿಗೆ ಕೂಡ ಎಂಟು ರಾಜ್ಯಗಳ ಪ್ರವಾಸದಲ್ಲಿ ಜತೆಯಾಗಿದ್ದಾರೆ. ಭಾರತದ ಮೊದಲ ಗಣಕೀಕೃತ ಬಂದರಾದ ಮುಂಬೈನ ಜವಾಹರ್‌ಲಾಲ್‌ನೆಹರೂ ಬಂದರಿನ ನಿರ್ಮಾಣದಲ್ಲೂ ಇವರ ಕೊಡುಗೆ ಇದೆ. ಈ ಬಂದರು ಟ್ರಸ್ಟ್‌ನ ಅಧ್ಯಕ್ಷೆಯಾಗಿ ಅನ್ನಾ ಈ ಯೋಜನೆಯ ಮೇಲ್ವಿಚಾರಣೆಯ ಹೊಣೆ ಹೊತ್ತಿದ್ದರು. ಕೇಂದ್ರ ಸರ್ಕಾರದ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ ಮೊದಲ ಮಹಿಳೆ ಇವರು.[5]

ಮಹಿಳೆಯರು ಸಾರ್ವಜನಿಕ ಜೀವನ ಪ್ರವೇಶಿಸುವುದಕ್ಕೆ ರಾಜಗೋಪಾಲಾಚಾರಿ ಅವರೂ ಮೊದಲು ವಿರೋಧಿಸಿದ್ದರು. ತಮಗೆ ಸಬ್‌ಕಲೆಕ್ಟರ್ ಹೊಣೆ ವಹಿಸಲೂ ಅವರಿಗೆ ಆಸಕ್ತಿ ಇರಲಿಲ್ಲ ಎಂಬುದನ್ನು ಅನ್ನಾ ಅವರು 2012ರಲ್ಲಿ ಸಂದರ್ಶನವೊಂದರಲ್ಲಿ

[5] ತಮ್ಮ ಬ್ಯಾಚ್‌ಮೇಟ್, ಗೆಳೆಯ ಆರ್.ಎನ್. ಮಲ್ಹೋತ್ರಾ ಅವರನ್ನು ಅನ್ನಾ ವರಿಸುತ್ತಾರೆ. ಮಲ್ಹೋತ್ರಾ ಅವರು 1985ರಿಂದ90ರವರೆಗೆ ಆರ್‌ಬಿಐ ಗವರ್ನರ್‌ಆಗಿದ್ದರು. ಕೇಂದ್ರದ ಇತರ ಪ್ರಮುಖ ಹುದ್ದೆಗಳಲ್ಲಿಯೂ ಅವರು ಕಾರ್ಯ ನಿರ್ವಹಿಸಿದ್ದರು. ತಮ್ಮ ಬ್ಯಾಚ್‌ಮೇಟ್, ಗೆಳೆಯ ಆರ್.ಎನ್. ಮಲ್ಹೋತ್ರಾ ಅವರನ್ನು ಅನ್ನಾ ವರಿಸುತ್ತಾರೆ. ಮಲ್ಹೋತ್ರಾ ಅವರು 1985ರಿಂದ 90ರವರೆಗೆ ಆರ್‌ಬಿಐ ಗವರ್ನರ್‌ಆಗಿದ್ದರು. ಕೇಂದ್ರದ ಇತರ ಪ್ರಮುಖ ಹುದ್ದೆಗಳಲ್ಲಿಯೂ ಅವರು ಕಾರ್ಯ ನಿರ್ವಹಿಸಿದ್ದರು.

ನೆನಪಿಸಿಕೊಂಡಿದ್ದಾರೆ 'ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ನಿಭಾಯಿಸಲು ನನಗೆ ಸಾಧ್ಯವಿಲ್ಲ ಎಂದೇ ಅವರು ಭಾವಿಸಿಬಿಟ್ಟದ್ದರು. ಆದರೆ ಕೆಲಸ ನಿರ್ವಹಿಸಲು, ನನ್ನ ಸಾಮರ್ಥ್ಯ ಸಾಬೀತುಪಡಿಸಲು ನನಗೆ ಒಂದು ಅವಕಾಶ ನೀಡಬೇಕು ಎಂದು ವಾದಿಸಿದ್ದೆ' ಎಂದು ಅನ್ನಾ ಹೇಳಿಕೊಂಡಿದ್ದಾರೆ. ನಂತರದ ದಿನಗಳಲ್ಲಿ ರಾಜಗೋಪಾಲಾಚಾರಿ ಅವರೇ ಅನ್ನಾ ಅವರ ಕೆಲಸದ ಬಗ್ಗೆ ಅಧಿಕೃತ ವರದಿಯಲ್ಲಿ ಮೆಚ್ಚುಗೆ ಸೂಚಿಸಿದ್ದನ್ನು ಮತ್ತು ಸಾರ್ವಜನಿಕ ಸಭೆಯೊಂದರಲ್ಲಿ ಅನ್ನಾ ಹೆಸರು ಪ್ರಸ್ತಾಪಿಸಿ, 'ಪ್ರಗತಿಪರ ಮಹಿಳೆಗೆ ಆಕೆ ಉದಾಹರಣೆ' ಎಂದು ಕೊಂಡಾಡಿದ್ದನ್ನು ಅನ್ನಾ ಜ್ಞಾಪಿಸಿಕೊಂಡಿದ್ದಾರೆ.

ಮಹಿಳೆಯರಿಗೆ ಸೀಮಿತ ಎಂಬಂತಿದ್ದ ಶಿಕ್ಷಕಿ, ದಾದಿಯಂತಹ ವೃತ್ತಿಯಾಚೆಗಿನ ನಾಗರಿಕ ಸೇವೆಗಳಂತಹ ಹುದ್ದೆಗಳನ್ನು ನಿರ್ವಹಿಸಲೂ ಮಹಿಳೆ ಸಮರ್ಥಳು ಎಂದು ತೋರಿಸಿದವರು ಅನ್ನಾ. ಮಹಿಳೆಯರಿಗಿದ್ದ ಹಲವು ಸಾಮಾಜಿಕ ಅಡೆ ತಡೆಗಳನ್ನು ಮುರಿದು ಮಾದರಿ ಸೃಷ್ಟಿಸಿದವರು ಅವರು. ಅವರ ಈ ಚೈತನ್ಯ, ಛಲ ಆಡಳಿತಕ್ಕೆ ಮಾದರಿಯಾದುದು.

ನಾಗರಿಕ ಸೇವೆಗೆ ಸೇರಿದ ಅಧಿಕಾರಿಗಳು ವಿವಾಹವಾದಲ್ಲಿ ರಾಜೀನಾಮೆ ನೀಡಬೇಕೆಂಬ ನಿಯಮ ಬದಲಾದದ್ದು 1972ರಲ್ಲಿ. ಸೇವೆಗೆ ಸೇರಲು ವಿವಾಹಿತ ಸ್ತ್ರೀಯರಿಗೂ ಅವಕಾಶ ಕಲ್ಪಿಸಲಾಯಿತಲ್ಲದೆ ಹೆರಿಗೆ ರಜೆಯ ಅವಕಾಶವನ್ನೂ ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಲಾಯಿತು. 1971ರವರೆಗೆ ಐಪಿಎಸ್ಗೆ ನೇಮಕಗೊಳ್ಳಲು ಮಹಿಳೆಯರಿಗೆ ಅವಕಾಶ ಇರಲಿಲ್ಲ. 1972ರಲ್ಲಿ ತಾರತಮ್ಯದ ನಿಯಮ ರದ್ದು ಮಾಡಲಾಯಿತು. ಹೀಗಾಗಿ, ಮಹಿಳಾ ಐಪಿಎಸ್ ಅಧಿಕಾರಿಗಾಗಿ ರಾಷ್ಟ್ರ 1972ರವರೆಗೆ ಕಾಯಬೇಕಾಗುತ್ತದೆ. ರಾಷ್ಟ್ರದ ಮೊದಲ ಐಪಿಎಸ್ ಅಧಿಕಾರಿಯಾದ ಕಿರಣ್ ಬೇಡಿ ಹೆಸರು ರಾಷ್ಟ್ರದಲ್ಲಿ ಕೇಳದವರೇ ಇಲ್ಲ ಎನ್ನಬಹುದು. ಭಾರತೀಯ ಅರಣ್ಯ ಸೇವೆಗೆ ಮಹಿಳೆಯ ಪ್ರವೇಶವಾಗಿದ್ದು ಇನ್ನೂ ತಡವಾಗಿ. 1980ರಲ್ಲಿ ಮೊದಲ ಬಾರಿಗೆ ಭಾರತೀಯ ಅರಣ್ಯ ಸೇವೆಗೆ ಮಹಿಳೆಯರು ಸೇರ್ಪಡೆಯಾದರು. ಅರಣ್ಯ ಸೇವೆಯಲ್ಲಿ ಈಗಲೂ ಮಹಿಳೆಯರ ಸಂಖ್ಯೆ ಕಡಿಮೆಯೇ ಇದೆ. ಲಿಂಗತ್ವ ಸಮತೋಲಿತ ಕಾರ್ಯ ಕ್ರಮಗಳ ಅಗತ್ಯ ಇಲ್ಲಿ ಎದ್ದು ಕಾಣುತ್ತದೆ. ನಾಗರಿಕ ಸೇವಾ ಪರೀಕ್ಷೆ ತೆಗೆದುಕೊಳ್ಳಲು ಮಹಿಳಾ ಅಭ್ಯರ್ಥಿಗಳಿಗೆ ಉತ್ತೇಜನ ನೀಡಲಾಗುತ್ತದೆ ಎಂದು ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಲೋಕ ಸೇವಾ ಆಯೋಗದ (ಯುಪಿಎಸ್ಸಿ) ಅಧಿಸೂಚನೆಗಳಲ್ಲಿ ಹೇಳಿಕೊಂಡೇ ಬರಲಾಗುತ್ತಿದೆ. ಆದರೆ ಈಗಲೂ ಸರಾಸರಿ ಲೆಕ್ಕದಲ್ಲಿ ಹೇಳುವುದಾದರೆ ಸುಮಾರು 20 ಪುರುಷ ಐಎಎಸ್ ಅಧಿಕಾರಿಗಳಿಗೆ ಒಬ್ಬರೇ ಮಹಿಳಾ ಅಧಿಕಾರಿ ಇದ್ದಾರೆ. ರಾಷ್ಟ್ರದ 29 ರಾಜ್ಯಗಳ ಮುಖ್ಯ

ಕಾರ್ಯದರ್ಶಿಗಳ ಪಟ್ಟಿಯಲ್ಲಿ ಕೇವಲ ಇಬ್ಬರು ಮಹಿಳೆಯರಿರುವುದು ಕೇಂದ್ರ ಸಿಬ್ಬಂದಿ ಹಾಗೂ ತರಬೇತಿ ಇಲಾಖೆ ಜಾಲತಾಣದಲ್ಲಿರುವ (ಕಳೆದ ವರ್ಷದ ಆಗಸ್ಟ್ 5ರವರೆಗೆ) ಅಂಕಿಅಂಶಗಳಿಂದ ವ್ಯಕ್ತವಾಗುತ್ತದೆ. ಸಾರ್ವಜನಿಕ ನೀತಿ ನಿರೂಪಣೆಯ ಕಾರ್ಯಗಳಲ್ಲಿ ನಾಗರಿಕ ಸೇವಾ ಅಧಿಕಾರಿಗಳದ್ದು ಪ್ರಮುಖ ಪಾತ್ರ. ಜನಸಂಖ್ಯೆಯ ಅರ್ಧಭಾಗವಾಗಿರುವ ಮಹಿಳೆಯರೂ ಜನರ ಬದುಕಿನ ಮೇಲೆ ನೇರ ಪರಿಣಾಮ ಬೀರಬಲ್ಲ ಇಂತಹ ಸಾರ್ವಜನಿಕ ನೀತಿ ನಿರೂಪಣೆ ಹಾಗೂ ಯೋಜನೆಗಳನ್ನು ರೂಪಿಸುವಲ್ಲಿ ಸಹಭಾಗಿಗಳಾಗಬೇಕಾದ್ದು ಅವಶ್ಯ. ಸರ್ಕಾರದ ನೀತಿಗಳ ಫಲಾನುಭವಿಗಳಾಗಷ್ಟೇ ಮಹಿಳೆಯರು ಉಳಿಯಬಾರದು. ಇಂತಹ ನೀತಿಗಳ ನಿರೂಪಣೆ ಹಾಗೂ ಅನುಷ್ಠಾನ ಪ್ರಕ್ರಿಯೆಯಲ್ಲಿ ಅವರೂ ಪಾಲುದಾರರಾಗಲು ಅಧಿಕಾರ ಸ್ಥಾನಗಳಲ್ಲಿ ಮಹಿಳೆಯರು ಇರುವುದು ಅಗತ್ಯ. ನಮ್ಮ ಬದುಕಿನಲ್ಲಿ ಅಂತರ್ಗತವಾಗಿರುವ ಸಾಮಾಜಿಕ ಅಡೆತಡೆಗಳನ್ನು ದಾಟುವುದು ಸುಲಭವಲ್ಲ. ಆದರೂ ಇತ್ತೀಚಿನ ದಿನಗಳಲ್ಲಿ ಬದಲಾವಣೆ ಕಾಣಿಸುತ್ತಿದೆ ಎಂಬುದೇ ಸಮಾಧಾನಕರ.

ಮೇಲಿನ ಉದಾಹರಣೆಯು ಪ್ರಸ್ತುತ ಸಂಶೋಧಕಿಯಾ ಅನುಭವವೂ ಹೌದು. ಆದ್ದರಿಂದ ಇಲ್ಲಿ ಎದುರಾಗುವ ಸವಾಲೆಂದರೆ ಅದು ಕೇವಲ ಭಾಷೆಯದ್ದು ಮಾತ್ರವಲ್ಲದೆ ಸಾಮಾಜಿಕ ಮತ್ತು ಸಾರ್ವತ್ರಿಕ ಬದುಕಿನದ್ದೂ ಹೌದು. ಮಹಿಳೆಯೆಂದರೆ ಇಂದಿಗೂ ಸಹ ಅನೇಕ ಸಿದ್ಧಮಾದರಿಗಳು ಎಲ್ಲರಲ್ಲೂ ನೆಲೆಸಿವೆ. ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಪತ್ರಕರ್ತರೊಬ್ಬರು ಹೀಗೆಒಂದು ಸವಾಲೆಸುತ್ತಾರೆ – 'ಮಹಿಳೆಯಾಗಿ ಜಿಲ್ಲೆಯಲ್ಲಿ ಚುನಾವಣೆಯನ್ನು ಎದುರಿಸುವ ಕೆಲಸ ಸವಾಲಿನದ್ದಲ್ಲವೆ? ಇದಕ್ಕೆ ನೀಡಿದ ಉತ್ತರ ಹೀಗಿದೆ – (ಈ ಪ್ರಶ್ನೆಯಲ್ಲೇ ಮಹಿಳೆಯ ಸಾಮರ್ಥ್ಯದ ಕುರಿತಂತೆ ಅನುಮಾನವಿದೆ) "ಪಾರದರ್ಶಕತೆ, ಕಠಿಣ ಪರಿಶ್ರಮದಿಂದ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಸಾಧ್ಯ. ಸಮಾಜದ ಮೇಲೂ ಅದು ಪರಿಣಾಮ ಬೀರಲಿದೆ. ಮಹಿಳೆ ಇದ್ದಲ್ಲಿ ತಂಡವೊಂದರ ಸ್ಫೂರ್ತಿಯ ಕೆಲಸವೂ ಸಾಧ್ಯ. ಕಠಿಣ ಕ್ರಮ, ಮಮತೆಯ ಆಡಳಿತ ನೀಡುವ ಅಗತ್ಯವಿದೆ. ಹುಟ್ಟಿನಿಂದ ಹೆಣ್ಮಗಳು ನಾನಾ ಹಂತಗಳಲ್ಲಿ ಜವಾಬ್ದಾರಿ ನಿಭಾಯಿಸುವ ಶಕ್ತಿ, ಸಾಮರ್ಥ್ಯಗಳಿಸುತ್ತಾಳೆ. ಮನೆ, ಕುಟುಂಬ ಮತ್ತು ಆಡಳಿತವನ್ನು ಸಮತೋಲನ, ಹೊಂದಾಣಿಕೆಯಿಂದ ನಿಭಾಯಿಸಿದರಷ್ಟೇ ಯಶಸ್ವಿಯಾಗಲು ಸಾಧ್ಯ."[6]

---

[6] ವಿಜಯ ಕರ್ನಾಟಕ ವರದಿ ಫೆಬ್ರವರಿ 22, 2019

ಇಂತಹ ನಿದರ್ಶನಗಳು ಬಹುವಾಗಿದ್ದರೂ ಸಹ ಇನ್ನೂ ಲಿಂಗ ತಾರತಮ್ಯದ ಮನೋಭಾವ ಎದ್ದು ಕಾಣುತ್ತದೆ. ಇದಕ್ಕೊಂದು ನಿದರ್ಶನವನ್ನು ಉಡುಪಿ ಇಲ್ಲೆಯಿಂದಲೇ ತೆಗೆದುಕೊಳ್ಳಬಹುದು:

ಮಾತೃ ಪ್ರಧಾನ ಸಾಮಾಜಿಕ ವ್ಯವಸ್ಥೆಯುಳ್ಳ (ಬಂಟ, ಬಿಲ್ಲವ ಸಮುದಾಯದ ಅಳಿಯ ಕಟ್ಟು) ಉಡುಪಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೇ ಮೊದಲ ಅಥವಾ ಎರಡನೇ ಸ್ಥಾನ ಗಳಿಸಿದರೆ, ಫಲಿತಾಂಶ ಗಳಿಕೆಯಲ್ಲಿ ಬಾಲಕರಿಗಿಂತ ಯಾವತ್ತೂ ಬಾಲಕಿಯರೇ ಮುಂದಿದ್ದಾರೆ. 2011ರ ಜನಗಣತಿ ಪ್ರಕಾರ 11,77,908 ಜನಸಂಖ್ಯೆಯಲ್ಲಿ ಶೇ.49(5,62,131) ಪುರುಷರಿದ್ದರೆ, ಮಹಿಳೆಯರು (6,15,230) ಶೇ.51ರಷ್ಟಿದ್ದಾರೆ. ಸಾಕ್ಷರತೆಯಲ್ಲಿ ರಾಷ್ಟ್ರೀಯ ಸರಾಸರಿಗಿಂತ(ಶೇ. 59.5) ಉಡುಪಿ ಜಿಲ್ಲೆ ಮುಂದಿದ್ದರೂ (ಶೇ. 83) ಪುರುಷರ ಪಾಲು ಶೇ.86 ಹಾಗೂ ಮಹಿಳೆಯರ ಪಾಲು ಶೇ.81ರಷ್ಟಿದೆ. 2019ರ ಜ.1ಕ್ಕೆ ಅಂತಿಮವಾದ ಮತದಾರರ ಪಟ್ಟಿ ಪ್ರಕಾರ ಒಟ್ಟು 9,90,773 ಮತದಾರರ ಪೈಕಿ 4,77,243 ಪುರುಷ ಮತದಾರರಿದ್ದರೆ, 5,13,523 ಮಹಿಳಾ ಮತದಾರರಿದ್ದು, ಜನಪ್ರತಿನಿಧಿಗಳ ಆಯ್ಕೆಯಲ್ಲೂ ಮಹಿಳೆಯರ ಪಾತ್ರ ನಿರ್ಣಾಯಕವಾಗಿದೆ. ಹೀಗಿದ್ದರೂ ಆಡಳಿತದ ಹೊಣೆಗಾರಿಕೆ ಬಂದಲ್ಲಿ ಅವರ ಬಗ್ಗೆ ಅನುಮಾನಗಳು ಮತ್ತೆ ಮತ್ತೆ ಕಾಣುತ್ತವೆ.

4.2.1: ಭಾಷಿಕ ತೊಡಕುಗಳು

ಮೇಲಿನ ಸಂಗತಿಗಳನ್ನು ಗಮನಿಸದಾಗ, ಚಾರಿತ್ರಿಕವಾಗಿ ಮತ್ತು ಸಮಕಾಲೀನವಾಗಿ ಮಹಿಳೆಗೆ ದೊರಕದೇ ಇರುವ ಸಮಾನ ಅವಕಾಶಗಳು ಆಡಳಿತದಲ್ಲೂ ಸಹ ದೊರಕಿಲ್ಲ ಎನ್ನುವುದು ಗೋಚರಿಸುತ್ತದೆ. ಇಂದಿಗೂ ಪ್ರಭುತ್ವವು ಮಹಿಳೆಯನ್ನು ಅಧಿಕಾರಸ್ಥಾನದಿಂದ ದೂರವೇ ಇರಿಸಿಕೊಂಡು ಬಂದಿದೆ. ಈ ಅಸಮಾನತೆಯ ಅನುಭವವು ಯಾವುದೋ ಒಂದು ನಿರ್ದಿಷ್ಟ ಸಮಾಜಕ್ಕೆ ಮಾತ್ರ ಸೀಮಿತವಾಗಿರುವಂತಹುದಲ್ಲ. ಎಲ್ಲ ಸಮಾಜಗಳಲ್ಲೂ ಮಹಿಳೆಯ ಬಗೆಗೆ ಈ ಅಸಮಾನತೆ ಕಂಡುಬರುತ್ತದೆ. ಅಸಮಾನತೆಯನ್ನು ಕಾಯ್ದುಕೊಳ್ಳುವ, ಮುಂದುವರೆಸಿಕೊಂಡು ಹೋಗುವ ಹಾಗೂ ಇದನ್ನು ಸಮರ್ಥಿಸುವ **'ಗಂಡು–ಚಿಂತನೆ'**ಗಳು ಎಲ್ಲ ಸಮಾಜಗಳಲ್ಲೂ ಇದೆ. ಅಸಮಾನತೆಯ ನೆಲೆಗಟ್ಟನ್ನು ಹೊಂದಿರುವ ಸಾಮಾಜಿಕ ಸಂಸ್ಥೆಗಳನ್ನು ಉದ್ದೇಶಪೂರ್ವಕವಾಗಿ ಈ ಸಮಾಜಗಳು ಪೋಷಿಸಿಕೊಂಡು ಬರುತ್ತಿವೆ. ಇಂಥ ಸಾಮಾಜಿಕ ವ್ಯವಸ್ಥೆಗಳನ್ನು ಗಮನಿಸಿದಾಗ ಭಾಷೆಯೂ ಕೂಡಾ ಇಂತಹ ವ್ಯವಸ್ಥೆಗಳಲ್ಲಿ ಒಂದು

ಎನ್ನುವುದನ್ನು ಹೇಳಬೇಕಾಗುತ್ತದೆ. ಭಾಷಾ ಬಳಕೆಯಲ್ಲಿಯೇ ಮಹಿಳೆಯನ್ನು ಅಸಮಾನತೆಯ ನೆಲೆಯಲ್ಲಿ ಇರಿಸುವ ಅಂಶಗಳು ತಟ್ಟಂತ ಕಾಣಿಸಿಕೊಂಡು ಬಿಡುತ್ತವೆ. ಉದಾಹರಣೆಗೆ ಪ್ರಜಾಪ್ರಭುತ್ವಕ್ಕಾಗಿಯೇ ಆಗುಮಾಡಿರುವ ಸಂವಿಧಾನಾತ್ಮಕವಾದ ಆಡಳಿತದ ಚುನಾಯಿತ ಹುದ್ದೆಗಳಾಗಲೀ, ಸರಕಾರ ನೇಮಿಸಿಕೊಳ್ಳುವ ಹುದ್ದೆಗಳ ಹೆಸರುಗಳಾಗಲೀ ಎಲ್ಲವೂ **ಗಂಡಸು–ಕೇಂದ್ರಿತ ಸೂಚಿತಗಳಂತೆ** ಇವೆಯೇ ಹೊರತಾಗಿ, ಮಹಿಳೆಯನ್ನು ಒಳಗೊಳ್ಳುವಂತೆ, ಒಳಗೊಳ್ಳಬಹುದು ಎನ್ನುವಂತೆ ಆ ಹುದ್ದೆಯ ಹೆಸರುಗಳು ಲಿಂಗ ತಾರತಮ್ಯರಹಿತ ಭಾಷಿಕ ನಡೆಯನ್ನು ಹೊಂದಿಲ್ಲ.

ಉದಾ–1: ರಾಷ್ಟ್ರಪತಿ, ರಾಜ್ಯಪಾಲ, ಸಭಾಪತಿ, ಸಭಾಧ್ಯಕ್ಷ, ಸಂಸತ್–ರಾಜ್ಯಸಭಾ ಸದಸ್ಯ, ವಿಧಾನಸಭಾ–ವಿಧಾನಪರಿಷತ್ ಸದಸ್ಯ, ನ್ಯಾಯಾದೀಶ, ವಕೀಲ, ಇತ್ಯಾದಿ...

ಉದಾ–2: ಕುಲಾಧಿಪತಿ, ಕುಲಪತಿ, ಕುಲಸಚಿವ, ಆಯುಕ್ತ, ಜಿಲ್ಲಾಧಿಕಾರಿ, ಕಾರ್ಯದರ್ಶಿ, ಅಧೀಕ್ಷಕ, ತಹಶಿಲ್ದಾರ, ಅಧಿಕಾರಿ, ಕ್ರೀಡಾಪಟು, ಆಟಗಾರ, ಇತ್ಯಾದಿ...

ಭಾಷೆಯು ಮಾನವನ ಅಂತಸ್ಥ ಸಾಮರ್ಥ್ಯಗಳಲ್ಲಿ ಒಂದೆಂದು ಗುರುತಿಸಿದಾಗ, ಅದರ ಸಾಮಾಜಿಕ ನೆಲೆಗಟ್ಟನ್ನು ಬಿಡಲು ಆಗುವುದಿಲ್ಲ. ಮನುಷ್ಯನ ಭಾಷಾ ಸಾಮರ್ಥ್ಯವು ಅಭಿವ್ಯಕ್ತವಾಗುವುದು ಸಾಮಾಜಿಕವಾಗಿಯೇ, ಹಾಗೆಯೇ ನಿಯಂತ್ರಣಕ್ಕೊಳಗಾಗುವುದು ಕೂಡಾ ಸಾಮಾಜಿಕವಾಗಿಯೇ. ಭಾಷೆಯ ಸ್ವರೂಪವನ್ನು ಸಮಾಜವೇ ರೂಪಿಸುತ್ತದೆ. ಇಲ್ಲಿ ವ್ಯಕ್ತಿಯ ತಂತ್ರ ಗುಣವಾಗಿರುತ್ತದೆ. ಆದ್ದರಿಂದ ಇದು ಸಾಮಾಜಿಕ ನೆಲೆಯಲ್ಲಿ ಮಾನ್ಯತೆಯನ್ನು ಪಡೆದುಕೊಂಡಿರುವುದರಿಂದ ಇದು ಎಲ್ಲರನ್ನು ಸಮಾನವಾಗಿ ಪರಿಗಣಿಸುವುದಿಲ್ಲ. ಭಾಷೆಯಲ್ಲಿನ ಈ ಅಸಮಾನತೆಯನ್ನು ಗುರುತಿಸುವ ಎಚ್.ಎಸ್. ಶ್ರೀಮತಿ ಇವರು "ಸ್ತ್ರೀವಾದಿ ಚಿಂತನೆ ಯ ನೆಲೆಯಲ್ಲಿ ಭಾಷೆಯನ್ನು ಮೂರು ವಲಯಗಳಲ್ಲಿ ಗುರುತಿಸಿದ್ದಾರೆ 1. ಭಾಷೆಯಲ್ಲಿ ಹೆಣ್ಣಿನ ಪ್ರತಿನಿಧೀಕರಣ 2. ಗಂಡು ಹೆಣ್ಣುಗಳ ನಡುವಣ ತಾರತಮ್ಯಗಳನ್ನು ಭಾಷೆಯು ಕಾಯ್ದಿರಿಸುವ ಬಗೆ 3. ಇಂಥ ಪರಿಸ್ಥಿತಿಯಿಂದ ಹೊರಬರಲು ಭಾಷೆ ಎಂಬ ವ್ಯವಸ್ಥೆಯಲ್ಲೆ ಆಗಬೇಕಾಗಿರುವ ಪರಿವರ್ತನೆ." (ಹೆಣ್ಣು ಬರಹದ ಒಳಬಂಡಾಯ ಪುಟ.3,2010) ಮುಂದುವರೆದು "ಈಗಿರುವ ಭಾಷೆಯಲ್ಲೇ ಸುಧಾರಣೆಗಳನ್ನು ತರುವ ಮೂಲಕ ಅದರಲ್ಲಿರುವ ಅಸಮಾನತೆಯ ಪೋಷಕ ನೆಲೆಗಳನ್ನು ಅಳಿಸಿ ಹಾಕಲು ಯೋಜಿಸುತ್ತದೆ. ಎರಡನೆಯ ಹಂತದಲ್ಲಿ ಈಗಿನ ಭಾಷೆಯನ್ನು

ಸಮೂಲ ಪರಿವರ್ತನೆಗೆ ಗುರಿಪಡಿಸಿ, ಪ್ರತಿಭಾಷೆಯೊಂದನ್ನು ಹೆಂಗಸಿಗಾಗಿಯೇ ರೂಪಿಸಲು ಮುಂದಾಗುತ್ತಾರೆ" ಎಂದು ಹೇಳುತ್ತಾರೆ.

ಆಡಳಿತದ ನೆಲೆಯಲ್ಲಿ ಗಮನಿಸಿದಾಗ ಅಧಿಕಾರಸ್ಥ ನೆಲೆಯಿಂದ ಬರುವ ನಿಲುವುಗಳು ಮಹಿಳೆಯರಿಗೆ ಅಷ್ಟಿಷ್ಟು ಸೌಲಭ್ಯಗಳನ್ನು ಒದಗಿಸಿದರೆ ಆಯಿತು ಎಂಬಂತಿರುತ್ತದೆ. ಶತಮಾನಗಳಿಂದ ಅಧೀನ ನೆಲೆಯಲ್ಲೇ ಉಳಿದು ಬಂದಿರುವ ಹೆಣ್ಣು ಸಮುದಾಯವೂ ಕೂಡಾ ಈ ಉದಾರವಾದಿ ದಾನವನ್ನು ಪಡೆಯುವಷ್ಟಕ್ಕೆ ಧನ್ಯವಾಗಿ ಬಿಡುತ್ತದೆ. "ಭಾಷೆಯು ಹೆಣ್ಣನ್ನು ಪ್ರತಿನಿಧಿಕರಿಸುತ್ತಿರುವ ರೀತಿಯನ್ನು ಗಮನಿಸಿದರೆ ಆಯಾ ಭಾಷಿಕ ಸಮುದಾಯವು ಹೆಣ್ಣಿನ ಬಗ್ಗೆ ಹೊಂದಿರುವ ನಂಬಿಕೆಗಳು, ತೀರ್ಮಾನಗಳು, ದೃಷ್ಟಿಕೋನಗಳು ತಿಳಿದುಬರುತ್ತದೆ. ಈ ಪ್ರತಿನಿಧೀಕರಣಗಳಿಗೆ ಯಾರು ಕಾರಣರು ಎಂಬ ಪ್ರಶ್ನೆ ಅಷ್ಟು ಮುಖ್ಯವಲ್ಲ. ಆದರೆ ಅವುಗಳನ್ನು ಬಳಸುವ ಭಾಷಾ ಸಮುದಾಯವು ಆ ಪ್ರತಿನಿಧೀಕರಣಗಳ ಹಿಂದೆ ಇರುವ ನೆಲೆಗಳಿಗೆ ತನ್ನ ಸಮ್ಮತಿಯನ್ನು ನೀಡುತ್ತಿರುತ್ತದೆ ಎಂಬುದು ಮುಖ್ಯ. ಹೀಗೆ ಬಳಕೆಯಲ್ಲಿ ಭಾಗೀದಾರರಾಗಿರುವವರಲ್ಲಿ ಹೆಂಗಸರೂ ಸೇರಿರುತ್ತಾರೆ. ತಮಗೆ ಅರಿವಿಲ್ಲದಂತೆ ತಮ್ಮ ವಿರುದ್ಧವೇ ಇರುವ ಭಾಷಿಕ ನೆಲೆಗಳನ್ನು ಭದ್ರಗೊಳಿಸುವಲ್ಲಿ ಪಾಲುದಾರರಾಗಿ ಬಿಡುತ್ತಾರೆ" (ಎಚ್..ಎಸ್. ಶ್ರೀಮತಿ ಅದೇ ಪು.8. 2010) ಎನ್ನುವುದು ಸತ್ಯ.

ಮನೋವಿಜ್ಞಾನದ ಮೂಲಕ ಮತ್ತೊಂದು ಬಗೆಯ ವಿಶ್ಲೇಷಣೆಯೂ ಸಹ ಸಾಧ್ಯವಿದೆ. 1970ರ ದಶಕದಿಂದ ಸ್ತ್ರೀವಾದವು ಅನೇಕ ಮಜಲುಗಳನ್ನು ದಾಟಿ ಒಂದು ವಿಶಾಲ ಸಾಂಸ್ಕೃತಿಕ–ಮನೋವೈಜ್ಞಾನಿಕ ವಿಶ್ಲೇಷಣೆಯ ತಳಹದಿಯ ಮೇಲೆ ರೂಪಿತಗೊಳ್ಳುತ್ತಿವೆ. ಅಲ್ಲಿಯ ತನಕ ಸ್ತ್ರೀವಾದವು ಬೇರೆ ಬೇರೆ ಆಯಾಮಗಳಲ್ಲಿ ತನ್ನ ಬರುವಿಕೆಯನ್ನು ಗೊತ್ತುಪಡಿಸಿತ್ತು.

ಉದಾರವಾದಿ ಮತ್ತು ಸಮಾಜವಾದಿ ಸ್ತ್ರೀವಾದವು ಗಂಡು –ಹೆಣ್ಣಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ತಾರತಮ್ಯ ದೃಷ್ಟಿಕೋನವನ್ನು ಮುಂಚೂಣಿಗೆ ತಂದಿತು. ಇಲ್ಲಿ ಗಂಡಿನಂತಯೇ ಹೆಣ್ಣಿಗೂ ಎಲ್ಲಾ ರಂಗಗಳಲ್ಲೂ ಅವಕಾಶ ಸಿಗಬೇಕು. ಸಮಾನತೆಯನ್ನು ಕಾನೂನಿನ ಮೂಲಕ ತರಬೇಕು. ಆರ್ಥಿಕವಾಗಿ ಗಂಡಿಗೆ ಸರಿಸಮಾನನಾಗಿ ನಿಲ್ಲಬೇಕು. ವರ್ಗ ಮತ್ತು ಲಿಂಗಾಧಾರಿತ ತಾರತಮ್ಯಗಳು ಹೋಗಬೇಕೆಂದು ಹೋರಾಡಿತು. ಗಂಡು–ಹೆಣ್ಣಿನ ಅಸಾಮಾನತೆಗೆ ಬಂಡವಾಳಶಾಹಿಯೇ ಕಾರಣವಾದ್ದರಿಂದ ಅದನ್ನು ನಿರ್ನಾಮ ಮಾಡಬೇಕೆಂದು ನಂಬಿತ್ತು.

ಎರಡನೇ ರೀತಿಯ ಸ್ತ್ರೀವಾದವು ಹೆಣ್ಣು ಒಂದು ಶಕ್ತಿ. ಹೆಣ್ಣಿನ ಮೌಲ್ಯ ದೊಡ್ಡದು. ಪುರುಷ ಪ್ರಧಾನತೆ ಹೆಣ್ಣನ್ನು ಕೀಳಾಗಿ ನೋಡುತ್ತದೆ. ಗಂಡು ಯಾವಾಗಲು ತಾನು ಮೇಲು ಎಂದು ನೋಡುತ್ತಿರುತ್ತದೆ. ಇದರಿಂದ ಹೆಣ್ಣು ತುಳಿತಕ್ಕೊಳಗಾಗಿದ್ದಾಳೆ ಎಂಬುದು ಈ ವಾದದ ತಿಳಿವು. ಆದರೆ ಈ ವಾದವನ್ನು ಬರಿಯ ಸ್ತ್ರೀವಾದಿಗಳು, ಅಭಿವೃದ್ಧಿಶೀಲ ದೇಶದ ಸ್ತ್ರೀವಾದಿಗಳು, ವಸಾಹತುಶಾಹಿ ಸ್ತ್ರೀವಾದಿಗಳು ವಿರೋಧಿಸುತ್ತಿದ್ದಾರೆ.

ಬಿಳಿಯ ಸ್ತ್ರೀವಾದಗಳ ಸಿದ್ಧಾಂತವನ್ನು ಕರಿಯ ಸ್ತ್ರೀವಾದಿಗಳು (black feminist) ಒಪ್ಪುವುದಿಲ್ಲ. ಇವರು ಕರಿಯ ಸ್ತ್ರೀವಾದಿಗಳಿಗೂ ಬಿಳಿಯ ಸ್ತ್ರೀವಾದಿಗಳಿಗೂ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಕರಿಯ ಸ್ತ್ರೀಯರ ಅನುಭವ, ಸಾಂಸ್ಕೃತಿಕ ಪ್ರಾತಿನಿಧ್ಯ ಮತ್ತು ಸಾಮಾಜಿಕ–ಆರ್ಥಿಕ ಆಸಕ್ಥಿಗಳಲ್ಲಿರುವ ವ್ಯತ್ಯಾಸವನ್ನು ತೋರಿಸಿಕೊಡುತ್ತಿದ್ದಾರೆ. ಅಂತೆಯೇ ವಸಾಹತುಶಾಹಿಯ ಸಂಧರ್ಭದಲ್ಲಿ ಹೆಣ್ಣು ಹೇಗೆ ಎರಡು ಪಟ್ಟು ದಮನಕ್ಕೊಳಗಾಗಿದ್ದಾಳೆ ಎಂದು ವಿಶ್ಲೇಷಿಸುತ್ತಾರೆ. ಇದಕ್ಕೆ ಕಾರಣ ವಸಾಹತುಶಾಹಿಗಳ ದಬ್ಬಾಳಿಕೆ ಒಂದೆಡೆಯಾದರೆ, ತಮ್ಮ ದೇಶದ ಗಂಡಸರ ಪುರುಷ ಪ್ರಧಾನತೆ ಮತ್ತೊಂದು ಕಾರಣವಾಗಿರುತ್ತದೆ.

ರಚನೋತ್ತರ ಸ್ತ್ರೀವಾದಿಗಳು ಲೈಂಗಿಕತೆ (sexuality) ಮತ್ತು ಲಿಂಗಾಧಾರಿತ (gender based) ಸಮಾಜವೂ ಆಯಾ ಸಮಾಜದ ಮತ್ತು ಸಂಸ್ಕೃತಿಯ ನಿರ್ಮಿತಿಗಳೆಂದು ನಂಬುತ್ತಾರೆ. ಇದನ್ನು ಶರೀರಶಾಸ್ತ್ರ (biological) ದನ್ವಯ ವಿಶ್ಲೇಷಿಸಲಾಗುವುದಿಲ್ಲ ಎಂದು ಹೇಳುತ್ತಾರೆ. ಹೆಣ್ತನ–ಗಂಡುತನಗಳು ಸಾರ್ವತ್ರಿಕ ವರ್ಗಗಳಾಗಿ ವಿಂಗಡಿಸಲು ಸಾಧ್ಯವಿಲ್ಲ. ಗಂಡುತನ–ಹೆಣ್ಣುತನ ಹೇಗೆ ಭಾಷೆಯಲ್ಲಿ ಪ್ರತಿನಿಧಿಸಲ್ಪಟ್ಟಿದೆ ಎಂಬುದರ ಆಧಾರದ ಮೇಲೆ ನಿಗಧಿಪಡಿಸಲಾಗುವುದು. ಇಲ್ಲಿ ಸಂಸ್ಕೃತಿ ಪ್ರತಿನಿಧೀಕರಣ, ಭಾಷೆ, ಅಧಿಕಾರ, ತಾತ್ವಿಕ ತೊಳಲಾಟ, ಮಾನಸಿಕ ಸ್ಥಿತಿಯ ರೂಪ ಇವುಗಳ ಆಧಾರದ ಮೇಲೆ ಸ್ತ್ರೀವಾದ ನಿಂತಿದೆ. ಲಿಂಗಾಧಾರಿತ ನಿರ್ಮಿತಿಯು ಮನಸ್ಸಿನ ಒಳಗೂ–ಹೊರಗಿನ (ಸುಪ್ತ–ಜಾಗೃತ ಪ್ರಜ್ಞೆಗಳ) ಜೊತೆ ಹೇಗೆ ಸಂಧಿಸುತ್ತದೆ ಎಂಬುದನ್ನು ವಿಶ್ಲೇಷಿಸುವ ಮೂಲಕ ಸ್ತ್ರೀವಾದವನ್ನು ಪ್ರತಿನಿಧಿಸುತ್ತಾರೆ.

ಈ ವಾದದ ಪ್ರಮುಖ ರೂವಾರಿ ಫ್ರಾನ್ಸ್ನ ಜ್ಯಾಕ್ ಲೆಕಾಂ (1910–1984). ಲೆಕಾಂ ಫ್ರಾಯ್ಡ್‌ನ ಪ್ರಮುಖ ಪರಿಕಲ್ಪನೆಗಳಾದ ಸಾಂಸಾರಿಕ ಮತ್ತು ಲೈಂಗಿಕ ಅನುಭವಗಳನ್ನು ಸಾಂಸ್ಕೃತಿಕ ಅನುಭವವನ್ನಾಗಿ ಪರಿವರ್ತಿಸಿಬಿಡುತ್ತಾನೆ. ಪ್ರತಿಯೊಬ್ಬನ ಅನನ್ಯತೆಯೂ ಭಾಷಾ

ಪ್ರಯೋಗದಲ್ಲಿ ವ್ಯಕ್ತವಾಗುತ್ತದೆ. ಪ್ರತಿಯೊಬ್ಬನಲ್ಲೂ ಲೈಂಗಿಕ ಪ್ರಜ್ಞೆ ಅದುಮಿಕೊಂಡು ಬಿಡುತ್ತದೆ. ಅದು ಸುಪ್ತಪ್ರಜ್ಞೆಯ ಒಳಗೆ ಸೇರಿಕೊಳ್ಳುತ್ತದೆ. ಈ ಅದುಮಿಟ್ಟ ಸುಪ್ತಪ್ರಜ್ಞೆಯ ಭಾಷೆಯ ರೂಪವನ್ನು ತಳೆದು ನಂತರ ಬದುಕಿನ ಆಕಾಂಕ್ಷೆಯಾಗಿ ಪರಿವರ್ತಿತವಾಗುತ್ತದೆ. ಅದು ಹೊರ ಹೊಮ್ಮುವುದು ಭಾಷೆಯ ಮುಖಾಂತರ. ಭಾಷೆಯಲ್ಲಿ ನಿರಂತರವಾದ ಹುಡುಕಾಟವಾಗುತ್ತದೆ. ಭಾಷೆ ಸಾಂಕೇತಿಕವಾಗಿರುತ್ತದೆ. ಇದಕ್ಕೆ ಮುಖ್ಯ ಕಾರಣ ತಂದೆಯ ರೂಪಕವಾದ 'ಶಿಶ್ನ'. ಶಿಶ್ನವು ಅಧಿಕಾರದ, ನಿಯಂತ್ರಣದ ಸಂಕೇತ. ಇದನ್ನು ಹೊಂದಿರುವ-ಹೊಂದಿಲ್ಲದ (ಗಂಡುಮಗು-ಹೆಣ್ಣುಮಗು) ಶಿಶ್ನ ಸಂಕೇತದ ಭಾಷೆಯನ್ನೇ ಬಳಸಲು ಕಲಿಯುತ್ತವೆ. ಆದ್ದರಿಂದ ಇಡೀ ಭಾಷೆ ಲೆಕಾಂ ಪ್ರಕಾರ ಗಂಡಿನ ಭಾಷೆಯೇ ಆಗಿರುತ್ತದೆ. ಭಾಷೆಯ ಉಳಿದೆಲ್ಲ ಸಾಧ್ಯತೆಗಳೂ ಈ ಶಿಶ್ನ ಭಾಷೆಯನ್ನೂ ಅವಲಂಬಿಸಿರುತ್ತದೆ. ಆದ್ದರಿಂದ ಮನೋ-ವೈಜ್ಞಾನಿಕ ವಿಶ್ಲೇಷಣೆ ಸಂಪೂರ್ಣವಾಗಿ ಭಾಷೆಯಲ್ಲಿ ಕಾಣಿಸಿಕೊಳ್ಳುತ್ತದೆ. ಅದಕ್ಕಾಗಿಯೇ ಲೆಕಾಂ ಸುಪ್ತಪ್ರಜ್ಞೆಯು ಭಾಷಾ ಮಾದರಿಯಲ್ಲೇ ಕೆಲಸ ಮಾಡುತ್ತಿರುತ್ತದೆ. ಅದರಂತೆಯೇ ರೂಪುಗೊಂಡಿರುತ್ತದೆ ಎಂದು ವಿಶ್ಲೇಷಿಸಿದ್ದಾನೆ. ಸುಪ್ತಪ್ರಜ್ಞೆಯು ನಮ್ಮ ಅರಿವಿಗೆ ಬರುವು ಮಾತು ಮಾತು ಕ್ರಿಯಾಶೀಲ ಬರವಣಿಗೆಗಳ ಮೂಲಕ. ಈ ಕ್ರಿಯಾತ್ಮಕ ಭಾಷೆಯಲ್ಲಿ ಸುಪ್ತಪ್ರಜ್ಞೆ, ಜಾಗೃತ ಪ್ರಜ್ಞೆಯೊಡನೆ ನಿರಂತರವಾಗಿ ಆಟವಾಡುತ್ತಿರುತ್ತದೆ.

ಕನಸುಗಳು ಮತ್ತು ಹಾಸ್ಯವನ್ನು ವಿಶ್ಲೇಷಿಸುವಾಗ ಫ್ರಾಯ್ಡನು ಭಾಷೆಯ ಬಗ್ಗೆ ಒತ್ತಿ ಹೇಳಿದ್ದನು. ಸುಪ್ತಪ್ರಜ್ಞೆಯನ್ನು ಹೊರಹಾಕುವ ಏಕೈಕ ಮಾಧ್ಯಮ ಭಾಷೆ. ಇದರ ಆಧಾರದ ಮೇಲೆ ಲೆಕಾಂ ಹೇಳುವುದೇನೆಂದರೆ ಭಾಷೆ ಇಲ್ಲದಿದ್ದರೆ ಪ್ರಪಂಚದಲ್ಲಿ ಏನನ್ನು ಅರಿಯಲು ಸಾಧ್ಯವಿರಲಿಲ್ಲ. ಒಂದು ವಸ್ತುವಿಗಿಂತ ಇನ್ನೊಂದು ಭಿನ್ನ ಎಂದು ತಿಳಿಯುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಆಗ ರಚನೆಗಳೇ ಇರಲಿಲ್ಲ. ಸುಪ್ತಪ್ರಜ್ಞೆಯನ್ನು ಭಾಷೆಯ ಮೂಲವಾಗಿಯೇ ಪುನರಚಿಸಬೇಕೆಂದು ವಿಶ್ಲೇಷಿಸಿದ್ದಾನೆ. ಭಾಷೆಗಿಂತ ಮೊದಲು ಮಗುವಿನ ಮನಸ್ಸು, ಪ್ರವೃತ್ತಿ (instinct) ಮಟ್ಟದಲ್ಲಿ ಮಾತ್ರ ಇರುತ್ತದೆ. ಬಾಷೆ ಕಲಿಕೆಯ ಶಕ್ತಿಯಿಂದ ಮನುಷ್ಯ ಮನುಷ್ಯನಾಗಿದ್ದಾನೆ. ನಮ್ಮ ಲೈಂಗಿಕತೆ (sexuality) ಮತ್ತು ಲಿಂಗಭೇದ (gender distinction) ರೂಪಿಸಿದೆ. ಈ ಕಾರಣದಿಂದಾಗಿ ಲೆಕಾಮ್ನ ಭಾಷಾಧಾರಿತ ಮನೋವಿಜ್ಞಾನ ಎಪ್ಪತ್ತರ ದಶಕದಿಂದೀಚೆಗೆ ಪಿತೃಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಅರಿಯುವ ಪ್ರಮುಖ ಸಾಧನವಾಗಿದೆ. ಸ್ತ್ರೀವಾದಕ್ಕೆ ಆಳ ಮತ್ತು ವಿಸ್ತಾರವನ್ನು ಒದಗಿಸಿದೆ. ಹಾಗೆ ನೋಡಿದರೆ ಫ್ರಾಯ್ಡನ ಮನೋವಿಶ್ಲೇಷಣೆ ಸ್ತ್ರೀವಾದಿಗಳಿಗೆ ಪ್ರತಿಕೂಲವಾಗಿಯೇ ಇದೆ. ಏಕೆಂದರೆ ಹೆಣ್ಣಿನ ದಮನವನ್ನೇ ಅದು ಹೇಳುತ್ತದೆ. ಹೆಣ್ಣು ಕ್ರಿಯಾಶೀಲಳಲ್ಲ, ಅವಳಿಗೆ ಸಮಾಜದಲ್ಲಿ ಅಧಿಕಾರವಿಲ್ಲ, ಲೈಂಗಿಕವಾಗಿ

ಅರಳಿಕೊಳ್ಳುವುದಿಲ್ಲ ಎಂಬೆಲ್ಲ ಮಾಮೂಲಿ ಗುಣಗಳನ್ನು ತೋರಿಸಿಕೊಡುತ್ತದೆ. ಈ ಹೆಣ್ಣುತನ ಸಾಂಸಾರಿಕ ಸಂದರ್ಭದಲ್ಲಿ ಸುಪ್ತಪ್ರಜ್ಞೆ ತನ್ನ ತಾಣವನ್ನು ಹೇಗೆ ಸೃಷ್ಟಿಸಿಕೊಂಡಿದೆ, ವಿಧೇಯತೆಯನ್ನು ಅಂತರ್ಗತ ಮಾಡಿಕೊಂಡಿದೆ ಎಂಬುದನ್ನು ನೇತ್ಯಾತ್ಮಕವಾಗಿ ತಿಳಿಸಿಕೊಡುತ್ತದೆ. ಅದು ಒಂದು ರೀತಿಯಲ್ಲಿ ಹೌದು ಕೂಡ. ಆದರೆ ಲೆಕಾಂ ಪ್ರಕಾರ ಅದು ಅಷ್ಟಕ್ಕೇ ನಿಲ್ಲುವುದಿಲ್ಲ. ಫ್ರಾಯ್ಡ್ ಈ ಸೀಮಿತ ನೇತ್ಯಾತ್ಮಕ ಅರಿವಿಗೆ ಭಾಷೆಯ ಪರಿಕಲ್ಪನೆಯನ್ನು ಜೋಡಿಸಿ ಮನಸ್ಸನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾನೆ. ಹೊಸ ಹೊಳವುಗಳನ್ನು ಕೊಡುತ್ತಾನೆ. ಮಕ್ಕಳು ಹುಟ್ಟಿದಾರಭ್ಯ ಭಾಷೆಯ ಸಾಕೇಂತಿಕತೆಯಲ್ಲಿ ಹೇಗೆ ಸ್ಥಾನ ಪಡೆಯುತ್ತಾರೆ ಎಂಬುದನ್ನು ವಿಶ್ಲೇಷಿಸುತ್ತಾನೆ. ಲೆಕಾಂ ಪ್ರಕಾರ ಮಕ್ಕಳು ಈ ಭಾಷೆಯನ್ನಾಡುವ ಮಟ್ಟಕ್ಕೆ ಬರಬೇಕಾದರೆ ಅನೇಕ ಕವಲುಗಳಾಗಿ ಸೀಳಿಕೊಳ್ಳುತ್ತಾರೆ. ಮೊದಲು ಮಗುವು ತಾನು ತನ್ನ ತಾಯಿಯ ದೇಹಕ್ಕಿಂತ ಭಿನ್ನ ಎಂದು ಅರಿತುಕೊಳ್ಳುತ್ತದೆ. ಮುಂದಿನ ಘಟ್ಟ ಮಗು ತನ್ನ ಪ್ರತಿಫಲನವನ್ನು ಕನ್ನಡಿಯಲ್ಲಿ ಕಂಡಂತೆ ತನ್ನನ್ನೇ ಕಾಣುವ ಘಟ್ಟ (mirror reflection stage). ಮೂರನೆಯ ಘಟ್ಟದಲ್ಲಿ 'ನಾನತ್ವ'ವನ್ನು ಭಾಷೆಯ ಮೂಲಕ ಕಂಡುಹಿಡಿದುಕೊಳ್ಳುವ ಘಟ್ಟ. ಈ 'ನಾನು' ಬೇರೆಯವರಿಗಿಂತ ಭಿನ್ನ ಎಂಬುದನ್ನು ಅರಿಯುವುದು. ಈ 'ನಾನು' ಅವನು/ಳು ಎಂಬುದನ್ನು ಭಾಷೆಯಲ್ಲಿ ತಿಳಿಯುವ ಘಟ್ಟ. ಭಾಷೆ ಇಲ್ಲದೆ ಈ ಘಟ್ಟದಲ್ಲಿ ಮಗು ಸೀಳಿಕೊಳ್ಳಲಾಗುವುದಿಲ್ಲ. ಭಾಷೆ ಕಲಿಯುವುದರೆಂದರೆ ಸಮಾಜದ ಜೊತೆ ಒಡನಾಟ ನಡೆಸುವುದು (socialization) ನಂತರ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು.

ಲೆಕಾಂ ಪ್ರಕಾರ ಗಂಡು ಮತ್ತು ಹೆಣ್ಣು ಮಕ್ಕಳು ಈ ಸಾಂಕೇತಿಕ ಕ್ರಮವನ್ನು ಬೇರೆ ಬೇರೆಯಾಗಿ ಪ್ರವೇಶಿಸುತ್ತಾರೆ. ಅವರ ಭಾಷೆಯಲ್ಲೂ ಸೀಳು ಅಥವಾ ವ್ಯತ್ಯಾಸ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಪ್ರಮುಖ ಕಾರಣ 'ಶಿಶ್ನ'(phallus)ದ ಪ್ರಾಮುಖ್ಯತೆ. ಇಲ್ಲಿ (phallus) ಎಂದರೆ ಒಂದು ಸಾಂಕೇತಿಕತೆ ಪ್ರತೀಕ ಎಂದು ತಿಳಿಯಬೇಕು. ಮನುಷ್ಯ ಜನನೇಂದ್ರಿಯ ಎಂದು ತಿಳಿಯಬಾರದು. ಸುಪ್ತಪ್ರಜ್ಞೆಯಲ್ಲಿ ಮೂಡಿ ನಂತರ ಬೆಳೆಯುವ ಒಂದು ಭಾವನೆ. ಫ್ರಾಯ್ಡ್ ಪ್ರಕಾರ ಮಕ್ಕಳು 'ಉಭಯ ಲಿಂಗಿಗಳು'(bisexual). ಆದರೆ ನಮ್ಮ ನಾಗರಿಕತೆಯ ಬೇಡಿಕೆಗೆ ಅನುಗುಣವಾಗಿ ಮುಂದೆ ವಂಶೋದ್ಧಾರಕ್ಕೆ ಮಕ್ಕಳನ್ನು ಪಡೆಯಲು ಗಂಡ–ಹೆಣ್ಣು ಎಂದು ಗುರುತಿಸಕೊಳ್ಳಬೇಕಾಗುತ್ತದೆ. ಹೆಣ್ಣು–ಗಂಡು ಒಂದನ್ನೊಂದು ಬಯಸಿ ಮುಂದೆ ಮಕ್ಕಳನ್ನು ಪಡೆಯಲು ಅನುವಾಗುವಂತೆ ನಾಗರೀಕತೆ ಮಾಡುತ್ತದೆ. ಈ ಹಂತವನ್ನು

ಫ್ರಾಯ್ಡ್ ಈಡಿಪಸ್ ಕಾಂಪ್ಲೆಕ್ಸ್ ಎಂದು ಕರೆಯುತ್ತಾನೆ. ಈ ಹಂತದಲ್ಲಿ ಮಗು ತಾಯಿಯನ್ನು ಬೇಡುತ್ತದೆ. ತಂದೆಯ ಬಗ್ಗೆ 'ಹೊಟ್ಟೆಕಿಚ್ಚ'ನ್ನು (male envy) ಬೆಳೆಸಿಕೊಳ್ಳುತ್ತದೆ. ಏಕೆಂದರೆ ತಂದೆಯು ಮಗುವಿನ ಮತ್ತು ತಾಯಿಯ ಪ್ರೀತಿಗೆ ಅಡ್ಡ ಬರುವವನಾಗಿರುತ್ತಾನೆ. ಮುಂದಿನ ಹಂತವೆಂದರೆ ಸಾಕೇಂತಿಕವಾಗಿ ಅಂದರೆ castration, ಲೈಂಗಿಕತೆಯನ್ನು ಅದುಮಿಟ್ಟುಕೊಳ್ಳುವ ಹಂತ. ಗಂಡು ಮಗು ತಾಯಿಯ ಬಗ್ಗೆ ಇರುವ ಪ್ರೀತಿಯನ್ನು ತಂದೆಯ ಅಧಿಕಾರದ 'ಹೆದರಿಕೆಯಿಂದ' ಮುಚ್ಚಿಟ್ಟುಕೊಳ್ಳುತ್ತದೆ. ತಂದೆಯ ಜೊತೆ ತಾನು ತಾನು ಗುರುತಿಸಿಕೊಳ್ಳುತ್ತದೆ. ದೈಹಿಕವಾಗಿ ಗಂಡು ಮಗು ತಂದೆಯಂತೆಯೇ ಇರುವುದು ಇದಕ್ಕೆ ಕಾರಣ. ಹೆಣ್ಣು ಮಕ್ಕಳು ತಮ್ಮಲ್ಲಿ 'ಶಿಶ್ನ'ವಿಲ್ಲದಿರುವುದರಿಂದ ತಾಯಿಯ ಜೊತೆಯಲ್ಲಿ ಗುರುತಿಸಿಕೊಳ್ಳುತ್ತಾರೆ. Phallic ಅನ್ನುವುದರ ಮತ್ತೊಂದು ಅರ್ಥ ಪುರುಷ ಪ್ರಧಾನತೆ, ಇದು ಸಾಮಾಜಿಕ ಕ್ರಮ. ಲೈಂಗಿಕ ನಿಷೇಧ (incest) ಈ ಹಂತದಲ್ಲಿ ತಾಯಿ-ಮಗುವೆಂಬ ದ್ವಿವಾದವೃತ್ತಿ ಅರಿವಿಗೆ ಬಂದಾಗ ಭಾಷೆ ಪ್ರವೇಶಿಸುತ್ತದೆ. ಸಾಕೇಂತಿಕತೆ/ಭಾಷೆ ರೂಪ ಪಡೆಯುತ್ತದೆ. ಈ ಮಟ್ಟದಲ್ಲಿ ಗಂಡು – ಹೆಣ್ಣು ಮಗುವಿನ ಜನನಾಂಗಗಳ ವ್ಯತ್ಯಾಸದ ಅರಿವು ಮೂಡುತ್ತದೆ ಎಂದು ಲೆಕಾಂ ಗುರುತಿಸುತ್ತಾನೆ.

ಈ ಭಾಷೆಯ ಸಾಂಕೇತಿಕ ಕ್ರಮ ಸಾಮಾಜಿಕ, ಸಾಂಸ್ಕೃತಿಕ ಕೇಂದ್ರಿತವಾಗಿರುವುದರಿಂದ ಅದು ಪುರುಷ ಪ್ರಧಾನವಾಗಿ ಮಾರ್ಪಟ್ಟಿದೆ ಎಂಬುದು ಲೆಕಾಂ ವಾದ. ಅನೇಕ ಸ್ತ್ರೀವಾದಿಗಳು ಲೆಕಾಂನ ಈ ಸಿದ್ಧಾಂತವನ್ನು ಹೆಣ್ಣು ಹೇಗೆ ಭಾಷೆಯ ಮೂಲಕ ತುಳಿತಕ್ಕೊಳಗಾಗಿದ್ದಾಳೆ ಎಂದು ತೋರಿಸಲು ತೊಡಗುತ್ತಾರೆ. ಭಾಷಾ ಸಂಜ್ಞೆ ಗಂಡಿನ ಕ್ಷೇತ್ರವಾಗಿರುತ್ತದೆ. ಇದರಿಂದಾಗಿ ಅವರು ಭಾಷೆಯ ಸಾಂಕೇತಿಕತೆಯಿಂದ ಅನ್ಯರಾಗಿ, ಅಂಚಿಗೆ ದೂಡಲ್ಪಟ್ಟಿರುತ್ತಾರೆ ಎಂದು ವಾದಿಸುತ್ತಾರೆ. ಆದರೆ ಲೆಕಾಂ ಇದನ್ನು ಒಪ್ಪುವುದಿಲ್ಲ. ಇವನ ವಾದವನ್ನು ಮುಂದುವರಿಸುತ್ತಾ ಜೂಲಿಯಾ ಕ್ರಿಸ್ತೆವಾ ಲೆಕಾಂನ ನಿಲುವನ್ನು ಸ್ಪಷ್ಟ ಪಡಿಸುತ್ತಾಳೆ.

ಒಬ್ಬಳು 'ಸಂಪೂರ್ಣ ಹೆಣ್ಣೆಂದು, ಒಬ್ಬ 'ಸಂಪೂರ್ಣ ಗಂಡೆಂದು' ನಂಬುವುದು ಈ ಪ್ರಪಂಚದಲ್ಲಿ ಸಾಧ್ಯವಿಲ್ಲ. ರಾಜಕೀಯ ಕಾರಣಕ್ಕಾಗಿ ಗಂಡು-ಹೆಣ್ಣು ಎಂಬ ಭೇದ ಇರಬಹುದೇ ವಿನಃ ನೈಜತೆಯಲ್ಲಿ ಇದು ಸಾಧ್ಯವಿಲ್ಲ. ಲೈಂಗಿಕ ವ್ಯತ್ಯಾಸವನ್ನು ಗುರುತಿಸುವುದು ಸಂತಾನೋತ್ಪತ್ತಿಗೆ. ಆದರೆ ಪ್ರತಿ ನಲ್ಲಿ ಗಂಡು, ಪ್ರತಿ ಗಂಡಿನಲ್ಲಿ ಹೆಣ್ಣೂ ಅಡಗಿರುತ್ತದೆ. ಅದು ಭಾಷೆಯ ಮೂಲಕವೇ ವ್ಯಕ್ತವಾಗುತ್ತಿರುತ್ತದೆ. ಇದನ್ನು ಕಲೆಗಾರರಲ್ಲಿ, ಕವಿಗಳಲ್ಲಿ, ಕ್ರಿಯಾತ್ಮಕ ಆಲೋಚನಾಕಾರರಲ್ಲಿ ಚೆನ್ನಾಗಿ ವ್ಯಕ್ತವಾಗುವುದನ್ನು ಕಾಣಬಹುದು. ಗಂಡಸು/ಹೆಂಗಸು ಎಂಬ

ದ್ವಿವಾದವೃತ್ತಿಯನ್ನು ಒಂದು ರೀತಿಯಲ್ಲಿ ಅನುಭವದ ನೆಲೆಯಲ್ಲಿ ನೋಡಬೇಕಾಗುತದೆ. ಮೊಲೆ ಮೂಡಿ ಬಂದರೆ ಹೆಣ್ಣೆಂಬರು/ ಮೀಸೆ ಮೂಡಿ ಬಂದರೆ ಗಂಡೆಂಬರು.ಆತ್ಮ ಯಾವ ಲಿಂಗ? ಎಂಬ ಅರಿವು ಲೆಕಾಂ/ಕ್ರಿಸ್ಸೆವಾ ಇವರಿಗಾಗಿದೆ. ಹೀಗೆ ಗಂಡಿನಲ್ಲಿ ಹೆಣ್ಣು, ಹೆಣ್ಣಿನಲ್ಲಿ ಗಂಡು ಕೆಲಸ ಮಾಡುತ್ತಿರುತ್ತದೆ.

ಫ್ಲಾಯ್ಡ್ ಸಿದ್ದಾಂತವನ್ನು ಮುಂದಿಟ್ಟುಕೊಂಡು ಲೆಕ್ಕಾಂ ಸಂಸ್ಕೃತಿ ಮತ್ತು ಲಿಂಗಗಳು ಭಾಷೆಯಲ್ಲಿ ಹೇಗೆ ವ್ಯಕ್ತವಾಗುತ್ತದೆ ಎಂಬುದನ್ನು ವಿಶ್ಲೇಷಿಸುತ್ತಾನೆ/ ನಮ್ಮ ಅನನ್ಯತೆ ಉಳಿದಿರುವುದೇ, ನಾವು ಗುರುತಿಸಲ್ಪಡುವುದೇ ಭಾಷೆಯಿಂದ. ನಮ್ಮ ಆಲೋಚನಾ ಪ್ರಕ್ರಿಯೆ ನಡೆಯುವುದು ನಮ್ಮ ಮಾತಿನ/ಭಾಷೆಯ ಮೂಲಕ.

ಆದರೆ ಈಗಿರುವ ಸಂಸ್ಕೃತಿ ಅಭಿವ್ಯಕ್ತವಾಗುವುದು ಸುಪ್ತಪ್ರಜ್ಞೆಯ ಆಕಾಂಕ್ಷೆ (desire) ಯಿಂದ. ಇದು ಪುರುಷನ ಆಕಾಂಕ್ಷೆಯ ಭಾಷೆಯಾಗಿರುತ್ತದೆ. ನಮ್ಮಲ್ಲಿ ಹುದುಗಿರುವ ಈ ಗಂಡಸುತನ, (ಅಂದರೆ ಪ್ರಜ್ಞಾಪೂರ್ವಕ ವ್ಯಕ್ತಿಗತ ಆಲೋಚನೆ) ಹೆಣ್ಣುತನ ಸುಪ್ತಪ್ರಜ್ಞೆಯ ವ್ಯಕ್ತಿಗತವಲ್ಲದ ಸಂಜ್ಞೆಗಳು ಭಾಷೆಯಲ್ಲಿ ಹೊಮ್ಮುತಿರುತ್ತದೆ. ಭಾಷೆಯಲ್ಲಿರುವ ವೈರುಧ್ಯದ (ಗಂಡು–ಹೆಣ್ಣು, ಹಗಲು–ರಾತ್ರಿ, ಒಳ್ಳೆಯ–ಕೆಟ್ಟ ಇತ್ಯಾದಿ) ಅರ್ಥಗಳು 'ಶಿಶ್ನ'ವನು ಹೊಂದಿರುವ – ಹೊಂದಿರದ ಭೇದದ ಮೇಲೆ ನಿಂತಿರುತ್ತದೆ. ಹೆಣ್ಣುತನ 'ಶಿಶ್ನ' ಅಭಾವವನ್ನು ಪ್ರತಿನಿಧಿಸುವುದರಿಂದ ಭಾಷೆಯ ಅರ್ಥ ಹೆಣ್ಣಿನಲ್ಲಿ ಅಸ್ಪಷ್ಟವಾಗಿರುತ್ತದೆ. ಅಂದರೆ ಭಾಷೆಯಲ್ಲಿ ಗಂಡುತನ–ಹೆಣ್ಣುತನ ಒಟ್ಟೊಟ್ಟಿಗೆ ಪ್ರಕಟವಾಗುತ್ತಿರುತ್ತದೆ. ಇವೆರಡೂ ಬೆರೆತು ಸಾಂಸ್ಕೃತಿಕ ಕಥಾನಕಗಳು ಒಂದು ಸಮಾಜದಲ್ಲಿ ರೂಪು ತಾಳುತ್ತವೆ. ಆದ್ದರಿಂದ ಇಲ್ಲಿ 'ಗಂಡುತನ', 'ಹೆಣ್ಣತನ' ಮುಖ್ಯವಾಗುತ್ತದೆಯೇ ವಿನಃ ಗಂಡಸು–ಹೆಂಗಸು' ಎಂಬ ದೈಹಿಕ ವಿಭಾಗ ಅಥವಾ ವೈರುಧ್ಯ ಮುಖ್ಯವಾಗುವುದಿಲ್ಲ. ಗಂಡು–ಹೆಣ್ಣಿನ ಭಾಷೆ ಸಾಂಕೇತಿಕವಾಗುತ್ತದೆ. 'ಗಂಡಸುತನ'ವೆಂದರೆ ಜಾಗೃತ ಪ್ರಜ್ಞೆಯ ತರ್ಕಬದ್ಧ ಭಾಷೆ, ಹೆಣ್ಣುತನವೆಂದರೆ ಸುಪ್ತಪ್ರಜ್ಞೆಯ ಆಕಾಂಕ್ಷೆ. ಅದು ಅದುಮಿಟ್ಟ ಆಸೆಗಳು. ಈ ಸುಪ್ತ ಪ್ರಜ್ಞೆಯ ಆಕಾಂಕ್ಷೆಯು ಅಭಿವ್ಯಕ್ತಿಯ ಪ್ರಕ್ರಿಯೆ ಕಲಾವಿದರಲ್ಲಿ ಸಾಹಿತಿಗಳ ಬರಹದಲ್ಲಿ ಮೇಲ್ಮೈ ಮಟ್ಟಕ್ಕೆ ತೇಲಿಬರುತ್ತದೆ. 'ಮಜ್ಜಿಗೆಯೊಳಗಿನ ಬೆಣ್ಣೆಯಂತೆ, ಇವು ವ್ಯಕ್ತವಾಗುವುದು ಕಥಾನಕಗಳಲ್ಲಿ. ಹೀಗೆ ಒಂದು ಸಮಾಜದಲ್ಲಿ ಗಂಡುತನ ಹೆಣ್ಣುತನ ಇರುತ್ತದೆಯೇ ವಿನಃ – "ಗಂಡು – ಹೆಣ್ಣು"ಗಳಿರುವುದಿಲ್ಲ. ಆದ್ದರಿಂದ ಒಂದು ಸಂಸ್ಕೃತಿಯ ಕಥಾನಕಗಳನ್ನು ಸೂಕ್ಷ್ಮವಾಗಿ

ವಿಶ್ಲೇಷಿಸಿಕೊಳ್ಳುವುದರ ಮೂಲಕ ಸ್ತ್ರೀವಾದಿಗಳು ಪರೋಕ್ಷವಾಗಿ (discursive) ಸಮಾಜದ ತರ-ತಮಗಳನ್ನು ಕಂಡುಕೊಳ್ಳಬಹುದೆಂದು ಲೆಕಾಂ ವಿಶ್ಲೇಷಿಸುತ್ತಾನೆ. ರಚನೋತ್ತರ ವಾದಿಗಳು, ಆಧುನಿಕೋತ್ತರ ವಾದಿಗಳು ಸ್ತ್ರೀವಾದ ಪರಿಕಲ್ಪನೆಯನ್ನು ಹಿಗ್ಗಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಇಂದೂ ನಮ್ಮ ಸಮಾಜದ ರಾಜಕೀಯ, ಸಾಂಸ್ಕೃತಿಕ, ಲೈಂಗಿಕ ಆಯಾಮಗಳನ್ನು ವಿಶ್ಲೇಷಿಸಿಕೊಂಡು "ಹೆಣ್ಣುತನ-ಗಂಡುತನ"ಗಳ ಅರಿವು ಪಡೆದರೆ ಬಿಡುಗಡೆಯ ಹಾದಿಯಲ್ಲಿ ನಡೆಯಬಹುದು.

4.3: ಆಡಳಿತದಲ್ಲಿ ತಳಸಮುದಾಯಗಳ ತೊಡಕುಗಳು

ಈ ಭಾಗದಲ್ಲಿ ಪ್ರಮುಖವಾಗಿ ತಳಸಮುದಾಯಗಳು ಆಡಳಿತದಲ್ಲಿ ಪಾಲ್ಗೊಳ್ಳುವಾಗ ಎದುರಿಸುವ ತೊಡುಕುಗಳ ಬಗ್ಗೆ ಚರ್ಚಿಸಲಾಗುತ್ತದೆ. 'ತಳಸಮುದಾಯಗಳು ಎನ್ನುವ ಅರಿಮೆ ಪದವು ವಸಾಹತ್ತೋತ್ತರ ಕಾಲದ ಭಾಷಿಕ ಉತ್ಪನ್ನ. ಇದು ತನ್ನ ಭಾಷಿಕ ಸಮುದಾಯದೊಳಗೆ ಮತ್ತು ಹೊರಗೆ ಬಿಡುಗಡೆಯನ್ನು ಬಯಸುವ ಮತ್ತು ವರ್ಗ ರಹಿತ, ಜಾತಿ ರಹಿತ ಮತ್ತು ಲಿಂಗ-ಸಮಾನತೆಯ ಪ್ರಜಾತ್ತಾತ್ಮಕ ಸಮಾಜವನ್ನು ದಕ್ಕಿಸಿಕೊಳ್ಳುವ ಪ್ರಕ್ರಿಯೆ ಎನ್ನಬಹುದು. ಇದೊಂದು ಚಾರಿತ್ರಿಕವಾಗಿ ಸ್ವಾತಂತ್ರ್ಯಗೊಂಡ ಭಾರತದಲ್ಲಿ ನಡೆದ ಘಟನೆಯೂ ಹೌದು. ಇದರೊಡನೆ ಹಿಂದುಳಿದ ವರ್ಗಗಳ ಭಾಷಿಕ ತೊಡಕುಗಳೂ ಸಹ ಬಹಳ ಸಂಕೀರ್ಣವಾಗಿ ಈ ಬೆಳವಣಿಗೆಯನ್ನು ಪ್ರಭಾವಿಸಿವೆ ಎನ್ನುವುದನ್ನು ಸಹ ನಾವು ಮರೆಯುವಂತಿಲ್ಲ.[7] ಕರ್ನಾಟಕ ಹಾಗೂ ಕನ್ನಡದಲ್ಲಿ ಏಕರೂಪದ ಅಸ್ಮಿತೆ/ಐಡೆಂಟಿಟಿ ಇಲ್ಲ. ಕರ್ನಾಟಕದದೊಳಗೆ ಬಹು ರೂಪಿ ಅಸ್ಮಿತೆ ಇದೆ. ಈ ಅಸ್ಮಿತೆ/ಐಡೆಂಟಿಟಿ ನಿರ್ಮಿತಿಯ ಸಂದರ್ಭದಲ್ಲಿ ಭೌಗೋಳಿಕತೆ, ಸಂಸ್ಕೃತಿ, ವಿವಿಧ ಉಪಭಾಷೆಗಳು, ನದಿಗಳ ಗಡಿಗಳು, ನಗರಗಳ ಸರಹದ್ದುಗಳು, ಜಾತಿ ಸಂರಚನೆಗಳು, ಅಭಿವೃದ್ಧಿ ಮಾದರಿಗಳು, ಇತಿಹಾಸದ ಸ್ಮೃತಿಗಳು ಕೂಡ ಅಷ್ಟೇ ಮುಖ್ಯವಾಗುತ್ತವೆ. ಬಹುಸಂಖ್ಯಾತ ಹಿಂದುಳಿದ ವರ್ಗಗಳು ಗ್ರಾಮೀಣ ವರ್ಗಗಳಾಗಿ, ಗೇಣಿದಾರರಾಗಿ, ಕೃಷಿ ಕಾರ್ಮಿಕರಾಗಿ, ಬಡರೈತರಾಗಿ, ಸಾಂಪ್ರದಾಯಿಕ ಕುಲಕಸುಬುಗಳಲ್ಲಿ ನಿರತರಾಗಿದ್ದ ವರ್ಗಗಳಾಗಿಯೇ ಉಳಿದು ಬಿಟ್ಟವು.ರಾಜಕೀಯ, ಆರ್ಥಿಕ ಬದಲಾವಣೆ ಅವರಿಗೆ ಒಂದು

[7] ಕರ್ನಾಟಕದ ಸಂದರ್ಭದಲ್ಲಿ "ಹಿಂದುಳಿದ ವರ್ಗ"ಗಳನ್ನು ವ್ಯಾಖ್ಯಾನಿಸುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ವಿವಿಧ ಕಮಿಟಿಗಳು, ಆಯೋಗದ ಶಿಫಾರಸ್ಸುಗಳು ಹಿಂದುಳಿದ ವರ್ಗಗಳನ್ನು "ವರ್ಗಗಳಾಗಿ" ಮಾತ್ರವಲ್ಲದೇ "ಜಾತಿಗಳಾಗಿ" ನೋಡುತ್ತವೆ. ವಾಸ್ತವವಾಗಿ ಹಿಂದುಳಿದ ವರ್ಗವೆಂಬುದು ನೂರಾರು ಜಾತಿಗಳ ಗುಂಪು ಹಾಗೂ ಸಮುದಾಯ.

ಮರೀಚಿಕೆಯಾಯಿತು. ಆದ ಕಾರಣ 1970ರ ದಶಕದ ತನಕ ಅವರು ರಾಜಕೀಯ ಚೌಕಟ್ಟಿನಲ್ಲಿ, ಆರ್ಥಿಕ ಚೌಕಟ್ಟಿನಲ್ಲಿ, ಪ್ರಭಲರಾಗಿ ಬೆಳೆಯಲೇ ಇಲ್ಲ.

ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿರುವ ಕೆಲವು ಜನಸಾಮಾನ್ಯ ಪರಿಕಲ್ಪನೆ ಕುರಿತು ಹೇಳಲೇಬೇಕಾಗುತ್ತದೆ. ಅದು ಜಾತಿ ಕುರಿತಾಗಿರುವುದು. ಬಹಳ ಸಲ ಜಾತಿಯನ್ನು ಯಾವುದೇ ಪ್ರಭೇದಗಳಿಲ್ಲದೆ, ಸಣ್ಣ/ಉಪ ಜಾತಿಗಳಿಲ್ಲದ ಏಕರೂಪಿ ಸಾಮಾಜಿಕ ಚೌಕಟ್ಟಾಗಿ ಹಾಗೂ ಸಾಮಾಜಿಕ ಐಡೆಂಟಿಟಿ/ಅಸ್ಮಿತೆಯಾಗಿ ನೋಡುತ್ತೇವೆ. ಇದು ಅರ್ಧ ಸತ್ಯ. ಪ್ರತಿ ಜಾತಿಯೊಳಗೆ ನೂರಾರು ಸಣ್ಣ ಜಾತಿಗಳಿರುವುದು ವಾಸ್ತವ.ಇದು ಕರ್ನಾಟಕದ ಸಂದರ್ಭಕ್ಕೆ ಅನ್ವಯವಾಗುತ್ತದೆ. ಇದನ್ನು ಲಿಂಗಾಯತರಲಿ, ಒಕ್ಕಲಿಗರಲ್ಲಿ ಕೂಡ ನೋಡಬಹುದು. ಲಿಂಗಾಯತರಲ್ಲಿರುವ ಸಣ್ಣ ಜಾತಿಗಳೆಂದರೆ: ಜಂಗಮ, ಮಟಪತಿ, ಪಂಚಮಶಾಲಿ, ಕುಡುವಕ್ಕಲಿಗ, ಬಣಜಿಗ, ಗಾಣಿಗ, ಹುಗಾರ್, ಕುಂಭಾರ್, ಬಡಿಗಾರ್, ನವಲಿಗ(ಹಡಪದ್), ಮಡಿವಾಲ್, ಇದೇ ರೀತಿಯ ಸ್ಥಿತಿಯನ್ನು ಹಿಂದುಳಿದವರ್ಗಗಳಲ್ಲಿ ನೋಡಬಹುದು: ಕುಂಬಾರ, ಅಗಸ, ಬೇಡ, ನಾಯಿಂದ, ಈಡಿಗ ಒಂದು ಲೆಕ್ಕಚಾರದ ಪ್ರಕಾರ ಒಕ್ಕಲಿಗರಲ್ಲಿ ಕಡಿಮೆ ಎಂದರು 90ಕ್ಕೂ ಹೆಚ್ಚು ಸಣ್ಣ ಜಾತಿಗಳಿವೆ. ಕೆಲವೊಮ್ಮೆ ಗೋತ್ರ ಜಾತಿಗೆ ಸಮೀಕರಿಸಲಾಗುತ್ತದೆ.ಕೆಲವು ಕಡೆ ಜಾತಿಗಿಂತಲೂ ಹೆಚ್ಚಾಗಿ ಕುಲ ಮಹತ್ವದಾಗಿರುತ್ತದೆ. ಜಾತಿಗಳನ್ನು ಒಪ್ಪದ ಧರ್ಮಗಳಾದ ಮುಸ್ಲಿಂಮರಲ್ಲಿ ಹಾಗೂ ಕ್ರಿಶ್ಚಿಯನ್ನರಲ್ಲಿ ಜಾತಿಗಳಿವೆ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಅಲ್ಪಸಂಖ್ಯಾತರ ಆರ್ಥಿಕ ಸ್ಥಿತಿಗಳನ್ನು ಅಭ್ಯಸಿಸಲು ನೇಮಿಸಿದ ಸಾಚಾರ್ ವರದಿ ಪ್ರಕಾರ ಮಸ್ಲೀಮರಲ್ಲಿ "ಜಾತಿ ತರಹ ಚೌಕಟ್ಟುಗಳಿವೆ". ಅವುಗಳೆಂದರೆ, ಅಶ್ರಫ್, ಅರ್ಜಲ್ಸ್, ಅಝ್ರುಲ್ಸ್, ಮೊದಲೆರಡು ಜಾತಿಗಳು ಮೇಲ್ಜಾತಿಯಿಂದ ಹಾಗೂ ಹಿಂದುಳಿದ ವರ್ಗಗಳಿಂದ ಐತಿಹಾಸಿಕವಾಗಿ ಮತಾಂತರಗೊಂಡರೆ, ಕೊನೆಯ ಜಾತಿಯಿಂದ ಬಂದವರು ಹೆಚ್ಚಿನವರು ದಲಿತರು. ಅವರಲ್ಲಿ ಪ್ರಮುಖ ಜಾತಿಗಳೆಂದರೆ ನಧಾಫ್, ದರ್ವೇಶಿ, ಜಲಗಾರ, ಕಸಬ್, ಕಸಯ್, ಸಿದ್ಧಿ, ಸಿಕ್ಕಲಗರ್, ಶಿಕ್ಕಲಿಗರ್, ನಳಬಂದ್, ಧೋಬಿ,, ಫೂಲ್ ಮಾಲಿ, ಕುಂಬಾರ, ಚಪ್ಪರ್ ಬಂದ್,ಫೂಲ್ ಮಾಲಿ,ಫೂಲಾರಿ, ಫೂಲಾನ್, ರಂಗ್ರೇಜ್. ವಾಸ್ತವವಾಗಿ ಕರ್ನಾಟಕದಲ್ಲಿ 1970 ದಶಕದಲ್ಲಿ ನೇಮಿಸಿದ ಹಾವನೂರು ಆಯೋಗ ಮುಸ್ಲಿಂಮರಲ್ಲಿ ಬಹಳಷ್ಟು ಜಾತಿಗಳನ್ನು ಗುರುತಿಸಿತ್ತು. ಇವುಗಳು ಮಂಡಲ್ ಆಯೋಗದ ಪಟ್ಟಿಯಲ್ಲೂ ಬಂದಿವೆ. ಕೆಲವು ಜಾತಿಗಳು ಈಗಲು ಪಟ್ಟಿಯೊಳಗೆ ಬಂದಿಲ್ಲ. ಮೂಲತಃ ಇವುಗಳು ದಲಿತ ಸಮುದಾಯದಿಂದ ಮತಾಂತರಗೊಂಡ ಸಮುದಾಯಗಳು, ಕ್ರಿಶ್ಚಿಯನ್ನರಲ್ಲಿ ಇದೇ ರೀತಿ ದಲಿತ–ಕ್ರಿಶ್ಚಿಯನ್ನರನ್ನು, ಬ್ರಾಹ್ಮಣ ಕ್ರಿಶ್ಚಿಯನ್ ಇತ್ಯಾದಿ ಜಾತಿಗಳಿರುವುದು ವಾಸ್ತವ.

ಈ ಸಣ್ಣ ಜಾತಿಗಳು ರಾಜಕಾರಣದ ಸಂದರ್ಭದಲ್ಲಿ ಸ್ವತಂತ್ರ ಅಸ್ಥಿತ್ವವನ್ನು ಕೆಲವೊಮ್ಮೆ ಪ್ರತಿಪಾದಿಸುತ್ತಿರುವುದು ವಾಸ್ತವ. ಚುನಾವಣಾ ರಾಜಕಾರಣದ ಸಂದರ್ಭದಲ್ಲಿ ಇದು ನಿಚ್ಚಳವಾಗಿ ಕಂಡು ಬರುತ್ತದೆ. ಅದು ಟಿಕೇಟ್ ಹಂಚಿಕೆ, ಅಧಿಕಾರ ಹಂಚಿಕೆಯ ವಿಷಯವಾಗಿರಬಹುದು, ಅಥವಾ ಪ್ರಾತಿನಿಧ್ಯತೆಯ ಪ್ರಶ್ನೆಯಾಗಿರಬಹುದು, ಇವೆಲ್ಲಾ ಸಂದರ್ಭದಲ್ಲಿ ಸಣ್ಣ ಜಾತಿಗಳು ತಮ್ಮ ಅಸ್ಮಿತೆ/ಐಡೆಂಟಿಟಿಯನ್ನು ಉಳಿಸಿಕೊಳ್ಳಲು ರಾಜಕಾರಣಗಳನ್ನು ಮಾಡುತ್ತಿರುತ್ತವೆ.

ರಾಮಚಂದ್ರಗುಹಾರವರು ಈ ಪ್ರಕ್ರಿಯೆಯನ್ನು ಹೀಗೆ ಗುರುತಿಸುತ್ತಾರೆ, "1947ರಲ್ಲಿ ಭಾರತ ಸ್ವತಂತ್ರವಾದಾಗ, ಅದು ಬ್ರಿಟಿಷ್ ಆಡಳಿತದ ಪ್ರಾದೇಶಿಕ ವಿಭಾಗಗಳ ವಾರಸುದಾರಿಕೆಯನ್ನು ಪಡೆದುಕೊಂಡಿತ್ತು. ಇವೆಲ್ಲಾ ಆಕಸ್ಮಿಕವಾಗಿ ಸೃಷ್ಟಿಯಾದಂತಹವುಗಳು. ಅವಕ್ಕೆ ಯಾವುದೇ ಚಾರಿತ್ರಿಕ ಅಥವಾ ಸಾಮಾಜಿಕ ತರ್ಕ ಇರಲಿಲ್ಲ. ಒಮ್ಮೆಲೆ, ಭಾಷಾವಾರು ಸಮುದಾಯಗಳನ್ನಾಧರಿಸಿದ ರಾಜ್ಯಗಳ ಸೃಷ್ಟಿಗೆ ಗಲಾಟೆ ಆರಂಭವಾಯಿತು. ಮದ್ರಾಸ್ ಪ್ರೆಸಿಡೆನ್ಸಿಯ ತೆಲುಗು ಭಾಷಿಕರಿಗೆ ಆಂಧ್ರಪ್ರದೇಶ ಬೇಕಿತ್ತು. ಬಾಂಬೆ ಪ್ರೆಸಿಡೆನ್ಸಿಯ ಮರಾಠಿ ಮಾತನಾಡುವವರು ಮಹಾರಾಷ್ಟ್ರಕ್ಕೆ ಒತ್ತಾಯಿಸಿದರು. ಇದೇ ರೀತಿ ತಮ್ಮದೇ ಹಿತಾಸಕ್ತಿಗಳನ್ನೊಳಗೊಂಡ ರಾಜ್ಯಗಳಿಗಾಗಿ ಪಂಜಾಬಿ, ಮಲಯಾಳಂ ಹಾಗೂ ಕನ್ನಡ ಮಾತನಾಡುವ ಜನರೂ ಪ್ರಚಾರಾಂದೋಲನಗಳನ್ನಾರಂಭಿಸಿದರು.[8]

ದಕ್ಷಿಣ ಭಾರತದ ನಾಲ್ಕು ಪ್ರಮುಖ ಭಾಷಾ ಸಮುದಾಯಗಳು ತಮ್ಮದೇ ರಾಜ್ಯಗಳನ್ನು ಹೊಂದಬೇಕು ಎಂದು 1955ರಲ್ಲಿ ಪ್ರಕಟವಾದ ಎಸ್‌ಆರ್‌ಸಿ ವರದಿ ಶಿಫಾರಸು ಮಾಡಿತು. ಈ ಆಧಾರದಲ್ಲಿ ಮೈಸೂರು ರಾಜ್ಯ: ಕೊಡಗು ಮತ್ತು ದಕ್ಷಿಣ ಮುಂಬಯಿ, ಪಶ್ಚಿಮ ಹೈದರಾಬಾದ್‌ಗಳನ್ನೊಳಗೊಂಡಂತೆ ಕನ್ನಡ ಮಾತನಾಡುವ ಜಿಲ್ಲೆಗಳ ಜೊತೆಗೆ

---

[8] ಜವಾಹರಲಾಲ್ ನೆಹರೂ ಹಾಗೂ ವಲ್ಲಭಬಾಯಿ ಪಟೇಲ್ ಪ್ರತಿನಿಧಿಸುತ್ತಿದ್ದ ಕಾಂಗ್ರೆಸ್ ನಾಯಕತ್ವ, ಆರಂಭದಲ್ಲಿ ಭಾಷಾವಾರು ರಾಜ್ಯಗಳಿಗೆ ವಿರೋಧವಾಗಿತ್ತು. ಧರ್ಮದ ಆಧಾರದ ಮೇಲೆ ಭಾರತದ ವಿಭಜನೆಯನ್ನು ಆಗಷ್ಟೇ ಕಂಡಿದ್ದ ಹಿನ್ನೆಲೆಯಲ್ಲಿ ಭಾಷೆ ಆಧಾರದ ಮೇಲೆ ಮತ್ತಷ್ಟು ವಿಭಜನೆಯ ಭೀತಿ ಅವರಲ್ಲಿತ್ತು. ಆದರೆ ಬೇಡಿಕೆ ಎಷ್ಟೊಂದು ದೊಡ್ಡದಾಗಿ ಬೆಳೆಯಿತೆಂದರೆ ಕಡೆಗೆ ರಾಜ್ಯಗಳ ಪುನರ್ ರಚನಾ ಆಯೋಗವನ್ನು (ಎಸ್‌ಆರ್‌ಸಿ) ಸರ್ಕಾರ ರಚಿಸಿತು. ಈ ಆಯೋಗಕ್ಕೆ ಮೂವರು ಸದಸ್ಯರಿದ್ದರು: ನ್ಯಾಯಮೂರ್ತಿ ಎಸ್ ಫಾಜಿ ಅಲಿ (ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು); ಇತಿಹಾಸಕಾರ. ಕೆ. ಎಂ. ಪಣಿಕ್ಕರ್; ಹಾಗೂ ಸಾಮಾಜಿಕ ಕಾರ್ಯಕರ್ತ. ಎಚ್. ಎನ್. ಕುಂಜ್ರು, ರಾಮಚಂದ್ರ ಗುಹಾ, **ರಾಜ್ಯಗಳ ಪುನರ್‌ರಚನಾ ಆಯೋಗದ ಮಹತ್ವ, ಪ್ರಜಾವಾಣಿ** 14 ಜನವರಿ 2011

ವಿಸ್ತರಿಸಲಾಯಿತು (1973 ರಲ್ಲಿ ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣ ಮಾಡಲಾಯಿತು).[9]

ರಾಜಕೀಯ ಪ್ರಯೋಗವಾಗಿ, ಭಾರತದ ಗಣರಾಜ್ಯ ಇನ್ನೂ ಯೌವನಾ ವಸ್ಥೆಯಲ್ಲಿದ್ದು ಸಮಸ್ಥಿತಿಯನ್ನಿನ್ನೂ ಕಂಡುಕೊಳ್ಳುತ್ತಾ ಇದೆ. ಭವಿಷ್ಯದ ಭಾರತದ ಬಗ್ಗೆ ಕಾಳಜಿ ವಹಿಸುವ ಹಾಗೂ ಭಾರತೀಯ ಪ್ರಯೋಗದ ಸ್ವರೂಪವನ್ನೂ ಅರ್ಥ ಮಾಡಿಕೊಳ್ಳುವ ಸರ್ಕಾರ ಈಗ ತಳಸಮುದಾಯಗಳ ಪ್ರಾತಿನಿಧ್ಯವನ್ನು ಗಟ್ಟಿಗೊಳಿಸಬೇಕಾಗಿದೆ.

ಕೆಲವು ವರುಷಗಳ ಹಿಂದೆ ಮಂಗಳೂರಿನ "ಪತ್ರಕರ್ತರ ಅಧ್ಯಯನ ಕೇಂದ್ರ" ಅಲ್ಲಿಯ ಸಹೋದಯ ಸಭಾಂಗಣದಲ್ಲಿ "ತಳ ಸಮುದಾಯಗಳು ಮತ್ತು ಮಾಧ್ಯಮ ಎಂಬ ಸಂವಾದ" ಕಾರ್ಯಕ್ರಮ ಆಯೋಜಿಸಿತ್ತು (28–4–2012). ಅದರಲ್ಲಿ ಪಾಲ್ಗೊಂಡ ದಕ್ಷಿಣ ಕನ್ನಡದ ವಿಭಿನ್ನ ತಳ ಸಮುದಾಯಗಳ ಬಹುತೇಕ ನಾಯಕರು ತಮ್ಮ ಸಮುದಾಯಗಳ ಸಮಸ್ಯೆ ಮತ್ತು ನೋವುಗಳನ್ನು ಪತ್ರಕರ್ತರ ಮುಂದೆ ಬಿಚ್ಚಿಟ್ಟರು. ಅಲ್ಲಿ ಮಾತನಾಡಿದ ಅನೇಕರು ಅವರ ಸಮುದಾಯಗಳ ಮೊದಲ ತಲೆಮಾರಿನ ವಿದ್ಯಾವಂತರು. ಹೆಚ್ಚಿನವರು ಪದವಿ ಶಿಕ್ಷಣ ಸಹ ಪಡೆಯದೆ ಇರುವಂತಹವರು. ಅವರಲ್ಲಿ ಕಾಡಿನ ಉತ್ಪನ್ನಗಳನ್ನು ಮಾರಿ ಜೀವನ ಸಾಗಿಸುವ ಮೂಲನಿವಾಸಿಗಳೇ ಹೆಚ್ಚು. ಅಲ್ಲಿ ಪಾಲ್ಗೊಂಡ ಆ ಸಮುದಾಯಗಳ ಕೆಲವು ಮುಖಂಡರಿಗೆ ಈ ರೀತಿ ತಮ್ಮ ಸಮಸ್ಯೆಗಳನ್ನು ಪತ್ರಕರ್ತರ ಮುಂದೆ ಹೇಳಿಕೊಳ್ಳಲು ಸಿಕ್ಕ ಮೊದಲ ಅವಕಾಶ ಇದು ಎನ್ನಬಹುದು. ತಮ್ಮ ಜನರ ನೋವು, ಈಗಲೂ ಇರುವ ಅಸ್ಪೃಶ್ಯತೆ, ಮೇಲ್ವರ್ಗದ ಜನರಿಗಾಗಿ ಮಾಡಬೇಕಾದ ಅತಿ ಅಮಾನವೀಯ ಕೊಳಕು ಸಂಪ್ರದಾಯಗಳು, ಶೋಷಣೆ, ಪೊಲೀಸರ ಕಾಟ, ಇವುಗಳ ಬಗ್ಗೆ ಪ್ರಸ್ತಾಪಿಸುತ್ತ ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ ಹಾಗೂ ಭೂಮಿಯ ಹಕ್ಕಿನ ಕುರಿತಂತೆ ಉಲ್ಲೇಖಿಸಿದರು.

ಸಭೆಯಲ್ಲಿ ಪಾಲ್ಗೊಂಡ ಮುಖಂಡರು ತಮ್ಮ ಸಮುದಾಯಗಳನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆಗಳ ಬಗ್ಗೆ ವ್ಯಕ್ತಪಡಿಸಿದ ಕೆಲವು ಅಭಿಪ್ರಾಯಗಳನ್ನು ಹೀಗಿವೆ:

---

[9] ನವೆಂಬರ್ 1956ಕ್ಕಿಂತ ಹಿಂದೆ ಕನ್ನಡ ಸಮುದಾಯವು ಸುಮಾರು 29 ಚೂರುಗಳಾಗಿ ಒಡೆದು ಹೋಗಿತ್ತು. ಅದರ ಕೆಲವು ದೊಡ್ಡ ಭಾಗಗಳು ಬಹಳ ಭಿನ್ನವಾದ, ವಿಶಾಲವಾದ ಇತಿಹಾಸವನ್ನು ಹೊಂದಿದ್ದವು. ಅದರ ಪ್ರಾಚೀನ ಇತಿಹಾಸದ ಮಾತಿರಲಿ, ವಸಾಹತುಶಾಹಿಯ ಸಂದರ್ಭದಲ್ಲೂ ಸಹ ಇಂದಿನ ಕರ್ನಾಟಕವು ಬಾಂಬೆ ಪ್ರೆಸಿಡೆನ್ಸಿ, ಮದ್ರಾಸ್ ಪ್ರೆಸಿಡೆನ್ಸಿ, ನಿಜಾಮ್ ರಾಜ್ಯ, ಮೈಸೂರು ಅರಸರ ರಾಜ್ಯದ ಭಾಗವಾಗಿಯೇ ಇತ್ತು. ನಿಜವಾದ ಅರ್ಥದಲ್ಲಿ, ಆಧುನಿಕ ರಾಷ್ಟ್ರ ಪ್ರಭುತ್ವದ ಒಕ್ಕೂಟ ವ್ಯವಸ್ಥೆಯಲ್ಲಿ ಕಲ್ಪಿತ ಸಮುದಾಯವೊಂದನ್ನು ಆಧುನಿಕ ಭಾಷಾವಾರು ಪ್ರಾಂತ್ಯವನ್ನಾಗಿ ರಚಿಸಿದ್ದರ ಉದಾಹರಣೆಯಾಗಿ ಅದನ್ನು ನೋಡಬಹುದು. ಅದನ್ನು ಸಾಧ್ಯವಾಗಿಸಿದ್ದು ಕರ್ನಾಟಕ ಏಕೀಕರಣ ಚಳುವಳಿ. ವಸಾಹತುಶಾಹಿ ಆಧುನಿಕತೆಯ ಕಾರಣದಿಂದ ಕನ್ನಡ ಪರಂಪರೆಯ ನಿರ್ಮಾಣದ ಕಥನ ವಸಾಹತುಶಾಹಿ ಹಾಗೂ ಜಾತಿ ಸಮಾಜಗಳ ನಿರ್ಮಾಣದ ಎಳೆಗಳೊಂದಿಗೆ ತಳುಕು ಹಾಕಿಕೊಂಡಿರುವುದರಿಂದ ಈ ಚಳುವಳಿಯ ಸಂಕೀರ್ಣ ಇತಿಹಾಸವನ್ನು ಚುಟುಕಾಗಿ ಹೇಳಲು ಇಲ್ಲಿ ಕಷ್ಟವಾಗುತ್ತಿದೆ.

"ಸಾಮಾಜಿಕವಾಗಿ ಸಾಕಷ್ಟು ಬದಲಾವಣೆಗಳ ಹೊರತಾಗಿಯೂ ನಮ್ಮ ಸಮುದಾಯದ ಬೆರಳೆಣಿಕೆಯ ಜನರು ಮಾತ್ರವೇ ಸಮಾಜದಲ್ಲಿ ಉತ್ತಮ ಸ್ಥಾನ ಪಡೆಯಲು ಸಾಧ್ಯವಾಗಿದೆ. ಹಾಗಿದ್ದರೂ ಭೂತ ಕಟ್ಟುವ ನಮ್ಮ ಸಮುದಾಯದವರು ದೊಡ್ಡ ವ್ಯಕ್ತಿಗಳಿಗೆ ತಲೆಬಾಗುವ ಶೋಷಣೆ ಮಾತ್ರ ಇಂದಿಗೂ ತಪ್ಪಿಲ್ಲ. ನಮ್ಮ ಜನರನ್ನು ಇಂದಿಗೂ ಇತರ ಸಮುದಾಯ ವಕ್ರ ದೃಷ್ಟಿಯಿಂದಲೇ ನೋಡುತ್ತಿದೆ" (ರತಿ, ಪಂಬದ ಸಮುದಾಯ).

"ಕೆಳಸ್ತರದ ಜನರಿಗೆ ಶಿಕ್ಷಣದ ಜೊತೆಗೆ ಸಮಾಜದಲ್ಲಿ ಹೇಗೆ ಬದುಕಬೇಕೆಂಬ ಜ್ಞಾನ, ಅರಿವನ್ನು ನೀಡಬೇಕಾಗಿದೆ" (ಜಗನ್ನಾಥ, ಪರವ ಸಮುದಾಯ).

"ಕೊರಗ ಸಮುದಾಯದಲ್ಲಿ ಗಂಡು ಹೆಣ್ಣೆಂಬ ಬೇಧವಿಲ್ಲ. ವರದಕ್ಷಿಣೆ, ವಿಧವೆ ಎಂಬ ಸಮಸ್ಯೆಗಳ ಜಂಜಾಟವಿಲ್ಲ. ಸಮುದಾಯದಲ್ಲಿ ಜನಸಂಖ್ಯೆ ಇಳಿಮುಖವಾಗುತ್ತಿದ್ದು, ಇಂತಹ ಸಂದರ್ಭ ಸಮುದಾಯವು ಮುಖ್ಯವಾಹಿನಿಗೆ ಸೇರಬೇಕೆನ್ನುವ ಕರೆಯು ಆತಂಕ ಸೃಷ್ಟಿಸುತ್ತಿದೆ. ಸಮುದಾಯವು ಪ್ರಾಕೃತಿಕವಾಗಿ ಬದುಕಲು ಅನುಗುಣವಾದ ವ್ಯವಸ್ಥೆ ಆಗಬೇಕಿದೆ" (ಮತ್ತಡಿ, ಕೊರಗ ಸಮುದಾಯ).

"ದಲಿತರಿಗೆ ಮೀಸಲಿಟ್ಟ ಡಿಸಿ ಮನ್ನಾ ಜಾಗ ಹಲವಾರು ವರ್ಷಗಳ ಹೋರಾಟದ ಬಳಿಕವೂ ತೆರವುಗೊಳಿಸಲಾಗಿಲ್ಲ" (ಎಸ್.ಪಿ. ಆನಂದ, ದಲಿತ ಸಂಘರ್ಷ ಸಮಿತಿ – ಅಂಬೇಡ್ಕರ್ ವಾದ).

"ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ಸಮುದಾಯ ಬಹಳಷ್ಟು ಹಿಂದುಳಿದಿದೆ. ನಮ್ಮ ಸಮುದಾಯಕ್ಕೆ ಇನ್ನೂ ಜಾತಿ ಸರ್ಟಿಫಿಕೆಟ್ ಸಿಕ್ಕಿಲ್ಲ" (ಎಂ. ದುಶ್ಯಂತ, ಹಂಡಿ ಜೋಗಿ ಸಮುದಾಯ).

"600 ವರ್ಷಗಳ ಇತಿಹಾಸ ಹೊಂದಿರುವ ನಮ್ಮ ಸಮುದಾಯದ ಜನರಿಗೆ ಭೂಮಿ, ನಿವೇಶನದ ಹಕ್ಕು ಮಾತ್ರ ಸಿಗುತ್ತಿಲ್ಲ" (ಬಿ.ಕೆ. ಸೇಸಮಪ್ಪ ಬೆದ್ರಕಾಡು, ಬೈರ ಸಮುದಾಯ).

"ರಾಜ್ಯದಲ್ಲಿ ನಮ್ಮ ಸಮುದಾಯದಲ್ಲಿ ಇಂಜಿನಿಯರಿಂಗ್ ಪದವಿ ಪಡೆದವರ ಸಂಖ್ಯೆ 750 ಆಗಿದ್ದರೂ ಇಂಜಿನಿಯರ್ ಆಗಿರುವುದು ಮಾತ್ರ 53 ಮಂದಿ" (ಪದ್ಮನಾಭ ನರಿಂಗಾನ, ಬಾಕುಡ ಸಮುದಾಯ).

"ಕಾಡಿನ ಜೀವನವನ್ನು ನಮ್ಮದಾಗಿಸಿಕೊಂಡಿರುವ ನಮ್ಮ ಸಮುದಾಯಕ್ಕೆ ನಕ್ಸಲ್ ವಿರುದ್ಧದ ಕಾರ್ಯಾಚರಣೆಯ ಹೆಸರಿನಲ್ಲಿ ಪೊಲೀಸರ ದೌರ್ಜನ್ಯವೇ ಅಧಿಕ" (ಸುಧಾಕರ, ಮಲೆಕುಡಿಯ ಸಮುದಾಯ).

"ಮೂಲ ದ್ರಾವಿಡ ಜನಾಂಗವಾದ ನಮ್ಮ ಸಮುದಾಯ ಜಾತಿ ಪಟ್ಟಿಯಲ್ಲಿಯೇ ಇಲ್ಲ. ಇದರಿಂದಾಗಿ ನಾವು ಯಾವುದೇ ರೀತಿಯ ಸರಕಾರಿ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ" (ಚೆನ್ನಪ್ಪ ಕಕ್ಕೆಪದವು, ಮನ್ಸ ಸಮುದಾಯ).

"ಉಳುವವನೇ ಹೊಲದೊಡೆಯ ಎಂಬ ಮಾತು ನಮ್ಮ ಸಮಾಜಕ್ಕಿನ್ನೂ ಅನ್ವಯವಾಗಿಲ್ಲ. ಬದಲಾಗಿ ಈ ಸಮುದಾಯ ಸರಕಾರಿ ಪ್ರಾಯೋಜಿತ ದೌರ್ಜನ್ಯದಿಂದ ನಲುಗುತ್ತಿದೆ. ಅಲೆಮಾರಿ ಜನಾಂಗಗಳ ಬಗ್ಗೆ ಸಮೀಕ್ಷೆ ನಡೆಸಿ ವ್ಯವಸ್ಥಿತವಾದ ಕಾನೂನು ಜಾರಿಗೊಳಿಸಬೇಕು" (ಭಾನುಚಂದ್ರ ಕೃಷ್ಣಾಪುರ, ಆದಿದ್ರಾವಿಡ ಸಮುದಾಯ).

"ದ.ಕ. ಜಿಲ್ಲೆಯಲ್ಲಿ ಗೊಡ್ಡ ಸಮುದಾಯದ 152 ಕುಟುಂಬಗಳಿದ್ದು, ಏಳು ಮಂದಿ ಮಾತ್ರವೇ ಸ್ನಾತಕೋತ್ತರ ಶಿಕ್ಷಣ ಪಡೆದಿದ್ದಾರೆ. ಉಡುಪಿಯಲ್ಲಿ ನಾಲ್ಕು ಮಂದಿ ಎಲ್‌ಎಲ್‌ಬಿ ಹಾಗೂ ಆರು ಮಂದಿ ಸ್ನಾತಕೋತ್ತರ ಶಿಕ್ಷಣ ಪಡೆದವರು" (ಕೃಷ್ಣಾನಂದ ಡಿ, ದಲಿತ ಸಂಘರ್ಷ ಸಮಿತಿ – ಕೃಷ್ಣಪ್ಪ ಸ್ಥಾಪಿತ).

"ತಳ ಸಮುದಾಯಗಳ ಇತಿಹಾಸ ಮತ್ತು ಅಭಿವೃದ್ಧಿ ಹಿನ್ನೆಡೆ ಕಾರಣಗಳು" ಎಂಬ ವಿಷಯದಲ್ಲಿ ಮಾತನಾಡಿದ ಮಂಗಳೂರು ವಿವಿಯ ಇತಿಹಾಸ ವಿಭಾಗದ ಸಹ ಪ್ರಾಧ್ಯಾಪಕ ಡಾ. ಉದಯ ಬಾರ್ಕೂರು, ತುಳುನಾಡಿನ ಇತಿಹಾಸವನ್ನು ಅವಲೋಕನ ಮಾಡಿದರೆ ಎಲ್ಲಿಯೂ ತಳವರ್ಗದ ಸಮಸ್ಯೆಗಳ ಬಗ್ಗೆ ಕಂಡುಬರುವುದಿಲ್ಲ, ಜೀತ ಪದ್ಧತಿ, ಸಂಸ್ಕೃತಿಯ ಬಗ್ಗೆ ಉಲ್ಲೇಖವೇ ಇಲ್ಲ, ಇದರಿಂದಾಗಿ ತಳಮಟ್ಟದ ಸಮಸ್ಯೆಗಳು ತಳಮಟ್ಟದಲ್ಲಿಯೇ ಉಳಿದು ಹೋಗಿದೆ, ಇದಕ್ಕೆ ಕಾರಣ ತುಳುನಾಡಿನ ಇತಿಹಾಸವನ್ನು ಬರೆದವರಿಗೆ ದಾಖಲೆಗಳನ್ನು ಕಲೆಹಾಕುವ ಮನಸ್ಥಿತಿ ಇಲ್ಲದಿರುವುದು, ಎಂದು ಬೇಸರಿಸಿದರು. ಆದರೆ ತುಳುನಾಡಿನ ಗುಲಾಮಗಿರಿಯ ಕುರಿತು "ಈಸ್ಟ್ ಇಂಡಿಯಾ ಸ್ಲೇವರಿ" ಎಂಬ ಸಂಪುಟದಲ್ಲಿ ಬಹಳಷ್ಟು ದಾಖಲೆ, ಮಾಹಿತಿಗಳಿವೆ. ಆದರೆ ತುಳುನಾಡಿನ ಇತಿಹಾಸಕಾರರು ಅದನ್ನು ತಿರುಚುವ ಅಥವಾ ಮರೆಮಾಚುವ ಕೆಲಸ ಮಾಡಿದ್ದಾರೆಯೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ ಎಂದರು. ಈ ಹಿನ್ನೆಲೆಯಲ್ಲಿ ಪತ್ರಕರ್ತರು ಸೇರಿದಂತೆ ಸಮಾಜವು ತಳ ಸಮುದಾಯಗಳ ಇತಿಹಾಸವನ್ನು ಅಧ್ಯಯನ ಮಾಡುವ ಜೊತೆಗೆ ಸೂಕ್ತ ಸ್ಥಾನಮಾನ ಕಲ್ಪಿಸುವ ಕೆಲಸವನ್ನು ಮಾಡಬೇಕಾಗಿದೆ" ಎಂದವರು ಹೇಳಿದರು.

ಮೇಲಿನ ಹೇಳಿಕೆಗಳಲ್ಲಿ ತಳಸಮುದಾಯಗಳು ಎದುರಿಸುತ್ತಿರುವ ಸವಾಲುಗಳು ಹಾಗೂ ತಳಸಮುದಾಯಗಳೆಂದರೆ ಯಾರು ಎನ್ನುವುದನ್ನು ಖಚಿತಪಡಿಸುತ್ತವೆ. ಇಂತಹ ನೂರಾರು ಸಮುದಾಯಗಳು ಕರ್ನಾಟಕದ ಉದ್ದಗಳಕ್ಕೂ ವ್ಯಾಪಿಸಿದೆ. ಇಂತಹ ಸಮುದಾಯಗಳ ಬದುಕು

ಪ್ರಸ್ತುತ ಸಾಂಸ್ಕೃತಿಕ ರಾಜಕಾರಣದಲ್ಲಿ ಮುಸುಕಾಗಿದೆ. ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳಿಲ್ಲದ ವರ್ಗಗಳು ಗುಲಾಮಗಿರಿಯಲ್ಲೇ ಬದುಕಬೇಕಾಗುತ್ತದೆ. ಈ ದೇಶಕ್ಕೆ ಶ್ರಮಶಕ್ತಿಯ ಕೊಡುಗೆ ನೀಡಿದ ತಳ ಸಮುದಾಯಗಳು ಉತ್ಪಾದನೆ ಮತ್ತು ಹಂಚಿಕೆಯಲ್ಲಿ ಪಾಲು ಪಡೆಯಲು ಸಾಧ್ಯವಾಗಿಲ್ಲ. ಜಾತಿ ವ್ಯವಸ್ಥೆಯನ್ನು ಯಥಾವತ್ತಾಗಿ ಕಾಯ್ದುಕೊಂಡು ಬರಲಾಗುತ್ತಿದೆ. ಸಾಮಾಜಿಕ ನ್ಯಾಯ ಎಂಬುದು ಭಿಕ್ಷೆಯಂತಾಗಿದೆ. ಮೀಸಲಾತಿಯ ಬಗ್ಗೆ ಸಾಕಷ್ಟು ಜನರಲ್ಲಿ ಅಸಹನೆಗಳಿವೆ. ಮೀಸಲಾತಿ ಎಷ್ಟರಮಟ್ಟಿಗೆ ಶ್ರಮಿಸಿದೆ, ಅದರಿಂದ ಆಗಿರುವ ಪರಿಣಾಮಗಳೇನು ಎಂಬುದನ್ನು ಈವರೆಗೂ ಯಾವ ಸರ್ಕಾರಗಳು ಅಧ್ಯಯನ ನಡೆಸಿಲ್ಲ. ಖಾಸಗಿ ಸಂಸ್ಥೆಗಳು ನಡೆಸಿದ ಅಧ್ಯಯನ ಪ್ರಕಾರ ಮೀಸಲಾತಿ ಶೋಷಿತ ವರ್ಗಗಳಿಗೆ ತಲುಪಿಲ್ಲ. ಅದರಿಂದ ಅವರ ಅಭಿವೃದ್ಧಿಯಾಗಿಲ್ಲ ಎಂಬ ಮಾಹಿತಿ ಇದೆ. ಮೀಸಲಾತಿ ತಲುಪಿಸಬೇಕಾದವರೇ ವ್ಯವಸ್ಥಿತವಾದ ಹುನ್ನಾರ ನಡೆಸಿ ವಂಚನೆ ಮಾಡುತ್ತಿದ್ದಾರೆ. ಹಾಗಾದರೆ ನಾಗರಿಕ ಪ್ರಜೆಗಳಾದ ಇಂತಹ ಸಮುದಾಯಗಳು ಮತ್ತಷ್ಟು ಬಿಕ್ಕಟ್ಟುಗಳನ್ನು ಎದುರಿಸುತ್ತಿವೆ.

2016ರಲ್ಲಿ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ನಡೆಸಿದ ಜಾತಿ ಜನಗಣತಿಯ ಸಮೀಕ್ಷೆ ಇನ್ನೂ ಅದಿಕೃತವಾಗಿ ಬಿಡುಗಡೆಯಾಗಿಲ್ಲ. ಆದರೆ ಪತ್ರಿಕೆಗಳಲ್ಲಿ ಪ್ರಕಟಗೊಂಡ ಮಾಹಿತಿಯ ಅನುಸಾರ ಪರಿಶಿಷ್ಟ ಜಾತಿ – 19.5%, ಪರಿಶಿಷ್ಟ ಪಂಗಡ – 6.5%, ಮುಸ್ಲಿಂ – 16%, ಲಿಂಗಾಯತ – 14%, ಒಕ್ಕಲಿಗ– 11%. ಒಬಿಸಿ – 20% (ಕುರುಬ –7%), ಬ್ರಾಹ್ಮಣ – 2% ಜನಸಂಖ್ಯೆ ಪ್ರಮಾಣ ಎಂದು ಹೇಳುತ್ತದೆ. ಬೌದ್ದ, ಜೈನ, ಸಿಖ್ ಸಮುದಾಯಗಳ ಜನಸಂಖ್ಯೆ ಶೇಕಡ 1% ಕ್ಕಿಂತಲೂ ಕಡಿಮೆ ಇದೆ. ಆದರೆ **ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಮಾಣಗಳ ಅಂಕಿಸಂಖ್ಯೆಯಲ್ಲಿ ವ್ಯತ್ಯಾಸಗಳನ್ನು ತೋರಿಸುತ್ತಿವೆ. ಸರ್ಕಾರ ಅದಿಕೃತವಾಗಿ ಬಿಡುಗಡೆ ಮಾಡುವವರೆಗೂ ಇದನ್ನು ನಂಬಲರ್ಹ ಎನ್ನುವಂತಿಲ್ಲ.** ಆದರೆ ಈ ಜಾತಿ ಆದಾರಿತ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಅತ್ಯಧಿಕವಾಗಿದೆ ಎನ್ನುವುದಂತೂ ಸ್ಪಷ್ಟವಾಗುತ್ತದೆ ಮತ್ತು ಬಲಾಢ್ಯ ಜಾತಿಗಳಾದ ಲಿಂಗಾಯಿತರು (ಇದನ್ನು ಬರೆಯುವಾಗ ಅವರನ್ನು ಪ್ರತ್ಯೇಕ ದರ್ಮ ಎಂದು ಪರಿಗಣಿಸಿಲ್ಲ) ಮತ್ತು ಒಕ್ಕಲಿಗರ ಜನಸಂಖ್ಯೆ ನಾವು ಎಣಿಸಿದಷ್ಟು ಹೆಚ್ಚಿನ ಪ್ರಮಾಣದಲ್ಲಿಲ್ಲ ಎಂದೂ ಸ್ಪಷ್ಟವಾಗುತ್ತದೆ. ಈ ಬಲಾಢ್ಯ ಮದ್ಯಮ ಜಾತಿಗಳು ಈ ಜಾತಿ ಸಮೀಕ್ಷೆಯ ಅಂಕಿಸಂಖ್ಯೆಯ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದರು. ದಲಿತರು ಜನಸಂಖ್ಯೆಯಲ್ಲಿಯೂ ತಮಗಿಂತ ಹೆಚ್ಚಿದ್ದಾರೆ ಎನ್ನುವ ವಾಸ್ತವ ಈ ಫ್ಯೂಡಲ್–ಜಾತಿ ಮನಸ್ಥಿತಿಗೆ ಅರಗಿಸಿಕೊಳ್ಳಲು ಸಾದ್ಯವಾಗುತ್ತಿಲ್ಲ. ಹಾಗಾದರೆ ಈ ಸಮುದಾಯಗಳು ಎಂತಂಹ ಸಾಂಸ್ಕೃತಿಕ ರಾಜಕಾರಣಕ್ಕೆ ತಯಾರಾಗಬೇಕಿದೆ?

ಇಲ್ಲಿ ಎದುರಾಗುವ ಬಹು ಮುಖ್ಯ ವಿಷಯವೆಂದರೆ ಅಭಿವೃದ್ಧಿ ರಾಜಕಾರಣದ್ದು. ಭಾರತ/ಕರ್ನಾಟಕದ ಅಭಿವೃದ್ಧಿ ಯೋಜನೆಗಳ ರೂಪುಗೊಳ್ಳುವಿಕೆ ಮತ್ತು ಅನುಷ್ಠಾನದಲ್ಲಿ ಅನೇಕ ಗೊಂದಲಗಳನ್ನು ಸೃಷ್ಟಿಸಲಾಗುತ್ತಿದೆ. ಹಕ್ಕು ಆಧಾರಿತ ಅಭಿವೃದ್ಧಿಯನ್ನು, ಪ್ರತಿಪಾದಿಸುವಾಗಲೇ ಅನಗತ್ಯ ಚಾರಿತ್ರಿಕ ವಿಷಯಗಳನ್ನು (ಮಂದಿರ, ಮಸೀದಿ, ಧರ್ಮ, ಪರಂಪರೆ, ನಂಬಿಕೆ, ಧಾರ್ಮಿಕತೆ, ಆಹಾರ ಪದ್ಧತಿ ಇತ್ಯಾದಿ) ಪ್ರಸ್ತಾಪಿಸಿ, ಜೀವ ವಿರೋಧಿ ಚಟುವಟಿಕೆಗಳು ಹೆಚ್ಚಾಗುವಂತೆ ನೋಡಿಕೊಳ್ಳಲಾಗುತ್ತದೆ. ಜನರ ನಡುವೆ ಅಸಮಾನತೆಯನ್ನು ಹೆಚ್ಚಿಸುವ, ಶೋಷಣೆ ಮತ್ತು ದೌರ್ಜನ್ಯವನ್ನು ಪ್ರತಿಪಾದಿಸುವ ವಿಶೇಷ ಆರ್ಥಿಕ ವಲಯಗಳ ಸ್ಥಾಪನೆ, ಅಂತಾರಾಷ್ಟ್ರೀಯ ನೇರ ಬಂಡವಾಳ ಹೂಡಿಕೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಮಾನವ ಅಭಿವೃದ್ಧಿ ಸೂಚಕಗಳಾದ, ಲಿಂಗ ಸಮಾನತೆ, ಸಾಮಾಜಿಕ ನ್ಯಾಯ, ಸಾಮಾಜಿಕ ಭದ್ರತೆ, ಆಹಾರ ಭದ್ರತೆ, ಆರೋಗ್ಯದ ಭದ್ರತೆಗಳು ಯಾವಾಗಲೂ ಬಂಡವಾಳ ಹೂಡಿಕೆಯಿಂದಲೇ ಸಾಧಿಸಿಕೊಳ್ಳಲು ಸಾಧ್ಯವಿಲ್ಲ. ಮಾನವ ಅಭಿವೃದ್ಧಿಗೆ ಬಂಡವಾಳವೆ ಸಾಧನವಲ್ಲ ಎನ್ನುವುದನ್ನು ಜೀವಪರವಾಗಿ ಯೋಚಿಸುತ್ತಿರುವ ವೈಜ್ಞಾನಿಕ ಸಮುದಾಯ ಈಗಾಗಲೇ ದಾಖಲಿಸಿದೆ. ಆದರೂ ಯಾಕೆ ಬಂಡವಾಳ ಪ್ರೇರಿತ, ಅದರಲ್ಲೂ ಎಫ್.ಡಿ.ಐ. 'ಅಭಿವೃದ್ಧಿ'ಯು ಮೂಲ ಮಂತ್ರವಾಗಿದೆ? ಏಕೆಂದರೆ ಬಂಡವಾಳ ಇಲ್ಲದ ಅಭಿವೃದ್ಧಿಯನ್ನು ಪ್ರತಿಪಾದಿಸಿದರೆ ಆಳುವ ವರ್ಗಕ್ಕೆ ಲಂಚ ನೀಡುವವರು ಯಾರು ಇಲ್ಲದಂತಾಗುತ್ತದೆಯಲ್ಲವೇ? ಇದರಿಂದ ರಾಜಕಾರಣಿಗಳಿಗೆ, ಆಡಳಿತಶಾಹಿಗಳಿಗೆ ತಲೆಮಾರುಗಳು ತಿಂದು ತೇಗಲು ಬೇಕಾಗುವಷ್ಟು ಆಸ್ತಿ ಮಾಡಲು ಸಾಧ್ಯವಾಗುವುದಿಲ್ಲ. ಹೀಗಾಗಿ ರಾಷ್ಟ್ರೀಯ ಬಂಡವಾಳಶಾಹಿಗಳು ಮತ್ತು ಅಂತಾರಾಷ್ಟ್ರೀಯ ಬಂಡವಾಳಶಾಹಿ ವರ್ಗಕ್ಕೆ ನಮ್ಮ ರಾಜಕೀಯ (ಎಲ್ಲಾ ಪಕ್ಷದ) ನಾಯಕರು ಮತ್ತು ನಮ್ಮ ಆಡಳಿತಶಾಹಿಗಳು ದಲ್ಲಾಳಿಗಳಾಗಿದ್ದಾರೆ. ಇವರಿಗೆ ಸಾಮಾನ್ಯ ಜನರ ಬದುಕು ಬೇಕಾಗಿಲ್ಲ ಮತ್ತು ಅವರು ಜೀವಂತವಾಗಿ ಬದುಕುವುದು ಬೇಕಾಗಿಲ್ಲ.

ಒಂದು ಕಡೆ ಆಳುವ ವರ್ಗ ಮತ್ತು ಅದರ ದಲ್ಲಾಳಿಗಳು ಹೊಸ ಆರ್ಥಿಕ ನೀತಿಯ ಅನಂತರ, 'ಅಭಿವೃದ್ಧಿ'ಗೆ ವಿದೇಶಿ ನೇರ ಬಂಡವಾಳ ಹೂಡಿಕೆ ತುಂಬಾ ಅಗತ್ಯ ಎಂಬ ವಾತಾವರಣವನ್ನು ರೂಪಿಸಿದ್ದಾರೆ. 1992ರ ವಿಶ್ವಬ್ಯಾಂಕು ವರದಿಯು ಮಹಿಳೆಯರ ಆದಾಯದಲ್ಲಿನ ಹೆಚ್ಚಳವು ಕೌಟುಂಬಿಕ ಚಟುವಟಿಕೆಗಳಲ್ಲಿ ಮಹಿಳೆಯರ ಪ್ರಭಾವವನ್ನು ಹೆಚ್ಚಿಸುತ್ತದೆ. ಇದರ ಪರಿಣಾಮವಾಗಿ ಬಡತನ ಇಳಿಮುಖವಾಗಿ ಮಾನವ ಬಂಡವಾಳದ ಗುಣಮಟ್ಟವು ಸುಧಾರಣೆಯಾಗುವುದು ಎಂದು ತಿಳಿಸುತ್ತದೆ. ಇಂತಹ ಅನೇಕ ವರದಿಗಳು

ಅಭಿವೃದ್ಧಿ ಯೋಜನೆ ಮತ್ತು ಕಾರ್ಯಕ್ರಮಗಳ ರೂಪಿಸುವಿಕೆಯಲ್ಲಿಯೂ ಪ್ರಭಾವವನ್ನು ಬೀರುತ್ತಿವೆ. ಅದರ ಭಾಗವಾಗಿ ವಿಶ್ವಬ್ಯಾಂಕಿನ ಹಣಕಾಸಿನ ಸಹಾಯದಿಂದ ಸರ್ಕಾರಗಳು ಮಹಿಳೆಯರ ಉದ್ಯಮಶೀಲ ಚಟುವಟಿಕೆಗಳ ಹೆಚ್ಚಳಕ್ಕೆ ಪ್ರಾದೇಶಿಕ, ರಾಜ್ಯಮಟ್ಟದ ಮಹಿಳೆಯರ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಿವೆ. ಈ ನಿಗಮಗಳು ಮಹಿಳೆಯರಿಗೆ ಸಾಲವನ್ನು ಮಾತ್ರ ಕೊಡದೆ, ಮಾರುಕಟ್ಟೆಯ ತಂತ್ರಗಳನ್ನು ರೂಪಿಸಿಕೊಳ್ಳುವ ತರಬೇತಿಗಳನ್ನು ಒದಗಿಸುತ್ತಿವೆ. ಆದರೆ ಮಹಿಳೆ ಮತ್ತು ಮಕ್ಕಳ ಹಸಿವು, ಅಪೌಷ್ಠಿಕತೆ, ಶಿಕ್ಷಣ, ಆರೋಗ್ಯ ಇತ್ಯಾದಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ನಿವಾರಿಸಲು ಬೇಕಾದ ಹಣವನ್ನು ಇದುವರೆಗೂ ಯಾವುದೇ ಸರ್ಕಾರ ನೀಡಲಿಲ್ಲ. ಮತ್ತೊಂದು ಕಡೆ ಸರ್ಕಾರಗಳು ತನ್ನ ಬಜೆಟ್‌ಗಳಲ್ಲಿ ಸಾಮಾಜಿಕ ಕ್ಷೇತ್ರಗಳಿಗೆ ಹಣಕಾಸಿನ ಹಂಚಿಕೆಯನ್ನು ಕಡಿತಗೊಳಿಸುತ್ತಿರುವಾಗ, ನಾವು ಮಹಿಳೆಯರ ಸಂಬಂಧಿಸಿದಂತೆ ಮಾತಾಡುತ್ತಿರುವ 'ಸಬಲೀಕರಣ' ಎಂಬ ಪದವೇ ಅರ್ಥಹೀನವಾಗಿದೆ.

2011ರ ಸಾಮಾಜಿಕ-ಆರ್ಥಿಕ ಜಾತಿ ಗಣತಿಯು (ಎಸ್.ಐ.ಸಿ.ಸಿ.) ಗ್ರಾಮೀಣ ಪ್ರದೇಶ(ಗ್ರಾ. ಪ್ರ.)ದಲ್ಲಿ ಇರುವ ಶೇ. 49 ರಷ್ಟು ಕುಟುಂಬಗಳು ಬಡತನದಲ್ಲಿವೆ. ಶೇಕಡ 51 ರಷ್ಟು ಕುಟುಂಬಗಳು ಬದುಕಿಗೆ ಪ್ರತಿದಿನವೂ ಕೂಲಿ ಕೆಲಸವನ್ನು ಅವಲಂಬಿಸಿವೆ, ಶೇಕಡ 30 ಕುಟುಂಬಗಳು ಭೂಮಾಲೀಕತ್ವವನ್ನು ಹೊಂದಿಲ್ಲ, ಹಳ್ಳಿಗಳಲ್ಲಿ ಇರುವ ಶೇಕಡ 77 ಕುಟುಂಬಗಳು ಪ್ರತಿದಿನ ದುಡಿಮೆಗಾಗಿ 5 ಕಿ.ಮೀ ಪ್ರಯಾಣ ಮಾಡಲೇಬೇಕಾಗಿದೆ. ಕಳೆದ ಮೂರು ಜನಗಣತಿ (1991-2011) ಅವಧಿಯಲ್ಲಿ ಭೂ ರಹಿತ ಕೃಷಿ ಕೂಲಿ ಕಾರ್ಮಿಕರ ಸಂಖ್ಯೆ (ಶೇ. 26 ರಿಂದ ಶೇ. 30) ಹೆಚ್ಚಾಗಿದೆ. ಆದರೆ ಕೂಲಿಯು 1980ರಲ್ಲಿ ಶೇಕಡ5 ಪ್ರಮಾಣದಲ್ಲಿ ಹೆಚ್ಚಳ ಕಂಡರೆ, 1990ರಲ್ಲಿ ಶೇ.2ರಷ್ಟು ಬೆಳವಣಿಗೆ ಸಾಧಿಸಿ, 2000ರ ಮೊದಲ ಅರ್ಧದಲ್ಲಿ ಶೂನ್ಯವಾಗಿದೆ. ಹೀಗಾಗಿ ಅರ್ಧದಷ್ಟು ಜನರ ಮಾಸಿಕ ತಲಾ ಅನುಭೋಗ ವೆಚ್ಚ ರೂ.1030ಕ್ಕಿಂತಲೂ ಕಡಿಮೆ. ಸ್ವಲ್ಪ ಹೆಚ್ಚು ಕಡಿಮೆ ಶೇ.40 ರಷ್ಟು ಜನರ ಮಾಸಿಕ ತಲಾ ಅನುಭೋಗ ವೆಚ್ಚ ರೂ.922/-ಕ್ಕಿಂತಲೂ ಕಡಿಮೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಪಡಿತರ ವ್ಯವಸ್ಥೆಗಳ ಸವಕಳಿಯು ಆಹಾರ ಪದಾರ್ಥಗಳ ಬೆಲೆಯ ಹೆಚ್ಚಳವು ಅಪೌಷ್ಟಿಕ ಮಹಿಳೆಯರು ಮತ್ತು ಮಕ್ಕಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಲು ಕಾರಣವಾಗಿದೆ. ಉದಾಹರಣೆಗೆ 2015-16ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-4 (ಎಚ್.ಎಫ್.ಎಚ್.ಎಸ್.-4) ಪ್ರಕಾರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿರು ಶೇ. 24.3 ರಷ್ಟು ಮಹಿಳೆಯರ ಮತ್ತು ನಗರ ಪ್ರದೇಶದ ಶೇಕಡ 162 ಮಹಿಳೆಯರ ಬಾಡಿ ಮಾಸ್ ಸೂಚಿ (ಬಿ.ಎಂ.ಐ.) ಕನಿಷ್ಠ ಮಟ್ಟಕ್ಕಿಂತಲೂ ಕಡಿಮೆ ತೂಕ ಹೊಂದಿದ್ದರೆ, 06ರಿಂದ 56 ತಿಂಗಳ

ಮಕ್ಕಳಲ್ಲಿ ಶೇ. 60.9 ರಷ್ಟು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಗರ್ಭಿಣಿಯರಲ್ಲಿ ಶೇ. 45.2 ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಮದುವೆಯಾಗಿರುವ ಶೇಕಡ 80.4 ರಷ್ಟು ಮಹಿಳೆಯರು ಅತ್ಯಂತ ವಿರಳವಾಗಿ ಕೌಟುಂಬಿಕ ನಿರ್ಧಾರಗಳಲ್ಲಿ ಭಾಗವಹಿಸುತ್ತಿದ್ದರೆ, ಶೇ. 79.5 ಮಹಿಳೆಯರು ತನ್ನ ಗಂಡನಿಂದಲೇ ಹಿಂಸೆಗೆ ಒಳಪಡುತ್ತಿದ್ದಾಳೆ ಎಂದು ಎಚ್.ಎಫ್.ಎಚ್.ಎಸ್.–4 ವರದಿ ತಿಳಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳು ಮತ್ತು ಮಹಿಳೆಯರು ಬದುಕುತ್ತಿರುವಾಗ, ಇವರಿಗೆ ಆಹಾರ, ಆರೋಗ್ಯ ಮತ್ತು ಪೌಷ್ಠಿಕತೆಯಲ್ಲಿ ಭದ್ರತೆಯನ್ನು, ಕಲಿಕೆಗೆ ಶೈಕ್ಷಣಿಕ ಬೆಂಬಲವನ್ನು ನೀಡುವ ಮೂಲಕ 'ಅಭಿವೃದ್ಧಿ' ಮಹಿಳೆಯರನ್ನು ಒಳಗೊಳಬೇಕು. ಆದರೆ ಇದಕ್ಕೆ ಬೇಕಾದ ಹಣವನ್ನು ನೀಡದೆ ಅವರು 'ಅಭಿವೃದ್ಧಿ' ಪ್ರಕ್ರಿಯೆಯಿಂದ ಹೊರಗಿರುವಂತೆ ನೋಡಿಕೊಳ್ಳಲಾಗುತ್ತಿದೆ.

ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕತೆಯನ್ನು ಸುಧಾರಿಸುವ ದೃಷ್ಟಿಯಿಂದ ನಲವತ್ತು ವರ್ಷಗಳ ಹಿಂದೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐ.ಸಿ.ಡಿ.ಎಸ್) ಯನ್ನು ಆಚರಣೆಗೆ ತರಲಾಗಿತ್ತು. ಇದಕ್ಕೆ ಅಂದು ಅಂತಾರಾಷ್ಟ್ರೀಯ ಸಂಸ್ಥೆಗಳ ಬೆಂಬಲ ಕೂಡ ದೊರೆಯಿತು. ಇದರ ಜೊತೆಗೆ ರಾಷ್ಟ್ರೀಯ ಆರೋಗ್ಯ ಅಭಿಯಾನ, ಸರ್ವ ಶಿಕ್ಷಣ ಅಭಿಯಾನ, ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ ಇನ್ನೂ ಮುಂತಾದ ಯೋಜನೆಗಳು ಮಹಿಳೆಯ ಒಟ್ಟಾರೆ 'ಅಭಿವೃದ್ಧಿ' ಮತ್ತು 'ಸಬಲೀಕರಣ'ದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿವೆ. ಈ ಯೋಜನೆಗಳ ಅನುಷ್ಠಾನದ ಅನಂತರ ಕಡಿಮೆ ತೂಕದ ಶಿಶು ಜನನವನ್ನು, ಅಪೌಷ್ಠಿಕತೆಯನ್ನು, ಶಿಶು ಮರಣ ಪ್ರಮಾಣವನ್ನು, ಮಕ್ಕಳು ಶಾಲೆಗಳಿಂದ ಹೊರಗಿರುವುದನ್ನು, ಪ್ರಸೂತಿ ಸಮಯದಲ್ಲಿ ತಾಯಿಯರ ಮರಣ ಪ್ರಮಾಣ ನಿರೀಕ್ಷಿತ ಮಟ್ಟದಲ್ಲಿಯಲ್ಲದಿದ್ದರೂ ಕಡಿಮೆ ಮಾಡಿದೆ ಎಂದು ಅನೇಕ ಅಧ್ಯಯನಗಳ ವರದಿಗಳು ತಿಳಿಸುತ್ತಾ ಬಂದಿವೆ. ಇಂತಹ ಯೋಜನೆಗಳು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರಬೇಕು ಮತ್ತು ಇದಕ್ಕೆ ಹೆಚ್ಚಿನ ಹಣವನ್ನು ರಾಷ್ಟ್ರೀಯ ಆದಾಯದಲ್ಲಿಯೇ ನೀಡಬೇಕು ಎಂದು ನಾಗರಿಕ ಸಮಾಜದ ಚಳವಳಿಗಳು ಒತ್ತಾಯಿಸುತ್ತಲೆ ಬಂದಿವೆ. ಆದರೂ ಈ ಯೋಜನೆಗಳಿಗೆ ಅಗತ್ಯವಾದಷ್ಟು ಹಣವನ್ನು ಯಾವಾಗಲೂ ಸರ್ಕಾರಗಳು ನೀಡದಿದ್ದರೂ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಹೆಚ್ಚಳವಾಗುತಿತ್ತು. ಆದರೆ 2014–15 ಮತ್ತು 2015–16 ಹಣಕಾಸು ವರ್ಷಗಳ ನಡುವಿನ ಅವಧಿಯಲ್ಲಿ ಐ.ಸಿ.ಡಿ.ಎಸ್. ಯೋಜನೆಗೆ ಕಡಿತವಾದ ಅನುದಾನ ರೂ.9637/– ಕೋಟಿ. ಇದೇ ಅವಧಿಯಲ್ಲಿ ಸರ್ವ ಶಿಕ್ಷಣ ಅಭಿಯಾನಕ್ಕೆ ಯೋಜನೆಗೆ ರೂ.5758/–ಕೋಟಿ ಅನುದಾನ ಕಡಿತ ಮಾಡಿದ್ದರೆ, ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮಕ್ಕೆ ರೂ.3979/– ಕೋಟಿ

ರೂಪಾಯಿಗಳನ್ನು ಕಡಿತ ಮಾಡಲಾಗಿದೆ. ಹಾಗೆಯೇ ರಾಷ್ಟ್ರೀಯ ಆರೋಗ್ಯ ಅಭಿಯಾನಕ್ಕೆ ರೂ.3900/- ಕೋಟಿಗಳಷ್ಟು ಅನುದಾನವನ್ನು ಕಡಿತ ಮಾಡಲಾಗಿದೆ. ಈ ಎಲ್ಲಾ ಯೋಜನೆಗಳಿಗೆ ನೀಡಲಾಗುತ್ತಿದ್ದ ಅನುದಾನದಲ್ಲಿನ ತೀವ್ರ ಕಡಿತವು, ಪೌಷ್ಠಿಕಾಂಶಗಳು, ಆರೋಗ್ಯ ಮತ್ತು ಶಿಕ್ಷಣಕ್ಕೆ ಈ ಯೋಜನೆಯನ್ನೇ ಅವಲಂಬಿಸಿದ್ದ, ಲಕ್ಷಾಂತರ ಬಡ ಕುಟುಂಬಗಳ ಮಹಿಳೆಯರು, ಅದರಲ್ಲಿಯೂ ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳ ಆರೋಗ್ಯದ ಮೇಲೆ ಅತ್ಯಂತ ಗಂಭೀರವಾದ ಪರಿಣಾಮವನ್ನು ಉಂಟುಮಾಡುತ್ತದೆ.

ಆದರೆ ಭಾರತದ ರಾಷ್ಟ್ರೀಯ ಉತ್ಪನ್ನದ (ಜಿ.ಡಿ.ಪಿ.) ಬೆಳವಣಿಗೆ ದರವು, 2014-15ರಲ್ಲಿ ಶೇಕಡ 7.6 ಬೆಳವಣಿಗೆಯನ್ನು ಕಂಡರೆ ಶೇಕಡ 10 ರಷ್ಟು ಬೆಳವಣಿಗೆ ಸಾಧಿಸುವ ನಿರೀಕ್ಷೆ ಇದೆ ಎಂದು ಹಣಕಾಸು ಸಚಿವಾಲಯ ಹೇಳುತ್ತಿದೆ. ಈ ಬೆಳವಣಿಗೆಯ ದರವು ಒಟ್ಟು ಜನಸಂಖ್ಯೆಯಲ್ಲಿ ಇರುವ ಶೇಕಡ 20 ರಷ್ಟು ಮಧ್ಯಮವರ್ಗದ ನಿರೀಕ್ಷೆಗಳು ಮತ್ತು ಅಗತ್ಯಗಳನ್ನು ಸ್ವಲ್ಪಮಟ್ಟಿಗೆ ಒಳಮಾಡಿಕೊಂಡಿದೆ. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರ, ಭೂರಹಿತ ಮಹಿಳಾ ಕೃಷಿ ಕಾರ್ಮಿಕರ, ಮಹಿಳಾ ಮನೆ ಕೆಲಸಗಾರ, ಮಹಿಳಾ ಕಟ್ಟಡ ಕೆಲಸಗಾರರ, ಇಟ್ಟಿಗೆ ಭಟ್ಟಿಗಳಲ್ಲಿ ದುಡಿಯುವವರ ಮಕ್ಕಳು ಮತ್ತು ಮಹಿಳೆಯ ಬದುಕಿನಲ್ಲಿ ಯಾವುದೇ ಬದಲಾವಣೆಗಳನ್ನು ತಂದಿಲ್ಲ. ಆದರೆ ಭಾರತ ಆರ್ಥಿಕ ಬೆಳವಣಿಗೆಯೂ ಶ್ರೀಮಂತರ ಆಸ್ತಿ ಮಾತ್ರ 1.76 ಟ್ರಿಲಿಯನ್‌ನಷ್ಟು ಹೆಚ್ಚಾದರೆ, ಬಡವರ ಆಸ್ತಿ ಶೇಕಡ 41 ರಷ್ಟು ಕಡಿಮೆಯಾಗಿದೆ. ನಮ್ಮ ಆರ್ಥಿಕ ಬೆಳವಣಿಗೆಯು ಕೇವಲ ಆರ್ಥಿಕ ಅಸಮಾನತೆಗಳನ್ನು ಮಾತ್ರ ಹಲವು ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಉಂಟುಮಾಡಿರುವುದನ್ನು ಜೀವಪರವಾಗಿ ಯೋಚಿಸುತ್ತಿರುವವರು ದಾಖಲಿಸುತ್ತಿದ್ದಾರೆ. 'ಅಭಿವೃದ್ಧಿ' ಹೆಸರಿನಲ್ಲಿ ಯಾವುದು ಕುಟುಂಬದಲ್ಲಿ ಮತ್ತು ನೆರೆಹೊರೆಯಲ್ಲಿ ಬದಲಾವಣೆಯ ಮೂಲಕ ಬಳಕೆಯಲ್ಲಿತ್ತೋ(ದೈಹಿಕ ಶ್ರಮ- ಶ್ರಮ ವಿಭಜನೆ) ಅದು ವೇತನ ತರುವ ಉದ್ಯೋಗವಾಗಿ (ಕೂಲಿ) ಬದಲಾಯಿಸಲ್ಪಟ್ಟಿತು. ಒಂದು ಪೂರ್ಣ 'ಅಭಿವೃದ್ಧಿ' ಹೊಂದಿದ ಪ್ರದೇಶದಲ್ಲಿ ಅಜ್ಜ ಅಜ್ಜಿಯ ಬದಲಾಗಿ ಅಂಗನವಾಡಿಗಳು ಮಕ್ಕಳ ಪೋಷಣೆಯಲ್ಲಿ ತೊಡಗುವುದು. ಕುಟುಂಬಕ್ಕೆ ಬದಲಾಗಿ ವಧು-ವರರ ವೇದಿಕೆಗಳು ಸಂಗಾತಿಗಳ ಆಯ್ಕೆ ಮತ್ತು ಮದುವೆಗಳು ನಡೆಯುವುದು. ನಾಯಿಯ ವಾಯು ವಿಹಾರಕ್ಕೆ ಬೇರೊಬ್ಬ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳುವುದು. ಈ ಉದಾಹರಣೆಗಳು ನಗೆ ವಸ್ತುಗಳಂತೆ ಕಾಣಬಹುದು. ಆದರೆ ಅವು ಅಪಾಯಕ್ಕೆ ಸಿಲುಕಿರುವ, ಬದಲಾಗುತ್ತಿರುವ ಸಾಮಾಜಿಕ ಸಂಬಂಧಗಳ ಬೆಸುಗೆಗಳನ್ನು ಗುರುತಿಸುತ್ತಿವೆ. ಯಾವುದೆಲ್ಲಾ ವೈಯಕ್ತಿಕವಾಗಿತ್ತೊ, ಸಂಪೂರ್ಣವಾಗಿ ಮಾರುಕಟ್ಟೆಯಿಂದ ದೂರ ಉಳಿಯಬೇಕೋ ಇಂದು ಅದೆಲ್ಲವು ಪಾವತಿಸಿ

ಪಡೆಯುವ ಸೇವೆಗಳಾಗಿವೆ. ಇಂತಹ ಸೇವಾವಲಯ ನಂಬಿಸುತ್ತಿರುವ ಅಭಿವೃದ್ಧಿ ನೀತಿಯು ಪ್ರಾಥಮಿಕ ಕೃಷಿ ವಲಯ ಮತ್ತು ಎರಡನೇಯ ತಯಾರಿಕಾ ವಲಯ ಕುಂಠಿತಗೊಂಡು ತನ್ನ ಜ್ಞಾನ ಪರಂಪರೆಗಳನ್ನು ಕಳೆದುಕೊಂಡು ಹಪಾಹಪಿತನವನ್ನು ಅನುಭವಿಸುವಂತಾಗಿದೆ. ಇಲ್ಲಿ ಈ ಸಮುದಾಯಗಳ ಮಾತುಗಳು ಸೋತಿವೆ.

4.3.1: ತಳಸಮುದಾಯಗಳ ಭಾಷಿಕ ಸಂಕಟಗಳು

ನಾಡಿನ ನುಡಿಯನ್ನು ಹೊರತುಪಡಿ, ಹೊರಗಿನಿಂದ ಬಂದ ನುಡಿ, ಚಿಂತನೆಯ ಹೇರಿಕೆಯಾದಾಗ ಜನ ಬದುಕಿನ ಸನ್ನಿವೇಶದಲ್ಲಿ ಆತಂಕಗಳು, ತಳಮಳಗಳು ಹುಟ್ಟಿಕೊಳ್ಳುತ್ತವೆ. ನಾಡು–ನುಡಿ ಒಟ್ಟಾಗಿ ಬೆಳೆಯಲು ಸಾಧ್ಯವಾಗುವುದಿಲ್ಲ. ಹೊರಗಿನಿಂದ ಬಂದ ನುಡಿ ಇಲ್ಲಿನ ದೇಸಿ ಬದುಕು ಹಾಗೂ ಚಿಂತನೆಯ ಬೆಳವಣಿಗೆಯನ್ನು ತಡೆಯುತ್ತದೆ. ಹಾಗೆ ಹೊರಗಿನಿಂದ ಬಂದ ನುಡಿ ಇಂಗ್ಲಿಶಾಗಿದ್ದರೆ, ಇವತ್ತು ಅದರ ಜಾಗದಲ್ಲಿ ಕನ್ನಡದ ಜಾಯಮಾನ ಇಲ್ಲವಾಗಿದೆ ಎನ್ನುವುದನ್ನು ಹಿಂದಿನ ಅಧ್ಯಾಯಗಳಲ್ಲಿ ನೋಡಿದ್ದೇವೆ. ಕನ್ನಡ ಇರಬೇಕಾದ ಜಾಗದಲ್ಲಿ ಸಂಸ್ಕೃತದ ಪದಸಂಪತ್ತು ಬಂದು ರಾರಾಜಿಸುತ್ತಿದೆ.

ಬ್ರಿಟಿಷ್ ಸಾಮ್ರಾಜ್ಯ ಸಹ ಎಂದೂ ಸ್ಥಳೀಯ ಜನರ ನಂಬಿಕೆಗಳನ್ನು ವಿರೋಧಿಸದೆ ಅವರ ನಾಗರೀಕ ಬದಲಾವಣೆಗಳಿಗೆ ಒಗ್ಗಿಕೊಳ್ಳುವಂತೆ ಆಡಳಿತವನ್ನು ಸುಗಮಗೊಳಿಸುವುದನ್ನು ಕಾಣಬಹುದು. 16ನೇ ಶತಮಾನದ ಕೊನೆಗೆ ಭಾರತವನ್ನು ಮತಪ್ರಸಾರಕ್ರಿಯೆಗೆ ಪೂರ್ಣ ಪ್ರಮಾಣದಲ್ಲಿ ಒಳಪಡಿಸಲಾಗದಿದ್ದರೂ ಸಹ ಕ್ರೈಸ್ತ ಮತವು ಆಧುನೀಕರಣವಾಗುತ್ತಾ ಸಾಗುತ್ತದೆ. 19ನೆಯ ಶತಮಾನದ ಮೊದಲಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅದಕ್ಕೆ ಅಗತ್ಯವಾದ ಪಠ್ಯ, ಶೈಕ್ಷಣಿಕ ತತ್ವ ಮತ್ತು ಭಾಷಾ ಮಾಧ್ಯಮಕ್ಕೆ ಸಂಬಂಧಿಸಿದಂತೆ ಕರ್ನಾಟಕ ಮಿಶನರಿಗಳು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲಾರಂಭಿಸುತ್ತಾರೆ. 16ನೇ ಶತಮಾನದಲ್ಲಿ ಯುರೋಪಿನಿಂದ ಬಂದ ಇವರು ಇಲ್ಲಿನ ಭಾಷೆಗಳನ್ನು ಆಂಗ್ಲೀಕರಿಸಿ ಅನುವಾದ ಮಾಡಿಕೊಂಡು ಜನರನ್ನು ವಸಾಹತುಶಾಹಿ ಶಿಕ್ಷಣಕ್ಕೆ ತಯಾರುಗೊಳಿಸಲಾಗುತ್ತದೆ. ವಸಾಹತುಶಾಹಿಯಲ್ಲಿ ಇಲ್ಲಿನ ಸ್ಥಳೀಯ ಜೀವನಕ್ರಮಗಳನ್ನು ಬ್ರಾಹ್ಮಣ್ಯದ ಜೀವನ ಕ್ರಮಕ್ಕೆ ಭಟ್ಟಿ ಇಳಿಸಿ, ಅಂತಿಮವಾಗಿ ಯುರೋಪಿನ ಅಧೀನಕ್ಕೊಳಪಡಿಸಿತ್ತು. ಜೀವನಕ್ರಮವು ಬದಲಾದಾಗ ಅದರಂಗವಾದ ಭಾಷೆಯು ಸ್ವಾಭಾವಿಕವಾಗಿ ಅಧೀನಕ್ಕೊಳಗಾಯಿತು. ಮಿಶನರಿ ಪಾದ್ರಿಗಳು ಇಲ್ಲಿನ ಚಿಂತನಾಕ್ರಮಗಳನ್ನು ಬದಲಾಯಿಸಿದ್ದು, ಹಾಗೂ ಯುರೋಪಿನ ಚಿಂತನಾಕ್ರಮಗಳನ್ನು

ಶ್ರೇಷ್ಠವೆಂದು ಬಿಂಭಿಸುತ್ತಾ ಇಲ್ಲಿನ ಚಿಂತನಾಕ್ರಮಗಳನ್ನು ಕೀಳು ಎಂದು ಬಿಂಬಿಸಿದ್ದು, ಈ ಮೂಲಕ ಇದರ ಪ್ರತಿರೂಪವಾದ ಭಾಷೆಯನ್ನು ಕೂಡಾ ಕೀಳು ಎಂದು ಬಿಂಬಿಸಲಾಯಿತು.

ಒಂದು ಸಾಂಸ್ಕೃತಿಕ ಪರಿಸರ ಬದಲಾದಾಗ ಅಲ್ಲಿನ ಭಾಷೆಯು ಬದಲಾಗುತ್ತದೆ. ಭಾಷೆಯ ಜೊತೆಗೆ ಅದರೊಂದಿಗಿನ ಪದಗಳು ಬದಲಾಗುತ್ತದೆ. ಸಾಂಸ್ಕೃತಿಕ ಪದಗಳು ಮರೆಯಾಗಿ ಹೋಗುತ್ತದೆ. ಒಂದು ಭಾಷೆಯ ಸಾಂಸ್ಕೃತಿಕ ಪದಗಳು ಸಾಂಸ್ಕೃತಿಕ ಸತ್ಯವನ್ನು ಹಾಗೂ ಅರ್ಥವನ್ನು ಪ್ರತಿನಿಧಿಸುತ್ತಿದ್ದವು. ಇದು ಯುರೋಪಿನ ಚಿಂತನಾಕ್ರಮಗಳಿಂದ ಮರೆಯಾಯಿತು.

ಈ ಹಿನ್ನೆಲೆಯಿಂದ ನೋಡಿದಾಗ ಕರ್ನಾಟಕ ಎನ್ನುವುದು ಹಳೆ ಮೈಸೂರು ಪ್ರಾಂತ್ಯವಾಗಿತ್ತು. "1799ನೇ ಇಸವಿಯಲ್ಲಿ ಅಸ್ತಿತ್ವಕ್ಕೆ ಬಂದ ಮೈಸೂರು ಸಂಸ್ಥಾನ ಪೂರ್ತಿಯಾಗಿ ಬ್ರಿಟಿಷ್ ವಸಾಹತುಶಾಹಿಯ ಸೃಷ್ಟಿ 1943ರವರೆಗೂ ಅದು ಹಾಗೆಯೇ ಉಳಿಯಿತು. ವಸಾಹತುವಾದಿಗಳ ಕೂಸಾದ ಮೈಸೂರು ವಸಾಹತುವಾದದೊಂದಿಗೆ ಅವನತಿ ಹೊಂದುತ್ತಾ, ಅದರ ಜೊತೆಯೇ ಮಾಯವಾಯಿತು. ಹೀಗಾಗಿ ವಹಾಸತು ಶಾಹಿಯಿಂದಲೇ ಅದು ಪ್ರಾಣ ಪಡೆಯುತ್ತಿತ್ತು. ವಸಾಹತುಶಾಹಿಯಂತೆ ತನ್ನದೇ ರೀತಿಯಲ್ಲಿ ಜನತಾಂತ್ರಿಕ ಶಕ್ತಿಯ ವಿಕಾಸಕ್ಕೆ ಪ್ರತಿರೋಧ ಒಡ್ಡಿತು. ಚಾರಿತ್ರಿಕ ಗತಿಯಲ್ಲಿ ವಸಾಹತುಶಾಹಿ ಅಸ್ತಮಿಸಿದಂತೆ ಕ್ರಮೇಣ ರಾಷ್ಟ್ರೀಯ ಜನತಾಂತ್ರಿಕ ಭಾರತದಲ್ಲಿ ಸೇರ್ಪಡೆಯಾಗಿ ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾಯಿತು."[10] ಎಂಬ ಮಾತುಗಳು ಗಮನಾರ್ಹವಾದುದು.

ಹಾಗಾಗಿ ಭಾಷಿಕ ಸಮುದಾಯಗಳು ತಮ್ಮ ಭಾಷೆಗಳನ್ನು ಜೀವಂತವಾಗಿ ಉಳಿಸಿಕೊಳ್ಳಲು ಸಂವಹನ ಮತ್ತು ಬರವಣಿಗೆ ಎರಡೂ ರೂಪಗಳಲ್ಲಿ ಹೆಚ್ಚು ಬಳಕೆಗೊಳ್ಳುವಂತೆ ಮಾಡಲು ಪ್ರಯತ್ನಿಸುತ್ತಿವೆ. ಹಾಗೆ ಬಳಕೆಗೆ ತರುವ ಪ್ರಯತ್ನಗಳನ್ನು ಭಾಷಿಕ ಸಮುದಾಯಗಳು ಮಾಡದಿದ್ದರೆ ಭಾಷೆಗಳು ತನ್ನ ಜೀವಂತಿಕೆಯನ್ನು ಕಳೆದುಕೊಳ್ಳುತ್ತವೆ. ಅದರ ಜೊತೆ ಸಮುದಾಯ, ಸಮುದಾಯದ ಸಮಸ್ತ ಸಂಸ್ಕೃತಿ, ಶ್ರೀಮಂತಿಕೆಗಳು ಜೀವಂತಿಕೆ ಕಳೆದುಕೊಳ್ಳುತ್ತವೆ.

ತಳಸಮುದಾಯಗಳು ತಮ್ಮ ಭಾಷಾ ಅಸ್ಮಿತೆಯನ್ನು ಬದಿಗಿಟ್ಟು ಪ್ರಬಲ ಭಾಷೆ ಸಂಸ್ಕೃತಿಗಳ ನೆರಳಲ್ಲಿ ಬದುಕುವ ಪರಿಸ್ಥಿತಿಯಿಂದ ತಮ್ಮ ಭಾಷಿಕ ಚಹರೆಗಳನ್ನೂ

---

[10] ಎಸ್.ಚಂದ್ರಶೇಖರ ವಸಾಹತುಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು 2006. ಪು.5

ಕಳೆದುಕೊಳ್ಳುತ್ತಿದ್ದಾರೆ. ಇದು ಈ ಸಮುದಾಯಗಳ ಅಂತಸತ್ವದ ಮೇಲೆ ಪರಿಣಾಮ ಬೀರುತ್ತದೆ. ತಳಸಮುದಾಯಗಳು ಆಡಳಿತ ಭಾಷೆಯಿಂದ ಹೊರಗಡೆಯೇ ಇದ್ದಾರೆ. ಸಾಮಾಜಿಕ ಶಿಷ್ಟತೆಯನ್ನು ಭಾಷೆಯ ಮೇಲೆ ಆರೋಪಿಸಿ, ಕೆಳಸಮುದಾಯಗಳನ್ನು ಹೊರಗಡೆ ಇಡಲಾಗಿದೆ. ಪ್ರಭುತ್ವದ ನೆಲೆಯಲ್ಲಿ ಭಾಷಾ ನೀತಿ ಹಾಗೂ ಭಾಷೆಗೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳುವವರೇ ಬೇರೆ. ಇವರು ತಳಸಮುದಾಯವು ಯಾಕೆ ಮುಖ್ಯವಾಹಿನಿಗೆ ಬರಬೇಕು ಎಂಬ ನೆಲೆಯಲ್ಲೇ ಯಾರಿಗೂ ಎಟುಕದ ರೀತಿಯಲ್ಲೂ ನಿರ್ಣಯಗಳನ್ನು ಮಾಡುತ್ತಾರೆ. ಎಂದರೆ ಸರಕಾರದಲ್ಲಿ ನೀತಿ ನಿರೂಪಣೆಯ ಹಂತದಲ್ಲೇ ಸಮಸ್ಯೆ ಇದೆ ಎಂದರ್ಥ.

ಉದಾಹಣೆಗೆ ಸರಕಾರ ಸಾಮಾನ್ಯರ ಸವಲತ್ತುಗಳನ್ನು ಪಡೆಯುವುದಕ್ಕಾಗಿ ಹೊರಡಿಸಿರುವ ಯಾವುದೇ ನಮೂನೆ ಪತ್ರಗಳನ್ನು ಗಮನಿಸಿದರೆ ಇದು ತಿಳಿಯುತ್ತದೆ. ಅ ನಮೂನೆಗಳನ್ನು ತುಂಬಲು ಮಧ್ಯವರ್ತಿಯನ್ನು ಆಶ್ರಯಿಸಬೇಕಾದ ಸನ್ನಿವೇಶ ಸಾಮಾನ್ಯವೆನಿಸಿಬಿಟ್ಟಿದೆ. ಈ ವಿಚಾರದಲ್ಲಿ ಓದು-ಬರಹ ಬಲ್ಲವರು ಬರದವರು ಇಬ್ಬರಿಗೂ ವ್ಯತ್ಯಾಸವೆ ಕಾಣುತ್ತಿಲ್ಲ. ಇದು ಸರಕಾರಗಳ ನೀತಿ ನಿರೂಪಣೆಯ ಸಮಸ್ಯೆಯಲ್ಲದೆ ಮತ್ತೇನು? ಇದರಿಂದಾಗಿ ಮಧ್ಯವರ್ತಿಗಳಿಲ್ಲದೆ ಸರಕಾರದ ಯಾವ ಕೆಲಸವೂ ನಡೆಯಲಾರದು ಎನ್ನುವ ಮಟ್ಟಕ್ಕೆ ತಲುಪಿಬಿಟ್ಟಿದೆ. ಮಧ್ಯವರ್ತಿಗಳ ಪ್ರವೇಶಕ್ಕೆ ಒಂದು ದೊಡ್ಡ ದಾರಿಯನ್ನೆ ತೆರೆದುಕೊಟ್ಟಂತಾಗಿದೆ.

ಇನ್ನೊಂದೆಡೆ ಆಧುನಿಕ ತಂತ್ರಜ್ಞಾನಗಳು ಕೂಡಾ ಮಹಿಳೆ ಮತ್ತು ತಳಸಮುದಾಯವನ್ನು ತನ್ನ ಪರಿಧಿಯಿಂದ ಹೊರಗೆ ಇಡುತ್ತದೆ. ಇ-ಆಡಳಿತ ಎಂದಾಗ ತನ್ನ ಭಾಷೆಯಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆಯ ಸಾಧ್ಯತೆಗಳು ಕಡಿಮೆಯಾಗಿ ಬೇರೆ ಭಾಷೆಯ ಮೂಲಕ ಹೇರಲ್ಪಟ್ಟಾಗ ಈ ಸಮುದಾಯಗಳು ಪ್ರಭುತ್ವದ ಜೊತೆಗೆ ತನ್ನ ಅಂತರವನ್ನು ಕಾಯ್ದುಕೊಳ್ಳುತ್ತದೆ.

ಆದ್ದರಿಂದ ಪ್ರಭುತ್ವವು ಆಡಳಿತ ಭಾಷೆಯ ಮೂಲಕವೆ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ನೆಲೆಯಲ್ಲಿ ಜನತೆಯನ್ನು ದೂರ ಇಟ್ಟು, ವಿನಾಶಕ್ಕೆ ಕಾರಣವಾಗುತ್ತದೆ. ಜನತೆಯ ಪರವಾಗಿ ಹೇಳುತ್ತಲೇ ವಿರುದ್ದವಾದ ನೆಲೆಯಲ್ಲೇ ಪ್ರಭುತ್ವವು ಕಾರ್ಯನಿರ್ವಹಿಸುತ್ತದೆ. ಪ್ರಭುತ್ವ ತನ್ನ ರಕ್ಷಣೆಗಾಗಿ ಏನುಬೇಕಾದರೂ ಮಾಡುತ್ತದೆ. ಯಾರನ್ನೂ ಬೇಕಾದರೂ ದೂರ ಇಡುತ್ತದೆ. ಅಲ್ಲದೆ, ವ್ಯವಸ್ಥೆಯೊಂದಿಗೆ ಯಾವುದೇ ರೀತಿಯ ರಾಜಿಗೂ ಸಿದ್ದವಾಗಿರುತ್ತದೆ.

ಪ್ರಭುತ್ವವು ಆಧುನೀಕರಣ ಎನ್ನುತ್ತಾ ಶಿಷ್ಟೀಕರಣದ ಕಡೆಗೆ ಸಾಗುತ್ತಾ, ವೈವಿಧ್ಯಗಳನ್ನು ನಾಶ ಮಾಡುತ್ತದೆ. ಶಿಷ್ಟೀಕರಣವು ವೈವಿಧ್ಯತೆಗಳನ್ನು ತೊಡೆದು ಹಾಕಿ, ಒಂದನ್ನು ಮಾತ್ರ ಉಳಿಸುತ್ತದೆ. ಆದ್ದರಿಂದ ತಾಂತ್ರಿಕತೆಯನ್ನು ಸ್ಥಳೀಯ ಬದುಕಿಗೆ ಅನ್ವಯಿಸಬೇಕು. ಶಿಕ್ಷಣ ಪಡೆದ ತಳವರ್ಗವು ಸಹ ಇಂದು ತನ್ನ ಸಾಂಸ್ಕೃತಿಕ ಬದುಕಿನಿಂದ ದೂರ ಸರಿಯುತ್ತದೆ.

ಇಂಗ್ಲೀಷ್ ಓದು ಹೊಸ ಬೂರ್ಜ್ವಾಶಾಹಿಯನ್ನು ಸೃಷ್ಟಿಸುತ್ತದೆ. ಹಾಗೆ ಮಾಡುತ್ತಲೆ ಸ್ಥಳೀಯ ತಾಕತ್ತಿನ ವ್ಯಕ್ತಿಯನ್ನು, ಸಮುದಾಯವನ್ನು ಹಾಗೂ ಅವರ ನುಡಿಯನ್ನು ಅಪಮಾನಕ್ಕೊಳಪಡಿಸುತ್ತದೆ. ಸಮುದಾಯ ಕಟ್ಟಿಕೊಂಡ ತಿಳಿವು ಪರಕೀಯಗೊಳ್ಳುತ್ತಾ ಹೋಗುತ್ತದೆ ಹಾಗೂ ಅನ್ಯತೆಯನ್ನು ಕಟ್ಟಿಕೊಡುತ್ತದೆ. ಭಾಷಾವಾರು ಪ್ರಾಂತ್ಯ ಉದಯವಾದಾಗ ಕನ್ನಡನಾಡು ತನ್ನದೇ ಆದ ಸಾಂಸ್ಕೃತಿಕ ಮೌಲ್ಯವುಳ್ಳ ಆಡಳಿತವನ್ನು ಜಾರಿಗೊಳಿಸಲಿಲ್ಲ. ಬ್ರಿಟಿಷರ ಕಂದಾಯ ಭೂವಲಯಗಳನ್ನೇ ಒಪ್ಪಿಕೊಂಡಾಗ ಬಹುತ್ವವನ್ನು ಹೊಂದಿದ ಭಾಷಿಕ ನೆಲೆಗಳನ್ನಾಗಲೀ, ಸಮುದಾಯ ನೆಲೆಗಳನ್ನಾಗಲೀ ಅವರ ಬದುಕಿನ ಕ್ರಮದ ತಿಳುವಳಿಕೆಗಳನ್ನಾಗಲೀ ಪರಿಗಣಿಸದೇ ಹೋದದ್ದು, ದುರಂತದ ನಡೆಯೇ ಸರಿ. ಹೊಸದಾಗಿ ಅವಿಷ್ಕಾರಗೊಂಡ ನೌಕರಶಾಹಿ ಇದೆಲ್ಲದಕ್ಕೂ ಬೆನ್ನು ತಿರುಗಿಸುತ್ತಾ, ಜನರಾಡುವ ಮಾತನ್ನು ನಿರಾಕರಿಸಿ, ವಸಾಹತುಶಾಹಿ ನೆಲೆಯ ಭೂತವನ್ನೇ ಆರ್ಥಿಕ ನೆಲೆಯ ಆರಾಧನೆಯಲ್ಲಿ ಮುಂದುವರೆಸಲಾಯಿತು. ಈ ದ್ವಂದ್ವವೇ ಆಧುನಿಕೋತ್ತರ ಕಾಲದಲ್ಲೂ ಆಡಳಿತದಲ್ಲಿ ಮುಂದುವರೆಯಿತು. ಈ ಹಿನೆಲೆಯಲ್ಲಿ ಜನಸಮುದಾಯಗಳ ನಾಳೆಗಳನ್ನು ನೌಕರಶಾಹಿ ಹಾಗೂ ಕುಲೀನ ವರ್ಗಗಳು ಪ್ರಜಾಸತ್ತೆಯ ಹೆಸರಿನಲ್ಲಿ ತಮ್ಮ ಹಿತಾಸಕ್ತಿಗೆ ಒತ್ತೆ ಇಟ್ಟಿರುವುದು ಖಚಿತವಾಗುತ್ತದೆ. ಆದ್ದರಿಂದ ಆಡಳಿತ ಭಾಷೆ ಎನ್ನುವುದು ಸಂವಿಧಾನಬದ್ಧ ಆಶಯಗಳನ್ನು ಗಾಳಿಗೆತೂರಿ ಜನಸತ್ತೆಯ ಆಶೋತ್ತರಗಳನ್ನು ನಿರ್ನಾಮ ಮಾಡಲಾಗಿದೆ. ಕಂದಾಯ ವಿಭಾಗೀಕರಣಗಳನ್ನು ಮುರಿದು ಬಹುತ್ವದ ನೆಲೆಯಲ್ಲಿ ಆಡಳಿತ ವಿಭಾಗಗಳನ್ನು ಮಾಡಬೇಕಿದೆ. ಈ ಮೂಲಕ ಬಹುತ್ವದ ಸಮುದಾಯಗಳನ್ನು ನೆಲೆಗೊಳಿಸಬೇಕಿದೆ.

ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಗಿ ಜನಸತ್ತೆಯನ್ನು ಅಷ್ಟಾವಂಕನನ್ನಾಗಿಸಿ, ಮೂಲೆಗುಂಪಾಗಿಸಿರುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಇದೇ ಈ ಸಂಶೋಧನೆಯ ಮುಖ್ಯ ತಿರುವು. ಇದನ್ನು ಸರಿಪಡಿಸಬೇಕಾಗಿರುವ ಜರೂರು ಇದೆ. ಕಂದಾಯ ವಿಭಾಗಗಳನ್ನು ಭಾಷಿಕ ವಲಯಗಳನ್ನು ನಿರ್ಮಿಸಿರುವುದು ನೌಕರಶಾಹಿ ಹಾಗೂ

ಪ್ರಭುತ್ವನೇ ಹೊರತು, ತಳಮಟ್ಟದ ಜನಸತ್ತೆ ಅಲ್ಲ. ಆದ್ದರಿಂದ ಜನಸತ್ತೆಯ ಸೊಲ್ಲು/ನುಡಿ ಆಡಳಿತದ ನೆಲೆಯಾಗಿ ಇಂದಿಗೂ ಬಂದಿಲ್ಲ.

ಇಂತೆಡೆ ಸಾಮಾಜಿಕ ವಿಜ್ಞಾನವನ್ನು ಇಲ್ಲಿ ಬಳಸಿಕೊಂಡು ಜನನುಡಿಯನ್ನು ಹಂತ ಹಂತವಾಗಿ ಆಡಳಿತದಲ್ಲಿ ಜಾರಿಗೊಳಿಸುವ ಜರೂರು ಇದೆ. ಇಂದು ತಾಲೂಕಿನಲ್ಲಿ ಶೇ.17ರಷ್ಟು ಮಂದಿ ಒಂದು ನುಡಿಯನ್ನು ಬಳಸಿದರೆ ಅಂತಹವರಿಗೆ ಆ ನುಡಿಯಲ್ಲೇ ಆಡಳಿತ ದೊರೆಯುವಂತಾಗಬೇಕು ಎನ್ನುವ ಕಾನೂನು ಇದೆ. ಆದರೆ ಅಂತಹ ನಡೆಯನ್ನು ಸಾಮಾಜಿಕವಾಗಿ ಜಾರಿಗೊಳಿಸಿದರೆ ಅಲ್ಲೊಂದು ಜನತಂತ್ರದ ಶಕ್ತಿ ಉದಯಸಬಹುದು.

4.4: ಆಡಳಿತದಲ್ಲಿ ಪಾಲ್ಗೊಳ್ಳುವಿಕೆ: ಸಂದರ್ಶನದ ವಿವರಗಳು ಮತ್ತು ವಿಶ್ಲೇಷಣೆ

ಜನಸತ್ತೆ ಪುಷ್ಟಿ ಪಡೆದು ಪ್ರಜಾಸತ್ತೆಯನ್ನು ನೆಲೆಗೊಳಿಸುವುದೆಂದರೆ ಅದಕ್ಕೆ ತನ್ನದೇ ಆದ ನುಡಿ ಮತ್ತು ಲೋಕ ತಿಳಿವಿನಿಂದ ಕೂಡಿದ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕು. ಆದರೆ, ಕನ್ನಡದ ಸನ್ನಿವೇಶದಲ್ಲಿ ಇದು ಇನ್ನೂ ದಕ್ಕಿಸಿಕೊಳ್ಳಬೇಕಾದ ಸಂಗತಿಯಾಗಿಯೇ ಇದೆ. ಈ ಕುರಿತಂತೆ ಪ್ರಸ್ತುತ ಭಾಗದಲ್ಲಿ ಅಗತ್ಯವಾದ ಪ್ರಶ್ನಾವಳಿಯನ್ನು ರೂಪಿಸಿಕೊಂಡು ಆಡಳಿತ ನಡೆಸುವವರು ಮತ್ತು ಅದರಲ್ಲಿ ಪಾಲ್ಗೊಂಡಿರುವ ಜನರನ್ನು ಸಂದರ್ಶನಕ್ಕೆ ಒಳಪಡಿಸಲಾಯಿತು. ಸಂಶೋಧನೆಯಲ್ಲಿ ಕ್ಷೇತ್ರಕಾರ್ಯ ಮತ್ತು ಪ್ರಶ್ನಾವಳಿಯ ಮೂಲಕ ಸಂದರ್ಶನ ನಡೆಸುವ ವಿಧಾನ ಬಹಳ ಮುಖ್ಯವಾದುದು.[11] ಈ ಮೂಲಕ ಆಡಳಿತದಲ್ಲಿ ಕನ್ನಡ ಬಳಕೆಯಲ್ಲಿನ ತೊಡಕುಗಳು ಮತ್ತು ಸವಾಲುಗಳ ಕುರಿತಂತೆ ತಾತ್ವಿಕ ಒಳನೋಟಗಳನ್ನು ಕಂಡುಕೊಳ್ಳಬಹುದು.

---

[11] ಸಮೀಕ್ಷೆ ಮತ್ತು ಕ್ಷೇತ್ರ ಅಧ್ಯಯನಗಳು ವೈಜ್ಞಾನಿಕ ಅನುಸಂಧಾನದ ಮುಖ್ಯ ವಿಧಾನಗಳಾಗಿವೆ. ಇವು ಆಧಾರಕಲ್ಪನೆಗಳ ಸತ್ಯಾಸತ್ಯತೆಗಳನ್ನು ಪರೀಕ್ಷಿಸುವುದಕ್ಕೂ ಸಾಮಾಜಿಕ ನಡವಳಿಕೆಗಳನ್ನು ಸಂಖ್ಯಾಕಲನಶಾಸ್ತ್ರೀಯ ಅನುಸಂಧಾನದ ಮೂಲಕ ವಿವೇಚಿಸುವುದಕ್ಕೂ ಅನುವಾಗಿ ಒದಗಿಬರುತ್ತದೆ. ಸಮೀಕ್ಷೆ ಮತ್ತು ಕ್ಷೇತ್ರ ಅಧ್ಯಯನಗಳ ನಡುವೆ ಕೆಲವು ತಾಂತ್ರಕ ವ್ಯತ್ಯಾಸಗಳುಂಟು. ಸಮೀಕ್ಷೆಯ ವಿಧಾನದಲ್ಲಿ ಕ್ಷೇತ್ರ ಬಹು ವ್ಯಾಪಕವಾದ್ದು. ತನ್ನ ಅಧ್ಯಯನಕ್ಷೇತ್ರಕ್ಕೊಳಪಡದ ಇತರ ಭಾಗಗಳನ್ನು ಅದು ಪ್ರತಿನಿಧಿಸುತ್ತದೆ. ಕ್ಷೇತ್ರ ಅಧ್ಯಯನಕ್ಕೆ ಪ್ರಾತಿನಿಧಿಕತೆಯಿಲ್ಲ. ಬದಲಾಗಿ, ಅದು ಒಂದು ನಿರ್ದಿಷ್ಟ ಕ್ಷೇತ್ರದ ಬಗ್ಗೆ ಆಳವಾದ ಅಧ್ಯಯನ ಮಾಡುವ ವಿಧಾನ. ಈ ವಿಧಾನದ ಅನುಸರಣೆಯಿಂದ ವ್ಯಕ್ತಿಶಃ ಸಂದರ್ಶನ ಮತ್ತು ಸಂಶೋಧನಕ್ಕೆ ಒಳಪಟ್ಟ ಸಮಸ್ಯೆಯ ಪರಿಪೂರ್ಣ ವಿವೇಚನೆ ಸಾಧ್ಯವಾಗುತ್ತವೆ. ಸಂದರ್ಶಕರು ಕ್ಷೇತ್ರದ ಸ್ಥಿತಿಗತಿಗಳಿಗೆ ಹೊಂದಿಕೊಳ್ಳದಿರುವುದು, ಕ್ಷೇತ್ರದ ಜನರ ಮನೋಭಾವವನ್ನನುಸರಿಸಿ ಪ್ರಶ್ನೆಗಳನ್ನು ಕೇಳದಿರುವುದು, ಕ್ಷೇತ್ರ ಅಧ್ಯಯಸದ ಉದ್ದೇಶಗಳನ್ನು ಜನರಿಗೆ ಮನವರಿಕೆ ಮಾಡಿಕೊಡದಿರುವುದು ಮುಂತಾದವು ವೈಯಕ್ತಿಕ ಸಂದರ್ಶನ ವಿಧಾನವನ್ನು ವಿಫಲಗೊಳಿಸುತ್ತವೆ. ಇಂಥ ಸನ್ನಿವೇಶದಲ್ಲಿ ಸಂಗ್ರಹಿಸುವ ಮಾಹಿತಿಗಳಂತೂ ಸಂಶಯಾಸ್ಪದವಾಗಿರುತ್ತವೆ. ಅಸಮರ್ಪಕ ರೀತಿಯಲ್ಲಿ ರಚಿಸಲಾದ ಅನುಸೂಚಿಗಳು ಸಂದರ್ಶಕರನ್ನು ತಪ್ಪುದಾರಿಗೆ ಎಳೆದು ಇಡೀ ಕ್ಷೇತ್ರ ಅಧ್ಯಯನವನ್ನೇ ನಿಷ್ಪ್ರಯೋಜನಗೊಳಿಸುತ್ತವೆ. ಇದೇ ರೀತಿ, ಸ್ಥಳೀಯ ಭಾಷೆ, ಸರಳತೆ ಹಾಗೂ ಸ್ಪಷ್ಟತೆಗೆ ಗಮನ ಕೊಡದೆ. ಪ್ರಾಮುಖ್ಯಕ್ಕೆ ತಕ್ಕಂತೆ ಪ್ರಶ್ನೆಗಳನ್ನು ಜೋಡಿಸದೆ ಮತ್ತು ಕ್ಷೇತ್ರ ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟಪಡಿಸದೆ ರಚಿಸಲಾಗುವ ಪ್ರಶ್ನಾವಳಿಗಳು ಕ್ಷೇತ್ರ ಅಧ್ಯಯನವನ್ನು ಫಲಪ್ರದಗೊಳಿಸಲಾರವು. ಕ್ಷೇತ್ರ ಕಾರ್ಯನಿರತರ ಆಲಸ್ಯ ಹಾಗೂ ಜಡತಾ ಮನೋಭಾವ, ಪಕ್ಷಪಾತ ಧೋರಣೆ, ಅಸಮರ್ಪಕ ವಿಷಯ ವಿಶ್ಲೇಷಣೆ ಮತ್ತು ನಿರೂಪಣೆ ಮುಂತಾದವು ಕ್ಷೇತ್ರ ಅಧ್ಯಯನವನ್ನು ನಿಷ್ಪ್ರಯೋಜಕವನ್ನಾಗಿ ಮಾಡುತ್ತವೆ. ಕ್ಷೇತ್ರ ಅಧ್ಯಯನದಲ್ಲಿ ಮೇಲೆ ಹೇಳಿರುವ ಮಿತಿಗಳಿದ್ದಾಗ್ಯೂ ಸಂಶೋಧನ ಕಾರ್ಯದಲ್ಲಿ ಅದನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸಲಾಗುತ್ತಿದೆ. ಕ್ಷೇತ್ರಕಾರ್ಯದಲ್ಲಿ ನಾಲ್ಕು

ಸಂದರ್ಶನಕ್ಕೆ ಹೋಗುವ ಮುನ್ನ ಮಾಡಿಕೊಂಡ ಪ್ರಶ್ನಾವಳಿಯು ಆಡಳಿತದಲ್ಲಿ ಕನ್ನಡ ಬಳಕೆಯಲ್ಲಿನ ತೊಡಕುಗಳನ್ನು ಚರ್ಚಿಸುತ್ತದೆ. (ಅನುಬಂಧ – 1ರಲ್ಲಿ ಪ್ರಶ್ನಾವಳಿಯನ್ನು ನೀಡಲಾಗಿದೆ).

ಒಟ್ಟು 140 ಮಂದಿಯನ್ನು ಸಮೀಕೆಗೆ ಒಳಪಡಿಸಲಾಗಿತ್ತು. ಅದರಲ್ಲಿ 1ನೇ ಪ್ರಶ್ನೆಗೆ ಈ ಕೆಳಗಿನ ಪಟ್ಟಿ ಉತ್ತರ ನೀಡುತ್ತದೆ.

1. ಭಾರತೀಯ ಪ್ರಜೆಯಾಗಿ ನೀವು ಸರಕಾರಿ ಕಚೇರಿಗೆ ಬಂದಾಗ ನಿಮ್ಮ ಅಗತ್ಯಗಳನ್ನು ಈಡೇರಿಸುವ ಆಡಳಿತ ಇದೆಯೇ?		
ಹೌದು	ಇಲ್ಲ	ತಟಸ್ಥ
119	20	1

ಭಾರತೀಯ ಪ್ರಜೆಯಾಗಿ ನೀವು, ಸರಕಾರಿ ಕಚೇರಿಗೆ ಬಂದಾಗ ನಿಮ್ಮ ಅಗತ್ಯಗಳನ್ನು ಈಡೇರಿಸುವ ಆಡಳಿತ ಇದೆಯೇ? ಎನ್ನುವ ಪ್ರಶ್ನೆಗೆ 119 ಮಂದಿ ಹೌದು ಎಂದರೆ, 20 ಮಂದಿ ಇಲ್ಲ ಎಂದಿದ್ದಾರೆ. 140ರಲ್ಲಿ ಒಬ್ಬರು ಮಾತ್ರ ತಟಸ್ಥರಾಗಿದ್ದಾರೆ. ಹಾಗಾದರೆ ಕನ್ನಡದಲ್ಲಿ ಆಡಳಿತ ಎನ್ನುವುದು ಬಹುಮಂದಿಯ ಅಗತ್ಯಗಳನ್ನು ಈಡೇರಿಸಿದೆ ಎಂದು ಭಾವಿಸಬಹುದೇ? ಇರಬಹುದು. ಆದರೆ, ಕರ್ನಾಟಕ ರಾಜ್ಯವನ್ನು ಗಮನಿಸಿದಾಗ ಅದರಲ್ಲಿರುವ 30 ಜಿಲ್ಲೆಗಳು ಏಕರೂಪಿಯಾಗಿಲ್ಲ. ಅಲ್ಲದೆ ಎಲ್ಲಾ ಜಿಲ್ಲೆಗಳೂ ಸಮಾನವಾಗಿ ಅಭಿವೃದ್ಧಿ ಹೊಂದಿವೆ ಎನ್ನಲಾಗದು. ಈ ಸಂಗತಿಯನ್ನು ಗಮನಿಸಿದಲ್ಲಿ 'ಕನ್ನಡದಲ್ಲಿ ಆಡಳಿತ' ಎನ್ನುವುದು ಇನ್ನೂ ಸಹ ಜನಪರವಾಗಬೇಕಿದೆ ಎನ್ನಬಹುದು.

ಹಂತಗಳುಂಟು: 1 ಪೂರ್ವಭಾವಿ ಯೋಜನೆ, 2 ರೂಪರೇಖೆಯ ಅಂತಿಮ ರಚನೆ, 3 ಕ್ಷೇತ್ರಕಾರ್ಯಾಚರಣೆ ಮತ್ತು 4 ವಿಷಯ ವಿಶ್ಲೇಷಣೆ ಮತ್ತು ನಿರೂಪಣೆ. ಹಾಗೆಯೇ ಅವುಗಳ ಮಿತಿಗಳನ್ನು ಸಹ ನಾವು ಅರಿಯಬೇಕಾಗಿದೆ. ಸಂದರ್ಶಕರು ಕ್ಷೇತ್ರದ ಸ್ಥಿತಿಗತಿಗಳಿಗೆ ಹೊಂದಿಕೊಳ್ಳದಿರುವುದು, ಕ್ಷೇತ್ರದ ಜನರ ಮನೋಭಾವವನ್ನನುಸರಿಸಿ ಪ್ರಶ್ನೆಗಳನ್ನು ಕೇಳದಿರುವುದು, ಕ್ಷೇತ್ರ ಅಧ್ಯಯನದ ಉದ್ದೇಶಗಳನ್ನು ಜನರಿಗೆ ಮನವರಿಕೆ ಮಾಡಿಕೊಡದಿರುವುದು ಮುಂತಾದವು ವೈಯಕ್ತಿಕ ಸಂದರ್ಶನ ವಿಧಾನವನ್ನು ವಿಫಲಗೊಳಿಸುತ್ತವೆ. ಇಂಥ ಸನ್ನಿವೇಶದಲ್ಲಿ ಸಂಗ್ರಹಿಸುವ ಮಾಹಿತಿಗಳಂತೂ ಸಂಶಯಾಸ್ಪದವಾಗಿರುತ್ತವೆ. ಅಸಮರ್ಪಕ ರೀತಿಯಲ್ಲಿ ರಚಿಸಲಾದ ಅನುಸೂಚಿಗಳು ಸಂದರ್ಶಕರನ್ನು ತಪ್ಪುದಾರಿಗೆ ಎಳೆದು ಇಡೀ ಕ್ಷೇತ್ರ ಅಧ್ಯಯನವನ್ನೇ ನಿಷ್ಪ್ರಯೋಜನಗೊಳಿಸುತ್ತವೆ. ಇದೇ ರೀತಿ, ಸ್ಥಳೀಯ ಭಾಷೆ, ಸರಳತೆ ಹಾಗೂ ಸ್ಪಷ್ಟತೆಗೆ ಗಮನ ಕೊಡದೆ. ಪ್ರಾಮುಖ್ಯಕ್ಕೆ ತಕ್ಕಂತೆ ಪ್ರಶ್ನೆಗಳನ್ನು ಜೋಡಿಸದೆ ಮತ್ತು ಕ್ಷೇತ್ರ ಅಧ್ಯಯನದ ಉದ್ದೇಶಗಳನ್ನು ಸ್ಪಷ್ಟಪಡಿಸದೆ ರಚಿಸಲಾಗುವ ಪ್ರಶ್ನಾವಳಿಗಳು ಕ್ಷೇತ್ರ ಅಧ್ಯಯನವನ್ನು ಫಲಪ್ರದಗೊಳಿಸಲಾರವು. ಕ್ಷೇತ್ರ ಕಾರ್ಯನಿರತರ ಆಲಸ್ಯ ಹಾಗೂ ಜಡತಾ ಮನೋಭಾವ, ಪಕ್ಷಪಾತ ಧೋರಣೆ, ಅಸಮರ್ಪಕ ವಿಷಯ ವಿಶ್ಲೇಷಣೆ ಮತ್ತು ನಿರೂಪಣೆ ಮುಂತಾದವು ಕ್ಷೇತ್ರ ಅಧ್ಯಯನವನ್ನು ನಿಷ್ಪ್ರಯೋಜಕವನ್ನಾಗಿ ಮಾಡುತ್ತವೆ. ಕ್ಷೇತ್ರ ಅಧ್ಯಯನದಲ್ಲಿ ಮೇಲೆ ಹೇಳಿರುವ ಮಿತಿಗಳಿದ್ದಾಗ್ಯೂ ಸಂಶೋಧನ ಕಾರ್ಯದಲ್ಲಿ ಅದನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸಲಾಗುತ್ತಿದೆ.

2. ನಿಮ್ಮ ಅಗತ್ಯಗಳು ಈಡೇರಿದೆಯೇ?		
ಹೌದು	ಇಲ್ಲ	ತಟಸ್ಥ
115	23	2

ಮೇಲಿನ ಪಟ್ಟಿಯಲ್ಲಿ ಕೇಳಿರುವ ಎರಡನೇ ಪ್ರಶ್ನೆ – ನಿಮ್ಮ ಅಗತ್ಯಗಳು ಈಡೇರಿದೆಯೇ? ಎನ್ನುವುದಕ್ಕೆ ಸಕಾರಾತ್ಮವಾಗಿ ಹೌದು ಎಂದವರು 115 ಮಂದಿ. ತಮಮ್ ಅಗತ್ಯಗಳು ಈಡೇರಲ್ಲ ಎಂದವರು 23 ಮಂದಿ. ಇಬ್ಬರು ಮಾತ್ರ ತಟಸ್ಥವಾಗಿದ್ದಾರೆ. ಇದೂ ಬಹುಮತ ಎನ್ನುವಂತಿಲ್ಲ. ಒಂದರ ಪಟ್ಟಿಯ ನಿಲುವೇ ಇಲ್ಲೂ ಅನ್ವಯಿಸಬಹುದಾಗಿದೆ.

ಮೂರನೇ ಪಟ್ಟಿಯಲ್ಲಿ ಆಡಳಿತದಲ್ಲಿ ನಿಮಗಾಗಿರುವ ತೊಂದರೆಯ ಬಗೆಗಳನ್ನು ಕೇಳಿದಾಗ ಭಾಷಿಕ ತೊಡಕಿನದ್ದು ಎಂದವರು ಕೇವಲ 4 ಮಂದಿ ಮಾತ್ರ. ಅಂದರೆ ಕನ್ನಡದಲ್ಲಿ ಇನ್ನೂ ಸಹ ತೊಂದರೆಯಾಗುತ್ತಿದೆ ಎಂದು ಹೇಳುವವರು ಇದ್ದಾರೆ. ಅಲ್ಲದೆ, ಅಧಿಕಾರದಿಂದಾಗಿ ತಾರತಮ್ಯ ಇದೆ ಎನ್ನುವುದನ್ನು ಸುಮಾರು 42 ಮಂದಿ ಒಪ್ಪಿಕೊಳ್ಳುತ್ತಿದ್ದಾರೆ. ಇದೊಂದು ಗಂಭೀರವಾದ ಸಂಗತಿಯೇ ಆಗಿದೆ. ಇದರೊಂದಿಗೆ ಲಿಂಗ ತಾರತಮ್ಯ ಇದೆ ಎಂದು 6 ಮಂದಿ ಹೇಳಿದರೆ, ಜಾತಿ ತಾರತಮ್ಯವೂ ಇದೆ ಎಂದವರು 5 ಮಂದಿ. ಈ ಮೇಲಿನ ತಾರತಮ್ಯಗಳು ಸರಕಾರಿ ಆಡಳಿತ ಕಚೇರಿಗಳಲ್ಲಿ ಇದೆ ಎಂದವರು 4 ಮಂದಿ. ಅಂದರೆ ಸಂಬಂಧಿಯಾದ

3. ಆಡಳಿತದಲ್ಲಿ ನಿಮಗಾಗಿರುವ ತೊಂದರೆ					
ಭಾಷಿಕ ತೊಡಕಿನದ್ದು	ಅಧಿಕಾರ ಸಂಬಂಧದ್ದು	ಲಿಂಗ ತಾರತಮ್ಯ	ಜಾತಿ ತಾರತಮ್ಯದ್ದು	ಎಲ್ಲಾ	ತಟಸ್ಥ
4	42	6	5	4	79

140 ಮಂದಿಯಲ್ಲಿ 79 ಮಂದಿಯನ್ನು ಬಿಟ್ಟಲ್ಲಿ ಉಳಿದ 61 ಮಂದಿ ನಕಾರಾತ್ಮವಾಗಿಯೇ ಉತ್ತರಿಸಿದ್ದಾರೆ. ಅಂದರೆ ಆಡಳಿತ ಎನ್ನುವುದರ ಕುರಿತಂತೆ ನಕಾರಾತ್ಮಕ ದನಿಯೇ ಗಟ್ಟಿಯಾಗಿದೆ ಎಂದು ಭಾವಿಸಬಹುದು.

4. ಮಾತನಾಡುವ ಕನ್ನಡಕ್ಕೂ ಸರಕಾರಿ ಕಚೇರಿಯಲ್ಲಿ ಬಳಸುವ ಕನ್ನಡಕ್ಕೂ ವ್ಯತ್ಯಾಸ ಇದೆಯಾ?		
ಹೌದು	ಇಲ್ಲ	ತಟಸ್ಥ
46	90	4

ಮಾತನಾಡುವ ಕನ್ನಡಕ್ಕೂ ಸರಕಾರಿ ಕಚೇರಿಯಲ್ಲಿ ಬಳಸುವ ಕನ್ನಡಕ್ಕೂ ವ್ಯತ್ಯಾಸ ಇದೆಯಾ? ಎನ್ನುವ ಪ್ರಶ್ನೆಗೆ ಹೌದು ಎಂದವರು 46ಮಂದಿ. ಇಲ್ಲ ಎಂದವರು 90ತ್ತಾದರೆ, ತಟಸ್ಥವಾಗಿ ಉಳಿದವರು 4 ಮಂದಿ ಮಾತ್ರ. ಮಾತನಾಡುವ ಕನ್ನಡಕ್ಕೂ ಆಡಳಿತದಲ್ಲಿ ಬಳಸುವ ಕನ್ನಡಕ್ಕೂ ಇನ್ನೂ ವ್ಯತ್ಯಾಸ ಇದೆ.

5. ಮಹಿಳೆಯಾಗಿ ನೀವು ಸರಕಾರಿ ಕಚೇರಿಗೆ ಬಂದಾಗ ಎದುರಿಸಿರುವ ತೊಂದರೆ...?			
ಭಾಷಾ ತೊಂದರೆ	ಲಿಂಗ ತಾರತಮ್ಯ	ಪುರುಷ ವಾತಾವರಣ	ತಟಸ್ಥ 113
5	10	12	

ಮೇಲಿನ ಪ್ರಶ್ನೆಯು ಮಹಿಳೆಯರನ್ನು ಗಮನದಲ್ಲಿಟ್ಟುಕೊಂಡು ಕೇಳಲಾಗಿತ್ತು. ಆದಕ್ಕೆ 113 ಮಂದಿ ತಟಸ್ಥರಾಗಿದ್ದರೆ, 22 ಮಂದಿ ಲಿಂಗ ತಾರತಮ್ಯ ಇದೆ ಎಂದು ಸೂಚಿಸಿದ್ದಾರೆ. ಇದರೊಡನೆ 5 ಮಂದಿ ಭಾಷಾ ತಾರತಮ್ಯ ಇದೆ ಎಂದಿದ್ದಾರೆ. ಅಂದರೆ ತಾರತಮ್ಯ ಎನ್ನುವುದು ಆಡಳಿತದಲ್ಲಿ ಇದೆ.

6. ಮಹಿಳಾ ಸ್ನೇಹಿ ವಾತಾವರಣ ಇದೆಯಾ?		
ಹೌದು	ಇಲ್ಲ	ತಟಸ್ಥ
79	20	41

ಮೇಲಿನ ಪಟ್ಟಿಯಲ್ಲೂ ಸಹ ಸುಮಾರು ಅರ್ಧದಷ್ಟು ಮಂದಿ ಮಹಿಳಾ ಸ್ನೇಹಿ ಇಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ.

ಏಳನೇ ಪ್ರಶ್ನೆಗೆ ಕೇವಲ 38 ಮಂದಿ ಮಾತ್ರ ಆಡಳಿತದಲ್ಲಿ ದೊಡ್ಡವರು / ಚಿಕ್ಕವರು ಎಂಬ ವ್ಯತ್ಯಾಸ ಇದೆ ಎಂದಿದ್ದಾರೆ. ಅಂದರೆ ಏಣಿ-ಶ್ರೇಣಿ ಆಟ ಮುಂದುವರೆದಿದೆ.

7. ದೊಡ್ಡವರು / ಚಿಕ್ಕವರು ಎಂಬ ವ್ಯತ್ಯಾಸ ಇದೆಯೇ?		
ಹೌದು	ಇಲ್ಲ	ತಟಸ್ಥ
38	98	4

ಪಟ್ಟಿ 8ರಲ್ಲಿ ಕನ್ನಡದಲ್ಲಿ ಆಡಳಿತ ದೊರೆತರೆ ಜನರನ್ನು ತಲುಪುವುದೇ, ಸ್ಥಳೀಯರಿಗೆ ಮಾನ್ಯತೆ ಸಿಗುವುದೇ? ಎಂದು ಕೇಳಿದಾಗ ಎಲ್ಲರೂ ಸಹ ಸಕಾರಾತ್ಮಕವಾಗಿ ಉತ್ತರಿಸಿದ್ದಾರೆ. ಅಂದರೆ ಆಡಳಿತ ಬದಲಾಗಬೇಕಿದೆ.

8. ಕನ್ನಡದಲ್ಲಿ ಆಡಳಿತ ದೊರೆತರೆ ಜನರನ್ನು ತಲುಪುವುದೇ, ಸ್ಥಳೀಯರಿಗೆ ಮಾನ್ಯತೆ ಸಿಗುವುದೇ	
ಹೌದು	ಇಲ್ಲ
140	0

9. ಕನ್ನಡಿಗರ ಬದುಕು ಹಸನಾಗುವುದೇ	
ಹೌದು	ಇಲ್ಲ
140	0

ಪಟ್ಟಿ 9ರಲ್ಲಿ ಕನ್ನಡದಲ್ಲಿ ಆಡಳಿತ ದೊರೆತರೆ ಅವರ ಬದುಕು ಹಸನಾಗಬಹುದೇ ಎನ್ನುವಾಗ ಹೌದು ಎಂದೂ ಶೇ.100ರಷ್ಟು ಮಂದಿ ಹೇಳಿದ್ದಾರೆ.

ಮೇಲಿನ ಒಂಭತ್ತು ಪ್ರಶ್ನೆಗಳೂ ಸಹ ಆಡಳಿತ ಕನ್ನಡದಲ್ಲಿ ಅಂದರೆ ಭಾಷಾ ಬಳಕೆ ಮತ್ತು ಆ ಭಾಷೆ ಕಟ್ಟಿರುವ ತಿಳಿವಿನಲ್ಲಿ ಇನ್ನೂ ಆಡಳಿತ ಇಲ್ಲ ಎಂದೇ ಖಚಿತವಾಗುತ್ತದೆ.

4.5: ಆಡಳಿತ ಮತ್ತು ಆಡಳಿತಾತ್ಮಕತೆ: ತಾತ್ವಿಕ ನೋಟ

ಮೇಲೆ ಗಮನಿಸಿದಂತೆ, ಕನ್ನಡದಲ್ಲಿ ಆಡಳಿತ ಎನ್ನುವಾಗ ಮಹಿಳೆ ಮತ್ತು ತಳಸಮುದಾಯಗಳಿಗೆ ಸಂಬಂಧಿಸಿದಂತೆ ಆಡಳಿತ ಮತ್ತಷ್ಟು ಸುಧಾರಿಸಬೇಕಿದೆ.

ಕರ್ನಾಟಕದ ಸಂದರ್ಭದಲ್ಲಿ "ಉತ್ತಮ ಆಡಳಿತ ಹಾಗೂ ಅಭಿವೃದ್ಧಿಗಿಂತಲೂ" ಜಾತೀಯ ಸಮೀಕರಣವೇ ಪ್ರಮುಖ ಅಂಶ ಎಂದು ಎಲ್ಲಾ ಪಕ್ಷಗಳು ಸೂಕ್ಷವಾಗಿ ಒಪ್ಪಿಕೊಳ್ಳುತ್ತವೆ. ಅಲ್ಲದೆ, ಸ್ವಾತಂತ್ರ್ಯ ಬಂದು ಏಳು ದಶಕಗಳಾದರೂ ಹಲವಾರು ಸಮುದಾಯಗಳನ್ನು ಈಗಲೂ **"ವಂಚಿತ ಸಮುದಾಯ"**ಗಳೆಂದು ಏಕೆ ಕರೆಯಲಾಗುತ್ತಿದೆ? ವಾಸ್ತವವಾಗಿ, ಕರ್ನಾಟಕ ಹಾಗೂ ಭಾರತ ನಾಲ್ಕು ಅಪರಿಪೂರ್ಣಗೊಂಡ ಕ್ರಾಂತಿಗಳನ್ನು ಕಂಡಿವೆ. ಅವುಗಳಲ್ಲಿ ಭೂ ಮಸೂದೆ ಮೊದಲನೇಯ ಕ್ರಾಂತಿಯಾದರೆ, ಹಸಿರು ಕ್ರಾಂತಿ ಎರಡನೇಯದು, ಅಧಿಕಾರದ ವಿಕೇಂದ್ರಿಕರಣ; ಮೂರನೇ ಕ್ರಾಂತಿ, ಹಾಗೂ ಮೀಸಲಾತಿ ನಾಲ್ಕನೇಯ ಕ್ರಾಂತಿ. ಇವೆಲ್ಲಾ ಕ್ರಾಂತಿಗಳು ಸಂಪೂರ್ಣವಾಗಿ ಹತ್ತು ಹಲವು ಸಮುದಾಯಗಳನ್ನು ತನ್ನ ತಕ್ಕೆಯೊಳಗೆ ತೆಗೆದುಕೊಳ್ಳದೇ ಹೋಯಿತು. ಭೂ ಮಸೂದೆಯನ್ನು ಕರ್ನಾಟಕ ಕೆಲವೆಡೆ ಅತ್ಯಂತ ಪರಿಣಾಮಕಾರಿಯಾಗಿ ಅಳವಡಿಸಿದರೆ, ಇನ್ನಿತರ ಕಡೆ ಅದು ಸೋತು ಹೋಯಿತು. ಇದರಲ್ಲಿ ಕೆಲವು ದಲಿತರು ಚಿಕ್ಕ ಪುಟ್ಟ ಭೂ ಹಿಡುವಳಿದಾರರಾಗಿ ಪರಿವರ್ತಿರಾದರೇ ಹೊರತು, ಭೂ ಮಾಲೀಕರಾಗಲಿಲ್ಲ. ಬಹಳಷ್ಟು ಸಮುದಾಯಗಳಿಗೆ ಅದು ಮುಟ್ಟದೇ ಹೋಯಿತು. ಇದಕ್ಕಿಂತ ವಿಭಿನ್ನವಾದದ್ದು ಹಸಿರು ಕ್ರಾಂತಿ. ಅದು ತಲುಪಿದ್ದು ಮಧ್ಯಮ ಜಾತಿಯ ನೀರಾವರಿ ರೈತರಿಗೆ, ಅಧಿಕಾರದ ವಿಕೇಂದ್ರೀಕರಣದ ಲಾಭ ಪಡೆದದ್ದು ಅತೀ ಹಿಂದುಳಿದವರಲ್ಲ. ಬದಲಾಗಿ ಹಿಂದುಳಿದವರಲ್ಲಿ ಬಲಾಢ್ಯರು. ಮೀಸಲಾತಿ ಇದರಿಂದ ಹೊರತಾಗಿಲ್ಲ. ಇವರಲ್ಲಿ ಯಾರೆಲ್ಲ ಬಲಾಢ್ಯರಿದ್ದರೋ ಅವರೆಲ್ಲಾ ಈ ನಾಲ್ಕು ಕ್ರಾಂತಿಯ ಲಾಭವನ್ನು ಪಡೆದರು. ಉಳಿದವರು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ವಂಚಿತರಾಗುತ್ತಾ ಹೋದರು. ಅವರೆಂದೂ ಆರ್ಥಿಕವಾಗಿ ಬಲಾಢ್ಯರೂ ಕೂಡ ಆಗಲಿಲ್ಲ – ಅವರೆಂದೂ ಕೈಗಾರಿಕೋದ್ಯಮಿಯಾಗಲಿಲ್ಲ, ಹೈಪರ್ ಮಾರ್ಕೆಟಗಳ ಒಡೆಯರಾಗಲಿಲ್ಲ, ದೊಡ್ಡ ದೊಡ್ಡ ಹೋಟೆಲುಗಳ ಮಾಲೀಕರು ಕೂಡ ಆಗಲಿಲ್ಲ. ಇವರೆಲ್ಲ "ವಂಚಿತರಲ್ಲಿ ವಂಚಿತ"ರಾಗುತ್ತಾ ಹೋದರು, ಇದು ಅಭಿವೃದ್ಧಿಯ ವಿಪರ್ಯಾಸವೂ ಹೌದು. ಇವುಗಳ ನಡುವೆ ಅವರು ರಾಜಕೀಯ ಶಕ್ತಿಯಾಗಿ ಬೆಳೆಯುವುದು ಅಷ್ಟು ಸುಲಭದ ಕೆಲಸವಲ್ಲ.

ವಂಚಿತ ಸಮುದಾಯಗಳ ರಾಜಕೀಯದ ಧ್ರುವೀಕರಣಕ್ಕೆ ಹೊಸ ಚಾಲನೆ ಬಂದ್ದದ್ದು 1970ರ ದಶಕದಲ್ಲಿ. ದೇವರಾಜ್ ಅರಸ್ ಈ ಚಾಲನೆಗೆ ಹೊಸ ರೂಪ ನೀಡಿದರು. ಪ್ರಪ್ರಥಮ ಬಾರಿಗೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ದಲಿತರು ರಾಜಕೀಯವಾಗಿ ತಲೆ ಎತ್ತಿದ್ದರು. ಅದು ಪ್ರಥಮ ಬಾರಿಗೆ "ಅಹಿಂದ"ದ ರಾಜಕೀಯ ಧ್ರುವೀಕರಣಕ್ಕೆ ದಾರಿ ಮಾಡಿ ಕೊಟ್ಟಿತ್ತು. ಇದರರ್ಥ ಎಲ್ಲಾ ವಂಚಿತ ಸಮುದಾಯಗಳು ಈ ರಾಜಕೀಯ ಸಮೀಕರಣದಲ್ಲಿ ಭಾಗಿಯಾದರು ಎಂದರ್ಥವಲ್ಲ. ಈ ಸಮೀಕರಣ ತದನಂತರ ಹೊಸ ಹೊಸ ರಾಜಕೀಯ ಸಮೀಕರಣಕ್ಕೆ ದಾರಿ ಮಾಡಿಕೊಟ್ಟಿತ್ತು. ಈ ದಶಕದಲ್ಲಿ ಎರಡು ಹೊಸ ಸಮೀಕರಣ ತಲೆ ಎತ್ತಿತ್ತು. ವಿಪರ್ಯಾಸವೆಂದರೆ ಈ ರಾಜಕೀಯ ಸಮೀಕರಣದ ತಳಹದಿ ವಾಸ್ತವವಾಗಿ ಗಟ್ಟಿಯಾಗಿರಲಿಲ್ಲ ಅಲ್ಲದೇ ಅದು ಕಾಲ್ಪನಿಕ ಸಮೀಕರಣವೂ ಆಗಿತ್ತು. ಈ ದಶಕದಲ್ಲಿ ಹುಟ್ಟಿದ ಎರಡು ಸಮೀಕರಣದಲ್ಲಿ ಕೆಲವೊಮ್ಮೆ ಮಧ್ಯಮ ಜಾತಿಗಳು ಕೂಡ ಸೇರಿ ಬಿಟ್ಟಿದ್ದವು. ಅದು ಒಂದೆಡೆ "MOVD" (ಮುಸ್ಲಿಂ, ಹಿಂದುಳಿದ ವರ್ಗಗಳು ಒಕ್ಕಲಿಗರು, ದಲಿತರು), ಮತ್ತೊಂದೆಡೆ "LIBRA" (ಲಿಂಗಾಯತರು ಹಾಗೂ ಬ್ರಾಹ್ಮಣರು) ಎಂಬ ಸಮೀಕರಣವನ್ನು ಬೆಳೆಸಿತ್ತು. ಇದರಲ್ಲಿ "LIBRA" ' ಹೆಚ್ಚು ಕಡಿಮೆ ಗಟ್ಟಿಯಾದ ರಾಜಕೀಯ ಸಮೀಕರಣವೆಂದರೂ ತಪ್ಪಾಗಲಾರದು. ವಾಸ್ತವವಾಗಿ "MOVD" ಈಗ ಶಿಥಿಲ ಗೊಂಡಿದೆ.

ಹೀಗಿರುವಾಗ, ಸರಕಾರ – ಆಡಳಿತದ ಮೇಲೆ ಬಂಡವಾಳಶಾಹಿ ಹಾಗೂ ಬಲಪಂಥೀಯ ಸಿದ್ಧಾಂತ ಮತ್ತು ಸಂಘಟನೆಗಳು ಒಂದಾಗಿ ಹಿಡಿತವನ್ನು ಸಾಧಿಸಿವೆ. ಪ್ರಜಾಪ್ರಭುತ್ವವನ್ನು ದುರುಪಯೋಗ ಮಾಡಿಕೊಂಡು ತಮ್ಮ ಅಧಿಕಾರವನ್ನು ಬಲಿಷ್ಠಗೊಳಿಸಿಕೊಳ್ಳಲು ಅವು ನಿರತವಾಗಿವೆ. ಈ ಎರಡು ಶಕ್ತಿಗಳು ಸೇರಿಕೊಂಡು ಪ್ರಜಾಪ್ರಭುತ್ವದ ಹಂದರದೂಳಿಗೆ ಫ್ಯಾಸಿಸ್ಟ್ ವ್ಯವಸ್ಥೆಯನ್ನು ತರಲು ಪ್ರಯತ್ನಿಸುತ್ತಿವೆ. ಚರಿತ್ರೆಯನ್ನು ಓದಿದವರಿಗೆ ಇದು ಹೊಸದಲ್ಲ. ಬಲಪಂಥೀಯ ರಾಷ್ಟ್ರವಾದವು ಮೇಲುನೋಟಕ್ಕೆ ದೇಶಪ್ರೇಮಿಯಾಗಿ ಕಂಡರೂ ಅದು ಅಂತಿಮವಾಗಿ ಬಂಡವಾಳಶಾಹಿಯ ಪರವಾಗಿರುತ್ತದೆ. ಅಲ್ಲದೆ ಸರ್ವಾಧಿಕಾರಿ ವ್ಯಕ್ತಿತ್ವಗಳನ್ನು ಬೆಂಬಲಿಸುತ್ತದೆ. ಬಲಿಷ್ಠ ವರ್ಗಗಳನ್ನು ಬೆಂಬಲಿಸುತ್ತದೆ. ಅಂದರೆ ಸಮಾನತೆಯನ್ನು ಧಿಕ್ಕರಿಸಿ, ದುರ್ಬಲರು ಬಲಿಷ್ಠರ ಅಧಿಕಾರದ ಕೆಳಗಿರಬೇಕೆನ್ನುವ Social Darwinism ತತ್ವವನ್ನು ಒಪ್ಪಿಕೊಳ್ಳುತ್ತದೆ.

ಮೇಲಿನ ಒಳನೋಟವನ್ನು 'ಜನತಂತ್ರದ ಪ್ರಧಾನಿ ನಿಜವಾದ ಚೌಕೀದಾರ್ ಆಗಿರಲೂಬಹುದು; ಆದರೆ ಯಾರಿಗೆ?' ಚೌಕೀದಾರ್ ಚೋರ್ ಅಲ್ಲದಿರಲೂಬಹುದು' ಎನ್ನುವ

ಪ್ರಜಾವಾಣಿಯಲ್ಲಿ ಪ್ರಕಟವಾದ ದೇವನೂರು ಮಹದೇವ (6-04-2019) ಲೇಖನದಲ್ಲಿ ಕಾಣಬಹುದು.

ಆ ಲೇಖನ ಆಡಳಿತ ಅನ್ನುವುದಕ್ಕಿಂತ 'ಆಡಳಿತಾತ್ಮಕತೆ' ಎನ್ನುವ ಪ್ರಭುತ್ವವಾದಿ ನೆಲೆಯತ್ತ ಸಾಗುತ್ತಿದೆ ಎಂಬುದರತ್ತ ಗಮನಸೆಳೆಯುತ್ತದೆ – **'ಕನಿಷ್ಠ ಸರ್ಕಾರ ಗರಿಷ್ಠ ಆಡಳಿತ'** ಎಂಬ ಮಾತಿದೆಯಲ್ಲಾ ಇದು ಇಂದಿನ ಜಾಗತೀಕರಣದ ಮಾಯಾಜಿಂಕೆ ಅನ್ನಿಸಿಬಿಡುತ್ತದೆ. ಪ್ರಧಾನ ಮಂತ್ರಿಯವರು **'ನಮ್ಮ ಸರ್ಕಾರ ಅನುಕೂಲ ಮಾಡಿಕೊಡುವ ವ್ಯವಸ್ಥಾಪಕನಂತೆ ಕಾರ್ಯ ನಿರ್ವಹಿಸುತ್ತದೆ, ನಮ್ಮ ಸರ್ಕಾರದ ಗಮನವೆಲ್ಲಾ– ಕನಿಷ್ಠ ಸರ್ಕಾರ ಗರಿಷ್ಠ ಆಡಳಿತದತ್ತ'** ಎನ್ನುತ್ತಾರೆ. ವಾಣಿಜ್ಯ ಉದ್ಯಮ ನಡೆಸುವುದು ಸರ್ಕಾರದ ಉಸಾಬರಿಯಲ್ಲ ಎಂಬರ್ಥದಲ್ಲಿ 'I believe, government has no business to be in business. The focus should be on Minimum Government but Maximum Governance'. ಎಂದು ಘೋಷಿಸುತ್ತಾರೆ. ಈ ಮಾತುಗಳು ಕೇಳುವುದಕ್ಕೆ ಮೋಹಕ. ಈ ನುಡಿಗಳ ಆಳದಲ್ಲಿ ಭಯಾನಕ ಪಾತಾಳ ಲೋಕವಿದೆ; ಭೂಗತ ಜಗತ್ತಿನ ವ್ಯಾಪಾರ ವ್ಯವಹಾರಗಳು ಜರುಗುತ್ತಿರುವುದು ಅಲ್ಲಿ ಗೋಚರಿಸುತ್ತದೆ.[12] ಅಂದರೆ **ಆಡಳಿತಾತ್ಮಕತೆ** ಎನ್ನುವುದು 'ಸಾರ್ವಜನಿಕ ಸಂಪತ್ತನ್ನು ಸಾರ್ವಜನಿಕವಾಗೇ ಉಳಿಸುವುದು ಎಂದಾಗದೆ ಸಾರ್ವಜನಿಕ ಸಂಪತ್ತನ್ನು 'ಸಾರ್ವಜನಿಕರು ತಮ್ಮದು ಎಂದುಕೊಂಡಿಲ್ಲ' ಎನ್ನುವುದರ ಕಡೆಗೆ ಸಾಗುತ್ತದೆ. ಈ ಪ್ರಕ್ರಿಯೆ ಹೇಗೆದೆಯೆಂದರೆ ದೇವನೂರು ಮಹದೇವನವರ ಮಾತುಗಳಲ್ಲಿ, "... ಯೋಜನಾ ಆಯೋಗವನ್ನು ಬಿಸಾಕಿ ಅದರ ಬದಲು ನೀತಿ ಆಯೋಗವನ್ನು ಚಲಾವಣೆಗೆ ತರುತ್ತಾರೆ. ಇದರ ಪ್ರಮುಖ ಕಾರ್ಯವೆಂದರೆ– ಕೇಂದ್ರ ಸರ್ಕಾರದ ಸುಪರ್ದಿಯಲ್ಲಿರುವ ಉದ್ದಿಮೆ ಸಂಸ್ಥೆಗಳನ್ನು ಮಾರಾಟ ಮಾಡುವುದು ಅಥವಾ ಸರ್ಕಾರಿ ಷೇರುಗಳನ್ನು

---

[12] ಇದಕ್ಕೊಂದು ಉದಾಹರಣೆ– ಬಿಇಎಂಎಲ್‌ಅನ್ನು ಖಾಸಗೀಕರಣ ಮಾಡಕೂಡದೆಂದು ಮೈಸೂರಿನಲ್ಲಿ 2017ರ ಮೇ ತಿಂಗಳಿನಲ್ಲಿ ಒಂದು ಚಳವಳಿಯಾಯಿತು. ರಕ್ಷಣಾ ಸಚಿವಾಲಯದ ಅಧೀನದಲ್ಲಿರುವ ಬಿಇಎಂಎಲ್, ಸಾರ್ವಜನಿಕ ವಲಯದ ಪ್ರಮುಖ ಉದ್ದಿಮೆ. ಬೆಂಗಳೂರು, ಕೆಜಿಎಫ್, ಮೈಸೂರು, ಕೇರಳದ ಪಾಲಕ್ಕಾಡ್‌ನಲ್ಲಿ ಇದರ ಘಟಕಗಳಿವೆ. ಈ ಉದ್ದಿಮೆ, ಸತತವಾಗಿ ಲಾಭದಾಯಕವಾಗಿ ನಡೆದುಕೊಂಡು ಬರುತ್ತಿದೆ. ಬಿಇಎಂಎಲ್ ಘಟಕಗಳು, ಸುಮಾರು 4,500 ಎಕರೆ ಭೂಮಿ ಹೊಂದಿವೆ. ಇದರ ಮಾರುಕಟ್ಟೆ ಬೆಲೆ ಲಕ್ಷ ಕೋಟಿಗೂ ಹೆಚ್ಚಾಗುತ್ತದೆ. ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಿಸಿ ಆರ್ಡರ್ ಪಡೆದುಕೊಳ್ಳುತ್ತದೆ ಎಂಬ ಹೆಗ್ಗಳಿಕೆಯೂ ಬಿಇಎಂಎಲ್‌ಗೆ ಇದೆ. ಇಂತಹ ಒಂದು ಸಾರ್ವಜನಿಕ ಉದ್ದಿಮೆಯನ್ನು ಖಾಸಗಿ ಕಂಪನಿಯೊಂದಕ್ಕೆ ವಹಿಸಿಕೊಡುವ ಹುನ್ನಾರಕ್ಕಾಗಿ ಕೇಂದ್ರ ಸರ್ಕಾರವು ತನ್ನಲ್ಲಿ ಇರುವ ಶೇಕಡ 54ರಷ್ಟು ಷೇರುಗಳಲ್ಲಿ 26ರಷ್ಟನ್ನು ಅನಿಲ್ ಅಂಬಾನಿಯವರ ರಿಲಯನ್ಸ್ ಕಂಪನಿಗೆ ಮಾರುವ ವ್ಯವಹಾರ ಕುದುರಿಸುತ್ತಿತ್ತು. ಈ ಖಾಸಗೀಕರಣದ ಸಂಚಿನ ವಿರುದ್ಧ ಬಿಇಎಂಎಲ್ ಕಾರ್ಮಿಕರ ಧರಣಿ, ಮೆರವಣಿಗೆಗಳು ನಡೆಯುತ್ತಿರುವಾಗ ಸಾರ್ವಜನಿಕ ಅಭಿಪ್ರಾಯವನ್ನು ಗಮನಿಸುತ್ತಾ ಹೋದೆ. 'ಏನೋ ಕಾರ್ಖಾನೆ ನಷ್ಟದಲ್ಲಿರಬೇಕು. ಕಾರ್ಖಾನೆ ಮುಚ್ಚಾ ಇರಬೇಕು. ಕೆಲಸ ಹೋಗುತ್ತೆ ಅಂತ ಕೂಗಾಡುತ್ತಿದ್ದಾರೆ'– ಸುಮಾರು ಜನರ ಅಭಿಪ್ರಾಯ ಇದೇ ಆಗಿತ್ತು. ಕಾರ್ಮಿಕರು ಸಾರ್ವಜನಿಕ ಸಂಪತ್ತನ್ನು ಸಾರ್ವಜನಿಕವಾಗೇ ಉಳಿಸುವುದಕ್ಕಾಗಿ ಹೋರಾಡುತ್ತಿದ್ದಾರೆ ಅಂದುಕೊಂಡ ಒಬ್ಬನೇ ಒಬ್ಬ ಸಾರ್ವಜನಿಕನೂ ನನಗೆ ಕಂಡುಬರಲಿಲ್ಲ. ಸಾರ್ವಜನಿಕ ಸಂಪತ್ತನ್ನು ಸಾರ್ವಜನಿಕರು ತಮ್ಮದು ಎಂದುಕೊಂಡಿಲ್ಲ. ಇಲ್ಲೇ ಭಾರತದ ದುರಂತ ಇರುವುದು ಅನ್ನಿಸಿಬಿಟ್ಟಿತು.

ಹಿಂತೆಗೆದುಕೊಳ್ಳುವುದು. ಈ ನೀತಿ ಆಯೋಗವು ಸಾರ್ವಜನಿಕ ಆಡಳಿತದ 76 ಉದ್ದಿಮೆ ಸಂಸ್ಥೆಗಳನ್ನು ಖಾಸಗಿ ಕಂಪನಿಗಳ ಪದತಳಕ್ಕೆ ಒಪ್ಪಿಸಲು ಟೊಂಕಕಟ್ಟಿ ನಿಂತಿದೆ. ಪೂರ್ವಿಕರು ಕಷ್ಟಪಟ್ಟು ಕಟ್ಟಿ ಬೆಳೆಸಿ ಉಳಿಸಿಕೊಂಡು ಬಂದಿದ್ದ ಆಸ್ತಿಪಾಸ್ತಿಗಳನ್ನು ಮಾರಾಟ ಮಾಡಿ ಮನೆ ನಡೆಸುವ ಮಗನನ್ನು ಏನೆಂದು ಕರೆಯುತ್ತೇವೆ? ಮನೆಹಾಳ ಅಥವಾ ಕೇಡುಗ ಅನ್ನುತ್ತೇವೆ. ಹಾಗೇನೇ ಪೂರ್ವಿಕರು ಕಟ್ಟಿ ಬೆಳೆಸಿ ಉಳಿಸಿಕೊಂಡು ಬಂದಿದ್ದ ದೇಶದ ಸಂಪತ್ತನ್ನು ಮಾರಾಟ ಮಾಡುತ್ತಾ 'ದೇಶವನ್ನು ನಡೆಸುವವ'ನನ್ನು ಏನೆನ್ನಬೇಕು? ... ಇದನ್ನೇ ಕನಿಷ್ಠ ಸರ್ಕಾರ ಗರಿಷ್ಠ ಆಡಳಿತ ಎಂದುಕೊಂಡಿದ್ದಾರೆ. ಜನತಂತ್ರ ಸರ್ಕಾರವೇನೋ ಕನಿಷ್ಠ ಆಗುತ್ತಿದೆ, ನಿಜ. ಆದರೆ ಹಣತಂತ್ರದ ಕಂಪನಿ ಸರ್ಕಾರಗಳ ಆಡಳಿತ ಗರಿಷ್ಠ ವಾಗುತ್ತಿದೆ. ದೇಶದ ಸಂಪತ್ತಿನ 70ರಷ್ಟು ಭಾಗ ಶೇಕಡ ಒಂದರಷ್ಟು ಜನರ ಕೈಸೇರಿದೆ. ನಿಜವಾದ ಆಳ್ವಿಕೆ ಹಣತಂತ್ರದ ಕಂಪನಿಗಳ ಸರ್ಕಾರದ ಕೈವಶವಾಗುತ್ತಿದೆ. ಹೀಗಿರುವಾಗ ಜನತಂತ್ರ... ಅತ್ಯಂತ ಯಾತನಾಮಯವಾಗಿದೆ." ಈ ಮಾತುಗಳು ಪ್ರಸ್ತುತ ಅಧ್ಯಯನವನ್ನು ಸಮಾಜೋ-ಭಾಷಿಕನೆಲೆಯತ್ತ ಸಾಗುವ ಬಗೆಯನ್ನು ಗುರುತಿಸುತ್ತದೆ.

ಆದ್ದರಿಂದ, ಆಡಳಿತಾತ್ಮಕ ಚರಿತ್ರೆ ಎನ್ನುವುದು ಜನಸತ್ತೆಗೋಸ್ಕರ ಎನ್ನುವ ಬದಲು, ಜನಸತ್ತೆಯನ್ನು ಬಳಸಿಕೊಂಡು ಪ್ರಬಲವಾದ ರಾಜಕಾರಣವನ್ನು ಸಂಘಟಿಸಲಾಗಿದೆ. ಇದು ಆಗಿರುವುದು ಕನ್ನಡ ಭಾಷೆಯ ಮೂಲಕವೇ ಹೌದು. ಅಂದರೆ ಆಡಳಿತ ಎನ್ನುವುದು ಜನಸತ್ತೆಯನ್ನು ಪಳಗಿಸುವ ಒಂದು ಸಾಧನವಾಗಿದೆ ಅಥವಾ ಅದೊಂದು ತಂತ್ರಜ್ಞಾನವಾಗಿ ಎಲ್ಲರನ್ನು **'ಸಾಮೂಹಿಕ ಕಣ್ಗಾವಲಿಗೆ'**[13] ಒಳಪಡಿಸಲಾಗಿದೆ.

---

[13] ಮೊನ್ನೆ ಮೊನ್ನೆ ರಾಜಸ್ತಾನದ ಖಾಜುವಾಲ ಗ್ರಾಮದ ಶಿಶುವೊಂದು ಹುಟ್ಟಿದ ಐದು ನಿಮಿಷಗಳಲ್ಲೇ ಆಧಾರ್ ಮಾಹಿತಿ ಕೋಶಕ್ಕೆ ಸೇರಿ ಹೋಯಿತು. ಹನ್ನೆರಡು ಅಂಕಿಗಳ ಆಧಾರ್ ಗುರುತು ಪಡೆದ ಭಾರತದ ಅತಿ ಕಿರಿಯ ನಿವಾಸಿ ಈ ಶಿಶು. ವಯಸ್ಕರ ಪೈಕಿ ಶೇ 98ರಷ್ಟು ಮಂದಿ ದೇಶವಾಸಿಗಳು ಈಗಾಗಲೇ ಆಧಾರ್ ಗುರುತು ವ್ಯವಸ್ಥೆಯಡಿ ನೋಂದಾಯಿತರು. ಶಿಶುಗಳು ಮತ್ತು ಮಕ್ಕಳನ್ನು ಈ ವ್ಯವಸ್ಥೆಗೆ ಜೋಡಿಸುವ ಕೆಲಸ ಸಮರ ವೇಗದಲ್ಲಿ ಜರುಗಿದೆ. ಮಕ್ಕಳಿಗೆಂದೇ ಮೀಸಲಾದ ಐದು ಯೋಜನೆಗಳನ್ನು ಆಧಾರ್‌ಗೆ ಜೋಡಿಸಲಾಗಿದೆ. ಅಂದರೆ ಆಧಾರ್ ಕಾರ್ಡ್ ಎನ್ನುವುದು ನಾಗರಿಕರಿಗೆ ಗುರುತು ಸಂಖ್ಯೆಗಳನ್ನು ನೀಡುವ ವಿಶ್ವದ ಬಹುದೊಡ್ಡ ಯೋಜನೆಯಾಗಿದೆ. ಭಾವಚಿತ್ರಗಳು, ಬೆರಳಚ್ಚುಗಳು, ಅಕ್ಷಿಪಟಲ ಅಚ್ಚುಗಳಂತಹ ಬಯೊಮೆಟ್ರಿಕ್ ಮತ್ತು ಹೆಸರು, ವಿಳಾಸ, ಹುಟ್ಟಿದ ದಿನಾಂಕಗಳಂತಹ ವಿವರಗಳ ಬೃಹತ್ ಮಾಹಿತಿ ಭಂಡಾರ ಸೃಷ್ಟಿಯಾಗಿದೆ. ಅಮೆರಿಕೆಯ ಸಾಮಾಜಿಕ ಭದ್ರತೆ ಸಂಖ್ಯೆಯ ಮಾದರಿಯಲ್ಲಿ ಭಾರತೀಯ ನಾಗರಿಕರಿಗೆ ಹನ್ನೆರಡು ಅಂಕಿಗಳ ವಿಶಿಷ್ಟ ಗುರುತು ಸಂಖ್ಯೆಯನ್ನು ನೀಡಲಾಗಿದೆ. ಆಧಾರ್ ನೋಂದಣಿ ಕಡ್ಡಾಯ ಅಲ್ಲ ಎಂದು ಮಾತಿನಲ್ಲಿ ಹೇಳುತ್ತಲೇ ಕೃತಿಯಲ್ಲಿ ಕಡ್ಡಾಯ ಮಾಡುವ ಎಲ್ಲ ಕ್ರಮಗಳನ್ನು ಜರುಗಿಸಿರುವ ಕೇಂದ್ರ ಸರ್ಕಾರದ ನಡೆ ವಿವಾದ ಹುಟ್ಟಿಸಿದೆ. ಸರ್ಕಾರಿ ಯೋಜನೆಗಳಿಗೆ ಮಾತ್ರವೇ ಅಲ್ಲದೆ ಸೇವೆಗಳಿಗೂ ಆಧಾರ್ ವ್ಯವಸ್ಥೆಯನ್ನು ಜೋಡಿಸಲಾಗಿದೆ. ಆರಂಭದಲ್ಲಿ ಆಧಾರ್ ಬಳಕೆ ನ್ಯಾಯಬೆಲೆ ಪಡಿತರ ವಿತರಣೆ ಮತ್ತು ಅಡುಗೆ ಅನಿಲ ಪೂರೈಕೆಗೆ ಸೀಮಿತ ಆಗಿತ್ತು. ಆಧಾರ್ ನಂಬರ್ ಒದಗಿಸದಿದ್ದರೆ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಇಲ್ಲ. ಎಚ್‌ಐವಿ ಸೋಂಕಿತರು, ವೇಶ್ಯಾವಾಟಿಕೆ ಕೂಪದಿಂದ ಪಾರಾದ ಹೆಣ್ಣುಮಕ್ಕಳು ಮತ್ತು ಮಲಬಾಚುವ ಕರ್ಮದಿಂದ ಮುಕ್ತಿ ಬೇಡುವ ಬಡಪಾಯಿಗಳಿಗೆ ಚಿಕಿತ್ಸೆ- ಮರುವಸತಿ ಸೌಲಭ್ಯಗಳು ಇಲ್ಲ. ಮಲಬಾಚುವವರು ಇಲ್ಲವೇ ಬಾಚುತ್ತಿದ್ದವರು ಮತ್ತು ವೇಶ್ಯಾವಾಟಿಕೆ ಜಾಲದಲ್ಲಿದ್ದವರು ಎಂಬ ಅವಮಾನದ ಬೆಂಕಿಯಲ್ಲಿ ಸಾಯುವ ತನಕ ನರಳಬೇಕಾದೀತು ಎಂಬ ಇವರ ಚಿಂತೆ ಯಾರಿಗೆ ಅರ್ಥ ಆಗಬೇಕು? ಬೆದರಿ ಬಚ್ಚಿಟ್ಟುಕೊಳ್ಳಲು ಕತ್ತಲೆಗೆ ಸರಿದರೂ ಬೆನ್ನಟ್ಟಿ ಕೋರೈಸುವ ಕ್ರೂರ ಹೊನಲು ಬೆಳಕು. ಅಜ್ಞಾತದ ಅನುಕೂಲವನ್ನು ಕಿತ್ತುಕೊಂಡಿದೆ ಆಧಾರ್.

ಅಧ್ಯಾಯ – 5

ಕನ್ನಡದಲ್ಲಿ ಆಡಳಿತ: ಸಂಸ್ಕೃತ ವಿನ್ಯಾಸದ ತೊಡಕುಗಳ ಸ್ವರೂಪ

5.1: ಪ್ರಸ್ತಾವನೆ:

'ಕನ್ನಡವನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿ ಜಾರಿಗೆ ತರುವ ಹೊಣೆ ಹೊತ್ತ ಸರಕಾರ ಈವರೆಗೂ ಅದನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಿಲ್ಲವೆಂಬ ಮಾತನ್ನು ನಾವು ಮೇಲೆ ಆಗಾಗ ಕೇಳುತ್ತಿರುತ್ತೇವೆ. ಇದು ಸರಕಾರದಲ್ಲಿ ಇರುವ ಇಚ್ಛಾಶಕ್ತಿಯ ಕೊರತೆ ಎಂಬ ಟೀಕೆಯನ್ನು ಕೇಳುತ್ತೇವೆ. ಆದರೆ ಏಕೆ ಹೀಗೆ ಕನ್ನಡದ ಅನುಷ್ಠಾನ ಪೂರ್ಣ ಪ್ರಮಾಣದಲ್ಲಿ ಆಗಿಲ್ಲ ಎಂಬುದನ್ನು ಸರಿಯಾದ ಚೌಕಟ್ಟಿನಲ್ಲಿ ವಿಶ್ಲೇಷಿಸಿ ತಿಳಿಯಬೇಕಾಗಿದೆ' ಈ ಮಾತುಗಳನ್ನು ಹೇಳಿದವರು **ಕೆ.ವಿ.ನಾರಾಯಣ**. ಆದ್ದರಿಂದ ಈ ಭಾಗದಲ್ಲಿ **ಆಡಳಿತದಲ್ಲಿ** ಕನ್ನಡ ಎನ್ನುವುದು ಪೂರ್ಣವಾಗಿ ಜಾರಿಯಾಗಿಲ್ಲ. ಅದಕ್ಕಿರುವ ಬಹು ಮುಖ್ಯ ಕಾರಣವನ್ನು ಈ ಭಾಗದಲ್ಲಿ ಚರ್ಚಿಸಲಾಗುತ್ತದೆ.

ಒಂದು ರಾಜ್ಯದ ಒಟ್ಟು ಆಡಳಿತವನ್ನು ಬಿಂಬಿಸುವ ಮೊದಲ 'ಅತೆಂಟಿಕ್-ಅಧಿಕೃತ' ದಾಖಲೆಗಳೆಂದರೆ ಪ್ರಭುತ್ವವು ಹೊರಡಿಸುವ 'ರಾಜ್ಯಪತ್ರ-ಗೆಜೆಟಿಯರ್'ಗಳು. ಶಾಸನ ಸಭೆಗಳ ಚರ್ಚೆಗಳ ಮೂಲಕ ತಯಾರಾಗುವ ಈ ಗೆಜೆಟಿಯರ್‌ಗಳನ್ನು ಆಧರಿಸಿಯೇ ಆಡಳಿತದಲ್ಲಿನ ಮುಂದಿನ ಕ್ರಮಗಳು ಜರುಗಿಸಲ್ಪಡುತ್ತವೆ. ಇವಕ್ಕೆ ಅನುಸಾರವಾಗಿ, ಅನುಗುಣವಾಗಿಯೇ ಜನಾಡಳಿತಕ್ಕೆ ಪೂರಕವಾದ ಡಾಕ್ಯುಮೆಂಟುಗಳು ತಯಾರಾಗಬೇಕಾಗುತ್ತದೆ. ಏನಾಗಬೇಕು, ಯಾಕಾಗಬೇಕು, ಹೇಗಾಗಬೇಕು ಮತ್ತು ಎಷ್ಟಾಗಬೇಕು ಎನ್ನುವುದರ ಮೂಲ ಮತ್ತು ಮೊದಲ ಸೂಚಕವಾಗಿ-ಆದೇಶವಾಗಿ ಈ ರಾಜ್ಯಪತ್ರಗಳ ಪ್ರಾಮುಖ್ಯತೆ ಇರುತ್ತದೆ. ಆಡಳಿತ ಭಾಷೆಯ ವಿಚಾರದಲ್ಲಿಯೂ ಇದೇ ಮೊದಲು ಮತ್ತು ಅಂತಿಮ ಕೂಡ ಆಗಿರುತ್ತದೆ. ಕರ್ನಾಟಕ ಪ್ರಭುತ್ವವು ಆಗುಮಾಡಿರುವ ಈ ದಾರಿಗಳಲ್ಲಿಯೇ ಕನ್ನಡ ಬಳಕೆಯ ದೊಡ್ಡ ಇಕ್ಕಟ್ಟು ಎದ್ದು ಕಾಣುತ್ತದೆ. ಕರ್ನಾಟಕ ರಾಜ್ಯಪತ್ರದ ತಯಾರಿಯ ಕೆಲಸದಿಂದಲೇ ಶುರುವಾಗಿರುವ, ಆಡಳಿತದಲ್ಲಿ ಕನ್ನಡವನ್ನು ಗ್ರಹಿಸುವ ಆ ಬಿಕ್ಕಟ್ಟುಗಳು ಎಂತಹವೆಂಬುದನ್ನು ನಿಕರವಾಗಿ ಅರಿಯುವ ಪ್ರಯತ್ನ ಇಲ್ಲಿದೆ.

'ಕರ್ನಾಟಕ ರಾಜ್ಯಪತ್ರ'ವು ಒಳಗೊಳ್ಳುವ ಸಾಮಾನ್ಯ **'ವಿಷಯಸೂಚಿ'** ಹೀಗಿರುತ್ತದೆ[1]:

1. ರಾಜ್ಯ **ಸರ್ಕಾರದ ಮುಖ್ಯ ಆದೇಶಗಳು** ಹಾಗೂ ಸುತ್ತೋಲೆ ಮುಂತಾಗಿ ಎಲ್ಲಾ ಇಲಾಖೆಗಳಿಗೂ **ಸಂಬಂಧಿಸಿದ ಆದೇಶಗಳು.**

---

[1]ಕರ್ನಾಟಕ ರಾಜ್ಯಪತ್ರ-ಅಧಿಕೃತವಾಗಿ ಪ್ರಕಟಿಸಲಾದುದು-ಸಂಪುಟ 152, ಸಂಚಿಕೆ-22, ಬೆಂಗಳೂರು, ಗುರುವಾರ ಜೂನ್1, 2017(ಜ್ಯೇಷ್ಠ 11, ಶಕವರ್ಷ 1939(ಇದೇ ವಿವರಗಳನ್ನು ಕನ್ನಡದ ಜೊತೆಗೆ ಇಂಗ್ಲಿಶಿನಲ್ಲಿಯೂ ಪ್ರಕಟಗೊಳಿಸಲಾಗಿರುತ್ತದೆ)

2. ನೇಮಕಗಳು, ಸ್ಥಳ ನೇಮಕಗಳು ವರ್ಗಾವಣೆಗಳು, ರಜೆ ಮತ್ತು ಅಧಿಕಾರಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು.
3. ಶಾಸನಬದ್ಧವಲ್ಲದ ಆದರೆ ಜಮೀನು ಸಂಗ್ರಹಣ ಶಾಸನದ ಮೇರೆಗೆ ಹೊರಡಿಸಿದ ಅಧಿಸೂಚನೆಗಳ ಸಹಿತವಾಗಿ ಸರ್ಕಾರದ ಅಧಿಸೂಚನೆಗಳು, ಇಲಾಖೆಗಳ ಮುಖ್ಯಾಧಿಕಾರಿಗಳಿಂದ ಅಧಿಸೂಚನೆಗಳು, ಸ್ಥಳೀಯ ಪ್ರಾಧಿಕಾರ ಇಲಾಖೆಗೆ ಸಂಬಂಧಪಟ್ಟ ಅಧಿಸೂಚನೆಗಳು, ಋತುಮಾನ ಸಮಾಚಾರಗಳು ಮತ್ತು ಪೇಟೆಯ ಆಗಾಗಿನ ಧಾರಣವಾಸಿಗಳು.
4. ಕೇಂದ್ರದ ವಿಧೇಯಕಗಳು ಮತ್ತು ಅವುಗಳ ಮೇಲೆ ಬಂದತಹ ಪರಿಶೀಲನಾ ವರದಿಗಳು, ಕೇಂದ್ರದ ಅಧಿನಿಯಮಗಳು, ಕೇಂದ್ರ ಸರ್ಕಾರದವರು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ಶಾಸನಬದ್ಧ ಆದೇಶಗಳು ಹಾಗೂ ರಾಷ್ಟ್ರಪತಿಯವರಿಂದ ಅನುಮೋದನೆಗೊಂಡು, ರಾಜ್ಯ ಸರ್ಕಾರದಿಂದ ಪುನಃ ಪ್ರಕಟವಾಗುವ ಆದೇಶಗಳು.
5. ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ನಿರೂಪಿತವಾದ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಹೊರಡಿಸಿರುವ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿರುವ ಆದೇಶಗಳು.
6. ಸರ್ಕಾರ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು.
7. ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.
8. ವಿಶೇಷ ರಾಜ್ಯಪತ್ರಗಳು–ವಾರಾಂತ್ಯದಲ್ಲಿ ಪ್ರಕಟಗೊಂಡ ವಿಶೇಷ ರಾಜ್ಯಪತ್ರಗಳು

ಇವು '**ಕರ್ನಾಟಕ ರಾಜ್ಯಪತ್ರ**'ದ ಯಾದಿ. ಇವುಗಳಲ್ಲಿ ಬೋಲ್ಡ್ ಮಾಡಿದ ಪದಗಳು ಸಂಸ್ಕೃತ ಪದಗಳೇ ಆಗಿವೆ ಎನ್ನುವುದನ್ನು ಗಮನಿಸಬಹುದು. ಉಳಿದ ಪದಗಳಲ್ಲಿ ಅನೇಕವು ಸಂಸ್ಕೃತದಿಂದ ಬಂದು ಕನ್ನಡಕ್ಕೆ ಹೊಂದಿಕೊಂಡವುಗಳಾಗಿವೆ. ಈ ನಿಟ್ಟಿನಿಂದ ಉಳಿದ ಕನ್ನಡ ಪದಗಳು ಎಷ್ಟು ಎಂದು ಸರಳವಾಗಿಯೇ ಗ್ರಹಿಸಬಹುದಾಗಿದೆ.

'ಕರ್ನಾಟಕ ರಾಜ್ಯಪತ್ರ'ದಲ್ಲಿನ ಯಾವುದೇ ಸಂಗತಿಗಳನ್ನು ನೋಡಿದರೂ ಅಲ್ಲಿ ಕಾಣಿಸುವ ಕನ್ನಡದ್ದೇ ಪದಗಳು ಶೇಕಡ 20ನ್ನು ಮೀರಲಾರದು ಅನಿಸುತ್ತದೆ. ಸಾಮಾನ್ಯವಾದ ಈ ಉದಾಹರಣೆಗಳನ್ನು ಗಮನಿಸಿ;

1. ಕೆ.ಸಿ.ಎಸ್ ನಿಯಮದನ್ವಯ ಕೇಂದ್ರ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುವಾಗ ಹತರಾದ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಮಾಜಿ ಸೈನಿಕ ಮಕ್ಕಳಿಗೆ ವಯೋಮಿತಿ ಸಡಿಲಿಕೆ ಸಹಿಷ್ಣುತೆ ಪರೀಕ್ಷೆ ಹಾಗೂ ದೇಹದಾರ್ಢ್ಯತೆ ಪರೀಕ್ಷೆಯಲ್ಲಿ ಯಾವುದೇ ತರಹದ ವಿನಾಯಿತಿಯನ್ನು ನೀಡಲಾಗುವುದಿಲ್ಲ. ಕರ್ತವ್ಯ ನಿರ್ವಹಿಸುತ್ತಿದ್ದ ಕೇಂದ್ರ ಸಶಸ್ತ್ರದಳದ ಅಧಿಕಾರಿಗಳಿಂದ ಅವಲಂಬಿತ ಪ್ರಮಾಣ ಪತ್ರ ಮತ್ತು ಸೈನಿಕ ಬೋರ್ಡ್‌ನಿಂದ ಪ್ರಮಾಣ ಪತ್ರವನ್ನು ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಪಡೆದಿಟ್ಟುಕೊಂಡಿರತಕ್ಕದ್ದು. (52 ಪೂರ್ಣ ಪದಗಳಲ್ಲಿ 10 ಕನ್ನಡ ಪದಗಳು)

2. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು. (ಇದರಲ್ಲಿ 3 ಪೂರ್ಣ ಪದಗಳು ಮಾತ್ರ ಕನ್ನಡ)

3. ಪಾರದರ್ಶಕತೆಗಾಗಿ ಮೇಲೆ ಹೇಳಿದ ಎಲ್ಲಾ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯನ್ನು ವೀಡಿಯೋಗ್ರಫಿ ಅಥವಾ ಸಿಸಿ ಟಿವಿ ಮೂಲಕ ಸೆರೆಹಿಡಿಯಲಾಗುವುದು.

4. ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಪದನಾಮವನ್ನು 'ಪ್ರಾಥಮಿಕ ಶಾಲಾ ಶಿಕ್ಷಕರು' ಎಂದು ಪದನಾಮೀಕರಿಸಿದೆ. ಈ ವೃಂದವು ಎರಡು ವರ್ಗಗಳನ್ನು ಒಳಗೊಂಡಿರುತ್ತದೆ.

5. ಕನ್ನಡ ಭಾಷಾ ಕಲಿಕೆ ಅಧಿನಿಯಮ ...ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸೆಕ್ಷನ್–3ರಲ್ಲಿ ವಿಧಿಸಿದಂತೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿವರೆಗೆ ಹಂತ ಹಂತವಾಗಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆ

ಅಥವಾ ದ್ವಿತೀಯ ಭಾಷೆಯನ್ನಾಗಿ ಕಡ್ಡಾಯವಾಗಿ ಬೋಧಿಸುವುದನ್ನು ಖಚಿತಪಡಿಸಿಕೊಳ್ಳಲು ಈ ಕೆಳಕಂಡ ಅಧಿಕಾರಿಗಳನ್ನು ಸಕ್ಷಮ ಪ್ರಾಧಿಕಾರಿಯಾಗಿ ನೇಮಿಸಿದೆ.

6. ಈ ಅಧಿಸೂಚನೆಯ ಮೂಲಕ ಕಲಬುರ್ಗಿ ಮಹಾನಗರಪಾಲಿಕೆಯ ಕರಡು ವಾರ್ಡ್‌ವಾರು ಪುನರ್‌ವಿಂಗಡಣಾ ಮಾಹಿತಿಯನ್ನು ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಲಾಗಿದೆ. ಈ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದು. ಈ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು ಅದನ್ನು ಲಿಖಿತದಲ್ಲಿ ಕಾರಣ ಸಹಿತವಾಗಿ ದಾಖಲೆಗಳೊಂದಿಗೆ ನಿಗದಿತ ದಿನಾಂಕಕ್ಕೆ ಮೊದಲು ಕಲಬುರ್ಗಿ ಜಿಲ್ಲಾಧಿಕಾರಿರವರಿಗೆ ಸಲ್ಲಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಆಡಳಿತದ ಈ ಮೇಲಿನ ವಿವರಗಳನ್ನು ನೋಡಿದರೂ ಸರಕಾರದ ಬರೆಹದಲ್ಲಿನ ಕನ್ನಡ ಯಾವ ಬಗೆಯದು? 'ಸಂಸ್ಕೃತ'ಕ್ಕೆ ಯಾವ ಮಟ್ಟದಲ್ಲಿ ಅವಲಂಬಿತರಾಗಿದ್ದೇವೆ ಎನ್ನುವುದು ತಿಳಿಯುತ್ತದೆ. ಶೇಕಡ 80ಕ್ಕಿಂತಲೂ ಹೆಚ್ಚು ಸಂಸ್ಕೃತವೇ ಆಡಳಿತ ಕನ್ನಡದ ಗುಣವಾಗಿರುವುದು ಎದ್ದು ಕಾಣುತ್ತದೆ[2]. ಇದು ಉದಾಹರಣೆಗಾಗಿ ಆಡಳಿತದ ಮೊದಲ ದಾಖಲೆಯಾಗಿರುವ 'ರಾಜ್ಯಪತ್ರ'ದ ತುಣುಕು ಮಾತ್ರ.

1963ರಲ್ಲಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿರುವ 'ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ'ವು ಆಡಳಿತದಲ್ಲಿ ಕನ್ನಡದ ಬಳಕೆಯನ್ನು ಹೀಗೆ ಸೂಚಿಸಿಕೊಂಡಿದೆ;

- ಸರ್ಕಾರಿ ಉದ್ದೇಶಗಳಿಗಾಗಿ ಕನ್ನಡ ಭಾಷೆಯ ಬಳಕೆ.
- ರಾಜ್ಯ ವಿಧಾನಮಂಡಲದ ವ್ಯವಹಾರ ನಿರ್ವಹಣೆಗೆ ಇಂಗ್ಲಿಶ್ ಬಳಕೆ.
- ಇಂಗ್ಲಿಶಿನಲ್ಲಿ ದಾಖಲು ಮಾಡಿ ಆನಂತರದಲ್ಲಿ ಕನ್ನಡಕ್ಕೆ ಅನುವಾದಿಸಿಕೊಂಡು ಪ್ರಕಟಿಸುವುದು.
- ಇಂಗ್ಲಿಶ್ ಮತ್ತು ಕನ್ನಡ ಭಾಷೆಗಳಲ್ಲಿನ ವಿವರಗಳಲ್ಲಿ ಗೊಂದಲವುಂಟಾದರೆ ಆಗ ಕನ್ನಡ ಅನುವಾದವನ್ನೇ ಅಧಿಕೃತವೆಂದು ತಿಳಿಯುವುದು (ರಾಜ್ಯಪಾಲರ ಅನುಮತಿ ಪಡೆದು ಅನುವಾದಿಸಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅನುವಾದ ಮಾತ್ರ ಅಧಿಕೃತ).

---

[2] ಕರ್ನಾಟಕ ರಾಜ್ಯಪತ್ರ ಅಧಿಕೃತವಾಗಿ ಪ್ರಕಟಿಸಲಾದುದು ಸಂಪುಟ 152, ಸಂಚಿಕೆ 22, ಬೆಂಗಳೂರು

[ಈ ಅಧಿನಿಯಮವನ್ನು 1982ರಲ್ಲಿ ತಿದ್ದುಪಡಿಗೆ ಒಳಪಡಿಸಿದ ಸನ್ನಿವೇಶದಲ್ಲಿ ಕೂಡ ರಾಜ್ಯ ವಿಧಾನಮಂಡಲದ ವ್ಯವಹಾರ ನಿರ್ವಹಣೆಗೆ ಇಂಗ್ಲಿಶನ್ನು ಉಳಿಸಿಕೊಳ್ಳಲಾಗಿದೆ.ಕನ್ನಡದ ಜೊತೆಗೆ ಇಂಗ್ಲಿಶ್ ಭಾಷೆಯ ಬಳಕೆಯನ್ನು ಮುಂದುವರೆಸಬಹುದೆಂದು ಹೇಳಲಾಗಿದೆ.]

ಆ ಹೊತ್ತಿನಿಂದ ಇವತ್ತಿನವರೆಗೂ ಆಡಳಿತದಲ್ಲಿ ಕನ್ನಡವನ್ನು ಜಾರಿಗೊಳಿಸುವ ಬಗೆಗೆ ಅನೇಕ ಚರ್ಚೆಗಳು ನಡೆದಿವೆ. ನೂರಾರು ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಹುಟ್ಟುಹಾಕಲಾಗಿದೆ. ಆದರೂ ಆಡಳಿತದಲ್ಲಿ ಕನ್ನಡ ಬಳಕೆಯ ಹಿನ್ನಡೆಗೆ ಕಾರಣಗಳೇನು? ಎನ್ನುವ ಪ್ರಶ್ನೆಯನ್ನು ಯೋಚಿಸುತ್ತಾ ಹೋದರೆ, ಕನ್ನಡ ಬಳಕೆಯ ಪ್ರಜ್ಞೆಯಲ್ಲಿಯೇ ತೊಡಕುಗಳಿರುವುದು ತಿಳಿಯುತ್ತದೆ. ಅದೇನು ಎನ್ನುವುದನ್ನು ಮತ್ತಷ್ಟು ನೋಡೋಣ.

ಪ್ರಭುತ್ವವು ತಾನು ಆಡಳಿತ ನಡೆಸುವ ವ್ಯಾಪ್ತಿಯಲ್ಲಿ ಬೇರೆ ಬೇರೆ ಇಲಾಖೆ ಮತ್ತು ಸಚಿವಾಲಯಗಳ ಮೂಲಕ ಆ ವ್ಯಾಪ್ತಿಯ ಜನರೊಂದಿಗಿನ ವ್ಯವಹಾರಕ್ಕಾಗಿ ಬಳಸುವ ಭಾಷೆಯನ್ನು ಆಡಳಿತಭಾಷೆ ಎಂದು ಕರೆಯಲಾಗುತ್ತದೆ. ಅಂದರೆ, ಸರ್ಕಾರಗಳು ಹೊರಡಿಸುವ ಕಾಯಿದೆ ಕಾನೂನುಗಳು, ಹೊರಡಿಸುವ ಸುತ್ತೋಲೆ, ಆದೇಶಗಳು, ನೀಡುವ ನಿರ್ದೇಶನಗಳು, ಜನರ ಅನುಕೂಲಕ್ಕೆಂದು ಸರ್ಕಾರದೊಂದಿಗಿನ ಸಂಪರ್ಕಕ್ಕಾಗಿ ಆಗುಮಾಡುವ ಅರ್ಜಿ ನಮೂನೆಗಳು, ದಸ್ತಾವೇಜುಗಳು, ದಾಖಲೆ ಪತ್ರಗಳು, ಕಡತಗಳ ಬರವಣಿಗೆಗಳು ಮೊದಲಾಗಿ, ಭಾಷಿಕ ನಡೆಯ ಆಡಳಿತದ ಎಲ್ಲವೂ ಆಯಾಯ ಪ್ರಾದೇಶಿಕ ಭಾಷೆಯಲ್ಲಿ ಮುನ್ನೆಲೆಯನ್ನು ಪಡೆದುಕೊಂಡಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕನ್ನಡ ನಾಡಾಗಿರುವ ಕರ್ನಾಟಕ ಕನ್ನಡವನ್ನು ನೆಮ್ಮಿಕೊಂಡಿದೆ. ಏಕೀಕರಣದ ನಂತರದ ಬೆಳವಣಿಗೆಯಲ್ಲಿ ಕನ್ನಡದ ಮೂಲಕ ಆಡಳಿತ ಮಾಡುವುದನ್ನು ಜನ ಬಯಸುತ್ತಾ ಬಂದಿದ್ದಾರೆ. ಜನರ ಈ ಬಯಕೆಯನ್ನು ಈಡೇರಿಸುವ ಪ್ರಯತ್ನಗಳೂ ಕಾಣಿಸುತ್ತವೆ ಎನ್ನುವುದೂ ನಿಜ. ಆದರೆ, ಈ ಪ್ರಯತ್ನಗಳು ಹೇಗಿವೆ, ಇದು ಎಷ್ಟರ ಮಟ್ಟಿಗೆ ಈಡೇರಿದೆ ಎನ್ನುವ ಅನುಮಾನಗಳು ಇವತ್ತಿಗೂ ಜೀವಂತವಾಗಿಯೆ ಇವೆ. ಕನ್ನಡ ಸಂಘಟನೆಗಳ ಬೀದಿ ಹೋರಾಟಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸರಕಾರಿ ಕಚೇರಿಗಳ ಮೇಲೆ ನಡೆಸುವ ದಿಡೀರ್ ಬೇಟಿ/ದಾಳಿಗಳನ್ನು ಗ್ರಹಿಸಿದರೆ ಇದು ತಿಳಿಯುತ್ತದೆ. ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳ ಅವಲಂಬನೆ ಕನ್ನಡ ಆಡಳಿತದಲ್ಲಿ ಬಲವಾಗಿ ಬೇರೂರಿರುವುದರಿಂದಾಗಿ ಕನ್ನಡದಲ್ಲಿ ಆಡಳಿತ ಎನ್ನುವುದು ಪ್ರಭುತ್ವದ ಹಲವು ಪ್ರಯತ್ನಗಳ ನಡುವೆಯೂ ಮರೀಚಿಕೆಯಾಗಿಯೇ ಉಳಿದುಬಿಟ್ಟಿದೆ. ಈ ನಿಟ್ಟಿನಲ್ಲಿ ಸಂಸ್ಕೃತ ಭಾಷೆಯು

ಆಡಳಿತ ಕನ್ನಡದ ವಿನ್ಯಾಸದಲ್ಲಿ ಹೇಗೆಲ್ಲಾ ದೆವ್ವದಂತೆ ಹರಡಿಕೊಂಡಿದೆ ಎನ್ನುವುದನ್ನು ಸೂಕ್ಷ್ಮವಾಗಿ ಬಿಡಿಸಿ ನೋಡಬಹುದಾಗಿದೆ.

1. ಆಡಳಿತದ ನಿರೂಪಣೆಯಲ್ಲಿ ಬಳಕೆಯಾಗುತ್ತಿರುವ ಸಂಸ್ಕೃತ:

'ಅಧಿಸೂಚನೆ, ಅಧಿನಿಯಮ, ಅಧ್ಯಾದೇಶ, ಋತುಮಾನ ಸಮಾಚಾರ, ಧಾರಣವಾಸಿ, ವಿಧೇಯಕ, ಅನುಷ್ಠಾನ, ಭಾಗಶಃ, ಯಥಾವತ್, ಆಜ್ಞಾನುಸಾರ, ಭ್ರಷ್ಟಾಚಾರ, ಅಭಿಯಾಚನೆ, ಆಧ್ಯರ್ಪಣೆ(ಆಧ್ಯರ್ಪಿಸಿಕೊಳ್ಳಬೇಕೆಂದು), ಆಯವ್ಯಯ, ಪ್ರಕಾರ್ಯ, ಮಾಹೆಯಾನ, ಮೂಲವೃಂದ(ನಿರ್ದೇಶಕರ ಮೂಲವೃಂದ), ಸಕ್ರಮೀಕರಣ, ಪ್ರದತ್ತವಾದ ಅಧಿಕಾರ, ಮುಕ್ತ ಆಕ್ಷೇಪಣೆ, ಪ್ರಾಧಿಕಾರ, ಕಾಮಗಾರಿ, ಸಾದಿಲ್ವಾರು, ಶುಚಿತ್ವ ನಿರ್ವಹಣೆ, ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ನಿಯಮ, ಆರ್ಥಿಕ ಸಂಹಿತೆ ನಿಯಮ, ಸಹಾಯಧನ ಕಾರ್ಯಕ್ರಮ, ವಿದ್ಯುನ್ಮಾನ ವ್ಯವಸ್ಥೆ, ಸಂಚಾರ ನಿಷೇದ, ನಿಷೇಧಿಸಲಾದ ಸಂಚಾರಕ್ಕೆ ಪರ್ಯಾಯ ಮಾರ್ಗ, ಸ್ಥಿರೀಕರಣ ಆದೇಶ, ಪ್ರಮಾಣ ಪತ್ರ, ಆದೇಶಪೂರ್ವ ಜಪ್ತಿ, ಉಪಪ್ರಕರಣ, ಅಧಿಕಾರ ಪ್ರತ್ಯಾಯೋಜಿಸಿರುವ, ಕೋಷ್ಟಕ, ಅನುಸೂಚಿ, ಉಪಬಂಧ, ಚತುಃಸೀಮೆ, ಪ್ರಭಾರ ಕಾರ್ಯ, ಭತ್ಯೆ, ಅನಧಿಕೃತ ಗೈರುಹಾಜರಿ, ಕರ್ತವ್ಯವಲ್ಲದ ಅವಧಿ, ಪದೋನ್ನತಿ, ಖಾಯಂಪೂರ್ವ ಸೇವಾವಧಿ, ಲಿಖಿತ ದಂಡನಾದೇಶ, ಸಂಚಿತ ಪರಿಣಾಮ, ಅಧಿಸೂಚನೆ, ಅನುಸೂಚಿತ, ಕ್ರಮಾಧಿಕಾರ, ವಿಮೋಚನಾಧಿಕಾರ, ಸ್ವಾಮ್ಯಾಧಿಕಾರ, ವಿಕ್ರಯಪತ್ರ, ಪರಿಚ್ಛೇದ, ಸಚಿವಾಲಯ, ಸೇವಾವರ್ಗ, ಸ್ವಾಯುತ್ತ, ಜೇಷ್ಠತಮ, ಅಧಿವೇಶನ, ಋಣಪರಿಹಾರ ನಿಧಿ, ಸ್ಥಾಯಿ ನಿಯಮ, ಪರಿನಿಯಮ, ಪ್ರಾಧಿಕಾರ, ಸಂತಾನಶಕ್ತಿಹರಣ, ಉಪಪ್ರಧಾನ, ಉಪಪ್ರಕರಣ, ಪ್ರಧಾನಮುಖ್ಯ, ಉತ್ತರಜೀವಿತಾಧಿಕಾರ, ಅನುಷ್ಠಾನ, ಅಭಿವೃದ್ಧಿ, ಪ್ರಾಧಿಕಾರ, ಪ್ರಾಧಿಕಾರಿ, ಅಧಿನಿಯಮಿಸು, ಅಧಿವೇಶನ, ವಿಧೇಯಕ, ಅನುಮೋಧನೆ, ಪ್ರಖ್ಯಾಪಿಸಲಾದ, ನಿಯಮ, ವಿನಿಯಮ, ಅಧ್ಯಾದೇಶ, ಅನ್ಯಥಾ, ಅನುಚ್ಛೇದ, ಅನುಸೂಚಿ, ರಾಜಭಾಷಾ, ಉಪಬಂಧ, ವಿಧಿ, ಉಪವಿಧಿ, ವಿಧಿಮಾನ್ಯತೆ, ಅಧಿಕೃತ, ಕಾರ್ಯದರ್ಶಿ, ಉಪಕಾರ್ಯದರ್ಶಿ, ಅಧೀನ ಕಾರ್ಯದರ್ಶಿ, .. ಹೀಗೆ ಮೊದಲಾಗಿ ಸಾವಿರಾರು ಪದಗಳನ್ನು ಪಟ್ಟಿಮಾಡಿಕೊಡಬಹುದು.

2. ಆಡಳಿತದ ಹೊಣೆಗಾರಿಕೆಯ ಹೆಸರಿನಲ್ಲಿ ಸಂಸ್ಕೃತ:

'ಮಹಾಲೇಖಪಾಲ, ಸಂಕಲನಾಧಿಕಾರಿ, ಪೀಠಾಧಿಕಾರಿ, ಮಹಾನಿರ್ದೇಶಕ, ಪರಿವೀಕ್ಷಕ, ಮಹಾ ನಿರೀಕ್ಷಕ, ಕಾರ್ಯನಿರ್ವಹಣಾಧಿಕಾರಿ,ನಿರೀಕ್ಷಣಾಧಿಕಾರಿ, ಮಹಾ ನಿರೀಕ್ಷಕ, ಅಪರ

ಮುಖ್ಯಕಾರ್ಯದರ್ಶಿ, ಆಯುಕ್ತರು, ಅಭಿಯಂತರರು, ವರಿಷ್ಠಾಧಿಕಾರಿ,ದಂಡಾಧಿಕಾರಿ, ಮಾಪನಾಧಿಕಾರಿ,ಶಾಖಾಧಿಕಾರಿ, ಪ್ರಾರೂಪಕಾರ(ಸಹಾಯಕ ಪ್ರಾರೂಪಕಾರ), ಪ್ರಾಧಿಕಾರಿ, ಅಧೀನ ಕಾರ್ಯದರ್ಶಿ, ನಿಬಂಧಕ, ಅರಕ್ಷಕ, ಪ್ರಭಾರಾಧಿಕಾರಿ, ಅಧೀಕ್ಷಕ, ಅರಕ್ಷಕ, ಅಭಿಯಂತರ, ವಿದ್ಯುಚ್ಛಕ್ತಿ, ಕ್ಷೇತ್ರಾಧಿಕಾರಿ,ಸಕ್ಷಮ ಅಧಿಕಾರಿ, ಶಿಸ್ತು ಪ್ರಾಧಿಕಾರಿ, ಕಚೇರಿಗಳಲ್ಲಿನ ಅಧಿಕಾರ-ಅಧಿಕಾರಿ"ಗಳನ್ನು ಸೂಚಿಸುವ ಬಹುಮಟ್ಟಿನ ಎಲ್ಲಾ ಪದಗಳ ಬಳಕೆಯಲ್ಲಿ ಶೇ. 99ರಷ್ಟು ಸಂಸ್ಕೃತಕ್ಕೆ ಶರಣು ಹೋಗಲಾಗಿದೆ.

3. **ಆಡಳಿತ ಇಲಾಖೆಗಳ ಹೆಸರಿನಲ್ಲಿ ಸಂಸ್ಕೃತ:**

ಲೋಕೋಪಯೋಗಿ, ಆಯೋಗ, ಅರಕ್ಷಕ ಠಾಣೆ, ಆಯುಕ್ತರ ಕಛೇರಿ, ನಿಬಂಧಕರ ಕಾರ್ಯಾಲಯ, ನಿರ್ದೇಶಕರ ಕಚೇರಿ, ನಿರ್ದೇಶನಾಲಯ.

ಕರ್ನಾಟಕ ಸರಕಾರದ ಆಡಳಿತ ತರಬೇತಿ ಸಂಸ್ಥೆಯು 'ಕರ್ನಾಟಕ ನಾಗರಿಕ ಸೇವಾ ನಿಯಮಗಳು' ಹಾಗೂ 'ಕಛೇರಿ ಕಾರ್ಯವಿಧಾನಗಳು' ಎನ್ನುವ ಹೆಸರಿನ ಎರಡು ಪುಸ್ತಕಗಳನ್ನು ಸರಕಾರಿ ಸೇವೆಗೆ ಸೇರುವವರ ಉಪಯೋಗಕ್ಕಾಗಿ ಎಂದು ಪ್ರಕಟಿಸಿದೆ[3]. ಹೊಸದಾಗಿ ಸರಕಾರಿ ಸೇವೆಯಲ್ಲಿ ತೊಡಗುವವರ ಅನುಕೂಲಕ್ಕೆಂದು ಪ್ರಕಟಿಸಲಾಗಿರುವ ಈ ಪುಸ್ತಕಗಳು ಸಂಸ್ಕೃತ ಪದ, ಸಂಸ್ಕೃತಭೂಯಿಷ್ಠವಾದ ವಾಕ್ಯಗಳಿಂದ ತುಂಬಿಹೋಗಿದೆ. ಸರಕಾರಿ ಸೇವೆಯಲ್ಲಿ ತೊಡಗುವ ಯಾರಿಗೇ ಆದರೂ ಸೇವಾ ನಿಯಮಗಳ ಈ ಪುಸ್ತಕದ ಮೂಲಕ ತಮ್ಮ ಹೊಣೆಗಾರಿಕೆಯನ್ನು ಅರಿಯುವುದು ಬಹುದೊಡ್ಡ ತೊಡಕೆನಿಸಿದೆ.ಬಹುಮಟ್ಟಿಗೆ ಈ ಪುಸ್ತಕವನ್ನು ದೂರವಿರಿಸಿಯೇ ಸೇವೆಯಲ್ಲಿ ತೊಡಗುವ ಕೆಲಸ ನಡೆಯುತ್ತದೆ ಎನಿಸುತ್ತದೆ.ಈ ಪುಸ್ತಕಗಳಲ್ಲಿನ ಕೆಲವು ಸಂಗತಿಗಳನ್ನು ನೋಡಿ;

ಸಂಸ್ಕೃತ ಭೂಯಿಷ್ಠ ವಾಕ್ಯಗಳು[4]

1. ಅಧಿಕಾರ ಪ್ರಭಾರವನ್ನು ತನ್ನ ಕಾರ್ಯ ಕೇಂದ್ರಸ್ಥಾನದಲ್ಲಿಯೇ ವಹಿಸಿಕೊಡಬೇಕು.

---

[3] (1) ಕರ್ನಾಟಕ ನಾಗರೀಕ ಸೇವಾ ನಿಯಮಗಳು-1958, ಕರ್ನಾಟಕ ಸರ್ಕಾರಿ ನೌಕರರ(ವರ್ತನೆ) ನಿಯಮಗಳು-1966, ಕರ್ನಾಟಕ ಸರ್ಕಾರಿ ಸೇವಾ(ಸಿ.ಸಿ & ಎ.) ನಿಯಮಗಳು-1957 ಕೈಪಿಡಿ-ಆಡಳಿತ ತರಬೇತಿ ಸಂಸ್ಥೆ, ಮೈಸೂರು, 2010.
(2) ಕಛೇರಿ ಕಾರ್ಯವಿಧಾನಗಳು-ಆಡಳಿತ ತರಬೇತಿ ಸಂಸ್ಥೆ, ಮೈಸೂರು, 2010

[4] ಕರ್ನಾಟಕ ನಾಗರೀಕ ಸೇವಾ ನಿಯಮಗಳು-1958, ಕರ್ನಾಟಕ ಸರ್ಕಾರಿ ನೌಕರರ(ವರ್ತನೆ) ನಿಯಮಗಳು-1966, ಕರ್ನಾಟಕ ಸರ್ಕಾರಿ ಸೇವಾ (ಸಿ.ಸಿ & ಎ.) ನಿಯಮಗಳು-1957 ಕೈಪಿಡಿ-ಆಡಳಿತ ತರಬೇತಿ ಸಂಸ್ಥೆ, ಮೈಸೂರು, 2010.

2. ವರ್ಗಾವಣೆ ಸಂದರ್ಭದಲ್ಲಿ ಪ್ರಭಾರ ವಹಿಸಿಕೊಳ್ಳಬೇಕಾದ ಸರ್ಕಾರಿ ನೌಕರನು ಪೂರ್ವಭಾವಿಯಾಗಿ, ವಹಿಸಿಕೊಳ್ಳುವ ದಿನಾಂಕವನ್ನು ಪದಮುಕ್ತನಾಗಬೇಕಾದ ನೌಕರನಿಗೆ ಸೂಚಿಸಬೇಕು.
3. ಅಧಿಕಾರವನ್ನು ಪೂರ್ವಾಹ್ನದಿಂದ ವಹಿಸಿಕೊಂಡಲ್ಲಿ, ವೇತನವನ್ನು ಆ ದಿನದಿಂದಲೇ ಲೆಕ್ಕ ಹಾಕಲಾಗುವುದು.
4. ಫೀಸ್ ಆವರ್ತಕ:ಅನಾವರ್ತಕ ಆಗಿರಬಹುದು.
5. ಪ್ರಬಂಧ ಅಥವಾ ಯೋಜನೆಗಳ ಸಾರ್ವತ್ರಿಕ ಸ್ಪರ್ಧೆಗಳಲ್ಲಿ ಕೊಡಲಾದ ವಂತಿಕೆ
6. ಸೇವೆಯಲ್ಲಿರುವ ಸರ್ಕಾರದ ಸಂಚಿತ ನಿಧಿಯಿಂದ ಸಾಂದರ್ಭಿಕವಾಗಿ ಮಾಡುವ ಹೆಚ್ಚುವರಿ ಕೆಲಸಕ್ಕೆ ಪ್ರತಿಫಲರೂಪವಾಗಿ ಪಡೆಯುವ ಹಣ.
7. ಸೇವೆಯ ಮೌಲ್ಯವನ್ನು ಆಧರಿಸಿ ಸಂಭಾವನೆಯನ್ನು ನಿಗದಿಪಡಿಸಬೇಕು.
8. ಕೆಲಸವು ಶ್ರಮಸಾಧ್ಯ ಅಥವಾ ವಿಶೇಷ ಯೋಗ್ಯತೆಗಳನ್ನು ಹೊಂದಿರಬೇಕು.
9. ಧಾರಣ ಮಾಡಿದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿ.
10. ಅನ್ಯಸೇವಾ ಅವಧಿ.
11. ನಿಯುಕ್ತಿ ಆದೇಶ, ನಿರೀಕ್ಷಣಾ ಅವಧಿ.
12. ನಿಲಂಬನಾ ಅವಧಿಯೆಂದು ದೃಢೀಕರಿಸಲ್ಪಟ್ಟ ನಿಲಂಬನಾ ಅವಧಿ.

ಕನ್ನಡವು ಕಾಲದಿಂದ ಕಾಲಕ್ಕೆ ಸಂಸ್ಕೃತದ ಹಿಡಿತಕ್ಕೆ ಸಿಕ್ಕಿರುವುದಕ್ಕೆ ದೊಡ್ಡ ಇತಿಹಾಸವೇ ಇದೆ ಎನ್ನುವುದು ನಿಜ. ಆದರೆ, ಕನ್ನಡ ನುಡಿಯಾಡುಗರ ಜಾಗಗಳನ್ನೇ ಗುರಿಯಾಗಿಸಿಕೊಂಡು ರಾಜ್ಯದ ವಿಂಗಡಣೆಯಾದ ಮೇಲೆಯೂ ಸಂಸ್ಕೃತದ ಹಿಡಿತದಲ್ಲೆ ಇರಬೇಕೆಂಬ ಅನಧಿಕೃತ ಒತ್ತಾಯವೊಂದು ಕೆಲಸ ಮಾಡಿರುವುದು ಈ ಮೇಲಿನ ಉದಾಹರಣೆಗಳಲ್ಲಿ ಎದ್ದು ಕಾಣುತ್ತದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಜಾತಿ ವ್ಯವಸ್ಥೆಯಲ್ಲಿ ಮೇಲಿನವರೆಂದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಬ್ರಾಹ್ಮಣ ವರ್ಗವು ಆಧುನಿಕ ಕಾಲದ ಆಡಳಿತ ಹೊಣೆಗಳಲ್ಲಿಯೂ ಅಧಿಕಾರವನ್ನು ನಡೆಸುವ ಅವಕಾಶವನ್ನು ಹೆಚ್ಚುಹೆಚ್ಚಿಗೆ ಅನುಭವಿಸಿದ್ದರ ಪರಿಣಾಮ ಇದು. ಬ್ರಾಹ್ಮಣ ವರ್ಗವು ದೇಶಿಭಾಷೆಗಳ ನೆಪದಲ್ಲಿ ಸಂಸ್ಕೃತವನ್ನು ಕಾಪಾಡಿಕೊಳ್ಳುತ್ತಾ ಬರುತ್ತಿರುವುದು ನೆನ್ನೆಮೊನ್ನೆಯ ವಿಚಾರವೇನೂ ಅಲ್ಲ. ಆದರೆ, ಇದರಿಂದಾಗಿ ಕನ್ನಡದಂತಹ ಜನಭಾಷೆಯನ್ನು ಕನ್ನಡಿಗರ ಬಳಕೆಯಿಂದಲೇ ಹೊರಗಿಡುವ ಕೆಲಸವು ದೊಡ್ಡದಾಗಿ ಆಗಿದೆ ಎನ್ನುವುದು ಬೇರೆಲ್ಲಾ ಕಡೆಗಿಂತಲೂ ಹೆಚ್ಚಾಗಿ ಆಡಳಿತದ ಸನ್ನಿವೇಶದಲ್ಲಿಯೇ ಎದ್ದು ಕಾಣುತ್ತದೆ.

ಈಗಾಗಲೇ ಸಂಶೋಧನೆಗಳು ತಿಳಿಸಿರುವಂತೆ ಸಂಸ್ಕೃತವು ಅಗಾಧವಾದ ಸಾಹಿತ್ಯವನ್ನು ಹೊಂದಿದ್ದರೂ ಜನಬಳಕೆಯಲ್ಲಿ ಇಲ್ಲದಿರುವುದರಿಂದಾಗಿ ಜಗತ್ತಿನ ಮೃತಭಾಷೆಗಳ ಪಟ್ಟಿಯಲ್ಲಿ ಇರುವಂತಹುದು. ಅಲ್ಲದೆ, ಭಾಷಾ ಕುಟುಂಬಗಳ ವಿಂಗಡಣೆಯಲ್ಲಿ ಸೂಚಿಸಿರುವಂತೆ ಸಂಸ್ಕೃತ ಭಾಷೆಯು **'ಇಂಡೋ-ಯುರೋಪಿಯನ್'** ಎಂಬ ಭಾಷಾ ಕುಟುಂಬಕ್ಕೆ ಸೇರಿರುವ ಭಾಷೆಯಾಗಿದೆ. ಕನ್ನಡವು ಅದಕ್ಕಿಂತ ತೀರ ಬೇರೆಯೆ ಆಗಿರುವ **'ದ್ರಾವಿಡ ಭಾಷಾ ಕುಟುಂಬ'**ದ ಭಾಷೆ ಎಂಬುದು ಸಾಬೀತುಗೊಂಡಿರುವಂತಹುದು. ಈ ಕುರಿತಾಗಿ ಈಗಾಗಲೇ ನೂರಾರು ಬರಹಗಳು, ಪುಸ್ತಕಗಳು ಬಂದಿವೆ. ಆದರೆ, ಸಂಸ್ಕೃತವಿಲ್ಲದೆ ಕನ್ನಡ ಬದುಕದು, ಹೆಚ್ಚು ಹೆಚ್ಚಾಗಿ ಸಂಸ್ಕೃತವನ್ನು ಬಳಸಿಕೊಂಡರೆ ಕನ್ನಡ ಉದ್ಧಾರವಾಗುತ್ತದೆ; ಸಂಸ್ಕೃತವು ಕನ್ನಡವನ್ನು ಕೈಹಿಡಿದು ನಡೆಸುತ್ತದೆ ಎಂಬ ಸಂಸ್ಕೃತ ವಾರಸುದಾರರ ಪ್ರಚಾರವನ್ನೆ ಅಧಿಕೃತವೆಂದು ನಂಬಿಕೊಂಡದ್ದರಿಂದಾಗಿ ಕನ್ನಡ ಬರೆಹದ ತುಂಬಾ ಸಂಸ್ಕೃತ ಪದಗಳೇ ತುಂಬಿ ಹೋಗಿ ಕನ್ನಡವು ಎಡೆಯಾಡಲು ಜಾಗವಿಲ್ಲದಂತಾಗಿದೆ. ಒಂದು ವಾಕ್ಯ, ಒಂದು ಪ್ಯಾರಾ, ಒಂದು ಪುಟವಷ್ಟೇ ಯಾಕೆ, ಇಡೀ ಪುಸ್ತಕವೇ ಸಂಸ್ಕೃತಮಯವಾಗಿರುವುದು 'ಕನ್ನಡ ರಾಜ್ಯಪತ್ರಗಳು (ಗೆಜೆಟಿಯರ್), ಕಚೇರಿ ಅನುಕೂಲಕ್ಕಾಗಿ ಹೊರಟಿಸಿರುವ ಪುಸ್ತಕಗಳು, ಆಡಳಿತ ತರಬೇತಿ ಪುಸ್ತಕಗಳಲ್ಲಿ ಎದ್ದು ಕಾಣುತ್ತದೆ. ಅಷ್ಟೇಕೆ ಕನ್ನಡ ಅನುಷ್ಠಾನಕ್ಕಾಗಿ ಹೊರಡಿಸಿರುವ ಪ್ರತಿಯೊಂದು ಆದೇಶ, ಸುತ್ತೋಲೆಗಳಲ್ಲಿಯೂ ಸಂಸ್ಕೃತವೇ ತನ್ನ ಭಾಷಾನಾಲಗೆಯನ್ನು ಚಾಚಿಕೊಂಡಿದೆ ಎಂದು ಹೇಳುವಂತಾಗಿಬಿಟ್ಟಿದೆ.

ಬೇರೆ ಬೇರೆ ಭಾಷೆಗಳಿಂದ ಪದಗಳನ್ನು ಸ್ವೀಕರಿಸಿಯೇ ಒಂದು ಭಾಷೆ ಬೆಳೆಯುತ್ತದೆ ಎಂದು ಹೇಳಲಾಗುತ್ತದೆ.ಇದು ಭಿನ್ನ ಸಂಸ್ಕೃತಿಯ ಸಂಪರ್ಕಗಳ ಸನ್ನಿವೇಶದಲ್ಲಿ ಮಾತ್ರವೇ ದಿಟ. ಆದರೆ, ಸಂಸ್ಕೃತಭಾಷೆಯ ಪ್ರಶ್ನೆ ಆ ಬಗೆಯದಲ್ಲ[5]. ಆ ಭಾಷೆ ಮತ್ತು ಅದರ ಸಂಸ್ಕೃತಿಗೆ ಬೇರೆ ಎನಿಸುವ ನೆಲ ಮತ್ತು ನೆಲೆ ಎರಡೂ ಇಲ್ಲ. ಆ ಭಾಷೆಯಾಡುಗರು ಇಲ್ಲ. ಭಾರತೀಯ ಹೆಸರಿನಲ್ಲಿ ಅದನ್ನು ಉಳಿಸಿಕೊಳ್ಳಬೇಕೆಂಬ ಬ್ರಾಹ್ಮಣ್ಯದ ಸಂಪ್ರದಾಯವಾದಿ ಬಯಕೆಯಿಂದಾಗಿಯೇ ಕನ್ನಡದಂತಹ ದೇಶಿಭಾಷೆಗಳು ಹೇರಿಕೊಂಡು ನರಳುವಂತಾಗಿದೆ.

[5]ಕನ್ನಡವನ್ನು ಮ್ಲೇಚ್ಚನುಡಿಯೆಂಬುದಾಗಿ ಮತ್ತು ಸಂಸ್ಕೃತವನ್ನು ದೇವನುಡಿಯೆಂಬುವುದಾಗಿ ಪರಿಗಣಿಸುತ್ತಿದ್ದ ಮೇಲ್ವರ್ಗದ ಕನ್ನಡ ಬರಹಗಾರರಿಗೆ ಸಂಸ್ಕೃತದ ಮೇಲಿದ್ದ ಕುರುಡು ಅಬಿಮಾನ ಮತ್ತು ಕನ್ನಡದ ಮೇಲಿದ್ದ ಕೀಳರಿಮೆಗಳೇ ಕನ್ನಡ ಬರಹದಲ್ಲಿ ಸ್ಪೆಲ್ಲಿಂಗ್ ಸಮಸ್ಯೆ ತಲೆದೋರಲು ಮುಕ್ಯ ಕಾರಣ. ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳನ್ನು ನಾವು ನಮ್ಮ ಬರಹಗಳಲ್ಲಿ ಆದಶ್ಟು ಕಡಿಮೆ ಬಳಸಬೇಕು ಮತ್ತು ಬಳಸಬೇಕಿರುವಲ್ಲೆಲ್ಲ ಅವನ್ನು ನಮ್ಮ ಉಚ್ಚಾರಣೆಗೆ ಅನುಸಾರವಾಗಿ ಬರಹದಲ್ಲೂ ಬದಲಾಯಿಸಿಕೊಳ್ಳಬೇಕು–ಡಿ.ಎನ್. ಶಂಕರ ಬಟ್ ರವರ ಕನ್ನಡ ಬರಹವನ್ನು ಸರಿಪಡಿಸೋಣ–2006.

ಇದು ನುಡಿಯರಿಗರಾದ ಡಿ.ಎನ್.ಶಂಕರಭಟ್ಟರು ಹೇಳುವಂತೆ 'ಅಡ್ಡಿ ನುಡಿಯ ಮೇಲಿನ ಅಜ್ಞಾನದಿಂದ ಮಾತ್ರವೇ ಹುಟ್ಟಿಕೊಂಡಿದೆ. ಯಾಕೆಂದರೆ, ಎರವಲಾಗಿ ಪಡೆದ ಸಂಸ್ಕೃತ ಪದಗಳನ್ನು ಸಂಸ್ಕೃತದಲ್ಲಿರುವ ಹಾಗೆಯೇ ಬರೆಯುವುದು ಎಂದಿಗೂ ನಮ್ಮ 'ಸಂಸ್ಕೃತಿ' ಯಾಗಲಾರದು. ಅದು ಬರಿಯ ಕುರುಡು ಅನುಕರಣೆ ಮಾತ್ರ ಆಗಬಲ್ಲುದು'[6].

ಹಾಗಿದ್ದರೆ ಸಂಸ್ಕೃತ ಪದಗಳ ಬಳಕೆ ಕನ್ನಡದ ಸನ್ನಿವೇಶದಲ್ಲಿ ತಪ್ಪೇ? ಎನ್ನುವ ಪ್ರಶ್ನೆಯೊಂದು ಎದುರಾಗುತ್ತದೆ. ಈ ಪ್ರಶ್ನೆಗೆ ಕನ್ನಡ ಬರೆಹದ ಪರಂಪರೆ ಉತ್ತರಗಳನ್ನು ಕೊಟ್ಟುಕೊಂಡಿದೆ. ಸಾವಿರ ವರುಶಗಳ ಕನ್ನಡ ಬರೆಹದ ಪರಂಪರೆಯ ಇತಿಹಾಸದಲ್ಲಿ ಅಗತ್ಯವೆನಿಸಿದ್ದನ್ನು ಕನ್ನಡ ಭಾಷೆಯು ಸಂಸ್ಕೃತದಿಂದಲೂ ತೆಗೆದುಕೊಂಡಿರುವ ಬಗೆಯಲ್ಲಿ ಇದು ಕಾಣುತ್ತದೆ. ಸಂಸ್ಕೃತ ಭಾಷೆಯ ಪದಗಳನ್ನು ಸ್ವೀಕರಿಸುವಾಗ ಮಾಡಿಕೊಂಡಿರುವ ಹಲವಾರು ರೀತಿಯ ಬದಲಾವಣೆಗಳು ನಮ್ಮದೇ ಆದ ಕನ್ನಡ ಸಂಸ್ಕೃತಿಯನ್ನು ಸೂಚಿಸುತ್ತದೆ. ಕನ್ನಡ ಬರಹ ಸಂಸ್ಕೃತದ ದಾಸ್ಯದಲ್ಲಿ ಸಿಕ್ಕಿಬೀಳದೆ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಕನ್ನಡ ಜಾಯಮಾನಕ್ಕೆ ಹೊಂದಿಸಿಕೊಂಡಿದೆ. ಹೀಗೆ ಹೊಂದಿಸಿಕೊಳ್ಳುವಾಗ ಕನ್ನಡವಾಗಿ ಕನ್ನಡ ನುಡಿಯಾಡುಗರನ್ನು ಮುಟ್ಟುವ ಮೂಲಕ ಕನ್ನಡವೇ ಎನಿಸಿಬಿಟ್ಟಿದೆ. ಇದಕ್ಕೆ ಕನ್ನಡ ಮಾತು ಮತ್ತು ಬರೆಹ ಎರಡರಲ್ಲೂ ಉದಾಹರಣೆಗಳು ಸಿಗುತ್ತವೆ[7].

ಸ್ವಾತಂತ್ರ್ಯಾ ನಂತರದಲ್ಲಿ ಆಡಳಿತಕ್ಕೆ ನಮ್ಮದೇ ನಾಡುಗಳ ಭಾಷೆಯನ್ನು ರೂಡಿಸಿಕೊಳ್ಳಬೇಕೆಂದು ಸಂವಿಧಾನಿಕವಾದ ಸೂಚನೆ ಇರುವಾಗಲೂ ಜನದೂರವಾಗಿರುವ ಸಂಸ್ಕೃತದ ಬೆನ್ನುಬೀಳಬೇಕಾದದ್ದರ ಅಗತ್ಯವಾದರೂ ಏನು ಎನ್ನುವ ಸವಾಲು ದೊಡ್ಡದಾಗಿದೆ. ಆಧುನಿಕ ಸನ್ನಿವೇಶಕ್ಕೆ ತಕ್ಕಂತೆ ಕನ್ನಡದಲ್ಲಿ ಹೊಸ ಪದಗಳನ್ನು ಉಂಟು ಮಾಡಬೇಕಾದಾಗಲೆಲ್ಲ ಸಂಸ್ಕೃತಕ್ಕೇನೇ ಮೊರೆ ಹೋಗಲಾಗಿದೆ. ಇದಕ್ಕಾಗಿ ಕನ್ನಡದವೇ ಆದ ಪದಗಳನ್ನು ಬಳಸಲು ಸಾದ್ಯವಿದ್ದರೂ ಅಂತಹ ಪ್ರಯತ್ನದಿಂದ ದೂರ ಸರಿಯಲಾಗಿದೆ. 'ಹಿಂದಿನ ಕಾಲದಲ್ಲಿ ಮಹನೀಯರಾದವರು ದೇಶ ಭಾಷೆಯ ಮೂಲಕ ಜನರನ್ನು ಬದುಕಿಸಬೇಕೆಂದು ಯೋಚನೆ ಮಾಡಿ ಕನ್ನಡವನ್ನು ಪುಷ್ಟಿಗೊಳಿಸುವುದಕ್ಕೆ, ಕನ್ನಡದ ಜ್ಞಾನಭಂಡಾರವನ್ನು ಹೆಚ್ಚಿಸುವುದಕ್ಕೆ ಸಂಸ್ಕೃತವನ್ನು ಮರೆಹೊಕ್ಕರು.ಅದರ ಮೂಲಕ ಕನ್ನಡ ನಾನಾಮುಖವಾಗಿ ಪುಷ್ಟಿಹೊಂದಿತು'[8].

---

[6]ಕನ್ನಡ ನುಡಿಯನ್ನು ಸರಿಪಡಿಸೋಣ: ಡಿ.ಎನ್.ಶಂಕರಬಟ್, 2006.
[7]ಎರವಲಾಗಿ ಪಡೆದ ಪದಗಳ ಸ್ವರೂಪವನ್ನು ಕನ್ನಡ ಪದಗಳ ಸ್ವರೂಪಕ್ಕೆ ಹೊಂದಿಕೊಳ್ಳುವ ಹಾಗೆ ಬದಲಿಸುವುದೂ ನಮ್ಮದೇ ಆದ ಕನ್ನಡ ಸಂಸ್ಕೃತಿ ಎಂಬುದನ್ನು ನಾವು ತಿಳಿದುಕೊಳ್ಳಬೇಕು–ಅದೇ
[8]ಅದೇ.

ಆದರೆ, ಇದೇ ಇಂದು ಕನ್ನಡವನ್ನು ಸಂಸ್ಕೃತದ ಗುಲಾಮ ಆಗಿರುವಂತೆ ದಾರಿಮಾಡಿಕೊಂಡಿದೆ. ಇಂಗ್ಲಿಷಿನಲ್ಲಿರುವುದನ್ನು ಕನ್ನಡಿಗರು ಸಂಸ್ಕೃತದ ಮೂಲಕವೇ ಪಡೆಯುವಂತಾಗಿದೆ.ಇಂಗ್ಲಿಷನ್ನು ಅನುಸರಿಸಿ ಅದನ್ನು ಕನ್ನಡಕ್ಕೆ ತಂದುಕೊಳ್ಳುವ ಆಡಳಿತದ ನಡೆಯು ಪೂರ್ಣವಾಗಿ ಸಂಸ್ಕೃತದ ಅವಲಂಬನೆಯನ್ನು ನೆಚ್ಚಿಕೊಂಡಿದೆ. ನಾಡಿಗೆ ಬೇಕಾದ ಪ್ರಜೆಗಳನ್ನು ಆಗುಮಾಡುವ ಆಡಳಿತ, ಶಿಕ್ಷಣ ಇವೆರಡೂ ಇದೇ ನಿಟ್ಟಿನಲ್ಲಿಯೇ ಕಾರ್ಯಪ್ರವೃತ್ತವಾಗಿವೆ. ಈ ನಿಟ್ಟಿನಲ್ಲಿ, ಮೇಲ್ನೋಟಕ್ಕೆ ಸಂಸ್ಕೃತ ಈ ವಿಷಯದಲ್ಲಿ ಹೆಚ್ಚು ಶ್ರೀಮಂತವಾದ ನುಡಿಯೆಂಬಂತೆ ಮಾಡಲಾಗಿದೆ.

ಹಾಗಿದ್ದರೆ, ಸ್ಪಷ್ಟವಾಗಿ ತಿಳಿಸಬಲ್ಲ ಪದಸಂಪತ್ತು ಮತ್ತು ಪದರಚನೆಯ ವಿದಾನಗಳು ಕನ್ನಡದಲ್ಲಿಲ್ಲವೆ ಎನ್ನುವ ಪ್ರಶ್ನೆಯೊಂದು ಎದುರಾಗುತ್ತದೆ.ಈ ವಿಚಾರದಲ್ಲಿ ಇಂಗ್ಲಿಷ್ ಪದಗಳಿಗೆ ಬದಲಿಯಾದ ಕನ್ನಡ ಪದಗಳು ಇಲ್ಲಾ ಅಂತಲೇ ನಂಬಿಸಲಾಗಿದೆ.ಆದರೆ ಇದಕ್ಕೆ ಪರಿಹಾರವನ್ನು ಡಿ.ಎನ್.ಶಂಕರಭಟ್ಟರು ಹೇಳುವುದು ಹೀಗೆ;

'ಇಂಗ್ಲಿಷ್ ಪಾರಿಬಾಶಿಕ ಪದಗಳನ್ನು ಸಾದ್ಯವಿರುವಲ್ಲೆಲ್ಲ ನಾವು ಹಾಗೆಯೇ ಕನ್ನಡಕ್ಕೆ ಎರವಲಾಗಿ ಪಡೆದು ಬಳಸಬಲ್ಲೆವು. ಈ ಪದಗಳು ಕನ್ನಡದ ಮಟ್ಟಿಗೆ ಬಹಳ ತೊಡಕಿನವಾಗಿ ಕಾಣಿಸುವುದಿದ್ದಲ್ಲಿ ಮತ್ತು ಕನ್ನಡದ ವಾಕ್ಯಗಳಲ್ಲಿ ಅವು ಸರಿಯಾಗಿ ಹೊಂದಿಕೊಳ್ಳುವುದಿಲ್ಲವಾದಲ್ಲಿ ಮಾತ್ರ ಅವಕ್ಕೆ ಬದಲು ಕನ್ನಡದವೇ ಆದ ಪದಗಳನ್ನು ಹೊಸದಾಗಿ ಉಂಟು ಮಾಡಿಕೊಂಡು ಬಳಸಬೇಕಾಗುತ್ತದೆ.ಇಂತಹ ಕಡೆಗಳಲ್ಲಿ ಇಂಗ್ಲಿಶ್ ಪಾರಿಬಾಶಿಕ ಪದಗಳಿಗೆ ಬದಲಾಗಿ ಕನ್ನಡದ ವಿದ್ವಾಂಸರು ಸಂಸ್ಕ್ರುತದಲ್ಲಿರುವ ಪದಗಳನ್ನು ಎರವಲಾಗಿ ಪಡೆಯುತ್ತಾರೆ.ಸಂಸ್ಕ್ರುತಕ್ಕಿಂತ ತೀರ ಬೇರಾಗಿರುವ ಮತ್ತು ದ್ರಾವಿಡವೆಂಬ ಬೇರೆಯೇ ಒಂದು ಮೂಲ ನುಡಿಯಿಂದ ಬೆಳೆದು ಬಂದಿರುವ ಕನ್ನಡದಲ್ಲಿ ಹಾಗೆ ಮಾಡಬೇಕೆಂದು ಹೇಳುವುದು ಎಶ್ಟು ಮಾತ್ರಕ್ಕೂ ಸರಿಯಲ್ಲ'[9]. ಮುಂದುವರೆದು ಸಂಸ್ಕೃತ ಪದಬಳಕೆಯನ್ನು ಕುರಿತು ಅವರು ಹೇಳುವುದೆಂದರೆ 'ಕನ್ನಡ ಬರಹಗಳಲ್ಲಿ ಸಂಸ್ಕ್ರುತ ಪದಗಳನ್ನು ಬಳಸಲೇಬೇಕಾಗುವಂತಹ ಸಂದರ್ಬಗಳು ಹಲವು ಬರಬಹುದು. ಈಗಾಗಲೇ ಬರಹದಲ್ಲಿ ಮತ್ತು ಮಾತಿನಲ್ಲಿ ನೂರಾರು ಸಂಸ್ಕ್ರುತ ಪದಗಳು ಬಳಕೆಗೆ ಬಂದಿವೆ. ಇವನ್ನೆಲ್ಲ ಒಂದೇ ಬಾರಿಗೆ ಬದಲಿಸಲು ಸಾಧ್ಯವಾಗದು ಮತ್ತು ಹಾಗೆ ಬದಲಿಸುವ ಅವಶ್ಯಕತೆಯೂ ಇಲ್ಲ. ನುಡಿಯಲ್ಲಿ ಬರಹಕ್ಕಿಂತಲೂ ಮಾತಿಗೆ ಹೆಚ್ಚಿನ ಮಹತ್ವವಿದೆ.ಸಾಮಾನ್ಯವಾಗಿ ಮಾತನ್ನನುಸರಿಸಿ ಬರಹ ಬದಲಾಗುತ್ತಾ ಹೋಗುತ್ತದೆ. ಹೀಗೆ ಮಾತನ್ನನುಸರಿಸಿ ಬದಲಾಗದೆ ಉಳಿದಾಗಲೆಲ್ಲ ಬರಹ ಜನಸಾಮಾನ್ಯರಿಂದ ದೂರವಾಗುತ್ತದೆ...

---

[9]ಅದೇ ಕನ್ನಡ ನುಡಿಯನ್ನು ಸರಿಪಡಿಸೋಣ: ಡಿ.ಎನ್.ಶಂಕರಬಟ್, 2006, ಪು.156

ಇಂಗ್ಲಿಶ್, ಹಿಂದಿ ಮೊದಲಾದ ನುಡಿಗಳಿಂದ ಎರವಲಾಗಿ ಪಡೆದ ಪದಗಳನ್ನು ನಾವು ಈಗಾಗಲೇ ಆ ರೀತಿ ನಮ್ಮ ಉಚ್ಚಾರಣೆಗನುಸಾರವಾಗಿ ಬದಲಾಯಿಸಿಕೊಳ್ಳುತ್ತಿದ್ದೇವೆ. ಆದರೆ, ಸಂಸ್ಕೃತ ಪದಗಳನ್ನು ಮಾತ್ರ ಆ ರೀತಿ ಬದಲಾಯಿಸಿಕೊಳ್ಳದೇ ಹೆಚ್ಚು ಕಡಿಮೆ ಸಂಸ್ಕೃತದಲ್ಲಿರುವ ಹಾಗೆಯೇ ಬರೆಯಬೇಕೆಂಬ ನಿಯಮವನ್ನು ನಮ್ಮ ಮೇಲೆ ಹೊರಿಸಿಕೊಂಡಿದ್ದೇವೆ'.

ಸಂಶೋಧಕರು ಗುರುತಿಸಿರುವಂತೆ, ಸಂಸ್ಕೃತ ಪದಗಳ ಸ್ವರೂಪ ಮತ್ತು ಪದರಚನೆಯ ನಿಯಮಗಳು ಕನ್ನಡದ್ದೇ ಆದ ಪದಗಳ ಸ್ವರೂಪ ಮತ್ತು ರಚನೆಯ ನಿಯಮಗಳು ಬೇರೆಯೇ ಆಗಿವೆ. ಹೆಚ್ಚು ಹೆಚ್ಚು ಸಂಸ್ಕೃತ ಪದಗಳ ಬಳಕೆಯಿಂದಾಗಿ ಕನ್ನಡ ಬರಹ ಕಲಿಯುವವರಲ್ಲಿ ಈಗಾಗಲೇ ಬಲುದೊಡ್ಡ ತೊಡಕನ್ನು ಒಡ್ಡಿದೆ. ಇನ್ನು, ನಾಡಿನ ಜನರ ಬಲುದೊಡ್ಡ ಸಂಪರ್ಕದ ದಾರಿಯಾದ 'ಆಡಳಿತ ಭಾಷೆ'ಯಲ್ಲಿ ಸಂಸ್ಕೃತ ಪದಗಳೇ ತುಂಬಿಕೊಂಡರೆ ಆಡಳಿತ ಮತ್ತು ಅಭಿವೃದ್ಧಿ ವಿಚಾರಗಳು ಕನ್ನಡ ಜನರನ್ನು ಮುಟ್ಟುವ ಬಗೆ ದೊಡ್ಡ ಸವಾಲೇ ಆಗಿಬಿಡುತ್ತದೆ.

ಸಂಸ್ಕೃತ ಭಾಷೆ ಹೀಗೆ ಏರಿ ಕುಳಿತಿರುವ ಬಗೆಗಿನ ಆಕ್ಷೇಪಣೆ ಇವತ್ತಿನದೇ ಏನೂ ಅಲ್ಲ[10]. ಅದರ ಎದುರಿನ ಈಜಾಟವೂ ಹೊಸದೇನೂ ಅಲ್ಲ. ಹದಿಮೂರನೇ ಶತಮಾನದಲ್ಲಿದ್ದ ಆಂಡಯ್ಯನು ತನ್ನ ಕಾವ್ಯವಾದ 'ಕಬ್ಬಿಗರ ಕಾವ' ಬರೆಯುವ ಹೊತ್ತಿಗೆ ಸಂಸ್ಕೃತಭಾಷೆಯನ್ನು ಹೀಗೆ ಏರಿಕೊಳ್ಳುವ ಬಗೆಗೆ ಎಚ್ಚರಿಕೆಯನ್ನು ಕೊಟ್ಟಿದ್ದ. ಕನ್ನಡದಲ್ಲಿ 'ಸಂಸ್ಕೃತ ಪದಗಳನ್ನು ಅವುಗಳಲ್ಲಿ ಸ್ವಲ್ಪವೂ ಬದಲಾವಣೆ ಮಾಡದೆ ಹಾಗೆಯೇ ತಂದು ತುರುಕುವುದು ಸರಿಯಲ್ಲ. ಸಂಸ್ಕೃತ ಪದಗಳನ್ನು ಬಳಸುವುದಿದ್ದರೂ ಅವನ್ನು ಕನ್ನಡದ ಪದಸ್ವರೂಪಕ್ಕೆ ಹೊಂದಿಕೊಳ್ಳುವ ಹಾಗೆ ಬದಲಾಯಿಸಿ ಬಳಸಿದಲ್ಲಿ ಕನ್ನಡದ ಸೊಬಗು ಉಳಿಯುತ್ತದೆ ಎಂಬುದನ್ನು ತೋರಿಸಿ ಕೊಟ್ಟಿದ್ದಾನೆ. ಒಂಬತ್ತನೇ ಶತಮಾನದ ಕವಿರಾಜ ಮಾರ್ಗದಲ್ಲಿಯೇ'ಸಕ್ಕದದ ಅತಿಯಾದ ಸಂಬಂಧ ಕನ್ನಡಕ್ಕೆ ಕಕ್ಕಸ (ಕರ್ಕಶ)ವಾಗು'ತ್ತಿರುವುದರ ಬಗೆಗೆ ಎಚ್ಚರಿಕೆಯಿದೆ. ನಯಸೇನನು ಕನ್ನಡ ಮತ್ತು ಅತಿಯಾದ ಸಂಸ್ಕೃತದ ಬೆರೆಸುವಿಕೆಯನ್ನು 'ಎಣ್ಣೆ ಮತ್ತು ತುಪ್ಪ'ಗಳ ಬೆರಕೆಯಂತೆ ಎಂದಿರುವುದನ್ನು ಕನ್ನಡ ಭಾಷೆಯ ಚರಿತ್ರೆಯಲ್ಲಿ ನಾವೆಲ್ಲಾ ಓದಿಕೊಂಡು ಬಂದವರಾಗಿದ್ದೇವೆ. ಕನ್ನಡನುಡಿಗೆ ಮುಳುವಾಗದಂತೆ ಮತ್ತೊಂದು ಭಾಷೆಯ ಪದಗಳ ಹಾವಳಿಯನ್ನು

[10]ಅತಿಯಾಗಿ ಸಂಸ್ಕೃತ ಪದಗಳನ್ನು ಬಳಸುವ ಕನ್ನಡ ಬರಹಗಾರರ ಈ ಚಾಳಿಗೆ ಇನ್ನೊಂದು ಕಾರಣವೂ ಇದೆ.ಹಿಂದಿನ ಕಾಲದಲ್ಲಿ ಕನ್ನಡ ಬರಹಗಳನ್ನು ಮತ್ತು ಗ್ರಂಥಗಳನ್ನು ಬರೆಯುತ್ತಿದ್ದವರಲ್ಲಿ ಹೆಚ್ಚಿನವರೂ ವೈದಿಕ ಬ್ರಾಹ್ಮಣರಾಗಿದ್ದರು.ಇವರಿಗೆ ಸಂಸ್ಕೃತ ಉಚ್ಚಮಟ್ಟದ ಪ್ರತಿಷ್ಠೆಯ ನುಡಿಯಾಗಿತ್ತು ಮತ್ತು ಕನ್ನಡ ಕೆಳಮಟ್ಟದ ಮ್ಲೇಚ್ಚ ನುಡಿಯಾಗಿತ್ತು.ಬ್ರಾಹ್ಮಣರು ಆರ್ಯ ಮೂಲದವರಾಗಿದ್ದುದು ಇದಕ್ಕೆ ಕಾರಣವಿರಬಹುದು.(ಕಲಬುರ್ಗಿ 1967, ಕೋತಿನ 1985:299 ನೋಡಿ).ಇವತ್ತಿನ ಕಾಲದಲ್ಲೂ ಪೂಜೆ ಮಾಡುವ ಸಮಯದಲ್ಲಿ ಕನ್ನಡ ನುಡಿಯನ್ನು ಬಳಸಿದಲ್ಲಿ ಅಶುದ್ದವಾಗುತ್ತದೆಯೆಂದು ನಂಬುವ ಬ್ರಾಹ್ಮಣರು ಕೆಲವರಿದ್ದಾರೆ–ಡಿ.ಎನ್. ಶಂಕರ ಬಟ್ ರವರ ಕನ್ನಡ ಬರಹವನ್ನು ಸರಿಪಡಿಸೋಣ–2006.

ಗಮನಿಸಬೇಕಾಗುತ್ತದೆ. ಅದನ್ನು ತಡೆಯುವ ಹೊಣೆಯು ಪ್ರಭುತ್ವದ್ದೇ ಆಗಿರುತ್ತದೆ. ಇದಕ್ಕಾಗಿ ಪ್ರಭುತ್ವವು ಸರಿಯಾದ ನೀತಿ ನಿಯಮಗಳನ್ನು ರೂಪಿಸಿಕೊಡಬೇಕಾಗುತ್ತದೆ.

ಕನ್ನಡವನ್ನು ಹೀಗೆ ಕಕ್ಕಸವಾಗಿಸುತ್ತಿರುವುದರಲ್ಲಿ ಸಂಸ್ಕೃತ ಮತ್ತು ಇಂಗ್ಲಿಶುಗಳ ಹೊಂದಾಣಿಕೆ ಹೇಗಿದೆ ಎಂಬುದನ್ನು ಈಗ ನೋಡಬಹುದು. ಕನ್ನಡದಲ್ಲಿನ ಆಡಳಿತ ಸನ್ನಿವೇಶ ನಿರ್ದೇಶನದಂತೆ ಆಗಿರುವ ಅನುವಾದದ ನಡೆಯೊಂದು ಹೀಗಿದೆ;

ನಡೆ 1–ಆಡಳಿತ ಪದಕೋಶ

ಕನ್ನಡಿಗರ ಸಹಜವಾದ ಮಾತಿನಲ್ಲಿ ಸಂಸ್ಕೃತ ಪದಗಳಿಲ್ಲ. ಸಂಸ್ಕೃತದ ಪದಸ್ವರೂಪದ ಪರಿಚಯವೇ ಇರದ ಕನ್ನಡ ಭಾಷಿಕರ ಮೇಲೆ ಅದನ್ನು ಹೇರುವುದು ಹೇಗೆ ಸರಿ ಎನ್ನುವ ಪ್ರಶ್ನೆಯು ಯಾರನ್ನೇ ಆದರೂ ಕಾಡುವ ಸಂಗತಿಯಾಗಿದೆ. ಆದರೆ, ಸಂಸ್ಕೃತ ಪದಗಳನ್ನು ಸಂಸ್ಕೃತದಲ್ಲಿರುವ ಹಾಗೆಯೇ ಕನ್ನಡದಲ್ಲೂ ಬರೆಯಬೇಕು ಎಂಬುದಾಗಿ ಆ ಪರಂಪರೆಯಿಂದ ಬಂದ ಅನೇಕ ಕನ್ನಡ ವಿದ್ವಾಂಸರು ನಿರ್ಬಂದವನ್ನೂ ಹೇರಿಕೊಂಡಿರುವುದು, ಹಾಗೆ ಮಾಡಲೆಂದು ಅಂತವರು ತಯಾರಿಸಿರುವ ಪಾರಿಭಾಷಿಕ ಪದಗಳು ಕನ್ನಡ ಜನಬದುಕುಗಳಿಗೆ ಹೇಳಿಕೊಳ್ಳಲಾರದಷ್ಟು ತೊಡಕಿನದಾಗಿದೆ. ಬಹುಮಟ್ಟಿನ ಸನ್ನಿವೇಶಗಳಲ್ಲಿ ಅವು ಇಂಗ್ಲಿಶ್ ಪದಗಳಿಗಿಂತಲೂ ಹೆಚ್ಚು ತೊಡಕಿನವೆನಿಸುತ್ತವೆ. ಈ ಮೇಲೆ ಗುರುತಿಸಿರುವ ಆಡಳಿತ ಕನ್ನಡದಲ್ಲಿರುವ ಪದಗಳನ್ನು ನೋಡಿದರೂ ಇದು ತಿಳಿಯುತ್ತದೆ[11].

ಡಿಎನ್‌ಎಸ್ ಹೇಳುವಂತೆ ಸಂಸ್ಕೃತ ಪದಗಳನ್ನು ಬಳಸದೆ ನಮಗೆ ಬೇರೆ ದಾರಿಯೇ ಇಲ್ಲ ಎಂಬಂತಹ ಕೀಳರಿಮೆಯ ಪ್ರವೃತ್ತಿಯಿಂದಾಗಿ ಕನ್ನಡ ಬಳಕೆಗೆ ಮಾರಕವಾಗಿದೆ ಎನ್ನುವುದನ್ನು ನಾವು ಅರಿಯಬೇಕಾಗಿದೆ. ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಬಳಸಿ ರಚಿಸಿದ ಬರಹಗಳು ಸಂಸ್ಕೃತ ಪರಂಪರೆಯ ವಿದ್ವಾಂಸರನ್ನು ಮಾತ್ರ ಮೆಚ್ಚಿಸಬಲ್ಲುವಲ್ಲದೆ ಜನಸಾಮಾನ್ಯರ ಬಳಕೆಯಲ್ಲಿ ಉಪಯೋಗಕ್ಕೆ ಬರಲಾರವು. ಪ್ರಭುತ್ವವು ಸಾಮಾಜಿಕವಾಗಿ ಆಗುಮಾಡುವ ಅವಕಾಶಗಳು, ಅನುಕೂಲಗಳು ಎಲ್ಲರಿಗೂ ಸರಿಯಾಗಿ ತಲುಪಬೇಕಿದ್ದಲ್ಲಿ ಸುಲಭವಾಗಿ ತಿಳಿಯುವಂತಹ ಕನ್ನಡದವೇ ಆದ ಪದಗಳನ್ನು ಹೆಚ್ಚು ಹೆಚ್ಚು ಬಳಬೇಕಾಗುತ್ತದೆ. ಆದರೆ

[11]ಕನ್ನಡದಲ್ಲಿ ಪಾರಿಬಾಶಿಕ ಪದಗಳನ್ನು ಉಂಟುಮಾಡುವವರು ಇಂಗ್ಲಿಶ್‌ನಂತಹ ಬೇರೊಂದು ನುಡಿಯಲ್ಲಿ ಬಳಕೆಯಾಗುವ ಪದಗಳಿಗೆ ಸಮಾನವಾಗಿರುವ ಪದಗಳನ್ನು ಕನ್ನಡದಲ್ಲಿ ಉಂಟು ಮಾಡುವುದು ಹೇಗೆ ಎಂಬುದಕ್ಕಿಂತಲೂ ಆ ನುಡಿಯ ಬರಹಗಳಲ್ಲಿ ವಿವರಿಸಿರುವ ವಿಶಯಗಳನ್ನು ಕನ್ನಡದಲ್ಲಿ ವಿವರಿಸಿ ಹೇಳುವುದು ಹೇಗೆ ಎಂಬುದಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿದೆ–ಕನ್ನಡ ಬರಹವನ್ನು ಸರಿಪಡಿಸೋಣ. ಪು.22–23

ಕನ್ನಡ ಪದಗಳು ಹೆಚ್ಚು ಇರಬೇಕಾದ ಜಾಗದಲ್ಲಿ ಸಂಸ್ಕೃತ ಪದಗಳು, ಸಂಸ್ಕೃತಮಯ ಪದಗಳು ತುಂಬಿಕೊಂಡಿವೆ.

ಹಾಗಿದ್ದರೆ, ಸಂಸ್ಕೃತ ಪದಗಳೇ ಇರಬಾರದು ಅಂತೇನೂ ಅಲ್ಲ. ಜನಸಾಮಾನ್ಯರ ನಡುವೆ ಸಾವಿರಾರು ವರುಷಗಳಿಂದ ಬೆರೆತು ಕನ್ನಡ ಜಾಯಮಾನಕ್ಕೆ ಹೊಂದಿಕೊಂಡಿರುವಂತಹ ಸಂಸ್ಕೃತ ಪದಗಳನ್ನು ತೆಗೆಯುವುದರ ಅಗತ್ಯವಿಲ್ಲ. ಈ ನಿಟ್ಟಿನಲ್ಲಿ ಶಂಕರಬಟ್ಟರು ತಮ್ಮ ಸಂಶೋಧನೆಗಳ ಮೂಲಕ ಹೇಳಿರುವಂತೆ'ಕನ್ನಡ ಬರಹಗಳಲ್ಲಿ ಸಂಸ್ಕೃತದಿಂದಎರವಲಾಗಿ ಪಡೆದ ಪದಗಳ ಬಳಕೆಯ ಮೇಲೆ ಒಂದು ಹತೋಟಿಯಿರಬೇಕು; ಅವು ತತ್ಸಮ ರೂಪದಲ್ಲೇನೇ ಬಳಕೆಯಾಗುವುದಿದ್ದಲ್ಲಿ ಅವುಗಳ ಪ್ರಮಾಣ ಶೇಕಡಾ ಹತ್ತಕ್ಕಿಂತ ಹೆಚ್ಚಾಗಬಾರದು'[12]. ಇಂತಹ ಬದಲಾವಣೆಯಿಂದ ಮಾತ್ರವೇ ಕನ್ನಡ ಬರಹವನ್ನು ಕಲಿಯುವ ಮತ್ತು ಓದುವ ಕೆಲಸ ಸರಳವಾಗಬಲ್ಲುದು. ಅಲ್ಲದೆ, ಕನ್ನಡ ಬರಹಗಳಲ್ಲಿ ಇವತ್ತು ಕಾಣಿಸುತ್ತಿರುವ 'ಕೃತಕತೆ[13]' ಯನ್ನು ಕಡಿಮೆ ಮಾಡಿ ಜೀವಂತಿಕೆಯನ್ನು ತರಹುದಾಗಿದೆ. ಇದು ಆಗಬೇಕಾದ ಕೆಲಸ.

ಇವತ್ತಿನ ಕನ್ನಡ ಸಮಾಜಕ್ಕೆ ನಿಜಕ್ಕೂ ಬೇಕಾಗಿರುವುದು ಕನ್ನಡದ ಜಾಯಮಾನ ಎನ್ನುವುದನ್ನು ಸಮಾಜದ ಹೊಸ ಹೊಸ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಗ್ರಹಿಸಬಹುದಾಗಿದೆ. ಜಾಗತಿಕ ಮಾರುಕಟ್ಟೆಯ ಹಿನ್ನೆಲೆಯಲ್ಲಿ ಇಂಗ್ಲಿಶಿನ ಬೆನ್ನು ಬಿದ್ದಿರುವ ಬಗೆಯು ಇದನ್ನು ಹೇಳುತ್ತಿದೆ. ಕನ್ನಡದ ಜಾಯಮಾನವೆಂದರೆ, ಕರ್ನಾಟಕದ ಸಾಮಾನ್ಯ ಜನಬದುಕುಗಳಿಗೆ ಹೊಂದಿಕೆಯಾಗುವ ದಾರಿಗಳು ಎಂದು ತಿಳಿಯಬೇಕು.ಅದು, ಮಾತಿರಲಿ, ಮಾರುಕಟ್ಟೆಯ ವ್ಯವಹಾರವಿರಲಿ, ಕಲಿಕೆ, ಕಾನೂನು, ಆಡಳಿತ ಯಾವುದೇ ಇರಲಿ, ಎಷ್ಟೇ ಮಹತ್ವದ್ದಾಗಿರಲಿ, ದೊಡ್ಡದಿರಲಿ ಚಿಕ್ಕದಿರಲಿ, ಅದು ಕರ್ನಾಟಕದ ಒಳಗಿನದೇ ಆಗಿರಲಿ, ಹೊರಗಿನಿಂದ ಬಂದಿರಲಿ ಎಲ್ಲವೂ ಕನ್ನಡ ನಾಡಿನ ಜನಬದುಕುಗಳಿಗೆ ಹೊಂದಿಕೆಯಾಗುವ ನಡೆಯಲ್ಲಿ ಇರಬೇಕಾಗುತ್ತದೆ.ಇದರ ಹೊರತಾಗಿ ಹೇರಲ್ಪಡುವುದು ಅಹಂಕಾರವೆನಿಸಿಕೊಂಡರೆ, ಹೇರಿಕೊಳ್ಳುವ ಗುಣವು ಗುಲಾಮತನದ್ದೇ ಆಗಿರುತ್ತದೆ.ಇಂತಹ ಬೆಳವಣಿಗೆಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಇರುತ್ತವೆ. ಸಾಮಾನ್ಯ ಬದುಕುಗಳನ್ನು ಸದಾ ವಂಚನೆಯಲ್ಲಿಡಲು ಪ್ರಯತ್ನಿಸುವ ಶಕ್ತಿಗಳು ಇವು.

---

[12]ಕನ್ನಡ ಬರಹವನ್ನು ಸರಿಪಡಿಸೋಣ: ಡಿ. ಎನ್. ಶಂಕರಬಟ್, ಪು.44

[13]ಶಂಕರಬಟ್ಟರದೇ ಮಾತು ಇದು. ಅದೇ ನೋಡಿ.

ಕರ್ನಾಟಕದ ಆಡಳಿತವನ್ನು ಭಾಷಿಕವಾಗಿ ನೋಡಿದಾಗ; ಕನ್ನಡದಲ್ಲಿ ಹೊಸ ಪದಗಳನ್ನು ಉಂಟು ಮಾಡಬೇಕಾದಾಗಲೆಲ್ಲ ಸಂಸ್ಕೃತದಅವಲಂಬನೆ ಶೇ 80ನ್ನು ಮೀರಿದೆ.ಇಂತಹ ಸನ್ನಿವೇಶಗಳಲ್ಲಿ ಆಡಳಿತಭಾಷೆಯ ಬಗೆಗೆ ಸಲಹೆಗಳನ್ನು ಕೊಡುತ್ತಿರುವ ಕನ್ನಡ ವಿದ್ವಾಂಸರಿಗೆ ಕನ್ನಡದವೇ ಆದ ಪದಗಳು ಕಾಣಿಸುತ್ತಿಲ್ಲ ಎಂದು ಹೇಳಲೇಬೇಕಾಗಿದೆ. ಅವರ ಮಟ್ಟಿಗೆ ಕನ್ನಡ ಪದಗಳು ಮುಟ್ಟಬಾರದ–ಅಸ್ಪೃಶ್ಯ ಪದಗಳು ಎನಿಸಿಬಿಟ್ಟಂತೆ ಕಾಣುತ್ತದೆ. ಹೊಸ ಪದಗಳನ್ನು ಹುಟ್ಟು ಹಾಕಬೇಕಾದಾಗಲೆಲ್ಲ ಕನ್ನಡ ಪದಗಳ ಮೇಲೆ ಹೊರಿಸಿರುವ ಈ ಅಸ್ಪೃಶ್ಯತೆಯನ್ನು ಹೋಗಲಾಡಿಸದಿದ್ದಲ್ಲಿ ಆಡಳಿತವು ಮತ್ತಷ್ಟು ಜನದೂರವಾಗುತ್ತದೆ. ಸಾಮಾಜಿಕ ಅಸಮಾನತೆ ಹೆಚ್ಚುತ್ತದೆ. ಅಸಮಾದಾನದ ಉರಿಯಲ್ಲಿ ಇಡೀ ಸಮಾಜವು ಬೇಯತೊಡಗುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಆಡಳಿತವು ತನ್ನತನವನ್ನು ಉಳಿಸಿಕೊಳ್ಳುವ ಒಂದೇ ದಾರಿ ಕನ್ನಡದ್ದೇ ಭಾಷೆಯ ಮೂಲಕ ಎನ್ನುವುದನ್ನು ತಿಳಿಯಬೇಕಾಗಿದೆ.

ಯಾವುದೇ ಒಂದು ಜನಬಳಕೆಯ ಭಾಷೆಯು ಬೆಳೆಯುತ್ತಾ ಉಳಿಯುವುದು ಇತರೆ ಭಾಷೆಗಳ–ಸಂಸ್ಕೃತಿಗಳ ಸಂಪರ್ಕದಿಂದ ಎನ್ನುವುದು ತಿಳಿದದ್ದೇ. ಆದರೆ, ಹೊರಗಿನ ಭಾಷೆಯನ್ನು, ಅದರ ಸಂಗತಿಗಳನ್ನು ಹೇರಿಕೊಂಡು ಬರಹವೆಂಬ ಅಧಿಕೃತತೆಯ ನಡೆಯಲ್ಲಿ ತಾನು ಬೇರೆಯೇ ಆಗುತ್ತಾ ಹೋದಂತೆಲ್ಲಾ ಜನಬಳಕೆಯ ಸಂಗತಿಗಳ ನೇರವಾದ ಸಂಬಂಧವನ್ನು ಕಳೆದುಕೊಳ್ಳುತ್ತದೆ. ಹೀಗೆ ಜನಬಳಕೆಯ ಸನ್ನಿವೇಶದ ಭಾಷಾ ಸಂಗತಿಗಳ ಸಂಬಂಧವನ್ನು ಕಳೆದುಕೊಂಡು ಜಡಗೊಂಡ ಭಾಷೆಯನ್ನು ಆಡಳಿತ, ಶಿಕ್ಷಣ, ಕಾನೂನು ನ್ಯಾಯದ ದಾರಿಗಳಲ್ಲಿ ಬಳಕೆಗೆ ತಂದಲ್ಲಿ ಒಟ್ಟು ಸಾಮಾಜಿಕ ಸ್ಪಂದನೆಯೇ ನಾಶವಾಗುತ್ತದೆ[14].

ಡಾ. ಮೇಟಿಯವರು ಹೇಳಿರುವಂತೆ, "ಕನ್ನಡ ನುಡಿ ಬಗೆಗಿನ ಇವತ್ತಿನ ಚರ್ಚೆಗಳನ್ನು ತಮಿಳಿನ ಅನುಕರಣೆ ಎಂದು ತಪ್ಪು ತಿಳಿದಿರುವ ಮಂದಿಗೆ, ತಮಿಳು ನುಡಿಗೆ ಶಾಸ್ತ್ರೀಯ ಪಟ್ಟ ಸಿಕ್ಕಾಗ ಕನ್ನಡಕ್ಕೂ ಅಂತಹ ಪಟ್ಟ ಸಿಗಬೇಕೆಂದು ಹೋರಾಟ ನಡೆಸಿದ್ದು ಅನುಕರಣೆಯಾಗಿ ಕಾಣಲಿಲ್ಲವೇ? ತಮಿಳಿನವರಿಗೆ ತಮಿಳು ನುಡಿಯಿಂದಲೇ ಅನ್ನ, ಕೆಲಸ, ಬದುಕು ಸಿಕ್ಕಿಲ್ಲವೇ? ಹೊರ ದೇಶಗಳ ವಿಶ್ವವಿದ್ಯಾನಿಲಯದಲ್ಲಿ ತಮಿಳು ನುಡಿ ಹಾಗೂ ಸಂಸ್ಕೃತಿ ಓದಿನ ಪೀಠಗಳು ನೆಲೆಗೊಂಡಿಲ್ಲವೇ? ಇಂತಹ ಓದಿನ ಪೀಠಗಳು ಕನ್ನಡಕ್ಕೆ ಯಾಕಿಲ್ಲವೆಂದು ಕೇಳುವುದು ಕೂಡ

[14]ತಲೆಮಾರಿನಿಂದ ತಲೆಮಾರಿಗೆ ಸಾಗಿಬರುತ್ತಿರುವಾಗ ಒಂದು ನುಡಿ ತಾನಾಗಿಯೇ ತನ್ನಲ್ಲಿ ಮೂಡಿಬಂದ ಕೊರತೆಗಳನ್ನೆಲ್ಲ ಅಳಿಸಿಕೊಳ್ಳುತ್ತದೆ.ಈ ಕಾರಣಕ್ಕಾಗಿ ನುಡಿ ಯಾವಾಗಲೂ ಪರಿಪೂರ್ಣವಾಗಿಯೇ ಇರುತ್ತದೆ.ಆ ರೀತಿ ತನ್ನನ್ನು ತಾನೇ ಸರಿಪಡಿಸಿಕೊಳ್ಳುವಂತಹ ಕಸುವು ಅದಕ್ಕಿದೆ.ಆದರೆ ಬರಹ ತನ್ನಲ್ಲಿರುವ ಕೊರತೆಗಳನ್ನು ತಾನೇ ಅಳಿಸಿಕೊಳ್ಳಲಾರದು. ಅದನ್ನು ಯಾರಾದರೂ ವಿದ್ವಾಂಸರು ಇಲ್ಲವೇ ಬರಹಗಾರರು ಅಳಿಸುವ ಇಲ್ಲವೇ ಸರಿಪಡಿಸುವ ಪ್ರಯತ್ನವನ್ನು ನಡೆಸಬೇಕಾಗುತ್ತದೆ–ಡಿ.ಎನ್.ಶಂಕರ ಬಟ್ ರವರ ಕನ್ನಡ ಬರಹವನ್ನು ಸರಿಪಡಿಸೋಣ–2006, ಪು 23

ತಮಿಳರನ್ನು ಹಿಂಬಾಲಿಸಿದಂತಲ್ಲವೇ? ಹಿಂದಿಯ ಹೇರಿಕೆಯನ್ನು ತೊರೆದು ತಮ್ಮದೇ ತಾಯ್ನುಡಿಯ ಮೂಲಕ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಸವಲತ್ತುಗಳನ್ನು ತಮಿಳರು ಪಡೆದಿಲ್ಲವೇ? ಶಿವನನ್ನು ಸಿವನ್ ಎಂದು ವಿಷ್ಣುವನ್ನು ಪೆರುಮಾಳ್ ಎಂದು, ಗಣಪತಿಯನ್ನು ಪಿಳ್ಳೇಯಾರ್ ಎಂದು ಕರೆಯುವುದರಿಂದ ತಮಿಳಿಗೆ ಹಾಗೂ ಆ ನುಡಿಯಿಗರಿಗೆ ಆಗಿರುವ ಕೊರತೆಯಾದರೂ ಏನು? ಅಥಿತಿಯನ್ನು ವಿರುಂದಾಡಿಯೆಂದು ಭಗವಾನನ್ನು ಕಡವಳ್‌ಯೆಂದು ಬರೆಯುವಾಗ ತಿಣುಕಾಡುವ ಪ್ರಮೆಯೇ ಇಲ್ಲ. ನುಡಿಯರಿಮೆಯ ಪ್ರಾಥಮಿಕ ತಿಳುವಳಿಕೆ ಇಲ್ಲದೇ ಒಂದು ನುಡಿ ಸಮುದಾಯವನ್ನು ಹೀಯ್ಯಾಳಿಸುವುದು ಕನ್ನಡಿಗರಿಗೆ ಶೋಭೆ ತರುವ ಸಂಗತಿಯೇ? ದಿಟವಾಗಿಯೂ ಇಂತಹ ಅಪಚಾರಗಳನ್ನು ಬಿಟ್ಟುಕೊಟ್ಟು ಕನ್ನಡ ಕುರಿತ ಚರ್ಚೆಗಳನ್ನು ಬೆಳೆಸುವುದು ಒಳಿತು."

ಕನ್ನಡಕ್ಕೆ ತನ್ನದೇ ಗುಣಗಳಿವೆ, ಅವು ಕನ್ನಡದ್ದೇ ಭಾಷಿಕ, ಸಾಂಸ್ಕೃತಿಕ ಕಸುವನ್ನು ಸೂಚಿಸುತ್ತವೇ ಎಂಬ ದಿಟವು ಮರೆತಂತಿದೆ. ಈ ಗುಣಗಳಿಂದಲೇ ಕನ್ನಡದ ದಿಟ ಚಹರೆಗಳನ್ನು ವಿವರಿಸಲಕ್ಕೆ ಸಾಧ್ಯಯೆಂಬುದನ್ನೂ ಮರೆತಿದ್ದೇವೆ. ಕನ್ನಡ ನುಡಿ ಹಾಗೂ ಸಾಂಸ್ಕೃತಿಕ ಬೆಳವಣಿಗೆಯ ಚರಿತ್ರೆಯನ್ನು ನಿಗಾಯಿಟ್ಟು ನೋಡಿದರೆ, ಸಂಸ್ಕೃತ ಕನ್ನಡವನ್ನು ಭಾಷಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ ನಿರ್ದೇಶಿಸಿದ ಹಾಗೂ ನಿಯಂತ್ರಿಸಿದ ಬಗೆಗಳು ಇನ್ನೂ ನಿಚ್ಚಳಗೊಳ್ಳುತ್ತವೆ. ಸಂಸ್ಕೃತ ನುಡಿಗೆ ಯಾಕೆ ಇಂತಹ ಹತೋಟಿಯ ಹಂಬಲ ಎನ್ನುವ ಕೇಳ್ವಿ ಬಹುತೇಕ ಮಂದಿಯ ಕುತೂಹಲವನ್ನು ಕೆರಳಿಸಬಹುದು. ಈ ಹಂಬಲಕ್ಕೆ ಅಧಿಕಾರ ಸಂಬಂಧಗಳೇ ಕಾರಣ. ಯಾವಾಗಲೂ ಯಜಮಾನಿಕೆಯ ಜಾಗದಲ್ಲಿಯೇ ಇರುವ ಸಂಸ್ಕೃತಕ್ಕೆ ಅದನ್ನು ಕಾಪಾಡಿಕೊಳ್ಳುವ ಗುರಿ ಮಾತ್ರ ಮುಖ್ಯವಾಗುತ್ತದೆ. ಇಂತಹ ನಿಲುವುಗಳನ್ನು ಹೊಂದಿರುವ ಈ ನುಡಿಗೆ ಕನ್ನಡ ಸಮುದಾಯದ ಬೇಡಿಕೆಗಳನ್ನು ಈಡೇರಿಸುವ ಬದಲಾಗಿ ತನ್ನದೇ ಒಲವುಗಳನ್ನು ಕನ್ನಡದ ಮೇಲೆ ಹೇರುವ ತುಡಿತವೇ ಹೆಚ್ಚಾಗಿರುತ್ತದೆ. ಇಂತಹ ಅಧಿಕಾರದ ಜಾಗಗಳನ್ನು ಬಿಟ್ಟುಕೊಡುವುದೆಂದರೆ ಸಂಸ್ಕೃತಕ್ಕೆ ತನ್ನ ಅಸ್ತಿತ್ವವನ್ನೇ ಬಿಟ್ಟು ಕೊಟ್ಟಂತೆ. ಇದಕ್ಕಿಂತ ಹೆಚ್ಚಾಗಿ ಅದು ತನ್ನ ಅಸ್ತಿತ್ವವನ್ನು ನೆಲೆಗೊಳಿಸಲು ಬೇಕಾದ ತನ್ನದೇ ನುಡಿ ಸಮುದಾಯವನ್ನು ಹೊಂದಿಲ್ಲ. ಅದು ಯಾವತ್ತೋ ತನ್ನ ಜೀವವನ್ನು ಕಳೆದುಕೊಂಡಿದೆ. ಹಾಗಾಗಿ ಭಾಷಿಕ-ಸಾಂಸ್ಕೃತಿಕ ಅಧಿಕಾರದ ಜಾಗಗಳನ್ನು ಗಟ್ಟಿಗೊಳಿಸಿಕೊಳ್ಳಲು ಸಂಸ್ಕೃತ ಕನ್ನಡ ಹಾಗೂ ಅಂತಹ ಜನಸಮುದಾಯಗಳ ನುಡಿಗಳನ್ನೇ ಒತ್ತುವರಿ ಮಾಡಿಕೊಂಡಿದೆ. ಇಂತಹ ಸಮುದಾಯಗಳ ನುಡಿಯ ಮೇಲೆ ಸಂಸ್ಕೃತ ಸಾಧಿಸಿರುವ ಆಕ್ರಮಣವನ್ನೇ ತಾನು ಆ ನುಡಿಗಳ ಏಳ್ಗೆಗಾಗಿ ಹೊತ್ತುಕೊಂಡ ಹೊಣೆಗಾರಿಕೆಯಂದೇ ಬೀಗುತ್ತಿದೆ. ಇದು ಕೂಡ ಒಂದು ರೀತಿಯಲ್ಲಿ

ವೈಟ್ ಮೆನ್ಸ್ ಬರ್ಡನ್ ಕಲ್ಪನೆಯಂತಹದೆ ಎಂದು ಕಾಣುತ್ತದೆ. ಲೋಕದ ಏಳ್ಗೆಯೇ ನಮ್ಮ ಗುರಿ ಎಂದು ಬೀಗುವವರ ಒಳ ಉದ್ದೇಶ ಮಾತ್ರ ಯಾವತ್ತು ತಮ್ಮ ಬೇಳೆಯನ್ನು ಬೆಯಿಸಿಕೊಳ್ಳುವುದೇ ಆಗಿರುತ್ತದೆ. ಈ ನಿಲುವಿಗೆ ಹೊರತಾದ ಉದ್ದೇಶವೊಂದು ಸಂಸ್ಕೃತಕ್ಕೆ ಇದ್ದಿದ್ದರೆ, ಕನ್ನಡ ನುಡಿ ತನ್ನ ಬೆಳವಣಿಗೆಯ ನೆಲೆಗಳನ್ನು ಕಂಡುಕೊಳ್ಳುವ ದಾರಿಗೆ ಅದು ಯಾವತ್ತು ಅಡ್ಡಿಯಾಗುತ್ತಿರಲಿಲ್ಲ. ಸಂಸ್ಕೃತಕ್ಕೆ ತನ್ನ ಯಜಮಾನಿಕೆಯನ್ನು ಚಿರಂಜೀವಿಯಾಗಿಸಲು ಇಂತಹ ಭಾಷಿಕ–ಸಾಂಸ್ಕೃತಿಕ ಆಕ್ರಮಣವನ್ನು ನಡೆಸುತ್ತಲೇ ಬಂದಿದೆ ಎಂಬುದು ಗಮನಾರ್ಹ ಸಂಗತಿ. ಯಾವ ಸಮುದಾಯಗಳು ಪರಾವಲಂಬನೆಯನ್ನು ನಿರಾಕರಿಸುತ್ತವೋ, ಅಂತಹ ನಿರಾಕರಣೆಯ ನಿಲುವುಗಳೇ ಸಮುದಾಯದೊಳಗಿನ ಪ್ರತಿರೋಧದ ನೆಲೆಗಳ ಹುಟ್ಟಿಗೆ ಕಾರಣವಾಗುತ್ತವೆ. ಇದು ಕೇವಲ ಹಕ್ಕೊತ್ತಾಯದ ನೆಲೆ ಮಾತ್ರವಲ್ಲ ಬದಲಾಗಿ ತನ್ನ ಸ್ವಂತಿಕೆಯನ್ನು ಮರಳಿ ಗಳಿಸಿಕೊಳ್ಳುವ ಬಗೆಯೂ ಆಗಿರುತ್ತದೆ.

ಈ ನಿಟ್ಟಿನಿಂದ ನೋಡುವಾಗ, 'ಸಂಸ್ಕೃತದ ಪದ ಮತ್ತು ಪ್ರತ್ಯಯಗಳ ಬಳಕೆ ಕನ್ನಡದಲ್ಲಿ ಅರ್ಥ ಸಂದಿಗ್ದತೆಗಳನ್ನು ಮತ್ತು ಗೊಂದಲಗಳನ್ನು' ಉಂಟುಮಾಡಿದೆ. 'ತೊಡಕುಗಳನ್ನು ತಂದು ಹಾಕುವ ಮೂಲಕ ಕನ್ನಡ ಬರಹವನ್ನು ಕೃತಕವನ್ನಾಗಿ' ಮಾಡಿದೆ. ಆ ಮೂಲಕ 'ಕನ್ನಡ ಬರಹ ಮೇಲ್ವರ್ಗದವರ ಸೊತ್ತಾಗಿ ಮಾತ್ರವೇ' ಉಳಿಯುವತ್ತ ನಡೆದಿದೆ. 'ಎಲ್ಲಾ ವರ್ಗದವರ ಸೊತ್ತಾಗಬೇಕಿದ್ದಲ್ಲಿ' ಜನಬದುಕಿನಲ್ಲಿರುವ ಕನ್ನಡ ಬಳಕೆಯನ್ನು ಆಡಳಿತ, ಶಿಕ್ಷಣ, ನ್ಯಾಯ ಕಾನೂನು ಮೊದಲಾಗಿ ಸಾಮಾಜಿಕ ಬಳಕೆಗಳಲ್ಲಿ ಬಳಸುವ ಕಡೆಗೆ ಎಚ್ಚರದಿಂದ ಹೆಜ್ಜೆ ಹಾಕಬೇಕಾಗುತ್ತದೆ[15]. ಯಾಕೆಂದರೆ ಮಾತಿಗೆ ಅನುಗುಣವಾಗಿ ಬರಹ ಬದಲಾಗದೆ ಉಳಿದಲ್ಲಿ, ದಾಖಲೆಯಾಗುವ ಬರಹಕ್ಕೂ ಜನ ಬದುಕುಗಳ ಮಾತಿಗೂ ನಡುವಿರುವ ಅಂತರ ಹೆಚ್ಚುತ್ತಾ ಹೋಗುತ್ತದೆ. ತನ್ನ ಜೀವಂತಿಕೆಯನ್ನು ಕಳೆದುಕೊಳ್ಳುತ್ತದೆ[16]. ಮಾತಿನ ಜೀವಂತಿಕೆಯಿಲ್ಲದ ಬರಹ ವಿದ್ವಾಂಸರೆನಿಸಿಕೊಂಡ ಕೆಲವರ ಕಯ್ಯಲ್ಲಿ ಮಾತ್ರವೇ ಉಳಿಯುವಂತಾಗಿ ಆ ಭಾಷೆನ್ನಾಡುವ ಒಂದು ಸಮಾಜದ ದೊಡ್ಡ ಸಮುದಾಯದ ಮಟ್ಟಿಗೆ ಅನವಶ್ಯಕವಾಗಿ ಹೊತ್ತುಕೊಂಡಿರುವ ಬಾರವೆನಿಸಿ ಬಿಡುತ್ತದೆ[17].

---

[15]ಡಿಎನ್‌ಎಸ್ ರವರ ಚಿಂತನೆಗಳ ಸಹಾಯವನ್ನು ಪಡೆಯಲಾಗಿದೆ ಇಲ್ಲಿ. ಪು.250

[16]ಅತಿಯಾದ ಸಂಸ್ಕೃತ ಪದಗಳ ಬಳಕೆಯಿಂದ ಕೃತಕವಾಗುತ್ತಾ ಹೋಗುವುದು ಕನ್ನಡದ ಬರಹವಲ್ಲದೆ ಕನ್ನಡ ನುಡಿಯಲ್ಲ. ಯಾಕೆಂದರೆ ಎಂತಹ ಸಂದರ್ಬದಲ್ಲೂ ತನ್ನ ಸಹಜತೆಯನ್ನು ಮತ್ತು ಜೀವಂತಿಕೆಯನ್ನು ಉಳಿಸಿಕೊಳ್ಳುವ ಕಸುವು ಮಾತಿನಲ್ಲಿ ಬಳಕೆಯಲ್ಲಿರುವ ಮತ್ತು ತಲೆ ಮಾರಿನಿಂದ ತಲೆಮಾರಿಗೆ ಸಾಗಿಬರುವ ಎಲ್ಲಾ ನುಡಿಗಳಿಗೂ ಇದೆ–ಡಿ.ಎನ್. ಶಂಕರ ಬಟ್ ರವರ ಕನ್ನಡ ಬರಹವನ್ನು ಸರಿಪಡಿಸೋಣ–2006.

[17]ಹಳೆಗನ್ನಡ ತನ್ನ ಜೀವಂತಿಕೆಯನ್ನು ಕಳೆದುಕೊಳ್ಳತೊಡಗಿದ ಸಂದರ್ಬದಲ್ಲಿ ಕನ್ನಡ ಬರಹಗಾರರು ಅದನ್ನು ಬಿಟ್ಟುಬಿಡುವ ಕೆಚ್ಚು ತೋರಿದ್ದಾರೆ. ಅಂತಹ ಸಮಯದಲ್ಲಿ ಹಳೆಗನ್ನಡವನ್ನು ಬಳಸುವ ಬದಲು ಸಾಮಾನ್ಯ ಜನರಿಗೆ ಅರ್ತವಾಗುವಂತಹ ಮಾತಿನ ಕನ್ನಡವನ್ನು ಬಳಸಿ ವಚನಕಾರರು ತಮ್ಮ ವಚನಗಳನ್ನು ರಚಿಸಿದ್ದಾರೆ ಮತ್ತು ದಾಸರು ತಮ್ಮ ಹಾಡುಗಳನ್ನು ಹಾಡಿದ್ದಾರೆ.ಮಾತಿಗೆ

ಇಂಗ್ಲಿಶಿನ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಕರ್ನಾಟಕದ ಆಡಳಿತದಲ್ಲಿ ಹೇರಿಕೆಯಾಗಿ ಕುಳಿತಿರುವ 'ಸಂಸ್ಕೃತಗನ್ನಡ'ವನ್ನು ಬದಲಿಸಿ ಕನ್ನಡನಾಡಿನ ಜನ ಬದುಕುಗಳಿಗೆ ಹೆಚ್ಚು ಹೆಚ್ಚು ಹತ್ತಿರವಾಗುವಂತೆ ಆಡಳಿತ ಕನ್ನಡವನ್ನು ಬದಲಿಸುವ ಅಗತ್ಯವಿದೆ.ಅದರಲ್ಲಿ ತುಂಬಿ ತುಳುಕುತ್ತಿರುವ ಕೃತಕತೆಯನ್ನು ಸಾಧ್ಯವಾದಮಟ್ಟಿಗಾದರೂ ಕಡಿಮೆ ಮಾಡಬೇಕಾದ ಅನಿವಾರ್ಯತೆ ಇದೆ ಎನ್ನುವುದನ್ನು ಆಡಳಿತ ಕನ್ನಡದ ಸನ್ನಿವೇಶವೇ ಒತ್ತಾಯಿಸುತ್ತದೆ. ಈ ಮೇಲಿನ ಉದಾಹರಣೆಗಳೆ ಇದಕ್ಕೆ ಸಾಕ್ಷಿಯಾಗಿ ನಿಂತಿವೆ. ಪ್ರತಿಯೊಂದಕ್ಕೂ ಸಂಸ್ಕೃತದ ಅವಲಂಬನೆಗೆ ಬೀಳುವ ಬದಲು ಕನ್ನಡದ ಶ್ರೀಮಂತಿಕೆ, ಅದರ ಜಾಯಮಾನವನ್ನು ಅರಿತುಕೊಂಡು ಪ್ರಭುತ್ವ ಮತ್ತು ಜನತೆಯ ಸಂಬಂಧಗಳನ್ನು ಗಟ್ಟಿಗೊಳಿಸುವ ದಾರಿಗಳಲ್ಲಿ ಕನ್ನಡದವೇ ಆದ ಪದಗಳ ಬಳಕೆಯನ್ನು ಹೆಚ್ಚಿಸಬೇಕಾಗಿದೆ. **'ತನ್ನ ಕಾಲ ಮೇಲೆ ನಿಲ್ಲುವ ಕಸುವು ಕನ್ನಡಕ್ಕಿದೆ, ಅದಕ್ಕೆ ಸಂಸ್ಕೃತದ ಊರುಗೋಲು ಬೇಕಾಗಿಲ್ಲ'**[18] ಎಂಬ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. **"ಬರಹದ ಮೇಲೆ ಮಡಿವಂತಿಕೆಯನ್ನು ಹೊರಿಸಹೋಗದೆ ಜೀವಂತಿಕೆಯನ್ನು ತುಂಬುವ ಮೂಲಕ ಅದು ಎಲ್ಲರಿಗೂ ಬೇಕಾಗುವ ಹಾಗೆ ಮಾಡುವುದೇ ಈ ದಾರಿ.ಇದನ್ನು ಸಾಧಿಸುವುದು ಹೇಗೆ, ಕನ್ನಡ ಬರಹ ವಿದ್ವಾಂಸರ ಸೊತ್ತಾಗಿ ಮಾತ್ರವೇ ಉಳಿಯದೆ ಎಲ್ಲರ ಅವಶ್ಯಕತೆಗಳನ್ನೂ ಪೂರಯ್ಸುವ ಸಾದನವಾಗಲು ನಾವು ಏನು ಮಾಡಬೇಕು.ಈ ಸಂದಿಕಾಲದಲ್ಲಿ ನಮ್ಮ ಸಮಾಜ ಯಾವ ನಿರ್ದಾರವನ್ನು ತೆಗೆದುಕೊಳ್ಳುತ್ತದೆ ಎಂಬುದರ ಮೇಲೆ ಕನ್ನಡ ಬರಹದ ಅಳಿವು ಇಲ್ಲವೇ ಉಳಿವು ಅವಲಂಬಿಸಿದೆ" ಡಿ.ಎಸ್. ಶಂಕರ ಭಟ್** ಈ ಮಾತುಗಳು ದಿಟವಾದುವು.

ಹತ್ತಿರ ಬರುವುದರ ಮೂಲಕ ತನ್ನಲ್ಲಿ ಜೀವಂತಿಕೆಯನ್ನು ತುಂಬಿಕೊಳ್ಳುವ ಬರಹ ಜನರಿಗೆ ಬೇಡವೆಂದಾಗಲು ಸಾದ್ಯವೇ ಇಲ್ಲ ಎಂಬುದನ್ನೂ ಅವರು ತೋರಿಸಿಕೊಟ್ಟಿದ್ದಾರೆ–ಡಿ.ಎನ್. ಶಂಕರ ಬಟ್ ರವರ ಕನ್ನಡ ಬರಹವನ್ನು ಸರಿಪಡಿಸೋಣ–2006.

[18]ಅದೇ ಪು 250

ಅಧ್ಯಾಯ–6

ಕನ್ನಡ ಆಡಳಿತ: ಇಂಗ್ಲಿಶ್ ತೊಡಕಿನ ಸ್ವರೂಪ

"ಇಂಗ್ಲಿಶ್ ಬರಹಕ್ಕೆ ನಮ್ಮ ಸಮಾಜದಲ್ಲಿ ಸಿಗುವ ಮಹತ್ವ ಇದೇ ರೀತಿ ಮುಂದುವರಿದಲ್ಲಿ ಕೊನೆಗೊಮ್ಮೆ ಬರಹವನ್ನು ಬಳಸಬೇಕಾಗಿರುವಲ್ಲೆಲ್ಲ ಇಂಗ್ಲಿಶ್ ಬರಹವನ್ನೇ ಬಳಸುವ ಹಾಗಾಗಬಲ್ಲುದು. ಕನ್ನಡ ಬರಹ ಜನಸಾಮಾನ್ಯರ ಮಾತಿನಿಂದ ದೂರವಾಗುತ್ತಾ ಹೋಗಿ ತನ್ನ ಜೀವಂತಿಕೆಯನ್ನು ಕಳೆದುಕೊಳ್ಳುತ್ತಿರುವುದೇ ಈ ರೀತಿ ಅದರ ಉಳಿವಿನ ಪ್ರಶ್ನೆ ನಮ್ಮನ್ನು ಕಾಡಲು ತೊಡಗಿರುವುದಕ್ಕೆ ಮೂಲ ಕಾರಣ." ಹೀಗೆಂದವರು ಡಿ.ಎನ್. ಶಂಕರ ಬಟ್ (2006).

6.1 : ಕನ್ನಡ ಇಂಗ್ಲಿಶ್ ಬಳಕೆಯ ಬಿಕ್ಕಟ್ಟುಗಳ ಹಿನ್ನೆಲೆ

ಇಂಗ್ಲೀಷಿನ ತಿಳಿವು ಎಂದರೆ ಯುರೋಪಿನ ತಿಳಿವೇ ಆಗಿದೆ. ಸಾಮ್ರಾಜ್ಯಶಾಹಿ ನೀತಿ ಧೋರಣೆಯೇ ಇಂಗ್ಲೀಷಿನ ತಿಳಿವು. ಈ ಧೋರಣೆಗೆ ಒಲಿದವರಂತೆ ನಾವು ನಡೆದುಕೊಳ್ಳುತ್ತಿದ್ದೇವೆ. ಫ್ರಾನ್ಸ್, ಸ್ಪೇನ್, ಬ್ರಿಟಿಷ್ ಇವು ಬೇರೆ ಬೇರೆ ದೇಶಗಳಾದರೂ ಸಹ ಇವು ಪೋಷಿಸಿದ ಸಾಮ್ರಾಜ್ಯಶಾಹಿ ಧೋರಣೆಯಿಂದಾಗಿ, ಇಂದು ಯೂರೋಪಿನ ಮೂಲಕ ಇಂಗ್ಲಿಶ್ ಇಡೀ ಜಗತ್ತನ್ನು ಸಂಕೇತಿಸುತ್ತಿದೆ.

ಭಾರತದಲ್ಲಿ ಇಂಗ್ಲಶಿನ ಬಗೆಗೆ ಎರಡು ಧೋರಣೆಗಳು ಎದ್ದು ಕಾಣುತ್ತವೆ:

ಒಂದು: ಇಂಗ್ಲೀಷ್ ಭಾಷೆಯು ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಬೆಳೆದುಬಂದದ್ದು. ನಮ್ಮ ಪ್ರಾದೇಶಿಕ ಭಾಷೆಗಳನ್ನು ಬದಿಗಿರಿಸಿ ಇದನ್ನು ಬಳಸುತ್ತಿರುವುದರಿಂದ ರಾಷ್ಟ್ರೀಯ ಸ್ವಾಭಿಮಾನಕ್ಕೆ ದಕ್ಕೆಯೊದಗಿದೆ.

ಎರಡು: ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕೆಡಕುಗಳು ಏನೇ ಇದ್ದರೂ ಸ್ವಾತಂತ್ರ್ಯ ಸಾಧಿಸುವ ಭಾರತದ ರಾಷ್ಟ್ರೀಯತೆಗೆ ಇಂಗ್ಲಿಶಿನಿಂದ ಸಹಕಾರಿಯಾಗಿದೆ. ಉನ್ನತ ಶಿಕ್ಷಣ, ತಂತ್ರಜ್ಞಾನ ಹಾಗೂ ವೈಜ್ಞಾನಿಕ ಸಂಶೋಧನೆಗಳಿಗೆ ಇಂಗ್ಲೀಷ್ ಪ್ರೇರಕವಾಗಿದೆ.

ಮೊದಲನೆಯದನ್ನು ಒಪ್ಪುವವರು, ಎಲ್ಲ ಪ್ರಾದೇಶಿಕ ಭಾಷೆಗಳು ಭಾರತದಲ್ಲಿ ಚೆನ್ನಾಗಿ ಬೆಳೆದಿದೆ ಹಾಗೂ ವಿಫುಲವಾದ ಸಾಹಿತ್ಯವನ್ನು ಒಳಗೊಂಡಿವೆ. ಆದ್ದರಿಂದ, ಎಲ್ಲವೂ ಸಮಾನ ಸ್ಥಾನಮಾನ ಹೊಂದಲು ಸಾಧ್ಯ ಎಂದು ವಾದಿಸಿದರೆ, ಎರಡನೆಯದನ್ನು ಒಪ್ಪುವ ಗುಂಪು, ಒಂದು ವೇಳೆ ಇಂಗ್ಲೀಷನ್ನು ಬಿಟ್ಟುಕೊಟ್ಟಲ್ಲಿ ನಾವು ಎರಡು ಶತಮಾನಗಳಷ್ಟು ಹಿಂದಕ್ಕೆ ಹೋಗುತ್ತೇವೆ ಎಂದು ವಾದಿಸುತ್ತದೆ.

ಚರಿತ್ರೆಯತ್ತ ನೋಟ ಹರಿಸಿದರೆ, ಬ್ರಿಟಿಷರು 17ನೇ ಶತಮಾನದ ಮೊದಲಲ್ಲಿ ಭಾರತಕ್ಕೆ ಬಂದಾಗ[1], ಮೊಘಲರ ದರ್ಬಾರಿನಲ್ಲಿ ಪರ್ಷಿಯನ್ ಭಾಷೆ ಗೊತ್ತಿಲ್ಲದೆ ಅಪಹಾಸ್ಯಕ್ಕೊಳಗಾದವರು. ಪರ್ಷಿಯನ್ ಭಾಷೆ ಆಗ ಅಧಿಕಾರ ಭಾಷೆಯಾಗಿತ್ತು. ಪರ್ಷಿಯನ್ ಭಾಷೆಯ ಎದುರು ಈ ಅಪಹಾಸ್ಯವನ್ನು ನೀಗಿಸಿಕೊಳ್ಳಲು ಸಂಸ್ಕೃತ ಪಂಡಿತರನ್ನು ತಮ್ಮ ಅನುವಾದಕರನ್ನಾಗಿ ಮಾಡಿಕೊಂಡರು. ಆದರೆ, ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡು ಮಾರ್ಗದರ್ಶನ ಕೊಡುವಷ್ಟು ಸ್ಥಿತಿಯಲ್ಲಿ ಸಂಸ್ಕೃತ ಪಂಡಿತರು ಇರಲಿಲ್ಲ. ಮೊಘಲರ ವಿರುದ್ಧವಾಗಿ ಈ ಪಂಡಿತರನ್ನು ಒಲಿಸಿಕೊಳ್ಳಲು ಬ್ರಿಟಿಶರು ಸಂಸ್ಕೃತವನ್ನು ಇಡೀ ಭಾರತದ ಮೂಲ ನಿವಾಸಿಗಳ ಭಾಷೆಯೆಂದರು. ಇದರಿಂದ ಸಂಸ್ಕೃತ ಪಂಡಿತರನ್ನು ತಮ್ಮ ಹತ್ತಿರಕ್ಕೆ ಎಳೆದುಕೊಳ್ಳಲು ಸಾಧ್ಯವಾಯಿತು. ಇದು ಮುಂದೆ ಸ್ವಾತಂತ್ರ್ಯ ಸಂಗ್ರಾಮದ ಹೊತ್ತಿಗೆ ಬ್ರಿಟಿಶರ ವಿರುದ್ಧದ 'ಭಾರತೀಯ ಸಂಸ್ಕೃತಿ' ಎಂಬ ಅಸ್ತ್ರವೂ ಆಯಿತು. ಭಾಷಾಂತರ ಹಾಗೂ ಅನುವಾದದ ಈ ರಾಜಕಾರಣವನ್ನು ಗ್ರಹಿಸದೆ ವಸಾಹತುಶಾಹಿ ಕಟ್ಟಿರುವಂತಹ ಆಡಳಿತಭಾಷೆಯ ದಾರಿಯ ಒಳಸುಳಿಗಳನ್ನು ಅರಿಯುವುದು ಸುಳುವಾದುದಲ್ಲ ಅನಿಸುತ್ತದೆ.

ಇವತ್ತಿನ 'ಆಡಳಿತಭಾಷೆ ಕನ್ನಡ' ವೆಂದರೆ ಅದು ಕೂಡಾ ವೈದಿಕಶಾಹಿ ಮತ್ತು ವಸಾಹತುಶಾಹಿ ಮೇಳೈಸಿರುವ 'ಬ್ರಾಹ್ಮಿನಿಕಲ್ ಕ್ರಿಶ್ಚಿಯಾನಿಟಿ'ಯ ಮೂಲಕ ರೂಢಿಗೊಂಡಿರುವ ಕನ್ನಡವೆಂದೇ ತಿಳಿಯಬೇಕು. 18, 19ನೇಯ ಶತಮಾನಗಳಿಂದಲೂ ಹೀಗೆ ರೂಪುಗೊಂಡ ವಸಾಹತುಶಾಹಿ ಭಾಷೆ ಎಂದರೆ ಅದೊಂದು ನಿಕರವಾದ ಗುರಿಯ 'ಅಭಿವೃದ್ಧಿ ಕಥನ'. ಇದರೊಂದಿಗೆ ಪ್ರಾಚೀನ ಪಾಂಡಿತ್ಯಶಾಹಿ ಎನಿಸಿರುವ ಸಂಸ್ಕೃತ ಪರಂಪರೆ, ಆಧುನಿಕವೆನಿಸಿದ ಇಂಗ್ಲಿಶ್, ಇಂಗ್ಲಿಶಿನೊಂದಿಗೆ ಪ್ರವೇಶಗೊಂಡ ಹಲವು ಬಗೆಯ ವಿಜ್ಞಾನ-ತಂತ್ರಜ್ಞಾನ, ಜೀವನಕ್ರಮ, ಶಿಕ್ಷಣ, ಆಡಳಿತ ಮೊದಲಾದವು ಒಳಗೊಂಡಿವೆ. ಈ ಪ್ರಕ್ರಿಯೆ ಮಾನ್ಯಗೊಂಡಿರುವುದು 'ಸ್ಥಳೀಯ'ವನ್ನು 'ಅನ್ಯ'ವಾಗಿಸುವ ಮೂಲಕ. ನಿರುಪಯೋಗಿ ಎನಿಸುವ ಮೂಲಕ. ಆದ್ದರಿಂದಲೇ ಈ ವೈದಿಕಶಾಹಿ ಮತ್ತು ವಸಾಹತುಶಾಹಿ ಭಾಷೆಗಳು ವ್ಯಕ್ತಿಗತವಾದ ನೆಲೆಯದ್ದಾಗಿದ್ದರೂ ಸಾಮುದಾಯಿಕ ಐಡೆಂಟಿಟಿಯ ಭಾಷೆಯಾಗಿ ಪ್ರತಿನಿಧೀಕರಣಗೊಳ್ಳುತ್ತದೆ. ಆದ್ದರಿಂದಾಗಿ, ಆ ಮೂಲಕವೇ ಒಂದು ನಾಡಭಾಷೆಯನ್ನು ಸಂಘಟಿಸಲಾಗುತ್ತದೆ. ಆ ಮೂಲಕವೇ ಭಾಷೆಯ ಆಧುನಿಕತೆಯನ್ನು ಜಾರಿಗೊಳಿಸಲಾಗಿದೆ. ಆಧುನಿಕವಾಗಿ ಮುದ್ರಿತ ಕನ್ನಡಭಾಷೆಯ ಹಿಂದೆ ಇಂತಹ ಒಂದು ಸಾಂಸ್ಕೃತಿಕ ರಾಜಕಾರಣವಿದೆ. ಇದನ್ನೇ ನಾವು

[1] ಬ್ರಿಟಿಶರ ಭಾರತದ ಆಗಮನವನ್ನು ೧೬೦೦ ಎಂದು ಗುರುತಿಸಲಾಗುತ್ತದೆ.

ಐಡೆಂಟಿಟಿ ಪಾಲಿಟಿಕ್ಸ್ ಎಂದು ಕರೆಯುವುದು. ಇದರಲ್ಲಿ ಸಾಂಸ್ಥಿಕ ಸ್ವರೂಪದ ಆಯಾಮ ಹೊಂದಿರುವ ಆಡಳಿತಾತ್ಮಕ ವ್ಯವಸ್ಥೆಯನ್ನು ಗ್ರಹಿಸಬಹುದು. ವಸಾಹತುಶಾಹಿಯ ಎದುರು 'ದೇಶಿ' ಎನ್ನುವುದನ್ನು ಸಂಘಟಿಸುವುದೂ ಈ ಮೂಲಕವೇ. ಹಾಗೆಯೇ 'ಭಾರತೀಯ' ಎನ್ನುವುದು ಸಂಘಟಿತಗೊಳ್ಳುವುದೂ ಸಹ ಸಂಸ್ಕೃತದ ಪ್ರಭಾವ–ಪ್ರೇರಣೆಗಳಿಂದಲೇ ಎನ್ನುವುದನ್ನು ಗ್ರಹಿಸಿದರೆ ಇದು ಸರಿಯಾಗಿ ಅರಿವಿಗೆ ಬರುತ್ತದೆ. ವಸಾಹತೋತ್ತರದಲ್ಲಿ ಇಲ್ಲಿನ ಕನ್ನಡ ಭಾಷೆಯು ಸಂಸ್ಕೃತದ ದೃಷ್ಟಿಯಲ್ಲೇ ವಿವರಗೊಂಡು 'ಕನ್ನಡನುಡಿಯ ಭವಿಷ್ಯ'ವನ್ನು ಅದರ ಹಿನ್ನೆಲೆಯಲ್ಲೆ ನಿರೂಪಿತವಾಗುವಂತೆ ನಿರ್ದೇಶನಕ್ಕೆ ಒಳಪಡಿಸಲಾಗಿದೆ. ಕನ್ನಡದ ಯಾವುದೇ ವ್ಯಾಕರಣ ಪುಸ್ತಕವನ್ನು ನೋಡಿದರೂ ಇದು ತಿಳಿಯುತ್ತದೆ.

ಕನ್ನಡದ ಆಧುನಿಕದಲ್ಲಿ 'ಸಾಮಾಜಿಕ ಪಠ್ಯ' ನಿರ್ಮಾಣವಾಗಿರುವುದೇ ವಸಾಹತುಶಾಹಿ ಬಳಸಿದ ಇಂಗ್ಲಿಶ್ ಭಾಷೆ ಮತ್ತು ಅದರ ಮೂಲಕ ಸಂಘಟಿತವಾದ 'ವರ್ನಾಕ್ಯುಲರ್' ಅಥವಾ ದೇಶಭಾಷೆಯ ಕಣ್ಣಪಟ್ಟಿಯ ಚೌಕಟ್ಟಿನಲ್ಲಿ. ಪ್ಲಾಸಿ ಕದನದ ನಂತರ ಬ್ರಿಟಿಷರು ಭಾರತಕ್ಕೆ ಹೆಚ್ಚೆಚ್ಚು ಬರಲಾರಂಭಿಸಿದರು. ಬಂದಮೇಲೆ ಇಲ್ಲಿನ ಭಾಷೆಗಳನ್ನು ಕಲಿಯಲಾರಂಭಿಸಿದ್ದು, ತಮ್ಮ ಆಡಳಿತಕ್ಕೆ ಪೂರಕವಾಗಿ ವರ್ನಾಕ್ಯುಲರ್ ಭಾಷೆಗಳನ್ನು ಕಲಿಯಲು ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳತೊಡಗಿದ್ದು, ವ್ಯಾಕರಣಗಳು, ಅರ್ಥಕೋಶಗಳು, ಸಿದ್ಧಾಂತಗಳು, ತರಗತಿ ಪಠ್ಯಗಳು ಮತ್ತು ಅನುವಾದಗಳು ಸಿದ್ಧಗೊಂಡದ್ದು[2]' ಮೊದಲಾದ ಸಂಗತಿಗಳು 'ಸಾಮಾಜಿಕ ಪಠ್ಯ'ಗಳು ರೂಪುಗೊಂಡ ಚರಿತ್ರೆಯ ಹಿನ್ನೆಲೆಯಲ್ಲಿ ಕಾಣುವ ಸಂಗತಿಗಳಾಗಿವೆ.

ಅಂದು, ಕನ್ನಡದ ಸ್ಥಳೀಯತೆಯ ಗುರಿಯಲ್ಲಿ ತಯಾರಾದ ಪಠ್ಯಗಳ ಉತ್ಪಾದನೆ ಮತ್ತು ಮುದ್ರಣ ಬ್ರಿಟಿಷ್ ವಸಾಹತುಶಾಹಿಗೆ ಒಂದು ತಾರ್ಕಿಕ ಮತ್ತು ಸೈದ್ಧಾಂತಿಕ ಚೌಕಟ್ಟನ್ನು ಒದಗಿಸಿತ್ತು. ಈ ವಿದ್ಯಮಾನದ ಮೂಲಕ 'ಕಥನವೊಂದನ್ನು ಸೃಷ್ಟಿಸಿ, ಭಾರತೀಯ ರೂಪದ ಜ್ಞಾನ ಪರಂಪರೆಗಳನ್ನು ಐರೋಪ್ಯ ವಸ್ತುಗಳಾಗಿ ಪರಿವರ್ತಿಸುವ ಅಧಿಕಾರಯುತ ವಿದ್ಯಮಾನ ಅದಾಗಿತ್ತು'[3]. ಇಲ್ಲಿನ ಭಾಷೆಗಳ ಪ್ರತಿನಿಧೀಕರಣ ಯುರೋಪಿನ ಪರಿಕಲ್ಪನೆಗಳಲ್ಲಿ ನಡೆದದ್ದು ಹೀಗೆ. ಇಲ್ಲಿನ ಜ್ಞಾನ ಪರಂಪರೆಗಳು ವಸಾಹತುಶಾಹಿಯ ಮೂಗಿನ ನೇರಕ್ಕೆ ಅನುವುಗೊಂಡವು. ಆ ಮೂಲಕ ಈಸ್ಟ್ ಇಂಡಿಯಾ ಕಂಪೆನಿಯು ವಸಾಹತುಶಾಹಿಗೆ ಬೇಕಾದ ನೌಕರಿಶಾಹಿಯನ್ನು ಸಂಘಟಿಸಿಕೊಂಡಿತಲ್ಲದೆ, ಕನ್ನಡದ ಸಾಂಸ್ಕೃತಿಕ ಪರಂಪರೆಯನ್ನು ಸಂಪೂರ್ಣ ವಾಣಿಜ್ಯ

---

[2] Ranjith Guha (Ed) Sabaltern studies IV, Oxford University Press, P.139
[3] (Rajanith Guha (Ed) Sablatern studies, Oxford University Press, New Delhi), P. 116

ವಹಿವಾಟನ್ನಾಗಿಯೂ ಮಾರ್ಪಡಿಸಿತ್ತು. ಹೀಗೆ ಬೆಳೆದ ಬ್ರಿಟಿಷ್ ಆಡಳಿತವನ್ನು ನಿರ್ವಹಿಸಿಕೊಂಡು ಹೋಗುವುದರಲ್ಲಿ ತಮ್ಮ ಹಿತಾಸಕ್ತಿಗಳೂ ಇವೆ ಎನ್ನುವುದನ್ನು ಅರಿಯುವಂತೆ ಇಲ್ಲಿನ ಪ್ರತಿಷ್ಠಿತ ಬ್ರಾಹ್ಮಣವರ್ಗವನ್ನು ಭಾರತೀಯ ಸಮಾಜದ ಎದುರು ಕಟ್ಟಿ ತೋರಿಸಲಾಯಿತು.

ಗ್ರಾಂಥಿಕ ಭಾಷೆ ಮತ್ತು ಆಡು ಭಾಷೆಗಳ ಮಧ್ಯೆ ಅಧಿಕಾರ ಸಂಬಂಧವನ್ನು ಆಧುನಿಕವಾಗಿ ಸಂಘಟಿಸಿದವರು ಮಿಷನರಿ ವಿದ್ವಾಂಸರು. ಅದಕ್ಕೆ ಪೂರಕವಾಗಿ ಅವರ ಜೊತೆಗೆ ನಿಂತು ಕೆಲಸ ಮಾಡಿದವರು ಸ್ಥಳೀಯರಾದ ಅಂದಿನ ಬ್ರಾಹ್ಮಣ ಪಂಡಿತರು[4]. ಮುಖ್ಯವಾಗಿ ದೈನಂದಿನ ಚಟುವಟಿಕೆಗಳಿಗೆ ಬೇಕಾದ ಸಾಮಾನ್ಯ ಜ್ಞಾನವನ್ನು ನೇಟಿವ್ ಭಾಷೆಯ ಮೂಲಕ ಬ್ರಿಟಿಷ್ ಅಧಿಕಾರಿಗಳಿಗೆ ರೂಪಿಸಿಕೊಡುವುದು ಈ ವಿದ್ವಾಂಸರ ಮೊದಲ ಆದ್ಯತೆಯಾಗಿತ್ತು. ಭಾರತೀಯ ನೇಟಿವ್ ಜನರನ್ನು ಅರ್ಥೈಸುವುದೆಂದರೆ ಇಲ್ಲಿನ ಭಾಷೆಯನ್ನು ಕಲಿಯುವುದು. ಆ ಮೂಲಕ ಅವರನ್ನು ನಿಯಂತ್ರಿಸುವುದು. ಹಾಗಾಗಿ ಸ್ಥಳೀಯ ಭಾಷೆಗಳ ತಿಳುವಳಿಕೆ ಎಂದರೆ ಇಲ್ಲಿನ ಸಂಕೀರ್ಣವಾದ ಪರಂಪರೆಗೆ 'ಹಕ್ಕು' ಅನ್ನು ಆಗುಮಾಡುವುದು. ಇಲ್ಲಿನ ಜನರ ವಿಭಿನ್ನವಾದ ವಿಧಿ ಆಚರಣೆ, ನುಡಿ, ನಡೆಗಳನ್ನು ತಿಳಿದುಕೊಂಡು ಜನಬದುಕುಗಳ ನಡವಳಿಗಳನ್ನು ಪುನರ್ ಸಂಘಟಿಸುವುದು. ಆ ಮೂಲಕ 'ಅನ್ಯ'ವನ್ನು ಎಂದರೆ ಈ 'ಸ್ಥಳೀಯ'ವನ್ನು ವಸಾಹತುಶಾಹಿ ಆಡಳಿತಕ್ಕೆ ಪೂರಕವಾಗಿ ರೂಪಿಸಿಕೊಳ್ಳುವ ಕೆಲಸವನ್ನು ಮಾಡಲಾಯಿತು.

ಮೊದಲಿಗೆ ಯುರೋಪಿಯನ್ನರು 'ಕನ್ನಡ' ಪದವನ್ನು ಕೆನರಿಯಾ, ಕನ್ನರಿಗ, ಕನ್ನರಿ, ಕೆನಾರಿಸ್ ಎಂಬುವುದಾಗಿ ಕರೆಯುತ್ತಾರೆ. ಲಿಯೋನಾರ್ಡ್ ಚಿನ್ನಾಮಿಯು ಕನ್ನಡದಲ್ಲಿ ಭಾಷಾಕೋಶ ವ್ಯಾಕರಣಗಳನ್ನು ರಚಿಸಿದನೆಂಬ ಬಗ್ಗೆ ಉಲ್ಲೇಖ ಕಂಡುಬರುತ್ತದೆ[5]. ಗೋಡ್ಫ್ರಿಡ್ ವೈಗಲ್ **"On the Canarese language and Literature"** ಬರೆಹದಲ್ಲಿ ಮೊದಲ ಬಾರಿಗೆ ಕನ್ನಡಭಾಷೆಯ ಭೌಗೋಳಿಕ ನಕಾಶೆಯನ್ನು ನೀಡುವುದರ ಮೂಲಕ ಇಲ್ಲಿನ ಕನ್ನಡಭಾಷೆಯನ್ನು ಸಂಘಟಿಸಿ ಕೊಟ್ಟಿದ್ದಾನೆ. ಈ ಭೌಗೋಳಿಕತೆ ಮತ್ತು ಭಾಷೆ ಎರಡೂ ಒಂದುಗೂಡಿ ವಸಾಹತುಶಾಹಿಗೆ ಬೇಕಾದ **ಜಿಯಾಗ್ರಾಫಿಕಲ್ ಆ್ಯಟಿಟ್ಯೂಡ್**ನ್ನು ನಿರೂಪಿಸಿದೆ. ಇದು ಹೇಗೆಂಬುದನ್ನು ಎಡ್ವರ್ಡ್ ಸಯ್ಯದ್ ತನ್ನ ಕೃತಿ **'Orientalism'** ನಲ್ಲಿ ತೋರಿಸಿದ್ದಾನೆ.

---

[4] 1882ರಲ್ಲಿ ಗಿಲ್‌ಕ್ರಿಸ್ಟ್ ಎನ್ನುವವನು ಈ ಕೆಲಸವನ್ನು ಮೊದಲು ಮಾಡಿದ್ದಾನೆ.

[5] ಶ್ರೀನಿವಾಸ ಹಾವನೂರ್, ಹೊಸಗನ್ನಡದ ಅರುಣೋದಯ , ಪು 83–84.

ಕನ್ನಡ ಭಾಷೆಯನ್ನು ವಿವರಿಸುವ ಮೊದಲು ವೈಗಲನು ದ್ರಾವಿಡ ಪರಿವಾರದ ಭಾಷೆಗಳ ವರ್ಗೀಕರಣವನ್ನು ಮಾಡಿ ಕನ್ನಡ ಬಾಷಾ ಚರಿತ್ರೆಯನ್ನು ಕಟ್ಟುತ್ತಾನೆ. ಇದಕ್ಕೆ ಯುರೋಪಿನ ಭಾಷಾಶಾಸ್ತ್ರದ ನಿಯಮಗಳನ್ನು ಬಳಸಿಕೊಂಡಿದ್ದಾನೆ. ಅದೇ ರೀತಿ ಕಿಟೆಲ್ "An Essay on Canarese Literature" ಲೇಖನದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ನೆಪದಲ್ಲಿ ಕನ್ನಡ ಕವಿಗಳ ಕಾಲನಿಗದಿಯನ್ನು ಸರಳರೇಖಾತ್ಮಕವಾಗಿ ರಾಜತ್ವದ ಹಿನ್ನೆಲೆಯಲ್ಲಿ ಕಟ್ಟುತ್ತಾ ಹೋಗಿರುವುದು ಕಾಣುತ್ತದೆ.

ಡಬ್ಲ್ಯೂ ರೀವ್ ಬರೆದ **"Preface: Some remarks on the Kannada Language"** ಲೇಖನವು, ಕನ್ನಡವು ದ್ರಾವಿಡ ಭಾಷೆಗಳಲ್ಲಿ ಒಂದೆಂದು ಭಾಷಾ ಭೌಗೋಳಿಕತೆಯನ್ನು ಹೀಗೆ ಗುರುತಿಸುತ್ತದೆ; ಹತ್ತು ಮಿಲಿಯನ್ ಜನ ಈ ಭಾಷೆಯನ್ನು ಮಾತನಾಡುತ್ತಾರೆ ಎಂದು, ಪುರಾತನ, ಮಧ್ಯಯುಗೀನ ಹಾಗೂ ಆಧುನಿಕ ಎಂಬ ಮೂರು ಉಪಭಾಷೆಗಳ ಬಗ್ಗೆ ಹೇಳುತ್ತದೆ. ಈ ಲೇಖನದಲ್ಲಿ ಡಬ್ಲ್ಯೂ. ರೀವ್ Carnataka and English Dictionary ಯ ರಚನೆ ಸಂದರ್ಭದಲ್ಲಿ ಇಲ್ಲಿನ ಬ್ರಾಹ್ಮಣ ಪಂಡಿತರನ್ನು ಬಳಸಿ ಪದಗಳ ಸಂಗ್ರಹ ಮಾಡಿರುವ ಬಗ್ಗೆ ತಿಳಿಸಿದ್ದಾನೆ. ಎಂದರೆ ವಸಾಹತುಶಾಹಿ ವಿದ್ವಾಂಸರು ಯಾರೂ ಸಹ ಸ್ವತಃ ಜ್ಞಾನಿಗಳಾಗಿರದೆ ಇಲ್ಲಿನ ನೇಟಿವ್ ಜನರ ಜ್ಞಾನವನ್ನೆ ಅವಲಂಬಿಸಿದ್ದರೆಂಬುದು ಈ ಉದಾಹರಣೆಗಳಿಂದ ತಿಳಿಯುತ್ತದೆ. ವಸಾಹತುಶಾಹಿ ಇಲ್ಲಿನ ನೇಟಿವ್ ಜ್ಞಾನ ಪರಂಪರೆಗಳನ್ನು ತೆಗೆದುಕೊಂಡು ಅದನ್ನು ತನ್ನ ಅಧಿಕಾರ ಭಾಷೆಗೆ ಅನುವಾದಿಸಿಕೊಂಡಿರುವುದನ್ನು ಗ್ರಹಿಸಬಹುದಾಗಿದೆ. ಹೀಗೆ ವಸಾಹತುಶಾಹಿ ಪ್ರಭುತ್ವ ರೂಪಿಸಿಕೊಟ್ಟ ದಾರಿಗಳು ಇಲ್ಲಿನ ಸ್ಥಳೀಯ ನಡೆಗಳಿಗೆ ಅನೇಕ ಕೊರತೆಗಳನ್ನು ತುಂಬಿಬಿಟ್ಟಿದೆ ಎನ್ನುವುದನ್ನು ಗಮನಿಸಬೇಕಾಗುತ್ತದೆ.

ಬಿ.ಎಲ್. ರೈಸನ "Nagavarma's Karnataka Basha Bushana' ಕೃತಿಯಲ್ಲಿ ಕನ್ನಡ ಭಾಷೆಯ ಪ್ರಾಚೀನತೆ, ಕನ್ನಡ ಪದದ ಮೂಲದ ಬಗ್ಗೆ ಚರ್ಚಿಸುತ್ತಾ, ನೇಟಿವ್ಸ್ ಒಳಗೇ ಇದ್ದಂತಹ ಸಂಘರ್ಷಗಳ ಬಗ್ಗೆಯೂ ಪ್ರಶ್ನೆಗಳನ್ನು ಎತ್ತಿಕೊಳ್ಳಲಾಗಿದೆ. ಇದರಲ್ಲಿ ಎದ್ದು ಕಾಣುವ ಸಾಹಿತ್ಯ ಚರಿತ್ರೆಯ ಧಾರ್ಮಿಕ ವಿಭಜೀಕರಣವು ಮಿಷನರಿ ವಿದ್ವಾಂಸರು ತೋರಿಸಿಕೊಟ್ಟ ವಿಭಜಿಸಿ ಆಳುವ ತಂತ್ರಕ್ಕೆ ದೊಡ್ಡ ಉದಾಹರಣೆಯಾಗಿ ಕಾಣುತ್ತದೆ. ಡಾ. ಶ್ರೀನಿವಾಸ ಹಾವನೂರ[6] ಅವರು ಹೇಳುವಂತೆ "ನಾಡಿನ ಆಡಳಿತ ವಹಿಸಿಕೊಂಡ ಬ್ರಿಟಿಷರ ದೃಷ್ಟಿಯಲ್ಲಿ

[6] ಡಾ. ಶ್ರೀನಿವಾಸ್ ಹಾವನೂರ, ಹೊಸಗನ್ನಡ ಅರುಣೋದಯ ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ 1974

ಆಗಿನ ದೇಶೀಯ ಶಿಕ್ಷಣ ಪದ್ಧತಿಯಲ್ಲಿದ್ದ ಮುಖ್ಯ ದೋಷಗಳೆಂದರೆ ಶಿಕ್ಷಣವು ಹೆಚ್ಚು ವ್ಯಾಪಕವಾಗಿರದೆ ಕೆಲವೇ ಜನ ಅದರ ಪ್ರಯೋಜನ ಪಡೆಯುತ್ತಿದ್ದರೆನ್ನುವುದು ಒಂದು. ಇನ್ನೂ ಪ್ರಾಥಮಿಕ ಮಟ್ಟದ ಅಕ್ಷರ ಮತ್ತು ಗಣಿತದ ತಿಳುವಳಿಕೆ ಇಲ್ಲದೇ, ಕೆಲವೇ ಕಾವ್ಯ ಶಾಸ್ತ್ರಗ್ರಂಥಗಳ ಪಠಣ–ಇಷ್ಟನ್ನು ಬಿಟ್ಟರೆ, ಪ್ರಪಂಚದ ಆಗು–ಹೋಗುಗಳ ಉಪಯುಕ್ತ ವಿಷಯಗಳ ಪರಿಜ್ಞಾನವೂ ಇಲ್ಲದೇ ಹೋದದ್ದು' ಮತ್ತೊಂದು.

ಮದ್ರಾಸಿನ ಮನ್ರೋ ಹಾಗೂ ಮುಂಬಯಿಯ ಎಲ್ಫನ್‌ಸ್ಟನ್, ಇವರಿಬ್ಬರು ಕ್ರಮವಾಗಿ 'ನೇಟಿವ್ ಸ್ಕೂಲ್ ಆ್ಯಂಡ್ ಬುಕ್ ಸೊಸೈಟಿ' ಮತ್ತು 'ಬಾಂಬೆ ಎಜುಕೇಷನಲ್ ಸೊಸೈಟಿ' ಗಳನ್ನು ಆರಂಭಿಸಿದ್ದರ ಫಲವಾಗಿ 1862ರಲ್ಲಿ ಧಾರವಾಡದಲ್ಲಿ ಒಂದು ಮರಾಠಿ ಶಾಲೆ ಶುರುವಾಗುತ್ತದೆ. ಧಾರವಾಡ ವಿಭಾಗಕ್ಕೆ ಅಸಿಸ್ಟೆಂಟ್ ಕಲೆಕ್ಟರ್‌ರಾದ ವಾಲ್ಟರ್ ಎಲಿಯೇಟ್–"ಅದು ತಪ್ಪು, ಇಲ್ಲಿನ ಜನರ ಭಾಷೆ ಕನ್ನಡ, ಮಾತೃಭಾಷೆಯಲ್ಲಿಯೇ ಶಿಕ್ಷಣ ನಡೆಯಬೇಕಾದದ್ದು ನ್ಯಾಯವಾದುದು" ಎಂದು ವರದಿ ಮಾಡಿದ್ದಲ್ಲದೆ, ಒಂದು ಕನ್ನಡ ಶಾಲೆಯನ್ನೂ ಆರಂಭಿಸಿ ಮೂರು ವರ್ಷಗಳ ಕಾಲ ಅವರೇ ಅದರ ವೆಚ್ಚವನ್ನು ವಹಿಸುತ್ತಾರೆ. 1865ರಲ್ಲಿ ಮುಂಬೈ ಸರಕಾರವು 'ಸದರ್ನ್ ಮರಾಠಾ' ಪ್ರದೇಶದ ಜನರ ಭಾಷೆ ಕನ್ನಡವಾದ್ದರಿಂದ, ಕನ್ನಡದಲ್ಲಿಯೇ ಆಡಳಿತ ಮತ್ತು ಶಿಕ್ಷಣ ಕಾರ್ಯ ನಡೆಯಬೇಕು ಎಂಬ ನಿರ್ಣಯವನ್ನು ಸ್ವೀಕರಿಸುತ್ತದೆ[7]. ಯಾಕೆಂದರೆ, ಇದು ಬ್ರಿಟಿಷರ ಕಂದಾಯ ಹಾಗೂ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಅತ್ಯವಶ್ಯಕವಾಗಿ ಬೇಕಿತ್ತು. ಕನ್ನಡ ಭಾಷಿಕ ಪ್ರದೇಶದಿಂದ ಕಂದಾಯ ನೀಡುವುದನ್ನು ಜಾರಿಗೊಳಿಸಬೇಕಿತ್ತು.

19ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ವಸಾಹತುಶಾಹಿ ಪ್ರಭುತ್ವ ಬ್ರಿಟಿಷ್ ಭಾರತದ ಸ್ಪಷ್ಟ ನಕಾಶೆಯನ್ನು ಹೊಂದಿತ್ತಲ್ಲದೆ, ಅದರಲ್ಲಿ ಅನೇಕ ಬದಲಾವಣೆಗಳನ್ನೂ ಮಾಡುತ್ತದೆ. ಭೂಕಂದಾಯ ವಸಾಹತುಶಾಹಿ ಆಡಳಿತಕ್ಕೆ ಬೇಕಾದ ಅಧಿಕಾರವನ್ನು ಗಟ್ಟಿಗೊಳಿಸಿತ್ತಾದ್ದರಿಂದ ಇದು 19ನೇ ಶತಮಾನದುದ್ದಕ್ಕೂ ಬ್ರಿಟಿಶ್ ಆಡಳಿತದ ಪ್ರಮುಖ ವಿಷಯವಾಗಿದೆ ಎನ್ನುವುದನ್ನು ಗಮನಿಸಬೇಕು. ಅಂದರೆ, ಸ್ಕುಟನಾಬ್ ಕಾಂಗಾಸ್ ಹೇಳುವಂತೆ, ಇಂಗ್ಲೀಷ್ ಹೇಗೆ ಸ್ಥಳೀಯ ಜನರನ್ನು ತಮ್ಮದೇ ಬದುಕಿನಿಂದ ಪರಕೀಯಗೊಳಿಸಿ ಅತಂತ್ರರನ್ನಾಗಿಸಿದೆ ಎನ್ನುವುದನ್ನು ನಾವು ಗ್ರಹಿಸಬೇಕು.

7. ಅದೇ ನೋಡಿ, ಪು. 25

ಆಸ್ಟ್ರೇಲಿಯಾ, ಕೆನಡಾ, ಆಫ್ರಿಕಾ ಮುಂತಾದ ಸಮಾಜಗಳಲ್ಲಿನ ಆದಿವಾಸಿಗಳನ್ನು ಪರಕೀಯ ಶಿಕ್ಷಣ ಕ್ರಮ ಹೇಗೆ ಸಾಂಸ್ಕೃತಿಕ ವಿನಾಶದತ್ತ ದೂಡಿತು ಎಂಬುದನ್ನು ಅನೇಕರು ಗುರುತಿಸಿದ್ದಾರೆ. ಅಂತಹ ಅಧ್ಯಯನಗಳಲ್ಲಿ ಕಂಡುಬರುವ ಸಂಗತಿಗಳೆಂದರೆ;

- ಮನೆಯಲ್ಲಿ ಬದುಕಿನಲ್ಲಿ ಕಲಿಯುವ ಮೌಲ್ಯ ಮತ್ತು ವರ್ತನೆಯ ವಿಧಾನಗಳಿಗೂ ಶಾಲೆ ಹೇಳಿಕೊಡುವುದಕ್ಕೂ, ವ್ಯತ್ಯಾಸಗಳು ಕಂಡು ಗೊಂದಲ ಹುಟ್ಟುತ್ತದೆ.
- ತಮ್ಮ ತನದ ಬಗೆಗೆ ಕೀಳರಿಮೆ ಹುಟ್ಟುತ್ತದೆ.
- ಮಕ್ಕಳು ಶಾಲೆಯ ಚಟುವಟಿಕೆಗಳಲ್ಲಿ ಹಿಂದೆ ಬಿದ್ದು ವಿಫಲತೆಯನ್ನು ಅನುಭವಿಸಬೇಕಾಗುತ್ತದೆ.
- ತಮ್ಮ ಭಾಷೆಯು ಕಳೆದು ಹೋಗುತ್ತದೆ ಹಾಗೂ ಆ ಮುಖಾಂತರ ಸಂಸ್ಕೃತಿಯ ಆಳವಾದ ತಿಳುವಳಿಕೆ ನಷ್ಟವಾಗುತ್ತದೆ.

ಇವತ್ತಿನ ಆಡಳಿತ ಕನ್ನಡದ ಚಹರೆಗಳನ್ನು ಹಿಡಿದು ಹಿಮ್ಮುಖವಾಗಿ ಕಳೆದ ನೂರೈವತ್ತು–ಇನ್ನೂರು ವರುಶಗಳತ್ತ ಮುಖಮಾಡಿ ನಡೆದೆವಾದರೆ ಕನ್ನಡಭಾಷೆ, ಕನ್ನಡ ಜನಬದುಕಿನ ನಡೆಗಳು ವಸಾಹತುಶಾಹಿ ಮತ್ತು ವೈದಿಕಶಾಹಿಗೆ ಸಿಲುಕಿ ಕನ್ನಡ ಜಾಯಮಾನದ ಮೌಲ್ಯಗಳು ಹೇಗೆ ಬದಲಾಗಿವೆ ಎನ್ನುವುದನ್ನು ಗ್ರಹಿಸಬಹುದಾಗಿದೆ. ಇದನ್ನು ಪ್ರೊ.ಕೆ.ವಿ.ನಾರಾಯಣ, ಡಿಎನ್.ಶಂಕರಭಟ್ಟರಂತಹ ಕನ್ನಡದ ನುಡಿಯರಿಗರು ತೋರಿಸಿಕೊಟ್ಟಿದ್ದಾರೆ. ಮತ್ತೂ ಹಲವರು ಆ ಜಾಡು ಹಿಡಿದು ನಡೆದಿದ್ದಾರೆ. ಆದರೆ ವೈದಿಕಶಾಹಿ ಮತ್ತು ವಸಾಹತುಶಾಹಿ ಬೆರೆತು ಬೆಸೆದು ಬದಲಾಯಿಸಿರುವ 'ಕನ್ನಡದ ಬಗೆಗಿನ' ತಿಳುವಳಿಕೆಯನ್ನು ಸಾವಿರಾರು ವರುಶಗಳ ಕನ್ನಡ ತಿಳುವಳಿಕೆ ಎಂಬಂತೆ ಬಿಂಬಿಸಲಾಗುತ್ತಿದೆ[8]. ಸಾಮ್ರಾಜ್ಯಶಾಹಿಯ ವ್ಯಾಪಕ ಪರಿಸರವು ಭಾಷಾದ್ವೇಷವನ್ನು ಸೃಷ್ಟಿಸಿದೆ ಅಂತಲೇ ಹೇಳಬೇಕು[9]. ಸಾಮ್ರಾಜ್ಯಶಾಹಿಯು ತಾನು ಹೆಜ್ಜೆ ಊರಿದ ಎಡೆಗಳಲ್ಲಿ ತನ್ನ ಗುರುತುಗಳನ್ನು ಕೇವಲ

---

[8] ಈ ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಬೇರೆ ಭಾಷೆಗಳನ್ನು ಕಾಪಾಡುವುದು ಹೇಗೆ ಎಂಬುದು ನಮಗೆ ಸ್ಪಷ್ಟವಾಗಬೇಕಾದರೆ ನಾವು ಶಿಕ್ಷಣ ಕ್ರಮದಲ್ಲಿ "ಭಾಷಿಕ ಮಾನವ ಹಕ್ಕು" ಗಳನ್ನು ಪರಿಗಣಿಸಲೇಬೇಕು. ಈ ಪರಿಗಣನೆಯಲ್ಲಿ "ವ್ಯಕ್ತಿಯ ಮಾತೃಭಾಷೆ ಮತ್ತು ಸಮೂಹದ ಮಾತೃಭಾಷೆಗಳ ಭಿನ್ನ ವ್ಯಾಖ್ಯಾನಗಳು, ಲಕ್ಷಣಗಳು" ಯಾವುವು ಎಂದು ಪರಿಶೀಲಿಸಬೇಕು. ಏಕೆಂದರೆ ಮಾತೃಭಾಷೆಯೇ ಭಾಷಿಕ ಹಕ್ಕುಗಳ ತಳಹದಿಯಾಗಿರುತ್ತದೆ. ಹಕ್ಕುಗಳನ್ನು ಸಂಪಾದಿಸುವುದೆಂದರೆ ಅಧಿಕಾರವನ್ನು ಸಂಪಾದಿಸುವುದೆಂದೇ ಅರ್ಥ. ಆದ್ದರಿಂದ, "ಶೈಕ್ಷಣಿಕ–ಭಾಷಾ ಸಂಬಂಧಿತ ಯೋಜನೆಗಳಿಗೂ, ಸಾಮಾಜಿಕ ಅಧಿಕಾರ ವಿನ್ಯಾಸಗಳಿಗೂ, ಇವರು ಸಂಬಂಧವನ್ನು ಮುಖ್ಯವಾಗಿ ಗಣಿಸಬೇಕಾಗುತ್ತದೆ. ಈ ಕೆಲಸವನ್ನು ಮಾಡಲು ಭಾಷೆಗಳು ಹೇಗೆ ಶ್ರೇಣೀಕರಣಕ್ಕೆ ಒಳಗಾಗುತ್ತವೆ. ಹೇಗೆ ಕೊಲೆಯಾಗುತ್ತವೆ ಎಂಬುದರ ತಾತ್ವಿಕತೆಯನ್ನು ಅರಿಯುವುದು ಅಗತ್ಯವಾಗಿರುತ್ತದೆ.

[9] ಭಾಷೆಯೊಂದು ಸಾಯುವುದಕ್ಕೆ ಭಾಷಾದ್ವೇಷವೇ ಮುಖ್ಯ ಕಾರಣವಾಗಿರುತ್ತದೆ. ಭಾಷಾದ್ವೇಷವೆನ್ನುವುದು ಒಂದು ಪರಿಕಲ್ಪನೆ. ಅದು ಭಾಷೆಯೊಂದರ ಶಕ್ತಿ ಸಾಮರ್ಥ್ಯ ಹಾಗೂ ಶೈಕ್ಷಣಿಕವಾಗಿ ಭಾಷಾಸಂಬಂಧೀ ಯೋಜನೆಗಳಿಗೂ ಸಮಾಜದ ವರ್ಗಗಳು ಪಡೆದಿರುವ ಅಧಿಕಾರಶಕ್ತಿಯ ವಿನ್ಯಾಸಗಳಿಗೂ ಇರುವ ಸಾಪೇಕ್ಷ ಸಂಬಂಧದ ಸ್ವರೂಪವನ್ನು ಸ್ಪಷ್ಟಪಡಿಸುವ ಪರಿಕಲ್ಪನೆ.

ಉಳಿಯುವಂತೆ ಮಾಡುತ್ತದೆಯೆಂದು ಚಾರಿತ್ರಿಕವಾಗಿ ಹೇಳಿ ಬಿಡಲಷ್ಟೇ ಆಗುವುದಿಲ್ಲ. ಅದು ತನ್ನ 'ಅನ್ಯ'ದಲ್ಲಿ ನಿರಂತರವಾದ ತಳಮಳಕ್ಕೆ ಬೀಜವಾಗಿ ಪರಿಣಾಮಕಾರಿಯಾಗುತ್ತದೆ ಎನ್ನುವುದಕ್ಕೆ ಇಂಗ್ಲಿಶ್ ದೊಡ್ಡ ಉದಾಹರಣೆಯಾಗಿದೆ. ಸಾಮಾಜಿಕ ವ್ಯವಸ್ಥೆಯ ಸ್ಥಾಪಿತ ಹಿತಾಶಕ್ತಿಗಳನ್ನು ಕಾಪಾಡುವಲ್ಲಿ ಇಂಗ್ಲಿಶ್ ಭಾಷೆ ಮತ್ತು ಸಂಸ್ಕೃತಿಗಳು ಭಾರತದಲ್ಲಿ ನಿರಂತರವಾಗಿವೆ. ಅನಿರ್ದಿಷ್ಟ ಭಾಷೆಯ ಉಳಿವು ಮತ್ತು ಪ್ರಸಾರಕ್ಕೆ ಎಲ್ಲ ಬಗೆಯ ನೆರವು ಪ್ರಚೋದನೆ ಮತ್ತು ಪ್ರೋತ್ಸಾಹ ನೀಡುವಂತಾಗಿದೆ. ಇದರಿಂದ ಆ ನಿರ್ದಿಷ್ಟ ಭಾಷೆಯನ್ನು ಆಡುವವರ ಮತ್ತು ಇತರ ಭಾಷೆಗಳನ್ನು ಆಡುವವರ ನಡುವೆ ಸಾಂಸ್ಥಿಕವಾದ ಮತ್ತು ಸಾಂಸ್ಕೃತಿಕವಾದ ಅಸಮಾನತೆಗಳು ಉಂಟಾಗುತ್ತಲೇ ಇವೆ[10]. ಸಾಂಸ್ಥಿಕ ಮತ್ತು ಸಾಂಸ್ಕೃತಿಕ ಅಸಮಾನತೆಗಳಿಂದಾಗಿ ನಿರ್ದಿಷ್ಟ ಭಾಷೆಯೊಂದಕ್ಕೆ ಎಲ್ಲ ಬಗೆಯ ಸಂಪನ್ಮೂಲಗಳೂ ದೊರೆಯುವಂತಾಗಿ ಇತರ ಭಾಷೆಗಳ ಏಳಿಗೆಗೆ ಸಂಪನ್ಮೂಲಗಳ ಕೊರತೆ ಕಾಡತೊಡಗುತ್ತದೆ. ಇದರಿಂದ ನಿರ್ದಿಷ್ಟ ಭಾಷೆಯಲ್ಲಿ ಸಾಮರ್ಥ್ಯವನ್ನು ಪಡೆದವರಿಗೆ ಮಾತ್ರ ಎಲ್ಲ ಬಗೆಯ ಸವಲತ್ತುಗಳು, ಲಾಭಗಳು ದೊರೆಯತೊಡಗುತ್ತವೆ. ಉಳಿದ ಭಾಷಿಕರು "ವಂಚಿತ"ರಾಗುತ್ತಾರೆ. ಭಾಷಾದ್ವೇಷವು ಯಾವಾಗಲೂ ಪ್ರಬಲ ಭಾಷೆಗಳನ್ನು ಮತ್ತಷ್ಟು ಪ್ರಬಲಗೊಳಿಸುತ್ತದೆ. ರಾಜ್ಯಶಕ್ತಿಯು ಅಧಿಕೃತ ಆಡಳಿತಭಾಷೆಗೆ ನೀಡುವ ಪ್ರೋತ್ಸಾಹವು ಆಡಳಿತ ಭಾಷೆಗಳಲ್ಲದ ಇತರ ಭಾಷೆಗಳ ಮಟ್ಟಿಗೆ ಭಾಷಾದ್ವೇಷದ ಪರಿಣಾಮವನ್ನೇ ಉಂಟುಮಾಡಿರುವುದು ಕಾಣುತ್ತಿದೆ. ಇದು ಭಾರತದ ಮಟ್ಟಿಗಂತೂ ಮತ್ತೂ ನಿಜ.

ಕೆಲವು ಸಂದರ್ಭಗಳಿಗೆ ಮಾತ್ರ ಅನ್ವಯವಾಗುವಂತೆ ಅನ್ಯಭಾಷೆಯೊಂದರ ಬಳಕೆಯನ್ನು ಒಪ್ಪಿಕೊಳ್ಳುವುದು ನಮ್ಮ ಸನ್ನಿವೇಶದಲ್ಲಿ ನಮ್ಮ ಭಾಷೆಯನ್ನೇ ಉಳಿಸಿಕೊಳ್ಳಲು ಹೋರಾಡುವುದು ಎನ್ನುವಂತಾಗಿದೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ಅಥವಾ ಕಛೇರಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಇಂಗ್ಲೀಷನ್ನು ಉಪಯೋಗಿಸುತ್ತಾ, ಉಳಿದಂತೆ ನಮ್ಮ ಭಾಷೆಯನ್ನೇ ಬಳಸುತ್ತೇವೆ ಎನ್ನುವ ಧೋರಣೆಯು ಆಂಶಿಕ ಭಾಷಾಪಲ್ಲಟದ ಪರಿಸ್ಥಿತಿಯಂತೆ ಗೋಚರಿಸುತ್ತದೆ ದಿಟ. ಆದರೆ ಅದು ನಿಜವಾಗಿಯೂ ಸ್ಥಳೀಯ ಭಾಷೆ/ಸಂಸ್ಕೃತಿಗಳ ಅಪಮೌಲ್ಯಕ್ಕೆ ಕಾರಣವಾಗಿದೆ. ಹಾಗೆ ಹೇಳಲಾರೆವೇನೋ ಎನ್ನುವಂತೆ ಮೀರಿ ಆಕ್ರಮಿಸಿಕೊಂಡಿದೆ.

[10] ಈ ಮಾತಿನಲ್ಲಿ ಸಾಂಸ್ಥಿಕ ಎಂಬುದು ಭೌತಿಕ ಗುಣಲಕ್ಷಣಗಳನ್ನೂ, ಸಾಂಸ್ಕೃತಿಕ ಎಂಬುದು ಐಡಿಯಾಲಜಿಯ ಗುಣಲಕ್ಷಣಗಳನ್ನೂ ಹೊಂದಿದೆ.

ಹಿಂದಿನ ಕಾಲದಲ್ಲಿ ವಸಾಹತುಗಳಾಗಿದ್ದ ದೇಶಗಳಲ್ಲಿ ಮತ್ತು ವಲಸೆಗಾರರು ಹೆಚ್ಚಾಗಿರುವ ದೇಶಗಳಲ್ಲಿ ಪ್ರಧಾನ ಭಾಷೆಗಳನ್ನು ವೈಭವೀಕರಿಸುವುದು ಮತ್ತು ಅಧೀನ ಭಾಷೆಗಳನ್ನು ಹೀಗಳೆಯುವುದು ಕಂಡುಬರುತ್ತದೆ. ಮೂರನೇ ಜಗತ್ತಿನ ದೇಶಗಳ ಶಿಕ್ಷಣಕ್ರಮದಲ್ಲಿ ಇಂಗ್ಲೀಷ್‌ಗೆ ಇರುವ ಪ್ರಾಧಾನ್ಯತೆ ಹೆಚ್ಚಿದಂತೆಲ್ಲ ಮಾತೃಭಾಷೆಗಳ ಪಲ್ಲಟ ಆರಂಭವಾಯಿತು. ಇದು ಕ್ರಮೇಣ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾಮ್ರಾಜ್ಯಶಾಹಿಗೆ ದಾರಿ ಮಾಡಿಕೊಟ್ಟಿತು. ಭಾರತದಂತಹ ದೇಶದಲ್ಲಿ ಸಾರ್ವಜನಿಕ ಜೀವನದಲ್ಲಿನ ಇಂತಹ ಶಿಕ್ಷಣ ತತ್ವಗಳು ಕ್ರಮೇಣ ಕುಟುಂಬದ ಖಾಸಗಿ ವಲಯಕ್ಕೂ ಪ್ರವೇಶಿಸತೊಡಗಿದವು. ಇಂಗ್ಲೀಷನ್ನು ಬಳಸಬಲ್ಲ ಜನ ಮನೆಮನೆಗಳಲ್ಲೂ ಇಂಗ್ಲೀಷನ್ನೇ ಬಳಸಲು ತೊಡಗುವಂತಾಗಿದೆ.

ಹೀಗಾಗಿ ಸಾಮ್ರಾಜ್ಯಶಾಹಿಯ ಅನೇಕ ರೂಪಗಳಲ್ಲಿ ಭಾಷಿಕ ಸಾಮ್ರಾಜ್ಯಶಾಹಿಯೂ ನಮ್ಮ ಎದುರಿನಲ್ಲಿದೆ. ಇಲ್ಲಿಯೂ ಸಾಮ್ರಾಜ್ಯಶಾಹಿಯ ಐಡಿಯಾಲಜಿಗಳು, ಸಂರಚನೆಗಳು ನಮ್ಮನ್ನು ಸುತ್ತಿಕೊಂಡಿವೆ. ಸಾಮ್ರಾಜ್ಯಶಾಹಿಯ ಕೇಂದ್ರವು ವಿಸ್ತರಿಸಿದಂತೆಲ್ಲಾ ಏಳಲಾಗದಂತಹ ಅಧೀನತೆಗೆ ಬೀಳುವಂತಾಗಿದೆ. ಇಂಗ್ಲಿಶ್ ಭಾಷೆಯು ಇದಕ್ಕೆ ಒಂದು ಉಪಕರಣವಾಗಿ ಬಳಕೆಯಾಗುತ್ತಿದೆ. ಭಾಷಾದ್ವೇಷದ ಧೋರಣೆ ಇತರ ಭಾಷೆಗಳನ್ನು ಕುಂಠಿತಗೊಳಿಸಿ ಇಂಗ್ಲೀಷನ್ನು ಪ್ರಬಲಗೊಳಿಸುತ್ತಿದೆ[11].

ಸಂಸ್ಕೃತಿ ಮತ್ತು ಭಾಷೆಗಳಿಗೆ ಶ್ರೇಣೀಕರಣವನ್ನು ಸಮರ್ಥಿಸುವ ಶಕ್ತಿ ಇದೆಯೆಂದು ನಂಬಲಾಗುತ್ತದೆ. ಕೆಲವು ಸಂಸ್ಕೃತಿಗಳಿಗೆ, ಕೆಲವು ಭಾಷೆಗಳಿಗೆ ಸೇರಿದ ಜನರು ಮಾತ್ರ ಅಧಿಕಾರವನ್ನು ನಡೆಸಲು ಯೋಗ್ಯರು, ತಮ್ಮ ಪ್ರಭಾವವನ್ನು ವಿಸ್ತರಿಸಿಕೊಳ್ಳುವುದಕ್ಕೆ ಸಮರ್ಥರು ಎಂದು ತಿಳಿಯಲಾಗುತ್ತದೆ. ಇದು ಹೊಸ ರೂಪ, ಹೊಸ ವೇಷಗಳನ್ನು ತಾಳಿ ಬಂದಿರುವ ವರ್ಣದ್ವೇಷ, ಜನಾಂಗದ್ವೇಷಗಳಲ್ಲದೆ, ಬೇರೇನೂ ಅಲ್ಲ. ನಿಜವಾಗಿಯೂ ಇದು ಭಾಷಾದ್ವೇಷವೇ. ಹಿಂದೆ ಭೌತಿಕವಾಗಿ, ದೈಹಿಕವಾಗಿ ಮಾತ್ರ ಮನುಷ್ಯರನ್ನು ಆಳಲಾಗುತ್ತಿತ್ತು, ದಮನಿಸಲಾಗುತ್ತಿತ್ತು. ಈಗಿನ ಭಾಷಾ ದ್ವೇಷವು ಇನ್ನೂ ಸೂಕ್ಷ್ಮವಾದದ್ದು. ಇದು ನಮ್ಮ ಪ್ರಜ್ಞೆಯನ್ನೇ ಅಧೀನಕ್ಕೊಳಪಡಿಸಿಕೊಳ್ಳುತ್ತದೆ. ಇದರಿಂದಾಗಿ ದಮನಕ್ಕೊಳಗಾದ ಭಾಷಿಕರ ವಾಸ್ತವದ

[11] ಇದು ನವ ಸಾಮ್ರಾಜ್ಯಶಾಹಿಯ ಇನ್ನೊಂದು ಮುಖ. ಸಾಮ್ರಾಜ್ಯಶಾಹಿಯ ಕೇಂದ್ರದ ಭಾಷೆಯು ಆ ಕೇಂದ್ರದ ಸನಿಹದಲ್ಲಿರುವ ಅಲ್ಪಸಂಖ್ಯಾತರ ಇತರ ಭಾಷೆಗಳನ್ನು ಮತ್ತು ತನ್ನ ವಲಯದ ಅಂಚಿನಲ್ಲಿರುವ ಇನ್ನಿತರ ಭಾಷೆಗಳನ್ನು ಕ್ರಮವಾಗಿ ದುರ್ಬಲಗೊಳಿಸುತ್ತಾ ಹೋಗುತ್ತದೆ. ಇದರಿಂದ ಅಧಿಕಾರ ಮತ್ತು ಐಶ್ವರ್ಯಗಳನ್ನು ಒಂದು ಕೇಂದ್ರದಲ್ಲಿ ಜಮಾಯಿಸಲು ಅನುಕೂಲವಾಗುತ್ತದೆ. ಭಾಷಾದ್ವೇಷವು ಇಷ್ಟು ಸೂಕ್ಷ್ಮವಾಗಿರುತ್ತದೆಂದರೆ ಸಾಮ್ರಾಜ್ಯಶಾಹಿಯನ್ನು ಬಲಪಡಿಸುವಲ್ಲಿ ಭಾಷೆಯೂ ವಹಿಸುವ ಪಾತ್ರ ತಮ್ಮ ಅರಿವಿಗೇ ಬರುವುದಿಲ್ಲ. ಅಧಿಕಾರದ ಅಸಮಾನ ಹಂಚಿಕೆಯ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಭಾಷಾ ದ್ವೇಷ ಪ್ರಮುಖ ಪಾತ್ರ ವಹಿಸುತ್ತದೆ.

ಕಲ್ಪನೆಯೇ ಪಲ್ಲಟಕ್ಕೆ ಒಳಗಾಗುತ್ತದೆ. ಪ್ರಧಾನ ಭಾಷೆಯನ್ನಾಡುವ "ಭಾಷಿಕ ಸಾಮ್ರಾಜ್ಯಶಾಹಿಗಳು" ಯಾವುದನ್ನು ಸತ್ಯ ಅಥವಾ ವಾಸ್ತವಿಕ ಎಂದು ಗ್ರಹಿಸುತ್ತಾರೋ ಅದನ್ನೇ ತಾವೂ ನಂಬಲು ತೊಡಗುತ್ತಾರೆ. ತಮ್ಮ ಸ್ವಂತ ಭಾಷೆ ಮತ್ತು ಸಂಸ್ಕೃತಿಗಳು ಕೆಳಮಟ್ಟದವು, ಪ್ರಧಾನ ಭಾಷೆ ಮತ್ತು ಸಂಸ್ಕೃತಿಗಳು ಉಜ್ವಲವಾದವು ಎಂಬ ಕೀಳರಿಮೆ ಮತ್ತು ವೈಭವೀಕರಣಗಳು ಕ್ರಮೇಣ "ವೈಚಾರಿಕ"ವಾಗಿಯೂ ಸತ್ಯವೆನಿಸತೊಡಗುತ್ತವೆ. ನಂತರದ ಹಂತದಲ್ಲಿ ಅಸಮಾನತೆಯನ್ನು ಆಧರಿಸಿದ ಸಾಮಾಜಿಕ ಶಕ್ತಿ ಸಂಬಂಧಗಳು "ದೈವದತ್ತ" ಅಥವಾ "ಸಹಜ" ಎನಿಸತೊಡಗುತ್ತವೆ. ಹೀಗೆ ವಿಕೃತಗೊಂಡ ವಾಸ್ತವದ ಕಲ್ಪನೆಯು ಅಂತರಂಗದಲ್ಲಿ ಬೇರುಬಿಟ್ಟು ಬೆಳೆಯತೊಡಗುತ್ತದೆ. ಇಲ್ಲಿ ಒಂದು ಸಂಗತಿಯನ್ನು ನಾವು ನೆನಪಿಡಬೇಕು. ಭಾಷೆಯೊಂದಕ್ಕೆ ಮತ್ತೆ ಜೀವ ತುಂಬುವ ಕೆಲಸ ನಡೆದರೂ ದಮನಕ್ಕೊಳಗಾದ ಅವಧಿಯಲ್ಲಿ ಮೂಡಿದ ಮಾನಸಿಕ ಸಂರಚನೆಗಳು ಬದಲಾಗುತ್ತವೆಂಬ ಖಾತ್ರಿಯಿಲ್ಲ. ಇದು ಇವತ್ತಿನ ಕನ್ನಡದ ಸನ್ನಿವೇಶ.

ಡಿ.ಡೊಮಿನಿಕ್[12] ತಮ್ಮ ಸಂಶೋಧನಾ ಬರಹದಲ್ಲಿ ಗುರುತಿಸಿರುವಂತೆ 'ಸಾಮಾಜಿಕ ವರ್ಗಗಳಲ್ಲಿರುವ ಶಕ್ತಿ ಸಂಬಂಧಗಳ ಸ್ವರೂಪವು ಭಾಷಾಬಳಕೆಯ ವಿನ್ಯಾಸವನ್ನು ನಿರ್ಧರಿಸುತ್ತದೆ. ಭಾಷೆಯ ಸಾವು, ಭಾಷೆಯ ಹತ್ಯೆ, ಭಾಷೆಯ ಪುನರುಜ್ಜೀವನ ಇವೆಲ್ಲ ಪ್ರಕ್ರಿಯೆಗಳೂ ತಮ್ಮಷ್ಟಕ್ಕೆ ತಾವೇ ನಡೆಯಲಾರವು. ಈ ಪ್ರಕ್ರಿಯೆಗಳು ಆರ್ಥಿಕ ಮತ್ತು ರಾಜಕೀಯ ಅಭಿವೃದ್ಧಿಯ ಪ್ರಕ್ರಿಯೆಗಳೊಂದಿಗೆ ಸಮಾನಾಂತರವಾಗಿ ಸಾಗುತ್ತವೆ. ಭಾಷಿಕ ಅಭಿವೃದ್ಧಿಯಲ್ಲಿ ಆಗುವ ಎಲ್ಲ ಬದಲಾವಣೆಗಳೂ ಅಥವಾ ನೀಡಲಾಗುವ ಎಲ್ಲಾ ಸವಲತ್ತುಗಳೂ ಸಮಾಜದ ಮೇಲುವರ್ಗಗಳು ತಮ್ಮ ಹಿತವನ್ನು ಕಾಪಾಡಿಕೊಳ್ಳಲು ಮಾಡಿಕೊಳ್ಳುವ ಹೊಂದಾಣಿಕೆಗಳ ಇನ್ನೊಂದು ರೂಪವೇ ಆಗಿರುತ್ತದೆ. ತಮ್ಮ ಪ್ರಾಧಾನ್ಯವನ್ನು ಭಾಷೆಯನ್ನಾಧರಿಸಿ ಗುರುತಿಸಿಕೊಳ್ಳುವುದರಿಂದ ಆಗುವ ಪರಿಣಾಮಗಳು ಹೀಗಿರುತ್ತವೆ;

- ಸಂವಹನ ಮಾಧ್ಯಮದ ಮೇಲೆ ಅಧಿಕಾರ ಪ್ರಾಪ್ತವಾಗುತ್ತದೆ.
- ಭಾಷೆಯೇ ಮುಖ್ಯ ಉಪಕರಣವಾಗಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಯಶಸ್ಸು ಸುಲಭ ಸಾಧ್ಯವಾಗುತ್ತದೆ.
- ಅಧಿಕೃತವಾದ 'ಜ್ಞಾನ' ವೆಂದರೆ ಏನು, ಕೌಶಲವೆಂದರೆ ಏನು ಎಂಬುದನ್ನು ವ್ಯಾಖ್ಯಾನಿಸುವ ಹಕ್ಕು ದೊರೆಯುತ್ತದೆ.

---

[12]ಡಾಮ್ನಿಕ್: ಮಂಗಳೂರು ವಿವಿಗೆ ಸಲ್ಲಿಸಿರುವ ಸಂಶೋಧನಾ ಬರಹ, ಅಪ್ರಕಟಿತ

- ಭಾಷಾ ಹತ್ಯೆಯ ಮುಖ್ಯ ಉದ್ದೇಶವೇ ಅಧಿಕಾರದ ಹಕ್ಕನ್ನು ಸ್ಥಾಪಿಸುವುದಾಗಿರುತ್ತದೆ ಮತ್ತು
- ಸಾಮಾಜಿಕ ವಾಸ್ತವದ ಪರಿಕಲ್ಪನೆಯ ನಿರ್ವಚನದ ಏಕಸ್ವಾಮ್ಯವನ್ನು ಮುಂದುವರೆಸುವುದಾಗಿರುತ್ತದೆ.

ನಾವು ತಲುಪಬಹುದಾದ ತೀರ್ಮಾನ ಹೀಗಿರಬಹುದು; ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಶ್ರೇಣೀಕರಣವನ್ನು ಇರುವಂತೆಯೇ ಉಳಿಸಿಕೊಳ್ಳುವುದಕ್ಕಾಗಿಯೇ ಭಾಷಾ ಶಿಕ್ಷಣವನ್ನು ಉಪಯೋಗಿಸಿಕೊಳ್ಳಲಾಗುತ್ತಿರುವುದರಿಂದ ಸಮಾಜದಲ್ಲಿರುವ "ಶಕ್ತಿ ಸಮೀಕರಣ"ವು ವ್ಯತ್ಯಾಸ ಹೊಂದಿದಾಗ ಮಾತ್ರ ಭಾಷಾಶಿಕ್ಷಣವು ಬದುಕಿನಲ್ಲಿ ಬದಲಾವಣೆಯನ್ನು ತರಬಹುದು ಎನ್ನುವುದು ಡಾಮಿನಿಕ್ ಅವರ ನಿಲುವು. ಮುಂದುವರೆದು ಅವರು ಹೇಳುವಂತೆ; ದುರ್ಬಲರು, ಅಲ್ಪಸಂಖ್ಯಾತರು ಪ್ರತಿಶ್ರೇಣೀಕರಣವನ್ನು ಸಾಧಿಸಲು ಭಾಷಾಶಿಕ್ಷಣವನ್ನು ಬಳಸಿಕೊಳ್ಳಬಹುದು ಎಂದೂ ತಿಳಿದಿದೆ. ಆದರೆ, ಭಾಷೆಯ ಪುನರುಜ್ಜೀವನ ಸಂದರ್ಭದಲ್ಲಿ ಸಹನೆಯನ್ನು ತೋರುವುದು, ಭಾಷೆಯ ಉಳಿವಿಗೆ ಸಹಾಯ ಘೋಷಿಸುವುದು ಇತ್ಯಾದಿ ಕ್ರಿಯೆಗಳು, ಪ್ರಧಾನ ವರ್ಗಗಳು ತಮ್ಮ ಹಿತವನ್ನು ಕಾಯ್ದುಕೊಳ್ಳಲು ಬಳಸುತ್ತಿರುವ ಅತಿ ಪರಿಷ್ಕೃತ ಸೂಕ್ಷ್ಮ ವಿಧಾನಗಳಾಗಿ ಬಿಟ್ಟಿವೆಯೇ ಎಂಬ ಬಗೆಗೂ ನಾವು ಎಚ್ಚರವನ್ನು ಹೊಂದಿರಬೇಕು. ಗುಂಪುಗಳಿಗೆ ಭಾಷಿಕ ಹಕ್ಕುಗಳು ಬೇಕು ಎಂದು ಹೋರಾಡುವಾಗ ನಾವು ಆ ಹಕ್ಕುಗಳಿಂದಾಗಿ ಅಲ್ಪಸಂಖ್ಯಾತರು ತಮ್ಮತನವನ್ನು ಉಳಿಸಿಕೊಳ್ಳಲು ಸಹಾಯವಾಗುತ್ತದೆಯೋ ಅಥವಾ ಯಜಮಾನಿಕೆಯನ್ನು ಮತ್ತಷ್ಟು ದೃಢಪಡಿಸುತ್ತದೆಯೋ ಎಂಬುದನ್ನು ಅರಿಯಬೇಕು.

19ನೇ ಶತಮಾನದ ಮಧ್ಯಭಾಗದ ವೇಳೆಗೆ ಸಾಹಿತ್ಯದ ಮೂಲಕ ಕರ್ನಾಟಕದ ಅನನ್ಯತೆಯನ್ನು ಗುರುತಿಸಿಕೊಳ್ಳುವ ಪ್ರಯತ್ನಗಳು ನಡೆಯಲಾರಂಭಿಸಿದವು. ಈಗಾಗಲೆ ವಿವರಿಸಿರುವಂತೆ, ಪಾಶ್ಚಿಮಾತ್ಯ ವಿದ್ವಾಂಸರು ಈ ಕನ್ನಡ ಭಾಷಾವಾರು ಪ್ರಾಂತ್ಯವು ಹುಟ್ಟುವುದರ ಹಿನ್ನೆಲೆಯಲ್ಲಿ ಇದ್ದಾರೆ ಹೌದು. ಇದರಲ್ಲಿ ವೈಗಲ್, ಬಿ.ಎಲ್. ರೈಸ್, ಕರ್ನಲ್ ಮೆಕೆಂಜ್ಜಿ, ಮಾರ್ಕ್ ವಿಲ್ಕನ್, ಮೊಗ್ಲಿಂಗ್, ಕಿಟೆಲ್ ಮೊದಲಾದವರನ್ನು ಹೆಸರಿಸಬಹುದು. ಅಂದರೆ ವಸಾಹತುಶಾಹಿಯು ನೇರವಾಗಿ ಕರ್ನಾಟಕದ ಸಾಂಸ್ಕೃತಿಕ ಪುನರ್ ನಿರ್ಮಾಣಕ್ಕೆ ಎಡೆಮಾಡಿಕೊಟ್ಟಿತು. ಅದೇ ಮುಂದಿನ ಹತ್ತು ಹಲವು ಬೆಳವಣಿಗೆಗಳ ಮೂಲಕ ಕನ್ನಡ ಬಳಕೆಯ ಸಂಕಟಗಳಿಗೂ ಕಾರಣವಾಯಿತು. ಇವತ್ತಿನ ಕರ್ನಾಟಕ ಆಡಳಿತದ ಭಾಷಿಕ ಬಿಕ್ಕಟ್ಟುಗಳನ್ನು ಈ ಹಿನ್ನೆಲೆಯಲ್ಲಿ ಅರಿಯಬೇಕಾಗಿದೆ.

6.2: ಆಂಗ್ಲರ ಆಡಳಿತ ಕಾಲದಲ್ಲಿ ಕನ್ನಡ ಬಳಕೆಯ ಪ್ರಶ್ನೆಯನ್ನು ಎದುರಿಸಿದ್ದು ಹೇಗೆ?

ಈ ಕಾಲದ ಸಂಗತಿಗಳನ್ನು ಮಹದೇವ ಬಣಕಾರರು ದೊಡ್ಡದಾಗಿ 'ಆಂಗ್ಲರ ಆಡಳಿತದಲ್ಲಿ ಕನ್ನಡ[13]' ಪುಸ್ತಕದ ಮೂಲಕ ಹೇಳಿದ್ದಾರೆ. ಸರ್ಕಾರವು ಕಾಪಾಡಿಕೊಂಡು ಬಂದಿರುವ 'ಆರ್ಕಿವ್ಸ್'ಗಳಲ್ಲಿಯೂ ಇದರ ಅನೇಖ ದಾಖಲೆಗಳು ಇವೆ. ಅಂತವುಗಳಲ್ಲಿ ಕೆಲವನ್ನು ಹೀಗೆ ಸಂಗ್ರಹಿಸಬಹುದು;

ಪ್ರಾದೇಶಿಕ ಭಾಷೆಗಳ ಮಹತ್ವ, ಮತ್ತು ಅವುಗಳನ್ನು ಆಡಳಿತದಲ್ಲಿ ಅಳವಡಿಸುವುದರಿಂದ ಆಗುವ ಪ್ರಯೋಜನ ಈ ಕುರಿತಾದ ಪ್ರಯತ್ನಗಳು ಆಂಗ್ಲ ಅಧಿಕಾರಿಗಳಿಂದಲೇ ನಡೆದಿವೆ. ದೇಶೀಯ ಪಂಡಿತರ ವ್ಯಾಮೋಹ ಇಂಗ್ಲೀಷ್ ಮೂಲಕ ಆಂಗ್ಲ ಅಧಿಕಾರಿಗಳನ್ನು ಒಲಿಸಿಕೊಳ್ಳುವುದೇ ಆಗಿತ್ತು. ಇದರ ಲಾಭವನ್ನು ಪಡೆಯುವುದು ಬ್ರಿಟಿಶರಿಗೆ ಸಹಜವಾದುದೇ ಆಗಿತ್ತು. ಹೀಗಾಗಿ ಸ್ಥಳೀಯವನ್ನು ಅರಿಯುವ ಅವರ ಕೆಲಸದಲ್ಲಿ ದೇಶಿ ಪಂಡಿತರು ಮಧ್ಯವರ್ತಿಗಳಾಗಿ ಬಳಕೆಗೆ ಬಂದರು. ಬ್ರಿಟಿಶರ ಸ್ಥಳೀಯರನ್ನು ಒಲಿಸಿಕೊಳ್ಳುವ ನಡೆಯಲ್ಲಿ ಕನ್ನಡ ಬಳಕೆಯ ಪ್ರಸಂಗಗಳನ್ನು ಕಾಣಬಹುದಾಗಿದೆ.

ಪರಕೀಯರ ಆಡಳಿತದಿಂದಾಗಿ ನಮ್ಮ ಭಾಷೆಯಲ್ಲಿ ಇಲ್ಲದ ಕೆಲವು ಪದಸಮುಚ್ಚಯಗಳು, ನುಡಿಗಟ್ಟುಗಳು ಕಚೇರಿ ಪತ್ರ ವ್ಯವಹಾರದಲ್ಲಿ ಸೇರಿಕೊಂಡವು. ಆ ಹೊತ್ತಿಗೆ ಜನಬಳಕೆಯಲ್ಲಿ ಬೇರೂರಿದ್ದ ಪರ್ಷಿಯನ್ ಮತ್ತು ಅರೇಬಿಕ್ ಪದಗಳ ಜೊತೆಗೆ ಇಂಗ್ಲೀಷ್ ಪದಗಳು 'ಆಡಳಿತ ಕನ್ನಡ ಭಾಷೆ'ಯಲ್ಲಿ ಸೇರಿದವು. ಆಂಗ್ಲ ಆಡಳಿತೆಯಲ್ಲಿ ಹೊರಡಿಸಿದ ಮಸೂದೆಗಳು ಮತ್ತು ಅಧಿನಿಯಮಗಳು ಆಂಗ್ಲರ ಹೊಸ ನೀತಿಯ ಪ್ರಕಾರ ಅಲ್ಲಿಯವರೆಗೂ ರಾಜಾಶ್ರಯದ ನೆರಳಿನಲ್ಲಿ ಬೆಳೆದಿದ್ದ ಪರ್ಷಿಯನ್ ಭಾಷೆಯಲ್ಲಿ ರಚನೆಯಾಗುವುದರ ಬದಲು ಪ್ರಾದೇಶಿಕ ಭಾಷೆಗಳಾದ ಬೆಂಗಾಳಿ, ಮರಾಠಿ, ಗುಜರಾತಿ ಮತ್ತು ಕನ್ನಡದಲ್ಲಿ ರಚನೆಯಾದವು. ಜನರಾಡುವ ಭಾಷೆಯಲ್ಲಿ ಸರ್ಕಾರದ ಅಧಿನಿಯಮಗಳನ್ನು ಪ್ರಕಟಿಸುವುದರಿಂದ ಜನ ಸಾಮಾನ್ಯರಿಗೆ ದೇಶದ ಕಾನೂನುಗಳು ಪರಿಚಯವಾಗುತ್ತವೆ ಎಂಬ ಅಭಿಪ್ರಾಯ 1797 ರಷ್ಟು ಹಿಂದೆಯೇ ವ್ಯಕ್ತವಾಗಿತ್ತು. ಇಲ್ಲಿನ ಆಡಳಿತಕ್ಕೆ ಬ್ರಿಟಿಶರಿಗೆ ಇದರ ಅಗತ್ಯವೂ ಇತ್ತು.

[13] ಆಂಗ್ಲರ ಆಡಳಿತದಲ್ಲಿ ಕನ್ನಡ ಮಹಾದೇವ ಬಣಕಾರ

ಆಂಗ್ಲರ ಆಡಳಿತದಲ್ಲಿ ಅಧಿಕಾರದಲ್ಲಿದ್ದ ಅನೇಕರು ಕನ್ನಡ ಭಾಷಾಂತರಕಾರರಾಗಿ ಕೆಲಸ ನಿರ್ವಹಿಸಿದ್ದು ಇದೆ. ಅಂತಹ ಕೆಲವು ಪ್ರಸಂಗಗಳು ಹೀಗಿವೆ;

- ಟಿಪ್ಪೂವಿನ ವಿರುದ್ಧ ಕಂಪನಿ ಸರ್ಕಾರದ ಗವರ್ನರ್ ಜನರಲ್‌ನು 22.02.1799ರಂದು ಹೊರಡಿಸಿದ ದೀರ್ಘ ಘೋಷಣೆಯ ಕನ್ನಡ ರೂಪವು ಸ್ಪಷ್ಟವಿರದಿದ್ದಾಗ ಮೋಗ್ಲಿಂಗ್ ಎಂಬುವನು ಅದರ ಕನ್ನಡ ಸರಳ ಅನುವಾದವನ್ನು ಮಾಡಿದ್ದನು.

- ಬೆಂಗಳೂರು ವಿಭಾಗಾಧಿಕಾರಿಗೆ ಕಮಿಷನರ್ ಕಛೇರಿಯಿಂದ ಜಾರಿಗೊಳಿಸಿದ 1835ರ ಪತ್ರವೊಂದರಲ್ಲಿ 'ಮಿರ್‌ಸಿ' ಹಕ್ಕುಗಳಿಗೆ ಸಂಬಂಧಿಸಿದ ಪ್ರಕಟಣೆಯ ಕನ್ನಡ ಪ್ರತಿಗಳನ್ನು ವಿಭಾಗದ ಎಲ್ಲ ತಾಲೂಕು ಕಛೇರಿಗಳಿಗೆ ಒದಗಿಸುವಂತೆ ಸೂಚನೆಗಳನ್ನು ಕೊಡಲಾಗಿದೆ.

- 'ಮೈಸೂರು ಕಮಿಷನ್'ನಿಂದ ಹೊರಡಿಸಿದ 1853ರ ಸುತ್ತೋಲೆಯಲ್ಲಿ 'ಕೆಲವು ನಿಯಮಗಳನ್ನು ರೂಪಿಸಲಾಗಿದ್ದು, ಅವುಗಳ ಕನ್ನಡ ಪ್ರತಿಗಳನ್ನು ಕಳುಹಿಸುತ್ತಿರುವುದಾಗಿಯೂ, ಹಿಂದೆ ಜಾರಿಯಲ್ಲಿದ್ದ ನಿಯಮಗಳನ್ನು ಕೈಬಿಟ್ಟು ಹೊಸದಾಗಿ ರೂಪಿಸಿದವುಗಳನ್ನು ಪಾಲಿಸಬೇಕೆಂದೂ ಸೂಚಿಸಿದೆ.

- ಮದರಾಸು ಸರಕಾರದ 1859ರ ಪ್ರಕಟಣೆಯೊಂದು ಈ ರೀತಿ ಹೇಳುತ್ತದೆ: "ಇಂಡಿಯಾ ದೇಶದ ಲೆಜಿಸ್‌ಲೇಟಿವ್ ಕೌನ್ಸಿಲ್ ಸಭೆವರಿಂದ ಮಾಡಲ್ಪಟ್ಟಿರುವ ಆಕ್ಟುಗಳು – ಯಿಂಗ್ಲೀಷು, ಅರವ, ತೆಲುಗು, ಹಿಂದೂಸ್ಥಾನಿ, ಕನ್ನಡ – ಈ ಭಾಷೆಗಳಲ್ಲಿ ಗೌರ್‌ಮೆಂಟು ಪ್ರೆಸ್ ಆಫೀಸಿನಲ್ಲಿ ವಿಕ್ರಯಾರ್ಥ ಸಿದ್ಧವಾಗಿಯಿದೆ.

- ಕಾರವಾರ ಅದಾಲತ್ ಕೋರ್ಟಿನಿಂದ ಮುಂಬೈ ಸರ್ಕಾರದ ನ್ಯಾಯ ಇಲಾಖೆಯ ಕಾರ್ಯದರ್ಶಿಗೆ ದಿನಾಂಕ: 05.02.1868 ರಂದು ಬರೆದ ಪತ್ರದ ಪ್ರಕಾರ ನ್ಯಾಯಾಲಯಗಳಲ್ಲಿ ಕನ್ನಡ ನಮೂನೆಗಳು ಬಳಕೆಯಾಗುತ್ತಿದ್ದವೆಂದು ತಿಳಿಯುತ್ತದೆ. ಕನ್ನಡ ನಮೂನೆಗಳನ್ನು ಸರಬರಾಜು ಮಾಡುವಂತೆ ಈ ಪತ್ರದಲ್ಲಿ ಕೋರಲಾಗಿದೆ[14].

- ಧಾರವಾಡ ಮತ್ತು ಕೆನರಾ ಜಿಲ್ಲೆಗಳಿಗೆ (ಪ್ರತಿ ಜಿಲ್ಲೆಗೆ) ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಮೂರು ಇಂಗ್ಲೀಷ್, ಎರಡು ಮರಾಠಿ ಮತ್ತು ಇಪ್ಪತ್ತು ಕನ್ನಡ ಪ್ರತಿಗಳನ್ನು ಸರಬರಾಜು ಮಾಡುವಂತೆ ತಿಳಿಸುವ ಗೊತ್ತುವಳಿ 1883ರಲ್ಲಿ ಪ್ರಕಟವಾಗಿದೆ[15].

---

[14] 4. No. 83 of 1868 J.D. Vol. No. 15/1868, pp 299.303 (M. Archives).

[15] 6.No. 169 of 1883, Judl. Dept. (M. Archives).

* ಕೊಡಗಿನ ಕಮಿಷನರ್ ಅವರ ಕಛೇರಿಯಿಂದ ಕೊಡಗಿನ ಮುಖ್ಯ ಕಮಿಷನರ್ ಅವರ ಕಾರ್ಯದರ್ಶಿಗೆ (ದಿನಾಂಕ: 08.10.1900) ಬರೆದ ಪತ್ರವು ಭೂ ಕಂದಾಯ ನಿಯಮಗಳ ಕನ್ನಡ ಅನುವಾದ ಕಾರ್ಯ ಮುಗಿದಿರುವುದರ ಹಾಗೂ ಅವು ಕೊಡಗು ಗೆಜೆಟ್ಟಿನ ಭಾಗ ಎರಡರಲ್ಲಿ ಪ್ರಕಟಿಸಿರುವುದರ ಬಗ್ಗೆ (ಮಾರ್ಚ್ 1900 ರಲ್ಲಿ) ತಿಳಿಸುತ್ತದೆ. ಅದರ ಒಂದು ಪ್ರತಿಯನ್ನು ಕಳುಹಿಸಿರುವುದಾಗಿಯೂ ಪತ್ರ ತಿಳಿಸುತ್ತದೆ.

ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೊಳಿಸಬೇಕೆಂಬುದು 'ಮೈಸೂರು ಕಮಿಷನರ್' ನಿರ್ಧಾರವಾಗಿ ಅಂದಿನ ಒಂದು ವಿಭಾಗದ ಅಧೀಕ್ಷಕನಾಗಿದ್ದ ಬಿ. ಕ್ಲಾರ್ಕ್ ಎಂಬುವವನು 1885 ರಲ್ಲಿ ತನ್ನ ಕಮಿಷನರ್ ಅವರಿಗೆ ಪತ್ರ ಬರೆದು, 'ತನ್ನ ವಿಭಾಗದಲ್ಲಿ ಕನ್ನಡವನ್ನು ಜಾರಿಗೊಳಿಸಲು ಯಾವ ಅಡಚಣೆಗಳು ಇಲ್ಲವೆಂದೂ ಹಾಗೂ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ನೌಕರರು ಕನ್ನಡ ಭಾಷೆಯನ್ನು ಬಳಸುವಲ್ಲಿ ಸಮರ್ಥರೆಂದೂ' ಬರೆಯುವುದರ ಮೂಲಕ ಪ್ರೋತ್ಸಾಹದ ಮಾತುಗಳನ್ನಾಡಿದ್ದಾನೆ. 1855ರ ಜುಲೈ 1ನೇ ತಾರೀಖಿನಿಂದ ಬಿ.ಕ್ಲಾರ್ಕ್ ತನ್ನ ಕಛೇರಿಯ ಎಲ್ಲ ಶಾಖೆಗಳಲ್ಲಿಯೂ ಕನ್ನಡವನ್ನು ಜಾರಿಗೊಳಿಸಿದನೆಂದು ತಿಳಿಯುತ್ತದೆ.

ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥನಾಗಿದ್ದ ಜೆ. ಹನ್ಸ್‌ಟನ್, ತನ್ನ ಕಛೇರಿ ಜ್ಞಾಪನದಲ್ಲಿ (30 ಆಗಸ್ಟ್ 1880) ವೈದ್ಯಕೀಯ ವ್ಯವಸ್ಥೆಗಳ ಬಗ್ಗೆ ವಿವರಿಸುತ್ತಾ ಆಸ್ಪತ್ರೆಯ ಸಹಾಯಕರ ಹುದ್ದೆಗಳನ್ನು ಪ್ರಾದೇಶಿಕ ಜನರಿಗೇ ಮೀಸಲಿಡಬೇಕೆಂದೂ ಮತ್ತು ಅಂಥ ಹುದ್ದೆಗಳಿಗೆ ನೇಮಕವಾಗುವವರಿಗೆ ಕನ್ನಡ ಭಾಷೆಯ ಜ್ಞಾನ ಅಗತ್ಯವಾಗಿರಬೇಕೆಂದೂ ಹೇಳಿರುವುದನ್ನು ಪ್ರಸ್ತಾಪಿಸಿದ್ದಾರೆ ಬಣಕಾರರು.

ದೇಶೀಯರು ತಮ್ಮ ಭಾಷೆಯನ್ನೇ ಅಭಿಪ್ರಾಯ ವ್ಯಕ್ತಪಡಿಸುವ ಮಾಧ್ಯಮವನ್ನಾಗಿ ಬಳಸುವುದು ಸೂಕ್ತವೆಂಬ ಅಭಿಪ್ರಾಯವನ್ನು ಇಂಡಿಯಾದ ಗವರ್ನರ್ ಜನರಲ್ ಅವರು ಹೊಂದಿದ್ದರೆಂದು ಮುಮ್ಮಡಿ ಕೃಷ್ಣರಾಜ ಒಡೆಯರ್‌ಗೆ 1844ರಲ್ಲಿ ಬರೆದ ಪತ್ರವೊಂದರಿಂದ ತಿಳಿಯುತ್ತದೆ. ಆದ್ದರಿಂದಲೇ ಕೃಷ್ಣರಾಜ ಒಡೆಯರು ತಮ್ಮ 'ಖರೀತಾ'ದಲ್ಲಿ ಇಂಗ್ಲೀಷ್ ಭಾಷೆಯನ್ನು ಬಳಸಿದ್ದಕ್ಕೆ ಹಾಗೂ ಪರ್ಷಿಯನ್ ಕೈಬಿಟ್ಟದ್ದಕ್ಕೆ ಕಾರಣಗಳನ್ನು ಕೊಡುತ್ತಾ "ನಮ್ಮ ಸ್ವಂತ ಅಭಿಪ್ರಾಯವನ್ನು ತಾವು ಕನ್ನಡದಲ್ಲಿ ಬರೆಸಿ ಕಳುಹಿಸಿಕೊಡಬೇಕೆಂದು ಅಪ್ಪಣೆ ಆದ ಬಗ್ಗೆ ಅಪ್ಪಣೆ ಮೇರೆಗೆ ನಡೆಯುವುದಕ್ಕೆ ನಾವು ಸಿದ್ಧವಾಗಿಯಿದ್ದೇವೆ" ಎಂಬುದಾಗಿ ಮತ್ತು ಸುಮಾರು

ಎಂಟು ಕಾಲಂಗಳಷ್ಟು ಕನ್ನಡದಲ್ಲಿ ಬರೆದು[16] "ತಮ್ಮ ಚಿತ್ರಕ್ಕೆ ಸ್ಪಷ್ಟವಾಗಿ ವಿದಿತವಾಗಬೇಕೆಂಬುವುದಾಗಿಯೂ ನಮ್ಮ ಸ್ವಂತ ಅಕ್ಷರದಯಿಂದಾ ಜಾಹೀರು ಮಾಡಿಯಿದ್ದೇವೆ" ಎಂದು ಹೇಳಿದ್ದಾರೆ.

ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ 1917ರಲ್ಲಿ ಮಾಡಿದ ವೈಸರಾಯ್ ಭಾಷಣವನ್ನು ಸರ್ಕಾರದ ಅಧಿಕೃತ ಭಾಷಾಂತರಕಾರನಾಗಿದ್ದ ಎಂ.ಕೆ. ಷೇಕ್ ಎಂಬುವವನು ಕನ್ನಡಕ್ಕೆ ಅನುವಾದಿಸಿರುವುದಕ್ಕೆ ದಾಖಲೆಯಿದೆ[17].

ಹಾಗಿದ್ದರೆ, ಕರ್ನಾಟಕದ ಆಡಳಿತ ಸನ್ನಿವೇಶವು ಸ್ವತಂತ್ರ ಭಾರತದಲ್ಲಿ ತೊಡಕಾಗಿರಲು ಕಾರಣವೇನು? ಪ್ರಜೆಗಳು, ತಮ್ಮ ಭಾಷೆಯಲ್ಲಿ ಆಡಳಿತ ನಡೆಯಬೇಕೆಂದರೆ ವಿರೋಧವೇಕೆ? ಎನ್ನುವ ಪ್ರಶ್ನೆಗಳನ್ನು ಹಾಕಿಕೊಂಡು ಬಣಕಾರರು ಕೊಟ್ಟುಕೊಳ್ಳುವ ಉತ್ತರ ಹೀಗಿದೆ; 'ಒಂದೇ ಒಂದು ಕಾರಣ ಕಂಡುಬರುತ್ತದೆ: "ಸಲೀಸಾಗಿ ನಡೆದುಕೊಂಡು ಹೋಗಿದೆ. ಇನ್ನು ಹೊಸ ಪ್ರಯೋಗದ ದುಡಿತ ನಮಗೇಕೆ? ಹೀಗೇ ನಡೆದುಕೊಂಡು ಹೋಗಲಿ!"[18].

ಒಟ್ಟು ಆಡಳಿತೆಯ ಸೌಕರ್ಯಕ್ಕೆ ಇಂಗ್ಲೀಷ್ ಭಾಷೆಯನ್ನು ಸಂಪರ್ಕ ಭಾಷೆಯಾಗಿ ಇಟ್ಟುಕೊಂಡಿದ್ದರೂ, ಪ್ರಾದೇಶಿಕ ಮಟ್ಟದಲ್ಲಿ ಪ್ರಾದೇಶಿಕ ಭಾಷೆಯೇ ಎಲ್ಲ ಕ್ಷೇತ್ರಗಳನ್ನು ಆವರಿಸಬೇಕೆಂಬುದು ಆಂಗ್ಲ ಅಧಿಕಾರಿಗಳ. ನೀತಿಯಾಗಿತ್ತು[19]. 'ಸರಕಾರದ ಆಗು–ಹೋಗುಗಳು ಜನ ಸಾಮಾನ್ಯರಿಗೆ ತಿಳಿಯಬೇಕು; ಸರ್ಕಾರ ಮತ್ತು ಜನಸಾಮಾನ್ಯರ ನಡುವೆ ಮಧುರ ಬಾಂಧವ್ಯ ಉಂಟಾಗಬೇಕು. ಇದು ಜನಸಾಮಾನ್ಯನ ಭಾಷೆ, ಆಡಳಿತ ಭಾಷೆಯಾಗುವುದರಿಂದ ಸಾಧ್ಯ'–ಎಂಬುದು ಪಾಶ್ಚಾತ್ಯ ಆಡಳಿತಗಾರರ ನಿಲುವಾಗಿತ್ತು' ಎಂದು ಬಣಕಾರರು ಬರೆದುಕೊಂಡಿದ್ದಾರೆ.

6.3: ಇವತ್ತಿನಲ್ಲಿ ಕನ್ನಡದ ಆಡಳಿತ: ನುಸುಳು ದಾರಿಯಲ್ಲಿ ಇಂಗ್ಲಿಶ್ ಪ್ರಾಬಲ

ಈ ಬಿಕ್ಕಟ್ಟಿಗೆ ಕಾರಣವಾದ ಪ್ರಭುತ್ವದ ನಡೆಗಳನ್ನು ಕೆ.ವಿ.ನಾರಾಯಣ[20] ಸ್ಪಷ್ಟವಾಗಿ ಗುರುತಿಸಿದ್ದಾರೆ. ಅವರು ಗುರುತಿಸಿರುವಂತೆ ಕನ್ನಡ ಜಾರಿಗಾಗಿ ಹೊರಡಿಸಿದ ಅಧಿನಿಯಮದ ಪ್ರಕಾರ:

[16] (10.Mysore State papers, selections Vol. III, pp.91-92 (KSA)).
[17] ಆಂಗ್ಲರ ಆಡಳಿತದಲ್ಲಿ ಕನ್ನಡ; ಮಹದೇವ ಬಣಕಾರ
[18] ಅದೇ
[19] ನೋಡಿ ಅನುಬಂಧ–5
[20] ಕನ್ನಡ ಜಗತ್ತು ಅರ್ಧಶತಮಾನ: ಕೆ.ವಿ.ನಾರಾಯಣ 2006, ಕನ್ನಡ ವಿಶ್ವವಿದ್ಯಾಲಯ, ಹಂಪಿ

'ಸರ್ಕಾರಿ ಉದ್ದೇಶಗಳಿಗಾಗಿ ಬಳಸಬೇಕಾದ ಭಾಷೆ ಕನ್ನಡವೆಂದೂ ರಾಜ್ಯ ವಿಧಾನಮಂಡಲದ ವ್ಯವಹಾರ ನಿರ್ವಹಣೆಗೆ ಬಳಸಬೇಕಾದ ಭಾಷೆ ಇಂಗ್ಲೀಷ್ ಎಂದೂ ಉಪಬಂಧಿಸಲಾಗಿದೆ. ಆದರೆ, ಸರ್ಕಾರಿ ಉದ್ದೇಶಗಳು ಎಂದರೇನು ಮತ್ತು ಏಕೆ ಇಂಗ್ಲೀಷನ್ನು ಮಾತ್ರ ವಿಧಾನ ಮಂಡಲದ ವ್ಯವಹಾರಕ್ಕಾಗಿ ಬಳಸಬೇಕು ಎಂಬ ಬಗೆಗೆ ವಿವರಣೆ ನಮಗೆ ಲಭ್ಯವಾಗುವುದಿಲ್ಲ. ಇಂಗ್ಲಿಶಿನ ಕನ್ನಡ ಅನುವಾದದ ಪಾಠವನ್ನು ಅಧಿಕೃತವೆಂದು ಸೂಚಿಸುತ್ತದೆ. ಈ ಕನ್ನಡ ಅನುವಾದದ ಪಾಠ ಅಧಿಕೃತಗೊಳಿಸುವ ಮಾತು ಎರಡು ನೆಲೆಯಲ್ಲಿದೆ. 1. ಇಂಗ್ಲೀಷ್ ಮತ್ತು ಕನ್ನಡ ಪಾಠಗಳಲ್ಲಿ ಅರ್ಥ ವಿವರಣೆಗೆ ಸಂಬಂಧಿಸಿದಂತೆ ಯಾವುದಾದರೂ ಗೊಂದಲಗಳು ಉಂಟಾದರೆ ಆಗ ಕನ್ನಡ ಪಾಠವನ್ನು ಅಧಿಕೃತ ಎಂದು ಭಾವಿಸುವುದು. 2. ರಾಜ್ಯಪಾಲರ ಅನುಮತಿಯನ್ನು ಪಡೆದು ರಾಜ್ಯಪತ್ರದಲ್ಲಿ ಪ್ರಕಟಗೊಂಡ ಕನ್ನಡ ಅನುವಾದವು ಮಾತ್ರ ಅಧಿಕೃತ. ಹೊರತು ಅನುಮತಿ ಪಡೆಯದ ಇನ್ಯಾವುದೇ ಅನುವಾದವು ಬೇರೆ ಯಾವುದೇ ಕಾರಣದಿಂದ ಸಿದ್ಧಗೊಂಡಿದ್ದರೂ ಅದು ಅಧಿಕೃತವಲ್ಲ. ಎಂದರೆ ಈ ಅಧಿನಿಯಮವು ಕನ್ನಡ ಭಾಷೆಗೆ ಅವಕಾಶ ಕಲ್ಪಿಸುತ್ತಲೂ ತನ್ನ ಅಧಿಕಾರ ವ್ಯಾಪ್ತಿಯ ಕನ್ನಡವನ್ನು ಮಾತ್ರ ಅಧಿಕೃತವೆಂದು ಹೇಳುವ ಪ್ರಯತ್ನ ಮಾಡಿದೆ.

ಈ ಹಿಂದಿನ ಅಧಿನಿಯಮದಲ್ಲಿ ಇಂಗ್ಲೀಷ್ ಭಾಷೆಯನ್ನು ಮಾತ್ರ ಬಳಸಲು ಅವಕಾಶ ಕಲ್ಪಿಸಲಾಗಿತ್ತು. ಆನಂತರದಲ್ಲಿನ 1982ರ ತಿದ್ದುಪಡಿಯು ಕನ್ನಡ ಮತ್ತು ಹಿಂದಿಗಳ ಜೊತೆಗೆ ಇಂಗ್ಲೀಷ್ ಭಾಷೆಯನ್ನು ಬಳಸಲು ಅವಕಾಶ ಕಲ್ಪಿಸುತ್ತದೆ. ವಿಚಿತ್ರವೆಂದರೆ ಅಲ್ಲಿಯವರೆಗೂ ಇಂಗ್ಲೀಷ್ ಮಾತ್ರ ಅಧಿಕೃತವಾಗಿ ಬಳಕೆಯಾಗುತ್ತಿತ್ತು. ಆದರೆ ಕನ್ನಡ ಮತ್ತು ಹಿಂದಿಗಳು ಈಗಾಗಲೇ ಬಳಕೆಯಾಗುತ್ತಿವೆ ಎಂಬಂತೆಯೂ ಈಗ ಮತ್ತೆಯೂ ಇಂಗ್ಲಿಷನ್ನು ಬಳಸುತ್ತ ಹೋಗಲು ಅವಕಾಶ ಕಲ್ಪಿಸುವಂತೆ ತಿದ್ದುಪಡಿಯು ಸೂಚಿಸುತ್ತದೆ.

ಅಧಿನಿಯಮದ ಮೂಲ ಪಾಠದಲ್ಲೇ ಸರ್ಕಾರದ ಆಡಳಿತದಲ್ಲಿ ಕನ್ನಡವನ್ನು ಬಳಸಲು ಮತ್ತು ಅಧಿನಿಯಮಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಜಾರಿಗೆ ಕೊಡಲು ಅವಕಾಶ ಕಲ್ಪಿಸಲಾಗಿತ್ತು. ಈ ತಿದ್ದುಪಡಿಯು ಆಡಳಿತದ ಉದ್ದೇಶಕ್ಕಾಗಿ ಒದಗಿಸುವ ಸರ್ಕಾರದ ತೀರ್ಮಾನಗಳನ್ನು ಕನ್ನಡದಲ್ಲಿ ಸಿದ್ಧಪಡಿಸಲು ಅವಕಾಶ ಕಲ್ಪಿಸುತ್ತದೆ. ಅಂದರೆ ಮೂಲಪಾಠವನ್ನೇ ಕನ್ನಡದಲ್ಲಿ ಸಿದ್ಧಪಡಿಸುವ ಅವಕಾಶ ಕಲ್ಪಿಸಲಾಗಿದೆ. ಆದರೆ ತಿದ್ದುಪಡಿಯು ಕನ್ನಡವನ್ನು ಸಹ ಬಳಸಬಹುದು ಎಂದು ಹೇಳುತ್ತದೆಯೇ ಹೊರತು ಕನ್ನಡವನ್ನೇ ಬಳಸಬೇಕು ಎಂದು ಹೇಳುವುದಿಲ್ಲ. ಮೂಲಪಾಠಗಳನ್ನು ಕನ್ನಡದಲ್ಲಿಯೂ ಸಿದ್ಧಪಡಿಸಬಹುದು ಅಥವಾ ಇಂಗ್ಲಿಶಿನಲ್ಲಿಯೂ ಸಿದ್ಧಪಡಿಸಿ ಅನಂತರ ಅದನ್ನು

ಕನ್ನಡಕ್ಕೆ ಅನುವಾದಿಸಬಹುದು[21] ಎಂಬ ಎರಡು ಸಾಧ್ಯತೆಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ.

ಇದು ಕನ್ನಡ ಬಳಕೆಯ ಅನಿವಾರ್ಯತೆಯನ್ನು ನಿರೂಪಿಸುವುದಿಲ್ಲ. ಇಂಗ್ಲೀಷನ್ನು ಮೂಲಪಾಠ ರಚನೆಗೆ ಬಳಸುವ ಅವಕಾಶವಿರುವುದರಿಂದ ಅದು ಬಳಕೆಯಾಗುತ್ತಲೇ ಹೋಗುತ್ತದೆ. ಅಧಿಕಾರ ಅಮೂರ್ತವಾಗಿದ್ದಾಗ ಪ್ರಾಯೋಗಿಕ ಅವಕಾಶ ನಿರಾಕರಣೆಯಾಗುವುದಕ್ಕೆ ಇದು ಇನ್ನೊಂದು ನಿದರ್ಶನ.

ಇಂಗ್ಲೀಷ್ ಮಾತ್ರ ಅಧಿಕೃತ ವ್ಯವಹಾರದ ಭಾಷೆಯೆಂದು ಈಗಾಗಲೇ ಸಿದ್ಧವಾಗಿರುವುದರಿಂದ ಅಲ್ಲಿ ಅಧಿನಿಯಮಗಳ ಕನ್ನಡ ಅನುವಾದ ಪಾಠದ ಬಳಕೆಯಾಗಲೀ, ಅದರ ಅಧಿಕೃತತೆಯಾಗಲೀ ಬರುವುದು ಸಾಧ್ಯವಿಲ್ಲ. ರಾಜ್ಯ ವಿಧಾನ ಮಂಡಲದ ವ್ಯವಹಾರದ ನಿರ್ವಹಣೆಗಾಗಿ ಕನ್ನಡ ಮತ್ತು ಹಿಂದಿಯ ಜೊತೆಗೆ ಇಂಗ್ಲಿಷ್ ಭಾಷೆಯ ಉಪಯೋಗವನ್ನು ಮುಂದುವರೆಸಬಹುದು ಎನ್ನುವುದೇ ದೊಡ್ಡ ತೊಡಕು.

ಪ್ರಭುತ್ವದ ಭಾಷಾ ನೀತಿಯಲ್ಲಿ ಕನ್ನಡ ಭಾಷೆಯನ್ನು ನಿರಾಕರಿಸುವ ಧೋರಣೆ ಇಲ್ಲ. ಆದರೆ ಅದಕ್ಕೆ ಕಲ್ಪಿಸಿರುವ ಅವಕಾಶ ನೇರ ಮತ್ತು ದಿಟ್ಟವಾಗಿಲ್ಲ ಎಂದು ಹೇಳಬಹುದು. ಯಾಕೆಂದರೆ ಕನ್ನಡ ಆಡಳಿತ ಭಾಷೆಯಾಗಬೇಕೆಂಬ ಬಯಕೆಯು ಕೈಗೂಡದಂತೆ ಅವಕಾಶಗಳನ್ನು ಮಾಡಿದೆ. ಪ್ರಾಯೋಗಿಕ ನೆಲೆಯಲ್ಲಿ ಸ್ಪಷ್ಟ ಅವಕಾಶಗಳನ್ನು ಮಾಡಿಕೊಡುವಂತಹ ಅಧಿನಿಯಮಗಳನ್ನು ಮಾಡಿಲ್ಲದಿರುವುದು ಗೊತ್ತಾಗುವಂತೆಯೇ ಇದೆ. ಈ ಮಾತಿಗೆ ಮೇಲಿನ ತಿದ್ದುಪಡಿಯೇ ಸಾಕ್ಷಿ. ಇಂಗ್ಲಿಶಿನ ಬಳಕೆಯನ್ನು ಮುಂದುವರೆಸುತ್ತ ಹೋಗುವ ಮೂಲಕ ಕನ್ನಡಕ್ಕಿರುವ ಅವಕಾಶವನ್ನು ಪರೋಕ್ಷವಾಗಿ ನಿರಾಕರಿಸುವಂತಾಗಿದೆ. ಅನುವಾದದ ನೆಪದಲ್ಲಿ ಸಂಸ್ಕೃತವೇ ತುಂಬಿಕೊಂಡಿರುವುದು, ಕನ್ನಡ ಜಾಯಮಾನವನ್ನೇ ಇಲ್ಲದಂತೆ ಮಾಡಿದೆ.

ಅನುವಾದದ ಅಧಿಕೃತತೆ ಮತ್ತು ಸಂಸ್ಕೃತ ಪದಬಳಕೆಯ ಹಾವಳಿಯಿಂದ ಕನ್ನಡ ಬಳಕೆ ಹೇಗಿದೆ ಎಂಬುದಕ್ಕೆ ಈ ಉದಾಹರಣೆಯನ್ನು ಗಮನಿಸಿ:

---

[21] ಉಳಿದಂತೆ ಎಲ್ಲ ಸದಸ್ಯರಿಗೂ ಕನ್ನಡ ಇಲ್ಲವೇ ಇಂಗ್ಲೀಷಿನ ಮಾತಿನ ರೂಪಗಳು ಒಪ್ಪಿತವಾದರೂ ಬರಹರೂಪ ಮಾತ್ರ ಇಂಗ್ಲೀಷಿನಲ್ಲೇ ಇರಬೇಕಿತ್ತು. ಈ ಅಂಶವನ್ನು ಎಚ್ಚರಿಕೆಯಿಂದ ಗಮನಿಸಬೇಕಾಗುತ್ತದೆ. ಏಕೆಂದರೆ ವಿಧಾನಮಂಡಲದ ವ್ಯವಹಾರದ ಈ ಎರಡು ನೆಲೆಯ ನೀತಿ ಇನ್ನೂ ಕೂಡ ಬೇರೆ ಬೇರೆ ಪ್ರಮಾಣದಲ್ಲಿ ಮುಂದುವರೆದಿದೆ. ಮಾತಿನ ನೆಲೆಯಲ್ಲಿ ಅವಕಾಶ ಪಡೆಯುವ ಕನ್ನಡ ಬರಹದ ಅಧಿಕೃತ ನೆಲೆಗೆ ದಾಟುವಾಗ ಮಾತ್ರ ಈಗಲೂ ಇಂಗ್ಲೀಷಿನ ಸಾಹಚರ್ಯದಲ್ಲಿ ಇರಬೇಕಾಗುತ್ತದೆ. (ಪುಟ 35)

'ಡಿಜಿಟಲ್ ರೂಪಾಂತರದ ಜಗತ್ತಿನಲ್ಲಿ; ತಾಂತ್ರಿಕತೆ, ಮೊಬೈಲ್ ಟೆಲಿಫೋನಿ, ಕೇಬಲ್ ಟಿವಿ ಮತ್ತು ಅಂತರ್ಜಾಲದ ಮೂಲಕ ಚಾಲಿತವಾಗಿದ್ದು, ಜನರ ಅಪೇಕ್ಷೆ, ವಿಶೇಷವಾಗಿ ಸಹಸ್ರಮಾನದ ಪೀಳಿಗೆಯು, ಸಾಧನೆಯ ಉದ್ದೇಶಕ್ಕಾಗಿ "ಚಾಲಿತವಾಗಿರುವುದರಿಂದ" ಒಂದು ಮಾದರಿ ಬದಲಾವಣೆಗೆ ಒಳಗಾಗುತ್ತಿದೆ. ಸಾಮಾಜಿಕ ಮಾಧ್ಯಮವು ಸಾಮಾನ್ಯ ವ್ಯಕ್ತಿಗೆ ಅಭೂತಪೂರ್ವ ಮಾರ್ಗದಲ್ಲಿ ಅಧಿಕಾರವನ್ನು ನೀಡಿತು ಮತ್ತು ಅವರ ಹಕ್ಕುಗಳು ಮತ್ತು ಅರ್ಹತೆಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸಿದೆ, ಪರಿಣಾಮಕಾರಿ ಮತ್ತು ಸ್ಪಂದಿಸುವ ಸರಕಾರದಿಂದ ತ್ವರಿತ ಮತ್ತು ಗೋಚರಗಳ ಫಲಿತಾಂಶಗಳ ನಿರೀಕ್ಷೆ ಇರುತ್ತದೆ. ಮುಂಚೆಗಿಂತಲೂ ಸರಕಾರವು ಸಮಗ್ರ ಮತ್ತು ಸಾಮಾಜಿಕವಾಗಿ ತಿಳಿದಿರುವ ನಾಗರೀಕತೆಯೊಂದಿಗೆ ಕಾರ್ಯನಿರ್ವಹಿಸುತ್ತಿದೆ ಮತ್ತು ಆದ್ದರಿಂದ ಸರ್ಕಾರವು ಯಾವುದೇ ಸರ್ಕಾರದ ಚಿತ್ರಣವನ್ನು ನಿರ್ವಹಿಸುವ ಆಡಳಿತದ ಕಾರ್ಯಗಳು ದೊಡ್ಡ ಸಾರ್ವಜನಿಕ ಪರಿಶೀಲನೆಗೆ ಕಾರಣವಾಗಿವೆ. ಇಂತಹ ಸುತ್ತಲಿನ 'ಗಡಿಯಾರ–ವಾತಾವರಣ', ಮಾಧ್ಯಮವು ಚಾಲಿತ, ಸ್ಪರ್ಧಾತ್ಮಕ ಮತ್ತು ಜಾಗತಿಕವಾಗಿ ಅಂತರ್ಸಂಪರ್ಕಿತ ಪ್ರಪಂಚವಾಗಿದ್ದು, ಒಂದು ವಿಕಾಸವಾದ ಕಾರ್ಯಸೂಚಿಯನ್ನು ಹೊಂದಿಸಲು ಸರ್ಕಾರವನ್ನು ನಿರ್ವಹಿಸಲು ಅದು ಸಾಕಾಗುವುದಿಲ್ಲ. ಆದ್ದರಿಂದ ಈ ದೃಷ್ಟಿಕೋನವನ್ನು ಅಭಿವ್ಯಕ್ತಪಡಿಸುವ ದಾಖಲೆ ಅವಶ್ಯಕತೆ ಇದ್ದು ಮತ್ತು ಅದನ್ನು ಸಾಧಿಸಲು ಒಂದು ಮಾರ್ಗ ಸೂಚಿಯನ್ನು ಒದಗಿಸುತ್ತದೆ'[22].

ಈ ಮಾತುಗಳನ್ನು 'ಕರ್ನಾಟಕ 2025 ಸ್ವರೂಪ ದರ್ಶನ' ದಾಖಲೆಯಿಂದ ತೆಗೆದುಕೊಳ್ಳಲಾಗಿದೆ. ಇದರಲ್ಲಿ ಒಟ್ಟು 6 ವಾಕ್ಯ ರೂಪಗಳನ್ನು ಗುರುತಿಸಬಹುದು;

---

[22] ಕರ್ನಾಟಕ ಸರಕಾರ 2025ರ ಸ್ವರೂಪ ದರ್ಶನ ದಾಖಲೆ; ಪೀಠಿಕೆ– ಕರ್ನಾಟಕ ಸರ್ಕಾರದ ವೆಬ್‌ಸೈಟ್–ಅಂತರ್ಜಾಲ ತಾಣ. **VISION DOCUMENT FOR KARNATAKA-Introduction:** In the world of digital transformation; driven by technology, mobile telephony, cable TV and the internet, the aspirations of people, especially the millennium generation, is undergoing a paradigm shift from being "needs driven" to achievement oriented. Social media has empowered the common man on an unprecedented level and there is far more awareness of their rights and entitlements, with an expectation of instant and visible results from an effective and responsive Government. More than before, the Government is now working with an integrated and socially aware citizenry and therefore there is a larger public scrutiny of the actions by administration, which in turn casts the image of any Government. In an 'around-the-clock', media driven, competitive and globally interconnected world, it is not enough for a Government to administer but to set an evolutionary agenda. Hence the need for a document that articulates this vision and provides a roadmap to achieve it.

1. 'ಡಿಜಿಟಲ್ ರೂಪಾಂತರದ ಜಗತ್ತಿನಲ್ಲಿ; ತಾಂತ್ರಿಕತೆ, ಮೊಬೈಲ್ ಟೆಲಿಫೋನಿ, ಕೇಬಲ್ ಟಿವಿ ಮತ್ತು ಅಂತರ್ಜಾಲದ ಮೂಲಕ ಚಾಲಿತವಾಗಿದ್ದು, ಜನರ ಅಪೇಕ್ಷೆ, ವಿಶೇಷವಾಗಿ ಸಹಸ್ರಮಾನದ ಪೀಳಿಗೆಯು, ಸಾಧನೆಯ ಉದ್ದೇಶಕ್ಕಾಗಿ "ಚಾಲಿತವಾಗಿರುವುದರಿಂದ" ಒಂದು ಮಾದರಿ ಬದಲಾವಣೆಗೆ ಒಳಗಾಗುತ್ತಿದೆ.
2. ಸಾಮಾಜಿಕ ಮಾಧ್ಯಮವು ಸಾಮಾನ್ಯ ವ್ಯಕ್ತಿಗೆ ಅಭೂತಪೂರ್ವ ಮಾರ್ಗದಲ್ಲಿ ಅಧಿಕಾರವನ್ನು ನೀಡಿತು ಮತ್ತು ಅವರ ಹಕ್ಕುಗಳು ಮತ್ತು ಅರ್ಹತೆಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸಿದೆ,
3. ಪರಿಣಾಮಕಾರಿ ಮತ್ತು ಸ್ಪಂದಿಸುವ ಸರಕಾರದಿಂದ ತ್ವರಿತ ಮತ್ತು ಗೋಚರಗಳ ಫಲಿತಾಂಶಗಳ ನಿರೀಕ್ಷೆ ಇರುತ್ತದೆ.
4. ಮುಂಚೆಗಿಂತಲೂ ಸರಕಾರವು ಸಮಗ್ರ ಮತ್ತು ಸಾಮಾಜಿಕವಾಗಿ ತಿಳಿದಿರುವ ನಾಗರೀಕತೆಯೊಂದಿಗೆ ಕಾರ್ಯನಿರ್ವಹಿಸುತ್ತಿದೆ ಮತ್ತು ಆದ್ದರಿಂದ ಸರ್ಕಾರವು ಯಾವುದೇ ಸರ್ಕಾರದ ಚಿತ್ರಣವನ್ನು ನಿರ್ವಹಿಸುವ ಆಡಳಿತದ ಕಾರ್ಯಗಳು ದೊಡ್ಡ ಸಾರ್ವಜನಿಕ ಪರಿಶೀಲನೆಗೆ ಕಾರಣವಾಗಿವೆ.
5. ಇಂತಹ ಸುತ್ತಲಿನ 'ಗಡಿಯಾರ–ವಾತಾವರಣ', ಮಾಧ್ಯಮವು ಚಾಲಿತ, ಸ್ಪರ್ಧಾತ್ಮಕ ಮತ್ತು ಜಾಗತಿಕವಾಗಿ ಅಂತರ್ಸಂಪರ್ಕಿತ ಪ್ರಪಂಚವಾಗಿದ್ದು, ಒಂದು ವಿಕಾಸವಾದ ಕಾರ್ಯಸೂಚಿಯನ್ನು ಹೊಂದಿಸಲು ಸರ್ಕಾರವನ್ನು ನಿರ್ವಹಿಸಲು ಅದು ಸಾಕಾಗುವುದಿಲ್ಲ.
6. ಆದ್ದರಿಂದ ಈ ದೃಷ್ಟಿಕೋನವನ್ನು ಅಭಿವ್ಯಕ್ತಪಡಿಸುವ ದಾಖಲೆ ಅವಶ್ಯಕತೆ ಇದ್ದು ಮತ್ತು ಅದನ್ನು ಸಾಧಿಸಲು ಒಂದು ಮಾರ್ಗ ಸೂಚಿಯನ್ನು ಒದಗಿಸುತ್ತದೆ

ಈ ವಾಕ್ಯಗಳನ್ನು ನೋಡಿದರೆ

- ಇವು ಕನ್ನಡದ ವಾಕ್ಯಗಳಲ್ಲ ಎಂದು ನೇರವಾಗಿಯೇ ಅರಿವಿಗೆ ಬರುತ್ತದೆ.
- ಈ ವಾಕ್ಯಗಳು ನಿಕರವಾಗಿಲ್ಲ.
- ಸ್ಪಷ್ಟವಾಗಿ ಅರಿಯಲು ಬರುವುದಿಲ್ಲ.
- ಓದುವವರಿಗಾಗಲೀ, ಕೇಳಿಸಿಕೊಳ್ಳುವವರಿಗಾಗಲೀ ಇದು ನಮ್ಮ ಕನ್ನಡ ವಾಕ್ಯಗಳು ಎನಿಸುವುದಿಲ್ಲ.
- ಇವು ಕನ್ನಡದವೆಂದು ನಂಬಿಸುವ ವಾಕ್ಯಗಳು.

- ಇಲ್ಲಿನ ಪ್ರತಿಯೊಂದು ವಾಕ್ಯದಲ್ಲಿ ವಿಚಾರವನ್ನು ಹೇಳಲು ಬಳಸಿರುವುದು ಸಂಸ್ಕೃತ ಪದಗಳನ್ನು.
- ಸಂಸ್ಕೃತ ಪದಗಳಲ್ಲೂ ಹೇಳಲು ಆಗದಾಗ ಇಂಗ್ಲಿಶ್ ಪದಗಳನ್ನೇ ವಾಕ್ಯದಲ್ಲಿ ಉಳಿಸಿಕೊಳ್ಳಲಾಗಿದೆ.
- ಅರಿವು, ಮೂಡಿಸು, ಒಳಗಾಗು, ಮತ್ತು ಮೊದಲಾದ ಕೆಲವೇ ಕನ್ನಡ ಪದಗಳ ಜೊತೆಗೆ ಇದ್ದು, ಇಗೆ, ಇಸು, ದ, ವು, ಅಲ್ಲಿ, ಆಗಿ, ಅನ್ನು, ಅದನ್ನು, ಇಂತಲೂ, ಎಂಬಂತಹ ಪದಕೂಡಿಕೆಗೆ ಬೇಕಾಗುವ ಸಂಗತಿಗಳನ್ನು ಮಾತ್ರವೇ ಕನ್ನಡವೆಂದು ಗುರುತಿಸಬಹುದಾಗಿದೆ.
- ಹೀಗೆ ಕನ್ನಡದ ಜಾಯಮಾನವೇ ಇಲ್ಲದ ಬರೆಹ ಇದೆಂಬುದು ಯಾರಿಗಾದರೂ ತಿಳಿಯುತ್ತದೆ.

ಪ್ರಭುತ್ವವು ಆಡಳಿತಕ್ಕಾಗಿ ಪ್ರಕಟಿಸಿರುವ ಈ 'ಸ್ವರೂಪ ಸಂದೇಶ–ವಿಷನ್ ಸ್ಟೇಟ್ಮೆಂಟ್'ಅನ್ನು 'ಆಡಳಿತ ಕನ್ನಡ' ಎಂದು ಕರೆಯಬಹುದಾದರೂ ಹೇಗೆ? ಕರ್ನಾಟಕ ಸರಕಾರದ ಈವರೆಗಿನ ದಾಖಲೆಗಳಲ್ಲಿ ಸಾವಿರಾರು ಇಂತಹ ಉದಾಹರಣೆಗಳನ್ನು ಕೊಡಬಹುದಾಗಿದೆ.

ಇಲ್ಲಿನ ಅನುವಾದ ಕನ್ನಡ ಭಾಷೆಯ ಜಾಯಮಾನಕ್ಕೆ ಹೊಂದಿಕೊಳ್ಳುವಂತಿದೆಯೇ? ಕನ್ನಡ ಭಾಷೆಯನ್ನು ಬಳಸುತ್ತಿರುವ ಜನರಿಗೆ ಇದು ನೇರವಾಗಿ ಅರ್ಥವಾಗುತ್ತದೆಯೇ? ಎಂಬ ಪ್ರಶ್ನೆಗಳು ಮುಖ್ಯವಾಗುತ್ತವೆ. ಇಂತಹ ಆಡಳಿತ ಬರಹ ಹೆಚ್ಚು ಮಂದಿ ಓದುಗರನ್ನು ತಲುಪಬಲ್ಲುದಾದರೂ ಹೇಗೆ? ಈ ರೀತಿ ತನ್ನ ಹುಟ್ಟು ಸೊಗಡನ್ನು ಕಳೆದುಕೊಳ್ಳುವ ಬರಹ ತನ್ನತನವನ್ನೂ ಕಳೆದುಕೊಳ್ಳುತ್ತದೆಯಲ್ಲವೇ? ಇಂತಲ್ಲಿ ಕನ್ನಡದ ಜೀವಂತಿಕೆ ಇಲ್ಲವಾಗಿ ಅದರಲ್ಲಿ ಕೃತಕತನವು ತುಂಬಿಕೊಳ್ಳುತ್ತದೆ. ಪ್ರಭುತ್ವ ಮತ್ತು ಜನರ ನಡುವೆ ದೊಡ್ಡ ಕಂದಕವೇರ್ಪಟ್ಟು ಆಡಳಿತ ಎಲ್ಲರಿಂದಲೂ ದೂರವಾಗುತ್ತದೆ.

ಜನಭಾಷೆ ಮತ್ತು ಪ್ರಭುತ್ವಗಳ ಆಡಳಿತದ ಈ ನಡೆಗಳ ನಡುವೆ ವ್ಯತ್ಯಾಸಗಳು ಹೆಚ್ಚಿದಂತೆಲ್ಲ ಸಾಮಾನ್ಯ ಜನರು ತಮ್ಮ ದಿನನಿತ್ಯದ ಜೀವನದಲ್ಲಿ ಪ್ರಭುತ್ವವು ಆಗುಮಾಡುವ

ಅನುಕೂಲಗಳನ್ನು ಬಳಸಿಕೊಳ್ಳಲು ಕಷ್ಟವಾಗುತ್ತಾ ಹೋಗುತ್ತದೆ. ಮಧ್ಯವರ್ತಿಗಳ ಅವಲಂಬನೆಗೆ ಒಳಗಾಗಬೇಕಾಗುತ್ತದೆ[23].

ಇಂಗ್ಲಿಶ್ ಶಿಕ್ಷಣದ ಹಾವಳಿಯಿಂದಾಗಿ ಕನ್ನಡ ಹೊಸಪೀಳಿಗೆಯ ಕನ್ನಡಿಗರಿಂದ ದೂರ ಸರಿಯುತ್ತಿದೆ ಎನ್ನುವ ಮಾತುಗಳನ್ನು ನಿತ್ಯವೂ ಕೇಳುತ್ತಿದ್ದೇವೆ. ಇಂತಹ ಮಾತುಗಳ ಹಿಂದೆ ನಾವು ಎರಡು ಬಗೆಯ ಕಾರಣಗಳನ್ನು ಗುರುತಿಸಬಹುದು;

1. ಕಲಿಕೆಯ ವಿಷಯಗಳನ್ನು ಇಂಗ್ಲಿಶಿನಲ್ಲಿ ಓದಲು ಆಯ್ಕೆ ಮಾಡಿಕೊಳ್ಳುವುದು[24].
2. ಮೊದಲ ಭಾಷೆಯ ಕಲಿಕೆಯ ನೆಪದಲ್ಲಿ ಓದುತ್ತಿರುವ ವಿಷಯದ ಕನ್ನಡ ಪಠ್ಯಗಳು ಸಂಸ್ಕೃತ ಭೂಯಿಷ್ಠವಾಗಿರುವುದು[25].

ಕೆ.ವಿ.ಎನ್ ಅವರು ಹೇಳುವಂತೆ 1982ರ[26] ತಿದ್ದುಪಡಿಯ ನಂತರವೂ ರಾಜ್ಯದ ಆಡಳಿತ ಭಾಷಾ ಅಧಿನಿಯಮಕ್ಕೆ ಯಾವುದೇ ಬದಲಾವಣೆಗಳು ಆಗಿಲ್ಲ. ಕನ್ನಡವನ್ನು ವಿಧಾನಮಂಡಲದ ಅಧಿಕೃತ ಭಾಷೆಯನ್ನಾಗಿ ಮಾಡುವ ಪ್ರಯತ್ನಗಳು ನಡೆದಿಲ್ಲ. ಇಂಗ್ಲಿಷಿನ ಸಹಭಾಷೆಯಾಗಿ ಮಾತ್ರ ಕನ್ನಡಕ್ಕೆ ಅವಕಾಶ ಕಲ್ಪಿಸಲಾಗಿದೆ[27].

---

[23] ಅನೇಕಸಾರಿ ಈ ಪದಗಳು ಶಂಕರಭಟ್ಟರು ಹೇಳುವಂತೆ 'ನಿಜಕ್ಕೂ ಸಂಸ್ಕೃತ ಪದಗಳೂ ಅಲ್ಲ (ಈ ಪದಗಳು ಸಂಸ್ಕೃತ ಪದಕೋಶಗಳಲ್ಲಿ ಕಾಣಿಸುವುದಿಲ್ಲ) ಮತ್ತು ಕನ್ನಡದವೂ ಅಲ್ಲ. ಅವನ್ನು ನಾವು 'ತ್ರಿಶಂಕು' ಪದಗಳೆಂದು ಕರೆಯಬಹುದು. ಇಂತಹ ತ್ರಿಶಂಕು ಪದಗಳು ಇವತ್ತು ಕನ್ನಡ ಬರಹಗಳಲ್ಲಿ ತುಂಬಿ ತುಳುಕುತ್ತಿವೆ–ಡಿ.ಎನ್. ಶಂಕರ ಬಟ್:ಕನ್ನಡ ಬರಹವನ್ನು ಸರಿಪಡಿಸೋಣ–2006

[24] ಸಾಮಾನ್ಯವಾಗಿ ಸ್ವಲ್ಪಮಟ್ಟಿಗೆ ಅನುಕೂಲವಿರುವ ಕುಟುಂಬಗಳು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಇಂಗ್ಲಿಶ್‌ಮಯವಾಗಿರುವ ಖಾಸಗಿ ಶಾಲೆಗಳನ್ನು ಅವಲಂಬಿಸುತ್ತಿರುವ ವಿದ್ಯಮಾನವನ್ನು ಅರಿತರೆ ಇದು ತಿಳಿಯುತ್ತದೆ.

[25] ಕನ್ನಡ ಕಲಿ–ನಲಿ ಪುಸ್ತಕದ ಮೂಲಕ ಮೊದಲ ತರಗತಿಯಲ್ಲಿ ಮಗುವಿಗೆ 300 ಪದಗಳನ್ನು ಪರಿಚಯಿಸಬೇಕು ಎಂದಿದೆ. ಮೊದಲ ತರಗತಿಯ ಮಗುವಿಗೆ ಕನ್ನಡ ಪದಗಳನ್ನು ಪರಿಚಯಿಸುವ ಈ ಪುಸ್ತಕದಲ್ಲಿ 198 ಸಂಸ್ಕೃತ ಪದಗಳಿರುವುದನ್ನು ಆರ್.ಚಲಪತಿಯವರು ಗುರುತಿಸಿದ್ದಾರೆ. ಇವುಗಳಲ್ಲಿ ಎಷ್ಟೋ ಪದಗಳಿಗೆ ಅರ್ಥ ಅದನ್ನು ಪಾಠ ಹೇಳುವ ಟೀಚರುಗಳಿಗೂ ತಿಳಿಯದಿರುವುದನ್ನು ಬಿಡಿಸಿ ತೋರಿಸಿದ್ದಾರೆ–ನುಡಿಯೊಡನೆ:ಆರ್.ಚಲಪತಿ, 2012.

[26] ಏಕೆ 1982 ರಲ್ಲಿ ರಾಜ್ಯಭಾಷಾ ಅಧಿನಿಯಮಕ್ಕೆ ತಿದ್ದುಪಡಿ ಮಾಡಬೇಕಾಯಿತು ಎಂಬುದಕ್ಕೆ ಇಲ್ಲಿ ಕಾರಣಗಳಿವೆ. ಸಾಮಾಜಿಕವಾಗಿ ಹೊಸ ಸ್ವರೂಪದ ಸದಸ್ಯರು ಇದ್ದ ವಿಧಾನ ಮಂಡಲವು ಸಹಜವಾಗಿಯೇ ಕನ್ನಡದಲ್ಲಿ ಆಡಳಿತ ವ್ಯವಹಾರವನ್ನು ನಡೆಸಬೇಕೆಂದು ಒತ್ತಾಯಿಸಿದೆ–ಕೆ.ವಿ.ನಾರಾಯಣ.

[27] ಈ ತಲೆಮಾರಿನ ಸದಸ್ಯರಲ್ಲಿ ಕನ್ನಡದ ಜೊತೆಗೆ ಇತರ ಭಾರತೀಯ ಭಾಷೆಗಳನ್ನು ಬಲ್ಲವರು ಮತ್ತು ಇಂಗ್ಲೀಷ್‌ನಲ್ಲಿ ವ್ಯವಹರಿಸಲು ಶಕ್ತರಾದ ಸದಸ್ಯರು ಇರುವುದು ಸಾಮಾನ್ಯವಾಗಿತ್ತು. ಇದಕ್ಕೆ ಆ ಹೊತ್ತಿನ ಸಾಮಾಜಿಕ ರಚನೆಯೂ ಮುಖ್ಯ ಕಾರಣವಾಗಿದೆ. ಈ ಸದಸ್ಯರು ಶೈಕ್ಷಣಿಕವಾಗಿ ಮಾತ್ರವಲ್ಲದೇ ಸಾಮಾಜಿಕವಾಗಿಯೂ ಮೇಲುಜಾತಿ ಮತ್ತು ವರ್ಗಗಳಿಗೆ ಸೇರಿದವರಾಗಿದ್ದರು. ಇದರಿಂದಾಗಿ ಇವರ ರಾಜಕೀಯ ಹಿತಾಸಕ್ತಿಗಳು ಯಾವಾಗಲೂ ಜನಪರ ಆಗಿರಲೇಬೇಕೆಂಬ ಒತ್ತಾಯವಿರಲಿಲ್ಲ. ಸಮಾಜದ ಕೆಳಮಧ್ಯಮ ಜಾತಿ ಮತ್ತು ವರ್ಗಗಳಿಂದ ಸದಸ್ಯರು ಆಯ್ಕೆಯಾಗುವ ಸಾಧ್ಯತೆಗಳು ಹೆಚ್ಚಾದದ್ದು ಈಗಾಗಲೇ ಖಚಿತವಾಗಿರುವಂತೆ ಹಾವನೂರ ಆಯೋಗದ ವರದಿಯನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದ ನಂತರವೇ–ಕೆ.ವಿ.ನಾರಾಯಣ

ಆಧುನಿಕವಾದ ಹೊಸಹೊಸ ಬೆಳವಣಿಗೆಯಲ್ಲಿ ಆಡಳಿತದ ಹೊಣೆಗಾರಿಕೆಯು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗುತ್ತಿದೆ ಎನ್ನುವುದನ್ನು ನಾವು ಗಮನಿಸಿಕೊಳ್ಳಬೇಕು. ಆಡಳಿತವು ಜನಬದುಕುಗಳನ್ನು ಸರಳವಾಗಿ ಮುಟ್ಟುವ ದಾರಿಗಳಲ್ಲಿದ್ದರೆ ಆ ಮಟ್ಟಿಗೆ ಪ್ರಭುತ್ವವು ನಿರಾಳವಾಗಿ ನಾಡನ್ನು ಮುನ್ನಡೆಸಲು ಬರುತ್ತದೆ. ಇದಕ್ಕಾಗಿ ಇವತ್ತು ನಮ್ಮ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಆಡಳಿತವನ್ನು ಅರಿಯುವ ಹಾಗೆ ಏರ್ಪಾಡನ್ನು ಹೊಂದಿರಬೇಕಾಗಿದೆ. ಅದಕ್ಕೆ ಸರಿಯಾದ ದಾರಿ ಕರ್ನಾಟಕಕ್ಕೆ ಉಚಿತವೆನಿಸಿರುವ ಕನ್ನಡಿಗರ ಭಾಷೆಯಲ್ಲಿ ಆಡಳಿತ ಇರಬೇಕೆನ್ನುವುದು. ಆಡಳಿತ ಕನ್ನಡದಲ್ಲಿ ಇದೆ ಎಂದರಷ್ಟೇ ಸಾಲದು. ಆಡಳಿತವು ಆಗುಮಾಡಿಕೊಂಡಿರುವ ಭಾಷಿಕ ರೂಪಗಳು ಜನಬದುಕುಗಳನ್ನು ಮುಟ್ಟುವಂತಿವೆಯೇ? ಆ ದಾರಿಯನ್ನು ಜನಮುಖಿಯಾಗಿ ರೂಪಿಸಲಾಗಿದೆಯೇ? ಎನ್ನುವುದು ಮುಖ್ಯ. ಅಂದರೆ, ಪ್ರಭುತ್ವದ ಯೋಜನೆಗಳು, ತೀರ್ಮಾನಗಳು, ಅದರ ಜಾರಿಯ ನಡೆಗಳು ಎಲ್ಲವೂ ಇಲ್ಲಿನ ಎಲ್ಲಾ ವರ್ಗದವರಿಗೂ ಸಮಾನವಾಗಿ ಮುಟ್ಟುವಂತೆ ಸುಲಭವಾಗಿರಬೇಕಾಗುತ್ತದೆ. ಇದು ಮೇಲ್ವರ್ಗದವರಿಗೆ ಒಂದು ಬಗೆ ಮತ್ತು ಕೆಳವರ್ಗದವರಿಗೆ ಒಂದು ಬಗೆ, ಮಧ್ಯಮವರ್ಗದವರಿಗೆ ಇನ್ನೊಂದು ಬಗೆ ಎನ್ನುವಂತೆ ಆಗಬಾರದು. ಯಾಕೆಂದರೆ ಇವತ್ತಿನ ಆಡಳಿತ ಬರಹದ ಕನ್ನಡವು ಕರ್ನಾಟಕದ ಮೇಲ್ವರ್ಗದವರು ಬಳಸುತ್ತಿದ್ದ ಕನ್ನಡ ಪ್ರಭೇದದ ಬೆನ್ನು ಬಿದ್ದದ್ದರಿಂದ ಬೆಳೆದು ಬಂದುದಾಗಿದೆ. ಹಾಗಾಗಿ ಇಲ್ಲಿನ ಪ್ರಭುತ್ವದ ಆಡಳಿತವನ್ನು ಅರಿಯುವಲ್ಲಿ, ಅನುಸರಿಸುವಲ್ಲಿ ಕೆಳವರ್ಗದವರಿಗೆ ಸವಾಲಿನದೇ ಆಗಿದೆ. ಇದನ್ನು ಅರಿತು ನಡೆಯಲೇಬೇಕಾಗಿರುವ ಉಳಿದ ವರ್ಗಗಳವರು ಗುಲಾಮರಂತೆ ನಡೆದುಕೊಳ್ಳಬೇಕಾಗುತ್ತದೆ. ಇದು ಪ್ರಜಾಪ್ರಭುತ್ವದಲ್ಲಿ ಅನೇಕ ಬಗೆಯ ಇಕ್ಕಟ್ಟುಗಳಿಗೆ ಕಾರಣವಾಗಿದೆ.

ಅಧ್ಯಾಯ–7

“ಕನ್ನಡದಲ್ಲಿ ಆಧುನೀಕರಣ ಮತ್ತು ಕಂಪ್ಯೂಟರೀಕರಣ”

ಮಾನವರ ಹೇಳುವ-ಕೇಳುವ ನಡೆಯು ಬರೆಹ ರೂಪಕ್ಕೆ ಬರಲು ಕಾರಣವಾದ ಲಿಪಿಯ ಬಳಕೆಯನ್ನು ತಂತ್ರಜ್ಞಾನದ ಮೊದಲ ಹೆಜ್ಜೆ ಎಂದು ಕರೆಯಬಹುದು.ಅಂದರೆ, ನುಡಿಯ ತಂತ್ರಜ್ಞಾನದ ಶುರುವೆಂದರೆ ಲಿಪಿ.ಲಿಪಿಯನ್ನು ಕಂಡುಕೊಂಡ ತರುವಾಯದಲ್ಲಿ ಬರೆಯುವ ಬಳಕೆಗಾಗಿ ಹಲವಾರು ಬಗೆಯ ವಸ್ತುಗಳನ್ನು ಕಂಡುಕೊಳ್ಳಲಾಯಿತು. ಆಯಾ ಜನಗುಂಪುಗಳು ವಾಸಿಸುತ್ತಿದ್ದ ಜಾಗಗಳಲ್ಲಿ ಸಿಗುತ್ತಿದ್ದ ಸಾಮಾಗ್ರಿಗಳನೇಕವು ಬರೆಹದ ಬಳಕೆಯೊಳಕ್ಕೆ ಬಂದವು.ಕಲ್ಲು, ತಾಳೆಗರಿ, ಓಲೆಗರಿ, ಮಣ್ಣಿನ ಹಲಗೆಗಳು, ಮರದ ತೊಗಟೆಗಳು, ಹದಮಾಡಿದ ಪ್ರಾಣಿಗಳ ಚರ್ಮ, ಮರದ ಹಲಗೆಗಳು, ಬೊಂಬುಗಳು, ಕಬ್ಬಿಣದ ಕಡ್ಡಿಗಳು, ಮಸಿ, ಲೋಹದ ಪಟ್ಟಿಗಳು, ಬಟ್ಟೆ ಮೊದಲಾದವನ್ನು ಈ ನಿಟ್ಟಿನಲ್ಲಿ ಪಟ್ಟಿಮಾಡಿ ಹೇಳಬಹುದು.ಮಾನವರು ಬರೆಹಕ್ಕೆ ಕಂಡುಕೊಂಡ ಈ ತಾಂತ್ರಿಕತೆಯು ಮುಂದೆ ಕಲ್ಲಚ್ಚು, ಮುದ್ರಣ ಬರುವವರೆಗೂ ಮುಂದುವರೆದಿತ್ತು. ಕಲ್ಲಿನ ಮೇಲೆ ಕೊರೆದ ಸಂಗತಿಗಳ ಮೇಲೆ ಮಸಿಯನ್ನು ಹಚ್ಚಿ ಪ್ರತಿಗಳನ್ನು ತೆಗೆಯುತ್ತಿದ್ದದ್ದು ಮುದ್ರಣ ಯಂತ್ರಗಳ ತಯಾರಿಕೆಗೆ ದಾರಿಯನ್ನು ಮಾಡಿಕೊಟ್ಟಿತು.

ಹೊಸಹೊಸಕಾಲದ ಇವತ್ತಿನ ಸನ್ನಿವೇಶದಲ್ಲಿ ನಾವಾಡುವ ನುಡಿ ಮತ್ತು ಟೆಕ್ನಾಲಜಿಯ ನಡುವಿನ ನಂಟು ದೊಡ್ಡದಾಗಿದೆ. ಮಾತು ಮತ್ತು ಬರೆಹಗಳನ್ನೊಳಗೊಂಡಂತೆ ನುಡಿಬಳಕೆಯ ಎಲ್ಲಾ ವಲಯಗಳನ್ನು ಒಂದಲ್ಲಾ ಒಂದು ಬಗೆಯಲ್ಲಿ ಮುನ್ನಡೆಸುವ ಗುರಿಕಾರನಂತೆ ಇದು ಕಾಣುತ್ತಿದೆ.ಕಲ್ಲು-ಉಳಿಯ ಕೆತ್ತನೆಯ ನಂಟಿನಲ್ಲಿ ಶುರುವಾಗಿ, ಲೋಹ-ತಾಡೆಯೋಲೆ-ಮಸಿಗಳ ಮೂಲಕ ಬೆಳೆದ ಟೆಕ್ನಾಲಜಿಯ ಮೊದಲರೂಪ ಇಂದು ಪೆನ್ನು-ಪೇಪರಿನ ನಂಟನ್ನೂ ಬಿಟ್ಟು ಬೆರಳ ತುದಿಯಿಂದ ಬೇಕಾದ್ದನ್ನು ಮೂಡಿಸಬಹುದಾದ ಮಟ್ಟಕ್ಕೆ ಬಂದು ಮುಟ್ಟಿರುವುದು ನಮ್ಮೆದುರಿಗಿದೆ.

ಕನ್ನಡ ಜನಬದುಕಿನೊಳಗೆ ಮುದ್ರಣವು ಪ್ರವೇಶವನ್ನು ಪಡೆದದ್ದು 19ನೇ ಶತಮಾನದಲ್ಲಿ ಯೂರೋಪು ಇಂಡಿಯಾದೊಂದಿಗೆ ನಂಟನ್ನು ಇರಿಸಿಕೊಂಡು ತನ್ನ ವ್ಯಾಪಾರ ತಾಣವನ್ನಾಗಿ ಬದಲಾಯಿಸಿಕೊಳ್ಳುವ ಸನ್ನಿವೇಶದಲ್ಲಿ ಮುದ್ರಣ ಸಂಸ್ಕೃತಿಯು ಕನ್ನಡ ಸಮಾಜದಲ್ಲಿ ಕಾಣಿಸಿಕೊಂಡಿದೆ.

ನಾವು ಇವತ್ತು ಯಾವುದನ್ನು 'ಪ್ರಿಂಟ್ ಮೀಡಿಯಾ' ಎಂದು ಕರೆಯಲು ಆಗಿಬಂದಿದೆಯೋ ಅದರ ಮೊದಲ ದಿನಗಳು ಅವು ಎಂದು ಹೇಳಬಹುದು.ಆವರೆಗೆ, ನಮ್ಮ ಕನ್ನಡ ಬರೆಹಗಳ ಸಾವಿರಾರು ವರುಶಗಳ ಚರಿತ್ರೆಯಿರುವುದು ಕಯ್ಬರೆಹದಲ್ಲಿ.ಕಲ್ಲಿನ ಮೇಲೆ, ಮರದ ಹಲಗೆಗಳ ಮೇಲೆ, ಲೋಹದ ಪತ್ರಗಳ ಮೇಲೆ, ಓಲೆಗರಿ-ತಾಳೆಗರಿಗಳ ಮೇಲೆ ಕಯ್ಯಲ್ಲಿ ಕೊರೆದು ಬರೆದ ಬರೆಹಗಳನ್ನು ನಾವು ಕಾಣಲು ಬರುತ್ತದೆ.ಕಾಗದದ ಮೇಲೆ ಕನ್ನಡ ಬರೆಹಗಳನ್ನು ನೋಡಲು ಸಿಗುವುದು ಸರಿ ಸುಮಾರು 150 ವರುಶಗಳಿಂದೀಚೆಗೆ ಅಂತಲೇ

ಹೇಳಬೇಕು. ಹೀಗಾಗಿ 19ನೆ ಶತಮಾನದ ಮೊದಲರ್ಧದವರೆಗೆ ಕನ್ನಡ ಬರೆಹಗಳು ದೊರೆಯುವುದು ಕಯ್ಬರೆಹದಲ್ಲಿಯೇ.

ಅಲ್ಲಿಂದೀಚೆಗೆ ಯೋರೋಪಿನಿಂದ ಮುದ್ರಣ ಯಂತ್ರಗಳು ಬಂದಮೇಲೆ ಕಾಗದದ ಮೇಲೆ ಕನ್ನಡವನ್ನು ಅಚ್ಚುಮಾಡುವ ದಿನಗಳು ಬಂದವು. ಆ ಮುಂದಿನ ದಿನಗಳಲ್ಲಿ ಕನ್ನಡ ಬರೆಹದಲ್ಲಿ ಹಲವು ಬಗೆಯ ಬದಲಾವಣೆಗಳಾಗಿವೆ. ಬರಿಗೆಯ ರೂಪಗಳಲ್ಲಿ ಬದಲಾವಣೆಗಳಾಗಿವೆ. ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸುತ್ತಿರುವ ಇವತ್ತಿನ ದಿನಗಳಲ್ಲಿ ಎಷ್ಟು ಬಗೆಯ ಬರಿಗೆಯ ಬಗೆಗಳಿವೆ, ಎಂತಹ ಬರಿಗೆರೂಪದ ಆಯ್ಕೆಗಳಿವೆ ಎನ್ನುವುದಕ್ಕೆ ನಮ್ಮ ಎದುರಿನಲ್ಲಿ ಕಾಣುತ್ತಿರುವ ಮುದ್ರಿತ ಮಾದರಿಗಳೇ ಹೆಗ್ಗುರುತು.

ಮುದ್ರಣ ಯಂತ್ರವನ್ನು ಬರೆಹ ಮತ್ತು ಓದಿನ ನಡುವಿನ ತಂತ್ರಜ್ಞಾನದ ಮೊದಲ ಸೇತುವೆ ಅಂತಲೇ ಹೇಳಬಹುದು. ಸರಿಸುಮಾರು20ನೇ ಶತಮಾನದ ಕೊನೆಯಹೊತ್ತಿನವರೆಗೂ ಒಂದೊಂದೇ ಮೊಳೆಗಳನ್ನು ಜೋಡಿಸಿ ಬಿಳಿಯ ಕಾಗದದ ಮೇಲೆ ಅಚ್ಚೊತ್ತಿದಂತೆ ಮುದ್ರಿಸುವ ತಂತ್ರಜ್ಞಾನವನ್ನು ಕಂಡಿದ್ದೇವೆ. ಆದರೆ, ಇವತ್ತಿನಲ್ಲಿ ನಾವು ಬರಿಗೆಗಳನ್ನು ಕಂಪ್ಯೂಟರ್ ಪರದೆಯಲ್ಲಿ ಮೂಡಿಸುತ್ತಿದ್ದಂತೆಯೇ ಅದೇ ಮರುಕ್ಷಣದಲ್ಲಿ ಮುದ್ರಣ ರೂಪದಲ್ಲಿ ಕಾಣುವ ಅವಕಾಶವಿದೆ. ಮುದ್ರಣದ ಹಲವು ತಂತ್ರಗಳು ಇಂದು ನಮ್ಮೊಂದಿಗೆ ಇವೆ. ಕಲ್ಲಚ್ಚು, ಮೊಳೆ ಜೋಡಣೆಯ ಮುದ್ರಣ, ಆಪ್‌ಸೆಟ್ ಮುದ್ರಣ ಬಗೆಗಳ ಮೂಲಕ ಬೆಳೆದು ಬಂದಿರುವ ಈ ತಂತ್ರಜ್ಞಾನವು ಡಿಜಟಲ್ ಮುದ್ರಣ ಕ್ರಾಂತಿಯೊಂದಿಗೆ ದೊಡ್ಡದಾಗಿ ನಮ್ಮೆದುರು ನಿಂತಿರುವುದು ಕಾಣುತ್ತಿದೆ.ಇವತ್ತು ಮುದ್ರಣದ ವಹಿವಾಟು ಎನ್ನುವುದು ನಮ್ಮ ತಿಳಿವಿನ ಬಹುದೊಡ್ಡ ಸವಾಲು ಆಗಿದೆ ಅಂತಲೇ ಹೇಳಬೇಕಾಗುತ್ತದೆ.ಮುದ್ರಣ ಒಂದು ದೊಡ್ಡ ಉದ್ಯಮ–ಇಂಡಸ್ಟ್ರಿ ಎನಿಸಿ ಬೀಗುತ್ತಿರುವ ಕಾಲದಲ್ಲಿ ನಾವಿದ್ದೇವೆ. ಇದೆಲ್ಲವೂ ಕಳೆದ 150–200 ವರುಶಗಳ ಬೆಳವಣಿಗೆ.

ಮುದ್ರಣ ಯಂತ್ರಗಳು ಕನ್ನಡ ಜಗತ್ತನ್ನು ಹೊಕ್ಕಮೇಲೆ ನಮ್ಮ ತಿಳಿವಿನ ಗ್ರಹೀತಗಳೇ ಬದಲಾಗಿವೆ. ಸಾವಿರಾರು ವರುಶಗಳಲ್ಲಿ ಆಗದ ಬದಲಾವಣೆಯು ಕೆಲವೇ ವರುಶಗಳು, ತಿಂಗಳು, ಇಲ್ಲವೆ ದಿನಗಳಲ್ಲಿ–ಗಂಟೆಗಳಲ್ಲಿ ನಡೆಯುತ್ತಿದೆ ಎಂದರೆ ಅದಕ್ಕೆ ಕಾರಣ ಮುದ್ರಣ ತಂತ್ರಜ್ಞಾನ. ಇವತ್ತು, ಕನ್ನಡದಲ್ಲಿ ನೂರಾರು ಪತ್ರಿಕೆಗಳಿವೆ, ಪುಸ್ತಕೋದ್ಯವಿದೆ. ಇವತ್ತು ಯಾವುದನ್ನು ಓದಬೇಕು, ಓದದೇ ಬಿಡಬೇಕು ಎನ್ನುವುದೇ ಒಂದು ದೊಡ್ಡ ಸವಾಲಾಗಿದೆ. ಕಣ್ನೋಟಕ್ಕೆ ಮಿಗಿಲೆನಿಸುವ ಅನೇಕ ಸಂಗತಿಗಳನ್ನು ಮುದ್ರಣ ತಂತ್ರಜ್ಞಾನವು ಆಗುಮಾಡಿದೆ. ಮಿಟಾಯಿಯನ್ನು ಸುತ್ತುವ ಒಂದು ಕಾಗದದ ಚೂರಿನಿಂದ ಹಿಡಿದು ದೊಡ್ಡದೊಡ್ಡ ಕಾಗದ ಪತ್ರ, ಪುಸ್ತಕಗಳವರೆಗೆ ಮುದ್ರಣ ಸಂಸ್ಕೃತಿಯು ಕಾನೂನಿನ ಹಿಡಿತವನ್ನು ಆಗುಮಾಡಿದೆ. ವಸ್ತುವನ್ನು ಬಳಸುವ ಪ್ರತಿಯೊಬ್ಬರೂ ಅದಕ್ಕೆ ಹೊಣೆಗಾರರಾಗಿರುವಂತೆ ಮಾಡಿರುವ ಕಾರಣೀಕದಂತೆ ಮುದ್ರಣ ವಿದಾನಗಳು ಬೆಳೆದಿರುವುದನ್ನು ನೋಡಬಹುದಾಗಿದೆ. ಸಮಾಜದ ಶಿಶುರೂಪಿ ಬೆಳವಣಿಗೆಯಿಂದ ಹಿಡಿದು ದೊಡ್ಡದೊಡ್ಡ ಬೆಳವಣಿಗೆಗಳವರೆಗೂ ಮುದ್ರಣ ಸಂಸ್ಕೃತಿಯು

ಕೊಂಡಿಯನ್ನು ಇರಿಸಿಕೊಂಡಿದೆ. ಮುದ್ರಣ ಎನ್ನುವುದು ಅರಿವನ್ನು ಹರಡುವ ಮುಂದಾಳು ಅಂತಾ ಹೇಳುವುದು ಮಾತ್ರವೇ ಅಲ್ಲ, ಅದೇ ಜನಬದುಕಿನ ಹೊಣೆಗಾರ ಅಂತಲೂ ಹೇಳಬೇಕಾಗುತ್ತದೆ.ಮುದ್ರಣವು ಕಾಲಕಾಲಕ್ಕೆ ಎಲ್ಲರ ಬಳಕೆಯ ಕನ್ನಡದ ಬದಲಾವಣೆಯಲ್ಲಿ ದೊಡ್ಡ ಪಾತ್ರವನ್ನು ವಹಿಸುತ್ತಿರುವುದನ್ನು ಗ್ರಹಿಸಬಹುದಾಗಿದೆ.

ಆಡಿದ ಮಾತುಗಳನ್ನು ಹಿಡಿದಿಡುವ ಪ್ಲೇಟು–ಕ್ಯಾಸೆಟ್ಟುಗಳ ಕಾಲವೂ ಮುಗಿದು, ಬರೆಹಗಳನ್ನು ಅಡಗಿಸುವ ಫ್ಲಾಪಿಗಳ ಕಾಲವೂ ಹಿಂದೆ ಸರಿದು, ಸಿಡಿ–ಪೆನ್‌ಡ್ರೈವ್–ನೆನಪಿನ ಕಾರ್ಡುಗಳು ಮಾನವರಾಡಿದ ಮಾತು ಮತ್ತು ಬರೆಹದ ಎಲ್ಲಾ ರೂಪಗಳನ್ನೂ ಅಡಗಿಸಿಕೊಂಡು ಬೇಕಾದಾಗ ಬೇಕಾದಂತೆ ಬಳಸಲು ಅನುಕೂಲವಾಗುವಂತೆ ನಮ್ಮ ಜೇಬು–ಬ್ಯಾಗುಗಳಲ್ಲಿ ಬಂದು ಟಿಕಾಣಿ ಹೂಡಿವೆ. ನಾವು ನಿಂತು–ನಡೆದು–ಕುಂತು–ಮಲಗಿದ ಕಡೆಯೆಲ್ಲಾ ಇವುಗಳದೇ ಸಾಮ್ರಾಜ್ಯ ಅನ್ನಿಸುವ ಮಟ್ಟಿಗೆ. ಕೇಳುವ–ನೋಡುವ ಎರಡೂ ಬಗೆಯ ಮಾಂತ್ರಿಕತೆಯನ್ನು ಆಗುಮಾಡಿವೆ. ಎಲ್ಲಿ ನೋಡಿದರೂ, ಎತ್ತ ನೋಡಿದರೂ ಟೆಕ್ನಾಲಜಿಯ ಡಿಜಿಟಲ್ ಮಾಂತ್ರಿಕತೆಯೇ ಕಾಣುತ್ತಿದೆ.ಏನು ಬೇಕಾದರೂ, ಬೇಕಾದವರೊಂದಿಗೆ ಮಾತನ್ನು ಆಡಿ–ಬರೆದು ಆ ಗಳಿಗೆಯಲ್ಲಿಯೇ ಜಗತ್ತಿನ ಯಾವ ಮೂಲೆಯಲ್ಲಿ ಇರುವವರನ್ನಾದರೂ ತಲುಪಬಹುದಾಗಿದೆ.

ಎರಡು–ಮೂರು ತಲೆಮಾರುಗಳ ಹಿಂದಕ್ಕೆ ನೋಡಿದರೆ; ಮಾತಿಲ್ಲದ ನೋಟದ ಸಿನಿಮಾ, ಕೇಳುತ್ತಾ ನೋಡುವ ಸಿನಿಮಾ ಆಗಿ ಬದಲಾಯಿತು.ಲೋಕದ ಸಂಗತಿಗಳನ್ನು ಕೇಳಲು, ಹಾಡು–ಪಾಡುಗಳನ್ನು ಕೇಳಲು ಮನೆಯಲ್ಲಿಟ್ಟುಕೊಂಡಿದ್ದ ದೊಡ್ಡದೊಡ್ಡ ರೇಡಿಯೋ ಪೆಟ್ಟಿಗೆಗಳು, ಗ್ರಾಮಪೋನುಗಳು ಹಿಂದಕ್ಕೆ ಸರಿದು ಪಾಕೆಟ್ ರೇಡಿಯೋಗಳು ಬಂದವು.ಇವೆರಡನ್ನೂ ಒಟ್ಟಿಗೆ ಆಗುಮಾಡುವಂತಹ ಟೀವಿ ನಮ್ಮ ಮನೆಗೇ ಬಂದು ಕುಂತದ್ದಕ್ಕೆ ಬಹಳ ವರುಶಗಳೇನೂ ಆಗಿಲ್ಲ. ಇವತ್ತು ಟೀವಿಯ ಹತ್ತು ಹಲವು ಮುಂದುವರೆದ ರೂಪಗಳ ಜೊತೆ ಮಾನವ ಜಗತ್ತು ಜೀವಿಸುವಂತಾಗಿದೆ. ಇಡೀ ಜಗತ್ತಿನ ನಿಸರ್ಗದ ನಡತೆ ಮತ್ತು ಮಾನವ ನಡತೆಗಳ ಒಟ್ಟು ಚಹರೆಗಳನ್ನೇ ನಮ್ಮೆದುರಿಗೆ ನಡೆಯುತ್ತಿರುವಂತೆ ತೋರಿಸುತ್ತಿವೆ ಟೀವಿಗಳು.ನುಡಿಬಳಕೆಯ ಮಾತು–ಚಿತ್ರ–ಬರೆಹಗಳ ಒಟ್ಟು ಚಲನೆಯೇ ಇಲ್ಲಿದೆ.

ಬರೆಯಲೆಂದು ರೂಪಿಸಿಕೊಂಡ ಟಯ್ಪಿಂಗ್ ಮಿಶೀನುಗಳು ಕಚೇರಿಗಳಿಗೆ ಬಂದು ಕುಂತಾಗ ಅದು ದೊಡ್ಡ ಕ್ರಾಂತಿಯೆಂದು ತಿಳಿಯಲಾಗಿತ್ತು. ಮೊನ್ನೆ ಮೊನ್ನೆಯವರೆಗೂ ಬರೆಹದ 'ದಾಖಲೆ'ಗಳನ್ನು ಮಾಡುತ್ತಿದ್ದ ದೊಡ್ಡ ದಾರಿ ಇದೇ ಆಗಿತ್ತು. ಬರೆಹದ 'ದಾಖಲೆ'ಯೊಂದನ್ನು ಕಡಿಮೆ ಕಾಲ ಮತ್ತು ಕಡಿಮೆ ವೆಚ್ಚದಲ್ಲಿ ತಯಾರಿಸಬಹುದು ಎನ್ನುವುದು ಈ ಬೆರಳಚ್ಚು ಯಂತ್ರಗಳಿಂದಲೇ ಶುರುವಾಯಿತು. ಕಂಪ್ಯೂಟರ್ ಕೀಲಿಮಣೆಯ ಮೂಲ ಇದರಲ್ಲಿಯೇ ಕಾಣುತ್ತದೆ. ಕಂಪ್ಯೂಟರ್ ಟೆಕ್ನಾಲಜಿಯು ಬರೆಹದ ವೇಗ ಮತ್ತು ಅದರ ಒಟ್ಟು ಚಹರೆಗಳನ್ನೇ ಬದಲಾಯಿಸಿದೆ. ಇದರೊಂದಿಗೆ ಬೆಸೆದುಕೊಂಡಿರುವ ಇಂಟರ್ನೆಟ್–ಜಾಲತಾಣ–ಒಳಜಾಲತಾಣವು ನಮಗೆ ಬೇಕಾದಾಗ ಸಿಗುವ ಹಾಗೆ ನಮ್ಮ ಎಲ್ಲಾ ಬರೆಹಗಳ ದಾಖಲೆಯನ್ನು

ಬೇರೆ ಯಾರಿಗೂ ಸಿಗದಂತೆಯೂ ಅಡಗಿಸಿಟ್ಟುಕೊಳ್ಳುತ್ತದೆ. ನಾವು ಒಪ್ಪಿದರೆ ಎಲ್ಲರಿಗೂ ಸಿಗುವಂತೆಯೂ ಮಾಡುತ್ತದೆ. ಇದು ಇವತ್ತು ನಮ್ಮೆದುರಿಗೆ ಇರುವ ನುಡಿ ಮತ್ತು ಟೆಕ್ನಾಲಜಿಯ ನಂಟು.

ಇಂಗ್ಲಿಶ್ ಕಲಿತವರಿಗೆ ಮಾತ್ರವೇ ಟೆಕ್ನಾಲಜಿ ತಿಳಿಯುತ್ತದೆ, ಕಂಪ್ಯೂಟರ್ ಬಳಸಲು ಬರುತ್ತದೆ ಎನ್ನುವುದು ಈಗ ಸುಳ್ಳಾಗಿದೆ. ಕಲಿತವರು, ಕಲಿಯದವರ ಕಯ್ಯಲ್ಲಿಯೂ ಇವತ್ತು ಕಂಪ್ಯೂಟರ್ ಟೆಕ್ನಾಲಜಿಯ ಮುಂದುವರೆದ ರೂಪಗಳಾದ ಅಲೆಯುಲಿ(ಮೊಬಯ್ಲ್)ಗಳಿವೆ. ಶಾಲೆ–ಕಾಲೇಜುಗಳಲ್ಲಿ ಕಲಿಯದವರೂ ಕಂಪ್ಯೂಟರ್ ಬಳಸುವುದು ತೊಡಕೆನಿಸುತ್ತಿಲ್ಲ. ಟೆಕ್ನಾಲಜಿ ಎಲ್ಲವನ್ನೂ ಡಿಕ್ಟೇಟ್ ಮಾಡುತ್ತಿರುವ ಕಾಲದಲ್ಲಿ ನಾವಿದ್ದೇವೆ. ಈ ಟೆಕ್ನಾಲಜಿ–ಈ ಕಂಪ್ಯೂಟರ್ ಕನ್ನಡದ್ದಾಗಿದೆಯೇ ಎನ್ನುವುದು ನಮ್ಮೆದುರಿಗಿರುವ ದೊಡ್ಡ ಕೇಳ್ವಿ ಇದ್ದರೆ ಕನ್ನಡದಲ್ಲಿ ಟೆಕ್ನಾಲಜಿಯನ್ನು ಬಳಸುವುದು ಹೇಗೆ? ಕನ್ನಡದ ಟೆಕ್ನಾಲಜಿ ಅನ್ನುವುದೊಂದಿದೆಯೇ?ಎನ್ನುವ ಸವಾಲುಗಳು ನಮ್ಮೆದುರಿಗೆ ನಿಂತಿವೆ. ಟೆಕ್ನಾಲಜಿಯಲ್ಲಿ ಕನ್ನಡವನ್ನು ಬಳಸುವುದು, ಕನ್ನಡದ್ದೇ ಟೆಕ್ನಾಲಜಿಯೊಂದನ್ನು ಆಗುಮಾಡಿಕೊಳ್ಳುವುದು ಎರಡೂ ಬೇರೆಬೇರೆ ಸಂಗತಿಗಳು.

ಇವತ್ತಿನ ಸರಕಾರ ಮತ್ತು ಆಡಳಿತದ ನಡೆಗಳು ಖಾಸಗಿಕರಣದ ಅವಲಂಬನೆಯಲ್ಲಿ ಬಿದ್ದಿವೆ. ಇದರಿಂದಾಗಿ, ತಂತ್ರಜ್ಞಾನ ಕೂಡ ಕನ್ನಡ ನುಡಿಯನ್ನು ಅತಂತ್ರವಾಗಿಸುವತ್ತಲೇ ಸಾಗುತ್ತಿದೆ ಅನಿಸುತ್ತದೆ.ಆಡಳಿತ ಎನ್ನುವುದು "Public-Private-Peoples-participation" ಎನ್ನುವ ತೊಡಕಿಗೆ ಬಿದ್ದುಕನ್ನಡ ಜನಬದುಕಿಗೆ ಬೇಕಾದ ಸಮಾಜಿಕ ತಿಳುವಳಿಕೆಯ ನುಡಿಗಟ್ಟನ್ನು ಕಳೆದುಕೊಂಡು, ಜನಮಾತಿನಲ್ಲಿಲ್ಲದ ಕನ್ನಡವನ್ನು ಆಡಳಿತದಲ್ಲಿ ಉಸುರುತ್ತಿರುವಂತೆ ಕಾಣುತ್ತಿದೆ ಅಂದರೆ, ಕನ್ನಡ ತಿಳಿವಿನಲ್ಲಿ ಆಡಳಿತ ಎನ್ನುವುದು ಗಗನ ಕುಸುಮವೇ ಆಗಿ ಈ ನುಡಿಯ ಕಂಪ್ಯೂಟರೀಕರಣವೆನ್ನುವುದು ಇಂಗ್ಲಿಶನ್ನು ಅನುಸರಿಸಿದ, ಅನುವಾದಿಸಿದ ಸಂಸ್ಕೃತ ಭೂಯಿಷ್ಟವಾದ ತಪ್ಪುತಪ್ಪು ಪದರಚನೆ, ವಾಕ್ಯರಚನೆಯ ದಾರಿಯನ್ನು ಹಿಡಿದಿದೆ. ಕನ್ನಡದ ಜಾಯಮಾನ ಮತ್ತು ಸಹಜತೆಗಳನ್ನು ಕಳೆದುಬಿಟ್ಟಿರುವುದು ಕರ್ನಾಟಕ ಸರಕಾರದ ವೆಬ್ಸೈಟನ್ನು ಪ್ರವೇಶಿಸಿದರೆ ಕಾಣಸಿಗುತ್ತದೆ. (ಇಲ್ಲಿ ಕರ್ನಾಟಕ ಸರ್ಕಾರದ ವೆಬ್ ಸೈಟಿನಲ್ಲಿರುವ 'ಕರ್ನಾಟಕ ಸರಕಾರ 2025 ಸ್ವರೂಪ ದರ್ಶನ' ದ ಪೀಠಿಕೆಯ ಭಾಗದ ಇಂಗ್ಲಿಶ್ ಮತ್ತು ಕನ್ನಡ ಅವತರಣಿಕೆಗಳನ್ನು ಸೇರಿಸಬೇಕು)

ಇದು ಕನ್ನಡಕ್ಕೆ ಪೂರಕವಾದ ಧೋರಣೆ ಅಲ್ಲ. ಇದರ ಪರಿಣಾಮ ಮಾರಕವಾದುದು. ಪುರುಷೋತ್ತಮ ಬಿಳಿಮಲೆಯವರ ಪ್ರಕಾರ "ಇಂಗ್ಲೀಷ್‌ನ ಪ್ರಾಬಲ್ಯವು ಜಗತ್ತಿನಾದ್ಯಂತ ಸಜೀವವಾಗಿರುವ ಸಾವಿರಾರು ಸಣ್ಣ ಭಾಷೆಗಳನ್ನು ಸಾಯಿಸುತ್ತಿರುವುದರ ಬಗ್ಗೆ ಆಯಾ ದೇಶಗಳು, ಸರ್ಕಾರಗಳು ಏನೂ ಕ್ರಮ ಕೈಗೊಳ್ಳದಿರುವುದೇ ಅವುಗಳ ಬೌದ್ಧಿಕ ದಿವಾಳಿತನವನ್ನು ಎತ್ತಿ ತೋರಿಸುತ್ತದೆ. ಅಧಿಕಾರಿಗಳು ಮತ್ತು ಸರ್ಕಾರಗಳು ಸಣ್ಣ ಭಾಷೆಗಳ ಬಗ್ಗೆ ತೋರುತ್ತಿರುವ ನಿರ್ಲಕ್ಷ್ಯವು ಅವುಗಳನ್ನು ಜಗತ್ತಿನಾದ್ಯಂತ ಅವಸಾನದ ಅಂಚಿಗೆ ತಂದು ನಿಲ್ಲಿಸಿವೆ. ಮಾತ್ರವಲ್ಲ.

ಇಂಗ್ಲೀಷ್‌ನ ಅಧಿಪತ್ಯವನ್ನು ಸುಲಭವಾಗಿ ಒಪ್ಪಿಕೊಳ್ಳುವಂತೆ ಮಾಡಿವೆ. ಮಾತೃಭಾಷೆಯಲ್ಲಿ ಎಲ್ಲವನ್ನೂ ಸಾಧಿಸಿದ ದೇಶಗಳು ಕೂಡಾ ಇಂದು ಇಂಗ್ಲೀಷ್‌ಗಾಗಿ ಹಪಹಪಿಸುತ್ತಾ ತಮ್ಮದೇ ದೇಶದ ಅನೇಕ ಭಾಷೆಗಳ ಸಾವಿಗೆ ಕಾರಣವಾಗುತ್ತಿವೆ" (ಪ್ರಜಾವಾಣಿ ದಿ: 1/5/2016, ಸಣ್ಣ ಭಾಷೆಗಳ ಕತ್ತು ಹಿಸುಕುವ ರಾಜಕಾರಣ).

ಹಿರಿಯರೊಬ್ಬರು ಅಂದಿದ್ದರು, ಕನ್ನಡದಲ್ಲಿಯೇ ಕಂಪ್ಯೂಟರನ್ನು ಕಂಡುಹಿಡಿದಿದ್ದರೆ ಅದು ಕನ್ನಡದ್ದೇ ಆಗಿರುತ್ತಿತ್ತು ಅಂತಾ.ಹಾಗಂತಾ ಕಂಪ್ಯೂಟರ್ ಇಂಗ್ಲಿಶಿನ ಸ್ವತ್ತೇನೂ ಅಲ್ಲ. ಯಾವ ನುಡಿಯನ್ನು ಬೇಕಾದರೂ ತನ್ನೊಳಗೆ ತೆಗೆದುಕೊಳ್ಳುವ ಕಸುವನ್ನು ತೊಡಿಸಿಯೇ ತಯಾರು ಮಾಡಿರುವಂತಹುದು ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ.ಹಾಗಿದ್ದರೆ ಆಗಬೇಕಾಗಿರುವುದು ಏನು?

ಕಳೆದ 25–30 ವರುಶಗಳಲ್ಲಿ ನಮ್ಮ ಸುತ್ತಲಿನ ಜಗತ್ತು ಹೇಳಲಾಗದಂತಹ ಬದಲಾವಣೆಗಳನ್ನು ಕಂಡಿದೆ.ಬೆರಳ ತುದಿಯನ್ನು ಬಳಸಿ ಇಡೀ ಜಗತ್ತಿನ ಕುಣಿತವನ್ನು ನೋಡುವಂತಾಗಿದೆ.ಯಾವುದೇ ದೇಶದ–ನಾಡಿನ ಯಾವುದೇ ನುಡಿಯಲ್ಲಿ ಬೇಕಾದರೂ ಮಾಹಿತಿಗಳನ್ನು ತಯಾರುಮಾಡುವ, ಸಂಗ್ರಹಿಸುವ, ಕಳಿಸುವ, ತರಿಸಿಕೊಳ್ಳುವ ಕೆಲಸಗಳೆಲ್ಲಾ ಅರೆಗಳಿಗೆಯಲ್ಲಿ ನಡೆದುಹೋಗುತ್ತಿವೆ ಇವತ್ತು.ಇದಕ್ಕೆ ನುಡಿ–ಗಡಿಗಳ ತಡೆಗಳಿಲ್ಲದ ದೊಡ್ಡ ಕ್ರಾಂತಿಯೇ ನಡೆದುಹೋಗಿದೆ.'ಯೂನಿಕೋಡ್–ಯೂನಿವರ್ಸಲ್ ಕೋಡ್' ಎನ್ನುವ ಜಗತ್ತಿನ ಯಾವುದೇ ನುಡಿಯನ್ನು ಅದರ ಗುರುತುಗಳಲ್ಲಿ ಕಾಣಿಸಬಲ್ಲ ಕಂಪ್ಯೂಟರ್ ಗಣಿತವೊಂದು ಇಂತಹ ಕ್ರಾಂತಿಗೆ ಕಾರಣವಾಗಿದೆ.ಜಗತ್ತಿನ ನೂರಾರು ನುಡಿಗಳು ಈ ಯೂನಿಕೋಡನ್ನು ಕೂಡಿಸಿಕೊಂಡಿರುವುದರಿಂದಾಗಿ ಜಗತ್ತಿನ ಯಾವ ಮೂಲೆಯನ್ನಾದರೂ ಅರೆಗಳಿಗೆಯಲ್ಲಿ ತಲುಪುವ ಕಸುವನ್ನು ಪಡೆದುಕೊಂಡುಬಿಟ್ಟಿವೆ. ಇದರಿಂದ ಮಾಹಿತಿಕ್ರಾಂತಿಯಿಂದ ಲೋಕವೆಲ್ಲಾ ತುಂಬಿತುಳುಕುತ್ತಿದೆ. ಕನ್ನಡನುಡಿಯು ಟೆಕ್ನಾಲಜಿಯ ಈ ಬಳಕೆಯಲ್ಲಿ ಹಿಂದಿದೆ.ಮತ್ತೊಂದು ಹೆಚ್ಚುವರಿ ತಂತ್ರಾಂಶವನ್ನು ಬಳಸಿ ಮುನ್ನಡೆಯುವ ಮಟ್ಟದಲ್ಲಿಯೇ ಇದೆ. ಇದರಿಂದಾಗಿ ನಾವು ಕೈಯ್ಯಲ್ಲಿ ಹಿಡಿದಿರುವ ಮೊಬಯ್ಲು, ಟ್ಯಾಬು, ಲ್ಯಾಪ್‌ಟ್ಯಾಪುಗಳನ್ನು ನೇರವಾಗಿ ಕನ್ನಡದಲ್ಲಿಯೇ ಬಳಸಲಾರದವರಾಗಿದ್ದೇವೆ.

ಇಂಗ್ಲಿಶಿನ ಮೂಲಕ ಕನ್ನಡವನ್ನು ಬಳಸುವ ಗತಿಯಾಗಿದೆ ನಮಗೆ ಟೆಕ್ನಾಲಜಿ. ಇದರಿಂದಾಗಿ, ಇಂಗ್ಲಿಶನ್ನೇ ನೇರವಾಗಿ ಯಾಕೆ ಬಳಸಬಾರದು? ಇಂಗ್ಲಿಶಿನ ಮೂಲಕ ಕನ್ನಡವನ್ನು ಬಳಸುವ ಇಕ್ಕಟ್ಟನ್ನು ಯಾಕೆ ಜೊತೆಗಿರಿಸಿಕೊಳ್ಳಬೇಕು? ಎನ್ನುವ ಆಲೋಚನೆಗಳೂ ಬಂದುಬಿಟ್ಟಿವೆ. ಇದು ಇಂಗ್ಲಿಶೇ ಎಲ್ಲಕ್ಕೂ ದಾರಿ ಎಂದುಕೊಂಡದ್ದರ ಗತಿ.ಇದು ಅಪಾಯಕಾರಿ. ಯಾಕೆಂದರೆ, ಇಡೀ ಜಗತ್ತಿನ ಎದುರು ನಮ್ಮ ನುಡಿಯ ಮೂಲಕವೇ ನಮಗೊಂದು ಗುರುತಿದೆಯಲ್ಲಾ ಅದು ಅಳಿಸಿಹೋಗುವ ಮಟ್ಟಕ್ಕೆ ತಂದು ನಿಲ್ಲಿಸಿಬಿಡುತ್ತದೆ ಇಂತಹ ಬೆಳವಣಿಗೆ. ಇದನ್ನು ಎದುರಿಸಿ ನಿಲ್ಲಬೇಕಾದ ಸವಾಲುಗಳು ನಮ್ಮ ಎದುರಿನಲ್ಲಿವೆ. ಇದನ್ನು

ಪರಿಹರಿಸಿಕೊಳ್ಳುವುದು ಹೇಗೆ? ಆಡುವ-ನೋಡುವ-ಕೇಳುವ ರೂಪಗಳು ಕನ್ನಡದಲ್ಲಿಯೇ ನೇರವಾಗಿ ಮೂಡುವಂತೆ ಮಾಡಬೇಕಾದ ಹೊಣೆಯು ಕನ್ನಡ ಜಗತ್ತಿನ ಮೇಲೆಯೇ ಇದೆ. ಇದು ಇವತ್ತಿನ ಸರಕಾರಗಳ ಎದುರಿಗಿರುವ ದೊಡ್ಡ ಹೊಣೆ.

'ಕನ್ನಡ ನುಡಿ' ಎನ್ನುವುದು "ಆಧುನೀಕರಣ" ಪ್ರಕ್ರಿಯೆಗೆ ಒಳಗಾಗುವುದು ಎಂದರೆ ಇಂಗ್ಲೀಷ್ ತಿಳಿವನ್ನೇ ನೆಚ್ಚಿಕೊಳ್ಳುವುದು ಎಂದಾಗಿದೆ.ಇದರ ಹಿನ್ನೆಲೆಯನ್ನು ಗ್ರಹಿಸುವುದಾದರೆ:

ಕರ್ನಾಟಕದ ಏಕೀಕರಣ ಚಳುವಳಿಯು ಹರಿದುಹಂಚಿಹೋಗಿದ್ದ ಕನ್ನಡ ಪ್ರದೇಶಗಳನ್ನು ಒಂದುಗೂಡಿಸಿತು ನಿಜ.ಹೀಗಿರುವಾಗ ಕನ್ನಡದಲ್ಲಿ ಆಡಳಿತ ಎನ್ನುವುದು ರಾಷ್ಟ್ರೀಯತೆಯ ಪರವಾದುದೇ ಆಗಿತ್ತಲ್ಲದೆ, ತನ್ನ ದೇಶೀತನವನ್ನು ಬಿಟ್ಟುಕೊಟ್ಟ ಸಂಸ್ಕೃತ ಪರಂಪರೆಯನ್ನು ಅನುಸರಿಸಿದ ನುಡಿಗಟ್ಟನ್ನು ಆಧುನಿಕವಾಗಿ ಬಳಸುವಲ್ಲಿ ತೊಡಗಿಕೊಂಡಿತು. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ದೇಶಿತನವೆನ್ನುವುದು ಇಲ್ಲಿನ ಮೇಲುಜಾತಿಗಳನ್ನು ಅನುಸರಿಸಿ ನಡೆಯುವತ್ತ ಮುಖ ಮಾಡಿತು ಎನ್ನಬಹುದು.ಎಂದರೆ, ಎಂದೂ ಸಹ ಅದು ತಳಸಮುದಾಯಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವಲ್ಲಿ ವಿಫಲವಾಯಿತು.ಆದುದರಿಂದ, ಆಧುನೀಕರಣವೆನ್ನುವುದು ಈ ಹಿನ್ನೆಲೆಯಲ್ಲಿ ಇಂಗ್ಲಿಶ್ ನಡೆಯನ್ನು ಅನುಸರಿಸಿದ ಸಂಸ್ಕೃತ ವ್ಯಾಕರಣದ ದಾರಿಯನ್ನು ಕನ್ನಡ ಬಳಕೆಗಾಗಿ ಹಿಡಿದದ್ದು. ಹೀಗಾಗಿ, ಜನ-ಮನದಿಂದ ದೂರವೇ ಉಳಿದ ಕನ್ನಡ ಬಳಕೆಯದು ಎನ್ನಬಹುದು.

ಇದು ಇಂಗ್ಲೀಷ್ ತಿಳಿವಿನಿಂದ ಬಿಡಿಸಿಕೊಳ್ಳುವ ಬದಲು ಇಂಗ್ಲೀಷನ್ನೇ ಮೈದಾಳಿಕೊಂಡು ಬೆಳೆದ ಕನ್ನಡ ತಿಳಿವಾಗಿತ್ತು.ಇದಕ್ಕೆ ಒಂದಿನಿತು ಭಿನ್ನ ಸ್ವರವನ್ನು ದಾಖಲಿಸಿದ್ದು ಕುವೆಂಪು ಅಂತಹವರ ಬರಹಗಳು. ಅವು ಭವಿಷ್ಯತ್ತಿನಲ್ಲಿ ಆಧುನೀಕರಣ ಪ್ರಕ್ರಿಯೆಯು ದೇಸಿತನದಲ್ಲಿ ಬೇರುಬಿಟ್ಟು ಮೌಢ್ಯವನ್ನು ಕಿತ್ತೊಗೆದು ತಳಸಮುದಾಯಗಳ ಅಭಿವೃದ್ಧಿಯಲ್ಲಿ ಕನ್ನಡದ ಆಧುನೀಕರಣವನ್ನು ಗುರುತಿಸಲು ಪ್ರಯತ್ನಿಸುತ್ತವೆ.

ಸ್ವಾತಂತ್ರ್ಯೋತ್ತರ ಕನ್ನಡ/ಕರ್ನಾಟಕದ ಜನಸಮುದಾಯಗಳನ್ನು ಹಾಗೂ ಆಡಳಿತ ಕನ್ನಡವನ್ನು ಗಮನಿಸಿದರೆ ಈ ಕೆಳಗಿನ ಸಂಗತಿಗಳು ಎದ್ದು ಕಾಣುತ್ತದೆ.

1. ಕನ್ನಡ ತಿಳಿವು ಎನ್ನುವುದು ಜನಸಮುದಾಯಗಳ ನುಡಿಪಯಣದಿಂದ ಹೊರಗುಳಿದು, ಸಾಹಿತ್ಯ ಸಮಾವೇಶ-ಸರ್ಕಾರ-ಘೋಷಣೆಗಳ ಕಡತ ಇವುಗಳಲ್ಲೇ ಮುಳುಗಿ ಹೋಗಿರುವುದು.

2. ಕ

'ನ್ನಡ ತಿಳಿವು ಎನ್ನುವುದು ಪ್ರಮಾಣೀಕರಣಗೊಂಡ ನಡೆಯಾಗಿ ಇಂಗ್ಲಿಷ್ ತಿಳಿವಿನೊಡನೆ ಸಂಸ್ಕೃತದ ತಿಳಿವು ಮತ್ತು ನುಡಿಗಟ್ಟನ್ನು ಧರಿಸಿಕೊಂಡು ಅದೇ ದಿಟವಾದುದೆಂದು ಬಿಂಬಿಸುತ್ತಿರುವುದು.

3. ಈ ನಡುವೆ ಜನ ಹೋರಾಟಗಳು, ನಿಜವಾದ ಒಳನುಡಿ ಪಯಣವನ್ನು ಗಮನಿಸುತ್ತವಾದರೂ ಪ್ರಭುತ್ವದ ಕಪಿಮುಷ್ಟಿಯಿಂದ ಕನ್ನಡವನ್ನು ಹೊರತರಲು ಆಗದೇ ಇರುವುದು.
4. ಕನ್ನಡ ತಿಳಿವಿನಲ್ಲಿ ಶಿಕ್ಷಣ "ಮಾಧ್ಯಮ ಪ್ರಶ್ನೆ' ಯನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸಿದರೂ ಸಹ ಕಾನೂನಾತ್ಮಕವಾಗಿ ಅದು "ಇಂಗ್ಲೀಷ್ –ಹಿಂದಿ– ಕನ್ನಡ" ಎಂದಾಗಿರುವುದು.
5. ಈ ನಡುವೆ ಜಾಗತೀಕರಣದ ಪ್ರಕ್ರಿಯೆ, ಮಾಹಿತಿ ಕ್ರಾಂತಿ ಮತ್ತು ತಂತ್ರಜ್ಞಾನದಿಂದ, ಮಹತ್ವದ ಪಲ್ಲಟಗಳು ಕನ್ನಡದಲ್ಲಿ ಉಂಟಾಗಿರುವುದು ದಿಟ. ಆದರೆ ಇದು ಸಣ್ಣ ಸಮುದಾಯಗಳ, ಅವರ ನುಡಿಪಯಣಗಳನ್ನು ಕತ್ತುಹಿಸುಕುವ ರಾಜಕಾರಣವಾಗಿ ನಿಂತಿರುವುದು.

ಕಂಪ್ಯೂಟರ್ ಚರಿತ್ರೆ: ಕನ್ನಡದ ನಂಟುಗಳಲ್ಲಿ

ಕನ್ನಡನುಡಿಗೆ ಕಂಪ್ಯೂಟರಿನ ನಂಟು ಶುರುವಾಗಿದ್ದು 1990ರಿಂದ ಈಚೆಗೆ.ಆ ಹೊತ್ತಿಗೆ ಕನ್ನಡವನ್ನು ಕಂಪ್ಯೂಟರಿನ ಗಣಿತಕ್ಕೆ ಹೊಂದಿಸುವ ಪ್ರಯತ್ನಗಳನ್ನು ಕೆಲವರು ಮಾಡಿದರು.ಇಂತಹ ಪ್ರಯತ್ನಗಳಲ್ಲಿ ಸಾಫ್ಟ್‌ವೇರುಗಳನ್ನು ರೂಪಿಸಲಾಯಿತಾದರೂ ಎಲ್ಲಾ ಬಗೆಯ ಬಳಕೆಗೆ ಬರುವಂತಹ ಉಪಯೋಗಿ ನೆಲೆಯಲ್ಲಿ ರೂಪುಗೊಳ್ಳಲಿಲ್ಲ.ಕೆಲವು ಅಂತಹ ಪ್ರಯತ್ನಗಳಲ್ಲಿ ಕೂಡ ವಾಣಿಜ್ಯದ ಉದ್ದೇಶಗಳು ಮಾತ್ರವೇ ಇದ್ದವು.ಕೇಂದ್ರ ಸರಕಾರ ಭಾರತದ ಎಲ್ಲಾ ನುಡಿಗಳ ಕಂಪ್ಯೂಟರ್ ಬಳಕೆಗೆ ಅನುಕೂಲವಾಗುವಂತೆ ಸಾಫ್ಟ್‌ವೇರುಗಳನ್ನು ರೂಪಿಸಲು ಪ್ರಯತ್ನವನ್ನು ಮಾಡಿತಾದರೂ, ಆಯಾ ನುಡಿಗಳ ಬಳಕೆಯ ಅಗತ್ಯ ಮತ್ತು ಬಳಕೆಯ ದಾರಿ ಹೇಗೆ ಎನ್ನುವುದನ್ನು ಗ್ರಹಿಕೆಗೆ ತಂದುಕೊಳ್ಳದೆ ಹೋಯಿತು.ಆ ಹೊತ್ತಿನ ದೊಡ್ಡ ಬೆಳವಣಿಗೆಯಾದ ಜಿಸ್ಟ್ ಟೆಕ್ನಾಲಜಿ ಮತ್ತು ಲೀಪ್ ಸಾಫ್ಟ್‌ವೇರ್ ಕನ್ನಡದ ಬಳಕೆಗೆ ಹೆಚ್ಚು ಅನುಕೂಲಕರವಾಗಿರಲಿಲ್ಲ. ಈ ಕೀಲಿಮಣೆಯ ರೂಪವು ಹಲವು ತಡೆಗಳನ್ನು ಒಡ್ಡುತ್ತಿತ್ತು.ಆ ಮುಂದಿನ ದಿನಗಳಲ್ಲಿ 'ಡಾಸ್' ಬಂತು.ದೊಡ್ಡ ಬದಲಾವಣೆಗಳು ನಡೆಯತೊಡಗಿದವು. ಮೈಕ್ರೊಸಾಫ್ಟ್‌ನ ವಿಂಡೋಸ್ ಕಂಪ್ಯೂಟರ್‌ಗಳಲ್ಲಿ ಅಳವಟ್ಟಿತು.1995, 1998, 2000, 2007 ಹೀಗೆ ಬೇರೆಬೇರೆ ಮಟ್ಟಗಳಲ್ಲಿ ಬದಲಾಗುತ್ತಾ ಬೆಳೆಯಿತು.ಆದರೆ, ಕನ್ನಡ ನುಡಿಯು ಇದೇ ವೇಗದಲ್ಲಿ ತನ್ನ ಅಗತ್ಯಗಳನ್ನು ಹೊಂದಿಸಿಕೊಳ್ಳಲಾಗಲಿಲ್ಲ. ಕೇವಲ 'ಖಾಸಗಿ' ಪ್ರಯತ್ನಗಳು ಮಾತ್ರವೇ ಮುಂದುವರೆದವು.ಕರ್ನಾಟಕ ಸರಕಾರವು 'ಕನ್ನಡ ಗಣಕ ಪರಿಷತ್ತು' ತಯಾರಿಸಿದ ಕನ್ನಡ ಬಳಕೆಯ 'ನುಡಿ' ಸಾಫ್ಟ್‌ವೇರನ್ನು ಕರ್ನಾಟಕದಲ್ಲಿ ಬಳಕೆಗೆ ತಂದಿತು. ಇದು ಎಲ್ಲರಿಗೂ ಉಚಿತವಾಗಿ ಸಿಗುವಂತೆಯೂ ಆಯಿತು. ಆದರೆ, ಗೊಂದಲ ಮುಗಿಯಲಿಲ್ಲ.

1991ರ ಮುಂದಿನ ದಿನಗಳಲ್ಲಿ ಇಡೀ ಜಗತ್ತನ್ನು ಒಂದೇ ಮಾರುಕಟ್ಟೆ ಮಾಡುವ ಸಂಗತಿಗಳು ಬೆಳೆದಂತೆಲ್ಲಾ ಕಂಪ್ಯೂಟರ್ ಟೆಕ್ನಾಲಜಿಯು ಇಂಗ್ಲಿಶ್‌ಮಯ ಮಾತ್ರವೇ ಆಗುತ್ತದೆಯೆಂದು ದಿಗಿಲುಗೊಳ್ಳಲಾಗಿತ್ತು.ಆದರೆ, ಮೈಕ್ರೊಸಾಫ್ಟ್ 'ವಿಂಡೋಸ್ ಎಕ್ಸ್‌ಪಿ'ಯ ಮೂಲಕ ಕನ್ನಡವನ್ನೂ ಬಳಸಲು ಅನುಕೂಲವಾಯಿತು.ಆದರೆ, ಉಳಿದ ಸಣ್ಣಪುಟ್ಟ

ಪ್ರಯತ್ನಗಳಲ್ಲಿ ಬೆಳೆಯುತ್ತಿದ್ದ ಕನ್ನಡಬಳಕೆಯ ಸಾಪ್ಟ್‌ವೇರುಗಳು ಇಕ್ಕಟ್ಟಿಗೆ ಬಿದ್ದಂತಾಯಿತು.ಈ ಹೊತ್ತಿಗೆ, ಕರ್ನಾಟಕ ಸರಕಾರವು ಕಂಪ್ಯೂಟರ್ ಟೆಕ್ನಾಲಜಿಯ ಮೂಲಕ ಕನ್ನಡದ ಬಳಕೆಗೆ ಇದ್ದ ಹಲವಾರು ತೊಡಕುಗಳನ್ನು ಇಲ್ಲವಾಗಿಸಲು ಪ್ರಯತ್ನಿಸಬೇಕಿತ್ತು.ಅದು ಆಗಲಿಲ್ಲ. ಭಾರತ ಸರಕಾರದ ಪ್ರಯತ್ನಗಳು ಇದ್ದವಾದರೂ, ಕನ್ನಡದ ಬಗೆಗೆ ಏನು ಕೆಲಸ ನಡೆಯುತ್ತಿದೆ?ಇದರ ಪ್ರಯೋಜನವನ್ನು ಪಡೆಯುವುದು ಹೇಗೆ?ಎಂದು ಯಾರಿಗೂ ತಿಳಿಯದಂತಾಗಿತ್ತು.

ನುಡಿಯರಿಗರಾದ ಕೆ.ವಿ.ನಾರಾಯಣ ಅವರು ಹೇಳುವಂತೆ; ಕಂಪ್ಯೂಟರಿನಲ್ಲಿ ಕನ್ನಡ ಬಳಕೆಯನ್ನು ಸರಿಯಾದ ಬಗೆಯಲ್ಲಿ ರೂಪಿಸಬೇಕಾದರೆ, ಕಂಪ್ಯೂಟರ್ ಬಳಕೆಯ ತಾಂತ್ರಿಕ ಚತುರತೆಗಳನ್ನು ಬಲ್ಲವರು, ನುಡಿಯರಿಗರು ಮತ್ತು ಬಳಕೆದಾರರು ಈ ಮೂರೂ ನೆಲೆಗಳು ಒಟ್ಟುಗೂಡಬೇಕಾದ ಅಗತ್ಯವಿದೆ.ಯಾಕೆಂದರೆ, ಇದರಲ್ಲಿ ಪರಿಹರಿಸಿಕೊಳ್ಳಲೇಬೇಕಾದ ಎರಡು ಸಂಗತಿಗಳಿವೆ.

ಒಂದು: ಕಂಪ್ಯೂಟರ್ ಟೆಕ್ನಾಲಜಿಯು ಕನ್ನಡಕ್ಕಾಗಿಯೇ ಸಾಪ್ಟ್‌ವೇರನ್ನು ಹೊಂದಿಸಿಕೊಂಡು ತಯಾರಾಗಿರುವುದಿಲ್ಲ.

ಎರಡು: ಕನ್ನಡ ನುಡಿರಚನೆಯ ಚಹರೆಗಳನ್ನು ಅರಿತು ಸಾಪ್ಟ್‌ವೇರುಗಳನ್ನು ರೂಪಿಸಿದಲ್ಲಿ ಮಾತ್ರವೇ ತೊಡಕುಗಳು ಇಲ್ಲವಾಗುತ್ತವೆ.

ಇಂಗ್ಲಿಶ್ ಬಳಕೆಗೆ ನೇರವಾಗಿ ಅನುಕೂಲವಾಗುವಂತಹ ಸಾಪ್ಟ್‌ವೇರಿನೊಂದಿಗೆ ಮಾತ್ರವೇ ಕಂಪ್ಯೂಟರ್ ತಯಾರಾಗಿರುತ್ತದೆ. ಇದು, ಕೆಲವು ಬಳಕೆಗಳ ಕಾರಣದಿಂದ ಸರಿಯಾದುದಾದರೂ ಕನ್ನಡದ ದಾಖಲಾತಿಗಳು, ವ್ಯವಹಾರಗಳು ನೇರವಾಗಿ ನಡೆಯಬೇಕಾದ ನಿಟ್ಟಿನಿಂದ ತೊಡಕನ್ನು ಒಡ್ಡುತ್ತಲೇ ಇರುತ್ತದೆ. ಆದ್ದರಿಂದಾಗಿ, ಇದನ್ನು ಪರಿಹರಿಸಿಕೊಳ್ಳಬೇಕಾದ ಅಗತ್ಯವನ್ನು ನುಡಿಯರಿಗರು–ತಾಂತ್ರಿಕ ಚತುರರು–ಬಳಕೆದಾರರು ಈ ಕೊಂಡಿಗಳಲ್ಲಿಯೇ ಗ್ರಹಿಸಬೇಕಾಗುತ್ತದೆ.

ಈಗ ಕಂಪ್ಯೂಟರಿನ ಮೂಲಕ ನಾವು ನಡೆಸುತ್ತಿರುವ ಸಂಪರ್ಕದ ನಡೆಯನ್ನು ಗ್ರಹಿಸಿದರೆ ಇದರ ತೊಡಕು ಎಂತಹುದೆಂಬುದು ಅರಿವಿಗೆ ಬರುತ್ತದೆ.ಇವತ್ತು ಇಂಟರ್ನೆಟ್ ಅನೇಕರ ಬಳಕೆಯಲ್ಲಿದೆ.ಬೇಕಾದ ಸಂಗತಿಗಳಿಗಾಗಿ ಗಳಿಗೆ ಹೊತ್ತಿನಲ್ಲಿ ಜಗತ್ತಿನ ಯಾವುದೇ ಮೂಲೆಯನ್ನು ಸಂಪರ್ಕಿಸುವ ದಾರಿ ಇದು. ಎರಡು ತುದಿಯಲ್ಲಿರುವವರು ಹೀಗೆ ಸಂಪರ್ಕಿಸುವಾಗ ಕನ್ನಡವನ್ನು ನೇರವಾಗಿ ಬಳಸಬೇಕಾದರೆ ಇದು ಆಗುವುದಿಲ್ಲ. ಯಾಕೆಂದರೆ, ಎರಡೂ ತುದಿಗಳಲ್ಲಿರುವವರು ಬಳಸುತ್ತಿರುವ ಕಂಪ್ಯೂಟರಿನಲ್ಲಿ ಕನ್ನಡ ಸಾಪ್ಟ್‌ವೇರಿನ ಅಗತ್ಯವಾದ ಮಾದರಿ(ವರ್ಶನ್)ಯನ್ನು ಅಳವಡಿಸಿರಬೇಕಾಗುತ್ತದೆ. ಇಲ್ಲವಾದರೆ, ಸಂಪರ್ಕವನ್ನು ಕನ್ನಡ ಲಿಪಿಯಲ್ಲಿಯೇ ಪಡೆಯಬೇಕೆಂಬುದು ಸೋಲುತ್ತದೆ. ಇಲ್ಲಿ ಮತ್ತೂ ಹಲವಾರು ಜಟಿಲ ತೊಡಕುಗಳು ಇವೆ. ಈ ತೊಡಕುಗಳನ್ನು ಇಲ್ಲವಾಗಿಸಿಕೊಳ್ಳಲು ಎರಡು ಉಪಾಯಗಳಿವೆ.

1. ನಮಗೆ ಬೇಕಾದ ಸಂಕೇತರೂಪಗಳಿಗೆ ಬದಲಿಸಿಕೊಂಡು ಕೆಲಸ ಮಾಡುವುದು

2. ಎಲ್ಲರಿಗೂ ಅನುಕೂಲಕ್ಕೆ ಬರುವಂತೆ ಸಂಕೇತರೂಪವನ್ನು ರೂಪಿಸಿಕೊಳ್ಳುವುದು.

ಮೊದಲನೆಯದು ಈಗಾಗಲೇ ಇರುವ ತೊಡಕಿನ ದಾರಿ.ಅದನ್ನು 'ಆಸ್ಕಿ'ಯಲ್ಲಿ ಬರೆದು 'ಯೂನಿಕೋಡ್'ಗೆ ಬದಲಿಸಿಕೊಂಡು ವ್ಯವಹಾರವನ್ನು ನಡೆಸಬೇಕಾಗುತ್ತದೆ.ಎರಡನೆಯದು ಯಾವಾಗಲೂ ಉಳಿದು ನಡೆಯಬಹುದಾದ ದಾರಿ.ಈ ಕಾರಣಕ್ಕಾಗಿ 'ಯೂನಿಕೋಡ್' ಎಂದು ಕರೆಯಲಾಗುವ ಜಾಗತಿಕ ನೆಲೆಯ ಸಂಕೇತರೂಪಕ್ಕೆ ಕನ್ನಡಲಿಪಿಯನ್ನು ಅಳವಡಿಸಿಕೊಳ್ಳಲು ಬರುತ್ತದೆ.ಇದರಿಂದ ಎರಡೂ ತುದಿಯಲ್ಲಿರುವವರ ಸಂಪರ್ಕವು ಸಲೀಸಾಗಿ ನಡೆಯಬಲ್ಲುದಾಗಿದೆ. ಈ ನಿಟ್ಟಿನಿಂದ ನೋಡುವಾಗ ಬರೆಹ ಎನ್ನುವುದು ಪೇಪರು-ಪೆನ್ನುಗಳ ನಂಟನ್ನು ಕಳೆದುಕೊಳ್ಳುತ್ತಿರುವ ಕಾಲವಿದು ಅಂತಾ ಗಟ್ಟಿಯಾಗಿ ಹೇಳಬಹುದಾಗಿದೆ.ಬೆರಳ ತುದಿಯ ಕೆಲಸದಿಂದ ಪರದೆಯಮೇಲೆ ಬರೆಹವನ್ನು ಮೂಡಿಸುವ, ಅದನ್ನು ಕಾಣದ ಕಡೆ ಕಾಪಿಡುವ ಕೆಲಸವು ಮುಂದಾಗುತ್ತಿದೆ.'ಕ್ಲವ್ಡ್ ಕಂಪ್ಯೂಟಿಂಗ್' ನಮ್ಮ ಜೊತೆಗಿದೆ ಇವತ್ತು. ಹಾಗೆ ಕಳೆದುಹೋಗದಂತೆ ಬಚ್ಚಿಡುವ ಜಾಗವನ್ನು ರಿಸರ್ವ್ ಮಾಡಿಟ್ಟುಕೊಳ್ಳಬಹುದಾದ ಅವಕಾಶವನ್ನು ಗೂಗಲ್‌ನಂತಹ ಜಗತ್ತಿನ ದೊಡ್ಡ ಕಂಪ್ಯೂಟರ್ ಜಾಲಗಳು ಆಗುಮಾಡಿವೆ.

ಆಡಳಿತದ ಸವಾಲುಗಳು ಮತ್ತು ಕಂಪ್ಯೂಟರ್ ತಂತ್ರಜ್ಞಾನ:

ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಇಂಗ್ಲೀಷನ್ನು ನಾನಾ ಆಯಾಮಗಳಲ್ಲಿ ಬಳಸಲಾಗುತ್ತಿದೆ.ಇದು ಕನ್ನಡದಲ್ಲೂ ಸಾಧ್ಯವಾಗಬೇಕು.ಇದರ ಜೊತೆಗೆ ಆಡಳಿತ ಸೇರಿದಂತೆ ಎಲ್ಲಾ ಇಲಾಖೆಗಳಲ್ಲೂ ಕನ್ನಡವೇ ಇರಬೇಕು.ನಮ್ಮ ಲಿಪಿ ತಂತ್ರಾಂಶಗಳು ಹೊಸ ಆವೃತ್ತಿಗಳಲ್ಲಿ ಬರಬೇಕು.ನಾವು ತಂತ್ರಜ್ಞಾನವನ್ನು ಜನೋಪಯೋಗಿಯಾಗಿ ಬಳಸಬೇಕು.ಟೆಕ್ನಾಲಜಿಯನ್ನು ಹೊರಗಿಟ್ಟು ಭಾಷೆಯನ್ನು ಬೆಳೆಸಲು ಇವತ್ತಿನ ಪರಿಸರದಲ್ಲಿ ಸಾಧ್ಯವಿಲ್ಲ. ಎಂಬುದನ್ನು ಆಡಳಿತಯಂತ್ರವು ಮನಗಾಣಬೇಕು.

ಸಾಮಾಜಿಕ ಜಾಲತಾಣಗಳು ಮೊದಲು ಇಂಗ್ಲೀಷ್‌ನಲ್ಲೇ ಬಳಕೆಯಾಗುತ್ತಿದ್ದವು. ಇದರಿಂದ ಕನ್ನಡದ್ದೇ ಆದ ಜ್ಞಾನತಾಣ ಒಂದು ಇಂಗ್ಲೀಷ್‌ನಲ್ಲಿ ರಚಿತವಾದಷ್ಟು ವೇಗದಲ್ಲಿ ಕನ್ನಡದಲ್ಲೂ ಆಗಲಿಲ್ಲ. ಸರ್ಕಾರದ 'ಕಣಜ' ಜಾಲತಾಣ ರೂಪುಗೊಂಡದ್ದೇ ಇತ್ತೀಚಿನ ದಿನಗಳಲ್ಲಿ 'ಕಣಜ' ದಂತ ಜಾಲತಾಣಗಳು ಬೆಳೆಯಬೇಕಿದ್ದರೆ ಸರ್ಕಾರಿ ವೆಬ್‌ಸೈಟ್‌ಗಳಲ್ಲಿನ ಮಾಹಿತಿಯು ಕನ್ನಡದಲ್ಲಿರಬೇಕಾಗುತ್ತದೆ. ಆದ್ದರಿಂದ ಇಲಾಖೆಗಳು, ವಿ.ವಿ ಗಳು ತಮ್ಮಲ್ಲಿನ ಜಾಲತಾಣವನ್ನು ಮುಕ್ತ ತಂತ್ರಾಂಶಗಳಲ್ಲಿ ಇರಿಸಿದರೆ ಮಾತ್ರ ಸಾಧ್ಯವಾಗುತ್ತದೆ(ಎನ್.ಎ.ಎಂ ಇಸ್ಮಾಯಿಲ್ ಜನವರಿ.20.2016 ಪ್ರಜಾವಾಣಿ) ಎನ್ನುವ ಮಾತು ಸರಿಯಾದದ್ದು.

ಡಿಜಿಟಲ್ ತಂತ್ರಜ್ಞಾನದ ಪರಿಣಾಮವಾಗಿ ಆಧುನಿಕ ಪ್ರಭುತ್ವಗಳು ಸಂಕೀರ್ಣವಾದ ಸಮಸ್ಯೆಯನ್ನು ಇಂದು ಎದುರಿಸುತ್ತಿವೆ. ಎಲ್ಲಾ ಸರ್ಕಾರಗಳು ಮುಕ್ತ ಮಾರುಕಟ್ಟೆಯ ಆರ್ಥಿಕತೆಯನ್ನು ಒಪ್ಪಿಕೊಂಡಿದೆ. ಡಿಜಿಟಲ್ ತಂತ್ರಜ್ಞಾನದ ಮುಂದುವರಿಕೆಯು ಇದೇ ಆರ್ಥಿಕತೆಯ ಭಾಗವಾಗಿದೆ. ಇಂದು ತಂತ್ರಜ್ಞಾನ ಬೆಳೆಯುತ್ತಿರುವ ವೇಗಕ್ಕೆ ಸ್ಪಂದಿಸುವ ಸಾಂಸ್ಥಿಕ

ಮನಸ್ಥಿತಿ ಸರ್ಕಾರಗಳಿಗೆ ಇಲ್ಲ. ಇದನ್ನು ತಂತ್ರಜ್ಞಾನದ ಸಹಜ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವ ನಿಯಂತ್ರಣ ತತ್ಪರತೆಯನ್ನು ಕಾಣಬಹುದು.ಇದು ಜನತಂತ್ರ ವ್ಯವಸ್ಥೆಗೆ ವಿರುದ್ಧವಾಗಿರುವಂತಹುದು.

ಡಿಜಿಟಲ್ ತಂತ್ರಜ್ಞಾನವು ಗ್ರಾಹಕರನ್ನು / ಜನರನ್ನು ಎಲ್ಲೆಲ್ಲಿ ಸಬಲಗೊಳಿಸಬಹುದೋ ಅಲ್ಲೆಲ್ಲಾ ನಿಯಂತ್ರಣಾ ನಿಯಮಗಳು ಹೆಚ್ಚು ಸಂಕೀರ್ಣವಾಗಿರುವುದನ್ನು ಕಾಣಬಹುದು. ಉದಾಹರಣೆಗೆ ಕರ್ನಾಟಕ ಸರ್ಕಾರದ ಭೂಮಿ ಕೇಂದ್ರಗಳು, ನಾಡಕಛೇರಿಯಲ್ಲಿರುವ ಎ.ಜೆ.ಎಸ್.ಕೆ ಕೇಂದ್ರಗಳು ರೈತನಿಗೆ ಇಂದಿಗೂ ಸಹ ನೇರವಾಗಿ ತಾವೇ ಆರ್.ಟಿ.ಸಿ ಅಥವಾ ಇತರೆ ದಾಖಲೆಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ.

ಅಂತರ ರಾಷ್ಟ್ರೀಯ ವೇದಿಕೆಗಳಲ್ಲಿ 'ಮುಕ್ತ ಸರ್ಕಾರ'ದಂತ ಪರಿಕಲ್ಪನೆಗಳಿಗೆ ಬೆಂಬಲ ನೀಡುವ ಮಾತುಗಳನ್ನಾಡುತ್ತಲೇ ಬಳಕೆಗೆ ಅಸಾಧ್ಯವಾಗುವ ಕಡತ ಮಾದರಿಗಳಲ್ಲಿ ಸರ್ಕಾರಿ ವೆಬ್‌ಸೈಟ್‌ಗಳಲ್ಲಿ ಮಾಹಿತಿ ನೀಡುವುದೇ 'ಸಹಜ' ಎಂದು ಒಪ್ಪಿಕೊಳ್ಳಬೇಕಾದ ಸ್ಥಿತಿ ಇದೆ.ಸರ್ಕಾರವೇ ಸೃಷ್ಟಿಸಿರುವ 'ಮುಕ್ತ ದತ್ತಾಂಶ'ದಲ್ಲಿ ನೀತಿ ನಿರೂಪಣೆಗೆ ಸಂಬಂಧಿಸಿದ ಮಾಹಿತಿ ಅಪೂರ್ಣವಾಗಿದೆ. ನೀತಿ ನಿರೂಪಣೆಯ ವಿಷಯದಲ್ಲಿ ತಜ್ಞರು ಪಾಲ್ಗೊಳ್ಳುವ ಅವಕಾಶವೇ ಇಲ್ಲವೆನ್ನಬಹುದಾಗಿದೆ.ಅಲ್ಲದೆ, ತಂತ್ರಜ್ಞಾನ ವೇಗಕ್ಕಿಂತ ನೀತಿ ನಿರೂಪಣೆ ಕಾರ್ಯವು ನಿಧಾನಗತಿಯಲ್ಲಿದೆ. ತಂತ್ರಜ್ಞಾನವನ್ನೇ ಬಳಸಿಕೊಂಡು ಆಡಳಿತವನ್ನು ಸೃಜನಶೀಲವಾಗಿ ಮಾಡಲು ಅವಕಾಶವಿದ್ದರೂ ಸಹ ವಾಸ್ತವವಾಗಿ ಇದು ಜಾರಿಯಾಗುತ್ತಿಲ್ಲ. (ಎನ್.ಎ.ಎಂ ಇಸ್ಮಾಯಿಲ್, ಜುಲೈ.06.2016 ಪ್ರಜಾವಾಣಿ)

ಕನ್ನಡ ವಿಶ್ವವಿದ್ಯಾಲಯ ಎನ್ನುವ ಆಲಯದಲ್ಲಿ ಕನ್ನಡ ತಂತ್ರಾಂಶಗಳು ಒಂದು ರೀತಿಯ ಪಯಣವನ್ನು ಆರಂಭಿಸಿದರೂ ಸಹ, ಅದಿನ್ನು ಜನಸಮುದಾಯಗಳೊಳಗಿನ ಮಾದರಿಯನ್ನು ಅಳವಡಿಸಿಕೊಂಡಂತೆ ಕಾಣುತ್ತಿಲ್ಲ. ಅಲ್ಲದೆ, ಅಂತರಾಷ್ಟ್ರೀಯ ಮಟ್ಟದಲ್ಲಿ ಕಂಪ್ಯೂಟರೀಕರಣ ಭಾಗವಾಗಿ ಖಾಸಗಿ ಹಸ್ತಕ್ಷೇಪವನ್ನು ಪ್ರಶ್ನಿಸಿ, ಹೊರಬಂದ ಮುಕ್ತ ತಂತ್ರಾಂಶ (Open Source) Windowsಗೆ ಪ್ರತಿತಂತ್ರ ಹೂಡಿ, ದಾಪುಗಾಲಿಟ್ಟು ಎಲ್ಲಾ ಸ್ಥಳೀಯ ನುಡಿಗಳ ಪರವಾಗಿ ಮುಕ್ತ ಸ್ವಾತಂತ್ರ್ಯವನ್ನು ಆಧುನೀಕರಣದ ಪ್ರಕ್ರಿಯೆಯನ್ನಾಗಿಸಿಕೊಂಡಿದೆ.

ಇದನ್ನು ಏಕೆ ವಿ. ವಿ ಗಳು ಒಪ್ಪುತ್ತಿಲ್ಲ! ಅದನ್ನು ಕಲಿಕೆಯ ಭಾಗವಾಗಿಯೂ ಮಾಡಿಕೊಳ್ಳದೆ, ಅಸಹನೀಯವಾದ ಖಾಸಗೀ-ಲಾಭಕೋರತನವನ್ನೇ ಮುಂದುವರೆಸಿರುವುದು ದುರಂತವೇಸರಿ! ಈ ಜಾಡನ್ನು ಅನುಸರಿಸಿ, ಭಾರತದಲ್ಲಾದ ಒಂದೆರೆಡು ಪ್ರಕ್ರಿಯೆಗಳನ್ನು ಬಿಟ್ಟರೆ ಮತ್ತೆ ದೇಶದಲ್ಲೆಡೆ ಮೈಕ್ರೊಸಾಪ್ಟ್ ಸಂಸ್ಥೆಯ ಆಪರೇಟಿಂಗ್ ತಂತ್ರಾಂಶ, ಆಫೀಸಿನದ್ದೇ ಪಾರುಪತ್ಯವಾಗಿದೆ.

ಸರ್ಕಾರ, ಸಿಬ್ಬಂದಿ, ಸಚಿವಾಲಯ, ಶಾಲೆಗಳು ಎಲ್ಲವೂ ತನ್ನ ದಾಸ್ಯದಲ್ಲೇ ಇರಬೇಕೆಂಬುದು ಮೈಕ್ರೋಸಾಪ್ಟ್‌ನ ಸಹಜ ಚಿಂತನೆ. ಇದೇ ನಮಗೆ ಮಾದರಿ.ಮುಕ್ತ

ತಂತ್ರಾಂಶಗಳ ಬಗ್ಗೆ ನಮ್ಮದು ದಿವ್ಯ ನಿರ್ಲಕ್ಷ್ಯ.ಬಹುಹಿಂದೆಯೇ ಎಂದರೆ 2014 ರಲ್ಲೇ ಕೇಂದ್ರ ಸರ್ಕಾರವು ಮುಕ್ತ ತಂತ್ರಾಂಶಗಳನ್ನು ಉತ್ತೇಜಿಸುವ ಕುರಿತು, ಅಧಿಕೃತ ಸುತ್ತೋಲೆಗಳನ್ನು ಹೊರಡಿಸಿದರೂ, ಅದರ ಜಾರಿಯಲ್ಲಿ ಅಷ್ಟೇನೂ ಯಶಸ್ವಿ ಕಾಣುತ್ತಿಲ್ಲ.ಮುಕ್ತ ತಂತ್ರಾಂಶಗಳನ್ನು ಎಲ್ಲ ಇ–ಆಡಳಿತ ವ್ಯವಸ್ಥೆಗಳಲ್ಲಿ ಜಾರಿ ಮಾಡಿ ಖರ್ಚನ್ನು ಆದಷ್ಟು ಉಳಿಸುವ ಮಹತ್ವದ ಉದ್ದೇಶವನ್ನು ಈ ಸುತ್ತೋಲೆ ಹೊಂದಿತ್ತು.ಎಲ್ಲಾ ತಂತ್ರಾಂಶಗಳ ಮೂಲ ಸಂಕೇತ ವಾಕ್ಯಗಳನ್ನು (Source-code) ಸಮುದಾಯಕ್ಕೆ ಬಿಡುಗಡೆ ಮಾಡಬೇಕೆಂದು ಅದು ಸೂಚಿಸಿತ್ತು.ಆದರೆ, ಅದು ಕಡತದಲ್ಲೇ ಉಳಿದುಬಿಟ್ಟಿದೆ.ಇದಕ್ಕೆ ಅಪರೂಪವೆಂಬಂತೆ ಭಾರತದ ಸರ್ವೋಚ್ಚ ನ್ಯಾಯಾಲಯವು "ಸ್ವತಂತ್ರ ಮತ್ತು ಮುಕ್ತ" ತಂತ್ರಾಂಶಗಳನ್ನು ಅಳವಡಿಸಿಕೊಂಡಿದೆ.ಆದರೆ ಇದು ಇಂಗ್ಲಿಷ್‌ನಲ್ಲಿ ಮಾತ್ರ ಇದೆ.

ಹೀಗಿರುವಾಗ ಕರ್ನಾಟಕದ ಮಟ್ಟಿಗಂತೂ ಮುಕ್ತ ತಂತ್ರಾಂಶಗಳ ಕುರಿತಂತೆ ಗಮನಹರಿಸಿರುವುದು ಇಲ್ಲವೆಂದೇ ಹೇಳಬೇಕು. ಅದರ ಬಳಕೆ ನಗಣ್ಯವೇ ಸರಿ! ಜನಸಾಮಾನ್ಯರು, ವ್ಯವಹಾರಸ್ಥರು, ಪ್ರಕಾಶನ ಸಂಸ್ಥೆಗಳು, ಡಿಡಿಪಿ ಅಪರೇಟರುಗಳು, ವಿಶ್ವವಿದ್ಯಾಲಯಗಳು ಸರ್ಕಾರದ ಆಡಳಿತ ಕಛೇರಿಗಳು, ಎಲ್ಲರೂ 'ಸ್ವತಂತ್ರ ಮತ್ತು ಮುಕ್ತ ತಂತ್ರಾಂಶ' ಬಳಕೆಗೆ ಯಾವ ತಡೆಯೂ ಇಲ್ಲ. ಆದರೆ ಹಳೆ ವಿಂಡೋಸ್, ಎಕ್ಸ್‌ಪಿ ಅಪರೇಟಿಂಗ್ ವ್ಯವಸ್ಥೆ, ಆದರೂ, ಹಳೆಯ ಪೇಜ್‌ಮೇಕರ್, ಅದೇ ಹಳೆಯ ಫಾಂಟುಗಳನ್ನು ಬಳಸುವುದರಲ್ಲೇ ಆಸಕ್ತಿ ಎದ್ದು ಕಾಣುತ್ತದೆ.

ಇದಕ್ಕೆ ಮುಖ್ಯ ಕಾರಣ 'ಮುಕ್ತ ಮತ್ತು ಸ್ವತಂತ್ರವಾದ' Open Sourceನ್ನು 'ಜನನುಡಿಯ' ಭಾಗವಾಗಿ ಪರಿಗಣಿಸದೇ ಇರುವುದು ಕಾಣುತ್ತದೆ. ಇದಕ್ಕೆ ಪೂರಕವಾಗಿ ಈ ವರ್ಷ 2017 ಜುಲೈ 16 ರಂದು ಪ್ರಜಾವಾಣಿಯಲ್ಲಿ ಪ್ರಕಟವಾದ ಲೇಖನವೊಂದನ್ನು ಗಮನಿಸುವುದು ಸಮಯೋಚಿತವಾದುದು.

ಈ ಲೇಖನದ ಪ್ರಕಾರ ತಾಯ್ನುಡಿಯಲ್ಲಿ ಕಲಿಸುವುದೇ ಹೆಚ್ಚಿನ ಗ್ರಹಿಕೆಗೆ ಅನುಕೂಲ.ಆದರೆ ನ್ಯಾಯಾಲಯದಲ್ಲೂ ಶಿಕ್ಷಣ ಮಾಧ್ಯಮವು ಪಾಲಕರ ಹಕ್ಕು ಎಂಬ ಮಾತು ಬಂದಿರುವುದರಿಂದ ತಾಯ್ನುಡಿ ಮಾಧ್ಯಮದ ಶಿಕ್ಷಣ ಜಾರಿ ಎನ್ನುವುದು ಕಗ್ಗಂಟೇ ಸರಿ.ಇಂಗ್ಲಿಷ್ ಕಲಿಕೆಯೇ ಬೇರೆ, ಇಂಗ್ಲಿಷ್ ಮಾಧ್ಯಮದ ಕಲಿಕೆಯ ಅಪಾಯವೇ ಬೇರೆ ಎಂಬ ಸ್ಪಷ್ಟ ಕಲ್ಪನೆಯೂ ನಮ್ಮ ಹೋರಾಟಗಾರರಿಗೆ ಇಲ್ಲ.

ಈ ಬಗೆ ಬಗೆಯ ಗೋಜುಲುಗಳಿಂದಾಗಿ ಕನ್ನಡಕ್ಕೆ ಆತಂಕ ಒದಗಿರುವುದು ಸ್ಪಷ್ಟ.ಕನ್ನಡ ತಂತ್ರಾಂಶ, ಅಕ್ಷರಗಳು, ಪಠ್ಯ, ಸಾಹಿತ್ಯ ಎಲ್ಲವೂ ಮುಕ್ತವಾಗಿ, ಸ್ವತಂತ್ರವಾಗಿ ದೊರೆಯುವುದರಿಂದ ಮಾತ್ರವೇ ಕನ್ನಡದ ಕಲಿಕೆಗೆ ಉತ್ತಮ ಅವಕಾಶ ಕಲ್ಪಿಸಬಹುದು.ಆದ್ದರಿಂದ ಮುಕ್ತ ತಂತ್ರಾಂಶಗಳ ಜೊತೆಗೆ ಮುಕ್ತಜ್ಞಾನವೂ ಸಿಗಬೇಕಾಗಿದೆ.ಕರ್ನಾಟಕ ಸರ್ಕಾರದ 'ಕಣಜ'

(www.kanaja.in), ಭಾರತ ಸರ್ಕಾರದ 'ಭಾರತವಾಣಿ' (www.bharatavani.in) ಯೋಜನೆಗಳು ಈ ನಿಟ್ಟಿನಲ್ಲಿ ಉಲ್ಲೇಖನೀಯ.

ಭಾಷೆಯಲ್ಲಿರುವ ಜ್ಞಾನ ಮತ್ತು ಭಾಷೆಗಳ ಕಲಿಕೆಯ ಮಾಹಿತಿಗಳು, ಪಠ್ಯಪುಸ್ತಕಗಳು, ಜ್ಞಾನದ ಆಕರಗಳು, ಸಮಕಾಲೀನ ಮಾಹಿತಿಗಳು ಎಲ್ಲವೂ ಮುಕ್ತವಾಗಿ ಮತ್ತು ಮುಕ್ತ ತಂತ್ರಾಂಶಗಳ ಜೊತೆಗೇ ಸಿಗಬೇಕೆನ್ನುವ ಈ ಯೋಜನೆಗಳ ಆಶಯ ತುಂಬಾ ಸಕಾಲಿಕ.

ಸಾರ್ವಜನಿಕ ನಿಧಿ ಬೆಂಬಲಿತ ಸಂಸ್ಥೆಗಳು ಮತ್ತು ಸಮುದಾಯ ಚಿಂತನೆಯ ಪ್ರಕಾಶಕರು, ಲೇಖಕರು, ಶಿಕ್ಷಣ ತಜ್ಞರು ಇಂಥ ಯೋಜನೆಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಭಾಗಿಯಾಗಬೇಕಿದೆ.ಅಚ್ಚುಮೊಳೆ ಮುದ್ರಣ ಕ್ರಾಂತಿಯಿಂದ ಹುಟ್ಟಿದ ಹಕ್ಕುಸ್ವಾಮ್ಯಕ್ಕೆ ಮುನ್ನ ಜನಪದ ಮತ್ತು ಶಾಸ್ತ್ರೀಯ ಜ್ಞಾನಗಳು ಮುಕ್ತವಾಗಿಯೇ ಇದ್ದವಲ್ಲವೆ? ಈಗ ಅದೇ ಮುಕ್ತತೆಯತ್ತ ನಾವು ಮರಳಬೇಕಿದೆ.

ಕರ್ನಾಟಕದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಂತಹ ಹಲವು ಸಂಸ್ಥೆಗಳು ಈಗಾಗಲೇ ಮುಕ್ತಜ್ಞಾನಕ್ಕೆ ಕೈಜೋಡಿಸಿ ತಮ್ಮೆಲ್ಲ ಕೃತಿಗಳನ್ನೂ ಸಮುದಾಯಕ್ಕೆ ಬಿಟ್ಟುಕೊಟ್ಟಿರುವುದು ಒಂದು ದೊಡ್ಡ ಬೆಳವಣಿಗೆ.ಈ ಜ್ಞಾನವನ್ನೆಲ್ಲ ಡಿಜಿಟಲೀಕರಿಸಿದರೆ ಕಲಿಕೆ–ಸಂಶೋಧನೆಗೆ ಆಕರ ಸಿಕ್ಕಿದಂತಾಗುತ್ತದೆ.ಇಂಥ ಜ್ಞಾನಭಂಡಾರಗಳ ಸಂಚಯವೇ ಮುಂದೆ ಸ್ವತಂತ್ರ/ಮುಕ್ತ ಭಾಷಾ ಕಲಿಕೆಯ ಸಾಧನಗಳಾಗುತ್ತವೆ.

ಭಾರತವಾಣಿ ಆ್ಯಪ್‌ನಲ್ಲಿ ಇರುವ 50 ಕ್ಕೂ ಹೆಚ್ಚು ಪಠ್ಯ ನಿಘಂಟುಗಳು ಉಪಯುಕ್ತವೆನಿಸುತ್ತದೆ.ಒಂದು ಉದಾಹರಣೆ.ದೇಶದ ಎಲ್ಲ ನಿಘಂಟುಗಳೂ ಪಠ್ಯರೂಪದಲ್ಲಿ ಒಂದೇ ಕಡೆ ಸಿಕ್ಕಿದರೆ, ಬಹುಭಾಷಾ ಸಮಾನಾರ್ಥ ಕೋಶವೇ ಸೃಷ್ಟಿಯಾಗುತ್ತದೆ. ಈಗಲೂ ವಿಶ್ವದಾದ್ಯಂತ ಬಹುಬೇಡಿಕೆಯಲ್ಲಿರುವ ಅನುವಾದ ಉದ್ಯಮಕ್ಕೆ ಇದು ಇಂಬು ಕೊಡುತ್ತದೆ.ಅನುವಾದದ ಕೆಲಸಗಳು ವಾಣಿಜ್ಯದ ಉದ್ದೇಶದಲ್ಲಿ ನಡೆದರೂ, ಭಾಷೆಗಳ ಬೆಳವಣಿಗೆಗೆ, ಸೌಹಾರ್ದಕ್ಕೆ ಅನುಕೂಲವೇ.

ಸ್ವತಂತ್ರ / ಮುಕ್ತ ತಂತ್ರಾಂಶಗಳು ಕನ್ನಡದ ಸಾಹಿತ್ಯ, ಸಂಶೋಧನೆಗೆ ಸಹಾಯಕವಾಗುತ್ತವೆ. ಕನ್ನಡದಲ್ಲಿ ಮುದ್ರಿಸಿದ ಹಾಳೆಗಳ ಪಠ್ಯವನ್ನು ಓದಿ ಅಕ್ಷರಗಳಾಗಿ ಪರಿವರ್ತಿಸುವ (ಆಪ್ಟಿಕಲ್ ಕ್ಯಾರಕ್ಟರ್ ರೆಕಗ್ನಿಶನ್–ಓಸಿಆರ್) ತಂತ್ರಾಂಶವನ್ನು ಭಾರತೀಯ ವಿಜ್ಞಾನ ಸಂಸ್ಥೆಯು ಟಿ.ಡಿ.ಐ.ಎಲ್ ನ ಧನಸಹಾಯದಲ್ಲಿ ರೂಪಿಸಿಯೂ, ಹಕ್ಕುಸ್ವಾಮ್ಯವನ್ನು ತಾನೇ ಇಟ್ಟುಕೊಂಡಿದೆ. ಈ ತಂತ್ರಾಂಶವನ್ನು ಮುಕ್ತ ತಂತ್ರಾಂಶವಾಗಿ ಸಮುದಾಯಕ್ಕೆ ಬಿಡುಗಡೆ ಮಾಡಬೇಕು ಎಂದು ಕೇಂದ್ರದೆದುರು ಮಿತ್ರಮಾಧ್ಯಮ ಟ್ರಸ್ಟ್ ಇಟ್ಟ ಬೇಡಿಕೆ ಇನ್ನೂ ನನಸಾಗಬೇಕಿದೆ.

ನಮ್ಮ ಗಣಕಗಳಲ್ಲಿ ಕನ್ನಡವನ್ನು ಅಳವಡಿಸಿಕೊಂಡು ಬರೆಯುವ ಹೊತ್ತಿಗೆ ಸಾಕುಬೇಕಾಗುತ್ತದೆ.ಈಗಲೂ ಲಕ್ಷಗಟ್ಟಲೆ ಕನ್ನಡಿಗರು ರೋಮನ್ ಲಿಪಿಯಲ್ಲೇ ಕನ್ನಡ ಬರೆಯುತ್ತಿದ್ದಾರೆ. ಸಿಲಿಕಾನ್ ಸಿಟಿಯನ್ನು ರಾಜಧಾನಿ ಮಾಡಿಕೊಂಡ ನಾಡಿನ ಕರುಣಾಜನಕ ಸ್ಥಿತಿ ಇದು!

ಕಂಪ್ಯೂಟರ್ ಬಿಡಿ, ಮುಂದಿನ ದಿನಗಳಲ್ಲಿ ನಾವು ಖರೀದಿಸುವ ಎಲ್ಲ ವಸ್ತುಗಳೂ ಮಾತನಾಡಲಿವೆ.

ಪ್ರಪಂಚದಲ್ಲೇ ಅತಿಹೆಚ್ಚು ಕುತೂಹಲಿ ಮತ್ತು ಸ್ವತಂತ್ರ ಗ್ರಾಹಕರಿರುವ ಭಾರತದಲ್ಲಿ ಈಗಾಗಲೇ ಬಟ್ಟೆ ತೊಳೆವ ಯಂತ್ರ, ಟೆಲಿವಿಜನ್‌ಗಳು, ಏರ್‌ಕಂಡೀಶನಿಂಗ್ ಸಾಧನಗಳು ಬಂದಿವೆ. ಇವುಗಳನ್ನು ನೀವು ಇಂಗ್ಲಿಷಿನಲ್ಲಿಯೇ ಮಾತನಾಡಿಸಬೇಕು.ಕಂಪ್ಯೂಟರ್ ಮೂಲಕ ದಾಳಿಯಿಟ್ಟ ಇಂಗ್ಲಿಷ್ ವಸಾಹತುಶಾಹಿ ಈಗ ಇಂಥ ಸಾಧನಗಳ ಮೂಲಕ ಮತ್ತೊಂದು ಅವತಾರದಲ್ಲಿ ವಕ್ಕರಿಸಿದೆ.

'ಇಂಟರ್‌ನೆಟ್ ಆಫ್ ಥಿಂಗ್ಸ್' (IOT) ಎಂಬ ಹೊಸ ಯುಗದಲ್ಲಿ ಈ ಎಲ್ಲಾ ನಿತ್ಯಬಳಕೆಯ ಸಾಧನಗಳೂ ಅಂತರಜಾಲಕ್ಕೆ ಜೋಡಣೆಯಾಗುತ್ತವೆ. ಆಗ ನಾವು ಇಂಗ್ಲಿಷಿನ ದಾಸ್ಯದಲ್ಲೇ ಇರಬೇಕೆ? ನಿಮ್ಮ ಸ್ಮಾರ್ಟ್‌ಫೋನ್, ಟ್ಯಾಬ್ಲೆಟ್‌ಗಳಿಂದ ಹಿಡಿದು ಇಂಥ ಎಲ್ಲ ಸಾಧನಗಳಲ್ಲೂ ಕನ್ನಡ ಮತ್ತು ಭಾರತೀಯ ಭಾಷೆಗಳನ್ನು ಅಳವಡಿಸಿರಬೇಕು ಎಂಬ ಒತ್ತಾಯವನ್ನೂ ನಾವು ಮಾಡಬೇಕಿದೆ.

ಲೋಕಲೈಸೇಶನ್ ಎಂಬ ಈ ಕಾರ್ಯವನ್ನು 'ದೇಸೀಕರಣ' ಎಂದು ಕರೆಯಬಹುದು. ದೇಸೀಕರಣವು ಮಾಹಿತಿ ತಂತ್ರಜ್ಞಾನದ ಸಾಧನಗಳ ಯುಗದಲ್ಲಿ ಸ್ಥಳೀಯ ಭಾಷೆಗಳನ್ನು ಉಳಿಸುವತ್ತ ಮೊದಲ ಹೆಜ್ಜೆ.ಈ ಹೊಸಕಾಲದ ಇಂಗ್ಲಿಷ್ ಸವಾರಿಯಿಂದ ಬಿಡುಗಡೆ ಹೊಂದಬೇಕೆಂದರೆ, ನಾವು ಬಳಸುವ ತಂತ್ರಾಂಶಗಳ ಆದೇಶ ಪಟ್ಟಿ (ಮೆನು) ಕನ್ನಡದಲ್ಲಿ ಇರಬೇಕಾದ್ದು ಅತ್ಯಗತ್ಯ.

ಪಾವತಿಸಿ ಪಡೆವ ತಂತ್ರಾಂಶಗಳಲ್ಲಿ ನಮ್ಮ ಭಾಷೆಯ ಅವತರಣಿಕೆಗಾಗಿ ಕಾಯಬೇಕು.ಸ್ವತಂತ್ರ / ಮುಕ್ತ ತಂತ್ರಾಂಶಗಳ ವಿಷಯದಲ್ಲಿ ಹೀಗಿಲ್ಲ. ಉದಾಹರಣೆಗೆ 'ಲಿಬ್ರೆ ಆಫೀಸ್' ಎಂಬ ಮುಕ್ತ ತಂತ್ರಾಂಶದ ಬಹುಪಾಲು ಆದೇಶಗಳನ್ನು ನೀವು ಕನ್ನಡದಲ್ಲಿಯೇ ನೋಡಲು ಸಾಧ್ಯ.ಕಂಪನಿಯ ಬದಲಿಗೆ ಇಲ್ಲಿ ಸಮುದಾಯವೇ ಕೈಗೆ ಕೈ ಜೋಡಿಸಿ ಅನುವಾದ ಕೈಗೊಳ್ಳುತ್ತದೆ.

ವಿವಿಧ ಸ್ವತಂತ್ರ / ಮುಕ್ತ ತಂತ್ರಾಂಶಗಳ ಆದೇಶ ಪಟ್ಟಿಯು ಏಕರೂಪವಾಗಿರಬೇಕು; ಗೊಂದಲವಿಲ್ಲದ, ಖಚಿತ ಪದಗಳನ್ನೇ ಬಳಸಬೇಕು ಎಂಬುದು ಇಲ್ಲಿನ ಆದ್ಯತೆ.ಇದಕ್ಕಾಗಿ 'ಫ್ಯುಯೆಲ್ ಪ್ರಾಜೆಕ್ಟ್' (http://fuelproject.org) ಬಹುಭಾಷಾ ಅಭಿಯಾನ ಕೈಗೊಂಡಿದೆ.

ಕನ್ನಡದ ಮಟ್ಟಿಗೆ ಇಂತಹ ದೇಸೀಕರಣಕ್ಕಾಗಿ 'ಸಂಚಯ' (Sanchaya.net) ಸಮೂಹವು ಒಂದು ಆನ್‌ಲೈನ್ ವೇದಿಕೆ ಒದಗಿಸಿದೆ.

ಇಲ್ಲಿ ಮುಖ್ಯವಾಗಿ ಮೊಜಿಲ್ಲಾ ಫೈರ್‌ಫಾಕ್ಸ್ ಎಂಬ ಜಾಲವಿಹಾರ ತಂತ್ರಾಂಶ, ಲಿಬ್ರೆ ಆಫೀಸ್, ಜಿನೋಮ್, ಉಬುಂಟು (ಗ್ನು/ಲಿನಕ್ಸ್ ಆಧಾರಿತ ಆಪರೇಟಿಂಗ್ ವ್ಯವಸ್ಥೆ), ಮೀಡಿಯವಿಕಿ, ಓಪನ್‌ಸ್ಟ್ರೀಟ್ ಮ್ಯಾಪ್, ವರ್ಡ್‌ಪ್ರೆಸ್ (ಜಾಲ ವಿನ್ಯಾಸ ತಂತ್ರಾಂಶ) – ಇವುಗಳ ದೇಸೀಕರಣಕ್ಕೆ ಅಂತರಜಾಲ ಕೊಂಡಿಗಳನ್ನು ನೀಡಿದೆ.

ಸಮುದಾಯದ ಸಹಕಾರದಿಂದ, ಸ್ವತಂತ್ರ ಚಿಂತನೆಯಿಂದ ತಂತ್ರಾಂಶಗಳನ್ನು ರೂಪಿಸಬಹುದು ಎಂಬ ಮನೋಭಾವವನ್ನು ಎಳೆವಯಸ್ಸಿನಲ್ಲೇ ಮೂಡಿಸುವುದು ನಮ್ಮ ಕರ್ತವ್ಯ.ಕಾರ್ಪೋರೇಟ್ ತಂತ್ರಾಂಶಗಳ ಗುಲಾಮಗಿರಿಯನ್ನು ಮೊಳಕೆಯಲ್ಲೇ ಚಿವುಟಬೇಕು.ಇದು ನಾಡಿನ ಮಕ್ಕಳಿಗೆ ನೀಡುವ ನೈತಿಕ ಶಿಕ್ಷಣವೂ ಹೌದು.ಶಾಲಾ ಆಡಳಿತ ಮಂಡಳಿಗಳು, ಶಿಕ್ಷಕರು, ಪಾಲಕರು ಈ ವಿಷಯದಲ್ಲಿ ಸ್ವತಂತ್ರ ತಂತ್ರಾಂಶ ಚಳವಳಿಯನ್ನೇ ಹೂಡಬೇಕಿದೆ.ಇಂದಿನ ಮಕ್ಕಳನ್ನು ಈಗಲೇ ಸ್ವತಂತ್ರ ತಂತ್ರಾಂಶದ ಅಭಿಮಾನಿಗಳನ್ನಾಗಿ ಮಾಡಬೇಕಿದೆ.

ಕೇಂದ್ರ ಸರ್ಕಾರವೇ ಅನುಮೋದಿಸಿದ ಮೇಲೆ ರಾಜ್ಯ ಸರ್ಕಾರಗಳು ಈಗಲೂ ಮೈಕ್ರೋಸಾಫ್ಟ್ ಮತ್ತಿತರೆ ಖಾಸಗಿ ಮತ್ತು ಮುಚ್ಚಿದ (closed) ತಂತ್ರಾಂಶಗಳನ್ನು ಬಳಸುವುದನ್ನು ಮುಂದುವರಿಸಿದೆ.ಸದಾಕಾಲವೂ ಅಪ್‌ಗ್ರೇಡ್ ಆಗಬೇಕೆಂದು ಕೋಟಿಗಟ್ಟಲೆ ಹಣ ಸುಲಿಯುವ ತಂತ್ರಾಂಶಗಳಿಂದಾಗಿ ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಹಬ್ಬಿದೆ.ಅದರಲ್ಲೂ ವಿಂಡೋಸ್ ಆಪರೇಟಿಂಗ್ ವ್ಯವಸ್ಥೆಯನ್ನೇ ಅಳವಡಿಸಿರುವ ಕಂಪ್ಯೂಟರ್‌ಗಳನ್ನು ಖರೀದಿ ಮಾಡಿದ ಮೇಲೆ ಉಳಿಯುವುದೇನು?ಗ್ನುಲಿನಕ್ಸ್ ಆಧಾರಿತ (ಉಬುಂಟು ಇತ್ಯಾದಿ) ಆಪರೇಟಿಂಗ್ ವ್ಯವಸ್ಥೆಗಳನ್ನು ಊಡಿಸಿದ ಕಂಪ್ಯೂಟರುಗಳನ್ನು ಕೊಳ್ಳುವುದಕ್ಕೆ ಸರ್ಕಾರಕ್ಕೆ ತಾಂತ್ರಿಕ ಸಮಸ್ಯೆ ಇಲ್ಲವೇ ಇಲ್ಲ. ಇದು ವಿಂಡೋಸ್‌ಗಿಂತ ಹೆಚ್ಚು ಸುರಕ್ಷಿತ.ಜಾಲತಾಣ, ಕ್ಲೌಡ್ ತಂತ್ರಾಂಶಗಳೂ ಮುಕ್ತವಾಗಿ ದೊರಕುತ್ತವೆ. ಸೇವೆಗೆ ಮತ್ತು ಯಂತ್ರಾಂಶಗಳಿಗೆ ಮಾತ್ರ ಹಣ ನೀಡಬೇಕಾಗುತ್ತದೆ. ತಂತ್ರಾಂಶ ತಯಾರಿಕಾ ಟೆಂಡರ್‌ಗಳನ್ನು ಕರೆಯುವಾಗಲೂ ಸ್ವತಂತ್ರ / ಮುಕ್ತ ತಂತ್ರಾಂಶಗಳನ್ನೇ ನೀಡುವಂತೆ ಸೂಚಿಸಬೇಕು.

ಸ್ವತಂತ್ರ / ಮುಕ್ತ ತಂತ್ರಜ್ಞಾನಕ್ಕಾಗಿ ಡಿಜಿಟಲ್ ಜಗಲಿ: ಸರ್ಕಾರ, ಸಂಸ್ಥೆಗಳು ಮತ್ತು ಸಮುದಾಯ ಕಾರ್ಯಕರ್ತರು ಸುಲಭವಾಗಿ ಒಂದೆಡೆ ಕಲೆತು ಸ್ವತಂತ್ರ ಮತ್ತು ಮುಕ್ತ ತಂತ್ರಾಂಶ, ತಂತ್ರಜ್ಞಾನ ಹಾಗೂ ಮುಕ್ತಜ್ಞಾನದ ಸಂಗ್ರಹದ ಬಗ್ಗೆ ಮಾಹಿತಿ ವಿನಿಮಯ, ನಿರ್ಣಯ ತಳೆಯಲು ಅನುಕೂಲವಾಗುವ ಒಂದು ವೇದಿಕೆಯನ್ನು ಕರ್ನಾಟಕ ಸರ್ಕಾರವೇ ರೂಪಿಸಿ ನಿರ್ವಹಿಸಬೇಕು.

ಮುಕ್ತ ಜ್ಞಾನಕ್ಕಾಗಿ 'ಅರಿವಿನ ಗೋಮಾಳ' / ಇದು ಮುಕ್ತಜ್ಞಾನದ ಅಭಿಯಾನವನ್ನು ವಿಶ್ವವಿದ್ಯಾಲಯಗಳಿಂದ ಆರಂಭಿಸಿ ದೇಸಿ ಅರಿವಿನ ಗ್ರಾಮೀಣ ಜ್ಞಾನ ಕಣಜಗಳನ್ನೂ ಸಂಗ್ರಹಿಸಿ ಕಲಿಕೆ ಮತ್ತು ಸಂಶೋಧನೆಗಾಗಿ ಸಮುದಾಯದ ಬಳಕೆಗೆ ಉಚಿತವಾಗಿ ಬಿಟ್ಟುಕೊಡುವ ತತ್ವವೂ ಹೌದು; ಯೋಜನೆಯೂ ಹೌದು.

ಕನ್ನಡ ಕಲಿಕೆಗೆ ಅಭಿಯಾನ: ಕನ್ನಡ ಕಲಿಕೆಯ ಆನ್‌ಲೈನ್ ತರಗತಿಗಳೇ ಅಲಭ್ಯವಾಗಿರುವ ಈ ಹೊತ್ತಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಒಔಔಅ (ಟಚಿುತಜ ಂಠಿಜಟ ಂಟಿಟುಟಜ ಛಿಂಣಠಿಜ) ಮಾದರಿಯಲ್ಲಿ ವಿವಿಧ ವಯೋಮಾನದ, ವೃತ್ತಿಪರರ ಅನುಕೂಲಕ್ಕಾಗಿ ಆನ್‌ಲೈನ್ ಕೋರ್ಸ್‌ಗಳನ್ನು ರೂಪಿಸಿ ಉಚಿತವಾಗಿ ನೀಡಬೇಕು. ಈ ಕಾಲದ ಮಹಾನ್ ಕನಸುಗಾರ–ವಿಜ್ಞಾನಿ–ಹೂಡಿಕೆದಾರ ಇಲಾನ್ ಮಸ್ಕ್ ತನ್ನ ಅತ್ಯಾಧುನಿಕ ಪರಿಸರ ಸ್ನೇಹಿ ವಿದ್ಯುತ್ ಕಾರುಗಳ ವಿನ್ಯಾಸ, ತಂತ್ರಜ್ಞಾನವನ್ನೆಲ್ಲ ಮುಕ್ತವಾಗಿ ಹಂಚಲು ನಿರ್ಧರಿಸಿದ್ದಾರೆ. ಇತ್ತ ನಾವು ಭಾಷೆಗೆ ಸಂಬಂಧಿಸಿದ ಸ್ವತಂತ್ರ / ಮುಕ್ತ ತಂತ್ರಾಂಶಗಳು ಕೈಯಲ್ಲಿದ್ದರೂ ಖಾಸಗೀಕರಣದ ಕಂದಾಚಾರಕ್ಕೆ ಜೋತುಬಿದ್ದಿದ್ದೇವೆ. ಮುಕ್ತಜ್ಞಾನ, ಮುಕ್ತ ತಂತ್ರಜ್ಞಾನದ ಅಭಿಯಾನವನ್ನು ಕನ್ನಡದ ಉಳಿವಿನ ಹೋರಾಟವಾಗಿ ಸ್ವೀಕರಿಸಬೇಕಿದೆ.

ಸರ್ಕಾರಗಳು ಎಂದಿಗೂ ವಿಂಡೋಸ್, ಮ್ಯಾಕ್ ಓಎಸ್, ಆ್ಯಂಡ್ರಾಯ್ಡ್, ಐ.ಓಎಸ್– ಯಾವುದನ್ನೂ ಬಳಸಬಾರದು.ಏಕೆಂದರೆ ಇವೆಲ್ಲವೂ ದೇಶವೊಂದರ ಗಣಕ ಸಾರ್ವಭೌಮತ್ವವನ್ನು ಕಸಿದುಕೊಳ್ಳುತ್ತವೆ ಎನ್ನುತ್ತಾರೆ.ಸ್ವತಂತ್ರ ತಂತ್ರಾಂಶ ಚಳವಳಿಯ ಸ್ಥಾಪಕ ಫ್ರೀ ಸಾಫ್ಟ್‌ವೇರ್ ಸಂತ ರಿಚರ್ಡ್ ಸ್ಟಾಲ್‌ಮನ್.

ಸ್ಟಾಲ್‌ಮನ್, ಮಕ್ಕಳನ್ನು ಶಕ್ತಿಯುತ, ಸಮರ್ಥ, ಸ್ವತಂತ್ರ, ಸಹಕಾರಿ ಮತ್ತು ಮುಕ್ತ ಸಮಾಜದ ಉತ್ತಮ ನಾಗರೀಕರನ್ನಾಗಿಸಲು ಅವರಿಗೆ ಶಾಲೆಗಳಲ್ಲಿ ಸ್ವತಂತ್ರ ತಂತ್ರಾಂಶಗಳನ್ನೇ ಕಲಿಸಬೇಕು ಎಂದು ಪ್ರತಿಪಾದಿಸುತ್ತಾರೆ.ಖಾಸಗಿ ತಂತ್ರಾಂಶಗಳಿಂದ ಮಕ್ಕಳ ಜ್ಞಾನವೇ ಅಡಗಿಹೋಗುತ್ತದೆ; ಇದು ಶಿಕ್ಷಣ ವ್ಯವಸ್ಥೆಗೇ ಅಪಾಯಕಾರಿ ಎಂಬುದು ಸ್ಟಾಲ್‌ಮನ್ ನಿಲುವು.

ತಂತ್ರಾಂಶ ಬಳಕೆದಾರರಿಗೆ ಈ ಸ್ವಾತಂತ್ರ್ಯಗಳು ಇರಬೇಕು ಎಂದು ಸ್ಟಾಲ್‌ಮನ್ ಹೇಳುತ್ತಾರೆ: 1) ತಂತ್ರಾಂಶವನ್ನು ಯಾವುದೇ ಉದ್ದೇಶಕ್ಕಾಗಿ, ಯಾವುದೇ ಬಗೆಯಲ್ಲಿ ಬಳಸುವ ಸ್ವಾತಂತ್ರ್ಯ 2) ತಂತ್ರಾಂಶದ ಮೂಲವಸ್ತುವನ್ನು ತಿಳಿಯುವ ಸ್ವಾತಂತ್ರ್ಯ 3) ತಂತ್ರಾಂಶವನ್ನು ಯಥಾವತ್ ಪ್ರತಿ ಮಾಡುವ ಅವಕಾಶ 4) ಸುಧಾರಿತ ಆವೃತ್ತಿಗಳನ್ನು ರೂಪಿಸಿ ಹಂಚುವ ಅವಕಾಶ.

'ಕಿಂಡಲ್'ನಲ್ಲಿ ಕೊಂಡ ಪುಸ್ತಕವನ್ನು ಅಮೆಝಾನ್ ಯಾವ ಕ್ಷಣದಲ್ಲಾದರೂ ಕಿತ್ತುಕೊಳ್ಳಬಹುದು; ಮುದ್ರಿತ ಪುಸ್ತಕ ನಮ್ಮಲ್ಲೇ ಶಾಶ್ವತವಾಗಿ ಉಳಿಯುವುದಿಲ್ಲವೆ?' ಎಂಬ ಸ್ಟಾಲ್‌ಮನ್ ಪ್ರಶ್ನೆಯೇ ನಮ್ಮನ್ನು ಭಯಭೀತಗೊಳಿಸುತ್ತದೆ!

ಆ್ಯಪಲ್, ಮೈಕ್ರೋಸಾಫ್ಟ್, ಗೂಗಲ್, ಅಡೋಬ್, ಅಮೆಝಾನ್ ಸಂಸ್ಥೆಗಳು ಗ್ರಾಹಕರಿಗೆ ತಿಳಿಸದೆಯೇ ಹಲವು ಬಗೆಯ ಕೋಡ್‌ಗಳನ್ನು ತುರುಕಿ ಗೂಢಚರ್ಯೆ ನಡೆಸುತ್ತವೆ ಎಂದು ಸ್ಟಾಲ್‌ಮನ್ ದೊಡ್ಡ ಪಟ್ಟಿಯನ್ನೇ ನೀಡುತ್ತಾರೆ.ಖಾಸಗಿ ತಂತ್ರಾಂಶಗಳೆದುರು ಗ್ರಾಹಕರು ತಮಗೆ ಬೇಕಾದ್ದನ್ನು ಭಿಕ್ಷೆ ಬೇಡಬೇಕು? ಅದು ಅವರ ಹಕ್ಕಲ್ಲವೆ? ಎಂಬ ಸ್ಟಾಲ್‌ಮನ್ ಪ್ರಶ್ನೆ ನಮ್ಮದೂ ಆಗಬೇಕು.

ಆದ್ದರಿಂದ ಕನ್ನಡದಲ್ಲಿ ಆಧುನೀಕರಣ ಮತ್ತು ಕಂಪ್ಯೂಟರೀಕರಣವೆಂದರೆ ಎಲ್ಲಾ ಕನ್ನಡಿಗರು ಖಾಸಗೀ ಕಂಪ್ಯೂಟರ್‌ನಿಂದ ಹೊರಬಂದು ಮುಕ್ತ ಮತ್ತು ಸ್ವತಂತ್ರ ತಂತ್ರಾಂಶವನ್ನು ಬಳಸಿಕೊಂಡು ತಮ್ಮ ನಾಳೆಗಳನ್ನು ತಮ್ಮದೇ ಆದ ಆಧುನೀಕತೆಗಳಲ್ಲಿ ನೆಲೆಗೊಳಿಸಿಕೊಳ್ಳುವುದು ಮುಖ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ಬರಗೂರು ರಾಮಚಂದ್ರಪ್ಪನವರು ನಾವು ಕೇವಲ ಕನ್ನಡವೆಂದರೆ ಸಾಲದು.ಅದನ್ನು ಬದುಕಿನ ಅತ್ಯುತ್ತಮ ಅವಕಾಶಗಳನ್ನು ಸೃಷ್ಟಿಸುವ ಶಕ್ತಿಯಾಗಿ ಬೆಳೆಸಬೇಕು. ಕನ್ನಡದಲ್ಲಿ ಕಲಿತರೆ ಸುಖವಾಗಿರಬಲ್ಲೆ ಎನ್ನುವಂತಹ ರಚನಾತ್ಮಕ ವಾತಾವರಣವನ್ನು ತರಬೇಕು (ವಿಜಯಕರ್ನಾಟಕ ದಿನಾಂಕ: 01/11/2015) ಎಂದಿದ್ದಾರೆ.

ಈ ಹಿಂದೆ, ಕಲ್ಲಿನ ಮೇಲೆ ಕೆತ್ತಿದುದನ್ನು, ಲೋಹ, ಮರದ ತೊಗಟೆ ಮತ್ತು ಎಲೆಗಳ ಮೇಲೆ ಬರೆದಿದ್ದನ್ನು ಕಾಗದಕ್ಕೆ ತಂದುಕೊಳ್ಳುವ .ಕೆಲಸವು ನೂರಯ್ವತ್ತು ವರುಶಗಳಿಂದಲೂ ನಡೆಯುತ್ತಿದೆ. ಈಗ ಬಂದಿರುವ ಹೊಸ ಟೆಕ್ನಾಲಜಿಗಳು ಬಹಳ ಹಿಂದಿನಕಾಲದ ಇಂತಹ ಗುರುತಿನ 'ದಾಖಲೆ'ಗಳನ್ನು ಕಂಪ್ಯೂಟರಿನಲ್ಲಿ ಕಾಪಿಡುವ ಕೆಲಸವನ್ನು ಮಾಡಲು ಅನುಕೂಲಿಸಿವೆ. ಅಂದರೆ, ಬರೆಹವನ್ನು ಕಾಗದವಿಲ್ಲದೆ ಕಾಪಿಡುವ ನೆಲೆಯ ದಾರಿಯನ್ನು ಹಿಡಿಯಲು ಅನುಕೂಲವಾಗಿದೆ. ಸರಕಾರ, ವಿಶ್ವವಿದ್ಯಾಲಯಗಳು ಇಂತಹ ಕೆಲಸವನ್ನು ಮಾಡುತ್ತಿವೆ. ಅಂದರೆ, ಕಂಪ್ಯೂಟರ್ ಟೆಕ್ನಾಲಜಿಯನ್ನು ಮಾಹಿತಿ ಕಣಜವನ್ನಾಗಿ ಬಳಸಲಾಗುತ್ತಿದೆ. ಕಾಗದದ ಮೇಲೆ ಇರುವ ಸಾವಿರಾರು ಪುಸ್ತಕ ಬರೆಹಗಳನ್ನು ಕಂಪ್ಯೂಟರಿನ ಗಣಿತದಲ್ಲಿ ಇರಿಸುವ ಪ್ರಯತ್ನಗಳು ಇವು. ಈ ನಿಟ್ಟಿನಲ್ಲಿ ಕನ್ನಡವು ಯಾವ ರೂಪವನ್ನು ಪಡೆಯುತ್ತದೆ? ಈ ನಿಟ್ಟಿನಲ್ಲಿ ಬರೆಹದ ಹಕ್ಕಿನ(ಕಾಪಿರೈಟ್) ಸಂಗತಿಗಳು ಏನಾಗುತ್ತವೆ? ಹೇಗೆ ನಾಳೆಗಳಲ್ಲಿ ಈ ರೂಪದ 'ದಾಖಲೆ'ಗಳು ಮುಂದಿನ ಪೀಳಿಗೆಗಳಿಗೆ ದೊರೆಯುವಂತಾಗುತ್ತವೆ ಎನ್ನುವುದು ಕುತೂಹಲದ ಮತ್ತು ಸವಾಲಿನ ಸಂಗತಿಯೂ ಆಗಿದೆ.ಯಾಕೆಂದರೆ, ಹೀಗೆ ಅಳವಡಿಸಿರುವ 'ಪಠ್ಯ-ಟೆಕ್ಸ್ಟ್'ಗಳನ್ನು ಓದಿ ಹೇಳುವ ಸಾಫ್ಟ್‌ವೇರುಗಳು ಇಂಗ್ಲಿಶಿನ ಮಟ್ಟಿಗೆ ಈಗಾಗಲೆ ಕೆಲಸ ಮಾಡುತ್ತಿವೆ. ಇದನ್ನು ಅಳವಡಿಸಿದಲ್ಲಿ 'ಬರೆಹ'ವನ್ನು ಓದಿ ಹೇಳುವ ಕೆಲಸವನ್ನು ಕಂಪ್ಯೂಟರ್ ಮಾಡುತ್ತಿದೆ.ಕನ್ನಡದ ವಿಚಾರದಲ್ಲಿ ಇದು ಆಗಬೇಕಾದ ನಡೆ.

ಅಧ್ಯಾಯ–8

ಕನ್ನಡ ಬಳಕೆ: ಸರಕಾರಿ ಆಡಳಿತ ಮತ್ತು ಜನ ಬದುಕು

'ಕನ್ನಡ ಬರಹ ಮೇಲ್ವರ್ಗದವರ ಸೊತ್ತಾಗಿ ಮಾತ್ರವೇ ಉಳಿಯದೇ ಎಲ್ಲರ ಸೊತ್ತಾಗಬೇಕು ಮತ್ತು ಕನ್ನಡ ಬರಹದ ಬಳಕೆಯ ಮೂಲಕ ಇವತ್ತು ಮೇಲ್ವರ್ಗದವರು ಮಾತ್ರವೇ ಪಡೆಯುತ್ತಿರುವ ಹಲವು ರೀತಿಯ ಪ್ರಯೋಜನಗಳನ್ನು ಎಲ್ಲಾ ವರ್ಗದ ಕನ್ನಡಿಗರೂ ಸಮಾನವಾಗಿ ಪಡೆಯುವ ಹಾಗಾಗಬೇಕು. ಇಂತಹ ಸಾಮಾಜಿಕ ತೊಡಕುಗಳು ಮಾತ್ರವಲ್ಲದೇ, ಇವತ್ತು ನಾವು ಬಳಸುತ್ತಿರುವ ಕನ್ನಡ ಬರಹದ ಸ್ವರೂಪವೂ ಕೆಳವರ್ಗದ ಜನರನ್ನು ಬರಹದ ಕಲಿಕೆಯಿಂದ ದೂರ ಉಳಿಯುವಂತೆ ಮಾಡುತ್ತಿದೆ. ಯಾಕೆಂದರೆ ದಿನದಿಂದ ದಿನಕ್ಕೆ ಈ ಬರಹ ಸಾಮಾನ್ಯ ಜನರ ಮಾತಿನಿಂದ ಹೆಚ್ಚು ಹೆಚ್ಚು ಬಿನ್ನವಾಗುತ್ತಿದೆ; ಅವರು ಮಾತಿನಲ್ಲಿ ಬಳಸುವ ಪದಗಳಿಗೂ ಕನ್ನಡದ ಬರಹಗಳಲ್ಲಿ ಬಳಕೆಯಾಗುತ್ತಿರುವ ಪದಗಳಿಗೂ ನಡುವಿರುವ ಅಂತರ ಹೆಚ್ಚುತ್ತಾ ಹೋಗುತ್ತಿದೆ. ಇದರಿಂದಾಗಿ ಕನ್ನಡ ಬರಹವನ್ನು ಕಲಿಯುವ ಕೆಲಸ ಸಾಮಾನ್ಯ ಕನ್ನಡಿಗರಿಗೆ, ಅದರಲ್ಲೂ ಕೆಳವರ್ಗದ ಕನ್ನಡಿಗರಿಗೆ, ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಜಟಿಲವಾಗುತ್ತಾ ಹೋಗುತ್ತಿದೆ' ಡಿ.ಎನ್.ಶಂಕರ ಬಟ್ (ಕನ್ನಡ ಬರಹವನ್ನು ಸರಿಪಡಿಸೋಣ-2006) - ಇವರ ಮಾತುಗಳ ಮೂಲಕ ಈ ಭಾಗದಲ್ಲಿ ಸರಕಾರಿ ಆಡಳಿತದಲ್ಲಿ ಕನ್ನಡ ಬಳಕೆಯ ಬಗೆ ಹೇಗೆ ಎಂಬುದನ್ನು ಚರ್ಚಿಸಲಿದ್ದೇವೆ.

ಜಗತ್ತಿನ ಆಕ್ರಮಣಗಳೆಲ್ಲಾ ನಡೆದಿರುವುದು ನಾಡು, ನುಡಿ ಮತ್ತು ಜನಬದುಕುಗಳನ್ನು ಬೇರೆ ಮಾಡುವ ಉಪಾಯಗಳಲ್ಲಿಯೇ. ಅಂತಲ್ಲಿ ನಾಡು-ನುಡಿ ಒಂದು ಇನ್ನೊಂದನ್ನು ಮೇಳಯಿಸದಂತೆ ಹುನ್ನಾರಗಳನ್ನು ಹೆಣೆಯಲಾಗುತ್ತದೆ. ನುಡಿ ಮತ್ತು ಜನಬದುಕು ಜೊತೆಯಾಗಿ ನಿಂತು ಬೆಳೆಯಲು ಆಗದಂತೆ ತೊಡಕುಗಳು ಹುಟ್ಟುತ್ತಲೇ ಇರುವಂತೆ ಮಾಡಲಾಗಿರುತ್ತದೆ. ಇನ್ನೆಲ್ಲಿಂದಲೋ ಬಂದು ಸೇರುವ, ಇಲ್ಲವೇ ಒತ್ತಾಯದಿಂದ ತಂದುಕೊಂಡ ನುಡಿ ತನ್ನ ಚಹರೆಗಳನ್ನು ಬೆಳೆಸಿಕೊಳ್ಳುವಲ್ಲಿ ಯಜಮಾನಿಕೆ ವಹಿಸುತ್ತದೆ. ನಾಡಬದುಕಿನ ಸ್ಥಳೀಯತೆಯನ್ನು ಚಿಂದಿಗೊಳಿಸುತ್ತಿರುತ್ತದೆ. ಹೊರಗಿನಿಂದ ಬಂದ ನುಡಿ, ನುಡಿಯ ಬದುಕು, ಚಿಂತನೆ ಎಲ್ಲವೂ ಸ್ಥಳೀಯತೆಯನ್ನು ಒತ್ತರಿಸಿ ಜಾಗವನ್ನು ಮಾಡಿಕೊಳ್ಳಲು ತೊಡಗುತ್ತದೆ. ತನ್ಮೂಲಕವೇ ಈ ಸ್ಥಳೀಯತೆಯ ಉದ್ದಾರ ಎಂದು ಒತ್ತಾಯದ ನಂಬಿಕೆಯನ್ನು ಹೇರುತ್ತದೆ. ನಾಡಿನ ಜನಬದುಕಲ್ಲಿ ಜಿದ್ದಾಟವನ್ನು ಹುಟ್ಟು ಹಾಕುತ್ತದೆ. 'ಸಂಸ್ಕೃತ-ಇಂಗ್ಲಿಶು'ಗಳ ಯಜಮಾನಿಕೆಯಿಂದಾಗಿ ಜಿದ್ದಾಟವನ್ನು ಎದುರಿಸುತ್ತಿರುವ ಕನ್ನಡದ ಇವತ್ತಿನ ಸನ್ನಿವೇಶ ಈ ಬಗೆಯದು.

8.1 ನಾಡು, ನುಡಿ ಮತ್ತು ಐಡೆಂಟಿಟಿ:

ನಾಡು ಮತ್ತು ನುಡಿಯ ನಂಟುಗಳು ಜಗತ್ತಿನ ಯಾವುದೇ ಜನಾಂಗದ ಗುರುತಿನ ಬೇರು. ಒಂದು ಜನಾಂಗ ಎಷ್ಟೇ ಕಿರಿದಾದ ನೆಲದಗಲದಲ್ಲಿ ವಾಸಿಸುತ್ತಿದ್ದರೂ ಅಂತಹ ಜನಬದುಕಿನ ಸಣ್ಣ ಗುಂಪು ಕೂಡ

ಗುರುತಿಸಲ್ಪಡುವುದು ಅವರಾಡುವ ನುಡಿಯ ಮೂಲಕವೇ ಎನ್ನುವುದು ಯಾರದೇ ಗುರುತಿನ ಬೆನ್ನು ಹತ್ತಿ ನೋಡಿದರೂ ತಿಳಿಯುತ್ತದೆ. ಕಾಡುಮೇಡುಗಳನ್ನೇ ತಮ್ಮ ಬದುಕಿನ ನೆಲವಾಗಿ ಮಾಡಿಕೊಂಡು ವಾಸಿಸುತ್ತಿರುವ ಸಣ್ಣಪುಟ್ಟ ಕಾಡುವಾಸಿ ಬುಡಕಟ್ಟು ಜನಗುಂಪುಗಳಿಂದ ಹಿಡಿದು ಜಗತ್ತಿನ ದೊಡ್ಡದೊಡ್ಡ ಜನಬದುಕಿನ ಗುರುತುಗಳು ಇವತ್ತಿಗೂ ಕಾಣುತ್ತಿರುವುದು ತಾವಾಡುವ ನುಡಿಯ ನಂಟಿನಲ್ಲಿಯೇ.

ಒಂದು ದೇಶಕ್ಕೆ ಒಂದೇ ನುಡಿಯೆನ್ನುವುದು ಯೂರೋಪಿನ ದೇಶಗಳ ಕಲ್ಚರ್. ನೂರಾರು ನುಡಿಬಳಕೆಯ ಜನಾಂಗ ಮತ್ತು ಜಾಗಗಳನ್ನು ಒಳಗೊಂಡಿರುವ ಇಂಡಿಯಾದ ಒಟ್ಟು ಗುರುತು ಇರುವುದು ನಾಡು–ನುಡಿಗಳ ನಂಟಿನ ಹಲವುತನದಲ್ಲಿ. ಹೀಗೆ ಒಟ್ಟುಗೂಡಿಸಿಕೊಂಡಿರುವ ಹಲವುತನದ ಗುರುತೇ ಇಂಡಿಯಾದ ಕಲ್ಚರ್, 'ಇಂಡಿಯನ್ ಕಲ್ಚರ್'. ಇಂಡಿಯಾವು ಹಲವು ನಾಡು–ನುಡಿಗಳು ಒಟ್ಟುಗೂಡಿ ಹೊಂದಾಣಿಕೆಗಾಗಿ ಜಗಳವಾಡುತ್ತಲೇ ಬಾಳುವೆ ಮಾಡುತ್ತಿರುವ ದೇಶ. ಈ ಬಾಳುವೆಯು ಕಾಲಾನುಕಾಲದಿಂದ ನಡೆದ ಹೊರಗಿನ ಆಕ್ರಮಣಗಳ ನಡುವೆಯೂ ಉಳಿದಿರುವುದು ಇಲ್ಲಿನ ಹಲವುತನಗಳಿಂದಾಗಿ. ಇದೇ ಇಂಡಿಯಾದ 'ಐಡೆಂಟಿಟಿ'. ಹೊರಗಿನವರು ಬಲು ಹಿಂದಿನಿಂದಲೂ 'ಸಹನೀಯರು ಇಲ್ಲಿನ ಜನ' ಎಂದು ಹಾಡಿ ಹೊಗಳಲು ಕಾರಣವಾಗಿರುವ, 'ಚರಿತ್ರೆಯನ್ನೇ ಅರಿಯವದವರು' ಎಂದು ಚೇಡಿಸಲೂ ಕಾರಣವಾಗಿರುವ ಗುರುತು ಇದೇ. ಇಂಡಿಯಾದ ನೆಲದ ಮೇಲೆ, ಇಂಡಿಯಾದ ಜನಬದುಕಿನ ನಡಾವಳಿಗಳ ಮೇಲೆ, ಜನಮನಸ್ಸಿನ ಮೇಲೆ, ಏನೆಲ್ಲಾ ಆಕ್ರಮಣಗಳು ನಡೆದಿರಲಿ ಈ ನಮ್ಮ ದೇಶ ಇವತ್ತಿಗೂ ಗಟ್ಟಿಯಾಗಿ ಉಳಿದು ಬಂದಿರುವ ಗುರುತು ಮಾತ್ರ ಇಲ್ಲಿನ ನಾಡು–ನುಡಿಗಳ ಹಲವುತನ ಎನ್ನುವುದನ್ನು ಯಾರಾದರೂ ಒಪ್ಪಲೇಬೇಕು.

ನಾಡಿನ ಜನಬದುಕು ಮತ್ತು ಜನರಾಡುವ ನುಡಿಯ ನಡುವೆ ಒಂದರೊಡನೊಂದು ಬೆರೆತ ಬೆಳವಣಿಗೆ ಇರುತ್ತದೆ. ಹಾಗೆ, ನುಡಿ ಮತ್ತು ಬದುಕು ಒಂದಾಗದೇ ಇರುವ ಯಾವ ನಾಡಿನ ಕಲ್ಚರನ್ನೂ ಅರಿತು ಕಟ್ಟಿರುವ ಗುರುತುಗಳು ಇಲ್ಲ. ನಾಡೇ ಒಂದು, ನುಡಿಯೇ ಇನ್ನೊಂದು ಆಗಲು ಶುರುವಾದರೆ ಜನಬದುಕಿನ ಸನ್ನಿವೇಶದಲ್ಲಿ ಬಿರುಕುಗಳು, ತಳಮಳಗಳು ತಾನೇತಾನಾಗಿ ಹುಟ್ಟಿಕೊಳ್ಳುತ್ತವೆ. ಹೀಗಾಗಿ, ನಾಡು–ನುಡಿಯ ನಂಟಿನ ಗುರುತಲ್ಲಿ ಜನಬದುಕನ್ನು ಉಳಿಸಬೇಕಾದ ಹೊಣೆಯು ಪ್ರಭುತ್ವ (ಆಳ್ವಿಕೆ)ಯದೇ ಆಗಿರುತ್ತದೆ. ಇಂತಹ ಹೊಣೆಯು ದಾರಿತಪ್ಪದಂತೆ ನಡೆಯಬೇಕಾಗಿಯೂ ಇರುತ್ತದೆ.

8.2: ನಾಡು ಮತ್ತು ನುಡಿಯ ನಂಟು:

ಕನ್ನಡದ ಮೊದಮೊದಲ ಬರವಣಿಗೆಗಳಲ್ಲಿ ಒಂದು ಎನಿಸಿರುವ ಕವಿರಾಜಮಾರ್ಗದಲ್ಲಿ 'ಕಾವೇರಿಯಿಂದಮಾ ಗೋದಾವರಿವರಮಿರ್ದಾ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ' ಎಂಬ ಮಾತು ಬರುತ್ತದೆ. ಕನ್ನಡ ಚಿಂತನೆಯನ್ನು ಕಟ್ಟಲು ತೊಡಗಿದ ಮೊದಲಿಗ ಶ್ರೀವಿಜಯನ ಈ ಮಾತು ಕನ್ನಡನಾಡು ಮತ್ತು ಕನ್ನಡ ನುಡಿಯ ನಂಟನ್ನು ಹೇಳುವ ಮಾತಾಗಿದೆ. ನಾಡು ಮತ್ತು ನುಡಿಯು ಒಂದು ಇನ್ನೊಂದರ ಚಹರೆಯನ್ನು ಕಟ್ಟಿಕೊಳ್ಳುವಲ್ಲಿನ ಬೇರುನೆಲೆ ಎನ್ನುವ, ನಾಡಿನ ಮೂಲಕ ನುಡಿಯ ಬದುಕಿನ ಚಹರೆಗಳು ಮೈಪಡೆದಿರುತ್ತವೆ ಎನ್ನುವ ಸುಳಿವು ಈ ಮಾತುಗಳಲ್ಲಿ ಎದ್ದು ಕಾಣುತ್ತದೆ. ನುಡಿಯ ಮೂಲಕವೇ ನಾಡಿನ ಗುರುತುಗಳನ್ನು ಕಟ್ಟಿ ಬೆಳೆಸಿಕೊಳ್ಳಲಾಗಿರುತ್ತದೆ. ಹೀಗಾಗಿ, ನಾಡು ಮತ್ತು ನುಡಿ ಇವೆರಡನ್ನು ಬೇರೆಬೇರೆಯಾಗಿಟ್ಟು ನೋಡುವುದು ಆಗದ ಮಾತೇ ಸರಿ. ನಾಡೇ ಆಗಿರುವ ಕನ್ನಡದಂತೆ, ಕನ್ನಡವೇ ಆಗಿರುವ ನಾಡೂ ಕೂಡ ಹೌದು ಎನ್ನುವುದನ್ನು 'ಕವಿರಾಜಮಾರ್ಗ'ದಲ್ಲಿನ ಈ ಮಾತುಗಳು ಕಾಣಿಸುತ್ತವೆ.

ಕನ್ನಡನುಡಿ ಮತ್ತು ನಾಡಿನ ಸನ್ನಿವೇಶದಲ್ಲಿ ಹಲ್ಮಿಡಿ ಕಲ್ಬರೆಹಕ್ಕೂ ಮೊದಲಿನ ಕಾಲದಿಂದಲೂ ನುಡಿ ಮತ್ತು ನಾಡಿನ ಚಹರೆಯ ನಂಟುಗಳು ಕಾಣಿಸುತ್ತವೆ. ಆ ಮೂಲಕ ಜನಬದುಕು-ಕಲ್ಚರ್‌ಗಳನ್ನು ಕಟ್ಟಿಹೇಳುವ ಹಲವು ಬಗೆಯ ಅಧ್ಯಯನಗಳನ್ನು ನೂರಕ್ಕೂ ಹೆಚ್ಚು ವರುಶಗಳಿಂದ ಮಾಡುತ್ತಾ ಬಂದಿರುವುದು ನಮ್ಮೆದುರಿಗಿದೆ. ಇದನ್ನು ಕನ್ನಡನುಡಿಯ ಚರಿತ್ರೆ, ಕನ್ನಡಸಾಹಿತ್ಯದ ಚರಿತ್ರೆ, ಕನ್ನಡನಾಡಿನ ಚರಿತ್ರೆಗಳ ಸನ್ನಿವೇಶಗಳಲ್ಲಿಯಂತೂ ಯಥೇಚ್ಚವಾಗಿ ನೋಡುತ್ತಿದ್ದೇವೆ. ಹಾಗೆ ನೋಡಿದರೆ, ಯಾವುದೇ ಶಾಸನದ ಓದಿನ ಸನ್ನಿವೇಶಕ್ಕೆ ಬಂದರೂ, ಆಯಾ ಕಾಲದ ಜನಬದುಕಿನೊಟ್ಟಿಗೆ ತಾಳೆಮಾಡಿ ಕನ್ನಡ ಸಮಾಜವನ್ನು ಗ್ರಹಿಸಲು ಪ್ರಯತ್ನಿಸಿರುವುದು ಎದ್ದು ಕಾಣುವ ಸಂಗತಿಯೇ ಆಗಿದೆ.

ಸಾಮಾನ್ಯವಾಗಿ ಈ ಕಲ್ಬರಹಗಳನ್ನು ಬರೆಯಿಸುತ್ತಿದ್ದವರು ಯಾರು? ಇಡೀ ನಾಡನ್ನು, ನಾಡಿನ ಯಾವುದೋ ಒಂದು ಜಾಗವನ್ನು ಆಳುತ್ತಿದ್ದ ರಾಜರು, ರಾಜಾಡಳಿತದ ಮೇರೆಗೋ, ಪಾಳೆಪಟ್ಟುಗಳ ಮೇರೆಗೋ ನೋಡಿಕೊಳ್ಳುತ್ತಿದ್ದವರು ಆಗಿರುತ್ತಿದ್ದರು. ಜನಬದುಕಿನ ಹಲವಾರು ನೆಲೆಗಳಲ್ಲಿ ಈ ಬಗೆಯ ಆಳ್ವಿಕೆಗಳು ತರುತ್ತಿದ್ದ ಬದಲಾವಣೆಗಳನ್ನೇ ಈ ಕಲ್ಬರಹಗಳು ಒಳಗೊಂಡಿರುವುದು ಎನ್ನುವುದನ್ನು ನಮ್ಮ ತಿಳಿವಿಗೆ ತಂದುಕೊಂಡರೆ, ಜನಬದುಕಿನಲ್ಲಿ ನಾಡು ಮತ್ತು ನುಡಿಯು ಮೇಳಯಿಸಿರುವುದು ಹೇಗೆಂಬುದು ಎದ್ದು ಕಾಣುತ್ತದೆ. ಮೊದಲನೇ ಸಾವಿರ ವರುಶಗಳ ಮೊದಮೊದಲಲ್ಲಿ 'ಸಂಸ್ಕೃತ,ದ ಎದುರಿಗೆ ಕನ್ನಡವೇ ಆಗಿ ಉಳಿಯಲು ಹೋರಾಡಿದ ಕನ್ನಡನುಡಿಯು ಹತ್ತೊಂಬತ್ತು, ಇಪ್ಪತ್ತನೇ ಶತಮಾನದ ಹೊಸಕಾಲದಲ್ಲಿ ಕಲಿಕೆ, ದುಡಿಮೆಗಳ ನೆಪದಲ್ಲಿ ಇಂಗ್ಲಿಶ್ ಯಜಮಾನಿಕೆಗೆ ಎದುರಾಗಿದೆ. ಉಳಿದಂತೆ, ಕನ್ನಡ ನಾಡ

ನುಡಿಯಾಗಿ ಇಂತಹ ಸಂಕಟಗಳಿಗೆ ಸಿಕ್ಕಿದ್ದು ಬಲು ಕಡಿಮೆಯೆಂದೇ ಹೇಳಬೇಕು. ಆಳ್ವಿಕೆ, ಆಡಳಿತ ಯಾವ ಕಾಲದ್ದೇ ಆಗಿರಲಿ, ಸಾಮಾಜಿಕ ಸವಲತ್ತುಗಳನ್ನು ಪಡೆಯುವಲ್ಲಿ ಇರುವ ತೊಡಕುಗಳನ್ನು ಬಿಡಿಸುವ ಹೊಣೆಗಾರಿಕೆ ಅಂತಲೇ ತಿಳಿಯಬೇಕಾಗುತ್ತದೆ. ಆ ದಾರಿಗಳನ್ನು ಸರಳಗೊಳಿಸಬೇಕಾಗುತ್ತದೆ. ಈ ಆಳ್ವಿಕೆಯು 'ಯಾವ ಸಮಾಜದ್ದು' ಎನ್ನುವ ಗುರುತುಗಳನ್ನು ಉಳಿಸಿಕೊಂಡೇ ನಡೆಯಬೇಕಾಗಿರುತ್ತದೆ ಕೂಡ. 'ಕವಿರಾಜಮಾರ್ಗ'ವು ಕನ್ನಡ ಸಮಾಜವನ್ನು ಇರಿಸಿಕೊಂಡು ಎತ್ತುತ್ತಿರುವ ಪ್ರಶ್ನೆ (ಕೇಳ್ವಿ) ಕೂಡ ಆ ಬಗೆಯದೇ. ಈ ನಿಟ್ಟಿನಲ್ಲಿ ಇವತ್ತಿನ ಆಳ್ವಿಕೆಯ ನೆಲೆಗಳನ್ನೂ ನೋಡಬೇಕಾಗುತ್ತದೆ.

ಹಾಗಿದ್ದರೆ, ಇವತ್ತು ಕನ್ನಡದ ಸನ್ನಿವೇಶ ಯಾಕೆ ಆಕ್ರಮಣಕ್ಕೆ ಸಿಲುಕಿದೆ? ಎರಡನೇ ಸಾವಿರ ವರುಶ ಕಳೆದು, ಮೂರನೇ ಸಾವಿರ ವರುಶದ ಮೊದಲಿಗೆ ಹೆಜ್ಜೆಯಿಟ್ಟಿದೆ. ಆದರೆ, ಹಲವು ನುಡಿಬದುಕುಗಳ ಒಕ್ಕೂಟವುಳ್ಳ ಈ ದೇಶದ ಬಗೆಗೆ, ಈ ದಿನಗಳಲ್ಲಿ 'ದೇಶವನ್ನು ಒಗ್ಗೂಡಿಸುವ ಒಂದು ನುಡಿಯಿದ್ದರೆ ಅದು ಇಂಗ್ಲಿಶ್ ಮಾತ್ರ' 'ಇಂಗ್ಲಿಶ್ ಮತ್ತು ಹಿಂದಿ ನುಡಿಗಳು ದೇಶವನ್ನು ಒಗ್ಗೂಡಿಸುವ ಕೆಲಸವನ್ನು ಮಾಡುತ್ತಿವೆ' ಎನ್ನುವ ಮಾತುಗಳನ್ನು ನ್ಯಾಯಾಲಯಗಳ ಮೂಲಕವೂ ಕೇಳಬೇಕಾಗಿ ಬಂದ ಅತಿರೇಕಕ್ಕೆ ತಲುಪಿದ್ದೇವೆ. ಅಂದರೆ, ದೇಶದ ಜನಬದುಕಿನ ಸ್ಥಳೀಯತೆಯನ್ನು ಉಳಿಸಿಕೊಳ್ಳಲು ಕಟ್ಟಿಕೊಂಡಿರುವ ನಾಡಿನ ಗುರಿಯಾದ ' ಡೆಮಾಕ್ರಸಿ (ಮಂದಿಯಾಳ್ವಿಕೆ)' 'ಸಂವಿಧಾನ(ಕಾನ್ಸ್ಟಿಟೂಶನ್) ತೋರಿಸಿಕೊಟ್ಟ ದಾರಿ ಇದೇನಾ ಅನ್ನುವ ದಿಗಿಲು ದೊಡ್ಡದಾಗುತ್ತಿದೆ. ಈ ನಿಟ್ಟಿನಲ್ಲಿ ನಾವು ಚಿಂತನೆಯನ್ನು ಮಾಡಲೇಬೇಕಾದ ಎರಡು ಸಂಗತಿಗಳೆಂದರೆ:

1. ನಾಡು–ನುಡಿಯ ಹೆಸರಲ್ಲಿ ಆಡಳಿತವನ್ನು ನಡೆಸುವ ಪ್ರಭುತ್ವದ ಹೊಣೆಗಾರಿಕೆ
2. ಸಿಟಿಜನ್‌ಶಿಪ್‌ನ್ನು ಬೆಳೆಸಲು ತನ್ನ ಆಡಳಿತದ ದೊಡ್ಡ ಹೊಣೆಯಾಗಿ ಆಗುಮಾಡುವ ಶಿಕ್ಷಣ

8.3: ಪ್ರಭುತ್ವದ ಹೊಣೆಗಾರಿಕೆಯ ಪ್ರಶ್ನೆ:

ಇವತ್ತು ಕನ್ನಡನಾಡು ಮತ್ತು ಕನ್ನಡನುಡಿಯ ನಂಟಿನಲ್ಲಿ ಜನಬದುಕುಗಳು ಎದುರಿಸುತ್ತಿರುವ ಇಕ್ಕಟ್ಟುಗಳು ಯಾಕೆ? ಇದು ಆಳುತ್ತಿರುವವರ ಸಮಸ್ಯೆಯೇ? ಸಂವಿಧಾನದ ತೊಡಕೇ? '1ರಿಂದ 7ನೇ ತರಗತಿವರೆಗೆ ಕನ್ನಡ ಇಲ್ಲವೇ ಯಾವುದೇ ತಾಯಿನುಡಿಯಲ್ಲಿ ಕಲಿಯಬೇಕು ಎಂದು 1994ರಲ್ಲಿ ಕರ್ನಾಟಕ ಸರಕಾರ ಹೊರಡಿಸಿರುವ ಅದೇಶ ವಿವಾದಾತ್ಮಕ' ಎನ್ನುವುದು ಹೇಗೆ? ದೇಶ ಮತ್ತು ವಿದೇಶಗಳೊಂದಿಗೆ ನಂಟನ್ನು ಆಗುಮಾಡಿಕೊಳ್ಳಲು ಇಂಗ್ಲಿಶ್ ಮತ್ತು ಹಿಂದಿಯನ್ನು ನೆಚ್ಚಿಕೊಂಡು ಮುನ್ನೆಲೆಗೆ ತರಲು ಪ್ರಯತ್ನಿಸುತ್ತಿರುವವರ ನಿಲುವುಗಳೇನು? 'ಒಂದು ತರಗತಿಯಲ್ಲಿ ಬೇರೆಬೇರೆ ತಾಯಿನುಡಿಯವರು ಇದ್ದರೆ

ಹೇಗೆ ಕಲಿಸುತ್ತೀರಿ' ಎನ್ನುವ ನಮ್ಮದೇ ಕೋರ್ಟಿನ ಪ್ರಶ್ನೆಯನ್ನು ಹೇಗೆ ನೋಡಬೇಕು? ನಾಡಿನ ಆಳ್ವಿಕೆ 'ಕಲಿಕೆಯ ಖಾಸಗೀಕರಣ'ಗಳ ಜಗಳವನ್ನು ನಿವಾರಿಸಲು ಹೊರಟಿರುವ ಕೋರ್ಟುಗಳೂ ಕೂಡ ಹೊರುತ್ತಿರುವ ನಾಡಿನ ಹೊಣೆಯ ಬಗೆ ಯಾವುದದು? 'ಯಾವ ನುಡಿಯ ಮೂಲಕ ಕಲಿಯಬೇಕು ಎನ್ನುವ ಆಯ್ಕೆಯನ್ನು ಮಗುವಿನ ಹೊಣೆ ಹೊತ್ತವರಿಗೆ ಬಿಡಬೇಕು' ಎನ್ನುವ ಕೋರ್ಟು ಸಂವಿಧಾನಕ್ಕೆ ಬದ್ದವಾಗಿ ಕಟ್ಟಿಕೊಂಡಿರುವ ನುಡಿಗುರುತಿನ ನಾಡುಗಳ ಜನಬದುಕನ್ನು ಹೇಗೆ ನೋಡುತ್ತದೆ? ಯಾವ ನುಡಿಯ ಮೂಲಕ ಕಲಿಯಬೇಕು ಎನ್ನುವವರ ಮಾತಿನ ಕಟ್ಟುನಿಟ್ಟಾದ ಒಳಗುಟ್ಟು 'ಇಂಗ್ಲಿಶೇ' ಆಗಿಬಿಟ್ಟಿದೆ ಎನ್ನುವುದು ಕೊಂಕು ಮಾತಂತೂ ಅಲ್ಲವಲ್ಲ?

ತೊಡಕುಗಳು:

ಒಂದು ನಾಡಿನ ಜನಬದುಕು ಮತ್ತು ಆ ಜನಬದುಕನ್ನು ಕಾಪಿಟ್ಟುಕೊಳ್ಳಬೇಕಾದ ಸರಕಾರಗಳು ಕಾನೂನು ಕಟ್ಟಳೆಗಳ ಮೂಲಕ ಸ್ಥಳೀಯ ಸನ್ನಿವೇಶಕ್ಕೆ ಎದುರಾದರೆ, ಎರಡು ಬಗೆಯ ತೊಡಕುಗಳು ಎದ್ದು ಕಾಣುತ್ತವೆ. 1. ನಾಡಿನ ನುಡಿಯನ್ನು ತಾಯಿನುಡಿ (ಮಾತೃಭಾಷೆ) ಯನ್ನಾಗಿ ಗ್ರಹಿಸುವಲ್ಲಿನ ಸರಕಾರ, ಕಾನೂನು, ಕಟ್ಟಳೆಗಳ ತೊಡಕು. 2. ಡೆಮಾಕ್ರಸಿಯನ್ನು ಒಂದು ನುಡಿಯ ಜನಬದುಕನ್ನು ಹತ್ತಿಕ್ಕುವಂತೆಯೂ ವಿವರಿಸಿಕೊಳ್ಳಬಹುದಾದ ತೊಡಕು. ಯಾಕೆಂದರೆ, ಜನಾಡಳಿತ ಎನ್ನುವಾಗ ಅದರೊಳಗೆ ಕಂಡುಕೊಂಡಿರುವ 'ಸಿಟಿಜನ್‌ಶಿಪ್' ಯಾವ ಬಗೆಯದು? ಹೇಗೆ? ಎನ್ನುವ ಪ್ರಶ್ನೆಗಳು ಇದ್ದೇ ಇರುತ್ತವೆ ತಾನೇ? ಇದೇನೆಂದು ನೋಡೋಣ:

1. **ನಾಡನುಡಿ, ತಾಯಿನುಡಿ, ಮನೆಮಾತು ಏನಿದು ಗೊಂದಲ?**

ತಾಯಿನುಡಿ (ಮಾತೃಭಾಷೆ) ಯಲ್ಲಿ ಕಲಿಯುವುದನ್ನು ಜಗತ್ತಿನ ದೊಡ್ಡದೊಡ್ಡ ಚಿಂತಕರು ಬೆಂಬಲಿಸಿದ್ದಾರೆ ಎನ್ನುವುದು ದಿಟ. ಈ ತಾಯಿನುಡಿ ಎನ್ನುವುದು ಏನು? ಹೇಗೆ? ಎಂದೆಲ್ಲಾ ಚಿಂತಿಸುವಾಗ, ಹುಟ್ಟಿದ ಮಕ್ಕಳು ಮೊದಲಿಗೆ ತಾಯಿಯೊಂದಿಗೆ ಇರುತ್ತವೆ, ಆದ್ದರಿಂದ ತಾಯಿಯಾಡುವ ಮಾತು ಮೊದಲು ಮಗುವಿನ ಕಿವಿಯ ಮೇಲೆ ಬೀಳುತ್ತದೆ. ಆ ಮಾತಿನ ಮೂಲಕವೇ ಒಂದು ನುಡಿಯನ್ನು ಮೊದಲಿಗೆ ಕಲಿಯುವ ಕೆಲಸ ಶುರುವಾಗುತ್ತದೆ, ಅದು ಮಕ್ಕಳು ಕಲಿಯುವ ಮೊದಲ ನುಡಿಯಾಗಿರುತ್ತದೆ. ಯಾರು ಈ ಮೊದಲು ಕಲಿತ ನುಡಿಯಲ್ಲಿ ಶಾಲೆ-ಕಾಲೇಜುಗಳ ಕಲಿಕೆಯನ್ನೂ ಮಾಡಬಲ್ಲರೋ ಆ ನುಡಿಯ ಮೂಲಕ ಅರಿವನ್ನು ಬೇಗ ದಕ್ಕಿಸಿಕೊಳ್ಳಲು ಬರುತ್ತದೆ ಎನ್ನುವುದು ಇದರ ಬೆನ್ನಿಗಿರುವ ತಿಳುವಳಿಕೆ.

ಇದನ್ನು ಇನ್ನೊಂದು ನಿಟ್ಟಿನಿಂದ ನೋಡುವಾಗ, ಕೇವಲ ತಾಯಿ ಮಾತ್ರವೇ ಅಲ್ಲ, ಆ ಕುಟುಂಬ, ಪರಿಸರದಲ್ಲಿ ಬದುಕುತ್ತಿರುವ ಅನೇಕರ ಮಾತು ಮಗುವಿನ ಕಿವಿಯ ಮೇಲೆ ಬೀಳುತ್ತಿರುತ್ತದೆ. ಮನೆಮಾತು, ನೆರೆಹೊರೆಯ ಮಾತು ಎರಡನ್ನೂ ಮಗು ತಾನು ಹುಟ್ಟಿದ ಗಳಿಗೆಯಿಂದಲೂ ಕೇಳಿಸಿಕೊಳ್ಳುವ ಅವಕಾಶಗಳು ಇದ್ದೇ ಇವೆ. ಹೀಗಾಗಿ ಅನೇಕರು ಈ ದೇಶದಲ್ಲಿ ಒಂದಕ್ಕಿಂತ ಹೆಚ್ಚು ನುಡಿಗಳನ್ನು ಹುಟ್ಟಿದ ಗಳಿಗೆಯಿಂದಲೂ ಕೇಳಿಸಿಕೊಂಡು, ಮಾತನಾಡಲು ಕಲಿತವರೇ ಆಗಿದ್ದಾರೆ. ಯಾವ ಶಾಲೆ, ಕಾಲೇಜಿಗೆ ಹೋಗಿ ಕಲಿಯದೆಯೇ ಹುಟ್ಟಿನಿಂದ ಬೆಳೆದ ಪರಿಸರದಿಂದಾಗಿ ಒಂದೆರಡಕ್ಕಿಂತ ಹೆಚ್ಚು ಜನಬದುಕಿನ ನುಡಿಗಳನ್ನು ಆಡುತ್ತಿರುವವರೂ ಇದ್ದಾರೆ. ಇಂತಹ ಸನ್ನಿವೇಶ ಇರುವಾಗಲೂ ಕೂಡ 'ತಾಯಿನುಡಿ–ಮಾತೃಭಾಷೆ' ಎಂದು ಹೇಳುತ್ತಿರುವುದು ಒಂದು 'ನಾಡಿನ ಜನಬದುಕಿನ ನುಡಿ'ಯನ್ನೇ. ಒಂದು ನಾಡಿನ ಗುರುತನ್ನು ಕಟ್ಟಿಕೊಂಡಿರುವ, ಅಲ್ಲಿನ ಬಹುಜನರಾಡುವ ನುಡಿಯನ್ನೇ. ಹೀಗಾಗಿ 'ಮನೆಮಾತು' ಯಾವುದೇ ಆಗಿರಲಿ ಒಂದು ಪ್ರದೇಶದ ಜನಬದುಕಿನ ಮಾತು ಯಾವುದು ಎನ್ನುವುದೇ ಮುಂದೆ ನಿಲ್ಲಬೇಕಾದ ಸಂಗತಿಯಾಗಿರುತ್ತದೆ. ಇದೇ ಸರಿ ಎನ್ನುವ ನಿಲುವನ್ನು ನುಡಿಯರಿಗರು ಕೂಡ ಹೇಳುತ್ತಿದ್ದಾರೆ. ನುಡಿಯ ಮೂಲಕ ಗುರುತಿಸಿಕೊಳ್ಳುತ್ತಿರುವ ನಾಡಿನ ಜನಬದುಕಿನ ಸನ್ನಿವೇಶದಲ್ಲಿ ಇದು ದಿಟವಾದದ್ದು.

ಕರ್ನಾಟಕದ ಸನ್ನಿವೇಶದಲ್ಲಿ 'ಕುಟುಂಬ ಭಾಷೆ ಯಾವುದೇ ಇರಲಿ, ಮಾತೃಭಾಷೆ ಕನ್ನಡವೇ ಆಗ್ತದೆ' ಅನ್ನುವ ನಾಡಿನ ದೊಡ್ಡ ಅರಿವಿಗರಲ್ಲಿ ಒಬ್ಬರಾದ ಎಂ.ಎಂ.ಕಲಬುರ್ಗಿಯವರ ಈ ನೋಟವನ್ನು ಗ್ರಹಿಸಿ:

'ನಾವು ಕನ್ನಡದ ಬಗ್ಗೆ ಬಂದಾಗ ಇದು ಮದರ್‌ಟಂಗ್ ಅಂತ ಅಂದ್ಬಿಡ್ತೀವಿ ನಾವು. ಈ ಮದರ್‌ಟಂಗ್ ಅಂದ್ರೆ ಏನು? ಎನ್ನುವ ಕೇಳ್ವಿಯನ್ನು ಕೇಳಿಕೊಳ್ಳುತ್ತಾ 'ಇವತ್ತೇನಾಗ್ಯದ ಅಂದ್ರ, ಹಿಂದಿನ ಕಾಲದೊಳಗ ಯಾವುದನ್ನ ಮದರ್‌ಟಂಗ್ ಅಂತಿದ್ರು, ಬದಲಾದ ಇವತ್ತಿನ ಸಂದರ್ಭದೊಳಗೂ ನಾವು ಅದ್ನಾ ಮದರ್‌ಟಂಗ್ ಅನ್ತಾ ಇದ್ದೀವಿ. ಇದನ್ನು ಬಗೆಹರಿಸಲಾರದ್ದಕ್ಕೆ ಈ ಜಗಳ ನಡ್ದದ. ಹಿಂದಕ್ಕೇನಿತ್ತು ಅಂದ್ರ ಸ್ತಿರ ಸಮಾಜಿತ್ತು. ಇವತ್ತು ಚರ ಸಮಾಜ ಆಗ್ಯದ. ನನ್ನ ದ್ರುಷ್ಟಿಯೊಳಗ ಸ್ತಿರ ಸಮಾಜದ ಡೆಪ್ನೀಶನ್ ಆಪ್ ಮದರ್‌ಟಂಗ್ ಬ್ಯಾರೆ, ಚರ ಸಮಾಜದ ಡೆಪ್ನೀಶನ್ ಆಪ್ ಮದರ್‌ಟಂಗ್ ಬ್ಯಾರೆ ಆಗ್ಬೇಕಾಗ್ತದ. ನಾವು ಸ್ತಿರ ಸಮಾಜದೊಳಗ ಏನೇ ಹೇಳಿದ್ರೂ, ಅವನ್ನೇ ಇಟ್ಕೊಂಡು ಇವತ್ತು ಮಾತಾಡಿ ಬಾಯ್ಮುಚ್ಚಿಸ್ತೀವಿ ಜನ್ರನ್ನ, ವಿದ್ಯಾರ್ತಿಗಳಿಗೂ ಕೂಡ. ಗಾಂದಿಯೋರು ಹೇಳಿದ್ರು ಮಾತ್ರುಬಾಶೆಯೊಳಗೆ ಕಲಿಕೆ ಬೇಕಂತ, ನೊ, ನಾನು, ಗಾಂದಿ ಹೇಳ್ಳಿ, ಗಾಂದಿ ಅಪ್ಪೇಳ್ಳಿ ಒಪ್ಪೋದಿಲ್ಲ ಅದನ್ನ. ಗಾಂದಿಕಾಲ ಮುಗ್ದೋದ್ವು, ಸ್ತಿರ ಸಮಾಜದ

ಪ್ರಾಡಕ್ಟ್ ಅವ. ಅವಾಗೇನಾಗಿತ್ತಂದ್ರ; ಸ್ಥಿರ ಸಮಾಜದೊಳಗ, ಮನೆ ಒಳಗಿನ ಬಾಶೆ, ಮನೆ ಹೊರಗಿನ ಬಾಶೆ ಒಂದೇ ಆಗಿತ್ತು. ಯಾಕಂದ್ರ, ಸ್ಥಿರ ಸಮಾಜದೊಳಗ ಒಂದುಕಡೆ ವಕ್ಕಲ್ತನ ಅತವಾ ಏನೋ ಒಂದು ಕೆಲ್ಸ ಮಾಡ್ತನೋ ಒಂದ್ಕಡೆ ಇದ್ಬಿಡ್ತಿದ್ರ? ಹವ್ದಾ? ಮನಿವೊಳಗ ಅದೇ ಮಾತಾಡ್ತಿದ್ರು, ಬಜಾರ್ದೊಳಗ, ಓಣಿವೊಳಗಾ ಅದೇ ಮಾತಾಡ್ತಿದ್ರು, ಸ್ಥಿರ ಸಮಾಜದೊಳಗ ಕುಟುಂಬ ಬಾಶೆ ಮತ್ತು ಸಮಾಜ ಬಾಶೆ ಒಂದೇ ಇರ್ತವ. ಅವಾಗ ಅದು, ಮಾತ್ರುಬಾಶೆ ಆ ಬಗೇದಿತ್ತು. ಈಗೇನಾಗ್ಯದಂತಂದ್ರ, ಯಾವುದೋ ಕುಟುಂಬ ಎಲ್ಲೋ ಇತ್ತು, ಮೊದಲು ಅದು ನವ್ಕರಿ ಕಾರಣಕ್ಕಾಗಿ ಮತ್ತೊಂದು ಸ್ಟೇಟ್‌ಗೆ ಇರ್ತದ. ಮನೆಯೊಳಗೆ ಒಂದು ಬಾಶೆ ಅವಕ್ಕ, ಹೊರಗ ಇನ್ನೊಂದು ಬಾಶೆ. ಬ್ಯಾರೆ ಆಗ್ಯದೆ ಹವ್ದಿಲ್ಲೋ? ಅವಾಗ ಮದರ್‌ಟಂಗ್ ಯಾವಾದ್ವು? ಮೊದಲ ಎರಡು ಒಂದೇ ಆಗಿದ್ದಾಗ ಮದರ್‌ಟಂಗ್ ಅನ್ನ ವಿವರಿಸಿಕೊಳ್ತಾ ಇದ್ದದ್ದು ಬ್ಯಾರೆ. ಈಗ ಬ್ಯಾರೆ ಆಗ್ಬೇಕು[1]'

ಈ ಚರ್ಚೆಯನ್ನು ಮುಂದುವರೆಸುವ ಕಲಬುರ್ಗಿಯವರು; ಒಂದು ಪರಿಸರದೊಳಗೆ ಬೆಳೆಯುವಾಗ ಮಗು, ಯಾವ ನುಡಿಯೊಂದಿಗೆ, ಯಾವ ನುಡಿಯಾಡುಗರೊಂದಿಗೆ, ಯಾವ ನುಡಿಯ ಪರಿಸರದೊಂದಿಗೆ ಹೆಚ್ಚು ಟೈಮ್ ಕಳೆಯುತ್ತದೆಯೋ, ಹೆಚ್ಚು ಜನರೊಡನೆ ಇರ್ತದೆಯೋ ಅದು ಆ ಮಗುವಿನ ಮದರ್‌ಟಂಗ್ ಎನ್ನುವ ನೆಲೆಗಟ್ಟನ್ನು ಮಂಡಿಸಿದ್ದಾರೆ. ಅವರೇ ಹೇಳುವಂತೆ 'ತಂದೆ ತಾಯಿ ಇಬ್ಬರೇ ಇದಾರ ಮನಿವೊಳಗ, ಅಲ್ಲಿ ಯಾವ್ದೋ ಒಂದು ಬಾಶೆ ಮಾತಾಡ್ತಾರ. ಹೊರಗೆ? ಸಾವಿರಾರು ಜನ ಅದಾರ. ಊರೊಳಗೆ ಹೋಗ್ತಾನ ಅಲ್ಲೆಲ್ಲ ಕನ್ನಡ ಮಾತಾಡ್ತಾನ. ಬಜಾರ್‌ಕ ಹೋಗ್ತಾನ ಅಲ್ಲೆಲ್ಲಾ ಕನ್ನಡ ಮಾತಾಡ್ತನ. ಹೀಗಾಗಿ ಎಲ್ಲರೊಟ್ಟಿಗೆ ವ್ಯವಹರಿಸುವ ಬಾಶೆ ಒಂದದ, ಇಲ್ಲಿ ಇಬ್ಬರೊಟ್ಟಿಗೆಯೆ ಮಾತಾಡುವ ಬಾಶೆ ಒಂದದ.. .. ಇಲ್ಲಿ ಎರಡು ಜನ, ಅಲ್ಲಿ ಸಾವಿರ ಜನ. ಮಗು ಹೆಚ್ಚು ಟೈಮ್ ಹೊರಗೆ ಕಳೀತದ. ಮುಂಜಾನೆ ಶಾಲೆಗೋಗಿ ಸಂಜೆಗೆ ಬರ್ತದ. ಮನೆಯಲ್ಲಿ ಒಂದೆರಡು ತಾಸೂ ಅವರ್ರೂಡ ಕಳಿತದ. ಉಳಿದಂಗ ಒಂದಶ್ಟು ತಾಸು ನಿದ್ದೆ ಮಾಡ್ತದ' ಹೀಗಾಗಿ ಒಂದು ನುಡಿಯಾಡುಗ ಸನ್ನಿವೇಶದ ಜನಬಳಕೆಯ ನುಡಿಯನ್ನು 'ಮದರ್‌ಟಂಗ್' ಎನ್ನಬೇಕಾಗುತ್ತದೆ ಎನ್ನುವ ಸಂಗತಿಯನ್ನು ಮಂಡಿಸಿದ್ದಾರೆ[2]. ಈ ನಿಟ್ಟಿನಲ್ಲಿ ಕರ್ನಾಟಕದ ಜನಬದುಕಿನ ಪರಿಸರವನ್ನು ಕಲಿಕೆ ಮತ್ತಿತರೆ ಸಬೂಬುಗಳನ್ನಿರಿಸಿಕೊಂಡು 'ಇಂಗ್ಲಿಶ್ ಪರಿಸರ'ದ ಪರವಾಗಿಸುವುದನ್ನು ಒಪ್ಪಕೂಡದೆನ್ನುತ್ತಾರೆ. ಕೇವಲ 'ಶಬ್ದಗಳನ್ನ ಬಳಸಿದ ಮಟ್ಟಿಗೆ ಇಂಗ್ಲಿಶ್ ಪರಿಸರವಾಗೊದಿಲ್ಲದು'. ಇಂಗ್ಲಿಶ್ ಲಾಂಗ್ವೇಜನ್ನು ಬಳಸೋದಿಲ್ಲ ಕನ್ನಡ ಜನಬದುಕುಗಳು. ಎಲ್ಲಾ

[1] ತಂತಿಮೇಲಿನ ನಡಿಗೆ– ಕಲಿಕೆಯ ಕನ್ನಡದ ಬಗೆಗಿನ ಮಾತುಕತೆ: ಆರ್.ಚಲಪತಿ, ಸಖಿ ಪ್ರಕಾಶನ, ಹೊಸಪೇಟೆ ೨೦೧೨

[2] ಅದೇ

ನಾಮಪದಗಳನ್ನಿಟ್ಟು ಬರೇ ಕ್ರಿಯಾ ಪದವನ್ನು ಕನ್ನಡ ಪದವನ್ನಿಟ್ರೂ ಕನ್ನಡವೇ ಅದು. ನಾಮಪದ ಲಾಂಗ್ವೇಜ್ ಅಲ್ಲ, ಕ್ರಿಯಾಪದವೇ. ಕ್ರಿಯಾಪದ ಮತ್ತು ಸರ್ವನಾಮಗಳು' ಎನ್ನುವ ನಿಲುವು ಅವರದು.

ಈ ನಿಟ್ಟಿನಲ್ಲಿ 'ಇಂಗ್ಲಿಶ್ ಮತ್ತು ಜ್ಞಾನ ಒಂದೇ ಅಲ್ಲ, ಜೀವನ ಶಯ್ಲಿ ಮತ್ತು ಇಂಗ್ಲಿಶ್ ಒಂದೇ ಅಲ್ಲ[3]' ಅನ್ನುವ ಸರಿಯಾದ ತಿಳಿವುಗಳೂ ನಮ್ಮೊಡನೆ ಇವೆ.

ಇದರಿಂದ, ನಮ್ಮ ಸಾಮಾಜಿಕ ಸನ್ನಿವೇಶದ ಇನ್ನೊಂದು ತೊಡಕನ್ನೂ ಪರಿಹರಿಸಿಕೊಳ್ಳಲು ಬರುತ್ತದೆ. ಕನ್ನಡ ನುಡಿಯರಿಗರಾದ ಕೆ.ವಿ.ನಾರಾಯಣ ಅವರು ಹೇಳುವಂತೆ, ಇಂಡಿಯಾದಲ್ಲಿ ಅಪ್ಪ, ಅಮ್ಮ ಇಲ್ಲದವರು, ಎಲ್ಲೋ, ಹೇಗೋ ಅವರನ್ನು ಕಳೆದುಕೊಂಡು ಇನ್ನಾರದೋ ಮಡಿಲಿಗೆ–ಮನೆಗೆ ಬಿದ್ದವರು ಕೋಟ್ಯಾಂತರ ಮಂದಿ ಇದ್ದಾರೆ. ಇವರು ತಮ್ಮನ್ನು ಹೆತ್ತ ತಾಯಿಯಾಡುತ್ತಿದ್ದ ನುಡಿಯನ್ನೇ ಕಲಿಯಲು ಬರುವುದಿಲ್ಲ. ಯಾರು ಅಂತಹ ಮಕ್ಕಳ ಹೊಣೆಯನ್ನು ಹೊರುತ್ತಾರೋ ಅವರೇ ತಾಯಿ ಎಂದು ಬಿಂಬಿಸುವುದು ಬೇರೆ ಮಾತು. ಎಲ್ಲಾ ಸವಲತ್ತುಗಳೂ ಸಾಮಾಜಿಕವಾಗಿ ಸಿಗುತ್ತಿದ್ದು ಬಹಳ ನಾಜೂಕಾಗಿ ಬೆಳೆದವರು, ತಮ್ಮ ನುಡಿಕಲಿಕೆಯ ಸನ್ನಿವೇಶವನ್ನು 'ಅಟ್ಟದನುಡಿ(ಇಂಗ್ಲಿಶ್), 'ಮನೆಮಾತು(ಸಂಸ್ಕೃತ)' 'ಬೀದಿಮಾತು(ಕನ್ನಡ)[4]' ಅಂತಾ ಕೊಚ್ಚಿಕೊಳ್ಳುವವರು ಏನು ಬೇಕಾದರೂ ಹೇಳಬಹುದು. ಮನೆಯೇ ಇಲ್ಲದೆ ಬೆಳೆದ, ಬೆಳೆಯುತ್ತಿರುವ ಈ ದೇಶದ ಕೋಟ್ಯಾಂತರ ಜನರ ಮನೆಮಾತು–ಬೀದಿಮಾತು ಒಂದೇ ಆಗಿರುವಾಗ 'ಮಾತೃಭಾಷೆ' ಎನ್ನುವುದು ಇವತ್ತು ಈ ದೇಶದ ಎಲ್ಲರನ್ನೂ ಒಳಗೊಳ್ಳುವ ನುಡಿಯಾಗಿ ಉಳಿಯುವುದೂ ಆಗದ ಮಾತು.

1966ರ ಕೊಟಾರಿ ಕಮಿಶನ್ ವರದಿಯನ್ನು ತೆಗೆದುಕೊಂಡು 'ಮಾತ್ರುಬಾಶೆ ಶಿಕ್ಶಣ ಮಾದ್ಯಮ ಆಗ್ಬೇಕು ಅಂತಾ ಹೇಳೋದು.. ಒಂದು ಪಾಲಿಸಿ ಸ್ಟೇಟ್‌ಮೆಂಟಾಗಿ ಕೊಟಾರಿಯವರಿಗೆ ಸುಲಬವಾಗಿತ್ತು' ಮತ್ತು ಆ ಕಾಲಕ್ಕೆ 'ಇಂಗ್ಲಿಶ್ ಬಾರ್ಡರ್ ಲಯ್ನ್ ಕೇಸುಗಳಲ್ಲಿತ್ತು' ಎನ್ನುವ ಕೆ.ವಿ.ನಾರಾಯಣ[5] ಅವರು 'ಮಾತೃಭಾಷೆ' ಅನ್ನೋದು ಮುಂದೆ ಹವ್ಸ್ ಹೋಲ್ಡ್ ಲಾಂಗ್ವೇಜ್ ಅಂತಾಯಿತು' ಅನ್ನೋದನ್ನ ಹೀಗೆ ಹೇಳಿದ್ದಾರೆ. ಮೊದಲಿಗೆ ಮಗು ತಾಯಿಯೊಂದಿಗೆ ಮಾತನಾಡುವ ನುಡಿ ತಾಯಿನುಡಿ ಎನಿಸಿದರೆ, ಆಮೇಲೆ ವಿವರಣೆಯನ್ನ ಸ್ವಲ್ಪ ಬದಲಾಯಿಸಿದಾರೆ; ತಾಯಿ ಇಲ್ಲದೇ ಇದ್ರೆ ಯಾರು ಮಗುವನ್ನ ಸಾಕ್ತಾ ಇರ್ತಾರೆ ಅವರಾಡುವ ನುಡಿ ಅಂತಾಯಿತು. ಆದರೆ, ಕೋಟ್ಯಾಂತರ ಜನಕ್ಕೆ ಈ ದೇಶದಲ್ಲಿ ಮನೇನೇ ಇಲ್ಲ. ಎಲ್ಲೋ

---

[3] ಸಿ.ಜಿ.ಲಕ್ಷ್ಮೀಪತಿ, ಅದೇ೨೦೧೨.

[4] ಯು.ಆರ್.ಅನಂತಮೂರ್ತಿ, ಬೆಳಗಾವಿಯ ವಿಶ್ವಕನ್ನಡ ಸಮ್ಮೇಳನ.ವನ್ನು ಕುರಿತ ಸಂಯುಕ್ತ ಕರ್ನಾಟಕದ ವಿಶೇಶ ಸಂಚಿಕೆಯಲ್ಲಿ

[5] ತಂತಿಮೇಲಿನ ನಡಿಗೆ; ಆರ್.ಚಲಪತಿ ೨೦೧೨, ಸಖಿ, ಹೊಸಪೇಟೆ

ಒಂದ್ಕಡೆ ವಾಸಾ ಮಾಡ್ತಾ ಇದಾರೆ. ಬೇರೆಬೇರೆ ಕಡೆಯಿಂದ ಬಂದಿರ್ತಾರೆ. ಇದರಿಂದಾಗಿ 'ಮಾತೃಭಾಷೆ' ಕಲ್ಪನೆಯನ್ನೇ ಅಡ್ಮಿನಿಸ್ಟ್ರೇಟಿವ್ ಆಗಿ ವಿವರಿಸಿ ಹೇಳೋಕೆ ಇವತ್ತಿನವರೆಗೂ ಆಗಿಲ್ಲ, ಅಂತಾರೆ. ಇಡೀ ಇಂಡಿಯಾವನ್ನ ಐದು ಗುಂಪುಗಳಲ್ಲಿ ವಿಂಗಡಿಸಿ ನೋಡಲಾಗುತ್ತದೆ; ಮೊದಲ ಗುಂಪಿನಲ್ಲಿ ಅಲ್ಲಿನ ಪ್ರಾದೇಶಿಕ ನುಡಿಯನ್ನಾಡುವವರು 85 ಪರ್ಸೆಂಟಿಗಿಂತ ಜಾಸ್ತಿ ಇದಾರೆ. ಎರಡನೇ ಗುಂಪಿನಲ್ಲಿ 70 ಪರ್ಸೆಂಟಿಗಿಂತ ಜಾಸ್ತಿ ಇದಾರೆ. ಮೂರನೆ ಗುಂಪಿನಲ್ಲಿ 60ರಿಂದ 70 ಪರ್ಸೆಂಟ್‌ವರೆಗೆ ಇದಾರೆ. ಕರ್ನಾಟಕ ಈ ಗುಂಪಿನಲ್ಲಿ ಬರುತ್ತದೆ. ಇಲ್ಲಿ ಕನ್ನಡ ನುಡಿಯಾಡುಗರು 66 ಪರ್ಸೆಂಟಿದ್ದಾರೆ. ಉಳಿದ 34 ಪರ್ಸೆಂಟ್ ಅವರ 'ಮಾತೃಭಾಷೆ'ಯಲ್ಲಿ ಕಲಿಕೆಯನ್ನು ಮಾಡ್ತಾನೂ ಇರಲ್ಲ, ಕೊಡ್ತಾನೂ ಇರಲ್ಲ. ಆದ್ದರಿಂದಾಗಿ ನಾವು ತಪ್ಪು ಕಲ್ಪನೆಗಳಲ್ಲಿ ಕಲಿಸ್ತಾ ಇದೀವಿ. 'ಮಾತೃಭಾಷೆ'ಯ ಪರಿಕಲ್ಪನೆಯನ್ನೇ ಸರಿಯಾಗಿ ಹೇಳದೆ ಇರುವುದರಿಂದಾಗಿಯೆ ಹೀಗಾಗುತ್ತಿದೆ. 34 ಪರ್ಸೆಂಟಿನಲ್ಲಿ ಬರುವವರು ಆಲ್ಟರ್ನೇಟಿವ್ ಆಗಿ ಇಂಗ್ಲಿಶಿನಲ್ಲಿ ಕಲೀತೀವಿ ಅಂತಾರೆ, ಎನ್ನುವ ನಿಜದತ್ತ ಬೆರಳು ಮಾಡಿ ಹೇಳಿದ್ದಾರೆ. ಅಷ್ಟೇ ಅಲ್ಲದೆ, ಕೊಟಾರಿ ಕಮಿಶನ್ ವರದಿಯನ್ನು 'ನೆಹರು ಯುಗದ ಆದರ್ಶ ಮತ್ತು ಕನಸುಗಾರಿಕೆಯ ಫಯ್ನಲ್ ಡಾಕ್ಯುಮೆಂಟ್' ಎಂದು ಕರೆಯುವ ಅವರು 1966ರ ಇಂಡಿಯಾದ ಸನ್ನಿವೇಶ ಇವತ್ತು ಇಲ್ಲ, 1950ರ ಸಂವಿದಾನದಲ್ಲಿ 15 ವರುಶಗಳವರೆಗೆ ಅಂದಿದ್ದ ಇಂಗ್ಲಿಶ್ ಬಳಕೆ, 1965ರಲ್ಲಿ ಅಮೇಂಡ್ಮೆಂಟ್ ಆಗಿ ಮುಂದುವರೆದಿದೆ. ದೇಶದ ಆಡಳಿತದ ನುಡಿ ಹಿಂದಿ ಇರಬೇಕು ಅಂತಲೂ ಆಗಿದೆ. ಅದರ ಎದುರು ಹೋರಾಟಗಳೂ ನಡೆದಿವೆ.

ದೇಶದ ನಂಟಿನ ನಾಡು-ನುಡಿಯ ಬೆಳವಣಿಗೆಗಳಲ್ಲಿ ಇನ್ನೊಂದು ಸಂಗತಿಯನ್ನು ಅವರು ಗ್ರಹಿಸಿರುವುದು ಹೀಗೆ. 1966ರವರೆಗೆ ದೇಶದಲ್ಲಿ ಕಾಂಗ್ರೆಸ್‌ನ ಚಕ್ರಾದಿಪತ್ಯ ಇತ್ತು.. ಆಮೇಲೆ ಅದು ಪ್ರಾದೇಶಿಕ ಶಕ್ತಿಗಳ ನಡುವೆ ಒಡೆದೋಗ್ಬಿಡ್ತು. 1967ರಲ್ಲಿ ಚುನಾವಣೆಯಾದಾಗ ಕಾಂಗ್ರೆಸ್ ಬಹುಮತ ಪಡೆಯದೆ ಮೈನಾರಿಟಿ ಗವರ್ನಮೆಂಟಾಯ್ತು. ಆ ಹೊತ್ತಿಗೆ ತಮಿಳುನಾಡಲ್ಲಿ ಡಿಎಂಕೆ ಗವರ್ನಮೆಂಟ್, ಕೇರಳದಲ್ಲಿ ಕಮ್ಯೂನಿಸ್ಟರು, ಪಂಜಾಬಿನಲ್ಲಿ ಅಕಾಲಿದಳದ ಗವರ್ನಮೆಂಟುಗಳು ಬಂದ್ವು. ಇದರಿಂದಾಗಿ ಇಡೀ ಇಂಡಿಯಾ ಅನ್ನೋದರಲ್ಲಿ ಬೇರೆಬೇರೆ ಆಸ್ಪಿರೇಶನ್ಸ್ ಇವೆ ಅನ್ನೋದು ಗೊತ್ತಾಗ್ತದೆ. ಕೊಟಾರಿ ಕಮಿಶನ್ ಕಲ್ಪಿಸಿಕೊಂಡಿದ್ದ ಇಂಡಿಯಾನೆ ಬೇರೆ ಆಗಿತ್ತು. ಅದರ ವರದಿಯಲ್ಲಿ 'ಮಾತೃಭಾಷೆ' ಅನ್ನೋದು ಅಡ್ಮಿನಿಸ್ಟ್ರೇಟಿವ್ ನಿರ್ದಾರ ಅಷ್ಟೇ ಅದು. ಅದನ್ನು ಜಾರಿ ಕೊಡೋಕೆ ಆಗದ ರೀತಿಯಲ್ಲಿ ಇಂಡಿಯಾ ತನ್ನ ಆಕಾರವನ್ನ ಬದಲಿಸಿಕೊಂಡಿದೆ. ಈ ಎಲ್ಲಾ ಬೆಳವಣಿಗೆಗಳ ಜೊತೆಯಲ್ಲಿ 'ರನ್ನಿಂಗ್ ಎಜುಕೇಶನಲ್ ಇನ್‌ಸ್ಟಿಟ್ಯೂಟ್ ಈಸ್ ಎ ಬ್ಯುಸಿನೆಸ್' ಅಂತಾ ಕೋರ್ಟು ಹೇಳೋವರೆಗೂ ಹೋಗಿದೆ. ಅಂದರೆ, ಬ್ಯುಸಿನೆಸ್ ಮಾಡೋನು, ಹಣ ಹೂಡಿರೋನು ಅವನು ಹೇಗೆ ಬೇಕಾದ್ರು ಬ್ಯುಸಿನೆಸ್ ಮಾಡ್ಬಹುದು.

ಅವನಿಗೆ ನೀವು ಶರತ್ತುಗಳನ್ನು ಹಾಕೋಕಾಗಲ್ಲ.. ಈ ಬಗೆಯ ಬೆಳವಣಿಗೆ ಹುಟ್ಟುಹಾಕಿರುವ ಎಡಬಿಡಂಗಿತನವನ್ನು ನಮ್ಮೆದುರಿಗೆ ಇಟ್ಟಿದ್ದಾರೆ.

ನಮ್ಮ ಆಡಳಿತಗಳ ಕಟ್ಟುಕಟ್ಟಳೆಗಳನ್ನು ನೋಡಿ ಹೇಳುವುದಾದರೆ; ಡೈರೆಕ್ಟರಿ ಪ್ರಿನ್ಸಿಪಲ್ ಪ್ರಕಾರ ಎಜುಕೇಶನ್ ಕೊಡುವಂತದ್ದು ಸ್ಟೇಟ್‌ನ ಹೊಣೆಗಾರಿಕೆ. ಆದರೆ, ಸ್ಟೇಟ್ ಇದನ್ನ ಬೇರೆಯವರಿಗೆ(ಪ್ರೈವೇಟ್) ರವಾನೆ ಮಾಡಿರುವುದರಿಂದ ದೊಡ್ಡದಾದ ಎಡವಟ್ಟನ್ನೇ ನಾವು ಎದುರಿಗೆ ತಂದು ನಿಲ್ಲಿಸಿಕೊಂಡಿದ್ದೇವೆ. ಪ್ರೈವೇಟ್ ಶಾಲೆಗಳನ್ನು ಬದಲಿ ಶಾಲೆಗಳು ಅನ್ನುವಂತಾಗಿಬಿಟ್ಟಿದೆ. ಆದರೆ, ಕಲಿಕೆಯನ್ನು ಮುಗಿಸಿ ಹೊರಗೆ ಬಂದ್ಮೇಲೆ ಇವತ್ತಿಗೂ ಸಮಾಜದ ಜೊತೆಯಲ್ಲಿ ಬಾಳೋಕೆ, ಜೀವನ ಮಾಡೋಕೆ, ಹೊಂದಿಕೊಂಡು ಹೋಗೋಕೆ ಆಗುತ್ತಿರುವುದು ಸರ್ಕಾರಿ ಶಾಲೆಗಳ ಕಲಿಕೆಯಿಂದ ಬಂದವರಿಗೆ ಮಾತ್ರವೇ. ಪ್ರೈವೇಟ್ ಶಾಲೆಗಳಲ್ಲಿ ಓದಿದವರು ಇದು ಡರ್ಟಿ ಇಂಡಿಯಾ ಅಂತಾ ದೂರ ಉಳಿಯುತ್ತಿದ್ದಾರೆ. ಅವರು ಅಮೇರಿಕಕ್ಕೋ ಎಲ್ಲೋ ಹೋಗಿಬಿಡಬಹುದು, ಅವರಿಗೆ ಇಲ್ಲಿನ ಅಡಾಪ್ಟಬಲಿಟಿ ಮಿನಿಮಮ್ ಆಗಿರ್ತದೆ ಎನ್ನುವುದು ಕೆ.ವಿ.ನಾರಾಯಣ ಅವರ ನಿಲುವು.

ಹೀಗಾಗಿ, ಒಂದು ನಾಡಿನ ಚೌಕಟ್ಟಿನಲ್ಲಿ ಅತಿ ಹೆಚ್ಚು ಜನರಾಡುವ 'ಮನೆಮಾತು' ಆ ನಾಡಿನ ಜನಬದುಕಿನ ನುಡಿಯೆಂದು 'ನಾಡನುಡಿ'ಯೆಂದು ಗುರುತಿಸಿಕೊಂಡಿರುವುದರಿಂದ, ಅದರ ಏಳಿಗೆಯೊಂದಿಗೆ ನಡೆಯುವುದೇ ಸರಿಯಾದ ದಾರಿಯಾಗಿದೆ. ಈ ನಿಟ್ಟಿನಲ್ಲಿ, ಅಸ್ಸಾಮಿ, ಒರಿಯಾ, ಪಂಜಾಬಿ, ತೆಲುಗು, ತಮಿಳು, ಮಲೆಯಾಳಿ, ಮರಾಟಿ, ಗುಜರಾತಿ, ಬೋಡೊ ಮೊದಲಾದ ನುಡಿಗಳು ಒಂದೊಂದು ನುಡಿಯಾಡುವ ಜನಬದುಕಿನ ಗುರುತಿನ ಜಾಗಗಳನ್ನೇ ಸಾರಿಸಾರಿ ಹೇಳುತ್ತಿವೆ. ದೇಶದ ಒಕ್ಕೂಟದಲ್ಲಿದ್ದೂ ಆಯಾ ನುಡಿಯಾಡುಗ ಕಲ್ಚರಿನ ಮೂಲಕವೇ ತಮ್ಮ ಹೆಚ್ಚುಗಾರಿಕೆಯನ್ನು ಗುರುತಿಸಿಕೊಂಡಿವೆ. ಇದನ್ನೇ ಇಂಡಿಯಾದ 'ಒಕ್ಕೂಟ ತಿಳಿವು' ಎಂದುಕೂಡ ತಿಳಿದು ಬೆಂಬಲಿಸುತ್ತಾ ಬರಲಾಗಿದೆ. ಕನ್ನಡ-ಕರ್ನಾಟಕದ ಮಟ್ಟಿಗೆ ಕೂಡಾ ಇದು ದಿಟವೆಂದೇ ತಿಳಿಯಬೇಕಾಗಿದೆ. 'ಕಾವೇರಿಯಿಂದಮಾ ಗೋದಾವರಿವರಮಿರ್ದಾ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ' 'ನಾವಾಡುವ ನುಡಿಯೇ ಕನ್ನಡ ನುಡಿ, ನಾವಿರುವಾ ತಾಣವೇ ಗಂಧದ ಗುಡಿ' ಎನ್ನುವ ಮಾತುಗಳೂ ಕೂಡ ನಾಡು-ನುಡಿಯನ್ನೊಳಗೊಂಡ ಕನ್ನಡ ಪರಿಸರದ ಜನಬದುಕನ್ನು ಹೇಳುವ ಮಾತುಗಳೇ ಆಗಿವೆ. ಹೀಗಾಗಿ 'ಡೆಮಾಕ್ರಸಿ'ಯ ನೆಪದಲ್ಲಿ ಏನೆಲ್ಲಾ ಬೇಕಾದರೂ ಆಗಬಹುದು, ಮಾಡಬಹುದು ಅನ್ನುವುದು ಹೇಗೆ ಸರಿ? ಎಂದೇ ಕೇಳಿಕೊಳ್ಳಬೇಕಾಗುತ್ತದೆ.

ಇವತ್ತಿನ ಗ್ಲೋಬಲ್ ಮಾರ್ಕೆಟ್ಟಿಗೆ ಹಣ ಹೂಡಿರುವ, ಇನ್ನೂ ಅದಕ್ಕೆ ಹೆಚ್ಚೆಚ್ಚು ಅವಕಾಶಗಳನ್ನು ಮಾಡಿಕೊಳ್ಳುತ್ತಿರುವ ವಿದೇಶಿಗರೂ ಕೂಡ ನಮ್ಮನಮ್ಮಗಳ ನಾಡು-ನುಡಿಯ ಸಂಗತಿಯಲ್ಲಿ ಹೇಗೆ ನಡೆದುಕೊಳ್ಳಲು ಅವಕಾಶವನ್ನು ಮಾಡಿಕೊಡಬೇಕು ಎನ್ನುವುದನ್ನೂ ಗ್ರಹಿಸಬೇಕಾಗುತ್ತದೆ. ಇದು, ಒಂದು ನುಡಿಬದುಕಿನ ಹೊರಗಿನಿಂದ ಬಂದ ಎಲ್ಲರಮಟ್ಟಿಗೂ ಸಲ್ಲುವ ಮಾತಾಗಿದೆ. ಜೊತೆಗೆ ಇಂಡಿಯಾದ ಇತರೆ ನುಡಿಯಾಡುಗರ ವಲಸೆಗೆ ಬೇಕಾದ ಅನುಕೂಲಗಳೂ ಇವೆ. ಆದ್ದರಿಂದಾಗಿ 'ತಾಯಿನುಡಿಯಲ್ಲಿ ಮಗು ಬೇಗನೆ ಕಲಿಯುತ್ತದೆ ನಿಜ. ಆದರೆ ಅದಕ್ಕೆ ಬೇಕಾದ ವಾತಾವರಣವನ್ನು ಆಗುಮಾಡಲು ಸರಕಾರ ಏನು ಮಾಡಿದೆ?' ಎನ್ನುವ ಪ್ರಶ್ನೆಯು ಈ ದೇಶದ ನಾಡು-ನುಡಿ-ಬದುಕಿನ ನಂಟುಗಳನ್ನು ಸರಿಯಾಗಿ ಅರಿಯದವರ, ಇಲ್ಲವೇ ಬೇಕೆಂದೇ ದೂರವಿಡುತ್ತಿರುವವರ ಸಾಮಾಜಿಕ ಉದ್ದಟತನದಂತೆಯೂ ಕಾಣುತ್ತದೆ(ಈ ಬಗೆಯ ಸಾಮಾಜಿಕ ಉದ್ದಟತನಗಳು ಯಾಕೆ? ಹೇಗೆ? ಯಾರು? ಎನ್ನುವುದು ಬೇರೆಯೇ ಇನ್ನೊಂದು ಸಂಗತಿ). ಏನೇ ಇರಲಿ ಕೆವಿ.ನಾರಾಯಣ ಅವರು ಹೇಳಿದಂತೆ, ಒಂದು ನುಡಿಯ ಹೆಗ್ಗಳಿಕೆಯು ಆ ನುಡಿಯನ್ನು ಯಾವ ಯಾವ ವಲಯದಲ್ಲಿ ಹೇಗೆ ಬಳಸುತ್ತಿದ್ದೇವೆ ಎನ್ನುವುದರ ಮೇಲೆಯೇ ನಿಂತಿರುತ್ತದೆ. ಈ ನಿಟ್ಟಿನಲ್ಲಿ, ಸರಕಾರ ಕೂಡ ಕನ್ನಡಕ್ಕೆ ಮನ್ನಣೆ ನೀಡಿದರೆ ಮಾತ್ರ ಸಾಲದು. ಎಲ್ಲಾ ವಲಯದಲ್ಲೂ ಬೆಳೆಸಲು ಅನುಕೂಲಗಳನ್ನೂ ಆಗುಮಾಡಬೇಕಾಗುತ್ತದೆ. ಆದರೆ:

ಆಡಳಿತದಲ್ಲಿ ಕನ್ನಡದ ಸಂಗತಿಯನ್ನು ನೋಡಿದರೆ; '1963ರಿಂದ 1982ರವರೆಗೆ ವಿದಾನಮಂಡಲದಲ್ಲಿ ಕನ್ನಡವನ್ನು ಬಳಸಬೇಕೇ, ಬಳಸಿದರೆ ಅದಕ್ಕೆ ಮನ್ನಣೆ ನೀಡಬೇಕೇ[6]' ಎನ್ನುವಂತೆ ನಡೆದುಕೊಳ್ಳಲಾಗಿದೆ. ಮುಂದಿನ ಬೆಳವಣಿಗೆಗಳಲ್ಲೂ ಕೂಡ ಕನ್ನಡ ಮತ್ತು ಹಿಂದಿಯ ಜೊತೆಗೆ ಇಂಗ್ಲಿಶನ್ನು ಮುಂದುವರೆಸಬಹುದು ಅಂತಲೇ ಆಗಿದೆ. ಅಂದರೆ, ತಿದ್ದುಪಡಿಗಳು ಕನ್ನಡವನ್ನೂ ಬಳಸಬಹುದು ಅಂತಾ ಹೇಳುತ್ತವೆಯೇ ಹೊರತಾಗಿ ಕನ್ನಡವನ್ನೇ ಬಳಸಬೇಕು ಎಂದು ಹೇಳುವುದಿಲ್ಲ. ಕನ್ನಡ ಬಳಕೆಯೇ ಮೊದಲಾಗಬೇಕು ಎನ್ನುವಂತೆ ನಡೆದುಕೊಂಡಿರುವುದು ಕಾಣುವುದಿಲ್ಲ. ಹೀಗಾಗಿ ಕಲಿಕೆಯಲ್ಲೂ ಕೂಡ, ಕನ್ನಡದಲ್ಲಿ ಕಲಿಯುವ, ಕನ್ನಡವನ್ನು ಕಲಿಯುವ ಸಂಗತಿಗಳೂ ಕೂಡ ಎಡಬಿಡಂಗಿಯಾಗಿಯೇ ಉಳಿಯುವಂತಾಗಲು ದಾರಿಮಾಡಿ ಕೊಟ್ಟಿವೆ.

ಕನ್ನಡ ಆಡಳಿತ ಮತ್ತು ಶಿಕ್ಷಣದ ಬಿಕ್ಕಟ್ಟುಗಳು:

---

[6] ಕನ್ನಡ ಜಗತ್ತು ಅರ್ಧ ಶತಮಾನ: ಕೆ.ವಿ.ನಾರಾಯಣ, ೨೦೦೭, ಕನ್ನಡ ವಿ.ವಿ ಹಂಪಿ

'ಡೆಮಾಕ್ರಸಿ' ನಾಡನುಡಿಯ ಜನಬದುಕನ್ನು ಹತ್ತಿಕ್ಕುವ ಅವಕಾಶಕ್ಕೂ ಬಾಗಿಲಾಗಿದೆಯೇ? ಎಂಬ ಪ್ರಶ್ನೆಯೊಂದನ್ನು ಕೇಳಿಕೊಳ್ಳುವಂತಾಗಿದೆ.

ಒಂದು ನಾಡಿನ ಜನಬದುಕನ್ನೇ ಅನುಮಾನಿಸಿರುವ ಪ್ರಸಂಗ ಇದು. ಕನ್ನಡವನ್ನು ಕಲಿಕೆಯ ದಾರಿಯಾಗಿ ಬಳಸುವ ಕಟ್ಟಳೆಯು ಕೋರ್ಟಿನಲ್ಲಿ ಚರ್ಚೆಗೆ ಒಳಗಾಗಿದೆ. 'ಕನ್ನಡ ಮಾಧ್ಯಮ'ದ ಪ್ರಸಂಗದಲ್ಲಿ ಕೋರ್ಟು ಎದುರಿಗಿಟ್ಟಿರುವ ಡೆಮಾಕ್ರಸಿಯ ಅವಕಾಶದ ಗ್ರಹಿಕೆಗಳು ಹೀಗಿವೆ;

- 'ಅಲ್ಪಸಂಖ್ಯಾತ ಶಾಲೆಗಳ ಹಿತಾಸಕ್ತಿಗೆ ವಿರೋಧ, ಇದು ಅಲ್ಪಸಂಖ್ಯಾತರ ಹಕ್ಕುಗಳಿಗೆ ದಕ್ಕೆ ತರುವಂತಹುದು'
- 'ಅನುದಾನರಹಿತ ಮತ್ತು ಅಲ್ಪಸಂಖ್ಯಾತ ಶಾಲೆಗಳ ಆಡಳಿತ ಮಂಡಳಿಗಳ ಸಹಮತ ಇಲ್ಲ'
- 'ಇಂಗ್ಲಿಶ್ ತಾಯಿನುಡಿಯಲ್ಲದ ಸಮುದಾಯವು ಇಂಗ್ಲಿಶ್ ಮೀಡಿಯಂನ ಶಾಲೆಯನ್ನು ಶುರುವು ಮಾಡಲು ಬಯಸಿದರೆ ಅವರಿಗೆ ಅಂತಹ ಆಯ್ಕೆ ಹೊಂದುವ ಸ್ವಾತಂತ್ರ್ಯವಿಲ್ಲವೇ'
- 'ಜನರ ಮೇಲೆ ಎಲ್ಲವನ್ನೂ ಬಲವಂತವಾಗಿ ಹೇರಲು ಇದು ಕಮ್ಯೂನಿಸ್ಟ್ ದೇಶವಲ್ಲ'

ಎನ್ನುವ ಮಾತುಗಳನ್ನು ಕೋರ್ಟು ಹೇಳಿದೆ. ಈ ಮಾತುಗಳು 'ಡೆಮಾಕ್ರಸಿ'ಯನ್ನು ತಪ್ಪಾಗಿ ತಿಳಿದದ್ದರ, ಇಲ್ಲವೇ ದೇಶದ, ದೇಶೀಯ ಜನಬದುಕಿನ ಗುರುತುಗಳನ್ನು ಬಿಟ್ಟುಕೊಡಬೇಕೆನ್ನುವುದರ ಸೂಚನೆ ಇದು. 'ಜಾಗತೀಕರಣ'ದೊಂದಿಗೆ ಕಳೆದುಹೋಗುವುದರ ಗುರಿ. ಕೋರ್ಟಿನ ತೀರ್ಮಾನವೇ ಆಗಿದ್ದರೂ ಇದು, ಇಂಡಿಯಾದ ಹಲವು ಬಗೆಯ'ಬಹುತ್ವ'ದ ಸ್ಥಳೀಯತೆಗೆ ಒಂದು ಬಗೆಯ ನಡುಕವನ್ನು ಹುಟ್ಟಿಸಿದೆ ಅಂತಲೇ ತಿಳಿಯಬೇಕಾಗುತ್ತದೆ. ದೇಶಿಯ ನುಡಿಗಳ ಕಲ್ಚರುಗಳನ್ನೇ ಕಾಪಾಡಿಕೊಳ್ಳಲಾಗದ ಗುರಿಯತ್ತ ಹೆಜ್ಜೆ ಹಾಕಲೇಬೇಕಾಗಿದೆಯೇ ನಾವು? ಇದರಿಂದ ಏನಾಗಬಹುದು? ಯಾಕೆ ಹೀಗೆ?;

'ಅಲ್ಪಸಂಖ್ಯಾತ'ರ ಹಿತಾಸಕ್ತಿ, ಹಕ್ಕು ಮತ್ತು ನಾಡು ನುಡಿ:

ಇಂತಹ ಪ್ರಶ್ನೆಯನ್ನು ಎದುರಿಗಿರಿಸಿಕೊಂಡ ಕೂಡಲೇ ಕಾಣುವ ಸಂಗತಿಗಳೆಂದರೆ; ನಾಡಿನಲ್ಲಿ ಬದುಕುತ್ತಿರುವ ಒಟ್ಟು ಜನರಲ್ಲಿ ಬೇರೆಬೇರೆ ಮನೆಮಾತನ್ನು ಹೊಂದಿರುವ ಸಣ್ಣಸಣ್ಣ ಗುಂಪುಗಳು ಇವೆ. ಅವರು, 1. ಅವರವರ ಮನೆಮಾತಿನಲ್ಲಿಯೇ ಕಲಿಯಬೇಕಾಗುತ್ತದೆ, 2. ಈ ಸಣ್ಣಸಣ್ಣ ಗುಂಪುಗಳು ನಾಡಿನ ಕಲಿಕೆಯ ಹೊಣೆಯಲ್ಲಿ ಪಾಲ್ಗೊಳ್ಳುವುದಾದರೆ ತಾವು ನಡೆಸುವ ಕಲಿಕೆಯ ಸಂಸ್ಥೆಗಳಲ್ಲಿ ಆ

ಗುಂಪುಗಳಾಡುವ ಮನೆ ಮಾತನ್ನೇ ಕಲಿಕೆಯ ದಾರಿಯನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ, ಮಾಡಿಕೊಂಡಿರುತ್ತವೆ ಎನ್ನುವುದು. ಇದನ್ನೇ ಹಿತಾಸಕ್ತಿ, ಹಕ್ಕು ಎಂದೆಲ್ಲಾ ಮಂಡಿಸಲಾಗುತ್ತಿರುವುದು.

ಮೊದಲನೆಯ ಸಂಗತಿಯನ್ನು ಸರಿಯಾಗಿ ಗ್ರಹಿಸಿದರೆ, ತೆಲುಗು, ತಮಿಳು, ಉರ್ದು, ಮಲೆಯಾಳಿ, ಮರಾಟಿ ಮೊದಲಾಗಿ 170ಕ್ಕೂ ಹೆಚ್ಚು ಬೇರೆಬೇರೆ ನುಡಿಗಳು ಕನ್ನಡನಾಡಿನಲ್ಲಿ ಸಣ್ಣಸಣ್ಣ ಗುಂಪುಗಳ ಮನೆ ಮಾತಾಗಿ ಬಳಕೆಯಲ್ಲಿವೆ. ಇವರೆಲ್ಲರೂ ಬಹಳ ಕಾಲದಿಂದ ಕನ್ನಡನಾಡಿನಲ್ಲಿ ಬದುಕನ್ನು ನಡೆಸುತ್ತಿರುವವರೂ ಆಗಿದ್ದಾರೆ. ಹೀಗೆ ತಮ್ಮ ನುಡಿಗಳನ್ನು ಮನೆಮಾತಾಗಿ ಬಳಸುತ್ತಿರುವವರು ಬೀದಿಗೆ ಬಂದ ಕೂಡಲೇ–ಹಲವೊಮ್ಮೆ ಮನೆಯಲ್ಲಿಯೂ–ಕನ್ನಡ ನುಡಿಯಾಡುಗರೇ ಆಗಿದ್ದಾರೆ ಎನ್ನುವುದು, ತಮ್ಮ ಮನೆಮಾತಿನ ಜೊತೆಯಲ್ಲಿಯೇ ಕನ್ನಡವನ್ನೂ ಶಾಲೆಗಳಿಗೆ ಬರುವ ಮೊದಲೇ ತಮ್ಮ ಬದುಕಿನ ನಾಡನುಡಿಯಾಗಿಸಿಕೊಂಡಿದ್ದಾರೆ ಎನ್ನುವುದು ನಮ್ಮೆದುರಿಗೆ ಕಾಣುತ್ತಿರುವ ದಿಟ.

ಎರಡನೆಯ ಸಂಗತಿಗೆ ಬಂದರೆ, ಈ 'ಅಲ್ಪಸಂಖ್ಯಾತ'ರೆಂದು ಗುರುತಿಸಲ್ಪಡುತ್ತಿರುವವರು ತಾವು ನಡೆಸುವ ಕಲಿಕೆಯ ಸಂಸ್ಥೆಗಳು ತಮ್ಮ 'ಜಾತಿ' ಇಲ್ಲವೇ 'ಧರ್ಮ'ದವರಿಗೆ ಮಾತ್ರವೇ ನಡೆಸುತ್ತಿರುವ ಸಂಸ್ಥೆಗಳಲ್ಲ. ಜೊತೆಗೆ ಒಂದು 'ಜಾತಿ' ಇಲ್ಲವೇ 'ಧರ್ಮ'ದವರು ಒಂದೇ ನುಡಿಯಾಡುಗರಾಗಿದ್ದಾರೆ ಎನ್ನುವುದೂ ಕೂಡ ಸುಳ್ಳಿನ ಕಂತೆಯೇ ಸರಿ. ಕೆಲವೊಮ್ಮೆ ಮಾತ್ರವೇ ಈ ಸಂಗತಿಗಳು ಮುನ್ನೆಲೆಗೆ ಬರುತ್ತವೆ ಎನ್ನುವುದನ್ನೂ ತಿಳಿಯಬೇಕು. ಅದೂ ಕೂಡ ಎಲ್ಲಾ ಸನ್ನಿವೇಶದಲ್ಲಿಯಂತೂ ಅಲ್ಲ. ಕಲಿಕೆಯ ಸನ್ನಿವೇಶದಲ್ಲಂತೂ ಇದು ಇಲ್ಲವೇ ಇಲ್ಲ ಎಂದರೂ ತಪ್ಪಾಗುವುದಿಲ್ಲ. ಆದರೆ, ತಮ್ಮ ಗುಂಪಿನ ಗುರುತುಗಳು ಕಾಣುವಂತೆ ತಾವು ನಡೆಸುವ ಸಂಸ್ಥೆಗಳನ್ನು ಆಗುಮಾಡಿಕೊಂಡಿರುವುದು ಮಾತ್ರವೇ ಎದ್ದು ಕಾಣುವ ಸಂಗತಿಯಾಗಿದೆ. ಹೆಚ್ಚೆಂದರೆ ತಮ್ಮ ಗುಂಪಿನವರಿಗೇ ಹೆಚ್ಚು ಅವಕಾಶಗಳು ಸಿಗುವಂತೆ ಮಾತ್ರವೇ ನೋಡಿಕೊಳ್ಳಬಹುದು. ತಾವೇ ಹಣ ಹೂಡಿ ಹಣ ಮಾಡಲು ಹೊರಟಿರುವ ಸಂಸ್ಥೆಗಳಲ್ಲಿ ಇದನ್ನೂ ದಿಟವೆಂದು ನಂಬಲು ಬರುವುದಿಲ್ಲ. ಯಾಕೆಂದರೆ ಹಣ ಹೂಡಿದವರು ಹಣ ಮಾಡಲು ತಮ್ಮ ಗುರುತಿನ ಗುಂಪುಗಳನ್ನು ಮಾತ್ರವೇ ಗುರಿಯಾಗಿಸಿಕೊಂಡಿರುವುದಿಲ್ಲ. ಅಂದರೆ, ಅಲ್ಲೂ ಕೂಡ ಕನ್ನಡ ಜನಬದುಕುಗಳೊಂದಿಗೆ ಬದುಕನ್ನು ಕಟ್ಟಿಕೊಳ್ಳಬಯಸುವವರು ಕಲಿಯಲು ಬರುತ್ತಾರೆ ಎನ್ನುವುದನ್ನೇ ದಿಟವೆಂದು ತಿಳಿಯಬೇಕಾಗಿದೆ.

ಇನ್ನು, ಹೊರಗಿನಿಂದ ಬರುವ ಸರಕಾರಿ ಕೆಲಸಗಳಲ್ಲಿರುವವರ ಮಕ್ಕಳ ಕಲಿಕೆಗಾಗಿ, ಕಲಿಯಲೆಂದೇ ಬರುವ ವಲಸಿಗರಿಗಾಗಿ ಬೇರೆಬೇರೆಯೇ ಆದ ಸವಲತ್ತುಗಳು ಇವೆ. ಇದೂ ಕೂಡ ಈ ನಾಡಿನಲ್ಲಿಯೇ ನಡೆಯುತ್ತದೆಯಾದರೂ ನಾಡಿನ ಒಟ್ಟು ಬದುಕಿನ ಸನ್ನಿವೇಶದಲ್ಲಿ ಹೊರಗೇ ಉಳಿಯುವ ಬೆರಳೆಣಿಕೆಯ ಈ ಸಂಸ್ಥೆಗಳನ್ನು ಇಂತಹ ಚರ್ಚೆಯೊಳಕ್ಕೆ ತಂದುಕೊಳ್ಳುವ ಅಗತ್ಯವೂ ಕಾಣುವುದಿಲ್ಲ. ಹೀಗಾಗಿ 'ಅಲ್ಪಸಂಖ್ಯಾತ'ರ ಹಕ್ಕು, ಹಿತ ಎನ್ನುವ ಸಂಗತಿಯನ್ನು ಅಗತ್ಯವಿರದ ಕಡೆಗೆಲ್ಲಾ ತೆಗೆದುಕೊಂಡು ಹೋಗಿ ಚರ್ಚಿಸುವ ಅಗತ್ಯವಿಲ್ಲ, ಹಾಗಿದ್ದರೆ ಅಲ್ಲೇನೋ ಬೇರೆ ಬಗೆಯ ಉಪಾಯಗಳು ಕೆಲಸ ಮಾಡುತ್ತಿರುತ್ತವೆ ಅಂತಲೇ ತಿಳಿಯಬೇಕಾಗಿದೆ ಅನಿಸುತ್ತದೆ. ಯಾವಾಗ ಯಾರು ಈ ಉಪಾಯಗಳನ್ನು ಬಂಡವಾಳವಾಗಿ ಬಳಸುತ್ತಾರೆ ಎನ್ನುವುದನ್ನು ತಿಳಿಯುವುದು ಕೂಡ ಇವತ್ತು ಸಲೀಸಾದ ಸಂಗತಿಯಾಗಿ ಉಳಿದಿಲ್ಲ. ಈ ಉಪಾಯಗಳನ್ನು ಬಳಸುವಾಗ ಬಹಳಷ್ಟು ಸಾರಿ 'ಅಲ್ಪಸಂಖ್ಯಾತ', 'ಬಹುಸಂಖ್ಯಾತ' ಗೆರೆಗಳು ಅಳಿಸಿಹೋಗಿ ಬಂಡವಾಳ ಮಾಡಿಕೊಳ್ಳುವ ದಂದೆಯೊಂದು ಇದ್ದಕ್ಕಿದ್ದಂತೆ ಮೈಪಡೆದುಕೊಂಡು ಬಿಡುತ್ತದೆ.

ಸರಕಾರದಿಂದ ಹಣಕಾಸಿನ ಯಾವುದೇ ನೆರವನ್ನು ಪಡೆಯದೇ, ಕಲಿಕೆಯ ವಲಯದಲ್ಲಿ ತಾವೇ ಹಣವನ್ನು ಹೂಡಿ ಕಲಿಕೆಯ ಸಂಸ್ಥೆಗಳನ್ನು ನಡೆಸುತ್ತಿರುವವರು. ನಾಡಿನ ಬೆಳವಣಿಗೆಯ ಹೊಣೆಯಲ್ಲಿ ತಾವೂ ಪಾಲ್ಗೊಂಡು 'ಲಾಭ' ಮಾಡಲು ಹಣ ಹೂಡಿರುವವರು 'ಅನುದಾನರಹಿತ' ಎನ್ನುವ ಕ್ಯಾಟಗರಿಯಲ್ಲಿ ಬರುವ ಸಂಸ್ಥೆಗಳು. ಆದರೆ, ನಾಡಿನ ಜನಬದುಕಿನ ಏಳಿಗೆಯನ್ನೇ ಕಡೆಗಣಿಸಿ, ನಾಡಿನ ಜನಬದುಕಿನ ಏಳಿಗೆಯ ಗುರುತುಗಳನ್ನೇ ಕಡೆಗಣಿಸಿ, ಕಲಿಕೆಯ ಸಂಸ್ಥೆಗಳನ್ನು ನಡೆಸಲು ಪರ್ಮಿಶನ್ ಪಡೆದವರೇನೂ ಅಲ್ಲ ಇವರು. ಹೀಗಾಗಿ ಈ ನಾಡಿನ ಆಡಳಿತದ ಕಟ್ಟುಕಟ್ಟಳೆ, ಕಾನೂನು, ಜನಬದುಕಿನ ನಂಬಿಕೆ, ನುಡಿ, ನಡಾವಳಿ ಯಾವುದಕ್ಕೂ ದಕ್ಕೆ ಬರದಂತೆಯೇ ನಡೆದುಕೊಳ್ಳಬೇಕಾದವರಾದ್ದರಿಂದ 'ಅನುದಾನರಹಿತ' ಅನ್ನುವುದು ಒಂದು ಅವಕಾಶವಷ್ಟೆ ಎಂದು ತಿಳಿಯಬೇಕಾಗಿದೆ. 'ಅನುದಾನ-ಏಡ್' ಎನ್ನುವ ಪದವೇ ಹಣಕಾಸಿನ ಬಳಕೆಯ ಸಂಗತಿಯ ಹೊರತಾಗಿ ಇರುವಂತಹುದಲ್ಲ. 1995ರಲ್ಲಿ ಇಂಡಿಯಾದ 'ಪ್ರೆಸಿಡೆಂಟ್'ರಿಂದ ಸಹಿಯನ್ನು ಪಡೆದ 1983ರ 'ಕರ್ನಾಟಕ ಎಜುಕೇಶನ್ ಆಕ್ಟ್'ನ ಮೊದಲ ಚಾಪ್ಟರಿನ 7ನೇ ಪ್ರಕರಣದ 'ಸಿ' ಕಂಡಿಕೆಯ ಸಂಗತಿಯು 'ಶಿಕ್ಷಣ ಮಾಧ್ಯಮ'ದ ಬಗೆಗೆ ಸರಕಾರದ ಹೊಣೆಯನ್ನೇ ಹೇಳುತ್ತದೆ. ಹೀಗಾಗಿ ಕಲಿಕೆಯ ವಲಯದಲ್ಲಿ ಹಣ ಹೂಡಲು ಮಾಡಿಕೊಟ್ಟಿರುವ ಅವಕಾಶವನ್ನೆ ನಾಡು-ನುಡಿಯ ಎದುರಾಳಿಯಾಗಿಸಲು ಬರುವುದಿಲ್ಲ. ಆ ಮೂಲಕ ನಾಡಿನ ಚಹರೆಗಳಿಂದ ಹೊರಗುಳಿಯಲೂ ಬರುವುದಿಲ್ಲ. ಕರ್ನಾಟಕದಲ್ಲಿ, ಈ ಪ್ರಕಾರ ಶಾಲೆಗಳನ್ನು ನಡೆಸಲು ಅವಕಾಶವನ್ನು ಪಡೆದವರು ಪ್ರೈಮರಿ ಮಟ್ಟದಲ್ಲಿ ಕನ್ನಡದ ಮೂಲಕವೇ ಕಲಿಸುವುದಾಗಿ ಸರಕಾರದೊಂದಿಗೆ ಒಪ್ಪಂದವನ್ನು

ಮಾಡಿಕೊಂಡೇ ಕರ್ನಾಟಕದ ಕಲಿಕೆಯ ವಲಯದ ಹೊಣೆಯಲ್ಲಿ ಪಾಲ್ಗೊಂಡಿದ್ದಾರೆ ಎನ್ನುವುದೂ ದಿಟ. ಅದರಂತೆ, ಕರ್ನಾಟಕ ಸರಕಾರ ರೂಪಿಸಿರುವ 'ಸಿಲಬಸ್'ಅನ್ನು ಇಪ್ಲಿಮೆಂಟ್ ಮಾಡಿರುವ ಇವರು ಇಂತಹ ಹೊಣೆಯಿಂದ ತಪ್ಪಿಸಿಕೊಳ್ಳಲು ಬರುವುದಾದರೂ ಹೇಗೆ?

ಇಂಗ್ಲಿಶ್ ತಾಯಿ ನುಡಿಯಲ್ಲದವರು ಇಂಗ್ಲಿಶ್ ಮೀಡಿಯಂ ಆಗುಮಾಡುವ ಹೊಣೆಗಾರರಾಗಬೇಕೆ?

ದೇಶಕ್ಕೆ ಸ್ವಾತಂತ್ರ್ಯ ಬಂದ ಹೊತ್ತಿನಲ್ಲಿ ಆಡಳಿತದಲ್ಲಿ ಇಂಗ್ಲಿಶ್ ಬಳಕೆಯನ್ನು ಮುಂದಿನ 15 ವರುಶಗಳವರೆಗೂ ಎಂದು ಒಪ್ಪಲಾಗಿದೆ. ಆ ಹೊತ್ತಿಗೆ ಆಯಾಯ ನಾಡಿನ ನುಡಿಗಳೂ ಆಡಳಿತಕ್ಕೆ ಬೇಕಾದ ನುಡಿಬಳಕೆಗೆ ತಯಾರಾಗಬೇಕೆಂಬುದನ್ನು ಸೂಚಿಸಲಾಗಿತ್ತು. ಆದರೆ, ಆ ಹೊತ್ತಿಗೆ ದೇಶದ ಆಡಳಿತಗಾರರಾಗಲೀ, ರಾಜ್ಯಗಳ ಆಡಳಿತಗಾರರಾಗಲೀ ಆ ಹೊಣೆಯನ್ನು ನಿಬಾಯಿಸಬೇಕೆಂಬ ಆಸ್ತೆ ಮತ್ತು ದರ್ದನ್ನೇ ತಿಳಿಯಲಿಲ್ಲ. ಇದರಿಂದಾಗಿ ಆಮೇಲೆಯೂ ಆಡಳಿತದಲ್ಲಿ ಇಂಗ್ಲಿಶಿನ ಬಳಕೆಯು ಮುಂದುವರೆಯುವಂತಾಗಿದೆ. ಆದರೆ, ಇಂಗ್ಲಿಶನ್ನು ಹೀಗೆ ಇಂಡಿಯಾದ ಆಡಳಿತದಲ್ಲಿ ಎಲ್ಲಿಯವರೆಗೆ ಮುಂದುವರೆಸಬೇಕು ಎನ್ನುವ ನಿರ್ಣಯವನ್ನು ಆಗ ಮಾಡಲಿಲ್ಲ.

ಆ ಹೊತ್ತಿಗೆ ದೇಶದಲ್ಲಿ ಯಾವಯಾವ ನುಡಿಯಾಡುಗರು ಹೆಚ್ಚು ದೊಡ್ಡದಾದ ಪ್ರದೇಶದಲ್ಲಿ ವಾಸಿಸುತ್ತಿದ್ದರೋ ಅಂತಹ ಜನಬದುಕುಗಳಿಗೆ ಬೇಕಾದ ಅನುಕೂಲಗಳನ್ನು ಆಗುಮಾಡಲು 'ಭಾಷಾವಾರು ರಾಜ್ಯಗಳ ವಿಂಗಡಣೆ'ಯ ಬೆಳವಣಿಗೆಗಳು ನಡೆದವು. ಅವರಾಡುವ ನುಡಿಗಳ ಮೂಲಕವೇ ಅಲ್ಲಿನ ಜನಬದುಕಿನ ಬೇರುಗಳನ್ನು ಕಾಪಿಟ್ಟುಕೊಂಡು ದೇಶದ ಏಕತೆಯನ್ನು ಬೆಳೆಸುವ ಗುರಿಯನ್ನು ಹೊಂದಲಾಯಿತು. ಇದಕ್ಕಾಗಿ ದೊಡ್ಡದೊಡ್ಡ ಹೋರಾಟಗಳೇ ನಡೆದಿದ್ದವು. ಆದರೆ, ಈ ಬೆಳವಣಿಗೆಗೆ ಅನುಕೂಲವಾಗುವಂತೆ ನುಡಿಬಳಕೆಯನ್ನು ಆಗುಮಾಡುವಲ್ಲಿ ಸರ್ಕಾರಿ ಯಂತ್ರಗಳು ದೂರವೇ ಉಳಿದವು. ಇಂಗ್ಲಿಶರು ತೊಲಗುವವರೆಗೆ ಬಳಕೆಯಲ್ಲಿದ್ದ ಇಂಗ್ಲಿಶನ್ನೇ ಬಳಸಿ, ದೇಶದ ಯಜಮಾನಿಕೆಯಲ್ಲಿ ಮುಂದುವರೆಯುವ ಚಾಳಿಯೇ ಬೆಳೆಯಿತು. ಆ ಹೊತ್ತಿಗೆ, ಬಹುಮಟ್ಟಿಗೆ ಆಳ್ವಿಕೆ ನಡೆಸುತ್ತಿದ್ದವರು, ಆಡಳಿತವನ್ನು ನೋಡಿಕೊಳ್ಳುತ್ತಿದ್ದವರು ಈ ದೇಶದ ಮೇಲುಜಾತಿಗಳಿಂದ ಬಂದವರು ಮತ್ತು ಇಂಗ್ಲಿಶ್ ಕಲಿತವರು ಹಾಗೂ ಮೇಲುಜಾತಿ ಮತ್ತು ಇಂಗ್ಲಿಶನ್ನು 'ಅನುಕರಿಸು'ತ್ತಿದ್ದವರೇ ಆಗಿದ್ದರಿಂದಾಗಿ ಆ ಮಟ್ಟಿಗೆ ಸ್ಥಳೀಯ ನುಡಿಯು ಕನ್ನಡ ಜನಬದುಕಿನ ನಾಡಿನಲ್ಲಿ ಎರಡನೆಯದಾಗಿಯೇ ಉಳಿಯಬೇಕಾಯಿತು.

ಸರಕಾರಿ ಮತ್ತು ಖಾಸಗಿ ಯಾವುದು ಬಿಕ್ಕಟ್ಟು, ಹೇಗೆ?

ಇವತ್ತು ಜನಬದುಕಿನ ಸೇವೆಗಾಗಿ ಜನವೇ ಆರಿಸಿದವರು ಕನ್ನಡ ಜನಬದುಕಿಗೆ ಬೇಕಾದ ನಿಲುವುಗಳನ್ನು ತೆಗೆದುಕೊಳ್ಳುವ ಹೊಣೆ ಹೊತ್ತವರೇ ಆಗಿದ್ದಾರೆ. ಆದರೆ, ಅವರಲ್ಲಿ ಅನೇಕರು 'ಖಾಸಗಿ' ಅನ್ನುವ ಹೆಸರಿನಲ್ಲಿ ತಾವೇ ನಡೆಸುತ್ತಿರುವ ಸರಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಂದದಂತೆ ಶಾಲಾಕಾಲೇಜುಗಳನ್ನೂ ಮುನ್ನಡೆಸುತ್ತಿದ್ದಾರೆ. ಕೆಲವರು ತಮ್ಮವರ ಮೂಲಕ ನಡೆಸುತ್ತಿದ್ದಾರೆ. ಈ ಮೂಲಕ ಕನ್ನಡ ಜನಬದುಕುಗಳ ಬೆಳವಣಿಗೆಗೆ ಬೇಕಾದ ಕಲಿಕೆಯ ವಲಯದ ಹೊಣೆಯನ್ನೂ ಹೊತ್ತುಕೊಂಡಿದ್ದಾರೆ. ಇವತ್ತು ಈ ಬಗೆಯ ಹೊಣೆಯು ಕರ್ನಾಟಕದ ಎಲ್ಲಾ ಜಿಲ್ಲೆ, ತಾಲ್ಲೂಕು, ಎಲ್ಲಾ ಕಡೆಗಳಲ್ಲಿಯೂ ಕಾಣುತ್ತದೆ. ಹೀಗಾಗಿ, ಕರ್ನಾಟಕದ ಕಲಿಕೆಯ ವಲಯದ ಹೊಣೆಯ ಬಹಳಶ್ಟನ್ನು ಸರಕಾರದ ಒಳಗಿನದು–ಹೊರಗಿನದು ಎಂದು ತಿಳಿಯುವದೇ ತೊಡಕಾಗಿದೆ. ಜನಬದುಕಿನ ಆಡಳಿತದೊಳಗೊಂದು ಮೋರೆ, ಹೊರಕ್ಕೊಂದು ಮೋರೆ ಇಟ್ಟುಕೊಂಡಿರುವವರೇ ಕಟ್ಟುಕಟ್ಟಳೆಗಳನ್ನು ಮಾಡುವವರೂ ಆಗಿರುವಾಗ, ಕನ್ನಡ ಜನಬದುಕಿನ ಬೆಳವಣಿಗೆಗೆ ಮಾರಕವಾಗಿರುವಂತಹದ್ದು ಎಂದು ಯಾವುದನ್ನು, ಹೇಗೆ ತಿಳಿಯಬೇಕು? ಸರಕಾರವೇ ತಾವಾಗಿದ್ದೂ 'ಖಾಸಗಿ'ಯಾದವರ ಈ ಹೊಣೆಯನ್ನು ಹೇಗೆ ಗುರುತಿಸಬೇಕು? ಕೋರ್ಟು, ಕಾನೂನಿನ ತೊಡಕು ಎದುರಾದಾಗ ಇಂತವರು ಯಾವ ನಿಲುವಿನ ಪರವಾಗಿ ಕೆಲಸ ಮಾಡಬಲ್ಲರು? ಸರಕಾರದ 'ಒಳಗಿನ ಖಾಸಗಿ'ಯವರು, ಸರಕಾರದ 'ಹೊರಗಿನ ಖಾಸಗಿ'ಯವರು, ಇದರ ಗುರುತುಗಳನ್ನು ತಿಳಿಯುವುದು ಹೇಗೆ? ಹಣ ಹೂಡಿ ಹಣ ಮಾಡಲು ಹೊರಟಿರುವ ಇವರಲ್ಲಿ ಯಾರನ್ನು ಕಲಿಕೆಯ ದಾರಿ(ಮೀಡಿಯಂ)ಯಾಗಿ 'ಇಂಗ್ಲಿಶಿನ ಬೆನ್ನು ಹತ್ತಿದವರು' ಮತ್ತು ಯಾರನ್ನು 'ಇಂಗ್ಲಿಶಿನ ಬೆನ್ನು ಹತ್ತದವರು' ಎಂದು ತಿಳಿಯಬೇಕು? ಮತ್ತು ಹೇಗೆ? 'ರಾಷ್ಟ್ರಪತಿ'ಗಳಿಂದ 'ಅಧಿಕೃತ'ಗೊಂಡ 1983ರ ಕರ್ನಾಟಕ ಎಜುಕೇಶನ್ ಆಕ್ಟ್'ನಲ್ಲಿರುವಂತೆ 'ಕಲಿಕೆಯ ಮೀಡಿಯಂ' ಅನ್ನು ನಿರ್ಣಯಿಸುವ ಹಕ್ಕು ರಾಜ್ಯ ಸರಕಾರದ್ದು ಎನ್ನುವುದನ್ನು ಸುಪ್ರೀಂ ಕೋರ್ಟಿನಲ್ಲಿ ಸರಿಯಾಗಿ ಮಂಡಿಸದಿರುವುದರ ಗುರಿ ಏನು ಹಾಗಿದ್ದರೆ?

ಇಂಗ್ಲಿಶ್ ಪರವಾದ ತೀರ್ಪಿನ ಸನ್ನಿವೇಶ

ಈ ತೀರ್ಪು, ಡೆಮಾಕ್ರಸಿಯನ್ನು ತಪ್ಪಾಗಿ ಬಳಸಿರುವುದರ ಪರಿಣಾಮ, ಇಂಡಿಯಾದ ಬದುಕುಗಳ ಗುರುತನ್ನು ಕಳೆಯುವ ಗುರಿಯದು, ಇಲ್ಲಿನ ಸ್ತಳೀಯತೆಗೆ ಒಡ್ಡಿದ ಬೆದರಿಕೆಯಂತೆ ಕಾಣುತ್ತಿದೆ ಎಂದು ಯಾಕೆ ಹೇಳಬೇಕಾಗಿದೆ ಎಂದರೆ; ಜನನುಡಿಯ ಬಳಕೆಯ ಜಾಗಗಳನ್ನು ಒಂದುಮಾಡಿ ಕಟ್ಟಿಕೊಂಡಿರುವ ರಾಜ್ಯಗಳ ಇರವನ್ನು ಇಂಡಿಯಾದ ಸಂವಿದಾನವೇ ಒಪ್ಪಿದೆ. ದೇಶವು ಮಾಡಿಕೊಂಡಿರುವ ಶಾಸನಗಳ

ಮೂಲಕ ಅಂತಹ ನುಡಿಗಳನ್ನು ದೇಶದ ಒಪ್ಪಿತ ನುಡಿಗಳೆಂದು ಸಾರಿದೆ. ಕನ್ನಡವೂ ಸಂವಿದಾನದ ಈ ಸರಹದ್ದಿನಲ್ಲಿದೆ.

ಇಂಡಿಯಾದ ಸ್ಥಳೀಯತೆಗೆ ಚಾಟಿಯ ಏಟಿನಂತೆ ಕಾಣತೊಡಗಿದ್ದು 2014ರ ಪೆಬ್ರವರಿಯ ಸುಪ್ರೀಂಕೋರ್ಟಿನ ತೀರ್ಪಿನ ಸನ್ನಿವೇಶದಲ್ಲಿ. ಕರ್ನಾಟಕ ಸರಕಾರದ ಮೇಲ್ಮನವಿಯ ಸರಿತಪ್ಪುಗಳ ಲೆಕ್ಕಾಚಾರದ ಸನ್ನಿವೇಶದಲ್ಲಿ. 1994ರ 'ಕನ್ನಡದಲ್ಲಿ ಕಲಿಕೆ'ಯ ಆದೇಶವನ್ನು ಸರಕಾರಿ ಶಾಲೆಗಳು ಮತ್ತು ಅನುದಾನಿತ ಶಾಲೆಗಳಿಗೆ ಜಾರಿ ಮಾಡಬಹುದು. ಆದರೆ 'ಅನುದಾನ ರಹಿತ ಖಾಸಗಿ ಶಾಲೆ' ಗಳಿಗೆ ಇದು ಒಳಪಡುವಂತಹುದಲ್ಲ ಎಂಬ ಕರ್ನಾಟಕ ಹೈಕೋರ್ಟಿನ 2008ರ ತೀರ್ಪು ಸರಿಯಲ್ಲವೆಂದು ಕೇಳಿ ಸಲ್ಲಿಸಿದ ಮನವಿಯ ಮೇರೆಗೆ ಕೊಟ್ಟ ತೀರ್ಪಿನಲ್ಲಿ. ಸಂವಿಧಾನದ ಕಲಂ 350(ಎ) ಪ್ರಕಾರ ರಾಜ್ಯ ಸರಕಾರಕ್ಕೆ 'ಕಲಿಕೆಯ ಮೀಡಿಯಂ'ಅನ್ನು ತೀರ್ಮಾನಿಸುವ ಅಧಿಕಾರವಿದೆ' ಎನ್ನುವ ಮಂಡನೆಯ ಹೊತ್ತಿನಲ್ಲಿ.

ಕನ್ನಡನಾಡಿನ ಮಕ್ಕಳು 'ಯಾವ ನುಡಿಯನ್ನು ಬಳಸಿ(ಮೀಡಿಯಂ) ಓದು-ಬರೆಹ ಕಲಿಯಬೇಕು' ಎನ್ನುವ ಕುರಿತಾಗಿ ಕರ್ನಾಟಕ ಸರಕಾರ ದೊಡ್ಡ ಸವಾಲೊಂದನ್ನು ಮುಂದಿಟ್ಟುಕೊಂಡು, ಕರ್ನಾಟಕ ಜನತೆಗೆ ನುಡಿನ್ಯಾಯ ಒದಗಿಸಲಾಗದ ಇಕ್ಕಟ್ಟಿಗೆ ಸಿಕ್ಕಿಕೊಂಡಿದೆ ಇವತ್ತು. ಕಲಿಸುವ ಕೆಲಸವನ್ನು, ಅದಕ್ಕಾಗಿ ಹಣ ಹೂಡುವ ಯಾರು ಬೇಕಾದರೂ ಮಾಡಬಹುದು ಎನ್ನುವ 'ಖಾಸಗೀಕರಣ'ದ ಒಲುಮೆಯಿಂದಾಗಿ ಸರಕಾರ ತಾನೇ ರೆಡಿ ಮಾಡಿಕೊಂಡ ಉರುಳು ಇದು. ಕನ್ನಡ-ಕರ್ನಾಟಕಗಳನ್ನು ಕಾಪಾಡುವ ನುಡಿನ್ಯಾಯವನ್ನು ಹಣವಿರುವವರಿಗೆ ಮಾರಿಕೊಂಡು 'ತಾಯಿನುಡಿ-ಮನೆಮಾತಿ'ನಲ್ಲಿ ಕಲಿಯುವ ಕಲಿಕೆಯ ಫಿಲಾಸಫಿಗಳನ್ನು ಸುಪ್ರೀಂಕೋರ್ಟಿಗೆ ಅರಿವು ಮಾಡಿಕೊಡಲು ಹೋಗಿ ಮುಗ್ಗರಿಸಿದೆ, ಕರ್ನಾಟಕದ ಆಡಳಿತ. ಇದರ ಜೊತೆಗೆ, ಹತ್ತು ಹಲವು ಬಗೆಗಳಲ್ಲಿ 'ಖಾಸಗೀಕರಣ'ದಲ್ಲಿ ಪಾಲುದಾರರಾಗಿದ್ದೂ ಸರಕಾರಿ ಆಡಳಿತವನ್ನು ನಡೆಸುವವರ ಬಗೆಯೆಂದು ತಿಳಿಯಬೇಕೇ ಇದನ್ನು. ಬಲುದೊಡ್ಡ ಅಣಕ ಇದು.

ನುಡಿಯ ಗುರುತುಗಳ ಮೂಲಕವೇ ಹೋರಾಟವನ್ನು ನಡೆಸಿ ಕಟ್ಟಿಕೊಂಡ ರಾಜ್ಯವೊಂದರ ಬೆಳವಣಿಗೆಯಲ್ಲಿ ಯಾಕೆ ಹೀಗಾಗಿದೆ? ಎಡವಿದ್ದು ಎಲ್ಲಿ? ಹೇಗೆ? ಮತ್ತು ಯಾಕೆ? ಈ ಸಂಗತಿಗಳು ಕನ್ನಡ ಜನತೆಯನ್ನು ಬಹಳವಾಗಿ ಕಾಡತೊಡಗಿವೆ. ಇದರ ಬೇರು ಬುಡಗಳನ್ನು ತಿಳಿಯಲಾಗದವರು ತಮಗೆ ತೋಚಿದ ಅನುಕೂಲಗಳ ಬಗೆಗೆ ಮಾತಾಡುತ್ತಿದ್ದರೆ, ತಿಳಿದೂ, ಇದರಿಂದ ತಮಗಿರುವ ಯಜಮಾನಿಕೆ-ಹಣದ ಕೊಳ್ಳೆಗಳನ್ನು ಬಿಟ್ಟುಕೊಡಲಾಗದವರು ಗೋಸುಂಬೆಗಳಂತೆ ನಡೆದುಕೊಳ್ಳುತ್ತಿದ್ದಾರೆ. ಕಾಲಕಾಲಕ್ಕೆ ಬದಲಾಗುತ್ತಾ ಬಂದಿರುವ ಕರ್ನಾಟಕದ ಆಡಳಿತದ ಮುಂದಾಳತ್ವವು ಕೂಡ ಕನ್ನಡವನ್ನು ಬಳಸುವ

ಕೆಲಸದಲ್ಲಿ ಅಡ್ಡಗೋಡೆಯ ಮೇಲೆ ದೀಪ ಇರಿಸಿಕೊಂಡು ಬಂದಿದೆ. ಒಂದುಕಡೆ ಇಂಗ್ಲಿಶಿನ ಅಡ್ಡಗೋಡೆಯ ಮೇಲೆ ಕನ್ನಡದ ದೀಪವನ್ನು ಇರಿಸಿದ್ದರೆ, ಇನ್ನೊಂದು ಕಡೆಯಿಂದ ಕನ್ನಡವನ್ನೇ ಅಡ್ಡಗೋಡೆ ಮಾಡಿಕೊಂಡು ಇಂಗ್ಲಿಶ್ ದೀಪದ ಬೆಳಕಿನಲ್ಲಿ ನಾಡನ್ನು ಮುನ್ನಡೆಸುವ ನಿರ್ಣಯಗಳನ್ನು ಮಾಡಿರುವುದು ನಿಚ್ಚಳವಾಗಿ ಕಾಣುತ್ತದೆ.

1956ರಲ್ಲಿ ರಾಜ್ಯ ರೂಪುಗೊಂಡ ಮೇಲೆ ಕನ್ನಡ 'ಈ ರಾಜ್ಯದ ಸರಕಾರಿ ಉದ್ದೇಶಗಳಿಗಾಗಿ ಉಪಯೋಗಿಸಬೇಕಾದ' ನುಡಿ ಎನಿಸಿಕೊಂಡಿದ್ದು ಏಳು ವರುಶಗಳು ಕಳೆದು, 1963ರ ಅಕ್ಟೋಬರ್ 10ರಂದು ಹೊರಡಿಸಿದ ರಾಜ್ಯಪತ್ರದ ಮೂಲಕ[7]. 'ಕನ್ನಡವು ಕರ್ನಾಟಕ ರಾಜ್ಯದ ರಾಜಭಾಷೆಯಾಗಿ ಇರತಕ್ಕುದು' ಎಂದು ಹೇಳುವ ಈ ಆದೇಶದಲ್ಲಿ 'ರಾಜ್ಯದ ಸರ್ಕಾರಿ ಉದ್ದೇಶಗಳಿಗಾಗಿ ಉಪಯೋಗಿಸಬೇಕಾದ ಭಾಷೆಯೆಂದು ಕನ್ನಡವನ್ನು ಅಂಗೀಕರಿಸಲು' ಮಾಡಿಕೊಂಡ ಈ 'ಅಧಿನಿಯಮ'ವು

- 'ರಾಜ್ಯದ ವಿಧಾನಮಂಡಲದ ವ್ಯವಹಾರದ ನಿರ್ವಹಣೆಗಾಗಿ ಇಂಗ್ಲಿಶಿನ ಉಪಯೋಗವನ್ನು ಮುಂದುವರಿಸುವ' 'ಅಧಿನಿಯಮ'ವೂ ಆಗಿದೆ.
- ಈ 'ಮುಂಚೆ ರಾಜ್ಯದ ಯಾವ ಸರ್ಕಾರಿ ಉದ್ದೇಶಗಳಿಗಾಗಿ ಇಂಗ್ಲಿಶ್ ಭಾಷೆಯನ್ನು ಉಪಯೋಗಿಸಲಾಗುತ್ತಿದ್ದಿತೋ ಅವೆಲ್ಲಕ್ಕೂ ಅದನ್ನು ಉಪಯೋಗಿಸುವುದನ್ನು ಮುಂದುವರಿಸತಕ್ಕುದು' ಎನ್ನುವ ರೂಲನ್ನೂ ಇದು ಒಳಗೊಂಡಿದೆ.
- 'ಸಂವಿಧಾನವು ಪ್ರಾರಂಭವಾದಂದಿನಿಂದ ಹದಿನೈದು ವರುಶಗಳ ಅವಧಿ ಗತಿಸಿದರೂ, 1965ರ ಜನವರಿ 26ನೇ ದಿನಾಂಕದಿಂದ ರಾಜ್ಯದ ವಿಧಾನಮಂಡಲದ ವ್ಯವಹಾರ ನಿರ್ವಹಣೆಗಾಗಿ ಕನ್ನಡ ಮತ್ತು ಹಿಂದಿಯ ಜೊತೆಗೆ ಇಂಗ್ಲಿಶ್ ಭಾಷೆಯ ಉಪಯೋಗವನ್ನು ಮುಂದುವರಿಸಬಹುದು' ಎಂದೂ ಹೇಳಿದೆ.
- ಕನ್ನಡವನ್ನು 'ರಾಜ್ಯಪಾಲರಿಂದ ಪ್ರಖ್ಯಾಪಿಸಲಾದ ಯಾವುದೇ ಅಧ್ಯಾದೇಶದಲ್ಲಿ, ರಾಜ್ಯ ಸರ್ಕಾರದಿಂದ ಹೊರಡಿಸಲಾದ ಯಾವುದೇ ಆದೇಶ, ನಿಯಮ, ವಿನಿಯಮ ಅಥವಾ ಉಪವಿಧಿಯಲ್ಲಿ–ಸಹ ಬಳಸಬಹುದು' ಎಂದು ಮಾತ್ರ ವಿವರಿಸುತ್ತದೆ.

[7] ಆಡಳಿತ ಕನ್ನಡ ಅನುಷ್ಠಾನ–ಅದೇಶಗಳ ಸಂಕಲನ, ೧೯೯೩, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು

- ಅಧ್ಯಾದೇಶ, ಆದೇಶ, ನಿಯಮ, ವಿನಿಯಮ ಅಥವಾ ಉಪವಿಧಿ, ಮೊದಲಾಗಿ ಯಾವುದೇ ಅಧಿನಿಯಮಗಳ 'ಕನ್ನಡ ಭಾಷಾಂತರ'ವನ್ನು ಅವಲಂಬಿಸುವುದನ್ನು ಮಾತ್ರವೇ ಜಾರಿಗೊಳಿಸಿದ್ದನ್ನು ಮಂಡಿಸುತ್ತದೆ.
- ರಾಜ್ಯಪತ್ರದ ಅಧಿಸೂಚನೆಯ 'ಕನ್ನಡ ಭಾಷಾಂತರ'ವನ್ನೇ 'ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕುದು' ಎಂದು ಆದೇಶಿಸಲಾಗಿದೆ.

ಜೊತೆಗೆ 'ಈ ಅಧಿಸೂಚನೆಯ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ವಿಧಿ ಮಾನ್ಯತೆಗೆ ಬಾಧೆಯುಂಟುಮಾಡತಕ್ಕುದಲ್ಲ' ಎನ್ನುವ ಎಚ್ಚರಿಕೆಯನ್ನೂ ಹೊರಡಿಸಲಾಗಿದೆ. ಅಂದರೆ ಕರ್ನಾಟಕ ರಾಜ್ಯ ರೂಪುಗೊಂಡ ಮೇಲೆ ಜನಬದುಕನ್ನು ಒಳಗೊಳ್ಳುವಂತೆ ಕನ್ನಡದಲ್ಲಿ ಏನೆಲ್ಲಾ ರಾಜಕೀಯ ಬೆಳವಣಿಗೆಗಳು ಆಗಬೇಕು ಎನ್ನುವ ಗುರಿಯು ಹಿಂದೆ ಸರಿದಿದೆ. ಇದನ್ನು ಆಡಳಿತದಲ್ಲಿ ಬಳಕೆಯ ಕನ್ನಡವನ್ನು ಕುರಿತ ನಿರ್ಣಯದ ಮೊದಲ ಹೆಜ್ಜೆಯಲ್ಲಿಯೇ ಕಾಣಬಹುದಾಗಿದೆ. ಬದಲಾಗಿ ಆಡಳಿತವು ಕರ್ನಾಟಕದ ಜನಬದುಕಿಗೆ ದಕ್ಕದಂತೆ, ತಿಳಿಯದಂತೆ ಮಾಡುವ 'ನಿರ್ದೇಶನಗಳು, ನಿಯಂತ್ರಣ'ಗಳೇ ಮುಂದಿನ ದಿನಗಳಲ್ಲಿ ಮೇಲುಗೈ ಪಡೆಯಲು ಈ ಆದೇಶ ಕಾರಣವೂ ಆಗಿದೆ. ಇದನ್ನು 'ಕನ್ನಡ ಬಳಕೆ'ಯ ಮುಂದಿನ ಆದೇಶಗಳಲ್ಲಿ, ನುಡಿನೀತಿ, ನುಡಿಯೋಜನೆಗಳಲ್ಲಿ ಕಾಣುವ ಹೊಣೆಗೇಡಿತನವನ್ನು ಗ್ರಹಿಸಿದರೆ ನಿಖರವಾಗಿ ತಿಳಿಯುತ್ತದೆ[8].

ಕೆ.ವಿ.ನಾರಾಯಣ[9] ಅವರು ಹೇಳುವಂತೆ ಪ್ರಜಾಪ್ರಭುತ್ವದ ನಡೆಗಳಲ್ಲಿ ತಿಳುವಳಿಕೆಯು ಯಾರೋ ಕೆಲವರ ಸ್ವತ್ತಾಗುವುದು ಸರಿಯಾದುದಲ್ಲ. ಮಾಹಿತಿ ಮತ್ತು ಅರಿವು ಯಾರಿಗೆ ಬೇಕಾದರೂ, ಯಾವಾಗ ಬೇಕಾದರೂ ಸಿಗುವಂತೆ ಆಗಬೇಕಾದುದು ಅಗತ್ಯ. ಈ ನಿಟ್ಟಿನಿಂದ ನುಡಿಬಳಕೆಯ ಗುರಿಗಳು ಹೆಚ್ಚಾದಂತೆ ಎದುರಾಗುವ ತೊಡಕುಗಳನ್ನು, ಬಳಸುವವರೇ ಪರಿಹರಿಸಿಕೊಳ್ಳಲು ಅನುಕೂಲವಾಗುವ ಸನ್ನಿವೇಶಗಳನ್ನು ಕೂಡ ಕಂಡುಕೊಳ್ಳಬೇಕಾಗುತ್ತದೆ. ಹಲವು ನುಡಿಗಳನ್ನು ಆಡುವ ಜನಗುಂಪುಗಳು ಹೆಚ್ಚಾಗುತ್ತಿರುವ ಇವತ್ತಿನ ಸನ್ನಿವೇಶದಲ್ಲಿ, ಯಾವ ಯಾವ ನುಡಿಯನ್ನು ಕಲಿಯಬೇಕು, ಕಲಿಯಲು ಅನುಕೂಲವಾಗುವ ದಾರಿಗಳು ಯಾವುವು, ಯಾಕೆ, ಎಷ್ಟು ಎನ್ನುವ ಅಗತ್ಯಗಳನ್ನು ಕಂಡುಕೊಳ್ಳಬೇಕು. ಹೀಗೆ ಎದುರಾಗುವ ಹಲವು

[8] ಇಂತಹ ನಿರ್ಣಯಗಳಿಗೆ ಬೆಂಬಲವಾಗಿ ಸಂವಿಧಾನ ರೂಪಿಸಿದ ನುಡಿನೀತಿ ಮತ್ತು ಜನತೆಯ ಬದುಕಿಗೆ ಬೇಕಾದ ನುಡಿನೀತಿ ಇವೆರಡೂ ಒಂದೇ ದಿಕ್ಕಿನಲ್ಲಿ ಸಾಗಿಲ್ಲದಿರುವುದನ್ನು, ಈ ನಂಟಿನ ಹೊಣೆಗೇಡಿತನಗಳ ಬೆಳವಣಿಗೆಗಳನ್ನು ಕೆ.ವಿ.ನಾರಾಯಣ ಅವರು 'ಕನ್ನಡ ಜಗತ್ತು ಅರ್ಧ ಶತಮಾನ. ೨೦೦೭. ಕನ್ನಡ ವಿ.ವಿ. ಹಂಪಿ' ಈ ಪುಸ್ತಕದಲ್ಲಿ ವಿವರವಾಗಿ ಚರ್ಚಿಸಿದ್ದಾರೆ.

[9] ಕನ್ನಡ ಜಗತ್ತು ಅರ್ಧ ಶತಮಾನ: ಕೆ.ವಿ.ನಾರಾಯಣ, ೨೦೦೭, ಕನ್ನಡ ವಿ.ವಿ ಹಂಪಿ

ನುಡಿಗಳಲ್ಲಿ ಯಾವ ನುಡಿಯನ್ನು ಎಲ್ಲಿ, ಹೇಗೆ ಬಳಸಬೇಕು ಎನ್ನುವುದನ್ನೂ ತೋರಿಸಿಕೊಡುವ ಅಗತ್ಯ ಮತ್ತು ಹೊಣೆಯನ್ನು ಪ್ರಭುತ್ವ ಹೊತ್ತುಕೊಳ್ಳಬೇಕಾಗುತ್ತದೆ. ಕನ್ನಡಕ್ಕೆ ಎದುರಾದ ಈ ಸನ್ನಿವೇಶವನ್ನು ನೋಡಿದರೆ, ಸಂಪರ್ಕನುಡಿಯಾಗಿ ಅವಕಾಶ ಪಡೆದ–ಇವತ್ತಿಗೂ ಆ ನೆಪದಲ್ಲಿಯೇ ಆವರಿಸಿಕೊಂಡಿರುವ– ಇಂಗ್ಲಿಶ್, ಕನ್ನಡದಲ್ಲಿ ಏನು ನಡೆಯಬೇಕು, ಎಷ್ಟು ನಡೆಸಬೇಕು, ನಡೆಯಕೂಡದ್ದು ಏನು ಎನ್ನುವುದನ್ನು ನಿರ್ಧರಿಸುವ ನಿಯಂತ್ರಕದಂತೆ ಆಳುತ್ತಿದೆ. ಇದರಿಂದಾಗಿ 'ಇಂಗ್ಲಿಶಿನ ಬದಲು ಕನ್ನಡ ಎಂದಾಗದೆ, ಇಂಗ್ಲಿಶಿನ ಜೊತೆಯಲ್ಲಿ ಕನ್ನಡ' ಎನ್ನುವಂತಾಗಿ, ಇಂಗ್ಲಿಶೇ ಇರಲಿ ಎನ್ನುವ ಹಂತಕ್ಕೆ ಮುಟ್ಟಿಬಿಟ್ಟಿದೆ.

ಹೈದರಾಬಾದ್ ಕರ್ನಾಟಕದಂತಹ ಕೆಲವು ಪ್ರದೇಶಗಳನ್ನು ಬಿಟ್ಟರೆ, ಇಂಜಿನಿಯರಿಂಗ್, ಮೆಡಿಕಲ್ ಮತ್ತು ಯೂನಿವರ್ಸಿಟಿಯ ಹೆಚ್ಚಿನ ಓದುಗಳನ್ನು ಹೊರತುಪಡಿಸಿದಂತೆ ಕರ್ನಾಟಕದಲ್ಲಿ ಕಲಿಕೆಯು ಸಾಮಾನ್ಯವಾಗಿ ಕನ್ನಡನುಡಿಯ ಮೂಲಕವೇ ನಡೆಯುತ್ತಿತ್ತು. ಕ್ರಮೇಣ ಯೂನಿವರ್ಸಿಟಿಯ ಓದುಗಳೂ ಕನ್ನಡದ ಮೂಲಕ ನಡೆಯಬೇಕೆಂಬ ಇರಾದೆಗೆ ಚಾಲನೆಯೂ ಸಿಕ್ಕಿತ್ತು. ಆದರೆ, ಕಳೆದ ಶತಮಾನದ ಎಪ್ಪತ್ತು–ಎಂಬತ್ತರ ದಶಕದಲ್ಲಿ ಹಣವುಳ್ಳವರು ಪ್ರೈವೇಟಾಗಿ ಸ್ಕೂಲು ಕಾಲೇಜುಗಳನ್ನು ನಡೆಸಲು ಅವಕಾಶ ತೆರೆದುಕೊಂಡ ಮೇಲೆ, ಸರ್ಕಾರ ತನ್ನ ಮೇಲಿದ್ದ 'ಕಲಿಕೆಯ ಸಾರ್ವಜನಿಕ ಹೊಣೆ'ಯನ್ನು 'ಖಾಸಗಿ'ಯವರಿಗೆ ಬಿಟ್ಟುಕೊಟ್ಟಂತಾಯಿತು. ಈ ಅವಕಾಶವನ್ನು ಪಡೆದ ಪ್ರೈವೇಟ್ ಶಾಲೆಗಳು ಕನ್ನಡವನ್ನು ಕಲಿಕೆಯ ನುಡಿಯನ್ನಾಗಿ ಪ್ರಾಥಮಿಕ ಮಟ್ಟದಲ್ಲಾದರೂ ಬಳಸಬೇಕೆಂಬ ಕಟ್ಟುಗಳನ್ನು ಗಾಳಿಗೆ ತೂರುವುದು ಶುರುವಾಯಿತು. ಕೆಲಸಕ್ಕಾಗಿಯೇ ಕಲಿಯುವ ಹೆಚ್ಚಿನ ಓದು (ಹೈಯರ್ ಎಜುಕೇಶನ್)ಗಳಲ್ಲಿ ಇಂಗ್ಲಿಶೇ ಇರುವುದರಿಂದಾಗಿ ಪ್ರೈಮರಿಯಿಂದ ಇಂಗ್ಲಿಶ್ ಕಲಿಸುವುದೇ ಸರಿಯಾದ ದಾರಿ ಎಂದು ನಂಬಿಸುವುದು ಕಂಡಿತು. ಇಂಗ್ಲಿಶ್ ಮೀಡಿಯಂ ಮೂಲಕ ಕಲಿಯುವುದರ ಪರವಾಗಿ ನಿಲ್ಲುವುದು ಹಣಮಾಡುವ ದಂದೆಯೂ ಆಗಿಬಿಟ್ಟಿತು. ಕೆವಿಎನ್[10] ಅವರು ಗುರುತಿಸುವಂತೆ; 'ಇಂಗ್ಲಿಶಿಗೆ ಹೆಚ್ಚಿನ ಮಾನ್ಯತೆಯಿದೆ, ಇಂಗ್ಲಿಶ್ ದುಡಿಮೆಯ ಅವಕಾಶಗಳನ್ನು ಹೆಚ್ಚಿಸುವುದಲ್ಲದೆ, ಬೇರೆ ರಾಜ್ಯಗಳಲ್ಲಿನ ಅವಕಾಶಗಳಿಗೆ ಇದರಿಂದ ಅನುಕೂಲವಾಗುತ್ತದೆ, ಸಾಮಾಜಿಕ ಗೌರವದಿಂದಾಗಿ ಜನ ತಮ್ಮ ಮಕ್ಕಳನ್ನು ಇಂಗ್ಲಿಶಿನಲ್ಲಿ ಕಲಿಸಲು ಒಲವುಳ್ಳವರಾಗಿದ್ದಾರೆ, ಇಂಗ್ಲಿಶಿನಲ್ಲಿ ಕಲಿಯುವುದರಿಂದ ಹೊಸಹೊಸ ದುಡಿಮೆಯ ಅವಕಾಶಗಳನ್ನು ಪಡೆಯಬಹುದು, ಕಲಿಕೆಯನ್ನು ಆಗುಮಾಡುವಲ್ಲಿ ಇಂಗ್ಲಿಶ್ ಶಾಲೆಗಳಿಗೆ ಸರ್ಕಾರಿ ಶಾಲೆಗಳಿಗಿಂತ ಬೇರೆಯೇ ಬೆಲೆಯಿದೆ' ಎಂದು ನಂಬಿಸುವುದರ ಕಡೆಗೆ ಈ ಕಲಿಕೆಯ 'ಖಾಸಗಿತನ'ವು ಕೆಲಸ ಮಾಡಿತು. ಸರ್ಕಾರ ಕೂಡ ಕನ್ನಡನುಡಿಯ ಮೂಲಕ ಕಲಿಸಬೇಕೆಂಬ ಕಟ್ಟುಗಳನ್ನು ಅಳವಡಿಸಿಕೊಳ್ಳಲು ಬೇಕಾದ

[10] ಅದೇ..

ಯೋಜನೆಯನ್ನೂ ರೂಪಿಸಲಿಲ್ಲ. ಹೀಗಾಗಿ ಯಾವ ನುಡಿಯಲ್ಲಿ ಓದಬೇಕು ಎನ್ನುವ ಆಯ್ಕೆಯಲ್ಲಿ ಕನ್ನಡದ ಬಗೆಗೆ ತಿರಸ್ಕಾರ ಮನೆಮಾಡಲು ಇದು ಅವಕಾಶವನ್ನು ಒದಗಿಸಿಕೊಟ್ಟಿತು.

'ಆಡಳಿತವನ್ನು ಜನರ ಹತ್ತಿರಕ್ಕೆ ಒಯ್ಯಲು, ಶ್ರೀಸಾಮಾನ್ಯನ ಕಷ್ಟಸುಖಗಳಿಗೆ ಸ್ಪಂದಿಸಲು ಜನಸಾಮಾನ್ಯರ ಭಾಷೆಯೇ ಮುಖ್ಯ ಸಂಪರ್ಕ ಸಾಧನ. ಪ್ರಜಾಪ್ರಭುತ್ವದ ಯಶಸ್ಸಿಗೂ ಇದೇ ಕಾರಣ', 'ಕರ್ನಾಟಕದಲ್ಲಿ ಕನ್ನಡವೇ ರಾಜ್ಯಭಾಷೆ ಆಗಿರತಕ್ಕದ್ದು ಎಂಬ ತತ್ವವನ್ನು 1963ರಲ್ಲಿಯೇ ಕರ್ನಾಟಕ ಸರ್ಕಾರ ಒಪ್ಪಿಕೊಂಡಿದೆ. ಭಾಷಾವಾರು ಪ್ರಾಂತರಚನೆಯ ಉದ್ದೇಶವೂ ಅದೇ ಆಗಿದೆ', 'ಕರ್ನಾಟಕದಲ್ಲಿ 1–4–1968ರಿಂದ ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ, 15–8–1972ರಿಂದ ಜಿಲ್ಲಾಮಟ್ಟದ ಕಛೇರಿಗಳಲ್ಲಿ, 1–11–1979ರಿಂದ ಸಚಿವಾಲಯವೂ ಸೇರಿದಂತೆ ಆಡಳಿತದ ಎಲ್ಲಾ ಹಂತಗಳಲ್ಲಿ ಕನ್ನಡವನ್ನು ಜಾರಿಗೊಳಿಸಬೇಕೆಂದು ರಾಜ್ಯಸರ್ಕಾರ ಆದೇಶಗಳನ್ನು ಹೊರಡಿಸಿದೆ' ಎನ್ನುವ ಮಾತುಗಳನ್ನು ಸರ್ಕಾರಿ ಕಡತಗಳಲ್ಲಿ, 'ಕನ್ನಡ ಅಭಿವೃದ್ಧಿ ಪ್ರಾಧಿಕಾರ'ದ ಹೊಣೆ ಹೊತ್ತವರ ಮಾತುಗಳಲ್ಲಿ ನೋಡುತ್ತಲೇ ಇದ್ದೇವೆ[11]. 1968ರಲ್ಲಿ ತಾಲ್ಲೂಕು ಮಟ್ಟದಲ್ಲಿ, 1970ರಲ್ಲಿ ಉಪವಿಭಾಗ ಮಟ್ಟದಲ್ಲಿ, 1972ರಲ್ಲಿ ಜಿಲ್ಲಾಮಟ್ಟದಲ್ಲಿ, 1979ರಿಂದ ರಾಜ್ಯಮಟ್ಟದಲ್ಲಿ ಕನ್ನಡವನ್ನು ಆಡಳಿತ ನುಡಿಯಾಗಿ ಬಳಸಬೇಕೆಂದು ಕಟ್ಟಳೆಗಳನ್ನು ಹೊರಡಿಸಿರುವುದು, ಅದನ್ನು ಬಳಸಲು ಪ್ರಯತ್ನಿಸಿರುವುದು ಕಾಣುತ್ತದೆ. ಸ್ಥಳೀಯ ಆಡಳಿತದಲ್ಲಿ ಕನ್ನಡವನ್ನು ಬಳಸಲು 1981ರಲ್ಲಿ 'ಕರ್ನಾಟಕ ರಾಜಭಾಷಾ ಅಧಿನಿಯಮ'ವನ್ನೇ ಹೊರಡಿಸಿ ಜಾರಿಗೊಳಿಸಲಾಗಿದೆ. 'ಕನ್ನಡ ದೈನಿಕಗಳಲ್ಲಿ ಜಾಹಿರಾತುಗಳನ್ನು ಕನ್ನಡದಲ್ಲಿಯೇ ನೀಡುವ ಕುರಿತು(1998)' 'ಸರ್ಕಾರಿ ವಾಹನಗಳ ಮೇಲೆ ಕನ್ನಡ ನೋಂದಣಿ ಸಂಖ್ಯೆಯನ್ನು ಅಳವಡಿಸುವ ಬಗ್ಗೆ(2000)' 'ಸಚಿವಾಲಯ ಹಂತದಲ್ಲಿ ಕನ್ನಡ ಅನುಷ್ಠಾನ ವಿಭಾಗ(2001)'ವನ್ನು ರಚಿಸಿ, 'ಪಟ್ಟಣಗಳ ಕನ್ನಡೀಕರಣ(2002)', ಮಹಾನಗರ ಪಾಲಿಕೆಗಳಲ್ಲಿ ಕನ್ನಡೀಕರಣ(2002)', 'ಸರ್ಕಾರಿ ಸಮಾರಂಭಗಳ ಬ್ಯಾನರ್‌ಗಳಲ್ಲಿ ಕನ್ನಡ ಬಳಕೆ(2002)', 'ಅಧೀನ ನ್ಯಾಯಾಲಯಗಳಲ್ಲಿ ಕನ್ನಡವನ್ನು ಬಳಸುವ ಬಗ್ಗೆ(2003)', 'ಮುಖ್ಯಮಂತ್ರಿಯೂ ಸೇರಿದಂತೆ ಮಂತ್ರಿಗಳ ಎಲ್ಲಾ ಹಂತಗಳ ಕಡತಗಳ ಟಿಪ್ಪಣಿಗಳನ್ನು ಕನ್ನಡದಲ್ಲಿ ದಾಖಲಿಸುವ ಬಗ್ಗೆ(2007)', 'ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ ಆಡಳಿತದಲ್ಲಿ ಕನ್ನಡ ಅನುಷ್ಠಾನದ ಬಗ್ಗೆ(2009)' ಸರಕಾರದಿಂದ ಆದೇಶಗಳು ಹೊರಡಿಸಿರುವುದು ಕಾಣಿಸುತ್ತದೆ. ಇಂಗ್ಲಿಸಿನ ಬೆರಳಚ್ಚು ಯಂತ್ರಗಳನ್ನು ಪಕ್ಕಕ್ಕಿರಿಸಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಒದಗಿಸುವುದು, ಕನ್ನಡ ಬಳಕೆಗೆ ಅನುಕೂಲವಾಗುವಂತಹ ಸಹಾಯಕ ಸಾಹಿತ್ಯವನ್ನು

---

[11] ಆಡಳಿತ ಕನ್ನಡ ಅನುಷ್ಠಾನ–ಅದೇಶಗಳ ಸಂಕಲನ, ೧೯೯೩. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು

ತಯಾರಿಸಿರುವುದು, ಕೇಂದ್ರ ಹಾಗೂ ರಾಜ್ಯ 'ಅಧಿನಿಯಮ'ಗಳನ್ನು ಕನ್ನಡಕ್ಕೆ ಅನುವಾದಿಸಿರುವುದು, ಕನ್ನಡ ತರಬೇತಿಗಳನ್ನು ಆಗುಮಾಡಿರುವುದು, ಕನ್ನಡ ಬಳಕೆಯ ಬೆಳವಣಿಗೆಯನ್ನು ತಿಂಗಳುತಿಂಗಳಿಗೂ ನೋಡಿ ದಾಖಲಿಸುತ್ತಿರುವುದು ನಡೆದೇ ಇದೆ. 'ಕನ್ನಡ ಜಾಗೃತಿ ವರ್ಷ'ದ ಆಚರಣೆ ನಡೆದಿದೆ. 'ಕನ್ನಡ ಆಡಳಿತ ಭಾಷಾ ಸಮಿತಿ, ಕನ್ನಡ ಆಡಳಿತ ಭಾಷಾ ಕಾವಲು ಸಮಿತಿ, ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ, ಅಧಿಕಾರಿ ಮಟ್ಟದ ಸಮಿತಿ, ಕನ್ನಡ ಅಭಿವೃದ್ಧಿ ಮಂಡಳಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಮೊದಲಾದವುಗಳ ಮೂಲಕ ಕರ್ನಾಟಕದ ಆಡಳಿತವನ್ನು ಕನ್ನಡವಾಗಿಸಲು ಪ್ರಯತ್ನಿಸಿದೆ. ಆಡಳಿತದ ಅನುಕೂಲಕ್ಕೆಂದು ಆಡಳಿತ ಪಾರಿಭಾಷಿಕ ಪದಕೋಶ, ಇಲಾಖಾ ಕೈಪಿಡಿ, ಕಛೇರಿ ಕೈಪಿಡಿ, ಆಡಳಿತ ಸಂಹಿತೆ, ಮೊದಲಾದವುಗಳನ್ನು ಪ್ರಕಟಿಸಿದೆ. ಇವೆಲ್ಲವನ್ನೂ ಕರ್ನಾಟಕ ಸರ್ಕಾರ ತನ್ನ 'ನುಡಿನೀತಿ' ಎನ್ನುವಂತೆ ಮಾಡುತ್ತಲೇ ಬರುತ್ತಿದೆ. ಅದನ್ನು ಜಾರಿಗೆ ತರಲು 1963ರಿಂದ ಈವರೆಗೆ ಸರಿಸುಮಾರು 300ಕ್ಕೂ ಹೆಚ್ಚು ಆದೇಶಗಳನ್ನು ಹೊರಡಿಸಿದೆ[12]. ಆ ಮೂಲಕ 'ಸಾರ್ವಜನಿಕರೊಂದಿಗೆ ನಡೆಸುವ ವ್ಯವಹಾರಗಳಲ್ಲಿ ಬಳಸುವ ಭಾಷೆ ನಿತ್ಯ ರೂಡಿಯಲ್ಲಿರುವ ಸರಳ ಭಾಷೆಯಾಗಿರಬೇಕಾದದ್ದು ಅಗತ್ಯ. ಆದ್ದರಿಂದ ಸರ್ಕಾರದಿಂದ ಕನ್ನಡದಲ್ಲಿ ಮಾಡುವ ಎಲ್ಲಾ ವ್ಯವಹಾರಗಳಲ್ಲಿ ಸಾರ್ವಜನಿಕರಿಗೆ ಅರ್ಥವಾಗುವ ರೀತಿಯಲ್ಲಿ, ಕ್ಲಿಷ್ಟವಾದ ಮತ್ತು ಅರ್ಥವಾಗದಂತಹ ದೊಡ್ಡ ದೊಡ್ಡ ಶಬ್ದಗಳನ್ನು ಉಪಯೋಗಿಸದೇ, ಸರಳ ಕನ್ನಡ ಶಬ್ಧಗಳನ್ನು ಉಪಯೋಗಿಸಬೇಕೆಂದು[13]' ಕಟ್ಟಳೆಗಳನ್ನು ಹೊರಡಿಸಿದೆ. ಇಷ್ಟೆಲ್ಲಾ ಪ್ರಯತ್ನಗಳು ಇದ್ದರೂ ಕರ್ನಾಟಕದಲ್ಲಿ ಕನ್ನಡ ಬಳಕೆಯು ಆಡಳಿತದಲ್ಲಿ, ಕಲಿಕೆಯಲ್ಲಿ, ಕನ್ನಡ ಬದುಕುಗಳಿಗೆ ಬೇಕಾದ ಹಕ್ಕಾಗಿ ಉಳಿದಿಲ್ಲ ಎನ್ನುವ ಪ್ರಶ್ನೆಯು ದಿನೇದಿನೇ ದೊಡ್ಡದಾಗುತ್ತಲೇ ಇದೆ.

ಸರಕಾರಿ ಕಚೇರಿಗಳ ಎಲ್ಲಾ ಹಂತಗಳಲ್ಲಿಯೂ ಕನ್ನಡನುಡಿಯನ್ನು ಬಳಸುವ ಬಗೆಗೆ, ಕರ್ನಾಟಕದಲ್ಲಿ ಕೆಲಸ ಮಾಡುವ 'ಪ್ರೊಬೆಶನರಿ ಐ.ಎ.ಎಸ್ ಅಧಿಕಾರಿ'ಗಳು ಕನ್ನಡ ನುಡಿಯ 'ಇಲಾಖಾ ಪರೀಕ್ಷೆ'ಯಲ್ಲಿ ಪಾಸಾಗಬೇಕಾದ ಬಗೆಗೆ(1994), ಇಂಗ್ಲಿಶಿನ ಅಂಕಿಗಳೊಂದಿಗೆ ಕನ್ನಡವನ್ನೂ ಬಳಸಬೇಕೆನ್ನುವ ಬಗೆಗೆ(1995), ಕನ್ನಡದಲ್ಲಿ ಬರುವ ಪತ್ರಗಳಿಗೆ ಕನ್ನಡದಲ್ಲಿಯೇ ಉತ್ತರಿಸಬೇಕೆನ್ನುವ ಬಗೆಗೆ(1997), ನೇಮಕಾತಿ, ವರ್ಗಾವಣೆ, ರಜೆ ಮಂಜೂರಾತಿ ಆದೇಶಗಳು ಕನ್ನಡದಲ್ಲಿಯೆ ಇರಬೇಕೆನ್ನುವ ಬಗೆಗೆ, 'ಸಭೆಗಳ ನೋಟಿಸ್, ಮಿನಿಟ್ಸ್, ಅಜೆಂಡಾ, ನೋಟ್ಸ್, ಪ್ರೊಸಿಡಿಂಗ್ಸ್ ಎಲ್ಲವೂ ಕನ್ನಡದಲ್ಲಿ ನಡೆಯಬೇಕೆನ್ನುವ

---

[12] ನೋಡಿ ಅನುಬಂಧ-೬

[13] ಜೆಎಡಿ೨೦ ಪಿಎಲ್೭೬ ಸುತ್ತೋಲೆ ೨೯ನೇ ಏಪ್ರಿಲ್ ೧೯೭೬, ಅದೇ..

ಬಗೆಗೆ(1997), ಸರಕಾರದ ಎಲ್ಲಾ ಇಲಾಖೆಗಳು ಆಡಳಿತದಲ್ಲಿ ಕನ್ನಡವನ್ನು ಪೂರ್ಣಪ್ರಮಾಣದಲ್ಲಿ ಬಳಸುವ ಬಗೆಗೆ(2000) ಸರಕಾರಿ 'ಆದೇಶ'ಗಳಿವೆ.

ಸರಕಾರ ರಾಜ್ಯಪಾಲರ ಮೂಲಕ ಮಾಡಿರುವ 'ಘೋಷಣೆ'ಯೊಂದು ಹೀಗಿದೆ:

"ನನ್ನ ಸರಕಾರವು ರಾಜ್ಯದಲ್ಲಿ ಕನ್ನಡ ಭಾಷೆಗೆ ಪರಮೋಚ್ಚ ಸ್ಥಾನವನ್ನು ನೀಡುವುದಕ್ಕೆ ಬದ್ಧವಾಗಿದೆ. ಆಡಳಿತವು ಎಲ್ಲಾ ಹಂತಗಳಲ್ಲೂ ಜನರ ಭಾಷೆಯಲ್ಲಿ ನಡೆದಾಗ ಮಾತ್ರ ಅದು ಸ್ಪಂದನಶೀಲವಾಗುತ್ತದೆ. ನನ್ನ ಸರಕಾರವು ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತಹಶಿಲ್ದಾರರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಕನ್ನಡ ಜಾಗೃತಿ ಸಮಿತಿಗಳನ್ನು ರಚಿಸಲು ಉದ್ದೇಶಿಸಿದೆ. ಇದೇ ರೀತಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಕನ್ನಡ ಜಾಗೃತಿ ಸಮಿತಿಗಳನ್ನು ರಚಿಸಲು ಉದ್ದೇಶಿಸಿದೆ. ಈ ಸಮಿತಿಗಳು ಸರಕಾರದ ಭಾಷಾ ನೀತಿಯ ಅನುಷ್ಠಾನದಲ್ಲಿ ಜನರೂ ಪಾಲ್ಗೊಳ್ಳುವಂತೆ ನೋಡಿಕೊಳ್ಳುತ್ತದೆ.."

ಇದನ್ನು ನೋಡಿದರೆ, ಈ 'ಘೋಷಣೆ'ಯಲ್ಲಿರುವ ಕನ್ನಡನುಡಿ ಯಾವುದು? ಕನ್ನಡ ಜನಕ್ಕೆ ತಿಳಿಯುವಂತೆ ಇದೆಯೇ? ಇದು ಜನರಾಡುವ ಕನ್ನಡ ನುಡಿಯೇ? ಆಡಳಿತವನ್ನು 'ಜನರ ಭಾಷೆ'ಯಲ್ಲಿ ನಡೆಸುವ ಬಗೆಯೇ ಇದು? ಎನ್ನುವ ಸವಾಲುಗಳು ಕೂಡಲೇ ಎದ್ದು ಕಾಣುತ್ತವೆ. ಅಂದರೆ, ಮಾತು ಮಾತ್ರವೇ ಮುಂದಾಗಿ, ಮಾಡಬೇಕಾದ ಕೆಲಸಗಳು ಹಿಂದಕ್ಕೇ ಉಳಿದ ಗುರುತಿನಂತಿದೆ ಈ 'ಘೋಷಣೆ'. ಹಾಗಿದ್ದರೆ ಈ 'ಆದೇಶ, ಅಧಿನಿಯಮ'ಗಳ ಮೂಲಕ ಜಾರಿಗೆ ತರಬೇಕು ಎಂದು ಹೊರಟ ಕರ್ನಾಟಕದ 'ಜನಬದುಕಿನ ಕನ್ನಡ' ಯಾವುದು? ಎನ್ನುವುದನ್ನು ಕಲಿಕೆಯ ಮತ್ತು ಸರಕಾರಿ ಆಡಳಿತದ ಜನಬಳಕೆಯ ನೆಪಕ್ಕೆಂದು ಬಳಸಿರುವ ಪದಗಳನ್ನೇ ನೋಡಿದರೂ ತಿಳಿಯುತ್ತದೆ.

ಈ ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿರುವಂತೆ ಕನ್ನಡದ ಮೇಲಿನ ಉಮೇದು ಸಂಸ್ಕೃತಮಯವಾಗಿರುವ ದುರಂತಕ್ಕೆ ಎಡೆಮಾಡಿಕೊಟ್ಟಿರುವುದು. ಮೇಲಿನ ಸಂಗತಿಗಳನ್ನು ಗಮನಿಸಿದರೆ; ಹೀಗೆ ಚರ್ಚಿಸುವಾಗ, ಆಳುತ್ತಿದ್ದವರು ಮತ್ತು ಆಡಳಿತದಲ್ಲಿದ್ದವರು ಕನ್ನಡನುಡಿಯನ್ನು ದೂರವಿಡುವ ಗುರಿಯನ್ನು ಇಟ್ಟುಕೊಂಡವರಾಗಿದ್ದರೇ? ಎನ್ನುವ ಪ್ರಶ್ನೆ ಎದ್ದು ನಿಲ್ಲುತ್ತದೆ ದಿಟ. ನುಡಿಯಾಡುಗರ ನೆಪದಲ್ಲಿ ರಾಜ್ಯವನ್ನು, ರಾಜ್ಯದ ಆಡಳಿತವನ್ನು ಕಟ್ಟಲು ಹೊರಟವರಿಗೆ ಅಂತಹ ಗುರಿಗಳಿದ್ದವು ಎಂದು ಹೇಳಲು ಬರುವುದಿಲ್ಲ. ನೋಡಿ ಇವನ್ನು:

ಒಂದನೇ ತರಗತಿ ಕಲಿಕೆಯ ಪುಸ್ತಕದಲ್ಲಿ: ಶಶಕ, ಅಂತ:ಕರಣ, ಅಂತ:ಕಲಹ, ಅದರ, ಅಮರ, ವರ್ಣಮಾಲಾ, ಅನುಸ್ವಾರ, ವಿಸರ್ಗ, ವ್ಯಂಜನಾಕ್ಷರ, ವರ್ಗೀಯ, ಅವರ್ಗೀಯ, ಚರಣ, ಖನಿಜ, ಲವಣ, ಶಯನ, ಷಹರ, ಸಜ್ಜೆ, ನಿಧಾನ, ಅರುಣೋದಯ, ಸಭಾಪತಿ, ಪಾರಿತೋಷಕ, ಐರಾವತ, ಅಂತ:ಪುರ, ಸೌಂದರ್ಯ, ಅಭ್ಯಾಗತ,

ಔಜಸ, ಐದಳ, ಭಗ, ಐಲ, ಏರಂಡ, ಏವ, ಔರಸ, ಖರ, ಜಲಿಜಲಿ, ಲಗಡ, ಊಷರ, ಊರ, ಏಡ, ಸಳ, ಛದ, ಒಡತನ, ಘನರವ, ಝಳಪ, ಶಶಕ, ಠಕಣ, ಮುರಾ, ನ್ಯಗ್ರೋಧ, ವಾಯಸ, ಚಮರ,

ಇಂತಹ ನೂರಾರು ಪದಗಳನ್ನು ಆಗತಾನೆ ಶಾಲೆಯ ಓದು–ಕಲಿಕೆಗೆ ತೆರೆದುಕೊಳ್ಳಬೇಕಾದ ಮಗುವಿನ ಕಲಿಕೆಯ ಪುಸ್ತಕದಲ್ಲಿ ತುರುಕಲಾಗಿದೆ. ಮಗುವನ್ನು, ಅದು ಆ ಹೊತ್ತಿಗೆ ಎಂದೂ ಕೇಳರಿಯದ ಪದಗಳನ್ನು 'ಪ್ರಾಕ್ಟೀಸ್' ಮಾಡುವ ಇಕ್ಕಟ್ಟಿಗೆ ತಳ್ಳಲಾಗಿದೆ. ಮಗುವಿಗೆ ಓದಿನಲ್ಲಿ, ಬರೆಹದ ಕಲಿಕೆಯಲ್ಲಿ ಇಕ್ಕಟ್ಟಾಗುವುದು ತನಗೇ ತಿಳಿದಿರುವ, ಸುಳುವಾಗಿ ತಿಳಿಯುವ, ತಾನಾಡುವ, ಕೇಳುವ ಕನ್ನಡ ನುಡಿಯಲ್ಲ. ಬದಲಾಗಿ, ತಾನಾಡಲಾಗದ, ಕೇಳದ, ಬಳಸದ ಕನ್ನಡದ್ದಲ್ಲದ ಪದಗಳನ್ನು ಕಲಿಯುವ ಒತ್ತಾಯಗಳು ಮಾತ್ರವೇ. ಇಂತವನ್ನು ನಿಕರವಾಗಿ ಅರಿಯಲಾಗದ ಸೋಲನ್ನೇ ಕಲಿಸಲಾಗುತ್ತದೆ ಕೂಡ. ಅಂದರೆ ಆಡಳಿತದ ಸನ್ನಿವೇಶದಲ್ಲಿ ಹೇರಲ್ಪಡುವ ಸಂಸ್ಕೃತ ಪದಗಳನ್ನು ಎದುರಾಗಲು ಕನ್ನಡ ಮಕ್ಕಳನ್ನು ತಯಾರು ಮಾಡಲಾಗುತ್ತಿದೆಯೇ ಎನ್ನುವ ಅನುಮಾನ ಬರದೆ ಇರದು. ಮುಂದಿನ ತರಗತಿಗಳ ಕನ್ನಡ ಪುಸ್ತಕಗಳ ಅವಸ್ಥೆಯೂ ಕೂಡ ಇದಕ್ಕಿಂತ ಬೇರೆಯಾಗಿಲ್ಲ.

ಸರಕಾರಿ ಆಡಳಿತದ ಜನಬಳಕೆಯ ನೆಪದಲ್ಲಿ ಸಂಸ್ಕೃತ ಪದಗಳನ್ನು ಹೇಗೆ ಜಾರಿಗೊಳಿಸಲಾಗಿದೆ ಎನ್ನುವುದನ್ನು ಈ ಹಿಂದಿನ ನಾಲ್ಕನೇ ಅಧ್ಯಾಯದಲ್ಲಿ ನೋಡಿದ್ದೇವೆ. ಇಂತಹ ಸಾವಿರಾರು ಪದಗಳು, ಪದಕಟ್ಟುಗಳನ್ನು ಕನ್ನಡ ಜನಬದುಕಿನ ಸಾಮಾಜಿಕ ಸನ್ನಿವೇಶಕ್ಕೆ ತಂದು ತುರುಕಲಾಗಿದೆ. ಆದರೆ, ಈ ಯಾವೂವೂ ಕನ್ನಡ ಜನಮಾತಿನಲ್ಲಿ ಇಲ್ಲ. ಕನ್ನಡ ಜನರ ತಿಳಿವಿಗೂ ಹತ್ತುವುದಿಲ್ಲ. ಈ–ಇಂತಹ ಪದಗಳನ್ನು ಜನ ಯಾವ ಉಪಯೋಗದ ಅನುಕೂಲಕ್ಕಾಗಲಿ ಬಳಸುವುದೂ ಇಲ್ಲ. ಆದರೂ 'ಸಂಸ್ಕೃತ' ಪದಬಳಕೆಯನ್ನು ಇಂಗ್ಲಿಶ್ ಪದಬಳಕೆಯ ಬದಲಿ ಜಾಗದಲ್ಲಿ ತಂದು ತುರುಕುವ ಕೆಲಸ ಮುಂದುವರೆಯುತ್ತಲೇ ಬರುತ್ತಿದೆ. ಇವನ್ನು ಕಣ್ಣಿಗೆ ರಾಚುವಂತೆ ಕನ್ನಡ ಬರೆಹದಲ್ಲಿ ತೂರಿಸುವುದನ್ನೇ 'ಕನ್ನಡದ ಕೆಲಸ' ಎಂತಲೂ ದೊಡ್ಡಸ್ತಿಕೆಯನ್ನು ತೋರಿಸಿಕೊಳ್ಳಲಾಗುತ್ತಿದೆ. ಅಂದರೆ, ಈ ಪದಗಳನ್ನು ಅರಿಯುವವರು, ಇವು ಸೂಚಿಸುವ ಕೆಲಸಗಳಲ್ಲಿ ಪಾಲ್ಗೊಳ್ಳಬೇಕಾದ ಜನರು, ಇದು ಏನೆಂದು

ಕಮ್ಯೂನಿಕೇಟ್ ಆಗದೆ ಮತ್ತೆ ಇಂಗ್ಲಿಶಿಗೆ ಮರಳಿ ತಿಳಿಯುವುದೋ, ಇಂಗ್ಲಿಶನ್ನೇ ಬಳಸುವುದೋ ನಡೆಯುತ್ತಿದೆ. ಆದ್ದರಿಂದಾಗಿ, ಆಡಳಿತ ಮತ್ತು ಆಳ್ವಿಕೆಗಳ ಮೂಲಕ ಪಡೆಯುವ ಜನಾನುಕೂಲಗಳ ಸನ್ನಿವೇಶದ ಮಾತುಕತೆಯಲ್ಲಿ ಇಂಗ್ಲಿಶ್ ಪದಗಳೇ ಕನ್ನಡವಾಗುತ್ತಿರುವುದನ್ನು, ಕನ್ನಡ ಪದಗಳಂತೆ ಬಳಕೆಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೆ, ಕನ್ನಡದ್ದೇ ಬರವಣಿಗೆಯಲ್ಲಿ 'ಸಂಸ್ಕೃತ ಪದ'ಗಳನ್ನು ತಂದು ತುರುಕಿ ಬೇಡದ ಬಿಕ್ಕಟ್ಟನ್ನು ಒಡ್ಡಿಕೊಳ್ಳುತ್ತಿರುವುದೇಕೆ ಎನ್ನುವುದನ್ನು ಹೇಳಲು ಕೇಳಲು ಯಾವ ಹೊಣೆಗಾರರಿಗೂ ಪುರುಸೊತ್ತಿಲ್ಲ.

ಈ ಚಾಳಿಯಿಂದಾಗಿ ಪ್ರಭುತ್ವ ಮತ್ತು ಆಡಳಿತ ಎರಡರ ನುಡಿಬಳಕೆಯ ಸನ್ನಿವೇಶದಲ್ಲಿಯೂ ಕನ್ನಡದ ನೆಪದಲ್ಲಿ, ಕನ್ನಡದ ಪದಗಳ ಜಾಗದಲ್ಲಿ 'ಸಂಸ್ಕೃತ' ಪದಗಳು ರಾರಾಜಿಸತೊಡಗಿವೆ. ಕನ್ನಡ ಜನಬದುಕಿಗೆ ಸರಕಾರಿ ಸೇವೆ ಮತ್ತು ಅನುಕೂಲಗಳನ್ನು ಆಗುಮಾಡುವ ಯಾವುದೇ 'ಕಚೇರಿ'ಯ ಒಂದು ಸಣ್ಣ ಸಂಗತಿಯನ್ನು ನೋಡಿದರೂ ಪಿಚ್ಚೆನಿಸುತ್ತದೆ. ಕನ್ನಡ ಜನಬದುಕುಗಳು ಸುಳುವಾಗಿ ಅರಿಯಲಾಗದ 'ಕನ್ನಡ–ಸಂಸ್ಕೃತಗನ್ನಡ'ವೇ ಎಲ್ಲಾ ಕಡೆಯೂ ಕಣ್ಣಿಗೆ ರಾಚುತ್ತದೆ. ಯಾವ ಸರಕಾರಿ ಕಚೇರಿಯ ಅರ್ಜಿ ನಮೂನೆಗಳನ್ನು ತೆಗೆದು ನೋಡಿದರೂ ಇದೇ ಇದೆ. ಅವುಗಳನ್ನು ತುಂಬಲು ಕೂಡಾ ಪ್ರಾಕ್ಟೀಸ್ ಮಾಡಿಕೊಂಡಿರುವ ಇನ್ಯಾರನ್ನೋ ನೆಚ್ಚಿಕೊಳ್ಳಬೇಕಾಗಿದೆ. ಜೊತೆಗೆ, ಕನ್ನಡ ಜನಬದುಕಿನಿಂದ ಬಂದ ಮಕ್ಕಳು ಕನ್ನಡ ಓದು–ಬರೆಹ ಕಲಿಯುವ ತೊಡಕೂ ಕೂಡ ದೊಡ್ಡದಾಗುತ್ತಾ ಬಂದಿದೆ.

ಅಧ್ಯಾಯ–9

ಸಮಾರೋಪ

ಅಧ್ಯಯನದ ಫಲಿತಗಳು

ಈಗ ಮತ್ತೆ ಅಧ್ಯಯನದ ವಿಷಯಕ್ಕೆ ಬರೋಣ: **ಕನ್ನಡದಲ್ಲಿ ಆಡಳಿತ: ಪ್ರಭುತ್ವ ಮತ್ತು ಜನತೆ**. ಇಡೀ ಅಧ್ಯಯನದ ಪ್ರಕ್ರಿಯೆಯಲ್ಲಿ ಬಹುಮುಖ್ಯವಾಗಿ ಕನ್ನಡದ ತಿಳಿವಿನಲ್ಲಿ ಕನ್ನಡ ಜನತೆಗೆ ಅವರ ದಿನ ನಿತ್ಯದ ಅಗತ್ಯಗಳನ್ನು ಹಾಗೂ ಅವರ ನಾಳೆಗಳನ್ನು ನಿರೂಪಿಸಿಕೊಳ್ಳಲು ಸರಕಾರಿ ಆಡಳಿತ ಕನ್ನಡದಲ್ಲೇ ದೊರೆಯುತ್ತದೆಯೇ? ಈ ಸವಾಲಿಗೆ ಹಿಂದಿನ ಎಂಟು ಅಧ್ಯಾಯಗಳಲ್ಲಿ ವಿಭಿನ್ನ ನೆಲೆಗಳಲ್ಲಿ ಪರಿಹಾರಗಳನ್ನು ಕಂಡುಕೊಳ್ಳಲಾಗಿದೆ. ಇವುಗಳನ್ನು ಈ ಭಾಗದಲ್ಲಿ ಗಮನಿಸಲಿದ್ದೇವೆ.

ನಾವು, ಕನ್ನಡನುಡಿ, ಕನ್ನಡನಾಡು, ಕನ್ನಡ ಜನಬದುಕಿನ ಬೆಳವಣಿಗೆ ಮತ್ತು ಆಳ್ವಿಕೆಯ ಹೊಣೆಗಳ ಬಗೆಗೆ ಹೇಳುವ 'ಕವಿರಾಜಮಾರ್ಗ'ವನ್ನು ನೆನಪಿಗೆ ತಂದುಕೊಳ್ಳೋಣ. ಏಕೆಂದರೆ, ಅದು ಇವತ್ತಿನ ಕನ್ನಡ ಜಗತ್ತಿನ ಸ್ಥಳೀಯತೆಯ ಚಹರೆಗಳನ್ನು ಕಟ್ಟಿಕೊಳ್ಳುವ, ಉಳಿಸಿ – ಬೆಳೆಸಿಕೊಳ್ಳುವ ನೋಟದಿಂದ ಕೂಡ ದಾರಿ ತೋರಬಲ್ಲುದು ಎನ್ನುವ ದೊಡ್ಡಸ್ತಿಕೆಯ ಕಾರಣಕ್ಕಾಗಿ. ಅಂದು, ಕನ್ನಡ ಜಗತ್ತಿನೊಳಕ್ಕೆ 'ಸಂಸ್ಕೃತ' ಬಂದದ್ದರಿಂದ ಉಂಟಾದ ಸಂಕಟಗಳನ್ನು ಹೇಗೆ ಎದುರಿಸಬೇಕೆಂಬುದನ್ನು 'ಕವಿರಾಜಮಾರ್ಗ' ತೋರಿಸಿಕೊಟ್ಟಿತ್ತು. ಇವತ್ತು ಕನ್ನಡ ಬರವಣಿಗೆಯಲ್ಲಿ 'ಸಂಸ್ಕೃತ ಪದ'ಗಳ ಅತಿಯಾದ ಬಳಕೆಯಿಂದ ಉಂಟಾಗಿರುವ ತೊಡಕಿನ ಜೊತೆಗೆ, ಇಂಗ್ಲಿಶಿನ ಮೂಲಕ ಕಲಿಯುವುದೇ ದೊಡ್ಡದೆಂಬ ಒಲವು ಕನ್ನಡದ ಕಾಣ್ಕೆಯನ್ನು ಮತ್ತು ಕನ್ನಡ ಜಗತ್ತನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

'ಕವಿರಾಜಮಾರ್ಗ'ವು ಮೊದಲಲ್ಲಿಯೇ 'ನಾಡು–ನುಡಿ–ಜನಬದುಕಿ'ನ ನಂಟುಗಳಲ್ಲಿ ಕಟ್ಟಿಕೊಂಡಿರುವ ದಾರಿ ಹೇಗೆ 'ಕನ್ನಡ ಸಮಾಜ'ವನ್ನು ಮುನ್ನಡೆಸಬಲ್ಲುದೆಂಬುದನ್ನು ಮುಂದಿಟ್ಟಿದೆ. ಇದಕ್ಕಾಗಿ ಆಡಳಿತದ ಪರಿಕರಗಳನ್ನು ಹೇಗೆ ಕಟ್ಟಿಕೊಳ್ಳಬೇಕು, ಕಟ್ಟಿಕೊಳ್ಳುವಲ್ಲಿ ಜನನುಡಿಯ ಬಳಕೆಯನ್ನು ಯಾವ ಬಗೆಯಲ್ಲಿರಿಸಬೇಕು? ಅದು ಆಡಳಿತದಲ್ಲಿ 'ಶ್ರೀಸಾಮಾನ್ಯರ ಕನ್ನಡ'ವಾಗಿರಬೇಕಾದುದು ಹೇಗೆ? ಅದು ಆಳ್ವಿಕೆಗೂ, ಜನಬದುಕಿಗೂ ನಂಟನ್ನು ಹೇಗೆ ಬೆಸೆದಿರಬೇಕು? ಆಡಳಿತದ ನುಡಿಬಳಕೆಯ ಬಗೆಯನ್ನು ಜನರಾಡುವ ನುಡಿಯೊಂದಿಗೆ ನಿರೂಪಿಸಿಕೊಳ್ಳಬೇಕಾದುದು ಹೇಗೆ? ಈ ಪ್ರಶ್ನೆಗಳಿಗೆ ಕನ್ನಡವು ಬಹುರೂಪಿ ನೆಲೆಗಳಲ್ಲಿ ವರ್ತಮಾನದ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳಲಾಗಿದೆ. ಒಂದು ನುಡಿಯಾಡುಗ ಪ್ರದೇಶದ

